ಮುಂಗಾರು
ಬುಧವಾರ, ಜನವರಿ 1, 1986

ಇದು ಪ್ರಜಾಪ್ರಭುತ್ವ ಅಲ್ಲ

ಪಾಕಿಸ್ತಾನದಲ್ಲಿ ಲಷ್ಕರಿ ಆಡಳಿತವನ್ನು ತೆಗೆಯಲಾಗಿದೆ. ಅಲ್ಲಿ ಈಗ ಇರುವುದು ನಾಗರಿಕ ಆಳ್ವಿಕೆಯೆಂದು ಪ್ರಚುರಪಡಿಸಲಾಗಿದೆ. ಮಾರ್ಷಲ್ ಲಾ ಎತ್ತಲಾಗಿದ್ದರೂ ದೇಶದ ಅಧ್ಯಕ್ಷನಾದ ತಾನೇ ಸೈನ್ಯದ ಮಹಾದಂಡನಾಯಕನಾಗಿಯೂ ಮುಂದುವರಿಯುವುದಾಗಿ ಜ। ಜಿಯಾ ಉಲ್ ಹಕ್ ಅವರು ಹೇಳಿದ್ದಾರೆ. 1973ರ ಸಂವಿಧಾನಕ್ಕೆ ಮರುಜೀವ ನೀಡಲಾಗಿದೆಯೆಂದೂ ಘೋಷಿಸಲಾಗಿದೆ.

ಪಾಕಿಸ್ತಾನದ ಈ ಸೇನಾ ಸರ್ವಾಧಿಕಾರಿ ಜನರನ್ನು ಮರುಳು ಮಾಡಲು ಪ್ರಯತ್ನಿಸುತ್ತಿದ್ದಾರಷ್ಟೆ. ತನ್ನದೇ ಆದ ನೀತಿ ನಿಯಮಗಳಂತೆ ಖೋಟಾ ಚುನಾವಣೆಯೊಂದನ್ನು ಇತ್ತೀಚೆಗೆ ಏರ್ಪಡಿಸಿ ಐದು ವರ್ಷ ಕಾಲಕ್ಕೆ ದೇಶದ ಅಧ್ಯಕ್ಷ ತಾನೆಂದು ಸಾರಿಕೊಂಡಿದ್ದಾರೆ. ಸೇನೆಯ ದಂಡನಾಯಕನ ಹುದ್ದೆಯ ಕಾಲಾವಧಿಯನ್ನೇನೂ ನಮೂದಿಸಲಾಗಿಲ್ಲ. ದೇಶದ ಅಧ್ಯಕ್ಷನೂ ತಾನೇ ಆಗಿರುವುದರಿಂದ ಅದನ್ನು ಮನಬಂದಂತೆ ವಿಸ್ತರಿಸಬಹುದಾಗಿದೆ.

ಇದೀಗ ನಾಗರಿಕ ಆಡಳಿತೆ ತರಲಾಗಿದೆಯೆಂದು ಹೇಳಲಾಗುತ್ತಿದ್ದರೂ ರಾಜಕೀಯ ಪಕ್ಷಗಳಿಗೆ ಚಟುವಟಿಕೆ ನಡೆಸಲು ಯಾವ ಅವಕಾಶವೂ ಇಲ್ಲವಾಗಿದೆ. 1973ರ ಸಂವಿಧಾನವನ್ನು ಮರಳಿ ಊರ್ಜಿತಕ್ಕೆ ತರಲಾಗಿದೆಯೆಂದು ಹೇಳಲಾಗುತ್ತಿದ್ದರೂ ದೇಶದಲ್ಲಿ ರಾಜಕೀಯ ಪಕ್ಷೇತರವಾದ ಸರಕಾರ ವ್ಯವಸ್ಥೆ ಇರಬೇಕು ಎಂದು ಅಧಿಕಾರ ಬಿಟ್ಟುಕೊಡದಿರುವ ಸರ್ವಾಧಿಕಾರಿ ಹೇಳಿದ್ದಾರೆ. ರಾಜಕೀಯ ಪಕ್ಷಗಳು ಚಟುವಟಿಕೆ ನಡೆಸುವುದರಿಂದ ಮೆರವಣಿಗೆ, ಸಭೆಗಳನ್ನು ಏರ್ಪಡಿಸುವುದರಿಂದ ಸಾಮಾಜಿಕ ಕ್ಷೋಭೆಯೂ ಅಶಾಂತಿಯೂ ಉಂಟಾಗುತ್ತವೆ. ಹಿಂಸೆ ತಲೆ ಹಾಕುತ್ತದೆ. ಆದ್ದರಿಂದ ಅವುಗಳಿಗೆ ಅವಕಾಶ ಕೊಡದು ಎಂದು ಇಸ್ಲಾಮಿಕ್ ಜೀವನ ವಿಧಾನವನ್ನು ಆಡಳಿತೆಗೆ ಅಳವಡಿಸಲು ಹೊರಟಿರುವ ಈ ನಾಯಕ ಅಪ್ಪಣೆ ಕೊಡಿಸಿದ್ದಾರೆ. ಪಕ್ಷ ವ್ಯವಸ್ಥೆಯನ್ನು ದೇಶದ ಆಡಳಿತ ವ್ಯವಸ್ಥೆಗೆ ಅಳವಡಿಸುವ ಮೊದಲು ಪಕ್ಷಗಳನ್ನೇ ಜನತಾಂತ್ರಿಕವನ್ನಾಗಿ ಮಾಡಬೇಕು ಎಂದು ಅವರು ಹೇಳಿದ್ದಾರೆ.

ಗಲಭೆ–ಗೊಂದಲಗಳಾದರೆ, ಅಶಾಂತಿ ಉಂಟಾದರೆ ಮರಳಿ ಮಾರ್ಷಲ್ ಲಾ ಹೇರಲಾದೀತು ಎಂದು ಪಾಕಿಸ್ತಾನದ ಸೈನ್ಯದ ಮುಖ್ಯಸ್ಥನೂ ಆಗಿರುವ ಅಧ್ಯಕ್ಷರು ಹೇಳಿದ್ದಾರೆ. ತಾನು ಪ್ರಾರಂಭಿಸಿರುವ ಈ ಪ್ರಜಾತಾಂತ್ರಿಕ ಪ್ರಕ್ರಿಯೆಗೆ ಅಡ್ಡಿ ತರುವವರನ್ನು ಉಗ್ರವಾಗಿ ದಂಡಿಸಲಾಗುವುದೆಂಬ ಎಚ್ಚರಿಕೆಯನ್ನೂ ಅವರು ಕೊಟ್ಟಿದ್ದಾರೆ.

ಪಾಕಿಸ್ತಾನದ ಇಂದಿನ ವಿದ್ಯಮಾನಗಳನ್ನು ಎಚ್ಚರಿಕೆಯಿಂದ ಗಮನಿಸಿದರೆ ಅಲ್ಲಿನ ಆಡಳಿತೆಯ ಹೆಸರಿನಲ್ಲಿ ಮಾತ್ರವೇ ಬದಲಾವಣೆ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಆಡಳಿತೆಯ ಸ್ವರೂಪದಲ್ಲಿ ಯಾವ ಮಹತ್ವದ ಬದಲಾವಣೆಯೂ ಆಗುವುದಿಲ್ಲ. ಸೈನ್ಯವು ಆಡಳಿತೆಯ ಎಲ್ಲಾ ಆಯಕಟ್ಟಿನ ಅಧಿಕಾರಗಳನ್ನು ತೆರೆಯ ಮರೆಯಿಂದ ಹೊಂದಿರುತ್ತದೆ. ಜಿಯಾರೂ ಅವರ ಬಲಗೈ ಬಂಟರೂ ಮಿಲಿಟರಿ ಸಮವಸ್ತ್ರ ಕಳಚಿ ಎಸೆದು ಸೂಟುಧಾರಿಗಳಾಗಿ ಅಧಿಕಾರ ಚಲಾಯಿಸುತ್ತ ತಿರುಗತೊಡಗುತ್ತಾರೆ. ಸೈನ್ಯದ ನಿಯಂತ್ರಣವಂತೂ ಅವರ ಕೈಯಲ್ಲಿ ಇದ್ದೇ ಇರುತ್ತದೆ.

ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿಗೆ ನಡೆದ ಚುನಾವಣೆಯೂ ಕೂಡ ಜಗತ್ತಿನ ಹೆಚ್ಚಿನೆಲ್ಲಾ ಕಡೆ ಅಂಗೀಕೃತವಾದ ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿ ನಡೆದಿಲ್ಲ. ರಾಜಕೀಯ ಪಕ್ಷಗಳಿಗೆ ಈ ಚುನಾವಣೆಯಲ್ಲಿ ಭಾಗವಹಿಸುವ ಅವಕಾಶವಿರಲಿಲ್ಲ. ಇಂದು ಕೂಡ ರಾಜಕೀಯ ಪಕ್ಷಗಳಿಗೆ ಪಾಕಿಸ್ತಾನದಲ್ಲಿ ಚಟುವಟಿಕೆಯ ಅವಕಾಶವಿಲ್ಲ.

ಇದೆಂತಹ ನಾಗರಿಕ ಆಡಳಿತೆ? ಇದೆಂತಹ ಪ್ರಜಾಪ್ರಭುತ್ವ?. ಯಾವುದೇ ಪ್ರಜಾಪ್ರಭುತ್ವದಲ್ಲಿ ಪಕ್ಷ ವ್ಯವಸ್ಥೆಗೆ ಅವಕಾಶವಿರಬೇಕು. ವಿವಿಧ ರಾಜಕೀಯ–ಸಾಮಾಜಿಕ–ಆರ್ಥಿಕ ಸಿದ್ಧಾಂತಗಳನ್ನು ಹೊಂದಿದ ಪಕ್ಷಗಳಿಗೆ ಅವುಗಳನ್ನು ಪ್ರಚಾರ ಮಾಡಲು, ಜನರನ್ನು ಸಂಘಟಿಸಲು, ಕಾರ್ಯಕರ್ತರನ್ನು ತರಬೇತಿಗೊಳಿಸಿ ಆಡಳಿತೆಯ ಸಾಧನವನ್ನು ರೂಪಿಸಲು ಅವಕಾಶವಿರಬೇಕು. ಇದಿಲ್ಲದ ವ್ಯವಸ್ಥೆ ಅದು ಪ್ರಜಾಪ್ರಭುತ್ವವೇ ಅಲ್ಲ. ಬುದ್ಧಿ ತಿಳಿದ ಎಲ್ಲ ವಯಸ್ಕರಿಗೂ ನಾಡಿನ ಸರಕಾರ ವ್ಯವಸ್ಥೆ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಕೊಡದೆ ತನ್ನ ಸ್ವಂತ ಅಭಿಪ್ರಾಯಗಳನ್ನು ಜನರ ಮೇಲೆ ವ್ಯಕ್ತಿಯೊಬ್ಬನು ಹೇರುವ ಎಲ್ಲ ವ್ಯವಸ್ಥೆಯೂ ಸರ್ವಾಧಿಕಾರವೆನಿಸುತ್ತದೆ. ಅದು ಲಷ್ಕರಿ ಆಡಳಿತವಿರಲಿ, ನಾಗರಿಕ ಆಳ್ವಿಕೆಯಿರಲಿ ಎಲ್ಲವೂ ಸರ್ವಾಧಿಕಾರವೆಂದೇ ಕರೆಸಿಕೊಳ್ಳುತ್ತದೆ.

ಪ್ರಜಾಪ್ರಭುತ್ವದ ಬಗ್ಗೆ ನೈಜ ಕಾಳಜಿ ಇರುವುದಾದರೆ ಜಿಯಾ ಮಾಡಬೇಕಾದ ಒಂದೇ ಒಂದು ಕೆಲಸ ರಾಜಕೀಯ ಪಕ್ಷ ಸಂಘಟನೆ ಹಾಗೂ ಪ್ರಚಾರಕ್ಕೆ ಅನಿರ್ಬಂಧಿತವಾದ ಅವಕಾಶ ಕೊಡುವುದು. ಸಾರ್ವತ್ರಿಕ ಚುನಾವಣೆಯೊಂದನ್ನು ಏರ್ಪಡಿಸುವುದು. ಆ ಚುನಾವಣೆಯಲ್ಲಿ ಯಾರು ಜನಾಭಿಪ್ರಾಯವನ್ನು ಪಡೆದು ಬರುವರೋ ಅವರಿಗೆ ಅಧಿಕಾರ ವಹಿಸಿಕೊಟ್ಟು ನಿರ್ಗಮಿಸುವುದು. ದೇಶದ ಭವಿಷ್ಯ ನಿರ್ಮಾಣಕ್ಕೆ ತನ್ನದೂ ಒಂದು ಸಿದ್ಧಾಂತವಿದೆ, ತಾನೂ ದಾರಿ ತೋರಿಸಿ ಕೊಡುತ್ತೇನೆ ಎಂದು ಅವರಿಗೆ ಅನಿಸಿದರೆ ಅವರೂ ಒಂದು ಪಕ್ಷವನ್ನು ಕಟ್ಟಿ ಕಾರ್ಯಕರ್ತರನ್ನು ಸೇರಿಸಿ, ಜನರನ್ನು ಸಂಘಟಿಸಿ ಮುಕ್ತವಾದ ಚುನಾವಣೆ ಎದುರಿಸಿ ಜನರಿಂದ ತೀರ್ಪು ಕೇಳಬೇಕು. ದೇಶದ ಅಭಿವೃದ್ಧಿಗೆ ಹಲವಾರು ಸಲಹೆಗಳನ್ನು ಕೊಟ್ಟಿದ್ದೇನೆ ಇನ್ನೂ ಕೊಡುತ್ತೇನೆ ಎಂದು ಹೇಳಿಕೊಳ್ಳುವ ಅಧ್ಯಕ್ಷ ಜಿಯಾ ಅಂಥ ಸಲಹೆಗಳಿಗೆ ಜನರ ಒಪ್ಪಿಗೆ ಪಡೆಯುವುದಕ್ಕೆ ಇರುವುದೊಂದೇ ದಾರಿ. ಅದುವೇ ಚುನಾವಣೆ–ಸಂವಿಧಾನ ತಿದ್ದುಪಡಿಯಲ್ಲ.

ಆದರೆ ಅಂತಹ ಚುನಾವಣೆ ಮುಕ್ತವಾಗಿ ನಡೆಯಬೇಕು.

ಮುಂಗಾರು

ಗುರುವಾರ, ಜನವರಿ 2, 1986

ಸುಧಾರಣೆ ಅಲ್ಲ – ತೇಪೆ

ಶಿಕ್ಷಣ ಸುಧಾರಣೆಗೆ ನರಸಿಂಹಯ್ಯ ಸಮಿತಿಯು ಕೆಲವು ಶಿಫಾರಸುಗಳನ್ನು ಮಂಡಿಸಿದೆ. ವಿದ್ಯಾರ್ಥಿಯ ಅರ್ಹತೆ, ಅಂಕ ಮತ್ತು ವರ್ಗಗಳನ್ನು ತೀರ್ಮಾನಿಸಲು ವರ್ಷದ ಅಥವ ಕೋರ್ಸಿನ ಕೊನೆಗೆ ಒಂದೇ ಒಂದು ಪಬ್ಲಿಕ್ ಪರೀಕ್ಷೆ ನಡೆಸುವ ಬದಲು ಆಂತರಿಕ ಮೌಲ್ಯ ಮಾಪನವನ್ನು ಪಬ್ಲಿಕ್ ಪರೀಕ್ಷೆ ವ್ಯವಸ್ಥೆಯನ್ನೂ ವಿಚಾರ ಶೀಲವಾಗಿ ಮಿಶ್ರ ಮಾಡುವ ತತ್ವವನ್ನು ಸಮಿತಿಯು ಒಪ್ಪಿಕೊಂಡಿದೆ. ಆ ಪ್ರಯುಕ್ತ ಪ್ರಾಥಮಿಕದಿಂದ ಪಿ. ಯು. ಸಿ. ತರಗತಿ ತನಕ ಆಂತರಿಕ ಮೌಲ್ಯ ಮಾಪನದಲ್ಲಿ ಶೇಕಡಾ 20 ಅಂಕಗಳನ್ನೂ ವಾರ್ಷಿಕ ಪರೀಕ್ಷೆ ಅಥವ ಪಬ್ಲಿಕ್ ಪರೀಕ್ಷೆಯಲ್ಲಿ ಶೇಕಡಾ 80 ಅಂಕಗಳನ್ನು ನೀಡಬೇಕೆಂದೂ ಸಮಿತಿ ಶಿಫಾರಸು ಮಾಡಿದೆ.

ಎಸೆಸೆಲ್ಸಿ ಹಾಗೂ ಪಿ. ಯು. ಸಿ. ಪರೀಕ್ಷೆಯ ಉಸ್ತುವಾರಿ ವ್ಯವಸ್ಥೆಯನ್ನು ವಿಕೇಂದ್ರಿಕರಿಸುವ ಮಹತ್ವದ ಶಿಫಾರಸನ್ನು ಸಮಿತಿ ಮಾಡಿದೆ. ಏಳನೇ ತರಗತಿ ಪಬ್ಲಿಕ್ ಪರೀಕ್ಷೆಯನ್ನು ಮರಳಿ ಜಾರಿಗೆ ತರಬೇಕೆಂಬುದು ಅದರ ಇನ್ನೊಂದು ಅಭಿಪ್ರಾಯವಾಗಿದೆ.

ಇಂದಿನ ನಮ್ಮ ಶಿಕ್ಷಣದ ಸಮಗ್ರ ವ್ಯವಸ್ಥೆಯ ಬಗ್ಗೆ ಕಣ್ಣಾಡಿಸಿದಾಗ, ಅದರ ಲೋಪದೋಷಗಳ ಪ್ರಮಾಣವನ್ನು ಲೆಕ್ಕಕ್ಕೆ ಹಿಡಿದಾಗ ನರಸಿಂಹಯ್ಯ ಸಮಿತಿಯ ವರದಿ ಈ ಲೋಪ ದೋಷಗಳ ಮೂಲವನ್ನು ಶೋಧಿಸುವ ಕೆಲಸಕ್ಕೆ ಹೋಗದೆ ತೇಪೆ ಕೆಲಸವನ್ನಷ್ಟೇ ಮಾಡಿರುವುದು ವ್ಯಕ್ತವಾಗುತ್ತದೆ. ಪಬ್ಲಿಕ್ ಪರೀಕ್ಷೆಗೆ ಶೇಕಡಾ 80 ಅಂಕಗಳನ್ನೂ ಆಂತರಿಕ ಮೌಲ್ಯ ಮಾಪನಕ್ಕೆ ಶೇಕಡಾ 20ಅಂಕಗಳನ್ನೂ ಹಂಚಿಕೊಡುವುದರಿಂದ ಯಾವ ಪುರುಷಾರ್ಥವೂ ಬರುವುದಿಲ್ಲ. ವಿದ್ಯಾರ್ಥಿಗಳ ಮಟ್ಟವನ್ನು ನಿರ್ಧರಿಸುವ ಕೆಲಸದಲ್ಲಿ ಅವರಿಗೆ ಪ್ರತಿದಿನವೂ ಪಾಠ ಮಾಡುವ, ಅವರ ಬುದ್ಧಿ ಮತ್ತೆಯ, ಪ್ರತಿಭೆಯ ಮತ್ತು ಪರಿಣತಿಗಳ ನಿಕಟ ಪರಿಚಯವಿರುವ ಉಪಾಧ್ಯಾಯರುಗಳಿಗೆ ಸ್ವಲ್ಪಾಂಶ ಅಧಿಕಾರ ಕೊಟ್ಟಂತಾಗುತ್ತದೆ. ಅದಲ್ಲದೆ ಈ ಹೊಸ ವ್ಯವಸ್ಥೆಯಿಂದ ಶಿಕ್ಷಣದ ಮೇಲೆ ಬೇರಾವ ಉತ್ತಮ ಬದಲಾವಣೆಯೂ ಆಗಲಾರದು.

ಮಕ್ಕಳು ಈ ಪ್ರಪಂಚದ ಆಗು ಹೋಗುಗಳನ್ನು, ಅಂಕಿ ಅಂಶಗಳನ್ನು ಓದಿ, ಉರು ಹೊಡೆದು ಅನಂತರ ಪರೀಕ್ಷೆಯಲ್ಲಿ ಬಿಳಿ ಹಾಳೆಯ ಮೇಲೆ ನೆನಪಿನಿಂದ ಕಕ್ಕುವ ವ್ಯವಸ್ಥೆ ಹಾಗೆಯೇ ಉಳಿಯುತ್ತದೆ. ವಿದ್ಯಾರ್ಥಿಯ ಸಾಮರ್ಥ್ಯವನ್ನು ಅಳೆಯುವುದೆಂದರೆ ಆತನ ನೆನಪಿನ ಉಗ್ರಾಣ ಎಷ್ಟು ದೊಡ್ಡದು ಎಂದೇ ಪರೀಕ್ಷೆ ಮಾಡುವ ವ್ಯವಸ್ಥೆ ಬದಲಾಗುವುದಿಲ್ಲ. ವಿದ್ಯಾರ್ಥಿಯು ಸಾಮಾನ್ಯ ಜ್ಞಾನದ ಭಂಡಾರವಾಗುವ ವಿಕೃತಿ ತಪ್ಪುವುದಿಲ್ಲ. ಎಸೆಸೆಲ್ಸಿ-ಪಿ.ಯು.ಸಿ ಉತ್ತೀರ್ಣರಾಗಿ ಇಲ್ಲವೇ ಪದವಿಪಡೆದು ಕಾಲೇಜಿನಿಂದ ಹೊರಬರುವ ಯುವಕ- ಯುವತಿಯರು ಉದ್ಯೋಗದ ಮಾರುಕಟ್ಟೆ ಪ್ರವೇಶಿಸಿದಾಗ ಬದುಕಿನ ವಾಸ್ತವಿಕತೆ ಅವರನ್ನು ಕೆಕ್ಕರಿಸಿ ನೋಡುವ ಅಸಹಾಯಕ ಪರಿಸ್ಥಿತಿ ನಿವಾರಣೆಯಾಗುವುದಿಲ್ಲ. "ನಿನಗೇನು ಕೆಲಸ ಗೊತ್ತಿದೆ, ಏನು ಕಲಿತಿದ್ದಿ" ಎಂದು ಉದ್ಯಮ ಪತಿಗಳು ಕೇಳುವ ಪ್ರಶ್ನೆಗೆ ನಮ್ಮ ಯುವಕ ಯುವತಿಯರು ಆಕಾಶ ನೋಡುವ ವಿಲಕ್ಷಣ ಸ್ಥಿತಿ ಹೋಗುವುದಿಲ್ಲ.

ಮಾಡಬೇಕಾದ ಕೆಲಸ, ಆಗಬೇಕಾದ ಸುಧಾರಣೆ ಇಷ್ಟೇ: ಮಕ್ಕಳ ತಲೆಯನ್ನು ಜಗತ್ತಿನ ಜ್ಞಾನ ಭಂಡಾರವನ್ನಾಗಿ ಮಾಡುವ ಈ ವ್ಯವಸ್ಥೆಯನ್ನು ಬದಲಿಸಿ. ಬದುಕಿನ ವಾಸ್ತವಿಕತೆಗಳನ್ನು ಎದುರಿಸುವ ಧೈರ್ಯ-ಸ್ಥೈರ್ಯಗಳೂ ಆತ್ಮ ವಿಶ್ವಾಸಗಳೂ ಅವರಿಗೆ ಬರುವಂತೆ ಯಾವುದಾದರೊಂದು ವೃತ್ತಿಯಲ್ಲಿ ಪರಿಣತಿಯನ್ನು ಅವರಿಗೆ ತಂದುಕೊಡಿ. ಆಧುನಿಕ ಸಮಾಜದ ಅಗತ್ಯಗಳೂ ಬೇಡಿಕೆಗಳೂ ಅಗಾಧವಾದವುಗಳು. ವೃತ್ತಿಯ ವೈವಿಧ್ಯಗಳು ಇಂದು ಬೆರಗುಗೊಳಿಸುವಷ್ಟು ಬೆಳೆದಿವೆ. ಯಾವುದಾದರೊಂದು ಕೆಲಸವನ್ನು ಅರಿಸುವುದಕ್ಕೆ ಅಗತ್ಯವಾದ ಸಿದ್ಧತೆಯನ್ನು ಯುವಕ- ಯುವತಿಯರು ಮಾಡಿಕೊಳ್ಳುವಂತಾಗಲಿ. ಭಾಷೆಯನ್ನು ಕಲಿಸುವುದರ ಜತೆಗೇ ವೃತ್ತಿಯನ್ನು ಕಲಿಸುವ ವ್ಯವಸ್ಥೆ ಜಾರಿಗೆ ಬರಲಿ. ಆಸಕ್ತಿಯುಳ್ಳವರು ಮಾತ್ರವೇ ವಿಶ್ವವಿದ್ಯಾಲಯ ಹೊಕ್ಕು ಭಾಷೆಯಲ್ಲಿಯೋ, ಶಾಸ್ತ್ರಗಳಲ್ಲಿಯೋ, ಉನ್ನತ ವಿಜ್ಞಾನದಲ್ಲಿಯೋ ಅಧ್ಯಯನವನ್ನೂ ಸಂಶೋಧನೆಯನ್ನೂ ಮಾಡುವಂತಾಗಲಿ. ಬದಲಾಗಿ ಉನ್ನತ ವ್ಯಾಸಂಗವೆಂಬುದು ಗೊತ್ತು ಗುರಿಯಿಲ್ಲದ ಯುವಜನಾಂಗ ಪುಸ್ತಕದ ಗಂಟು ಹೊತ್ತು ತಿರುಗುವ ಸಂತೆಯಾಗದಿರಲಿ.

ಶಿಕ್ಷಣ ನೀತಿಯನ್ನು ರೂಪಿಸುವುದಕ್ಕೆ, ಆ ರಂಗದಲ್ಲಿ ಅಗತ್ಯವೆನಿಸಿದ ಬದಲಾವಣೆಗಳನ್ನು ತರುವುದಕ್ಕೆ ರಾಜ್ಯಗಳಿಗೆ ಇಂದು ಸಾಕಷ್ಟು ಅಧಿಕಾರ-ಅವಕಾಶಗಳಿವೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ವ್ಯವಸ್ಥೆಯನ್ನು ರಾಜ್ಯಗಳು ತಮ್ಮ ಅಗತ್ಯಗಳಿಗೆ ತಕ್ಕಂತೆ ವೃತ್ತಿ ಪರವನ್ನಾಗಿ ಬದಲಾಯಿಸಿಕೊಳ್ಳುವುದಕ್ಕೆ ಇಂದು ಬಹುಶಃ ಈ ದೇಶದಲ್ಲಿ ಯಾರೂ ಅಡ್ಡಿ ಆತಂಕ ಒಡ್ಡಲಾರರು.

ಶಿಕ್ಷಣ ಸುಧಾರಣೆಯ ಬಗ್ಗೆ ಆಲೋಚನೆ-ಅಧ್ಯಯನ ಮಾಡುವ ಯಾವುದೇ ಸಮಿತಿ ಈ ನಿಟ್ಟಿನಲ್ಲೇ ಆಲೋಚಿಸಬೇಕಿತ್ತು. ಇದೀಗ ಸಮಿತಿಯ ಮೊದಲ ವರದಿ ಬಂದಿದೆ. ಅದು ಇನ್ನೂ ವರದಿಗಳನ್ನು ಸಲ್ಲಿಸಲಿದೆ. ಪಾಠ ಪಟ್ಟಿಯನ್ನು ಸಿದ್ಧ ಪಡಿಸಲಿದೆ. ಅದು ಈ ಎಲ್ಲ ಕೆಲಸಗಳನ್ನು ಕೈಗೊಳ್ಳುವ ವೇಳೆ ಶಿಕ್ಷಣವನ್ನು ಸಮಾಜದ ಅಗತ್ಯಕ್ಕೆ ಒಗ್ಗಿಸುವ ಪ್ರಕ್ರಿಯೆಯ ಬಗ್ಗೆ ಆಳವಾಗಿ, ಪ್ರಾಮಾಣಿಕವಾಗಿ ಮತ್ತು ಗಂಭೀರವಾಗಿ ಚಿಂತಿಸಬೇಕು. ಸರಕಾರಕ್ಕೆ ಸೂಕ್ತ ಶಿಫಾರಸು ಮಾಡಬೇಕು.

ಮುಂಗಾರು

ಶುಕ್ರವಾರ, ಜನವರಿ 3, 1986

ರಾಷ್ಟ್ರೀಯ ಒಮ್ಮತದ ಮೊದಲ ಹೆಜ್ಜೆ

ಶ್ರೀಲಂಕಾದಲ್ಲಿ ರಾಜಕೀಯ ರಾಜಿ ಮನೋಭಾವವು ಹುಟ್ಟಿಕೊಂಡಿರುವಂತೆ ಭಾಸವಾಗುತ್ತಿದೆ. ಮಾಜಿ ಪ್ರಧಾನಿ ಹಾಗೂ ಶ್ರೀಲಂಕಾ ಫ್ರೀಡಂ ಪಾರ್ಟಿಯ ನಾಯಕಿ ಸಿರಿಮಾವೋ ಬಂಡಾರ ನಾಯಕೆ ಅವರಿಗೆ ದೇಶದ ಅಧ್ಯಕ್ಷ ಜೆ. ಆರ್. ಜಯವರ್ಧನೆ ಅವರು ಕ್ಷಮಾದಾನ ನೀಡಿದ್ದಾರೆ. ಸಿರಿಮಾವೋ ಬಂಡಾರ ನಾಯಕೆ ಅಧಿಕಾರದಲ್ಲಿದ್ದ ವೇಳೆ ಅಧಿಕಾರ ದುರುಪಯೋಗಿಸಿದರೆಂದು ಜಯವರ್ಧನೆ ಅವರು ಅಧಿಕಾರಕ್ಕೆ ಬಂದ ಬಳಿಕ ನೇಮಿಸಲಾದ ಆಯೋಗ ಮಾಡಿದ ಶಿಫಾರಸಿನನ್ವಯ ಶ್ರೀಲಂಕಾ ಸಂಸತ್ತು ಸಿರಿಮಾವೋ ಅವರ ಪೌರತನದ ಹಕ್ಕುಗಳನ್ನು ಆರು ವರ್ಷಗಳ ಕಾಲಕ್ಕೆ ಅವಮಾನತುಗೊಳಿಸಿತ್ತು. ಇದು ನಡೆದದ್ದು 1980ರ ಅಕ್ಟೋಬರ 16ರಂದು.

ಇದು ನಡೆದು ಹಲವಾರು ವರ್ಷಗಳೇ ಸಂದು ಹೋಗಿವೆ. ಸಿರಿಮಾವೋ ಅವರ ಬಲವಂತದ ರಾಜಕೀಯ ಅಜ್ಞಾತವಾಸ ಮುಗಿಯಲು ಇನ್ನು ಕೇವಲ ಒಂದು ವರ್ಷಕ್ಕಿಂತ ಕಡಿಮೆ ಅವಧಿಯಿದ್ದಿತು. ಅಷ್ಟರ ತನಕ ಕಾಯದೆ ಈಗಲೇ ಸಿರಿಮಾವೋಗೆ ಕ್ಷಮಾದಾನ ನೀಡಿ ದ್ವೀಪದಲ್ಲಿ ರಾಜಕೀಯ ಸಾಮರಸ್ಯವನ್ನು ನೆಲೆಗೊಳಿಸಬೇಕು ಎಂದು ಜಯವರ್ಧನೆಗೆ ಅನಿಸಿದೆ. ಶ್ರೀಲಂಕೆಯಲ್ಲಿ ತಮಿಳು ಈಳಂ ಬೇಡಿಕೆಯ ಪರಿಣಾಮವಾಗಿ ದೊಡ್ಡ ಕ್ಷೋಭೆ ಉಂಟಾಗಿರುವ ಹಿನ್ನೆಲೆಯಲ್ಲಿ ರಾಜಕೀಯ ಒಮ್ಮತವೊಂದರ ಅಗತ್ಯವಿತ್ತು. ಈ ಅಗತ್ಯವನ್ನು ಈಗಲಾದರೂ ಅಧ್ಯಕ್ಷ ಜಯವರ್ಧನೆ ತಿಳಿದದ್ದು ಕ್ಷೋಭೆಯ ನಿವಾರಣೆಯ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯೊಂದನ್ನು ಇರಿಸಿದಂತೆ.

ಶ್ರೀಲಂಕೆಯ ಸಂಸತ್ತಿನಲ್ಲಿ ಜಯವರ್ಧನೆ ಅವರ ಆಳುವ ಯುಎನ್‌ಪಿ ಪಕ್ಷಕ್ಕೆ ಐದನೇ ನಾಲ್ಕರಷ್ಟು ಬಹುಮತವಿದ್ದರೂ ಸಿರಿಮಾವೋ ಅವರ ಶ್ರೀಲಂಕಾ ಫ್ರೀಡಂ ಪಾರ್ಟಿಯೇ ಅತಿದೊಡ್ಡ ಪ್ರತಿಪಕ್ಷವೆನಿಸಿದೆ. ಅದು ಈ ಹಿಂದೆ ಅಧಿಕಾರದಲ್ಲಿಯೂ ಇತ್ತು. ಮುಂದೆ ಜಯವರ್ಧನೆಗೆ ಸಮರ್ಥ ಸವಾಲು ಹಾಕಿ ಜನಮನ ಸೆಳೆದು ಅಧಿಕಾರಕ್ಕೆ ಬರುವ ಸಾಮರ್ಥ್ಯ ಇರುವ ಒಬ್ಬರೇ ಒಬ್ಬ ನಾಯಕಿ ಸಿರಿಮಾವೋ. ಅಷ್ಟು ಎತ್ತರದ ಬೇರೆ ನಾಯಕರಾರೂ ಪ್ರತಿಪಕ್ಷದ ಸಾಲಿನಲ್ಲಿಲ್ಲ.

ಆಳುವ ಯುಎನ್‌ಪಿ ಹಾಗೂ ಶ್ರೀಲಂಕಾ ಫ್ರೀಡಂ ಪಾರ್ಟಿ ಇವೆರಡೂ ಕೂಡ ಬಹುಮತೀಯರಾದ ಸಿಂಹಳೀಯರ ಮತದ ಆಧಾರದಲ್ಲಿ ಪ್ರವರ್ತಿಸುತ್ತಿವೆ. ರಾಷ್ಟ್ರೀಯ ನೆಲೆಯಲ್ಲಿ ಸಿಂಹಳೀಯರನ್ನು ಕಡೆಗಣಿಸಿ, ಅವರನ್ನು ದೂರ ಮಾಡಿ ಯಾವ ಪಕ್ಷವೂ ಅಧಿಕಾರ ಹಿಡಿಯುವ ಕನಸನ್ನೂ ಕಾಣುವಂತಿಲ್ಲ. ಹೀಗೆ ಸಿಂಹಳೀಯರ ಅಸಮಾಧಾನಕ್ಕೆ ಬಲಿಯಾದೇವೆಂಬ ಆಳುವ ಪಕ್ಷದ ಭೀತಿಯೇ ಶ್ರೀಲಂಕಾ ಕ್ಷೋಭೆಯನ್ನು ನನೆಗುದಿಗೆ ಬೀಳಿಸಿದ್ದು: ತಮಿಳರಿಗೆ ಕಿಂಚಿತ್ ರಿಯಾಯಿತಿಯನ್ನೂ ಕೊಡದಂತೆ ಅಧ್ಯಕ್ಷ ಜಯವರ್ಧನೆಯ ಕೈ ಕಟ್ಟಿದ್ದು. ಈ ವಿಚಾರವನ್ನು ತಡವಾಗಿಯಾದರೂ ಅಲ್ಲಿನ ರಾಜಕೀಯ ನಾಯಕರು ಮನಗಂಡಿರುವುದು ಸ್ವಾಗತಾರ್ಹ.

ಶ್ರೀಲಂಕಾ ತಮಿಳರ ಕ್ಷೋಭೆಗೆ ಪರಿಹಾರ ಹುಡುಕುವ ಚಕ್ರಗೋಷ್ಠಿಯಲ್ಲಿ ಶ್ರೀಲಂಕಾ ಫ್ರೀಡಂ ಪಾರ್ಟಿ ಪ್ರಾರಂಭದಲ್ಲಿ ಭಾಗವಹಿಸಿ ಆಮೇಲೆ ಹಿಂದೆಗೆಯಿತು. ಸಿರಿಮಾವೋರ ಪೌರತನದ ಹಕ್ಕುಗಳನ್ನು ಮರಳಿ ಕೊಡಬೇಕೆಂಬ ಬೇಡಿಕೆ ಈಡೇರದಿದ್ದುದೇ ಇದಕ್ಕೆ ಮೂಲ ಕಾರಣವಾಗಿತ್ತು.

ಹೀಗೆ ತಮಿಳರ ಸಮಸ್ಯೆ ಬಗೆಹರಿಯದಿರುವುದಕ್ಕೆ ಮೂಲವಾದ ರಾಜಕೀಯ ಕಾರಣ ಇಲ್ಲಿದೆ. ಸಿಂಹಳೀಯರನ್ನು ಪ್ರತಿನಿಧಿಸುವ ಎರಡು ಪ್ರಧಾನ ರಾಜಕೀಯ ಪಕ್ಷಗಳ ನಡುವಿನ ವಿರಸವೇ ಈ ಕಾರಣ. ಇದನ್ನು ಮೊದಲು ನಿವಾರಿಸಬೇಕು. ಅವುಗಳೆರಡರ ನಡುವೆ ದೇಶದ ಹಿತದೃಷ್ಟಿಯಿಂದ ತಮಿಳರ ಸಮಸ್ಯೆಗೆ ಸಂಬಂಧಿಸಿ ಮಾತ್ರವಾದರೂ ಸಾಮರಸ್ಯ ಉಂಟಾಗಬೇಕು. ಎರಡೂ ಪಕ್ಷಗಳಿಗೆ ಸಮ್ಮತವಾದ ಧೋರಣೆಯೊಂದನ್ನು ರೂಪಿಸಿಕೊಂಡು ಪರಿಹಾರಕ್ಕೆ ಹುಡುಕಿದಾಗ ಮಾತ್ರ ಅದು ದೊರೆಯುವುದು ಸಾಧ್ಯ. ಇಲ್ಲವಾದರೆ ಪರಸ್ಪರರ ಬಗೆಗಿನ ಭಯ ಇದ್ದೇ ಇರುತ್ತದೆ.

ಸಿರಿಮಾವೋ ಬಂಡಾರ ನಾಯಕೆ ಕೂಡ ತಮಿಳರ ಬಗ್ಗೆ ಉದಾರವಾದಿಯಲ್ಲ. ಸಿಂಹಳೀಯರ ಹಿತಾಸಕ್ತಿ ರಕ್ಷಣೆ ವಿಚಾರದಲ್ಲಿ ಆಕೆ ಜಯವರ್ಧನೆಗಿಂತ ಹಿಂದೆ ಅಲ್ಲ. ತಮಿಳರಿಗೆ ಪ್ರತ್ಯೇಕ ತಾಯ್ನಾಡನ್ನಾಗಲಿ, ಪ್ರಾದೇಶಿಕ ಸ್ವಾಯತ್ತೆಯನ್ನಾಗಲಿ ಕೊಡುವುದಕ್ಕೆ ಆಕೆಯ ವಿರೋಧವಿದೆ. ಜಯವರ್ಧನೆಯ ನೀತಿಯೂ ಇದೇ ಆಗಿದೆ. ಈ ನಿಲುವುಗಳು ರೂಪುಗೊಂಡದ್ದು ಸಿಂಹಳೀಯರ ಓಟು ನಷ್ಟವಾದೀತೆಂಬ ಭಯದಿಂದ. ರಾಜಕೀಯವಾಗಿ ಅತಂತ್ರರಾಗಿ ಹೋದೇವು ಎಂಬ ರಾಜಕೀಯ ಪರಿಗಣನೆಯಿಂದ.

ಈ ಹಿನ್ನೆಲೆಯಲ್ಲಿ ಇವೆರಡೂ ಪಕ್ಷಗಳು ಜತೆಯಾಗಿ ಕುಳಿತು ಧೋರಣೆ ರೂಪಿಸಿ ಪರಿಹಾರ ಸೂತ್ರವನ್ನು ರಚಿಸಿ ತಮಿಳರ ಸಮಸ್ಯೆಯನ್ನು ನಿವಾರಿಸಬೇಕಾದ ಅಗತ್ಯವಿದೆ. ತಮಿಳರಿಗೆ ಹೆಚ್ಚು ಅಧಿಕಾರವನ್ನೋ ಅವರು ಕೇಳುತ್ತಿರುವ ಪ್ರಾದೇಶಿಕ ಸ್ವಾಯತ್ತೆಯನ್ನೋ ಒಟ್ಟು ರಾಷ್ಟ್ರೀಯ ಒಮ್ಮತದ ನೆಲೆಯಲ್ಲಿ ಕೊಟ್ಟರೆ ಯಾರೂ ರಾಜಕೀಯವಾಗಿ ತ್ರಿಶಂಕುಗಳಾಗುವ ಭಯವಿಲ್ಲ.

ಈ ನಿಟ್ಟಿನಲ್ಲಿ ಸಿರಿಮಾವೋರಿಗೆ ಮತ್ತೆ ರಾಜಕೀಯ ಚಟುವಟಿಕೆಗೆ ಅವಕಾಶ ಕೊಡುವ ಪೌರತನದ ಹಕ್ಕು ನೀಡಿಕೆ ಸ್ವಾಗತಾರ್ಹವಾದದ್ದು. ಈ ಬೆಳವಣಿಗೆ ಶ್ರೀಲಂಕಾ ಕ್ಷೋಭೆ ನಿವಾರಣೆಯ ದಿಕ್ಕಿನಲ್ಲಿ ಮಹತ್ವದ ಕೊಡುಗೆ ನೀಡಬಹುದು. ಶ್ರೀಲಂಕೆಯಲ್ಲಿ ರಾಷ್ಟ್ರೀಯ ಒಮ್ಮತವೊಂದನ್ನು ರೂಪಿಸುವ ಮೊದಲ ಹೆಜ್ಜೆ ಇದಾಗಿದೆ.

ಮುಂಗಾರು
ಆದಿತ್ಯವಾರ, ಜನವರಿ 5, 1986

ಉದ್ಯೋಗವೇ ಸ್ವಾತಂತ್ರ್ಯಕ್ಕೆ ದಾರಿ

ಪೊಲೀಸ್ ಹಾಗೂ ಅರೆಸೈನಿಕ ಪಡೆಗಳಲ್ಲಿ ಮಹಿಳೆಯರಿಗೆ ಅವಕಾಶ ಒದಗಿಸಲು ಕೇಂದ್ರ ಮೀಸಲು ಪೊಲೀಸ್ ಪಡೆಯಲ್ಲಿ ಮಹಿಳೆಯರದೇ ಆದ ಪ್ರತ್ಯೇಕ ತುಕಡಿಗಳನ್ನು ರಚಿಸುವುದಾಗಿ ಪ್ರಧಾನ ಮಂತ್ರಿ ರಾಜೀವ ಗಾಂಧಿ ಅವರು ಪ್ರಕಟಿಸಿದ್ದಾರೆ.

ಈಗ ಸೈನ್ಯದಲ್ಲಾಗಲಿ, ಅರೆಸೈನಿಕ ಪಡೆಗಳಲ್ಲಾಗಲಿ, ಪೊಲೀಸ್ ಪಡೆಗಳಲ್ಲಾಗಲಿ ಮಹಿಳೆಯರಿಗೆ ಪ್ರಾತಿನಿಧ್ಯ ಇಲ್ಲವೇ ಇಲ್ಲವೆಂಬಂತಿದೆ. ರಾಜ್ಯಗಳಲ್ಲಿ ಪೊಲೀಸ್ ಇಲಾಖೆಗಳಲ್ಲಿ ಮಹಿಳೆಯರನ್ನು ಸೇರಿಸಿಕೊಳ್ಳುವ ನಿರ್ಧಾರ ತಾತ್ವಿಕವಾಗಿ ಆಗಿದ್ದರೂ ಮಹಿಳೆಯರಿಗೆ ಅವಕಾಶ ಬಹಳ ಸೀಮಿತವಾಗಿದೆ. ಮಹಿಳಾ ಪೊಲೀಸರನ್ನು ಸಣ್ಣ ಸಂಖ್ಯೆಯಲ್ಲಿ ಮಾತ್ರವೇ ತೆಗೆದುಕೊಂಡು ದೊಡ್ಡ ನಗರಗಳಲ್ಲಿ ಅವರನ್ನು ನೆಲೆಗೊಳಿಸಲಾಗಿದೆ.

ಕ್ಷೇತ್ರ ಕಾರ್ಯಾಚರಣೆಯಲ್ಲಿ ನೇರವಾಗಿ ಭಾಗವಹಿಸಿದ ಅರೆಸೈನಿಕ ಹಾಗೂ ಪೊಲೀಸ್ ಇಲಾಖೆಗಳ ಹುದ್ದೆಗಳಿಗೆ ಮಹಿಳೆಯರನ್ನು ನೇಮಿಸುವುದರಿಂದ ಯಾರಿಗೂ ಹಾನಿಯಿಲ್ಲ. ಕೆಲಸಕ್ಕೂ ಅದರಿಂದ ಬಾಧೆಯೇನೂ ಆಗದು.

ಪೊಲೀಸ್, ಅರೆಸೈನಿಕ ಹಾಗೂ ಸೈನಿಕ ಪಡೆಗಳನ್ನು ಹೊರತುಪಡಿಸಿದರೂ ಇಂದು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಅವಕಾಶ ಕಮ್ಮಿ. ಸರಕಾರದ ವಿವಿಧ ಇಲಾಖೆಗಳಲ್ಲಿ ಗುಮಾಸ್ತ ಶ್ರೇಣಿಯಲ್ಲಿ ಅಷ್ಟೋ ಇಷ್ಟೋ ಮಂದಿ ಸ್ತ್ರೀಯರಿರಬಹುದಾದರೂ ಆಡಳಿತೆಯ ಉನ್ನತ ಮಟ್ಟದಲ್ಲಿ ಅವರಿಗೆ ಪ್ರಾತಿನಿಧ್ಯ ಇಲ್ಲ. ನಮ್ಮ ಆಡಳಿತ ಪ್ರಮುಖರೂ ಸಮಾಜದ ಅರ್ಧಾಂಶವಾಗಿರುವ ಈ ಜನವಿಭಾಗವನ್ನು ಅವಗಣನೆಯಿಂದಲೂ ತಿರಸ್ಕಾರದಿಂದಲೂ ನೋಡುತ್ತಿರುವ ವಿದ್ಯಮಾನ ನಡೆಯುತ್ತಿದೆ. ಐಎಎಸ್ ಶ್ರೇಣಿಯಲ್ಲಿ ಸ್ತ್ರೀಯರು ಮದುವೆಯಾದೊಡನೆಯೇ ರಾಜೀನಾಮೆ ಕೊಡಬೇಕು ಎಂಬ ನಿಯಮವೊಂದು ಇದಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ. ವಿಮಾನದಲ್ಲಿನ ಪರಿಚಾರಿಕೆಯರೂ ಮದುವೆಯಾದರೆ ನಿವೃತ್ತರಾಗಬೇಕು ಎಂಬ ನಿಯಮದ ವಿಚಾರದಲ್ಲಿ ನ್ಯಾಯಾಲಯದಲ್ಲಿ ಖಟ್ಲೆ ನಡೆದಿತ್ತು.

ಇದೆಲ್ಲವೂ ನಮ್ಮ ಪುರುಷ ಪ್ರಧಾನ ಸಮಾಜವು ಸ್ತ್ರೀಯರ ಬಗ್ಗೆ ತಳೆದಿರುವ ತಿರಸ್ಕಾರವನ್ನೂ ಉಪೇಕ್ಷೆಯನ್ನೂ ಪ್ರತಿಬಿಂಬಿಸುತ್ತದೆ. ಆಡಳಿತೆ ಹಾಗೂ ಅಭಿವೃದ್ಧಿಯ ರಂಗದಲ್ಲಿ ಸ್ತ್ರೀಯರೂ ಕಾರ್ಯಕ್ಷಮತೆಯುಳ್ಳವರು, ಸಮರ್ಥರು ಎಂಬ ವೈಜ್ಞಾನಿಕ ಸತ್ಯವನ್ನು ನಾವು ಇನ್ನಷ್ಟೇ ಅರಿಯಬೇಕಾಗಿದೆ. ಸ್ತ್ರೀ ಸಹಜವಾದ ಕೆಲವು ಶಾರೀರಿಕ ದುರ್ಬಲತೆ ಈ ಜನವಿಭಾಗಕ್ಕಿರಬಹುದಾದರೂ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯ ಸಾಧನೆಯ ಪ್ರಕ್ರಿಯೆಯಲ್ಲಿ ಇದೊಂದು ಪ್ರಯೋಜನಕಾರಿಯಾದಂತ ಪ್ರಚಂಡ ಶಕ್ತಿ ಎಂಬ ಅರಿವು ನಮ್ಮ ಆಡಳಿತಗಾರರಿಗೂ ಯೋಜನೆಯನ್ನು ರೂಪಿಸುವವರಿಗೂ ಇನ್ನೂ ಹೊಳೆದಿಲ್ಲ.

ಸ್ತ್ರೀ ಸಮುದಾಯಕ್ಕೆ ವಿದ್ಯೆಕೊಟ್ಟು ಅವರನ್ನು ಆಡಳಿತೆಯಲ್ಲಿಯೂ ವೃತ್ತಿಯಲ್ಲಿಯೂ, ತಂತ್ರಜ್ಞಾನದಲ್ಲಿಯೂ ನಿಪುಣೆಯರನ್ನಾಗಿ ಮಾಡಿ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಬೇಕಾದ ದೊಡ್ಡ ಕರ್ತವ್ಯ ಸಮಾಜಕ್ಕಿದೆ. ಸ್ತ್ರೀ ಸಮುದಾಯದ ಬಿಡುಗಡೆಯ ಬಗ್ಗೆ ಮಾತನಾಡುವ ಸಮಾಜ ಅದನ್ನು ಸಾಧಿಸುವ ದಾರಿಗಳ ಬಗ್ಗೆಯೂ ಆಲೋಚಿಸಬೇಕು. ಮೊದಲು ವಿದ್ಯೆ–ಆಮೇಲೆ ಉದ್ಯೋಗ - ಈ ದಾರಿಯಿಂದ ಮಾತ್ರವೇ ಯಾವುದೇ ಜನವಿಭಾಗದ ಉದ್ಧಾರ ಸಾಧ್ಯ. ಮಹಿಳೆಯರು ಸ್ವತಂತ್ರರಾಗಬೇಕಿದ್ದರೆ, ಸಮಾಜದಲ್ಲಿ ಸ್ವಂತ ವ್ಯಕ್ತಿತ್ವದ ಬಲದಿಂದ ಗುರುತು ಪಡೆದು ಬಾಳುವುದು ಸಾಧ್ಯವಾಗಬೇಕಿದ್ದರೆ ತಮ್ಮ ಕಾಲ ಮೇಲೆ ತಾವು ನಿಲ್ಲುವ ಆರ್ಥಿಕ ಶಕ್ತಿ ಅವರಿಗೆ ಬರಬೇಕು. ಇಂತಹ ಆರ್ಥಿಕ ಶಕ್ತಿಯನ್ನು ಗಳಿಸಿಕೊಂಡ ಮಹಿಳೆ ಮಾತ್ರವೇ ಹೆರವರ ಹಂಗಿಲ್ಲದೆ ಬಾಳಬಲ್ಲಳು. ಇಂಥ ಸ್ವಂತ ಆರ್ಥಿಕ ಶಕ್ತಿಯನ್ನು ಪಡೆದುಕೊಂಡು ಕೂಡ ಸುಗಮ ದಾಂಪತ್ಯವನ್ನು ನಡೆಸುವುದಲ್ಲದೆ ಕೌಟುಂಬಿಕ ಸಾಮರಸ್ಯವನ್ನೂ ಉಳಿಸಿಕೊಳ್ಳುವುದು ಸಾಧ್ಯವೆಂಬುದಕ್ಕೆ ಇಂದು ನಮ್ಮ ಸಮಾಜದಲ್ಲಿಯೇ ಸಾಕಷ್ಟು ನಿದರ್ಶನಗಳಿವೆ. ಇದಕ್ಕೆ ಅಪವಾದಗಳಿರಬಹುದಾದರೂ ಸಾವಿರಕ್ಕೊಂದೋ ಎರಡೋ ಇರಬಹುದಾದ ಅಂತಹ ಪ್ರಕರಣಗಳನ್ನು ಸಾರ್ವತ್ರಿಕವಾಗಿ ಅನ್ವಯಿಸುವುದಕ್ಕೆ ಬಾರದು.

ಸರಕಾರ ಅರೆಸೈನಿಕ ಮತ್ತು ಪೊಲೀಸ್ ಪಡೆಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ತುಕಡಿ ರಚಿಸುವ ನಿರ್ಧಾರ ಕೈಗೊಂಡು ಹೊಸ ಉಪಕ್ರಮವೊಂದನ್ನು ತಂದಿದೆ. ಇದು ಅಲ್ಲಿಗೇ ನಿಲ್ಲಬಾರದು. ಸಾಧ್ಯವಾದ ಎಲ್ಲ ರಂಗಗಳಲ್ಲಿ ಮಹಿಳೆಯರಿಗೆ ಸಾಕಷ್ಟು ಅವಕಾಶಗಳನ್ನು ತೆರೆಯಬೇಕು. ಅಂತಿಮವಾಗಿ ಇದು ಜನಸಂಖ್ಯೆಯಲ್ಲಿ ಅವರ ಪ್ರಮಾಣಕ್ಕೆ ಅನುಗುಣವಾಗಿರುವಂತೆ ಆಗಬೇಕು.

ಹುಡುಗಿಯರಿಗೆ ವಿದ್ಯೆ ದೊರೆಯದೆ ಇದು ಸಾಧ್ಯವಾಗದು. ಇಂದು ಪೇಟೆಗಳಲ್ಲಿಯೂ ಹಳ್ಳಿಗಳಲ್ಲಿಯೂ ಹುಡುಗಿಯರು ವಿದ್ಯೆಯನ್ನು ಅರ್ಧಕ್ಕೇ ನಿಲ್ಲಿಸುವ ವಿದ್ಯಮಾನ ಬಹಳವಿದೆ. ಇದನ್ನು ಹೋಗಲಾಡಿಸಲು ಸರಕಾರ ಪ್ರಯತ್ನಿಸಬೇಕು. ಹುಡುಗಿಯರಿಗೆ ವಿದ್ಯೆ ಕೊಡುವ ಬಗ್ಗೆ ವಿಶೇಷ ಗಮನ ಹರಿಸಬೇಕು

ಮುಂಗಾರು
ಮಂಗಳವಾರ, ಜನವರಿ 7, 1986

ವಿರೋಧ ಪಕ್ಷ ವೇದಿಕೆ

ಹದಿಮೂರು ರಾಜಕೀಯ ಪಕ್ಷಗಳ ವೇದಿಕೆ ರಚನೆ ನಿರ್ಧಾರ ಭಾರತದ ವಿರೋಧ ಪಕ್ಷ ಕೂಟಕ್ಕೆ ಒಂದು ಮಹತ್ವದ ಘಟ್ಟ. ಇತ್ತೀಚೆಗೆ ಹೈದರಾಬಾದಿನಲ್ಲಿ ತೆಲುಗುದೇಶಂ ಪಕ್ಷದ ನೇತೃತ್ವದಲ್ಲಿ ಈ ನಿರ್ಧಾರ ಆಯಿತು. ಈ ನಿರ್ಧಾರದ ಪಾತ್ರಧಾರಿಗಳು ಮುಖ್ಯವಾಗಿ ಪ್ರಾದೇಶಿಕ ಪಕ್ಷಗಳೇ. ಇತ್ತೀಚೆಗೆ ತಾನೇ ಗೆದ್ದು ಅಧಿಕಾರ ಹಿಡಿದಿರುವ ಅಸ್ಸಾಂ ಗಣಪರಿಷತ್, ಜಮ್ಮು–ಕಾಶ್ಮೀರದ ನ್ಯಾಶನಲ್ ಕಾನ್ಫರೆನ್ಸ್, ಪಂಜಾಬಿನ ಅಕಾಲಿದಳ ಹಾಗೂ ಅತಿಥೇಯ ತೆಲುಗು ದೇಶಂ ಈ ನಿರ್ಧಾರದಲ್ಲಿ ಒಳಗೊಂಡ ಪ್ರಮುಖ ಪಕ್ಷಗಳು. ರಾಷ್ಟ್ರೀಯ ಪಕ್ಷಗಳ ನೆಲೆಯನ್ನು ಹೊಂದಿರುವವುಗಳ ಪೈಕಿ ಜನತಾ ಪಕ್ಷ ಮಾತ್ರ ಇದರಲ್ಲಿ ಭಾಗವಹಿಸಿದೆ. ಬಿಜೆಪಿ ಹಾಗೂ ಉಭಯ ಕಮ್ಯೂನಿಸ್ಟ್ ಪಕ್ಷಗಳು ಈ ನಿರ್ಧಾರದಿಂದ ದೂರ ಉಳಿದಿವೆ. ಇನ್ನೊಂದು ಪ್ರಾದೇಶಿಕ ಪಕ್ಷವಾದ ಅ. ಭಾ. ಅಣ್ಣಾ ಡಿಎಂಕೆ ಕೂಡ ತೆಲುಗುದೇಶಂ ಮುತುವರ್ಜಿಯಲ್ಲಿ ನಡೆದ ಪ್ರತಿಪಕ್ಷ ಸಂಘಟನೆ ಕಾರ್ಯಕ್ರಮದಲ್ಲಿ ಒಳಗೊಂಡಿಲ್ಲ.

ವಿರೋಧ ಪಕ್ಷಗಳಾಗಿದ್ದು ಕೂಡ ಅವುಗಳ ಸಂಘಟನೆ, ಐಕ್ಯ ಹಾಗೂ ಪರಸ್ಪರ ಸಹಕಾರ–ಸಮನ್ವಯ ಕಾರ್ಯದಲ್ಲಿ ಭಾಗವಹಿಸದೆ ಇರುವುದಕ್ಕೆ ಇವುಗಳಿಗೆ ಒಂದೊಂದಕ್ಕೂ ಒಂದೊಂದು ಕಾರಣ ಇರಬಹುದು. ವಿರೋಧ ಪಕ್ಷಗಳ ಬಲಸಂವರ್ಧನೆಯ ದಾರಿಯಲ್ಲಿ ಸ್ವಂತ ಹಿತಾಸಕ್ತಿ ಅಡ್ಡ ಬಂದಿರಬಹುದು. ವೇದಿಕೆ ರಚನೆ ಹಾಗೂ ಕಾರ್ಯಾಚರಣೆಯ ಕಲ್ಪನೆಯ ಬಗ್ಗೆಯೇ ಕೆಲವು ರಾಷ್ಟ್ರೀಯ ವಿರೋಧ ಪಕ್ಷ ನಾಯಕರಿಗೇ ಸಂಶಯವೂ ಅಸಮಾಧಾನವೂ ಇರುವಂತೆ ಕಾಣಿಸುತ್ತದೆ. 1982ರಿಂದೀಚೆಗೆ 1984ರ ತನಕ ಪ್ರತಿಪಕ್ಷ ಐಕ್ಯಕ್ಕಾಗಿ ಪ್ರಯತ್ನ ನಡೆದ "ರಹಸ್ಯ ಸಮಾಲೋಚನೆ" ಇದಲ್ಲವೆಂದು ಜನತಾ ಪಕ್ಷಾಧ್ಯಕ್ಷ ಚಂದ್ರಶೇಖರ್ ಸ್ಪಷ್ಟಪಡಿಸಿದ್ದರಲ್ಲಿ ಇದನ್ನು ಗುರುತಿಸಬಹುದಾಗಿದೆ. ಈಗ ನಿರ್ಧಾರವಾಗಿರುವ ವೇದಿಕೆಯೆಂಬುದು ಕೇವಲ ಪರಸ್ಪರ ಸಮಾಲೋಚನೆಗಿರುವ ಒಂದು ವ್ಯವಸ್ಥೆ ಮಾತ್ರ ಎಂದು ಅವರು ಹೇಳಿದ್ದಾರೆ.

ವಿರೋಧ ಪಕ್ಷಗಳು ಐಕ್ಯಗೊಂಡು ಬಲಯುತವಾದ ಒಂದೇ ಪಕ್ಷವಾಗಿ ಉದಯಿಸಬೇಕು. ಒಂದು ವೇಳೆ ಅದು ಸಾಧ್ಯವಾಗದಿದ್ದರೂ ಅವುಗಳ ಒಕ್ಕೂಟವೋ ಸಂಘಟನೆಯೋ ಸಂಯುಕ್ತ ರಂಗವೋ ರೂಪುಗೊಂಡು ಆಳುವ ಪಕ್ಷಕ್ಕೆ ಒಂದು ಪ್ರಬಲವಾದ ರಾಷ್ಟ್ರೀಯ ಪರ್ಯಾಯ ಶಕ್ತಿರೂಪುಗೊಳ್ಳಬೇಕು ಎಂಬುದು ಈ ದೇಶದ ಹಲವರ ಅಭಿಲಾಷೆ. ಜನತಂತ್ರದ ಬಗ್ಗೆ ಕಾಳಜಿಯಿರುವ ಎಲ್ಲಾ ಜನರು ಅಂತಹ ಆಶಯವನ್ನು ಇನ್ನೂ ಹೊತ್ತುಕೊಂಡಿದ್ದಾರೆ. ಕಳೆದ ದಶಕದಲ್ಲಿ ಅದು ಸಾಧ್ಯವಾಗಿಲ್ಲ. ಆಂದು ದಶಕದ ಉತ್ತರಾರ್ಧದಲ್ಲಿ ಅದಕ್ಕೆ ಪ್ರಯತ್ನ ನಡೆಯಿತು. ಒಂದು ಪಕ್ಷವೂ ರೂಪುಗೊಂಡು ಅಧಿಕಾರಕ್ಕೆ ಬಂತು. ಆದರೆ ಅಧಿಕಾರ ಲಾಲಸೆಯೇ ಈ ಪ್ರಯೋಗಕ್ಕೆ ಮುಳಿವಾಗಿ ಅದರ ಬಲ ಕ್ಷೀಣವಾಯಿತು.

ಮತ್ತೆ ಈ ದಶಕದಲ್ಲಿ ಪ್ರಾದೇಶಿಕ ಪಕ್ಷಗಳು ಪ್ರಾಬಲ್ಯಕ್ಕೆ ಬಂದವು. ಅವುಗಳ ಮುತುವರ್ಜಿಯಿಂದಲೇ ವಿರೋಧ ಪಕ್ಷಗಳಿಗೆ ಸಮಾನ ನೆಲೆಯನ್ನೊದಗಿಸುವ ಯತ್ನ ನಡೆಯಿತು. ನಾಲ್ಕೈದು ರಹಸ್ಯ ಸಮಾಲೋಚನೆಗಳಾದವು. ದೇಶದ ಜನರಲ್ಲಿ ಪರ್ಯಾಯ ಶಕ್ತಿಯೊಂದು ಉದಯಿಸುವ ಆಸೆ ಚಿಗುರೊಡೆಯಿತು. ಮತ್ತೆ ಹಾಗೇ ಮುರುಟಿ ಹೋಯಿತು. 1984ರ ಡಿಸೆಂಬರ್ ಮಹಾ ಚುನಾವಣೆಯಲ್ಲಿ ರಾಜೀವ್ ನೇತೃತ್ವದಲ್ಲಿ ಕಾಂಗ್ರೆಸ್ ಗೆದ್ದ ಬಳಿಕ ಈ ಸಂಘಟನೆಯ ಸುದ್ದಿಯನ್ನೇ ಯಾವ ಪಕ್ಷವೂ ತೆಗೆಯಲಿಲ್ಲ.

ಇಂದು ಈ ದೇಶದಲ್ಲಿ ವಿರೋಧ ಪಕ್ಷಗಳ ವಿದ್ಯಮಾನ ಗಮನಿಸಿದರೆ ರಾಷ್ಟ್ರೀಯ ನೆಲೆಯುಳ್ಳ ಪಕ್ಷಗಳೆಂದು ಹೇಳಿಕೊಳ್ಳಲು ಯಾವ ಪಕ್ಷವೂ ಅರ್ಹವಾಗಿಲ್ಲ. ಒಂದೊಮ್ಮೆ ರಾಷ್ಟ್ರದ ಎಲ್ಲೆಡೆ ಜನಮನವನ್ನು ಸೆಳೆದ ಜನತಾ ಪಕ್ಷ ಇಂದು ಕರ್ನಾಟಕದಲ್ಲಿ ಮಾತ್ರ ಅಧಿಕಾರದಲ್ಲಿದ್ದು ವಾಸ್ತವಿಕವಾಗಿ ಒಂದು ಪ್ರಾದೇಶಿಕ ಪಕ್ಷವೇ ಆಗಿ ಪರಿವರ್ತಿತವಾಗಿದೆ. ಬಿಜೆಪಿ ಕೂಡ ದೇಶದೆಲ್ಲೆಡೆ ಕಾರ್ಯಕರ್ತರ ಕೂಟವನ್ನು ಹೊಂದಿದೆಯಾದರೂ ಸಾಮಾನ್ಯ ಜನರನ್ನು ತನ್ನೆಡೆಗೆ ಸೆಳೆಯಲು ಶಕ್ತವಾಗಿಲ್ಲ. ಉತ್ತರದಲ್ಲಿ ತನಗಿದ್ದ ಜನಬೆಂಬಲವನ್ನೂ ಅದು ಕಳೆದುಕೊಳ್ಳುತ್ತಿರುವುದು ಇತ್ತೀಚೆಗಿನ ವಿದ್ಯಮಾನ. ಕಮ್ಯೂನಿಸ್ಟ್ ಪಕ್ಷಗಳೂ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರಗಳಿಗೆ ಮಿತಿಗೊಂಡು ಹಿಂದಿ ಪ್ರದೇಶದಲ್ಲಿ ವರ್ಚಸ್ಸು ಹೆಚ್ಚಿಸಿಕೊಳ್ಳಲು ವ್ಯರ್ಥ ಹೆಣಗಾಡುತ್ತಿವೆ.

ಈ ನಿರ್ವಾತದಲ್ಲಿ ಪ್ರಾದೇಶಿಕ ಪಕ್ಷಗಳು ಬೇರೂರುತ್ತಿವೆ. ತಮಿಳ್ನಾಡಿನಲ್ಲಿ ಹುಟ್ಟಿಕೊಂಡ ಈ ಆಂದೋಲನ ಆಂಧ್ರ, ಪಂಜಾಬ್, ಜಮ್ಮು–ಕಾಶ್ಮೀರಗಳಿಗೆ ಹಬ್ಬಿ, ಅಲ್ಲಿಂದ ಅಸ್ಸಾಮಿಗೆ ವಿಸ್ತರಿಸಿದೆ. ಇಂದು ಈ ದೇಶದ ಸಮಗ್ರ ರಾಜಕೀಯ ರಂಗವನ್ನು ನೋಡಿದರೆ ಪ್ರಾದೇಶಿಕ ಪಕ್ಷಗಳೇ ಈ ದೇಶಕ್ಕೆ ತಾರಕವೇನೋ ಎಂಬ ತೀರ್ಮಾನಕ್ಕೆ ಬರುವಂತಾಗಿದೆ.

ಪ್ರಾದೇಶಿಕ ಪಕ್ಷಗಳು ರಾಷ್ಟ್ರ ವಿರೋಧಿಗಳು ಎಂಬ ಮಾತನ್ನು ಪ್ರಧಾನಮಂತ್ರಿ ರಾಜೀವ ಗಾಂಧಿ ಆಡಿದ್ದಕ್ಕೆ ಅವುಗಳ ಬಗೆಗಿನ ಭಯವೇ ಕಾರಣವಿರಬಹುದು.

ಯಾರು ಬಯಸಿದರೂ ಬಯಸದೇ ಇದ್ದರೂ ಪ್ರಾದೇಶಿಕ ಆಶೋತ್ತರಗಳು ಈ ದೇಶಕ್ಕೆ ಸಹಜ ಪ್ರವೃತ್ತಿ. ಅವುಗಳನ್ನು ಪ್ರತಿನಿಧಿಸುವ ಶಕ್ತಿಗಳು ಕಾಲ ಪಕ್ವವಾದಾಗ ಹುಟ್ಟಿ ಬೆಳೆಯುತ್ತವೆ. ಬಹುಶಃ ಈ ದೇಶದ ಭವಿಷ್ಯವನ್ನು ಅವುಗಳೇ ರೂಪಿಸುವ ದಿನ ಬರಬಹುದು. ಜನ ಸಮುದಾಯದ ಆಶೋತ್ತರಗಳನ್ನು ಅವರವರ ಅಗತ್ಯಕ್ಕೆ ತಕ್ಕಂತೆ ಪೂರೈಸಲು ರಾಷ್ಟ್ರೀಯ ನೆಲೆಯ ಪಕ್ಷಗಳು ಸೋತು ಹೋಗಿರುವುದರಿಂದಲೇ ಈ ವಿದ್ಯಮಾನ ಉಂಟಾಗಿದೆ.

ಈ ಪ್ರವೃತ್ತಿಯನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸುವುದು ಈ ದೇಶದ ಆರೋಗ್ಯಕ್ಕೆ ಒಳ್ಳೆಯದು. ಜನತಂತ್ರವನ್ನು ಗೌರವಿಸುವವರೆಲ್ಲ ಈ ಬೆಳವಣಿಗೆಯನ್ನು ಸ್ವಾಗತಿಸಬೇಕು. ಸಂಘಟನೆ ಕಟ್ಟಿಕೊಳ್ಳಲು, ಪರ್ಯಾಯ ಶಕ್ತಿರೂಪಿಸಲು ವಿರೋಧ ಪಕ್ಷಗಳು ವಿಫಲವಾದ ಹಿನ್ನೆಲೆಯಲ್ಲಿ ಪ್ರಾದೇಶಿಕ ಪಕ್ಷಗಳ ಮುತುವರ್ಜಿಯಲ್ಲಿ ಅದಕ್ಕೆ ಚಾಲನೆ ಸಿಕ್ಕಿದೆ. ಈ ಪ್ರವೃತ್ತಿಯನ್ನು ಬೆಳೆಸಬೇಕಾದದ್ದು ಎಲ್ಲರ ಕರ್ತವ್ಯ.

ಮುಂಗಾರು

ಬುಧವಾರ, ಜನವರಿ 8, 1986

ಬೆಂಗಳೂರಿನ ಬವಣೆ

ಬೆಂಗಳೂರು ನಗರದಲ್ಲಿ ತೀವ್ರವಾದ ನೀರಿನ ಅಭಾವ ಉಂಟಾಗಿದೆ. ಅಲ್ಲಿ ದಿನ ಬಿಟ್ಟು ದಿನ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಜಾರಿಗೆ ತರಲಾಗಿದೆ. ನಗರಕ್ಕೆ ನೀರು ಒದಗಿಸುವ ಮೂಲಗಳ ಪೈಕಿ ತಿಪ್ಪಗೊಂಡನ ಹಳ್ಳಿ ಜಲಾಶಯ ಹಾಗೂ ಹೇಸರಘಟ್ಟ ಜಲಾಶಯಗಳು ಇನ್ನೇನು ಸಂಪೂರ್ಣ ಬತ್ತಿ ಹೋಗುವುದರಲ್ಲಿವೆ.

ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಮಳೆ ಕೈಕೊಟ್ಟಿದೆ. ಬೆಂಗಳೂರಿಗೂ ಅದರ ಬಿಸಿ ತಗುಲಿದೆ. ಕೆರೆಗಳು ಭರ್ತಿಯಾಗಿಲ್ಲ. ಎರಡೂ ಕೆರೆಗಳಲ್ಲಿ ಹೂಳು ತುಂಬಿ ಅವುಗಳಲ್ಲಿ ಹಿಡಿಸುವ ನೀರಿನ ಪ್ರಮಾಣವೂ ಕಮ್ಮಿಯಾಗಿದೆ. ಬೆಂಗಳೂರಿನ ಜನಸಂಖ್ಯೆ ಮೂವತ್ತು ಲಕ್ಷವನ್ನು ಮೀರಿದೆ. ಬೆಂಗಳೂರು ಕಳೆದ ಇಪ್ಪತ್ತು ವರ್ಷಗಳಲ್ಲಿ ಮೂರು ಪಟ್ಟು ಬೆಳೆದಿದೆ. ಏಷ್ಯದ ಬೇರಾವ ಮಹಾನಗರವೂ ಈ ಗತಿಯಲ್ಲಿ ಬೆಳೆದದ್ದಿಲ್ಲ. ಈ ನಗರಕ್ಕೆ ಸುಮಾರು ಹತ್ತು ಕೋಟಿ ಗ್ಯಾಲನ್ ನೀರು ಬೇಕು. ಎರಡೂ ಜಲಾಶಯಗಳಿಂದ ಮೂರು ಕೋಟಿ ಗ್ಯಾಲನ್ ನೀರು ಪೂರೈಕೆಯಾಗುತ್ತಿತ್ತು. ಕಾವೇರಿ ನದಿಯಿಂದ ದಿನಕ್ಕೆ ಐದು ಕೋಟಿ ಗ್ಯಾಲನ್ ಪೂರೈಕೆಯಾಗುತ್ತಿದೆ. ಅದು ಈಗಲೂ ಬರುತ್ತಿದೆ. ಆದರೆ ಕೆರೆಗಳ ನೀರು ವಾಸ್ತವಿಕವಾಗಿ ನಿಂತೇ ಹೋಗಿದೆ.

ಇದರಿಂದ ಜನರಿಗೆ ಮಹಾ ಸಂಕಟ ಪ್ರಾಪ್ತವಾಗಿದೆ. ದಿನ ಬಿಟ್ಟು ದಿನ ನೀರು ಪೂರೈಕೆಯಾಗುತ್ತಿದೆ. ಅದೂ ಕೆಲವೇ ಗಂಟೆಗಳ ಕಾಲ ಮಾತ್ರ. ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕ ನಲ್ಲಿಗಳಲ್ಲಿ ಮಾತ್ರ ನೀರು ಬಿಡಲಾಗುತ್ತಿದೆ. ಮನೆಗಳಿಗೆ ನೀರಿಲ್ಲ. ಟ್ಯಾಂಕುಗಳಲ್ಲಿ ನೀರೊದಗಿಸುವ ವ್ಯವಸ್ಥೆಯನ್ನು ಜಲಮಂಡಳಿ ಮಾಡಿದೆಯಾದರೂ ಅದು ಗೊಂದಲಕ್ಕೆ ಕಾರಣವಾಗಿದೆ. ಅಧಿಕಾರಿಗಳೂ ಧನವಂತರೂ ವಶೀಲಿಯುಳ್ಳ ಇತರರೂ ಈ ನೀರನ್ನು ಶೇಖರಿಸಿಟ್ಟುಕೊಳ್ಳುತ್ತಾರೆ. ಸಾಮಾನ್ಯ ಜನ ಕೊಡ, ಬಕೆಟ್ ಹಿಡಿದು ನಲ್ಲಿಗಳ ಮುಂದೆ ಸರತಿಯ ಸಾಲು ನಿಲ್ಲುವ ದಯನೀಯ ನೋಟ ಎಲ್ಲೆಲ್ಲಿಯೂ ಕಾಣಿಸುತ್ತಿದೆ. ಇಡಿಯ ಬೆಂಗಳೂರೇ ಬಾಯಾರಿದೆ. ನೀರಿಗಾಗಿ ತಹತಹ ಪಡುತ್ತಿದೆ. ಈ ಪರಿಸ್ಥಿತಿ ಅನಾರೋಗ್ಯಕ್ಕೆ ಆಹ್ವಾನ ಕೊಡುತ್ತಿದೆ.

ಸದ್ಯಕ್ಕೆ ಬೆಂಗಳೂರು ಕಾವೇರಿ ನೀರು ಪೂರೈಕೆಯನ್ನೇ ಆಧರಿಸಿದೆ. ಕಾವೇರಿ ನೀರು ಪೂರೈಕೆ ಜಾಲ ಇಡಿಯ ನಗರವನ್ನು ವ್ಯಾಪಿಸಿಲ್ಲ. ಕೆಲವು ಪ್ರದೇಶಗಳಿಗೆ ಆ ನೀರನ್ನು ಕೊಂಡೊಯ್ಯಲು ಬೇರೆಯೇ ಕೊಳಾಯಿಗಳನ್ನು ಹಾಕಬೇಕು. ಅದಕ್ಕೆ ನಾಲ್ಕೈದು ಕೋಟಿ ರೂಪಾಯಿ ಖರ್ಚಾಗುತ್ತದೆ. ಸಾಕಷ್ಟು ಕಾಲಾವಕಾಶವೂ ಬೇಕು. ಇಂದು ನಾಳೆಗೆ ಆಗುವಂತಹದ್ದಲ್ಲ. ಅಲ್ಲಿಯ ತನಕ ಬೆಂಗಳೂರಿನ ಜನ ಬವಣೆ ಅನುಭವಿಸಲೇ ಬೇಕು.

ನಮ್ಮ ಯೋಜನೆಗಳೆಲ್ಲ ಹೀಗೆ ಆಗಿವೆ. ನಗರಗಳು ಹೊಟ್ಟೆ ಬಿರಿಯುವಂತೆ ಬೆಳೆಯಲು ಬಿಡಲಾಗಿದೆ. ಹಳ್ಳಿಗಳು ಸೊರಗಿ ಹೋಗಿವೆ. ನಗರಗಳಲ್ಲಿ ಎಲ್ಲವೂ ಇವೆ. ಮತ್ತಷ್ಟು ಸೌಲಭ್ಯ ಕೊಡುವ ನೀತಿ ಸರಕಾರದ್ದೂ ಆಗಿದೆ. ಆದ್ದರಿಂದಲೇ ಬಡತನದಿಂದ ಬರಡಾದ ಹಳ್ಳಿಯ ಮಂದಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ನಗರಗಳಲ್ಲಿ ಹೊಸ ಉದ್ಯಮಗಳಿಗೆ ಅವಕಾಶವಿಲ್ಲವೆಂದು ಹಿಂದೆಯೇ ನೀತಿ ಅಂಗೀಕರಿಸಲಾಗಿತ್ತಾದರೂ ಅದನ್ನು ಜಾರಿಗೊಳಿಸುವ ಕಾಳಜಿ ಯಾರಿಗೂ ಇಲ್ಲ. ಬೆಂಗಳೂರಿನಲ್ಲಿ ಹೊಸ ಕೈಗಾರಿಕೆ ಸಲ್ಲದೆಂದು ಈಗಾಗಲೇ ಘೋಷಿಸಲಾಗಿದ್ದರೂ ಹೊಸ-ಹೊಸ ಉದ್ಯಮಗಳು ಅಲ್ಲಿ ತಲೆ ಎತ್ತುತ್ತಿವೆ. ಟಾಟಾ ಬಿರ್ಲಾರ, ಬೇರೆ ದೊಡ್ಡ ಉದ್ದಿಮೆಗಳವರ ಒತ್ತಡ ಸರಕಾರದ ಮೇಲೆ ಇದ್ದದ್ದೇ. ಪರಿಣಾಮವಾಗಿ ಯಾವ ಉದ್ಯಮವೂ ಹಳ್ಳಿಗೆ ಬರುವುದಿಲ್ಲ.

ಇದರಿಂದ ನಗರಗಳ ನಾಗರಿಕ ಸೌಲಭ್ಯಗಳ ಮೇಲೆ ಒತ್ತಡ ಬೀಳುತ್ತದೆ. ಕುಡಿಯುವ ನೀರು, ಸಾರಿಗೆ, ಇಂಧನ ಎಲ್ಲವೂ ಕೊರತೆಯ ಸಾಲಿಗೆ ಸೇರುತ್ತವೆ. ಬೆಂಗಳೂರಿನಲ್ಲಿಯೂ ಇತರ ನಗರಗಳಲ್ಲಿಯೂ ಇದೇ ಪರಿಸ್ಥಿತಿ ಇವೆ.

ಬೆಂಗಳೂರು ಬಲು ಎತ್ತರ ಪ್ರದೇಶದಲ್ಲಿರುವ ನಗರ. ಸ್ಥಳೀಯವಾಗಿ ದೊರೆವ ನೀರಿನ ಪೂರೈಕೆ ಏನೇನೂ ಸಾಲದು. ಹೊರಗಿನಿಂದ ತರಬೇಕು. ಹಾಗೆ ತರಬೇಕಿದ್ದರೆ ನೀರನ್ನು ಪಂಪ್ ಮಾಡಿ ತರಬೇಕು. ಈಗ ಕಾವೇರಿ ಯೋಜನೆಯಲ್ಲಿ ದಿನಕ್ಕೆ ಐದು ಕೋಟಿ ಗ್ಯಾಲನ್ ನೀರನ್ನು 1500 ಅಡಿಗಳಷ್ಟು ಕೆಳಮಟ್ಟದಿಂದ ಪಂಪ್ ಮಾಡಲಾಗುತ್ತಿದೆ. ಹಲವಾರು ಹಂತಗಳಲ್ಲಿ ಹಲವಾರು ಪಂಪ್‌ಗಳು ಈ ಕೆಲಸ ನಿರ್ವಹಿಸುತ್ತವೆ. ಯಾವುದೋ ಒಂದು ಹಂತದಲ್ಲಿ ಪಂಪ್ ಕೆಟ್ಟು ಹೋದರೂ- ಸಾಕು ಬೆಂಗಳೂರಿಗೆ ನೀರು ಬರುವುದು ನಿಲ್ಲುತ್ತದೆ. ಲಕ್ಷಾಂತರ ಜನ ದಿನಗಟ್ಟಲೆ ನೀರಿಲ್ಲದೆ ಪರದಾಡಬೇಕಾದೀತು.

ಬೆಂಗಳೂರಿನ ಪ್ರಾದೇಶಿಕ ಸ್ಥಿತಿಗತಿಯ ಗರ್ಭದಲ್ಲೇ ಈ ಅನಾನುಕೂಲತೆ ಇದೆ. ಸ್ಥಳೀಯವಾಗಿ ದೊರೆವ ಎಲ್ಲ ನೀರಿನ ಮೂಲಗಳನ್ನೂ ಶೋಧಿಸಿ ಬಳಕೆಗೆ ಹೂಡುವ ಕೆಲಸ ಕಾವೇರಿ ಯೋಜನೆಯ ಜತೆಗೇ ಆಗಬೇಕು. ಬೆಂಗಳೂರಲ್ಲಿ ಭೂಗತ ಜಲವಿದೆ. ಕೊಳವೆ ಬಾವಿ ತೋಡಿ ಅದನ್ನು ಮೇಲೆತ್ತುವ ಕೆಲಸ ಆಗಬೇಕು.

ಜತೆಗೆ ನಗರದ ಬೆಳವಣಿಗೆಗೂ ಕಡಿವಾಣ ಹಾಕಬೇಕು. ಹೊಸ ಕೈಗಾರಿಕೆಗಳನ್ನು ವಿಕೇಂದ್ರೀಕರಿಸಬೇಕು. ಸಣ್ಣ ಪುಟ್ಟ ಪೇಟೆ- ಪಟ್ಟಣಗಳಿಗೂ ಬೆಳೆಯುತ್ತಿರುವ ಇತರ ನಗರಗಳಿಗೂ ಹಂಚಿಕೊಡಬೇಕು. ಇದರಿಂದ ನಗರಗಳ ಸಂಕಟ ಕಡಿಮೆಯಾಗುತ್ತದೆ. ಪರಿಸರ ಮಾಲಿನ್ಯಕ್ಕೆ ಕಡಿವಾಣ ಬೀಳುತ್ತದೆ. ಅಭಿವೃದ್ಧಿಯಲ್ಲಿ ಕೊಂಚವಾದರೂ ಸಮತೋಲನ ಉಂಟಾಗುತ್ತದೆ.

ಬೆಂಗಳೂರಿನ ಬವಣೆ ನೋಡಿಯಾದರೂ ಇಂತಹ ವಿವೇಕ ನಮ್ಮ ಯೋಜನಕಾರರಿಗೂ ಸರಕಾರಿ ವರಿಷ್ಠರಿಗೂ ಬರಬೇಕು. ನಗರಗಳ ಹೊಟ್ಟೆ ಬೆಳೆಸಿ ಜನಸಮುದಾಯಕ್ಕೆ ಸಂಕಟ ತರುವ ಬದಲು ಹಳ್ಳಿಗಳಿಗೆ ತ್ರಾಣ ಕೊಡುವ ಕೆಲಸ ಮಾಡಿ ಅಭಿವೃದ್ಧಿಯ ಅಸಮತೋಲನ ನೀಗಬೇಕು.

ಮುಂಗಾರು
ಗುರುವಾರ, ಜನವರಿ 9, 1986

ಹಕ್ಕನ್ನು ಕೇಳಬೇಕು

ಕರ್ನಾಟಕದಲ್ಲಿ ಉಂಟಾಗಿರುವ ತೀವ್ರ ಬರಗಾಲ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಹಣಕಾಸಿನ ಕೊರತೆ ಉಂಟಾಗಿದೆ. ಮುಂದೆ ಮಳೆ ಬೀಳುವ ತನಕ ಪ್ರತಿ ತಿಂಗಳೂ ಸುಮಾರು 30 ಕೋಟಿ ರೂಪಾಯಿ ಬೇಕೆಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಹೇಳುತ್ತಾರೆ. ಬರ ಪರಿಹಾರಕ್ಕಾಗಿ ದೊಡ್ಡ ಮೊತ್ತದ ಹಣವನ್ನು ಕೊಡುವುದು ಅಶಕ್ಯವೆಂದು ಪ್ರಧಾನಮಂತ್ರಿ ರಾಜೀವ ಗಾಂಧಿಯವರು ಹೇಳುತ್ತಾರೆ. ಸ್ವಂತ ಸಂಪನ್ಮೂಲಗಳಿಂದಲೇ ಹಣ ರೂಢಿಸಿಕೊಂಡು ಪರಿಹಾರ ಕಾರ್ಯ ಕೈಗೊಳ್ಳುವುದಕ್ಕೆ ರಾಜ್ಯ ಸರಕಾರ ಅಶಕ್ತವಿದೆ.

ಈ ತನಕ ಕಂಡು ಕೇಳಿ ಅರಿಯದ ಭೀಕರ ಬರ ಇಂದು ಕರ್ನಾಟಕದಲ್ಲಿದೆ. ಜಾನುವಾರು ಮೇವಿಲ್ಲದೆ ಸೊರಗಿ ಸಾಯುತ್ತಿವೆ. ಅವುಗಳನ್ನು ಉಳಿಸಿಕೊಳ್ಳುವ ಕೆಲಸ ಆಗಬೇಕಾಗಿದೆ. ಜಾನುವಾರು ಸತ್ತು ಹೋದರೆ ಅಥವ ಅಗ್ಗಕ್ಕೆ ಮಾರಿ ಹೋದರೆ ಆಮೇಲೆ ಮಳೆ ಬಂದಾಗಲಾದರೂ ಕೃಷಿ ಕಾರ್ಯ ನಡೆಸಲು ಅಡಚಣೆಯಾಗುತ್ತದೆ. ಅವುಗಳಿಗೆ ಎಲ್ಲಿಂದಾದರೂ ತಂದು ಮೇವು ಪೂರೈಸಬೇಕು. ಸಾಮೂಹಿಕ ಗೋಶಾಲೆಗಳನ್ನು ಉಚಿತ ನೆಲೆಯಲ್ಲಿ ಸ್ಥಾಪಿಸಬೇಕು.

ಕೋಟ್ಯಂತರ ಜನರು ಸಂಪಾದನೆಯ ದಾರಿಯಿಲ್ಲದೆ ಬಸವಳಿದಿದ್ದಾರೆ. ಊರಲ್ಲಿ ಮಾಡಲು ಕೂಲಿ ಕೆಲಸವಿಲ್ಲದೆ ನಗರಗಳಿಗೂ ಪಟ್ಟಣಗಳಿಗೂ ಗುಳೇ ಹೋಗುತ್ತಿದ್ದಾರೆ. ನಗರಗಳಲ್ಲಿ ಅವರ ಶೋಷಣೆ ನಡೆದಿದೆ. ಬರ ಪೀಡಿತ ಪ್ರದೇಶಗಳಲ್ಲಿ ವ್ಯಾಪಾರಿ ವರ್ಗ ಜನ ಸಾಮಾನ್ಯರನ್ನು ಪೀಡಿಸತೊಡಗಿದೆ.

ನಮ್ಮ ಆರ್ಥಿಕ ಆಡಳಿತ ವ್ಯವಸ್ಥೆಯಲ್ಲಿ ರಾಜ್ಯಗಳ ಯೋಜನೆಗಳನ್ನು ಕೇಂದ್ರ ಸರಕಾರ ಅಂತಿಮವಾಗಿ ನಿರ್ಧರಿಸುತ್ತದೆ. ಹಣವನ್ನೂ ಅದುವೇ ಹಂಚಿಕೊಡುತ್ತದೆ. ರಾಜ್ಯದಲ್ಲಿ ಸಂಗ್ರಹಿಸಿ ದೆಹಲಿಗೆ ಹೊತ್ತುಕೊಂಡೊಯ್ದು ಆಮೇಲೆ ಐಎಎಸ್‌ಅಧಿಕಾರಿಗಳ ಗಡಣ ಆರಾಮವಾಗಿ ಕೂತು ಚರ್ಚೆನಡೆಸಿ ತಮಗೆ ತೋಚಿದಂತೆ ಪ್ರಸಾದ ಹಂಚಿಕೊಡುವ ವ್ಯವಸ್ಥೆ ಇದು. ಯೋಜನೆಯ ವಿಚಾರ ಹೀಗಾದರೆ ನೆರೆ, ಬರ ಹಾಗೂ ಇನ್ನಿತರ ಯಾವುದೇ ಪ್ರಾಕೃತಿಕ ಗಂಡಾಂತರ ನಾಡಿಗೆ ಬಂದರೂ ಅದರ ಪರಿಹಾರಕ್ಕೆ ಮಾಡಬೇಕಾದ ಹಣಕಾಸಿನ ವ್ಯವಸ್ಥೆ ಏನೆಂದು ಯಾರಿಗೂ ನಿಖರವಾಗಿ ಗೊತ್ತಿಲ್ಲ. ಕೇಂದ್ರದಿಂದ ರಾಜ್ಯಗಳಿಗೆ ಈ ಬಾಬತ್ತಿನಲ್ಲಿ ಹಣ ಬರುವುದಿಲ್ಲ. ಅಂದರೆ ಈ ವೆಚ್ಚಕ್ಕೆ ಹಣವನ್ನು ರಾಜ್ಯಗಳೇ ಹೊಂದಿಸಿಕೊಳ್ಳಬೇಕು ಎಂದಾಯಿತು. ಈಗ ಕರ್ನಾಟಕದಲ್ಲಿ ಬಂದಿರುವಂತಹ ಮಹಾ ಗಂಡಾಂತರ ಬಂದಾಗ ರಾಜ್ಯ ಸರಕಾರದಿಂದಲೇ- ಈಗಿನ ವ್ಯವಸ್ಥೆಯಲ್ಲಿ- ಅದು ಸಾಧ್ಯವಾದೀತೇ? ಕೇಂದ್ರವಾಗಲಿ ರಾಜ್ಯಗಳಾಗಲಿ ಜತೆಯಾಗಿ ಕೂತು ಈ ಬಗ್ಗೆ ಹಣಕಾಸನ್ನು ಹೇಗೆ ಹೊಂದಿಸಿಕೊಳ್ಳಬೇಕು ಎಂದು ಈ ತನಕ ಚರ್ಚೆ ಮಾಡಿದ್ದಿಲ್ಲ. ರಾಜ್ಯಗಳಿಗೆ ಗಂಡಾಂತರ ಬಂದಾಗ ತುರ್ತಾಗಿ ಒಂದಿಷ್ಟು ಹಣವನ್ನು ಕೇಂದ್ರದೊಡನೆ ಗೋಗರೆದು ಪಡೆಯುವುದು. ಕೇಂದ್ರದ ಅಧಿಕಾರಿಗಳ ತಂಡಗಳು ಬಂದು ಪರಿಶೀಲನೆ ನಡೆಸಿ ಸರಕಾರಕ್ಕೆ ಶಿಫಾರಸು ಮಾಡಿ ಆಮೇಲೆ ಮಹಾ ದಾನವೆಂಬಂತೆ ಒಂದಿಷ್ಟು ಹಣ ಬಿಡುಗಡೆ ಮಾಡುವುದು—ಈ ತಾತ್ಕಾಲಿಕ ವ್ಯವಸ್ಥೆಯೇ ಈ ತನಕ ನಡೆದುಕೊಂಡು ಬಂದಿದೆ. ಕೊಟ್ಟ ಹಣ ಯೋಜನೆಗೆ ನಿಗದಿ ಮಾಡಿದ್ದಲ್ಲದೆ ಬೇರಾವುದೂ ಅಲ್ಲ. ಅದನ್ನು ಮುಂದೊಂದು ದಿನ ಯೋಜನೆಗೇ ಹೊಂದಿಸಿಕೊಳ್ಳಬೇಕಾಗುತ್ತದೆ. ಯೋಜನೆಯ ಯಾವುದೋ ಕಾಮಗಾರಿಯಲ್ಲಿ ಮುರಿದುಕೊಳ್ಳಲಾಗುತ್ತದೆ. ಆತನಕ ಅದನ್ನು ಓವರ್ ಡ್ರಾಫ್ಟೆಂದು ಪರಿಗಣಿಸಲಾಗುತ್ತದೆ.

ಪ್ರಾಕೃತಿಕ ಗಂಡಾಂತರ ಬಂದಾಗ ಪರಿಹಾರ ನಡೆಸಲು ಕೇಂದ್ರವು ಅರ್ಧಾಂಶ ಸಹಾಯಧನ ಕೊಡಬೇಕು ಎಂದು ಎಂಟನೆ ಹಣಕಾಸು ಆಯೋಗ ಶಿಫಾರಸು ಮಾಡಿದೆ. ಅದನ್ನು ಕೇಂದ್ರ ತಾತ್ವಿಕವಾಗಿ ಅಂಗೀಕರಿಸಿದೆಯಾದರೂ ಇಡಿಯ ವರದಿಯ ಜಾರಿಯನ್ನು ಮುಂದಕ್ಕೆ ಹಾಕುವ ಮಹಾ ಬುದ್ಧಿವಂತಿಕೆ ತೋರಿಸಿದೆ.

ಆಡಳಿತ ವಿಕೇಂದ್ರೀಕರಣವಾದರೆ ಈ ಯಾವ ಸಮಸ್ಯೆಗಳೂ ಉಂಟಾಗುವುದಿಲ್ಲ. ತನ್ನ ಕೈಯೊಳಗೆ ಸೇರಿ ಹೋಗಿರುವ ಅಧಿಕಾರಗಳನ್ನು ಬಿಟ್ಟುಕೊಡಲು ಕೇಂದ್ರ ಸರಕಾರಕ್ಕೆ ಮನಸ್ಸು, ಸಾಮರ್ಥ್ಯ ಇಲ್ಲವಾಗಿರುವುದರಿಂದಲೇ ಈ ಎಲ್ಲಾ ಸಮಸ್ಯೆಗಳು ಹುಟ್ಟಿಕೊಂಡಿವೆ.

ಕೇಂದ್ರ ಸರಕಾರಕ್ಕೆ ಆಡಳಿತೆಯಲ್ಲಿ ಸೀಮಿತವಾದ ವ್ಯಾಪ್ತಿ ಇರಬೇಕು. ಎಲ್ಲವನ್ನೂ ದೆಹಲಿಯಲ್ಲಿದ್ದು ನಿಯಂತ್ರಿಸುತ್ತೇವೆಂದರೆ ಈ ವಿಶಾಲ ದೇಶದಲ್ಲಿ ಆಗದ ಮಾತು. ಅವರವರ ಸಮಸ್ಯೆಗಳನ್ನು ನಿಭಾಯಿಸಿಕೊಳ್ಳಲು ಆಯಾ ರಾಜ್ಯಗಳಿಗೆ ಸೊತ್ತು-ಸವಲತ್ತು ಅಧಿಕಾರಗಳನ್ನು ವಹಿಸಿಕೊಡಬೇಕು. ಇದರಿಂದ ಎಲ್ಲರಿಗೂ ಕ್ಷೇಮ. ದೆಹಲಿಯವರಿಗೂ ವೃಥಾ ತಲೆನೋವು ಇರುವುದಿಲ್ಲ. ದೆಹಲಿಯನ್ನು ರಾಜ್ಯಗಳು ದೂರುವ ಪ್ರಮೇಯವೂ ಇರುವುದಿಲ್ಲ.

ಅದಕ್ಕಾಗಿ ರಕ್ಷಣೆ-ವಿದೇಶ ವ್ಯವಹಾರ—ನಾಣ್ಯ ಮುದ್ರಣ ಮತ್ತು ಸಂಪರ್ಕ—ಇಷ್ಟನ್ನು ಮಾತ್ರ ಕೇಂದ್ರ ಇರಿಸಿಕೊಂಡು ಹಣಕಾಸಿನ ಸಹಿತ ಉಳಿದೆಲ್ಲ ಆಡಳಿತವನ್ನು ರಾಜ್ಯ ಸರಕಾರಗಳಿಗೆ ಬಿಟ್ಟುಕೊಡಬೇಕು. ಅಂಥ ಸ್ವಾಯತ್ತೆಯಿಂದ ಮಾತ್ರವೇ ರಾಜ್ಯಗಳಿಗೆ ಸೂಕ್ತವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ದಿನ ಬಂದ ಬರದಂತಹಗಂಡಾಂತರ ಕಾಣಿಸಿಕೊಂಡಾಗ ಯಾರಿಗೂ ಗೋಗರೆಯಬೇಕಾದ ಅಗತ್ಯವಿಲ್ಲದೆ ಹಣಕಾಸಿನ ಸೂಕ್ತ ಏರ್ಪಾಡು ಮಾಡಿಕೊಳ್ಳುವುದು ಸಾಧ್ಯ. ಎಲ್ಲ ರಾಜ್ಯಗಳೂ ಭಿಕ್ಷೆಗಾಗಿ ಅಂಗಲಾಚುವ ಬದಲು ಈ ಹಕ್ಕನ್ನು ಕೇಳಬೇಕು.

ಮುಂಗಾರು
ಶುಕ್ರವಾರ, ಜನವರಿ 10, 1986

ಅಮೆರಿಕದ ಪಾಳೇಗಾರಿಕೆ

ಅಮೆರಿಕವು ಅರಬ್ ದೇಶ ಲಿಬಿಯದ ಮೇಲೆ ಆರ್ಥಿಕ ದಿಗ್ಬಂಧ ಹೇರಿದೆ. ಲಿಬಿಯದಲ್ಲಿನ ತನ್ನ ಎಲ್ಲಾ ನಾಗರಿಕರೂ ಮರಳಿ ಬರುವಂತೆ ಆಜ್ಞಾಪಿಸಿದೆ. ಲಿಬಿಯದ ಜತೆ ಯಾವ ವ್ಯಾಪಾರ ವಹಿವಾಟೂ ಇಲ್ಲವೆಂದೂ ಸಾರಿದೆ. ಅಮೆರಿಕದ ಪ್ರಜೆಗಳೂ ಕೂಡ ಅಂತಹ ಯಾವುದೇ ಸಂಬಂಧವನ್ನು ಆ ದೇಶದ ಸರಕಾರದ ಜತೆಗಾಗಲಿ ನಾಗರಿಕರ ಜತೆಗಾಗಲಿ ಹೊಂದಿರ ಕೂಡದೆಂದು ತಾಕೀತು ಮಾಡಿದೆ. ಅಮೆರಿಕದಲ್ಲಿರುವ ಲಿಬಿಯದ ಸೊತ್ತುಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡಿದೆ.

ಅಷ್ಟೇ ಅಲ್ಲದೆ ಲಿಬಿಯ ನಾಯಕ ಮುಅಮ್ಮರ್ ಗಡ್ಡಾಫಿಯವರನ್ನು ಬರ್ಬರನೆಂದೂ ಅವಿವೇಕಿಯೆಂದೂ ಅಮೆರಿಕ ಅಧ್ಯಕ್ಷ ರೇಗನ್ ಕರೆದಿರುವುದಲ್ಲದೆ ಅವರನ್ನು ಅಂತರರಾಷ್ಟ್ರೀಯ ಸಮುದಾಯ ಅಸ್ಪೃಶ್ಯನಂತೆ ಕಾಣಬೇಕು ಎಂದು ಕರೆ ನೀಡಿದ್ದಾರೆ. ಅಮೆರಿಕ ಸಾರಿರುವ ಈ ಆರ್ಥಿಕ ದಿಗ್ಬಂಧನದಲ್ಲಿ ಅಮೆರಿಕದ ಎಲ್ಲಾ ಮಿತ್ರ ರಾಷ್ಟ್ರಗಳೂ ಭಾಗವಹಿಸಬೇಕು ಎಂದು ರೇಗನ್ ಕರೆ ಕೊಟ್ಟಿದ್ದಾರೆ.

ಅಮೆರಿಕವು ಲಿಬಿಯದ ಮೇಲೆ ಅಗತ್ಯವೆನಿಸಿದರೆ ಸೇನಾ ಕಾರ್ಯಾಚರಣೆಗೂ ತಯಾರಿರುವಂತೆ ಕಾಣಿಸುತ್ತಿದೆ. ಈಗಾಗಲೇ ವಿಮಾನ ವಾಹಕ ನೌಕೆಯೊಂದನ್ನು ಅದು ಟ್ರಿಪೋಲಿಯತ್ತ ಕಳಿಸಿದೆ.

ಈ ಎಲ್ಲಾ ರಾದ್ಧಾಂತಕ್ಕೂ ಮೂಲ ಪ್ಯಾಲೆಸ್ತೀನಿಯರ ಸಮಸ್ಯೆ. ಅಮೆರಿಕವು ಇಸ್ರೇಲಿಗೆ ಕೊಡುತ್ತಿರುವ ನೈತಿಕ, ಸೈನಿಕ ಹಾಗೂ ಸಾಮಾನು ಸರಂಜಾಮು ರೂಪದ ಕುಮ್ಮಕ್ಕು. ಪ್ಯಾಲೆಸ್ತೀನ್ ಗೆರಿಲ್ಲಾಗಳಿಗೆ ಹಾಗೂ ಭಯೋತ್ಪಾದಕರಿಗೆ ಲಿಬಿಯದಲ್ಲಿ ತರಬೇತಿ ಹಾಗೂ ಸಕಲ ರೂಪದ ಬೆಂಬಲ ನೀಡಲಾಗುತ್ತಿದೆ ಎಂದು ಅಮೆರಿಕ ಆಪಾದಿಸುತ್ತಿದೆ. ಇತ್ತೀಚಿತಾನೆ ಹಲವಾರು ವಿಮಾನ ನಿಲ್ದಾಣಗಳಲ್ಲಿ ಮುಖ್ಯವಾಗಿ ಅಮೆರಿಕದ ಹಾಗೂ ಇಸ್ರೇಲಿನ ವಿಮಾನಗಳ ಮೇಲೆ ಹಾಗೂ ನಾಗರಿಕರ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯ ತಂತ್ರವನ್ನು ಅಬುನೀಡರ್ ಎಂಬಾತ ರೂಪಿಸಿದನೆಂದೂ ಆತ ಲಿಬಿಯದಲ್ಲಿ ಆಶ್ರಯ ಪಡೆದಿರುವನೆಂದೂ ಅಮೆರಿಕ ಹೇಳಿದೆ.

ಈ ಭಯೋತ್ಪಾದನೆಯ ಮೂಲವನ್ನು ಹುಡುಕುತ್ತಾ ಹೊರಟರೆ ಅದು ಪ್ಯಾಲೆಸ್ತೀನಿಯರ ಬದುಕಿನ ಬೇರು ಕಿತ್ತ, ಅಸಹನೀಯವಾದ ಸಂಕಟವನ್ನು ತಲುಪುತ್ತದೆ. ಯಹೂದ್ಯರಿಗೆ ಇಸ್ರೇಲನ್ನು ಮರಳಿ ಕೊಡಿಸುವ ಜಗತ್ತಿನ ನಿರ್ಧಾರ ಲಕ್ಷಾಂತರ ಪ್ಯಾಲೆಸ್ತೀನಿಯರಿಗೆ ಸಂಕಟಉಂಟುಮಾಡಿತು. ಅವರನ್ನು ಇಸ್ರೇಲ್ ಅವರ ನೆಲದಿಂದ ಕಿತ್ತುಹಾಕಿತು. ಈ ಹತ ಭಾಗ್ಯರು ಇಂದು ತಾಯ್ನಾಡನ್ನು ಮರಳಿ ಪಡೆಯಲು ಹೋರಾಟ ನಡೆಸಿದ್ದಾರೆ. ಈ ಹೋರಾಟ ಹಲವು ರೂಪಗಳನ್ನು ಪಡೆದಿದೆ. ಅವುಗಳಲ್ಲಿ ಒಂದು ಅಂತರರಾಷ್ಟ್ರೀಯ ಭಯೋತ್ಪಾದಕತೆ ಸಹಜವಾಗಿಯೆ ಅರಬ್ ದೇಶಗಳಲ್ಲಿ ಈ ಹೋರಾಟದ ನೆಲೆ ಇದೆ. ಹೋರಾಟ ಅಮೆರಿಕ ಹಾಗೂ ಇಸ್ರೇಲಿನ ವಿರುದ್ಧ ನಡೆಸುತ್ತಿರುವುದೂ ಸಹಜವಾದ ಕಾರಣಗಳಿಗಾಗಿಯೇ.

ಅಮೆರಿಕದ ಸಕಲ ರೀತಿಯ ಕುಮ್ಮಕ್ಕು ಇಲ್ಲದಿರುತ್ತಿದ್ದರೆ ಇಸ್ರೇಲ್ ಈ ತನಕ ಮಾಡಿರುವ ಹಾಗೂ ಇನ್ನೂ ಮಾಡುತ್ತಿರುವ ಅನ್ಯಾಯಗಳು ನಡೆಯುತ್ತಿರಲಿಲ್ಲ. ಇಂದು ಭಯೋತ್ಪಾದಕತೆ ವಿರುದ್ಧವೂ ಲಿಬಿಯದ ವಿರುದ್ಧವೂ ಹರಿಹಾಯುತ್ತಿರುವ ಅಮೆರಿಕ ಈ ಸಮಸ್ಯೆಯ ಮೂಲವನ್ನು ನಿವಾರಣೆ ಮಾಡಲು ಕೊಂಚವಾದರೂ ಪ್ರಯತ್ನ ನಡೆಸಿದ್ದರೆ ಇಂದು ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಭಯೋತ್ಪಾದಕತೆಯೂ ಬೆಳೆಯುತ್ತಿರಲಿಲ್ಲ. ಅಮೆರಿಕ ಬಹುಕಾಲದಿಂದಲೂ ಸಮಸ್ಯೆಯ ಮೂಲವನ್ನು ಕಡೆಗಣಿಸಿ ಅದರ ಹೊರಗಿನ ಚಿಹ್ನೆಗಳಿಗೆ ಲೇಪ ಹಚ್ಚುವ ಕೆಲಸದಲ್ಲಿ ನಿರತವಾಗಿದೆ. ಇತಿಹಾಸದುದ್ದಕ್ಕೂ ಇದುವೇ ನಡೆದು ಬಂದಿದೆ. ತನ್ನನ್ನಾರು ಕೇಳುವವರಿಲ್ಲವೆಂಬ ಪ್ರಚಂಡ ಆರ್ಥಿಕ ಹಾಗೂ ಮಿಲಿಟರಿ ಬಲದಿಂದ ಬಂದಿರುವ ಉದ್ಧಟತನದಿಂದಲೇ ಅದು ವ್ಯವಹರಿಸುತ್ತಿದೆ. ಅದು ವಿಯೆಟ್ನಾಂನಲ್ಲಿ ನಡೆಸಿದ್ದೂ ಅದೇ. ಆಫ್ರಿಕದ ಹಲವು ರಾಜ್ಯಗಳಲ್ಲಿ ಮಾಡಿದ್ದು ಕೂಡ ಅದೇ. ಲ್ಯಾಟಿನ್ ಅಮೆರಿಕದಲ್ಲಿ ಅದರ ನೀತಿ ಅಂತರರಾಷ್ಟ್ರೀಯ ವಿಧ್ವಂಸಕ ಕೃತ್ಯವಲ್ಲದೆ ಬೇರೆಯಲ್ಲ. ಅಮೆರಿಕದ ಗೂಢಚರ ಸಂಸ್ಥೆ ಸಿ. ಐ. ಎ. ನಡೆಸುತ್ತಿರುವುದು ಪ್ಯಾಲೆಸ್ತೀನ್ ಭಯೋತ್ಪಾದಕರ ಚಟುವಟಿಕೆಗಿಂತ ಕಡಿಮೆ ಹೀನಾಯದಲ್ಲ.

ದಕ್ಷಿಣ ಆಫ್ರಿಕದಲ್ಲಿ ಅಲ್ಪ ಸಂಖ್ಯಾತವಾದ ಪ್ರಭುತ್ವವೊಂದು ಅಲ್ಲಿನ ಬಹು ಸಂಖ್ಯಾತರಾದ ಸ್ಥಳೀಯರ ಮೇಲೆ ಸವಾರಿಮಾಡುತ್ತಿರುವುದು ಕೇವಲ ಅಮೆರಿಕದ ಬೆಂಬಲದಿಂದ. ಅಮೆರಿಕದ ಸಹಾಯ ಸಹಕಾರ ಇಲ್ಲವಾಗಿದ್ದರೆ ಅಲ್ಲಿ ನಡೆಯುತ್ತಿರುವ ಮಾನವೀಯತೆಯ ಮಾರಣಹೋಮ ಎಂದೋ ನಿಲ್ಲುತ್ತಿತ್ತು. ಮನುಕುಲಕ್ಕೆ ಕಳಂಕ ಪ್ರಾಯವಾದ, ಪ್ರಜೆಗಳನ್ನು ವಿವಿಧ ದರ್ಜೆಯವರನ್ನಾಗಿ ವಿಭಾಗಿಸಿ ಜಾನುವಾರುಗಳನ್ನು ಕೂಡಿಹಾಕಿದಂತೆ ಪ್ರತ್ಯೇಕಿಸಿಡುವ ಹೀನಾಯ ವ್ಯವಸ್ಥೆಯನ್ನು ಅಮೆರಿಕದ ಸರಕಾರಗಳು ಎತ್ತಿನಿಲ್ಲಿಸುತ್ತಾ ಬಂದಿವೆ. ಪ್ಯಾಲೆಸ್ತೀನಿಯರ ಭಯೋತ್ಪಾದಕತೆಗಿಂತ, ಅವರಿಗೆ ಲಿಬಿಯದ ಗಡ್ಡಾಫಿ ಕೊಟ್ಟಿರುವ ಸಹಾಯಕ್ಕಿಂತ ಹೇಯವಾದ ಕೃತ್ಯ ದಕ್ಷಿಣ ಆಫ್ರಿಕದಲ್ಲಿ ಅಮೆರಿಕ ಮಾಡುತ್ತಿದೆ.

ರೇಗನ್‌ರು ಇಂದು ಲಿಬಿಯದ ಕೆಲಸವನ್ನಳೆಯಲು ಉಪಯೋಗಿಸಿದ ಮಾನದಂಡವನ್ನೇ ಅಮೆರಿಕದ ಈ ಕೃತ್ಯಕ್ಕೂ ಅಳವಡಿಸಿದರೆ ಅಮೆರಿಕದ ಪ್ರಭುತ್ವವನ್ನು ಎಂದೋ ಈ ಜಗತ್ತಿನ ಮುಖದಿಂದಲೇ ಅಳಿಸಿ ಹಾಕಬೇಕಿತ್ತು. ಆದರೆ ಜಾಗತಿಕ ಸಮುದಾಯಕ್ಕೆ ಅದು ಸಾಧ್ಯವಾಗುತ್ತಿಲ್ಲ ಅಮೆರಿಕ ಬಲಾಢ್ಯ ದೇಶವಾಗಿರುವುದೇ ಇದಕ್ಕೆ ಕಾರಣ. ಶಕ್ತಿಯಿಂದಲೇ ಅಮೆರಿಕ ಇಂದು ಹಲವು ಅಂತರರಾಷ್ಟ್ರೀಯ ಅನ್ಯಾಯಗಳನ್ನು ಉಳಿಸಿ ಬೆಳೆಸಿದೆ.

ಈ ಪಾಳೇಗಾರಿಕೆ ನೀತಿ ವಿರುದ್ಧ ಜಾಗತಿಕ ಅಭಿಪ್ರಾಯ ರೂಪುಗೊಳ್ಳಬೇಕು. ಕನಿಷ್ಠ ಈ ಪ್ರಪಂಚದ ವಿಚಾರವಂತರು ಅಷ್ಟನ್ನಾದರೂ ಮಾಡಬಲ್ಲರು.

ಮುಂಗಾರು

ಶನಿವಾರ, ಜನವರಿ 11, 1986

ಮನಸ್ಸೂ ಇಲ್ಲ—ಮಾರ್ಗವೂ ಇಲ್ಲ

ರಾಜ್ಯದಲ್ಲಿ ಇಂದು ತಾಂಡವ ನಡೆಸಿರುವ ಭೀಷಣ ಬರಗಾಲವನ್ನು ಎದುರಿಸಲು ರಾಜ್ಯ ಸರಕಾರ ಸೂಕ್ತ ಪೂರ್ವ ಸಿದ್ಧತೆ ಮಾಡಿಕೊಂಡಿಲ್ಲವೆಂದು ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ಅವರು ಹೇಳಿದ್ದಾರೆ. ಇಂತಹ ಭೀಕರ ಪರಿಸ್ಥಿತಿ ಉಂಟಾಗಿರುವಾಗಲೂ ರಾಜ್ಯ ಸರಕಾರ ಮೇಳಗಳಲ್ಲಿ, ಗೋಷ್ಠಿಗಳಲ್ಲಿ, ಜಂಬೂರಿಗಳಲ್ಲಿ ಕಾಲವನ್ನೂ ಹಣವನ್ನೂ ವ್ಯಯ ಮಾಡುತ್ತ ಕುಳಿತಿದೆ ಎಂದು ಅವರು ಟೀಕಿಸಿದ್ದಾರೆ. ಐದಾರು ಮಂತ್ರಿಗಳು ಒಮ್ಮೆಲೇ ಜಿಲ್ಲೆಗಳಿಗೆ ಭೇಟಿ ಕೊಟ್ಟು ಖಜಾನೆ ಹಣ ದುಂದುವೆಚ್ಚ ಮಾಡುತ್ತಿದ್ದಾರೆಂದು ಗುಂಡೂರಾಯರು ಆರೋಪಿಸಿದ್ದಾರೆ. ಅಧಿಕಾರಿಗಳ ವರ್ಗಾವರ್ಗಿಯೂ ಯಾವ ನಿರ್ಬಂಧವೂ ಇಲ್ಲದೆ ನಡೆಯುತ್ತಿರುವುದನ್ನು ಅವರು ಉಲ್ಲೇಖಿಸಿದ್ದಾರೆ.

ಸಭೆ–ಸಮಾರಂಭಗಳಲ್ಲಿ ಮೆರೆದು ಖುಷಿ ಪಡುವ ಮುಖ್ಯಮಂತ್ರಿಯೆಂಬ ಹೆಸರಿನ ಗುಂಡೂರಾಯರೇ ಈ ಮಾತು ಹೇಳಿದ್ದು ಗಮನಾರ್ಹ. ಉತ್ಸವಗಳಲ್ಲಿ ಓಲಾಡುವುದರಿಂದ ಕರ್ತವ್ಯ ನಿರ್ವಹಣೆ ಮೇಲೆ ಆಗುವ ಪ್ರತಿಕೂಲ ಪರಿಣಾಮಗಳ ಅರಿವು ತಡವಾಗಿಯಾದರೂ ಅವರಿಗೆ ಬಂದಿರಬಹುದು. ಆದ್ದರಿಂದಲೇ ಅವರು ಈಗಿನ ಸರಕಾರಕ್ಕೆ ಎಚ್ಚರಿಕೆ ಹೇಳಿದ್ದಾರೆ. ಅದನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಬರ ಇಂದು ನಿನ್ನೆಯದಲ್ಲ. ಕಳೆದ ನಾಲ್ಕು ವರ್ಷಗಳಿಂದ ಉಂಟು ಎಂದು ಈ ರಾಜ್ಯದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರೇ ಹೇಳುತ್ತಾರೆ ಮೊದಲ ವರ್ಷಗಳಲ್ಲಿ ಅದರ ತೀವ್ರತೆ ಕಡಿಮೆಯಿದ್ದಿರಬಹುದು. ನಿರಂತರವಾಗಿ ನಾಲ್ಕು ವರ್ಷ ಮಳೆ ಸಂಚಕಾರ ಕೊಟ್ಟದ್ದರಿಂದ ಇಂದು ರಾಜ್ಯದ ಜನರ ಬದುಕು ಭೀಕರವಾಗಿದೆ. ಜನ ಉದ್ಯೋಗವಿಲ್ಲದೆ, ಸಂಪಾದನೆಯ ದಾರಿಯಿಲ್ಲದೆ ಅಂಡಲೆಯುತ್ತಿದ್ದಾರೆ. ಬಡವರು ಉಪವಾಸ-ವನವಾಸದ ಸ್ಥಿತಿಗೆ ಬಂದಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಸತ್ತ ಜಾನುವಾರಿನ ಮಾಂಸವನ್ನು ಹಸಿದ ಜನರು ಹಂಚಿಕೊಂಡು ತಿಂದ ದಾರುಣ ಸುದ್ದಿ ಬಂದಿದೆ.

ಬರ ಕರ್ನಾಟಕದಲ್ಲಿ ತೀರಾ ಸಾಮಾನ್ಯವಾದ ವಿಚಾರ. ವರ್ಷ ಬಿಟ್ಟು ವರ್ಷ ಮಳೆ ಕೈಕೊಡುವ ಪರಿಪಾಠವಂತೂ ಬಹುಕಾಲದಿಂದ ನಡೆದುಕೊಂಡು ಬಂದಿದೆ. ಮಳೆ ಒಂದು ವರ್ಷ ಕಣ್ಣುಮುಚ್ಚಾಲೆ ಆಡಿದೊಡನೆಯೇ ಸರಕಾರ ಎಚ್ಚರಾಗಬೇಕಿತ್ತು. ಅದು ಇನ್ನಷ್ಟು ತೀವ್ರವಾದರೆ ಮಾಡಬೇಕಾದ ಕೆಲಸವೇನು ಎಂಬ ಬಗ್ಗೆ ಚಿಂತನೆ- ಸಮಾಲೋಚನೆ ನಡೆಸಬೇಕಿತ್ತು. ಕಟ್ಟಲಾಗುತ್ತಿರುವ ನೀರಾವರಿ ಯೋಜನೆಗಳನ್ನು ಬೇಗ ಪೂರೈಸುವುದು. ನೀರು ಸರಬರಾಜಿಗೆ ಕಾಲುವೆ ಬೇಗ ತೋಡುವುದು. ಭೂಗರ್ಭ ಜಲ ಬಳಕೆಗೆ ಕೊಳವೆ ಬಾವಿ ಹಾಕುವುದೇ ಮೊದಲಾದ ಕಾರ್ಯಗಳನ್ನು ಶ್ರದ್ಧೆಯಿಂದ, ತುರ್ತಾಗಿ ಮಾಡಬೇಕಿತ್ತು. ಆದರೆ ಅಂತಹದೇನನ್ನೂ ಸರಕಾರ ಮಾಡಲಿಲ್ಲ. ಮುಂದಿನ ವರ್ಷ ಒಳ್ಳೆಯ ಮಳೆ ಬಿದ್ದು ಹೆಗಲ ಭಾರ ಹೋದೀತು ಎಂಬ ಆಸೆಯ ಬಿಸಿಲುಗುದುರೆಯೇರಿ ಈ ಸರಕಾರ ಸವಾರಿ ಮಾಡುತ್ತ ಬಂತು.

ಇಂದು ಸರಕಾರಕ್ಕೂ ಜನಕ್ಕೂ ಜತೆಯಾಗಿಯೇ ಸಂಕಟ ಬಂದಿದೆ. ಜನರೇನೋ ಪರಿಸ್ಥಿತಿ ಅರ್ಥ ಮಾಡಿಕೊಂಡು ಈ ಮಹಾ ಸಂಕಟದ ಪರಿಹಾರಕ್ಕೆ ಕೈಲಾದ ಸಹಾಯ- ಸಹಕಾರ ಕೊಡುತ್ತಿದ್ದಾರೆ. ಇಡಿಯ ಸಮುದಾಯಕ್ಕೇ ಬಂದಿರುವಂತಹ ಅನಾಹುತದಿಂದ ಪಾರಾಗಲೂ ನ್ಯಾಯ ಸಮ್ಮತವಾದ ಎಲ್ಲಾ ರೀತಿಯ ತ್ಯಾಗಗಳನ್ನೂ ಮಾಡಲು ಅವರು ಸಿದ್ಧರಿದ್ದಾರೆ.

ಇಂತಹ ತ್ಯಾಗಕ್ಕೆ ಚಾಲನೆ ನೀಡುವ ಕೆಲಸ ಮಾಡಬೇಕಾದ್ದು ರಾಜ್ಯದ ಆಡಳಿತೆ ನೋಡಿಕೊಳ್ಳುತ್ತಿರುವ ಸರಕಾರವಾಗಿದೆ. ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸುವ ನಾಯಕತ್ವವನ್ನು ಜನ ಆದರಿಂದ ನಿರೀಕ್ಷಿಸುತ್ತಾರೆ. ಇಂಥ ನಾಯಕತ್ವದ ಗುಣ ವಿಶೇಷಗಳು ತಮ್ಮಲ್ಲಿವೆಯೇ ಎಂದು ಈ ಸರಕಾರದ ವರಿಷ್ಠರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಬರ ಬೆಳೆಯುತ್ತ ಬಂದಿದ್ದರೂ ಅವರದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಪತ್ತಾರು ಕೋಟಿ ರೂಪಾಯಿ ಖರ್ಚು ಮಾಡಿ ವಿಶ್ವ ಕನ್ನಡ ಮೇಳ ನಡೆಸಿದರು. ಬೆಂಗಳೂರಲ್ಲಿ ಇಂದೂ ಸಭೆ ಸಮಾರಂಭಗಳು ಉತ್ಸವಗಳು ನಡೆದೇ ಇವೆ. ಜಂಬೂರಿಗಳು ನಡೆಯುತ್ತಿವೆ. ಮುಂದಿನ ವರ್ಷವೂ ಜಂಬೂರಿ ನಡೆಯುತ್ತದೆ ಎನ್ನುತ್ತಾರೆ ಒಬ್ಬ ಮಂತ್ರಿಗಳು.

ಆಡಳಿತೆಗೆ ಚುರುಕು ಮುಟ್ಟಿಸಿ ಬರ ಪರಿಹಾರವೇ ಮೊದಲ ಮತ್ತು ಕೊನೆಯ ಕರ್ತವ್ಯವಾಗಿರಬೇಕಾದ ಈ ಸಂದರ್ಭದಲ್ಲಿ ಸರಕಾರ ಅಧಿಕಾರಿಗಳ ವರ್ಗಾವರ್ಗಿ ಮಾಡುತ್ತ ಸಮಯವನ್ನೂ ಶಕ್ತಿಯನ್ನೂ ಹಣವನ್ನೂ ವ್ಯರ್ಥ ವ್ಯಯ ಮಾಡುತ್ತಿದೆ. ಜನಕ್ಕೆ ನಂಜಿಕೊಳ್ಳಲು ಉಪ್ಪು- ಗಂಜಿಯೂ ಇಲ್ಲದ ಈ ಕಾಲದಲ್ಲಿ ಸರಕಾರಿ ದಿವಾನಖಾನೆಯಲ್ಲಿ 'ಮಸಾಲೆ ದೋಸೆ'ಯ ಸಮಾರಾಧನೆ ಆಗುತ್ತಿದೆ.

ಬರ ಪರಿಹಾರಕ್ಕೆ ಹಣವಿಲ್ಲ ಎನ್ನುತ್ತಿದೆ ಸರಕಾರ. ಬರ ಎದುರಿಸಲು ಮಾನಸಿಕ ಸಿದ್ಧತೆಯೇ ಇಲ್ಲದಿರುವಾಗ ಹಣ ಎಲ್ಲಿಂದ ಬಂದೀತು. ಸೂಕ್ತ ಪೂರ್ವ ಸಿದ್ಧತೆ ಮಾಡಿಕೊಂಡಿದ್ದರೆ ಹಣಕ್ಕೆ ಬರ ಬರುತ್ತಿರಲಿಲ್ಲ. ಎಲ್ಲಿಂದಾದರೂ ಅದು ಬರುತ್ತಿತ್ತು. ಆಡಳಿತ ವೆಚ್ಚ ಕಡಿಮೆ ಮಾಡಿಯಾದರೂ ಅದನ್ನು ಹೊಂದಿಸಿಕೊಳ್ಳಬಹುದಿತ್ತು.

ಮನಸ್ಸೇ ಇಲ್ಲವೆಂದ ಮೇಲೆ ಮಾರ್ಗವೆಲ್ಲಿಂದ?

ಮುಂಗಾರು

ಆದಿತ್ಯವಾರ, ಜನವರಿ 12, 1986

ಅರಿವಿನ ದಾರಿ

ಭಾರತ ಹಾಗೂ ಪಾಕಿಸ್ತಾನಗಳು ಪರಸ್ಪರ ವ್ಯಾಪಾರ ರಂಗವನ್ನು ಖಾಸಗಿಯವರಿಗೆ ತೆರೆಯಲು ನಿರ್ಧರಿಸಿವೆ. ಕಳೆದ ಏಳು ವರ್ಷಗಳಿಂದ ಪರಸ್ಪರರೊಳಗೆ ಖಾಸಗಿ ರಂಗದಲ್ಲಿ ಮಾತ್ರವಲ್ಲದೆ ಸರಕಾರಿ ಕ್ಷೇತ್ರದಲ್ಲಿ ಕೂಡ ಪರಸ್ಪರ ವಾಣಿಜ್ಯ ವ್ಯವಹಾರ ಇರಲಿಲ್ಲ. ಜುಲ್ಫಿಕರ್ ಅಲಿ ಭುಟ್ಟೋ ಅಧಿಕಾರದಲ್ಲಿದ್ದ ಕೆಲವೇ ವರ್ಷಗಳ ಅವಧಿಯಲ್ಲಿ ಪರಸ್ಪರ ವ್ಯಾಪಾರ ಪ್ರಾರಂಭಗೊಂಡು ಬೆಳೆಯತೊಡಗಿದಾಗಲೇ ಜಿಯಾ ಅವರ ಮಿಲಿಟರಿ ಸರಕಾರ ಅಧಿಕಾರಕ್ಕೇರಿ ವ್ಯಾಪಾರವನ್ನು ಬಂದ್ ಮಾಡಿತ್ತು. ಜತೆಗೆ ಪರಸ್ಪರ ಸಂಪರ್ಕ ವ್ಯವಸ್ಥೆಯೂ ನಾಗರಿಕ ವಿಮಾನಯಾನವೂ ಕಡಿದುಹೋಗಿದ್ದವು. ಜತೆಗೆ ರಸ್ತೆ ಮತ್ತು ರೈಲು ಸಂಚಾರವೂ ನಿಂತು ಹೋಗಿತ್ತು.

ವಸ್ತುತಃ ನಮ್ಮೆರಡು ದೇಶಗಳೊಳಗೆ ಹಲವಾರು ದಶಕಗಳಿಂದ ಯಾವ ರೀತಿಯ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಸಂಬಂಧವೂ ಬೆಳೆದು ಬಂದಿಲ್ಲ. ಭಾರತದೊಡನೆ ಆರ್ಥಿಕ ಸಂಬಂಧ ಬೆಳೆಸಿದರೆ ದೇಶೀಯ ಉದ್ಯಮ ಹಾಗೂ ವಾಣಿಜ್ಯವು ಆ ಸ್ಪರ್ಧೆಯನ್ನು ತಡೆದುಕೊಳ್ಳಲಾರದು ಎಂಬ ಭಯವೇ ಪಾಕಿಸ್ತಾನದವರು ಈ ರಂಗದಲ್ಲಿ ಬಾಗಿಲನ್ನು ತೆರೆಯದೇ ಇರಲು ಮೂಲ ಕಾರಣ. ಹೀಗೆ ಭಯ ಉಂಟಾಗುವುದಕ್ಕೆ ರಾಜಕೀಯ ವಿರಸವೇ ಹಿನ್ನೆಲೆ.

ಪರಸ್ಪರ ದೇಶಗಳೊಳಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬಾಂಧವ್ಯವೂ ಇಲ್ಲವಾಗಿದೆ. ಆ ದೇಶದ ಹೆಸರಾಂತ ಸಾಹಿತಿಗಳಾರು, ನಟರು ಯಾರು, ಅಲ್ಲಿನ ರಂಗಭೂಮಿ ಯಾವ ಮಟ್ಟದಲ್ಲಿದೆ, ಅಲ್ಲಿನ ಶಿಕ್ಷಣ ಕ್ಷೇತ್ರ ಹೇಗೆ ಕೆಲಸ ಮಾಡುತ್ತಿದೆ, ಪಾಕಿಸ್ತಾನ ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಏನೆಲ್ಲ ಮುನ್ನಡೆ ಸಾಧಿಸಿದೆ ಎಂಬುದೂ ಭಾರತದ ಜನಸಾಮಾನ್ಯರಿಗೆ ಗೊತ್ತಿಲ್ಲ. ಪಾಕಿಸ್ತಾನದ ಚಲಚಿತ್ರಗಳು ಭಾರತಕ್ಕೆ ಬಂದದ್ದಿಲ್ಲ. ಇಲ್ಲಿನ ಚಲಚಿತ್ರಗಳನ್ನು ಅಲ್ಲಿ ಪ್ರದರ್ಶಿಸುವ ವ್ಯರ್ಥ ಪ್ರಯತ್ನವೊಂದು ಇತ್ತೀಚೆ ನಡೆದಾಗ ಅದರಿಂದ ಪಾಕಿಸ್ತಾನದ ಚಿತ್ರ ಉದ್ಯಮ ಕುಸಿದು ಹೋದೀತೆಂಬ ಪುಕಾರೆದ್ದು ಎಲ್ಲಾ ಭಾರತೀಯ ಚಿತ್ರಗಳನ್ನೂ ಹಿಂದೆ ಕಳಿಸಲಾಯಿತು.

ಇದೆಲ್ಲವೂ ಆಗಿರುವುದು ಪರಸ್ಪರ ಅಪನಂಬಿಕೆಯಿಂದ. ಅಪನಂಬಿಕೆ ಉಂಟಾಗಿರುವುದು ರಾಜಕೀಯ ವಿರಸದಿಂದ. ಈ ವಿಷವ್ಯೂಹವನ್ನು ಮುರಿಯುವ ಕೆಲಸ ಇದೀಗ ಪ್ರಾರಂಭವಾಗಿದೆ. ಅದು ಸ್ವಾಗತಾರ್ಹ.

ಭಾರತ-ಪಾಕಿಸ್ತಾನಗಳೆರಡೂ ಕೂಡ ಗಡಿ ತಕರಾರಿಗೆ ಸಂಬಂಧಪಟ್ಟಂತೆ ರಾಜಕೀಯ ವಿವಾದಕ್ಕೇ ಗಮನ ಹರಿಸಿ ತಮ್ಮೆಲ್ಲಾ ಕಾಲವನ್ನೂ ಶಕ್ತಿಯನ್ನೂ ಅದರಲ್ಲೇ ವ್ಯಯಮಾಡುತ್ತ ಬಂದಿವೆ. ದೇಶವನ್ನು ಪಾಲುಮಾಡುವ ಕಾಲದಲ್ಲಿ ಸಂಭವಿಸಿದ ದಾರುಣವಾದ ಮತೀಯ ವೈಷಮ್ಯವೂ ನರಮೇಧವೂ ಪರಸ್ಪರರ ಬಾಂಧವ್ಯಕ್ಕೆ ರುದ್ರ-ಗಂಭೀರ ಆಯಾಮವನ್ನು ನೀಡಿವೆ. ಗಡಿಗೆ ಸಂಬಂಧಪಟ್ಟಂತೆಯೂ ಜಾಗತಿಕ ವೇದಿಕೆಯಲ್ಲಿ ತಮ್ಮ ಸರಿಗಳ ತೀರ್ಮಾನಕ್ಕಾಗಿ ನಡೆದ ಹೋರಾಟದಲ್ಲಿಯೂ ಈ ರಾಜಕೀಯ ಬಾಂಧವ್ಯ ಅತ್ಯಂತ ಕೆಡುಕಿನ ತಳವನ್ನು ಕಂಡುಕೊಂಡಿತು. ಪರಸ್ಪರ ಅಪನಂಬಿಕೆಯ ಆಳವಾದ ಬೇರನ್ನು ಕೀಳುವುದೇ ಅಸಾಧ್ಯವೆಂಬ ಭ್ರಮೆ ಎರಡೂ ದೇಶಗಳದ್ದಾಯಿತು.

ಇದರಿಂದ ಎರಡೂ ಜನಾಂಗಗಳ ಸಂಕಟ-ಸಮಸ್ಯೆಗಳು ಹೆಚ್ಚಿದವೇ ವಿನಹ ಕಡಿಮೆಯಾಗಲಿಲ್ಲ. ಗಡಿಯಲ್ಲಿ ಅವಿಶ್ವಾಸದ ಉಕ್ಕಿನ ಗೋಡೆ ಎದ್ದು ಪರಸ್ಪರರನ್ನು ತಿಳಿದುಕೊಳ್ಳುವುದಕ್ಕೆ ಯಾವ ಕಿಂಡಿಯೂ ಇಲ್ಲವಾಯಿತು. ಸೋದರರಂತೆ ಬಾಳಬೇಕಿದ್ದ ಜನಾಂಗಗಳೆರಡರ ನಡುವೆ ಪರಮ ಶತ್ರುತ್ವ ಮಸಗಿತು. ಇದರಿಂದಾಗಿ ಮೂರು ಯುದ್ಧಗಳು ನಡೆದವು. ಅಪಾರ ಜೀವ ಹಾನಿಯಾಯಿತು, ಸೊತ್ತು ನಾಶವೂ ಆಯಿತು. ಅಭಿವೃದ್ಧಿಗೆ ಹೂಡಿ ಮಾನವ ಕಲ್ಯಾಣಕ್ಕೆ ಕಾರಣವಾಗಬೇಕಾಗಿದ್ದ ಸಂಪನ್ಮೂಲವೆಲ್ಲ ಶಸ್ತ್ರ ಸರಂಜಾಮುಗಳ ಅಗ್ನಿ ಕುಂಡದಲ್ಲಿ ಭಸ್ಮವಾದವು.

ಇಂದು ಕೂಡ ಅದೇ ಆಗುತ್ತಿದೆ. ಎರಡೂ ದೇಶಗಳು ಮೇಲಾಟಕ್ಕಾಗಿ ಶಸ್ತ್ರ ಸಂಗ್ರಹ ಮಾಡುತ್ತಿವೆ. ಪರಮಾಣು ಬತ್ತಳಿಕೆಯನ್ನು ಭರ್ತಿಮಾಡಿಕೊಳ್ಳಲು ಹವಣಿಸುತ್ತಿವೆ.

ಇದು ಕಲ್ಯಾಣದ ದಾರಿಯಲ್ಲ. ಆ ಅರಿವು ಎಂದೋ ನಮಗಾಗಬೇಕಿತ್ತು. ಪರಸ್ಪರರನ್ನು ಮಣಿಸಿ, ನಾಶಮಾಡಿ ಆಗಬೇಕಾದ ಮಹಾಕಾರ್ಯ ಇಲ್ಲಿ ಯಾರಿಗೂ ಇಲ್ಲ. ಅದನ್ನು ಎಷ್ಟು ಬೇಗ ಅರಿತರೆ ಈ ಉಪ ಖಂಡದ ಜನಕ್ಕೆ ಅಷ್ಟು ಕ್ಷೇಮವಾದೀತು.

ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಬಂಧದ ಬಾಗಿಲು ತೆರೆಯುವುದೇ ಅಪನಂಬಿಕೆ ಹೋಗಲಾಡಿಸುವುದಕ್ಕಿರುವ ದಾರಿ. ಪರಸ್ಪರ ವ್ಯಾಪಾರ ಬೆಳೆಸಲು ಉಪಖಂಡದಲ್ಲಿ ಸಾಕಷ್ಟು ದಾರಿ-ದಿಕ್ಕುಗಳಿವೆ. ಅವುಗಳೆಲ್ಲವನ್ನೂ ಶೋಧಿಸಬೇಕು. ಪರಸ್ಪರರ ಉದ್ಯಮ ಹಾಗೂ ವಾಣಿಜ್ಯದ ಹಿತಾಸಕ್ತಿಗೆ ಹಾನಿಯಾದೀತು ಎಂಬ ವಿಚಾರಗಳಲ್ಲಿ ಸೂಕ್ತ ಕಟ್ಟುಪಾಡುಗಳನ್ನು ವಿಧಿಸಿಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಅಂಥ ನಿರ್ಬಂಧಗಳನ್ನು ಹಾಕಿಕೊಂಡೂ ವ್ಯಾಪಾರ ಬೆಳೆಸಬಹುದು. ಎರಡೂ ದೇಶಗಳಲ್ಲಿ ಸಹೋದ್ಯಮ ಕೈಗೊಳ್ಳಲು ಅವಕಾಶವಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಸಹಕಾರ-ಸಹಭಾಗಿತ್ವಕ್ಕೆ ಅವಕಾಶವಿದೆ. ವ್ಯಾಪಾರ ವಹಿವಾಟು ಬೆಳೆದಾಗ ಸಾಮಾಜಿಕ, ಸಾಂಸ್ಕೃತಿಕ ಬಾಂಧವ್ಯ ಬೆಸೆಯುತ್ತದೆ.

ಇದು ನಡೆದಾಗ ರಾಜಕೀಯ ವಿಷಯಗಳು ಗೌಣವಾಗುತ್ತವೆ. ವಿರಸ ಶಮನಗೊಳ್ಳುತ್ತದೆ. ವಿವಾದಗಳು ಹುಟ್ಟಿಕೊಂಡರೂ ಅದನ್ನೆಲ್ಲ ಬಗೆಹರಿಸಿಕೊಳ್ಳುವ ದಾರಿ ತನ್ನಿಂದ ತಾನಾಗಿ ತೆರೆದುಕೊಳ್ಳುತ್ತವೆ.

ಭಾರತ-ಪಾಕಿಸ್ತಾನಗಳು ಪರಸ್ಪರರ ಕುತ್ತಿಗೆ ಹಿಡಿದೊತ್ತಿ ಹೋರಾಡಬೇಕಾದಂತಹ ಗಂಭೀರವಾದ ಮಹತ್ವದ ವಿಷಯ-ವಿವಾದಗಳೇನೂ ಇಲ್ಲ. ಹಾಗಿದ್ದರೂ ಇನ್ನೂ ವೈಷಮ್ಯ ಉಳಿದುಕೊಂಡಿದೆ. ಇದನ್ನು ತೊಡೆದುಹಾಕುವುದಕ್ಕೆ ಪರಸ್ಪರ ಅರಿವು ಹೆಚ್ಚಿಸಬೇಕು. ಆರ್ಥಿಕ-ಸಾಮಾಜಿಕ ಬಾಂಧವ್ಯವೇ ಅದಕ್ಕೆ ದಾರಿ.

ಮುಂಗಾರು

ಮಂಗಳವಾರ, ಜನವರಿ 14, 1986

ರಾಜಕಾರಣ ಶುಚಿ ಮಾಡಿ

ಐ.ಎ.ಎಸ್. ಆಡಳಿತ ವ್ಯವಸ್ಥೆಯನ್ನು ಸುಧಾರಿಸಲು ಕೆಲವು ಕ್ರಮಗಳನ್ನು ಕೇಂದ್ರ ಸರಕಾರ ಪ್ರಕಟಪಡಿಸಿದೆ. ಐ.ಎ.ಎಸ್. ವಿಭಾಗವನ್ನು ಪ್ರವೇಶಿಸುವ ಮಂದಿಯನ್ನು ಹತ್ತು ಅಥವ ಹನ್ನೊಂದು ವರ್ಷ ಕಾಲ ರಾಜ್ಯಗಳಲ್ಲೇ ಕೆಲಸ ಮಾಡುವಂತೆ ಏರ್ಪಡಿಸುವುದು ಇವುಗಳಲ್ಲಿ ಒಂದು. ಈ ಅವಧಿಯಲ್ಲಿ ಅವರನ್ನು ಗರಿಷ್ಠ ಮೂರಕ್ಕಿಂತ ಹೆಚ್ಚು ಬಾರಿ ವರ್ಗಾಯಿಸಲಾಗುವುದಿಲ್ಲ. ಇದರಿಂದ ನಿರ್ದಿಷ್ಟ ಇಲಾಖೆಗಳಲ್ಲಿ ಸಾಕಷ್ಟು ಆಡಳಿತ ಅನುಭವ ಅವರಿಗೆ ಉಂಟಾಗುವುದು ಸಾಧ್ಯ.

ಈಗ ಐ.ಎ.ಎಸ್. ಅಧಿಕಾರಿಯೆಂದರೆ ಯಾವ ಇಲಾಖೆಯಲ್ಲಿ ಏನು ಬೇಕಿದ್ದರೂ ಹುದ್ದೆ ವಹಿಸಿಕೊಂಡು ಆಡಳಿತ ನಡೆಸಬಲ್ಲವನೆಂಬ ಸರ್ವಜ್ಞ ಪೀಠದಲ್ಲಿ ಕುಳ್ಳಿರಿಸಿ ಆರಾಧಿಸಲಾಗುತ್ತಿದೆ. ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಹುಟ್ಟಿಕೊಂಡ ಈ ಭ್ರಮೆ ಇಂದೂ ಹೋಗಿಲ್ಲ. ಈ ಭ್ರಮೆಯ ಪರಿಣಾಮವಾಗಿಯೇ ಐ.ಎ.ಎಸ್. ಅಧಿಕಾರಿಗಳು ದೈವತ್ವಕ್ಕೇರುತ್ತಾರೆ. ತಾವು ತಪ್ಪನ್ನೇ ಮಾಡದವರೆಂಬ ಉದ್ಧಟತನವೂ ಅಹಮಿಕೆಯೂ ಅವರಲ್ಲಿ ಬೆಳೆಯುವುದು ಆಡಳಿತದ ಒಟ್ಟು ವ್ಯವಸ್ಥೆಗೆ ಅಪಾರ ಹಾನಿ ಮಾಡುತ್ತದೆ. ಈ ಅಧಿಕಾರಿಗಳು ಒಂದು ಹುದ್ದೆಯಿಂದ ಇನ್ನೊಂದಕ್ಕೆ- ಒಂದು ರಾಜ್ಯದಿಂದ ಇನ್ನೊಂದಕ್ಕೆ ನೆಗೆಯುತ್ತ ಯಾವುದರಲ್ಲಿಯೂ ಪರಿಪೂರ್ಣಜ್ಞಾನ ಪಡೆದುಕೊಳ್ಳದೆ ಅಪಕ್ವರಾಗುತ್ತಾರೆ. ಬೇರಾರಿಗೂ ತಿಳಿಯದ ಇಂಗ್ಲಿಷ್ ತಮಗೆ ಗೊತ್ತಿದೆಯೆಂಬ ಒಂದೇ ಊರುಗೋಲಿನ ಬಲದಿಂದ ಕಾರ್ಯವೆಸಗುತ್ತಾರೆ. ಬೇರೆಯವರ ಮೇಲೆ ಸವಾರಿ ಮಾಡಲೂ ಈ ಸಾಧನ ಅವರಿಗೆ ಅನುಕೂಲಕ್ಕೆ ಒದಗುತ್ತದೆ. ತಾವು ಒಂದು ಊರಿನಲ್ಲಿರುವ ಸಣ್ಣ ಅವಧಿಯಲ್ಲಿ ಆ ಊರಿನ ಭೂಗೋಳವಾಗಲಿ, ಚರಿತ್ರೆಯಾಗಲಿ ಭಾಷೆಯಾಗಲಿ ಅವರಿಗೆ ಕರಗತವಾಗುವುದಿಲ್ಲ.

ಇದೀಗ ಸರಕಾರ ಪ್ರಕಟಿಸಿರುವ ಹೊಸ ನೀತಿಯಿಂದ ಈ ಕೊರತೆಯನ್ನು ಪರಿಹರಿಸುವುದು ಸಾಧ್ಯ. ಅಧಿಕಾರಿಯೋರ್ವ ಒಂದು ಇಲಾಖೆಯಲ್ಲಿ, ಒಂದು ತಾಲೂಕಿನಲ್ಲಿ ನಾಲ್ಕೈದು ವರ್ಷ ಕೆಲಸ ಮಾಡಿದರೆ ಊರಿನ ಸಮಸ್ಯೆಗಳ ಹಾಗೂ ಆಡಳಿತದ ಸಾಕಷ್ಟು ತಿಳುವಳಿಕೆ ಬರುವುದು ಸಾಧ್ಯ. ಐ.ಎ.ಎಸ್. ಅಧಿಕಾರಿಗಳು ಈಗ ಆಗಿರುವಂತೆ ಅರೆಬೆಂದ ಜ್ಞಾನದಿಂದ ಎಲ್ಲೂ ಸಲ್ಲದವರಾಗುವುದು ತಪ್ಪುತ್ತದೆ.

ಆಡಳಿತೆಯಲ್ಲಿನ ಹಾಗೂ ಸಾರ್ವಜನಿಕ ಕ್ಷೇತ್ರದ ಉದ್ಯಮ ಸಂಸ್ಥೆಗಳಲ್ಲಿನ ಭ್ರಷ್ಟಾಚಾರವನ್ನು ಹೋಗಲಾಡಿಸುವುದಕ್ಕೆ ಕೂಡ ಕೇಂದ್ರ ಸರಕಾರ ಉಪಕ್ರಮಿಸಿದೆ. ಇಂದು ಆಡಳಿತೆಯಲ್ಲಿ ಎಲ್ಲಾ ಹಂತಗಳಲ್ಲಿಯೂ ಭ್ರಷ್ಟಾಚಾರ ತಾಂಡವ ನಡೆಸಿದೆಯೆಂಬುದು ಸಾರ್ವಜನಿಕರೆಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ವರಮಾನ ಇಲಾಖೆ, ಅಬಕಾರಿ ತೆರಿಗೆ ಇಲಾಖೆ, ಸುಂಕ ಇಲಾಖೆ—ಹೀಗೆ ಹತ್ತು ಹಲವು ಇಲಾಖೆಗಳಲ್ಲಿ ಕಾರ್ಯದರ್ಶಿಗಳೂ ಇಂಜಿನಿಯರರೂ ಲಂಚಾವತಾರಿಗಳಾಗಿ ಮಹಲುಗಳನ್ನು ಕಟ್ಟಿಕೊಂಡ, ಸುಖದ ಸುಪ್ಪತ್ತಿಗೆಯನ್ನು ನಿರ್ಮಿಸಿಕೊಂಡ, ಚಿನ್ನ ಬೆಳ್ಳಿಗಳ ಭಂಡಾರವನ್ನೇ ಶೇಖರಿಸಿದ, ಬ್ಯಾಂಕುಗಳಲ್ಲಿ ಮುಡಿಪಾಗಿಟ್ಟು ಲಕ್ಷಾಂತರ ರೂಪಾಯಿಗಳ ನಿರಖು ಠೇವಣಿಯನ್ನೇ ಬದುಕಿನ ಸರಕನ್ನಾಗಿ ಮಾಡಿಕೊಂಡ ಸುದ್ದಿ ದಿನವೂ ಬರುತ್ತಿವೆ. ಬಹಿರಂಗಕ್ಕೆ ಬರುವುದೇ ಇಷ್ಟಾದರೆ, ಬಚ್ಚಿಟ್ಟಿದ್ದು ಎಷ್ಟಿರಬಹುದು?

ಸರಕಾರ ಇಂದು ಪ್ರಾರಂಭಿಸಿರುವ ಈ ಉಪಕ್ರಮ ಸ್ವಾಗತಾರ್ಹವಾದದ್ದು. ಈ ಹಿಂದೆಯೇ ಎಂದೋ ಆಗಬೇಕಾದದ್ದು. ಬ್ರಿಟಿಷರ ಕಾಲದಲ್ಲಿ ಕಮ್ಮಿಯಾಗಿದ್ದ ಭ್ರಷ್ಟಾಚಾರ ನಾಡಿಗೆ ಬಿಡುಗಡೆ ಬಂದೊಡನೆಯೇ ಏರಿದ ವಿದ್ಯಮಾನವನ್ನು ಕಂಡಿದ್ದೇವೆ. ಇದಕ್ಕೆ ಪರಿಹಾರವೂ ಜತೆಗೇ ಆಗಬೇಕಾಗಿತ್ತು. ಅದು ಆಗಲೇ ಇಲ್ಲ. ಆದ್ದರಿಂದಲೇ ಅದು ಇಂದು ಮಹಾಭೂತವಾಗಿ ಈ ಸಮಾಜದ ಎಲ್ಲಾ ಕ್ಷೇತ್ರಗಳಿಗೆ ಹಬ್ಬಿದೆ. ಈ ದೇಶದ ಜನಶಕ್ತಿಯ ತಿರುಳನ್ನೇ ಕೊರೆ ಕೊರೆದು ನಾಶ ಮಾಡುತ್ತಿದೆ.

ಆಡಳಿತೆಯ ಭ್ರಷ್ಟಾಚಾರಕ್ಕೆ ಚಾಲನೆ ಕೊಟ್ಟದ್ದು ರಾಜಕೀಯ ಭ್ರಷ್ಟಾಚಾರವೆಂಬುದನ್ನು ಯಾರೂ ಮರೆಯುವಂತಿಲ್ಲ. ಇಂದು ಕಾರ್ಯಾಚರಣೆಗೆ ಸಿ. ಬಿ. ಐ. ಗೆ ಆಜ್ಞೆ ಮಾಡಿರುವ ಕೇಂದ್ರ ಸರಕಾರ ಕೂಡ ಅದನ್ನು ಖಂಡಿತಾ ಮರೆಯಬಾರದು. ಸತ್ಯದ ಮೋರೆಯನ್ನು ಅದು ಕಣ್ಣಿಟ್ಟು ನೋಡಬೇಕು. ಆ ನೋಟವನ್ನು ತಪ್ಪಿಸಿಕೊಂಡರೆ ರೋಗದ ಮೂಲವೇ ಅದಕ್ಕೆ ಗೊತ್ತಾಗದೆ ಹೋಗಬಹುದು. ಭ್ರಷ್ಟಾಚಾರಿಗಳು ಸರಕಾರದಲ್ಲೇ ಇದ್ದಾರೆ, ಆಳುವ ಪಕ್ಷದಲ್ಲೇ ಇದ್ದಾರೆ. ಯಾಕೆಂದರೆ ಆ ಪಕ್ಷ ಇಂದು ಆಧರಿಸಿ ನಿಂತಿರುವುದೇ ಸ್ವಾರ್ಥಿಗಳೂ ಸಮಯ ಸಾಧಕರೂ ಆದ ಗೋಸುಂಬೆ ರಾಜಕಾರಣಿಗಳ ಮೇಲೆ ಎಂಬುದನ್ನು ಸರಕಾರದ ವರಿಷ್ಠರು ಮರೆಯಬಾರದು.

ಆದ್ದರಿಂದ ಭ್ರಷ್ಟಾಚಾರ ನಿರ್ಮೂಲನ ರಾಜಕಾರಣದಿಂದಲೇ ಶುರುವಾಗಬೇಕು. ಅಲ್ಲಿ ಅದು ನಿವಾರಣೆಯಾದರೆ ಎಲ್ಲೆಲ್ಲೂ ನಿವಾರಣೆಯಾಗುತ್ತದೆ. ರಾಜಕಾರಣಕ್ಕೆ ಮೌಲ್ಯದ ತಳಪಾಯ ನಿರ್ಮಿಸಿ. ಆಗ ಅದು ಭದ್ರವೂ ಶುಚಿಯೂ ಆಗುತ್ತವೆ. ಅವು ಶುಚಿಯಾದರೆ ಆಡಳಿತವೂ ಸಮಾಜವೂ ಶುಚಿಯಾಗುತ್ತದೆ.

ಮುಂಗಾರು
ಗುರುವಾರ, ಜನವರಿ 16, 1986

ಸಾಮಾಜಿಕ ರೋಗ

ಬೆಂಗಳೂರಿನಲ್ಲಿ ದರೋಡೆಕೋರರ ಗುಂಪು ಹಾವಳಿ ನಡೆಸಿದೆ. ನಗರದಲ್ಲಿ ಉದ್ಯೋಗವನ್ನೂ ಉದ್ಯಮವನ್ನೂ ಗಳಿಸಿಕೊಂಡು ವಸತಿ ಮಾಡಿಕೊಂಡಿರುವ ನಾಗರಿಕರು ಕತ್ತಲೆಯಾದರೆ ಜೀವ ಭಯದಿಂದ ನಡುಗುವಂತಾಗಿದೆ. ಇದು ಬೆಂಗಳೂರಿಗೆ ಮಾತ್ರವೇ ಸೀಮಿತವಾಗಿಲ್ಲ. ಸಣ್ಣ ಪುಟ್ಟ ಪೇಟೆ- ಪಟ್ಟಣಗಳಲ್ಲೂ ಅಷ್ಟಿಷ್ಟು ಪ್ರಮಾಣದಲ್ಲಿ ಈ ವಿದ್ಯಮಾನ ಇದೆ. ಶಿವಮೊಗ್ಗದ ಹುಡುಗರು ಮುಸುಕು ಧಾರಿಗಳಾಗಿ ಆಯುಧ ಹಿಡಿದು ದರೋಡೆ ಮಾಡಲು ಹೊರಟ ವರದಿ ಬಂದಿದೆ. ಕಾಸರಗೋಡಿನಲ್ಲಿ ದರೋಡೆಕೋರರು ಮನೆಗೆ ನುಗ್ಗಿ ಕನ್ಯೆಯೊರ್ವಳ ಮಾನಭಂಗ, ಕೊಲೆ, ಸುಲಿಗೆ ನಡೆಸಿದ ವಾರ್ತೆ ಬಂದಿದೆ. ನಮ್ಮ ಹೆದ್ದಾರಿಗಳಲ್ಲಿ ಆಗಿಂದಾಗ್ಗೆ ಪ್ರಯಾಣಿಕ ವಾಹನಗಳನ್ನೂ ಸರಕು ಸಾಗಣೆ ಟ್ರಕ್ಕುಗಳನ್ನೂ ತಡೆ ಹಿಡಿದು ದರೋಡೆ ನಡೆಸುವ ಘಟನೆ ಆಗಿಂದಾಗ್ಗೆ ನಡೆಯುತ್ತಿದೆ.

ಇದು ಕಾನೂನು ಪಾಲನೆಗೆ ಸಂಬಂಧಪಟ್ಟ ಸಮಸ್ಯೆಯಂತೂ ನಿಜ. ದರೋಡೆ- ಕೊಲೆ- ಸುಲಿಗೆಗಳಿಂದ ಸಾಮಾಜಿಕ ಕ್ಷೋಭೆ ಉಂಟಾಗುತ್ತದೆ. ಕಾನೂನು ಮುರಿಯುವ ಇಂತಹ ಅಕ್ರಮಗಳನ್ನು ಮಟ್ಟ ಹಾಕಿ ಅಪರಾಧಿಗಳನ್ನು ಹಿಡಿತಂದು ದಂಡಿಸಬೇಕಾದ ಅಗತ್ಯವಿದೆ. ಆ ಮೂಲಕ ಸಾಮಾಜಿಕ ಶಾಂತಿಯನ್ನು ಪಾಲನೆ ಮಾಡಬೇಕಾದ ಕರ್ತವ್ಯ ಸರಕಾರಗಳಿಗಿದೆ. ಕಾನೂನು ಪಾಲನೆ ಮಾಡಬೇಕಾಗಿರುವ ಪೊಲೀಸ್ ಇಲಾಖೆ ಚುರುಕಾಗಬೇಕು. ಇಂತಹ ಅಪರಾಧಗಳು ಕಮ್ಮಿಯಾಗುವಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ಅವರಿಗಿದೆ.

ಅದರ ಜತೆಗೇ ನಮ್ಮ ಸರಕಾರಗಳು ಮತ್ತು ಜನತೆ ಕೂಡ ಈ ಅಪರಾಧ ಪ್ರವೃತ್ತಿ, ದರೋಡೆ- ಇವುಗಳ ಮೂಲವನ್ನು ಅರಸಬೇಕು. ಮೂಲವನ್ನು ಕಂಡು ಹಿಡಿದು ರೋಗದ ಹುಟ್ಟನ್ನೇ ತಡೆಯದಿದ್ದರೆ ರೋಗ ಗುಣವಾಗದು. ಕಾನೂನು ಪಾಲಕರು ಚುರುಕಾಗಿ ಅಪರಾಧಿಗಳನ್ನು ದಂಡಿಸುವುದರಿಂದ ಈ ಪ್ರವೃತ್ತಿಯನ್ನು ಕೆಲವಂಶ ಮಾತ್ರವೇ ತಗ್ಗಿಸುವುದು ಸಾಧ್ಯವೇ ಹೊರತು ನಿಯಂತ್ರಣಕ್ಕೆ ತರುವುದಾಗದು.

ದರೋಡೆ ಪ್ರವೃತ್ತಿ ಒಂದು ಸಾಮಾಜಿಕ ವ್ಯಾಧಿಯಾಗಿದೆ. ಇಂದು ನಮ್ಮ ಯುವಕರಿಗೆ ಉದ್ಯೋಗವಿಲ್ಲದಾಗಿದೆ. ಕಾಲೇಜು ಶಿಕ್ಷಣ ಮುಗಿಸಿ ಪದವಿ ಪಡೆದರೂ ಬದುಕಿನ ದಾರಿ ತೋಚದಂತಹ ಯುವಕರು ನಮ್ಮಲ್ಲಿ ಲಕ್ಷಾಂತರ ಇದ್ದಾರೆ. ನಮ್ಮ ಆರ್ಥಿಕ, ಸಾಮಾಜಿಕ ವ್ಯವಸ್ಥೆ ಯುವಕರ ಈ ಅತೃಪ್ತಿಗೂ ಹತಾಶೆಗೂ ಒತ್ತು ಕೊಡುತ್ತದೆ. ಅಸಮಾಧಾನ-ಅತೃಪ್ತಿಗಳು ಕೋಪಕ್ಕೂ ಕ್ರೌರ್ಯಕ್ಕೂ ಕಾರಣವೆನಿಸುತ್ತದೆ.

ಇಂದು ಉದ್ಯೋಗವನ್ನೂ ಉದ್ಯಮ- ವ್ಯವಹಾರಗಳನ್ನು ಗಿಟ್ಟಿಸಿಕೊಂಡಿರುವ ಮಂದಿ ಸಾಮಾಜಿಕ ಹಾಗೂ ಆರ್ಥಿಕ ನೀತಿ- ಮೌಲ್ಯಗಳ ಕಟ್ಟುಪಾಡನ್ನು ಕಳಚಿಕೊಂಡು ಸಂಪತ್ತನ್ನು ಸೂರೆ ಮಾಡುವುದೊಂದೇ ಜೀವನದ ಪರಮ ಧ್ಯೇಯವೆಂಬಂತೆ ವ್ಯವಹರಿಸುತ್ತಿದ್ದಾರೆ. ಉದ್ಯಮಿಗಳಿರಲಿ, ವೃತ್ತಿ ನಿರತರಿರಲಿ ಸಂಪಾದನೆಗಳಿಂದ ಒಂದೆರಡು ವರ್ಷಗಳಲ್ಲೇ ಕಾರು-ಬಂಗಲೆಗಳನ್ನು ಮಾಡಿಕೊಳ್ಳುವ ವಾಸ್ತವಿಕತೆ ಇಂದು ನಮ್ಮ ನಗರಗಳಲ್ಲಿಯೂ ಪೇಟೆ ಪಟ್ಟಣಗಳಲ್ಲಿಯೂ ಕಾಣುತ್ತಿದ್ದೇವೆ. ಸುಲಭದ ಶ್ರೀಮಂತಿಕೆಗೆ ಅಡ್ಡದಾರಿ ಹಿಡಿಯುವ ಮಂದಿಯ ಸಂಖ್ಯೆ ಈ ಸಮಾಜದಲ್ಲಿ ಏರುತ್ತಿದೆ. ವ್ಯಾಪಾರವಿರಲಿ, ವೈದ್ಯಕವಿರಲಿ, ನ್ಯಾಯತೀರ್ಮಾನವಿರಲಿ, ಸೇವಾ ಉದ್ಯಮಗಳಿರಲಿ, ಎಲ್ಲವೂ ವಾಣಿಜ್ಯಮಯವಾಗಿ ಬಿಟ್ಟು ಸೇವೆಯೆಂಬುದು ತುಟ್ಟಿ ಸರಕಾಗಿದೆ.

ಇದರರ್ಥ ಇಷ್ಟೆ: ನಮ್ಮ ಜನರು ಕಾನೂನಿನ ಮರೆಯಲ್ಲೇ ಅದರ ಲೋಪದೋಷಗಳ ಬಲದಿಂದಲೇ ಸಂಪತ್ತನ್ನು ಸೂರೆಮಾಡುತ್ತಿದ್ದಾರೆ. ಸಮಾಜವನ್ನು ಶೋಷಣೆ ಮಾಡಲು ಕಾನೂನೇ ಅವರಿಗೆ ಸಹಾಯ ಮಾಡುತ್ತದೆ, ನಮ್ಮ ಸಮಾಜ ವ್ಯವಸ್ಥೆಯೇ ತಾರತಮ್ಯದ ತಳಪಾಯದಲ್ಲಿ ನಿಂತಿದೆ. ಶೋಷಣೆಯೇ ನಮ್ಮ ಆರ್ಥಿಕ ವ್ಯವಸ್ಥೆಯ ಅಡಿಗಲ್ಲಾಗಿದೆ. ಮೇಲು-ಕೀಳು, ಶ್ರೀಮಂತ ಬಡವ ನಮ್ಮ ಜಾಯಮಾನದಲ್ಲೇ ಬೆಳೆದು ಬಂದಿದೆ.

ಇಂದು ಮನೆ ನುಗ್ಗಿ ದರೋಡೆ ಮಾಡುವ ತರುಣರು ಇದೇ ನಾಣ್ಯದ ಇನ್ನೊಂದು ಮುಖ. ಒಂದು ವರ್ಗ ಕಾನೂನಿನ ಆಶ್ರಯದಲ್ಲೇ ದರೋಡೆ ಮಾಡಿ ಮಹಲು ಕಟ್ಟಿದರೆ, ಈ ತರುಣರು ಕಾನೂನನ್ನು ಮುರಿದು ಆ ಮಹಲುಗಳನ್ನು ಹೊಗುತ್ತಿದ್ದಾರೆ. ಅಲ್ಲಿನ ಸೊತ್ತುಗಳನ್ನು ದೋಚುತ್ತಿದ್ದಾರೆ.

ಇದರ ನಿವಾರಣೆಗೆ ನಮ್ಮ ಸಮಾಜಕ್ಕೆ ಕಾಯಕಲ್ಪ ಆಗಬೇಕು. ಸಾಮಾಜಿಕ ವ್ಯವಸ್ಥೆಯನ್ನು ಪುನರೂಪಿಸಬೇಕು. ಕಾನೂನಿನ ಬೆಂಬಲದಿಂದಲೇ ಹಣ ಸೂರೆ ಹೊಡೆಯುವುದು ಸಾಧ್ಯವೆಂಬ ಇಂದಿನ ವಾಸ್ತವಿಕತೆ ಹೋಗಬೇಕು. ಇಂದು ಬೆಳೆದು ಭೂಮ್ಯಾಕಾಶಗಳನ್ನು ವ್ಯಾಪಿಸುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬೇಕು. ಆರ್ಥಿಕ ಅಸಮಾನತೆಯ ಕಂದರವನ್ನು ತೀವ್ರವಾಗಿ, ತ್ವರಿತವಾಗಿ ಕಡಿಮೆ ಮಾಡಬೇಕು. ಎಲ್ಲರಿಗೂ ದುಡಿಯುವ, ದುಡಿದದ್ದಕ್ಕೆ ನ್ಯಾಯವಾದ ಪ್ರತಿಫಲ ಸಿಗುವ ವ್ಯವಸ್ಥೆ ರೂಪುಗೊಳ್ಳಬೇಕು. ಸಾಮಾಜಿಕರ ಹಗಲು ದರೋಡೆ ನಿಂತರೆ ರಾತ್ರಿ ದರೋಡೆಯೂ ನಿಲ್ಲುತ್ತದೆ.

ಮುಂಗಾರು, ಜನವರಿ 17, 1986, [illegible]

ಮುಂಗಾರು

ಶುಕ್ರವಾರ, ಜನವರಿ 17, 1986

ಚಿಂತನೆಗೆ ಚಾಲನೆ

ರಾಷ್ಟ್ರಪತಿ ಗ್ಯಾನಿ ಜೇಲ್‌ಸಿಂಗ್ ಅವರು ಈ ದೇಶದ ಆಗುಹೋಗುಗಳ ಬಗ್ಗೆ ಮನಬಿಚ್ಚಿ ಕೆಲವು ಮಾತುಗಳನ್ನು ಆಡಿದ್ದಾರೆ. ಸರಕಾರದ ಧೋರಣೆಗಳನ್ನೂ ಕೃಷಿ ಖಾತೆಯು ಕೆಲಸ ಮಾಡುವ ವಿಧಾನವನ್ನೂ ಅವರು ಖಂಡಿಸಿದ್ದಾರೆ.

ಅವರು ಕೃಷಿ ಮಾರುಕಟ್ಟೆ ಸಂಬಂಧಿ ವಿಚಾರಗೋಷ್ಠಿಯೊಂದನ್ನು ಉದ್ಘಾಟಿಸುತ್ತ ಕೃಷಿಕರಿಗೆ ಲಾಭದಾಯಕವಾದ ಬೆಲೆಯನ್ನು ಒದಗಿಸುವಲ್ಲಿ ಸರಕಾರ ಸೋತುಹೋಗಿದೆಯೆಂದು ಟೀಕಿಸಿದ್ದಾರೆ. ಅಷ್ಟೇ ಅಲ್ಲದೆ ಗ್ರಾಹಕರ ಹಿತರಕ್ಷಣೆ ಮಾಡುವ ಕರ್ತವ್ಯದಲ್ಲಿಯೂ ಸರಕಾರ ವಿಫಲವಾಗಿದೆಯೆಂದು ಟೀಕಿಸಿದ್ದಾರೆ. ರೈತರ ಹಿತಕ್ಕಾಗಿ ಸರಕಾರ ಬಿಡುಗಡೆ ಮಾಡಿದ ಹಣ ಅವರಿಗೆ ತಲಪುತ್ತಿದೆಯೇ, ಸರಕಾರ ಧಾನ್ಯಕ್ಕೆ ನಿಗದಿ ಮಾಡಿದ ಬೆಲೆ ನಿಜವಾಗಿಯೂ ರೈತರಿಗೆ ಸಿಗುತ್ತಿದೆಯೇ ಎಂದು ಪ್ರಶ್ನಿಸಿದ ಜೇಲ್‌ಸಿಂಗ್ ಇದನ್ನು ತಿಳಿಯಲು ಕೇಂದ್ರದ ಕೃಷಿಮಂತ್ರಿಗಳು ಹಳ್ಳಿಗಳಿಗೆ ಹಠಾತ್ ಭೇಟಿ ಕೊಡುವಂತೆ ಸೂಚಿಸಿದ್ದಾರೆ. ಸರಕಾರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ನೀಡಿದ ಸಾಲ ಹಳ್ಳಿಗರಿಗೆ ತಲಪುತ್ತಿಲ್ಲವೆಂದೂ ಅವರು ದೂರಿದ್ದಾರೆ. ಭ್ರಷ್ಟಾಚಾರ ಈ ನೆಲದಲ್ಲಿ ಬಿಟ್ಟಿರುವ ಆಳವಾದ ಬೇರಿನ ಬಗ್ಗೆಯೂ ಅವರಿಗೆ ಖಚಿತವಾದ ಸ್ಪಷ್ಟವಾದ ತಿಳುವಳಿಕೆಯಿದೆ. ಇಂದು ಯಾವ ರಾಜ್ಯದ ಲೋಕೋಪಯೋಗಿ ಇಲಾಖೆಯನ್ನು ನೋಡಿದರೂ ಲಂಚ ರುಷುವತ್ತು ತಾನೇ ತಾನಾಗಿದೆ, ಕೇವಲ ಶೇಕಡಾ ಹತ್ತು ಕಮಿಷನ್ ತೆಗೆದುಕೊಂಡು ಟೆಂಡರ್ ಅಂಗೀಕರಿಸುವ, ಬಿಲ್ ಪಾವತಿ ಮಾಡುವ ಅಧಿಕಾರಿಗಳನ್ನು ಮಹಾ ಪ್ರಾಮಾಣಿಕರೆಂದು ತಿಳಿಯಬೇಕಾದಂತಹ ಪರಿಸ್ಥಿತಿ ಇದೆ ಎಂದು ರಾಷ್ಟ್ರಪತಿ ಹೇಳುತ್ತಾರೆ.

ನಮ್ಮ ಯೋಜನೆಗಳಿಗೆ ಏನಾಗಿದೆ, ಆಡಳಿತದ ಪರಿಸ್ಥಿತಿ ಯಾವ ಮಟ್ಟಕ್ಕೆ ಕುಸಿದಿದೆ ಎಂಬುದರ ಸ್ಪಷ್ಟ ಕಲ್ಪನೆ ಈ ದೇಶದ ರಾಷ್ಟ್ರ ಪ್ರಮುಖನಲ್ಲಿ ಇರುವುದು ಸ್ವಾಗತಾರ್ಹವಾದ, ಚೇತೋಹಾರಿಯಾದ ಬೆಳವಣಿಗೆಯಾಗಿದೆ. ನಮ್ಮ ಆಡಳಿತ ವ್ಯವಸ್ಥೆಯ ನಾಮ ಮಾತ್ರ ಮುಖ್ಯಸ್ಥನಾಗಿದ್ದರೂ ದೇಶದ ಆಗುಹೋಗುಗಳ ಬಗೆಗಿನ ತನ್ನ ಪ್ರಾಮಾಣಿಕವಾದ ಅನಿಸಿಕೆಯನ್ನು ಬಚ್ಚಿಟ್ಟುಕೊಳ್ಳದೆ ಬಿಚ್ಚು ಮನಸ್ಸಿನಿಂದ ಸಾರ್ವಜನಿಕರ ಮುಂದಿಡುವ ಅಚ್ಚರಿಯ ಹೆಜ್ಜೆಯನ್ನು ಜೇಲ್‌ಸಿಂಗರು ಇರಿಸಿದ್ದಾರೆ. ಈ ಹಿಂದೆ ರಾಷ್ಟ್ರಪತಿಯಾಗಿದ್ದ ನೀಲಂ ಸಂಜೀವ ರೆಡ್ಡಿಯವರೂ ಇಂತಹ ಧೈರ್ಯದ ಹೆಜ್ಜೆಯಿರಿಸಿ ತಮ್ಮ ಹುದ್ದೆಗೆ ಘನಸ್ತಿಕೆಯನ್ನು ತಂದಿದ್ದರು.

ತನ್ನ ಅಭಿಪ್ರಾಯಗಳನ್ನು ಬಿಚ್ಚು ಮನಸ್ಸಿನಿಂದ ಹೇಳುವ ರಾಷ್ಟ್ರಪತಿ ಸಂಸದೀಯ ಪ್ರಜಾತಂತ್ರದ ನೆಲೆಯಲ್ಲಿ ಕಾರ್ಯವೆಸಗುವ ಸರಕಾರದ ವರಿಷ್ಠರ ಜತೆ ಮೇಲಾಟದಲ್ಲಿ ತೊಡಗಿ ವಿವಾದಕ್ಕೆಡೆ ಮಾಡುವ ಅಪಾಯವಿದೆಯಾದರೂ ಕುಸಿಯುತ್ತಿರುವ ಮೌಲ್ಯಗಳ ಬಗ್ಗೆ, ಕೆಡುತ್ತಿರುವ ಆಡಳಿತ ಸಾಮರ್ಥ್ಯದ ಬಗ್ಗೆ, ಯೋಜನೆಗಳ ಹಣ ಸೋರಿ ಹೋಗಿ ಅಭಿವೃದ್ಧಿಯ ತಂತ್ರವೇ ವ್ಯರ್ಥವೆನಿಸುತ್ತಿರುವ ವಿದ್ಯಮಾನದ ಬಗ್ಗೆ ಅನಿಸಿಕೆಗಳನ್ನು ಹೇಳುವುದರಿಂದ ನಾಡಿಗೆ ಕ್ಷೇಮವೇ ಆದೀತು.

ನಮ್ಮ ಜನ ಸ್ವಾರ್ಥಪರರಾಗುತ್ತಿರುವ ಬಗ್ಗೆ, ಈ ಸ್ವಾರ್ಥವು ಸಮಾಜ ಹಿತವನ್ನು ಲೆಕ್ಕಿಸದೆ, ಸಮಾಜಕ್ಕೆ ಅಹಿತವಾದರೂ ಚಿಂತಿಲ್ಲ. ತನಗೆ ಹಿತವಾಗಬೇಕು ಎಂಬಷ್ಟರ ಮಟ್ಟಿಗೆ ಬೆಳೆದು ಆಡಳಿತೆಯು ಕೆಟ್ಟುಹೋಗುತ್ತಿರುವ ಬಗ್ಗೆ ರಾಷ್ಟ್ರಪತಿ ಜೇಲ್‌ಸಿಂಗರು ಇದೀಗ ಸಮೂಹ ಚಿಂತನೆಗೆ ಚಾಲನೆ ಕೊಟ್ಟಿದ್ದಾರೆ. ಈ ದೇಶದ ಭವಿಷ್ಯದ ಬಗ್ಗೆ ಕಾಳಜಿಯಿರುವ ವಿಚಾರಶೀಲರೆಲ್ಲರೂ ಅವರ ಮಾತುಗಳನ್ನು ಮನನ ಮಾಡಬೇಕು. ಅದರ ಬಗ್ಗೆ ಚರ್ಚೆ ಸಮಾಲೋಚನೆ ನಡೆಯಬೇಕು,

ಆಡಳಿತೆಯಲ್ಲಿಯೂ ಕೈಗಾರಿಕಾ ರಂಗದಲ್ಲಿಯೂ ವಾಣಿಜ್ಯ ವ್ಯವಹಾರದಲ್ಲಿಯೂ ಬೆಳೆದಿರುವಂತಹ ಭ್ರಷ್ಟಾಚಾರದ ರೋಗದ ಅರಿವು ರಾಷ್ಟ್ರಪತಿ, ಪ್ರಧಾನಿ ಮೊದಲಾಗಿ ಸರಕಾರದ ವರಿಷ್ಠರಿಗೆ ಈಗಾಗಲೇ ಆಗಿರುವ ಸೂಚನೆ ಮಾತಿನಲ್ಲಿ ಮಾತ್ರವಲ್ಲದೆ ಕೃತಿಯಲ್ಲಿಯೂ ಕಾಣಿಸತೊಡಗಿದೆ. ಆರ್ಥಿಕವಾಗಿ ಅಕ್ರಮ ನಡೆಸಿದವರ ಮೇಲೆ ಕಾರ್ಯಾಚರಣೆ ಈಗಾಗಲೇ ವ್ಯಾಪಕ ಪ್ರಮಾಣದಲ್ಲಿ ಪ್ರಾರಂಭಗೊಂಡಿದೆ. ಇದು ಇಲ್ಲಿಗೇ ನಿಲ್ಲಬಾರದು ಎಂದು ಜನರು ಆಶಿಸುತ್ತಾರೆ. ಹಣಕಾಸಿನ ಹಾಗೂ ರಾಜಕೀಯವಾದ ಆಸೆ ಆಮಿಷಗಳೂ ಒತ್ತಡಗಳೂ ಸರಕಾರದ ಮೇಲೆ ಬರುವುದು ಸಾಧ್ಯ. ಅಂತಹ ಸುದ್ದಿಗಳು ಈಗಾಗಲೇ ಬರತೊಡಗಿವೆ. ಅದಕ್ಕೆ ಸರಕಾರ ಮಣಿಯದೆ ಇರಬೇಕು. ಕಾರ್ಯಾಚರಣೆ ಮುಂದುವರಿಯಬೇಕು. ಅದು ನಿರಂತರವಾದ ಪ್ರಕ್ರಿಯೆಯಾಗಿರಬೇಕು. ಯಾವಾಗಾದರೊಮ್ಮೆ ಮಾಡಿಬಿಟ್ಟು ಪ್ರಚಾರಗಿಟ್ಟಿಸುವ ಆವುಟವೆನಿಸಬಾರದು.

ಜೇಲ್‌ಸಿಂಗರು ಪ್ರಸ್ತಾಪಿಸಿದ ರೈತನಿಗೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಸರಕಾರ ಮತ್ತೆ ಚಿಂತಿಸಿ ಪರಿಹಾರೋಪಾಯ ಕಂಡುಕೊಳ್ಳಬೇಕಾದ ಅಗತ್ಯವಿದೆ. ರೈತನಿಗೆ ಕೃಷಿ ಆಧುನೀಕರಣಕ್ಕೆ ಸಕಾಲ ಸವಲತ್ತು ಒದಗಿಸಬೇಕು. ಅವನು ಬೆಳೆದದ್ದಕ್ಕೆ ಲಾಭದಾಯಕ ಬೆಲೆ ಸಿಗಬೇಕು.

ಎಂದಿನ ತನಕ ರೈತನು ಈ ನಾಡಿನಲ್ಲಿ ಎರಡನೇ ದರ್ಜೆಯ ಪ್ರಜೆಯ ಸ್ಥಾನದಿಂದ ಮೇಲೆದ್ದು ನಗರವಾಸಿಗಳಿಗೆ ಸಮಾನವಾದ ಸ್ಥಾನ-ಗೌರವ-ಘನತೆ ಹಾಗೂ ಅವಕಾಶಗಳನ್ನು ಪಡೆದುಕೊಳ್ಳುವುದಿಲ್ಲವೋ ಅಂದಿನ ತನಕ ಈ ದೇಶ ಉದ್ಧಾರವಾಗದು. ಆ ತನಕವೂ ನಮ್ಮ ನಗರಗಳಲ್ಲಿ ಕಣ್ಣಿಗೆ ಹೊಡೆಯುವ ಅಭಿವೃದ್ಧಿಯೂ ನವನಾಗರಿಕತೆಯೂ, ತಂತ್ರಜ್ಞಾನವೂ ಶೋಕಿ ಬದುಕೂ ಹುಸಿಯಾಗಿಯೇ ಉಳಿಯುತ್ತದೆ.

ಮುಂಗಾರು

ಶನಿವಾರ, ಜನವರಿ 18, 1986

ಜನ–ಜಾನುವಾರು ಉಳಿಸಿ

ಬರ ಪರಿಹಾರ ಕಾರ್ಯದಲ್ಲಿ ಮಿತವ್ಯಯ ಮಾಡಬೇಕೆಂದು ಕೇಂದ್ರ ಕೃಷಿ ಸಚಿವ ಬೂಟಾ ಸಿಂಗ್ ಅವರು ರಾಜ್ಯಗಳಿಗೆ ಕರೆ ಕೊಟ್ಟಿದ್ದಾರೆ. ನಿರಾಶ್ರಿತರ ಪರಿಹಾರಕ್ಕಾಗಿ ಬಹಳಷ್ಟು ವೆಚ್ಚ ಮಾಡದೆ ದೀರ್ಘಕಾಲೀನವಾದ ಕಾಯಂ ಸ್ವರೂಪದ ಕಾಮಗಾರಿಗಳಿಗಾಗಿ ವೆಚ್ಚ ಮಾಡಬೇಕು ಎಂದು ಅವರು ಹಿತವಾದ ಹೇಳಿದ್ದಾರೆ. ನೈಸರ್ಗಿಕ ಪ್ರಕೋಪಗಳು ಮರುಕಳಿಸದಂತೆ ಮಾಡುವ ನಿಟ್ಟಿನಲ್ಲಿ ರಾಜ್ಯಗಳು ಏನೂ ಕೆಲಸ ಮಾಡಿಲ್ಲವೆಂದು ಪ್ರಧಾನ ಮಂತ್ರಿ ರಾಜೀವ ಗಾಂಧಿ ಅಭಿಪ್ರಾಯಪಟ್ಟಿರುವುದನ್ನೂ ಬೂಟಾಸಿಂಗ್ ಉಲ್ಲೇಖಿಸಿದ್ದಾರೆ.

ಬರ ಪರಿಹಾರವೆಂಬುದು ತಾತ್ಕಾಲಿಕ ನೆಲೆಯಲ್ಲಿ ಆಗುವಂತಿರಬಾರದು– ಕಾಯಂ ನೆಲೆಯಲ್ಲಿ ಆಗಬೇಕು ಎಂಬುದು ನಿಜ. ಜನರಿಗೆ ನೀರು ಮತ್ತು ಆಹಾರ – ಜಾನುವಾರಿಗೆ ಮೇವು ಇವಿಷ್ಟು ಸಮೃದ್ಧವಾಗಿ ಎಲ್ಲ ಕಾಲದಲ್ಲಿಯೂ ದೊರೆಯುವಂತಹ ದೀರ್ಘಾವಧಿ ಕಾರ್ಯಕ್ರಮಗಳನ್ನು ಎಲ್ಲಾ ನಾಡಿನ ಎಲ್ಲಾ ಸರಕಾರಗಳೂ ಮಾಡಬೇಕಾಗಿದೆ. ಅದು ಅವುಗಳ ಮೊದಲ ಕರ್ತವ್ಯ. ಜನರಿಗೆ ಅನ್ನ ಅರಿವೆಯೂ ದುಡಿಯಲು ಉದ್ಯೋಗವೂ ದೊರೆಯುವಂತೆ ನೋಡಿಕೊಳ್ಳಲು ವಿಫಲವಾಗುವ ಯಾವ ಸರಕಾರವನ್ನೂ ಸಮರ್ಥ ಸರಕಾರವೆಂದಾಗಲಿ ಜನಹಿತ ನೋಡಿಕೊಳ್ಳುವ ಕಲ್ಯಾಣಕಾರಕ ಸರಕಾರವೆಂಬುದಾಗಲಿ ಕರೆಯುವುದಕ್ಕಾಗುವುದಿಲ್ಲ.

ಬರ ನಿರಾಶ್ರಿತರಿಗಾಗಿ ಕೊಡುಗೈಯಿಂದ ಖರ್ಚು ಮಾಡಬೇಡಿ ಎಂಬ ಹಿತವಾದವನ್ನು ಬೂಟಾ ಸಿಂಗ್ ಅವರು ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡೇ ಹೇಳಿರುವಂತಿದೆ. ಕರ್ನಾಟಕ ಇಂದು ತೀವ್ರತರವಾದ ಕ್ಷಾಮದ ದವಡೆಗೆ ಸಿಲುಕಿ ನರಳುತ್ತಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಕಳೆದ ನಾಲ್ಕು ವರ್ಷಗಳಿಂದ ಈ ರಾಜ್ಯದ ಅನೇಕ ಜಿಲ್ಲೆಗಳ ಸಾವಿರಾರು ಗ್ರಾಮಗಳಲ್ಲಿ ಮಳೆಯ ಪ್ರಮಾಣ ಕಮ್ಮಿಯಾಗಿದೆ. ಕಳೆದ ವರ್ಷ ಮುಂಗಾರು ಮತ್ತು ಹಿಂಗಾರು ಎರಡು ಕೂಡ ಕೈಕೊಟ್ಟು, ಬೆಳೆ ಬಾರದೆ, ಮೇವಿಲ್ಲದೆ ಜನ-ಜಾನುವಾರುಗಳು ಕಂಗಾಲಾಗಿವೆ. ಅನೇಕ ಊರುಗಳಲ್ಲಿ ಕುಡಿಯುವುದಕ್ಕೂ ನೀರಿಲ್ಲದೆ ಜನ ಸಂಕಟ ಪಡುತ್ತಿರುವ ರುದ್ರ– ಗಂಭೀರ ವಿದ್ಯಮಾನವನ್ನು ಪತ್ರಿಕಾ ವರದಿಗಾರರು ಚಿತ್ರಿಸುತ್ತಿದ್ದಾರೆ.

ದೀರ್ಘಕಾಲೀನವಾದ, ಕಾಯಂ ನೆಲೆಯ ಕಾಮಗಾರಿಗಳನ್ನು ನಡೆಸುತ್ತಿದ್ದರೆ ಇಂದಿನ ಈ ದಾರುಣ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ ಎಂಬುದಂತೂ ನಿಜವೇ. ಮಳೆ ಕೊಂಚ ಕಮ್ಮಿಯಾದರೂ ಅದನ್ನು ಭರಿಸಿಕೊಳ್ಳುವ ಸಾಮರ್ಥ್ಯ ಜನರಿಗೂ ಜಾನುವಾರಿಗೂ ಬರುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಕೃಷ್ಣಾ ಹಾಗೂ ಭೀಮಾ ನದಿಗಳೂ ಅವುಗಳ ಇತರ ಅನೇಕ ಉಪನದಿಗಳೂ ಹರಿಯುತ್ತಿವೆ. ಇವೆಲ್ಲವುಗಳ ನೀರನ್ನು ಹಿಡಿದಿಟ್ಟು ಭೂಮಿಗೆ ಉಣಿಸುವ ಯೋಜನೆಗಳು ಸಿದ್ಧವಾಗಿದ್ದರೆ ಇಂದು ಇಡಿಯ ಉತ್ತರ ಕರ್ನಾಟಕ ಹಸುರಿನಿಂದ ನಳನಳಿಸುತ್ತಿತ್ತು.

ಕೃಷ್ಣಾ ಮೇಲ್ದಂಡೆ ಯೋಜನೆಯ ನಿರ್ಮಾಣ ಕಾರ್ಯ ಪ್ರಾರಂಭವಾಗಿ ಇಂದಿನ 15 ವರ್ಷಗಳೇ ಸಂದರೂ ಅದರಲ್ಲಿ ಯೋಜಿಸಲಾದ ಜಮೀನಿನ ಕಾಲಂಶಕ್ಕೂ ನೀರಾವರಿ ಸೌಲಭ್ಯ ಸಿಕ್ಕಿಲ್ಲ. ಘಟಪ್ರಭಾ, ಮಲಪ್ರಭಾ ಯೋಜನೆಗಳು ನೆಲದಿಂದ ಮೇಲೆದ್ದಿಲ್ಲ. ಸಾಕಷ್ಟು ಹಣ ಒದಗಿಸುತ್ತಿದ್ದರೆ ಈ ಯೋಜನೆಗಳೆಲ್ಲ ಎಂದೋ ಪೂರ್ತಿಗೊಂಡು ಲಕ್ಷಾಂತರ ಎಕರೆಗೆ ನೀರು ಕೊಡುತ್ತಿದ್ದವು. ಕರ್ನಾಟಕ ಇವುಗಳಿಗೆ ವಿಶ್ವಬ್ಯಾಂಕಿನ ನೆರವು ಒದಗಿಸಿಕೊಡಿರೆಂದು ವರ್ಷ ವರ್ಷವೂ ಕೇಂದ್ರ ಸರಕಾರವನ್ನು ಅಂಗಲಾಚುತ್ತಿದೆ. ಅಷ್ಟೋ ಇಷ್ಟೋ ಹಣ ಬಂದಿದೆ. ಅಷ್ಟೋ ಇಷ್ಟೋ, ಕೆಲಸವೂ ಆಗಿವೆ.

ಆದರೆ ಇಂದು ನಿರಾಶ್ರಿತರ ಪರಿಹಾರಕ್ಕೆ ಹಣ ಖರ್ಚು ಮಾಡಬೇಡಿ, ಕಾಯಂ ನೆಲೆಯ ಕಾಮಗಾರಿ ನಡೆಸಿ ಎಂದು ರಾಜ್ಯಗಳಿಗೆ ಬುದ್ಧಿ ಹೇಳುವ ಕೇಂದ್ರ ಸರಕಾರ ಈ ತನಕ ಅಂಥ ಕಾಯಂ ಕಾಮಗಾರಿಗಳ ಬಗ್ಗೆ ಚಿಂತನೆ ನಡೆಸಿದೆಯೆ, ಚುರುಕಿನಿಂದ ವ್ಯವಹರಿಸಿದೆಯೇ? ನೈಸರ್ಗಿಕ ಪ್ರಕೋಪಗಳನ್ನು ತಡೆಯುವ ದೀರ್ಘಕಾಲೀಕ ಯೋಜನೆಗಳು ಯಾವುವೆಂಬ ಬಗ್ಗೆ ಅಧ್ಯಯನ ನಡೆಸಿ ಅವುಗಳಿಗೆ ಹಣಕಾಸನ್ನು ಸಮರೋಪಾದಿಯಲ್ಲಿ ಪೂರೈಸುವ ಮುತುವರ್ಜಿ ವಹಿಸಿದೆಯೇ? ಬರ ಪರಿಹಾರವೆಂದರೆ ಅದರಲ್ಲಿ ಕಾಯಂ ನೆಲೆಯ ಹಾಗೂ ತಾತ್ಕಾಲಿಕ ನೆಲೆಯ ಎರಡೂ ವಿಧದ ಕಾಮಗಾರಿಗಳು ಸೇರುತ್ತವೆ. ರಸ್ತೆ ನಿರ್ಮಾಣ ಕಾಲುವೆ ತೋಡುವಿಕೆ, ಕೆರೆಯ ಹೂಳೆತ್ತುವಿಕೆ– ಇವೆಲ್ಲ ಕಾಯಂ ನೆಲೆಯ ಕಾರ್ಯಗಳೇ ಆಗಿವೆ.

ಅವುಗಳ ಜತೆಗೆ ಜನರ ಹಾಗೂ ಜಾನುವಾರುಗಳ ಜೀವ ಉಳಿಸುವ ಅವಸರದ ಕ್ರಮಗಳನ್ನೂ ಸರಕಾರ ತೆಗೆದುಕೊಳ್ಳಬೇಕಾಗುತ್ತದೆ. ಜನರು ಸಂಕಟಪಡುತ್ತಿರುವಾಗ ಯಾವುದೇ ಸರಕಾರವೂ ಹಣದ ಮುಖ ನೋಡುತ್ತ ಕೂತುಕೊಳ್ಳುವುದಕ್ಕಾಗದು. ಇಂದು ಜನ ಉಳಿಯಬೇಕು, ಜಾನುವಾರುಗಳನ್ನು ಉಳಿಸಬೇಕು. ನಾಳೆ ಮಳೆ ಬಿದ್ದಾಗಲಾದರೂ ಕೃಷಿ ಕಾರ್ಯ ನಡೆಯಬೇಕಾಗುತ್ತದೆ. ರಾಜ್ಯಗಳ ವೆಚ್ಚದ ಮೇಲೆ ಕಣ್ಗಾವಲಿಡುವ ಯೋಜನೆಯ ವ್ಯಾಪ್ತಿಯ ಒಳಗಲ್ಲದೆ ಹೊರಗೆ ಚಿಕ್ಕಾಸನ್ನೂ ಬಿಡದ, ಸಣ್ಣಪುಟ್ಟ ವೆಚ್ಚಕ್ಕೂ ಲೆಕ್ಕ ಕೇಳುವ ಕೇಂದ್ರ ಸರಕಾರಕ್ಕೆ ದೀರ್ಘಕಾಲೀನ ಕಾಮಗಾರಿ ನಡೆಸುವಂತೆ ರಾಜ್ಯಗಳಿಗೆ ಸಕಾಲಕ್ಕೆ ಎಚ್ಚರಿಕೆ ನೀಡುವ ಹೊಣೆಯೂ ಉಂಟು. ಇಂದು ರಾಜ್ಯಗಳಲ್ಲಿ ಬಂದಿರುವ ಬರ ಇಷ್ಟು ತೀವ್ರವಾದದ್ದಕ್ಕೆ ಕೇಂದ್ರದ ಪ್ರಮಾದವೂ ಸಾಕಷ್ಟು ಕಾರಣವಾಗಿದೆ.

ಈಗ ಆಗಬೇಕಾಗಿರುವ ಕೆಲಸ ಗ್ರಾಮಜೀವನ ಪೂರ್ಣ ನಾಶವಾಗದಂತೆ ನೋಡಿಕೊಳ್ಳುವ ಕಾರ್ಯ. ಅದಕ್ಕೆ ಬೇಕಾದ್ದೆಲ್ಲವನ್ನೂ ಮಾಡಬೇಕು. ಬೇಕಾದ ಹಣ ಖರ್ಚು ಮಾಡಲೇಬೇಕು. ಅದನ್ನು ರಾಜ್ಯವೇ ಹೊಂದಿಸಿಕೊಳ್ಳಬಹುದು, ಸಾಧ್ಯವಾಗದಿದ್ದರೆ ಕೇಂದ್ರ ಕೊಡಬಹುದು. ಪರಿಹಾರ ಕಾಯಂ ನೆಲೆಯಲ್ಲೇ ಆಗಬೇಕೆಂದರೆ ಅದು ಆರು ತಿಂಗಳಲ್ಲೋ ಒಂದು ವರ್ಷದಲ್ಲೋ ಆಗುವಂಥದ್ದಲ್ಲ.

ಮುಂಗಾರು
ಮಂಗಳವಾರ, ಜನವರಿ 21, 1986

ಜನಹಿತದ ರಾಜಕಾರಣ ಅಲ್ಲ

ಕಾಂಗ್ರೆಸ್ (ಐ) ಪಕ್ಷದ ಪದಾಧಿಕಾರ ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ಸಚಿವರಾದ ಅರ್ಜುನ್‌ಸಿಂಗ್, ಟಿ. ಅಂಜಯ್ಯ ಹಾಗೂ ನವಲ್ ಕಿಶೋರ್ ಶರ್ಮ ಅವರನ್ನೂ ರಾಜ್ಯ ಸಭೆಯ ಉಪಾಧ್ಯಕ್ಷೆ ನಜ್ಮಾ ಹೆಪ್ತುಲ್ಲಾ ಅವರನ್ನೂ ಪಕ್ಷದ ಕೆಲಸಕ್ಕೆ ಅಣಿಗೊಳಿಸಲಾಗಿದೆ. ಈ ತನಕ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಲೋಕಸಭಾ ಸದಸ್ಯ ಆಸ್ಕರ್ ಫೆರ್ನಾಂಡಿಸ್ ಅವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಘಟಕದ ಅಧ್ಯಕ್ಷರಾಗಿ ನೇಮಿಸಲಾಗಿದೆ. ಇನ್ನೊಬ್ಬ ಪ್ರಧಾನ ಕಾರ್ಯದರ್ಶಿ ಅಹ್ಮದ್ ಪಟೇಲರನ್ನು ಗುಜರಾತ್ ಪ್ರದೇಶ ಕಾಂಗ್ರೆ ಅಧ್ಯಕ್ಷರಾಗಿ ಕಳಿಸಲಾಗಿದೆ.

ಜನಗಳು ಬದಲಾಗಿದ್ದಾರೆ ಎಂಬುದಷ್ಟೇ ಹೊರತು ಪಕ್ಷದ ಅಧ್ಯಕ್ಷ, ಪ್ರಧಾನಿ ರಾಜೀವ ಗಾಂಧಿಯವರು ನಡೆಸಿರುವ ಈ ಕ್ಷಿಪ್ರ ಕಾರ್ಯಾಚರಣೆಗೆ ಬೇರಾವ ತಾತ್ವಿಕ ಅಥವ ಸೈದ್ಧಾಂತಿಕ ನೆಲೆಯೂ ಕಂಡು ಬರುವುದಿಲ್ಲ. ಪಕ್ಷದ ಸಾಮರ್ಥ್ಯವನ್ನು ಚುರುಕುಗೊಳಿಸಬೇಕು, ಸಾರ್ವಜನಿಕರ ಕಣ್ಣಿನಲ್ಲಿ ಅದಕ್ಕೆ ಹೊಸ ರೂಪವನ್ನು ಕೊಟ್ಟು ಪ್ರತಿಷ್ಠೆ ತಂದು ಕೊಡಬೇಕು ಎಂಬ ಇರಾದೆ ಮಾತ್ರ ಈ ಹೆಜ್ಜೆಯಲ್ಲಿ ಕಾಣಬರುವುದಾಗಿದೆ.

ಕರ್ನಾಟಕ ಮತ್ತು ಗುಜರಾತ್ ರಾಜ್ಯಗಳಲ್ಲಿನ ಕಾಂಗ್ರೆ ಘಟಕಗಳು ಇಂದು ಒಳ ಜಗಳಗಳ ಆಖಾಡಗಳಾಗಿ ಪರಿಣಮಿಸಿವೆ. ಅನೇಕ ತಿಂಗಳುಗಳ ಕಾಲದಿಂದ ಗುಜರಾತಿನಲ್ಲಿ ಮೀಸಲಾತಿ ವಿರೋಧಿ ಚಳವಳ ನಡೆಯುತ್ತಿದ್ದು ಅಲ್ಲಿ ಅಧಿಕಾರದಲ್ಲಿರುವ ಕಾಂಗ್ರೆ ಪಕ್ಷ ಕೂಡ ಎರಡು ಗುಂಪುಗಳಾಗಿ ಒಡೆದು ನಿಂತಿದೆ. ಅಲ್ಲಿ ಪ್ರದೇಶ ಕಾಂಗ್ರೆ ಅಧ್ಯಕ್ಷರಾಗಿ ಹೊಸಬರೊಬ್ಬರ ನೇಮಕ ಗುಂಪುಗಾರಿಕೆಯ ನಿರ್ಮೂಲನವೂ ಪಕ್ಷಕ್ಕೆ ಹೊಸ ರೂಪವನ್ನು ತಂದುಕೊಡುವುದೂ ಆಗಿದೆ. ಆದರೆ ಮೀಸಲಾತಿ ಪ್ರಶ್ನೆ ಸೂಕ್ತವಾಗಿ ತೀರ್ಮಾನಗೊಳ್ಳದೆ ಅಲ್ಲಿನ ರಾಜಕೀಯ ತಿಳಿಯಾದೀತೆಂದು ನಂಬುವುದು ಪೆದ್ದತನವೆನಿಸೀತು.

ಕರ್ನಾಟಕದ ಪರಿಸ್ಥಿತಿಯೇ ಬೇರೆ. ಇಲ್ಲಿ ಪಕ್ಷ ಅಧಿಕಾರದಲ್ಲಿ ಇಲ್ಲವಾದರೂ ಗುಂಪುಗುಳಿತನ ಬೆಳೆದಿದೆ. ನಾಳೆಯಾದರೂ ಈ ಪಕ್ಷ ಬೆಳೆದು ಅಥವ ಈಗ ಆಳುತ್ತಿರುವ ಪಕ್ಷದ ಪ್ರತಿಷ್ಠೆ ಕರಗಿ ಹೋಗಿ ಜನರ ಒಲವು ತಪ್ಪುತ್ತ ತಿರುಗಿ ಪಕ್ಷ ಅಧಿಕಾರಕ್ಕೆ ಬಂದೀತೆಂಬ ಆಶೆ ಹೊತ್ತು ಕಾದು ಕುಳಿತ ಮಂದಿ ಬಹು ಮಂದಿ ಇದರಲ್ಲಿದ್ದಾರೆ. ಈಗಲೇ ಆಯಕಟ್ಟಿನ ಠಾಣಗಳನ್ನು ಹುಡುಕಿ ಕುಳಿತುಬಿಡೋಣವೆಂಬ ತರಾತುರಿ ಬಹು ಮಂದಿಗೆ ಇದ್ದಂತಿದೆ. ಇದರಿಂದಾಗಿ ಗುಂಪುಗಳು ಹುಟ್ಟಿಕೊಂಡಿವೆ. ಪರಸ್ಪರ ಆರೋಪ ಪ್ರತ್ಯಾರೋಪಗಳು ಮುಸಗಿವೆ. ಗುಂಪುಗಳು ಖೋಟಾ ಸದಸ್ಯತನ ತಂತ್ರಕ್ಕಿಳಿದಿವೆಯೆಂದೂ ಅಪಾದನೆಗಳು ಕೇಳಿ ಬಂದಿವೆ.

ಈ ಹಿನ್ನೆಲೆಯಲ್ಲಿ ಕೆಪಿಸಿಸಿ (ಐ) ಅಧ್ಯಕ್ಷ ಸ್ಥಾನಕ್ಕೆ ಆಸ್ಕರ್ ಫೆರ್ನಾಂಡಿಸ್ ಅವರ ನೇಮಕವಾಗಿದೆ. ರಾಜ್ಯ ಘಟಕದಲ್ಲಿನ ಗುಂಪುಗುಳಿತನ ನಿವಾರಣೆಯೂ ಜಾಗ ಹಿಡಿದು ಕೂತು ತಂತ್ರಗಾರಿಕೆ ನಡೆಸಲಿಚ್ಛಿಸುವವರನ್ನು ದೂರ ಕುಳ್ಳಿರಿಸುವುದೂ ಈ ಮಹತ್ವದ ಹೆಜ್ಜೆಯ ಉದ್ದೇಶವಿರುವಂತೆ ಕಾಣಿಸುತ್ತದೆ. ಆಸ್ಕರ್ ಫೆರ್ನಾಂಡಿಸ್ ಅವರು ಯುವಕರು. ಕಾಂಗ್ರೆಸ್ ಕಾರ್ಯಕರ್ತರಾಗಿ ದುಡಿದ, ಹತ್ತಾರು ವರ್ಷಗಳ ಜನಸೇವೆಯ ಹಿನ್ನೆಲೆ ಅವರಿಗಿದೆಯಾದರೂ ರಾಜಕಾರಣದ ಆಳಅಗಲಗಳನ್ನು ಇನ್ನೂ ಅಳೆದವರಲ್ಲ. ರಾಜಕಾರಣದ ಒಯ್ಯಲು, ಸುಳಿಗಳು ಹಾಗೂ ಮೊಸಳೆಗಳ ಅಸ್ತಿತ್ವದ ಅರಿವು ಅವರಿಗೆ ಇನ್ನಷ್ಟೇ ಆಗಬೇಕಾಗಿದೆ.

ಪಕ್ಷವನ್ನು ಬಲಪಡಿಸಬೇಕು ಎಂಬ ರಾಜೀವ ಗಾಂಧಿಯವರ ಬಯಕೆಯ ಬಗ್ಗೆಯೂ ಪ್ರಾಮಾಣಿಕತೆಯ ಬಗ್ಗೆಯೂ ಎರಡು ಮಾತಿಲ್ಲ. ಆದರೆ ಅದಕ್ಕೆ ಅವರು ಹಿಡಿದಿರುವ ದಾರಿ ಮಾತ್ರ ಅವರ ತಾಯಿಯದ್ದಕ್ಕಿಂತ ಬೇರೆಯಾದುದಲ್ಲ. ನೇಮಕದ ರಾಜಕೀಯವನ್ನೇ ಅವರು ಮಾಡಹೊರಟಿದ್ದಾರೆ. ನೇಮಕದ ಈ ರಾಜಕೀಯದಲ್ಲಿ ಎಲ್ಲ ಅಧಿಕಾರಗಳೂ ಮೇಲ್ಮುದಿಯಿಂದ ಇಳಿದು ಬರುವುದರಿಂದ ಕೆಳಗಿನ ಹಂತಗಳಲ್ಲಿ ಯಾರೂ ಯಾರಿಗೂ ಜವಾಬ್ದಾರರಲ್ಲ. ಅಧಿಕಾರವೂ ಇರುವುದಿಲ್ಲ. ಆದ್ದರಿಂದ ಹೊಣೆಗಾರಿಕೆಯೂ ಇರುವುದಿಲ್ಲ. ಎಲ್ಲವೂ ಸೂತ್ರವಾಡಿಸಿದಂತೆ ನಡೆದು ಬಿಡುತ್ತದೆ. ಆದರೆ ಎಡವಿದಾಗ ಮಾತ್ರ ಎಲ್ಲವೂ ತಲೆ ಕೆಳಗಾಗುತ್ತದೆ. ಇಂದು ಕರ್ನಾಟಕದಲ್ಲಿ ಆಗಿರುವುದು ಅದೇ.

ಆರು ತಿಂಗಳ ಹಿಂದೆ ಕೆ. ಎಚ್. ರಂಗನಾಥ್ ಅವರಂತಹ ಹಿರಿಯ, ಅನುಭವಿ ರಾಜಕಾರಣಿಯನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಿಸಿದಾಗ ಇಲ್ಲಿ ಎಲ್ಲವೂ ಸರಿಯಾಗುವುದೆಂಬ ನಿರೀಕ್ಷೆ ಆ ಪಕ್ಷದ ಕಾರ್ಯಕರ್ತರದ್ದಾಗಿತ್ತು. ಆದರೆ ಯಾವುದೂ ಸರಿಯಾಗಲಿಲ್ಲ. ಇಂದು ಮತ್ತೆ ಇನ್ನೊಬ್ಬರ ನೇಮಕದಿಂದ ಅದು ಸರಿಯಾದೀತೇ?

ಪ್ರಜಾಪ್ರಭುತ್ವದ ನೆಲೆಯಲ್ಲಿ ಈ ಪಕ್ಷವನ್ನು ಕಟ್ಟಲಾಗಿಲ್ಲವೆಂದೇ ಇಂತಹ ನೋವುಗಳನ್ನೂ ಸಂಘಟನೆಯ ಸಮಸ್ಯೆಗಳನ್ನೂ ಅದು ಎದುರಿಸಬೇಕಾಗಿದೆ. ಸುಮಾರು ಒಂದೂವರೆ ದಶಕದಿಂದ ಈ ಪಕ್ಷದಲ್ಲಿ ಸಾಂಸ್ಥಿಕ ಚುನಾವಣೆ ಆಗಿಲ್ಲ. ಸದ್ಯಕ್ಕಂತೂ ಆಗುವ ಸಂಭವವೂ ಇಲ್ಲ. ಕಳೆದ ವರ್ಷದಲ್ಲಿ ಆಗುವುದೆಂದು ಹೇಳಲಾದ ಈ ಚುನಾವಣೆ ಮತ್ತೆ ಈ ವರ್ಷದ ಜುಲೈ ತಿಂಗಳಿಗೆ ಮುಂದಕ್ಕೆ ಹೋಗಿದೆ.

ಆಂತರಿಕ ಪ್ರಜಾಪ್ರಭುತ್ವವಿಲ್ಲದ ಯಾವ ಪಕ್ಷದಲ್ಲಿಯೂ ನಾಯಕತ್ವವು ಕೆಳ ಹಂತದಿಂದ ಬೆಳೆದು ಬರಲಾರದು. ಬುದ್ಧಿ ಬಲವೂ ಅದಕ್ಕೆ ದೊರೆಯದು. ನೇಮಕದ ರಾಜಕಾರಣದಲ್ಲಿ ನಾಯಕನಿಗೆ ಡೊಗ್ಗು ಸಲಾಮು ಹೊಡೆಯುವ ಪದಾಧಿಕಾರಿ ಕೂಟ ನಿರ್ಮಾಣವಾದೀತೇ ಹೊರತು ಜನಮನವನ್ನು–ಕಾರ್ಯಕರ್ತರ ಅಭಿಮತವನ್ನು ಪ್ರತಿನಿಧಿಸುವ ಮುಖಂಡರು ಉಂಟಾಗಲಾರರು. ನೇಮಕದ ಈ ಪರಂಪರೆಯಿಂದ ಅಧಿಕಾರಕ್ಕಾಗಿ ಕಚ್ಚಾಟದ ಕ್ಷುದ್ರ ರಾಜಕಾರಣ ಬೆಳೆದೀತೇ ಹೊರತು ಜನಹಿತದ ರಾಜಕಾರಣ ಬೆಳೆಯದು.

ಮುಂಗಾರು

ಬುಧವಾರ, ಜನವರಿ 22, 1986

ನಾಚಿಕೆಗೇಡು

ಯಾವುದೇ ಜನಪ್ರತಿನಿಧಿ ಸಭೆಯ ಘನತೆಯನ್ನು ಕುಂದಿಸುವಂತಹ ಘಟನೆಯೊಂದು ಕರ್ನಾಟಕ ರಾಜ್ಯದ ವಿಧಾನ ಮಂಡಲದ ಮುಂಗಡ ಪತ್ರ ಅಧಿವೇಶನದ ಮೊದಲ ದಿನ ವಿಧಾನಸಭೆಯಲ್ಲಿ ನಡೆದು ಹೋಯಿತು. ಮಹಾರಾಷ್ಟ್ರ ಏಕೀಕರಣ ಸಮಿತಿಯ ಇಬ್ಬರು ಶಾಸಕರು ಭಾಷೆಯ ಸಂಬಂಧವಾಗಿ ತಮ್ಮ ಪ್ರತಿಭಟನೆ ತೋರಿ ಸಭಾ ತ್ಯಾಗ ನಡೆಸುತ್ತಿದ್ದಂತೆ ಕನ್ನಡದ ಗುತ್ತಿಗೆ ಹಿಡಿದವರಂತೆ ವ್ಯವಹರಿಸುವ ಇಬ್ಬರು ಶಾಸಕರು ಅವರ ಮೈ ಮೇಲೆ ಏರಿ ಹೋಗಿ ರಟ್ಟೆ ಹಿಡಿದು ಅವರ ರುಮಾಲನ್ನು ಉರುಳಿಸಿ ದಾಂಧಲೆ ನಡೆಸಿದರು. ಇಡಿಯ ಸದನ ಸಭ್ಯರಿಗೆ ಅಗೌರವ ತರುವ ಈ ಕೆಲಸವನ್ನು ದಿಗ್ಭ್ರಮೆಯಿಂದ ನೋಡಿತು.

ನಮ್ಮದು ಪ್ರಜೆಗಳ ಅಭಿಪ್ರಾಯದಂತೆ ಆಡಳಿತ ನಡೆಸುವ ಸಮಾಜ ವ್ಯವಸ್ಥೆ. ಇಲ್ಲಿ ಭಿನ್ನಾಭಿಪ್ರಾಯಗಳಿಗೆ ಅವಕಾಶವಿದೆ. ಯಾರೂ ಯಾರ ಧ್ವನಿಯನ್ನೂ ಅಡಗಿಸಲು ಯತ್ನಿಸುವುದು ಈ ವ್ಯವಸ್ಥೆಯಲ್ಲಿ ಸಲ್ಲದು. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಈ ವ್ಯವಸ್ಥೆಯನ್ವಯವೇ ಆರಿಸಿ ಬಂದವರು. ಬಹು ಕಾಲದಿಂದ ಈ ಸಂಸ್ಥೆಯ ಮಂದಿ ರಾಜ್ಯ ವಿಧಾನ ಸಭೆಗೆ ಆರಿಸಿಬರುತ್ತಿದ್ದಾರೆ. ತಾವು ಪ್ರತಿನಿಧಿಸುವ ಜನಗಳ ಹಿತಾಸಕ್ತಿ ರಕ್ಷಣೆಯ ಎಲ್ಲ ಹಕ್ಕು ಅಧಿಕಾರ ಹಾಗೂ ಹೊಣೆಗಾರಿಕೆ ಅವರಿಗುಂಟು. ಜನರ ಅಭಿಪ್ರಾಯಕ್ಕೆ ವಿಧಾನಸಭೆಯೆಂಬ ವೇದಿಕೆಯಲ್ಲಿ ದನಿಕೊಡುವ ಕರ್ತವ್ಯವನ್ನು ಅವರು ಬಹುಕಾಲದಿಂದ ಮಾಡಿಕೊಂಡು ಬಂದಿದ್ದಾರೆ. ಅದನ್ನೇ ಸೋಮವಾರವೂ ಮಾಡಿದ್ದಾರೆ.

ನಮಗೆ ಮಹಾರಾಷ್ಟ್ರ ಏಕೀಕರಣ ಸಮಿತಿಯವರೊಡನೆ ಭಿನ್ನಾಭಿಪ್ರಾಯ ಇರಬಹುದು. ಅವರ ವಾದವನ್ನು ಈ ರಾಜ್ಯದ ಕನ್ನಡಿಗರೂ ಅವರ ಪ್ರತಿನಿಧಿಗಳೂ ಒಪ್ಪದೆ ಇರಬಹುದು. ಬೆಳಗಾವಿಯ ವಿಚಾರದಲ್ಲಿ ಕನ್ನಡಿಗರಿಗೆ ಅವರದೇ ಆದ ವಾದವೂ ಅದಕ್ಕೆ ಸಮರ್ಥನೆಯೂ ಇರಬಹುದು. ಮಹಾಜನ ವರದಿಯ ಶಿಫಾರಸಿನಂತೆ ಬೆಳಗಾವಿ ನಗರ ಕರ್ನಾಟಕದಲ್ಲಿಯೇ ಉಳಿಯುತ್ತದೆ. ಇದು ವಾಸ್ತವಿಕತೆ.

ಆದರೆ ಜನರಿಂದ ಆಯ್ಕೆಗೊಂಡು ಬಂದಿರುವ ಎಂ. ಇ. ಎಸ್. ಶಾಸಕರಿಗೆ ಅವರ ಅಹವಾಲುಗಳನ್ನು ಹೇಳಿಕೊಳ್ಳಲು ಪ್ರಜಾಸತ್ತಾತ್ಮಕವಾದ ವಿಧಾನದಲ್ಲಿ ತಮಗೆ ಸರಿದೋರದಿರುವ ಸರಕಾರದ ಧೋರಣೆಗಳನ್ನೂ ಹೆಜ್ಜೆಗಳನ್ನೂ ಪ್ರತಿಭಟಿಸಲು ಸಕಲ ಅವಕಾಶಗಳಿವೆ. ಈ ಅವಕಾಶಗಳನ್ನು ಮೊಟಕು ಮಾಡುವುದು ಸಲ್ಲದು. ಅಲ್ಪಸಂಖ್ಯಾತರು ಸದಾ ಭಯದ ನೆರಳಲ್ಲೇ ಬದುಕುವವರು ಎಂಬ ಸತ್ಯವನ್ನು ಬಹುಸಂಖ್ಯಾತರು ಮರೆಯಬಾರದು. ಯಾವುದೇ ಸಮಾಜದಲ್ಲಿ - ಅದು ಪ್ರಜಾಪ್ರಭುತ್ವವೇ ಇರಲಿ - ಒಂದಲ್ಲ ಒಂದು ರೂಪದಲ್ಲಿ ಅಲ್ಪಸಂಖ್ಯಾತರ ಮೇಲೆ ಬಹುಸಂಖ್ಯಾತರ ದಮನ, ದಬ್ಬಾಳಿಕೆಗಳು ನಡೆದೇ ಇರುತ್ತವೆ. ಈ ಸತ್ಯವನ್ನು ಸ್ವೀಕರಿಸಿಯೇ ಪ್ರಜಾಪ್ರಭುತ್ವಗಳಲ್ಲಿ ಅಲ್ಪಸಂಖ್ಯಾತರಿಗೆ ವಿಶೇಷ ತೆರನಾದ ಹಕ್ಕು- ಅವಕಾಶಗಳನ್ನು ಒದಗಿಸಲಾಗಿದೆ.

ವಿಧಾನಸಭೆಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯ ಶಾಸಕರು ಕನ್ನಡ ಭಾಷೆಯನ್ನು ವಿರೋಧಿಸಿ ಮಾತನಾಡಿದ್ದರಿಂದ ಯಾರಿಗೂ ಅನ್ಯಾಯವಾಗಿಲ್ಲ. ಕನ್ನಡದಲ್ಲಿ ಕಲಾಪ ನಡೆಸುವ ಬಹುಸಂಖ್ಯಾತರ ಹಕ್ಕಿಗೆ ಯಾವ ರೀತಿಯ ಲೋಪವೂ ಇದರಿಂದ ಬರುವುದಿಲ್ಲ. ಐವರು ಶಾಸಕರಿಂದ ಕರ್ನಾಟಕ ವಿಧಾನ ಸಭೆಯ ಮೇಲೆ ಯಾವ ತೀರ್ಮಾನವನ್ನೂ ಹೇರುವುದು ಅಸಾಧ್ಯವೆಂಬ ಸತ್ಯ ಎಲ್ಲರಿಗೂ ತಿಳಿದದ್ದೇ ಆಗಿದೆ. ಆದ್ದರಿಂದಲೇ ಎಂ.ಇ.ಎಸ್. ಶಾಸಕರ ನಡವಳಿಕೆಯಿಂದ ಕನ್ನಡದ ಯಾರೂ ಭೀತಿಗೊಳ್ಳುವುದಿಲ್ಲ. ತಮಗೆ ಅವಮಾನವಾಯಿತೆಂದು ಹೌಹಾರುವುದಿಲ್ಲ. ಎಂ.ಇ.ಎಸ್.ನವರು ಸಾಂಪ್ರದಾಯಿಕವಾಗಿ, ಸಂಸದೀಯ ನಡವಳಿಕೆಯ ನಿಯಮಗಳಿಗೆ ಅನುಗುಣವಾಗಿ ತಮ್ಮ ಭಿನ್ನಾಭಿಪ್ರಾಯ ಹೇಳುತ್ತ ಬಂದಿದ್ದಾರೆ - ಮುಂದೆಯೂ ಹೇಳಬಹುದು.

ಆದರೆ ಕನ್ನಡದ ಹಿತರಕ್ಷಣೆಯ ಗುತ್ತಿಗೆ ಹಿಡಿದವರಂತೆ ವ್ಯವಹರಿಸುವ ಕೆಲಮಂದಿ ಅತ್ಯುತ್ಸಾಹಿಗಳಿಗೆ ಈ ಸತ್ಯ ಗೋಚರವಾದಂತೆ ಕಾಣಿಸುತ್ತಿಲ್ಲ. ಕನ್ನಡದ ಹಿತರಕ್ಷಣೆಗಾಗಿಯೋ, ವ್ಯಕ್ತಿ ಪ್ರತಿಷ್ಠೆ ಮೆರೆಯಲೆಂದೋ ಈ ಮಂದಿ ವಿಧಾನ ಸಭೆಯಂತಹ ಗಂಭೀರವಾದ, ಸದುದ್ದೇಶಪೂರಿತ ಕಾರ್ಯ ಕಲಾಪಗಳು ನಡೆಯಬೇಕಾದ ವೇದಿಕೆಯಲ್ಲಿ ಮಂಗಚೇಷ್ಟೆಯಂತಹ ಹೊಲಸು ನಡವಳಿಕೆ ಪ್ರದರ್ಶಿಸಿದ್ದಾರೆ. ನಮ್ಮ ಸಂಸದೀಯ ವೇದಿಕೆಗಳ ವ್ಯವಹಾರದ ಗುಣಮಟ್ಟ ಇತ್ತೀಚೆಗೆ ಇಳಿದಿರುವುದೂ ಇಂತಹವರ ಕುಚೇಷ್ಟೆಗಳಿಂದಲೇ ಆಗಿದೆ. ಈ ಮಂದಿ ಸೋಮವಾರ ತಮ್ಮ ನಡವಳಿಕೆಯಿಂದ ಕರ್ನಾಟಕ ವಿಧಾನ ಮಂಡಲದ ಘನತೆಗೇ ಮಸಿ ಬಳಿದಿದ್ದಾರೆ. ಕನ್ನಡದ ಹಿತರಕ್ಷಣೆಯ ಸೈನಿಕರಾಗುವ ಹುಚ್ಚಿನಲ್ಲಿ ಕನ್ನಡಿಗರೆಲ್ಲರೂ ನಾಚಿ ತಲೆತಗ್ಗಿಸುವಂತೆ ಮಾಡಿದ್ದಾರೆ.

ಇಂತಹ ಚೇಷ್ಟೆಗಳಿಂದ ಕನ್ನಡದ ಹಿತರಕ್ಷಣೆ ಆಗುವುದಿಲ್ಲ. ಅದಕ್ಕೆ ಹಾನಿಯೇ ಆಗುತ್ತದೆ. ಕನ್ನಡದ ಹಿತರಕ್ಷಣೆ ಅದನ್ನು ಕಟ್ಟುವುದರಿಂದ ಆಗುತ್ತದೆ. ಕನ್ನಡವನ್ನಾಗಲಿ ನಾಡನ್ನಾಗಲಿ ಕಟ್ಟುವ ವಿಧಾನ ಮಾತ್ರ ಇದಲ್ಲ.

ಮುಂಗಾರು

ಶುಕ್ರವಾರ, ಜನವರಿ 24, 1986

ಯಾವ ರಾಜಕೀಯ ?

ದಾಂಧಲೆ ನಡೆಸಿ ಅಧಿಕಾರ ಹಿಡಿಯಲು ಅವಕಾಶವಿಲ್ಲ ಎಂದು ರಾಜ್ಯದ ಗೃಹ ಸಚಿವ ಬಿ. ರಾಚಯ್ಯನವರು ವಿಧಾನಸಭೆಯಲ್ಲಿ ಸಾರಿದ್ದಾರೆ. ಸಾರ್ವಜನಿಕರ ನೆಮ್ಮದಿ ಭಂಗಗೊಳಿಸಿ ಅಧಿಕಾರ ಕಸಿಯಲು ಯಾರಿಗೂ ಅವಕಾಶ ಕೊಡುವುದಿಲ್ಲವೆಂದು ಅವರು ಹೇಳಿದ್ದಾರೆ. ರಾಜ್ಯದ ಬೆಂಗಳೂರು ಮತ್ತಿತರ ಕಡೆಗಳಲ್ಲಿ ನಡೆಯುತ್ತಿರುವ ಕೊಲೆ–ಸುಲಿಗೆ–ದರೋಡೆಗಳ ಸಂಬಂಧವಾಗಿ ವಿಧಾನಸಭೆಯಲ್ಲಿ ನಡೆದ ಚರ್ಚೆಗೆ ಉತ್ತರವಾಗಿ ರಾಚಯ್ಯನವರು ಈ ಮೇಲಿನ ಮಾತುಗಳನ್ನು ಹೇಳಿದ್ದಾರೆ.

ನಾಡಿನಲ್ಲಿ ಅಶಾಂತಿ, ಅಭದ್ರತೆ ಕಾಣಿಸಿಕೊಂಡಾಗ, ಜನರ ಜೀವಕ್ಕೆ ಅಪಾಯ ಬಂದಾಗ ಅದನ್ನೆಲ್ಲ ಹೋಗಲಾಡಿಸಬೇಕಾದ್ದು ಆಯಾ ನಾಡಿನ ಆಡಳಿತ ನೋಡಿಕೊಳ್ಳುತ್ತಿರುವ ಸರಕಾರದ ಹೊಣೆಗಾರಿಕೆ. ಶಾಂತಿ, ಸುವ್ಯವಸ್ಥೆ, ಸುಭಿಕ್ಷೆ—ಇವಿಷ್ಟು ಜನಸಮುದಾಯಕ್ಕೆ ದೊರಕುವಂತೆ ಏರ್ಪಡಿಸುವುದು ಯಾವುದೇ ಸರಕಾರದ ಕರ್ತವ್ಯ. ಜನರಿಗೆ ಜೀವಭಯವಿರುವ ಊರಿನಲ್ಲಿ ಸಾಮಾಜಿಕ ಕ್ಷೋಭೆ ಇರುತ್ತದೆ. ಇದರಿಂದ ಅಂಥ ಸಮಾಜದ ಪ್ರಗತಿಗೆ ಅಡ್ಡಿಯಾಗುತ್ತದೆ. ಸರಕಾರಗಳು ತಮ್ಮ ಕರ್ತವ್ಯಗಳನ್ನು ಸೂಕ್ತವಾಗಿ ನಿರ್ವಹಿಸಿದಾಗ ಮಾತ್ರವೇ ಪ್ರಗತಿಯ ಗತಿ ಚುರುಕಾಗಿರುತ್ತದೆ.

ಸರಕಾರಗಳು ಕರ್ತವ್ಯದಲ್ಲಿ ವಿಫಲವಾದಾಗ ಜನರು ಆ ಬಗ್ಗೆ ವಿಚಾರಿಸಬೇಕಾಗುತ್ತದೆ. ಜನರ ಹಕ್ಕು–ಅವಕಾಶಗಳ ಬಗ್ಗೆ ಕೇಳಲು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಏರ್ಪಾಡುಗಳಿವೆ. ಆಳುವ ಪಕ್ಷದಂತೆಯೇ ವಿರೋಧ ಪಕ್ಷವೂ ಜನರ ಪ್ರತಿನಿಧಿಯೇ ಆಗಿದೆ.

ಇಂದು ರಾಜ್ಯದಲ್ಲಿ ಹಲವು ಕಡೆ ಕೊಲೆ-ಸುಲಿಗೆ-ದರೋಡೆಗಳು ನಡೆದಿವೆ. ಇದು ಯಾಕೆ ನಡೆದಿವೆ, ಯಾರಿಂದ ನಡೆದಿವೆ, ಸರಕಾರ ಏನು ಮಾಡುತ್ತಿದೆ ಎಂದು ವಿರೋಧ ಪಕ್ಷೀಯರು ವಿಧಾನಸಭೆಯಲ್ಲಿ ಕೇಳಿದ್ದಾರೆ. ಇಂಥ ಘಟನೆಗಳನ್ನು ತಡೆಯಲು ಸರಕಾರ ಏನು ಕ್ರಮ ಕೈಗೊಂಡಿದೆಯೆಂದು ಪ್ರತಿಪಕ್ಷದವರು ಕೇಳಿದ್ದಾರೆ. ಶಾಂತಿ-ಸುವ್ಯವಸ್ಥೆ ಪಾಲನೆ ಮಾಡಲಾಗದ ಗೃಹ ಸಚಿವರು ರಾಜೀನಾಮೆ ಕೊಡಬೇಕೆಂದೂ ಅವರು ಆಗ್ರಹಿಸಿದ್ದಾರೆ. ಇದೇನೂ ರಾಜಕೀಯ ಅಲ್ಲ. ಬೆಂಗಳೂರಿನಲ್ಲಿ ನಡೆದಂತಹ ಅನಿಷ್ಟ ವಿದ್ಯಮಾನಗಳು ನಡೆದರೆ ಯಾರೂ ಇಂತಹ ಬೇಡಿಕೆಗಳನ್ನು ಮಂಡಿಸುವುದು ಸಹಜವೇ ಆಗಿದೆ.

ಇದರಲ್ಲಿ ರಾಚಯ್ಯನವರು ರಾಜಕೀಯವನ್ನು ಕಂಡಿದ್ದಾರೆ. ಬೆಂಗಳೂರಿನ ದರೋಡೆ ಪ್ರಕರಣಕ್ಕೆ ಯಾರದೋ ಕುಮ್ಮಕ್ಕು ಉಂಟೆಂಬ ಅರ್ಥ ಬರುವಂತೆ ಅವರು ಮಾತನಾಡಿದ್ದಾರೆ. ಸರಕಾರಕ್ಕೆ ಕೆಟ್ಟ ಹೆಸರು ತರಲು ಯಾರೋ ಇದನ್ನೆಲ್ಲ ಮಾಡಿಸುತ್ತಿದ್ದಾರೆಂಬ ಧಾಟಿ ಅವರ ಉತ್ತರದಲ್ಲಿದೆ. ಆದ್ದರಿಂದಲೇ ಅವರು ದಾಂಧಲೆ ಮಾಡಿ ಅಧಿಕಾರ ಹಿಡಿಯಲು ಅವಕಾಶ ಕೊಡುವುದಿಲ್ಲ–ಎಂದು ಹೇಳುತ್ತಿದ್ದಾರೆ. ರೌಡಿಗಳನ್ನು ಪೋಷಿಸಿ ದುಷ್ಕೃತ್ಯಗಳನ್ನೆಸಗಲು ಅವರನ್ನು ಬಳಸುತ್ತಿರುವವರನ್ನು ಹಿಡಿದು ಬಲಿ ಹಾಕುವವರೆಗೆ ತಾವು ಗೃಹ ಸಚಿವ ಸ್ಥಾನವನ್ನು ಬಿಟ್ಟು ಕೊಡುವುದಿಲ್ಲವೆಂದೂ ಅವರು ಪ್ರತಿಜ್ಞೆ ಮಾಡಿದ್ದಾರೆ.

ಇದರಿಂದ ರಾಚಯ್ಯನವರ ಮನಸ್ಸಿನಲ್ಲಿ ಏನಿದೆ ಅನ್ನುವುದು ವಿಚಾರವಂತರೆಲ್ಲರಿಗೂ ಅರ್ಥವಾಗುತ್ತದೆ. ಬೆಂಗಳೂರಿನ ದರೋಡೆಗಳ ಹಿಂದೆ ರಾಜಕೀಯ ಶಕ್ತಿಗಳಿವೆ ಎಂದು ಅವರು ಹೇಳಿದಂತಾಯಿತು. ತಮ್ಮನ್ನು ಅಧಿಕಾರದಿಂದ ಉರುಳಿಸಲು ಈ ಕೃತ್ಯಗಳನ್ನು ಪ್ರಚೋದಿಸಲಾಗುತ್ತಿದೆ, ಅದಕ್ಕಾಗಿ ರೌಡಿಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂದು ಆಪಾದಿಸಿದಂತಾಯಿತು.

ರಾಜಕೀಯ ಪಕ್ಷಗಳು ಇಂತಹ ಕುತಂತ್ರಗಳನ್ನು ನಡೆಸುವುದಿಲ್ಲವೆಂದು ನಾವೇನೂ ವಾದಿಸುವುದಿಲ್ಲ. ನಮ್ಮ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳೂ ರಾಜಕಾರಣಿಗಳೂ ಇಂತಹ ತಂತ್ರಗಳನ್ನೆಲ್ಲ ಮಾಡಿಕೊಂಡೇ ಬಂದಿದ್ದಾರೆ. ರೌಡಿಗಳಿಗೂ ಕಳ್ಳಕಾಕರಿಗೂ ರಾಜಕಾರಣಿಗಳು ಬಹಳ ಹತ್ತಿರದವರೆಂಬ ಸತ್ಯ ರಾಚಯ್ಯನವರಂತೆ ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ.

ಇಲ್ಲಿನ ಪ್ರಶ್ನೆ ಅದಲ್ಲ. ಇಂದಿನ ಈ ವಿದ್ಯಮಾನಗಳಲ್ಲಿ, ಬೆಂಗಳೂರಿನ, ರಾಯಬಾಗದ, ಬಂಟ್ವಾಳದ ದರೋಡೆ ಪ್ರಕರಣಗಳಲ್ಲಿ ಯಾರು ಒಳಗೊಂಡಿದ್ದಾರೆ, ಯಾರು ಅದರ ಪ್ರಚೋದಕರು. ಈ ಅನಿಷ್ಟ ಶಕ್ತಿಗಳ ಪೋಷಕರು ಯಾರು ಎಂಬುದು. ಇವುಗಳ ಹಿಂದೆ ರಾಜಕಾರಣಿಗಳಿದ್ದಾರೆಯೇ? ಸರಕಾರವನ್ನು ಉರುಳಿಸುವುದಕ್ಕಾಗಿ, ರಾಚಯ್ಯನವರಿಗೆ ಕೆಟ್ಟ ಹೆಸರು ತರುವುದಕ್ಕಾಗಿ ಇದನ್ನೆಲ್ಲ ನಡೆಸಲಾಗುತ್ತಿದೆಯೇ?

ರಾಚಯ್ಯನವರ ಕೈಯಲ್ಲಿ ಒಂದು ದೊಡ್ಡ ಪೊಲೀಸ್ ಪಡೆಯೇ ಇದೆ. ಅಪರಾಧ ತಜ್ಞರಿದ್ದಾರೆ. ಅನುಭವಶಾಲಿ ಅಧಿಕಾರಿಗಳಿದ್ದಾರೆ. ಸಿ.ಓ.ಡಿ. ಇದೆ. ಇವರನ್ನೆಲ್ಲ ಬಳಸಿಕೊಂಡು ಈ ಅಪರಾಧ ನಡೆಸಿದವರನ್ನು ಬಯಲಿಗೆ ತರಬೇಕು. ಇದರಲ್ಲಿ ರಾಜಕೀಯ ಇದ್ದರೆ ತಪಾಸಣೆ ನಡೆಸಿ ಜನರ ಗಮನಕ್ಕೆ ತರಬೇಕು. ರಾಚಯ್ಯನವರು ಈ ಕೆಲಸ ಮಾಡಬೇಕೆಂದೇ ವಿರೋಧ ಪಕ್ಷೀಯರು ಅವರ ರಾಜೀನಾಮೆ ಕೇಳಿದ್ದಾರೆ.

ಕೊಲೆ ದರೋಡೆಗಳು ಸಾಮಾಜಿಕ ಅನಿಷ್ಟಗಳು. ಅದಕ್ಕೆ ಸಾಮಾಜಿಕವಾದ ಹಾಗೂ ಆರ್ಥಿಕವಾದ ಕಾರಣಗಳಿವೆ. ಅವುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಸರಕಾರಗಳು ಪ್ರವರ್ತಿಸಬೇಕು. ತಪ್ಪುದಾರಿ ತುಳಿಯುವ ಯುವಕರೂ ಇರುತ್ತಾರೆ. ಅಂಥವರನ್ನು ಸರಿದಾರಿಗೆ ತರುವ ಪ್ರಯತ್ನವೂ ನಡೆಯಬೇಕು. ಆಡಳಿತ ನಿರ್ವಹಿಸುವವರಿಗೆ ಈಯೆಲ್ಲಾ ಹೊಣೆಗಾರಿಕೆ ಇರುತ್ತದೆ.

ಅದನ್ನು ನಿರ್ವಹಿಸುವತ್ತ ಗಮನ ಹರಿಯಬೇಕು. ಅಪಾದನೆ ಬಂತು ಎಂದಾಕ್ಷಣ ಅದರಲ್ಲಿ ರಾಜಕೀಯ ಕಾಣುವುದು ತರವಲ್ಲ.

ಮುಂಗಾರು
ಆದಿತ್ಯವಾರ, ಜನವರಿ 26, 1986

ಪಟ್ಟಭದ್ರ ಮಾಧ್ಯಮಗಳು

ಈ ದೇಶದಲ್ಲಿ ಸಮೂಹ ಮಾಧ್ಯಮಗಳು ಪಟ್ಟಭದ್ರರ ಹಿಡಿತದಲ್ಲಿರುವುದರಿಂದ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವುದು ಅಸಾಧ್ಯವಾಗಿದೆ ಯೆಂದು ಸಾಹಿತಿ ಚದುರಂಗ ಅವರು ಅಭಿಪ್ರಾಯಪಟ್ಟಿದ್ದಾರೆ.

ಅಕ್ಷರಜ್ಞಾನ ಹೊಂದಿದವರು ಸರಾಸರಿ ಸುಮಾರು 35ನ್ನು ಮೀರದೆ ಇರುವ ಈ ದೇಶದಲ್ಲಿ ಪತ್ರಿಕೆಗಳ ಮಾಧ್ಯಮವು ತುಂಬಾ ಸೀಮಿತವಾದುದು. ಇದರಿಂದಾಗಿ ಆಕಾಶವಾಣಿ ಹಾಗೂ ದೂರದರ್ಶನದ ಮಾಧ್ಯಮಗಳು ಬಲು ಪ್ರಭಾವಶಾಲಿಯಾಗಿವೆ. ಈ ಎರಡೂ ವಿಧದ ಮಾಧ್ಯಮಗಳು (ಪತ್ರಿಕೆ ಹಾಗೂ ರೇಡಿಯೋ ಟಿವಿ) ಕೂಡ ಇಂದು ಪಟ್ಟಭದ್ರರ ಹಿಡಿತದಲ್ಲಿವೆ ಎಂಬುದು ನಿಸ್ಸಂದೇಹ. ಇಂತಹ ಹಿಡಿತದಿಂದಾಗಿ ಜನಸಾಮಾನ್ಯರಿಗೆ ಇವುಗಳಿಂದ ಸಿಗಬಹುದಾದ ನೈಜ ಪ್ರಯೋಜನದ ಅರ್ಧಾಂಶ ಕೂಡ ದೊರೆಯುತ್ತಿಲ್ಲ ಎನ್ನುವುದು ವಾಸ್ತವ.

ಆಕಾಶವಾಣಿ ಹಾಗೂ ಟಿ.ವಿ.ಯನ್ನು ಈ ದೇಶದಲ್ಲಿ ಸರಕಾರವೇ ನಿಯಂತ್ರಿಸುತ್ತಿದೆ. ಆಳುವ ಪಕ್ಷದಲ್ಲಿ, ಸರಕಾರದಲ್ಲಿ ಕಲ್ಪನಾ ಶಕ್ತಿಯೂ ವಿಚಾರಶಕ್ತಿಯೂ ಕಡಿಮೆ ಇರುವ ಜನಗಳೇ ತುಂಬಿರುವುದರಿಂದ ಈ ಮಾಧ್ಯಮಗಳು ಪ್ರಸಾರ ಮಾಡುವ ಕಾರ್ಯಕ್ರಮಗಳ ಗುಣಮಟ್ಟ ಕಳಪೆಯದ್ದಾಗಿದೆ. ಆಳುವ ಪಕ್ಷದ ಸ್ಥಾಪಿತ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕೆ ಆಕಾಶವಾಣಿ ಹಾಗೂ ಟಿ.ವಿ. ಗಳು ಪ್ರಬಲವೂ ಸೂಕ್ತವೂ ಆದ ಮಾಧ್ಯಮಗಳೆಂದು ಸರಕಾರದ ಮುಖಂಡರು ತಿಳಿದು ಕೊಂಡಿರುವುದರಿಂದಲೇ ಆಳಿದ ಮತ್ತು ಉಳಿದ ಸರಕಾರಿ ವರಿಷ್ಠರ ಕಲ್ಯಾಣ ಗುಣಗಳ ಗಾಯನವು ಇವುಗಳಲ್ಲಿ ಸದಾ ನಡೆಯುತ್ತಿರುತ್ತದೆ. ಇದೊಂದು ಪ್ರಜಾಪ್ರಭುತ್ವ ದೇಶ. ಇಲ್ಲಿ ಆಳುವ ಪಕ್ಷದ ಧೋರಣೆಗಳನ್ನು ಒಪ್ಪದವರೂ ಇದ್ದಾರೆಂಬ ಸತ್ಯವೇ ಈ ಮಾಧ್ಯಮಗಳನ್ನು ನಿಯಂತ್ರಿಸುವವರಿಗೆ ತಿಳಿದಂತಿಲ್ಲ. ಇಲ್ಲಿ ಹಲವಾರು ತತ್ವಾದರ್ಶಗಳನ್ನು ನಂಬಿದ ಮಂದಿ ಇದ್ದಾರೆ. ದೇಶ ಸಾಗಬೇಕಾದ ದಿಕ್ಕು ದೆಸೆಗಳ ಬಗ್ಗೆ ಬೇರೆ-ಬೇರೆ ದೃಷ್ಟಿ ಕೋನಗಳಿರುವ ಮಂದಿ ಇದ್ದಾರೆ. ಅವರ ಪ್ರತಿನಿಧಿಗಳಿದ್ದಾರೆ ಎಂಬ ಸತ್ಯವೇ ಗೋಚರವಾಗದಂತೆ ಸರಕಾರಿ ಮಾಧ್ಯಮಗಳ ಸೂತ್ರ ಹಿಡಿದವರು ವ್ಯವಹರಿಸುತ್ತಿದ್ದಾರೆ. ತಮ್ಮ ಮೂಗಿನ ನೇರಕ್ಕೇ ಅವರ ನಡವಳಿಕೆ. ಈ ದೇಶದ ವಾಸ್ತವಿಕತೆಗಳ ಅರಿವು ಕೂಡ ಅವರಿಗೆ ಇದ್ದಂತೆ ಇಲ್ಲ. ಇಲ್ಲಿನ ಭಾಷೆ, ಭೌಗೋಳಿಕ ಪರಿಸ್ಥಿತಿ, ಸಂಸ್ಕೃತಿ, ಹವಾಮಾನ ಇವುಗಳಲ್ಲೆಲ್ಲ ವೈವಿಧ್ಯವಿದೆ ಎಂಬ ವಿಚಾರದ ಅರಿವೂ ಇದ್ದಂತಿಲ್ಲ. ಹಿಂದಿ ಭಾಷೆಯೊಂದನ್ನು ಬಿಟ್ಟರೆ ಈ ದೇಶದಲ್ಲಿ ಬೇರೆ ಭಾಷೆಯೇ ಇಲ್ಲವೆಂಬಂತಹ ಧೋರಣೆ ನಮ್ಮ ದೂರದರ್ಶನದವರದ್ದು.

ಈ ಮಾಧ್ಯಮಗಳನ್ನು ಸರಕಾರದ ಆಕ್ಟೋಪಸ್ ಹಿಡಿತದಿಂದ ಬಿಡುಗಡೆ ಮಾಡಬೇಕೆಂದು ವಿಚಾರಶೀಲರಾದವರು, ಜನತೆಯಲ್ಲಿ ಸ್ವತಂತ್ರ ಚಿಂತನೆಯ ಸಾಮರ್ಥ್ಯವನ್ನು ಬೆಳೆಸಬೇಕೆಂಬ ಕಾಳಜಿ ಹೊಂದಿದವರು ಬಹುಕಾಲದಿಂದ ಪ್ರತಿಪಾದಿಸುತ್ತ ಬಂದಿದ್ದಾರೆ. ಈ ಮಾಧ್ಯಮಗಳು ಪ್ರಜಾಪ್ರಭುತ್ವದ ಮೂಲ ತತ್ವಕ್ಕನುಸಾರವಾಗಿ ವ್ಯವಹರಿಸಬೇಕೆಂದು ವಾದಿಸುತ್ತಿದ್ದಾರೆ. ಆದರೆ ಆಳುವವರ ಪಟ್ಟಭದ್ರ ಹಿತಾಸಕ್ತಿ ಹೀಗೆ ಮಾಧ್ಯಮಗಳಿಗೆ ಮುಕ್ತಿ ಬರುವುದನ್ನು ತಡೆಯುತ್ತಿದೆ.

ಸರಕಾರದ ಹಿಡಿತದಲ್ಲಿರುವ ಮಾಧ್ಯಮಗಳ ಕತೆ ಹೀಗಾದರೆ ದೇಶದ ಪತ್ರಿಕಾ ಮಾಧ್ಯಮವನ್ನು ಆಧುನಿಕ ಭಾರತದ ನವ ಕುಬೇರರು ತಮ್ಮ ಕಪಿಮುಷ್ಟಿಯೊಳಗಡೆ ಇರಿಸಿಕೊಂಡಿದ್ದಾರೆ. ಉದ್ಯಮ ಸದನಗಳಿಗೂ ಪತ್ರಿಕಾ ಮಾಲೀಕತ್ವಕ್ಕೂ ನಂಟು ಬೆಳೆದಿದೆ. ನಮ್ಮ ಉದ್ಯಮಗಳನ್ನೂ ಸಾಹಿತ್ಯವನ್ನೂ ಸಂಸ್ಕೃತಿಯನ್ನೂ ಇತರೆಲ್ಲಾ ವ್ಯವಹಾರಗಳನ್ನೂ ಸಮಾಜದ ಮೇಲ್‌ಸ್ತರದ ಜನಗಳೇ ನಿಯಂತ್ರಿಸಿದಂತೆ ಪತ್ರಿಕಾರಂಗವನ್ನೂ ಅದೇ ವರ್ಗದ ಜನ ಹಿಡಿದಿಟ್ಟುಕೊಂಡಿದ್ದಾರೆ.

ಈ ವ್ಯವಸ್ಥೆಯಲ್ಲಿ ಮೇಲ್ವರ್ಗದ ಜನರ ಧ್ವನಿ ಮಾತ್ರ ಕೇಳುತ್ತದೆ. ಶ್ರೀಮಂತರು ಪತ್ರಿಕೆಗಳಲ್ಲಿ ತಮ್ಮ ಸುದ್ದಿಗೆ ಜಾಗ "ಕೊಳ್ಳಲು" ಸಮರ್ಥರಾಗುತ್ತಾರೆ. ಘಟನೆಗಳೂ ವಿದ್ಯಮಾನಗಳೂ ಪತ್ರಿಕೆಗಳಲ್ಲಿ ಈ ಮಂದಿಗೆ ಬೇಕಾದಂತೆಯೇ ವರದಿಯಾಗುತ್ತವೆ. ಜೀವಂತ ಸುದ್ದಿಗಳು ಸದ್ದಿಲ್ಲದೆ ಸತ್ತು ಹೋಗುತ್ತವೆ. ಅನ್ಯಾಯಕ್ಕೊಳಗಾದ ಬಡವನ, ಶೋಷಣೆಗೊಳಗಾದ ದುರ್ಬಲನ ಧ್ವನಿಯನ್ನು ಈ ವ್ಯವಸ್ಥೆ ಅಣಗಿಸಿ ಬಿಡುತ್ತದೆ. ಇಲ್ಲಿ ಮೀಸಲಾತಿ ವಿರುದ್ಧ ಹಿಂಸೆ ನಡೆದರೆ ಅದು ಧೀರೋದಾತ್ತ ಕಾರ್ಯವಾಗುತ್ತದೆ. ಸರಕಾರವೊಂದು ಕ್ಯಾಪಿಟೇಶನ್ ಶುಲ್ಕ ನಿಷೇಧ ವಿಚಾರದಲ್ಲಿ ಅಂತರ್ಗಾಮಿ ಹೊಡೆದರೆ ಅದನ್ನು ಕೇಳುವವರಿಲ್ಲ. ಕುಟುಂಬಕ್ಕೊಬ್ಬನಿಗೆ ಉದ್ಯೋಗ ಕೊಡುವೆನೆಂದು ಸಾರಿ ಅದೇ ನಾಲಿಗೆಯಿಂದ ಹಿಂದುಳಿದ ತರುಣರಿಂದ ವರ್ಷಕ್ಕೆ 18 ಸಾವಿರ ಉದ್ಯೋಗಗಳನ್ನು ದೋಚುವಂತಹ ನಿವೃತ್ತಿ ವಯಸ್ಸಿನ ಏರಿಕೆಯ ಸರಕಾರಿ ಕ್ರಮವನ್ನು ಸಮರ್ಥಿಸುತ್ತವೆ. ಈ ಎಲ್ಲಾ ಸಾಮಾಜಿಕ ದ್ರೋಹವನ್ನು ಮುಚ್ಚಿ ಹಾಕಲು ಅಗ್ಗದ ಅಕ್ಕಿ-ಬಟ್ಟೆಯೆಂಬ ಆವುಟವನ್ನಾಡಿದಾಗ ಅದೇ ಸರಕಾರವನ್ನು ಇಂದ್ರ-ಚಂದ್ರರೆಂದು ಘೋಷ ಹಾಕಿ ಒಪ್ಪಿಸುತ್ತವೆ.

ಇದು ನಮ್ಮ ಪತ್ರಿಕೆಗಳು ಪರಿಪಾಲಿಸುವ ಧರ್ಮ. ಈ ಬೂಟಾಟಿಕೆಗೆ ಪತ್ರಿಕಾ ಧರ್ಮವೆಂಬ ಪಾವಿತ್ರ್ಯವನ್ನು ಲೇಪಿಸಿ, ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಗಾಗಿ ಎಂಬ ರಕ್ಷಣೆಯ ಕವಚವೊಂದನ್ನು ರಚಿಸಿ ಭದ್ರಪಡಿಸಲಾಗಿದೆ. ಅನ್ಯಾಯಕ್ಕೊಳಗಾದವರು ಮುಟ್ಟಲು ಬಾರದಂತೆ ದೂರ ಇರಿಸುವ ವ್ಯವಸ್ಥೆ ಮಾಡಲಾಗಿದೆ. ವರ್ಗಹಿತ ಕಾಪಾಡುವ ಮಾಧ್ಯಮಗಳಿಗೆ ಉದ್ಯಮ ಸದನಗಳೂ ಬೆಂಗಾವಲಾಗಿ ನಿಂತು ಅವುಗಳ ಹಣಕಾಸಿನ ಹಿತ ನೋಡಿಕೊಳ್ಳುತ್ತವೆ. ಈ ವಿಷವ್ಯೂಹವನ್ನು ಜತನದಿಂದ ಕಾಪಾಡಿಕೊಳ್ಳಲು ಪತ್ರಿಕಾ ಮಾಲೀಕರುಗಳು ಯಾವ ಹೇಯ ನಡವಳಿಕೆಗೂ ಹೇಸುವವರಲ್ಲ.

ವರ್ಗಹಿತ ರಕ್ಷಿಸುವ ಇಂಥ ಮಾಧ್ಯಮಗಳನ್ನು ಬೀದಿಗೆ ತರಬೇಕಾಗಿದೆ. ಪತ್ರಿಕಾ ಮಾಲೀಕತ್ವದ ವ್ಯವಸ್ಥೆಯೇ ಬದಲಾಗಬೇಕು. ಇವುಗಳು ಸಮಾಜದ ನಿಯಂತ್ರಣಕ್ಕೆ ಬರಬೇಕು. ಅವುಗಳಿಗೆ ಓದುಗರೇ ಒಡೆಯರಾಗಬೇಕು. ಓದುಗರ ಒಡೆತನದ ಪತ್ರಿಕೆಗಳು ಮಾತ್ರವೇ ಸಾಮಾಜಿಕ ಸ್ಥಿತ್ಯಂತರಕ್ಕೆ ಚಾಲನೆ ಕೊಡಬಲ್ಲವು. ಪ್ರಜಾಪ್ರಭುತ್ವವನ್ನು ನಿಜಕ್ಕೂ ಪ್ರಜೆಗಳಿಗೆ ಸಲ್ಲುವಂತಹುದ್ದನ್ನಾಗಿ ಮಾಡುವ ಹಾಗೂ ಪತ್ರಿಕಾ ಮಾಧ್ಯಮವನ್ನು ಓದುಗರ ಒಡೆತನಕ್ಕೆ ತರುವ ಪ್ರಕ್ರಿಯೆ ಚಿಂತೆ-ಚಳುವಳಿಯಾಗಿ ನಡೆಯಬೇಕಾದ್ದು.

ಮುಂಗಾರು
ಮಂಗಳವಾರ, ಜನವರಿ 28, 1986

ಸಂಪರ್ಕದಿಂದ ಸುಧಾರಣೆ

ತಮ್ಮ ಸಂಪುಟದ ಸಚಿವರು ಪ್ರತಿದಿನ ವಿಧಾನ ಸೌಧದ ತಂತಮ್ಮ ಕಚೇರಿಗಳಲ್ಲಿ ಅಪರಾಹ್ನ ಮೂರು ಗಂಟೆಯಿಂದ ಐದು ಗಂಟೆಯ ತನಕ ಸಾರ್ವಜನಿಕರಿಗೆ ಭೇಟಿ ಒದಗಿಸಿ ಅವರ ಅಹವಾಲು ಕೇಳಬೇಕು ಎಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಸಚಿವರಿಗೆ ಇತ್ತೀಚೆಗೆ ಸುತ್ತೋಲೆಯೊಂದರ ಮೂಲಕ ತಿಳಿಸಿದ್ದಾರೆಂದು ವರದಿಯಾಗಿದೆ. ಇಂಥ ಸಂದರ್ಶನ ಅವಕಾಶವನ್ನು ಸಾರ್ವಜನಿಕರಿಗೆ ತಪ್ಪದೆ ಒದಗಿಸಬೇಕು ಎಂದು ತನ್ನೆಲ್ಲಾ ಸಚಿವರಿಗೆ ಅವರು ಬಹು ಮೊದಲೇ ತಿಳಿಸಿದ್ದರೆಂದೂ ಅದನ್ನು ಸಚಿವರು ಪಾಲಿಸದೆ ಇರುವುದರಿಂದ ಮತ್ತೆ ಸುತ್ತೋಲೆ ಹೊರಡಿಸಲಾಯಿತೆಂದೂ ಹೇಳಲಾಗುತ್ತಿದೆ.

ಆಡಳಿತ ನಡೆಸುವವರು ನಿರಂತರವಾಗಿ ಜನರೊಂದಿಗೆ ಸಂಪರ್ಕ ಇಟ್ಟುಕೊಳ್ಳಬೇಕಾದ್ದು ಅಗತ್ಯ. ಆದ್ದರಿಂದಲೇ ಹೆಗಡೆ ಸರಕಾರದ ಈ ಉಪಕ್ರಮ ಸ್ವಾಗತಾರ್ಹವಾದದ್ದು. ಹಿಂದಿನ ಹೆಚ್ಚಿನೆಲ್ಲಾ ಸರಕಾರಗಳೂ ಬಾಯುಪಚಾರಕ್ಕೆ ಇಂತಹ ಮಾತುಗಳನ್ನು ಹೇಳುತ್ತಲೇ ಬಂದಿವೆ. ಆದರೆ ಸದಾ ಸರ್ವದಾ ಜನಸಾಮಾನ್ಯರಿಗೆ ಮಂತ್ರಿಗಳು ದೂರದ ಬೆಟ್ಟಗಳೇ ಆಗಿ ಉಳಿದಿದ್ದಾರೆ.

ಸ್ವತಂತ್ರ ಭಾರತದಲ್ಲಿ ಮಂತ್ರಿಗಳು ಐರೋಪ್ಯ ದೊರೆಗಳಿಗಿಂತಲೂ ಹೆಚ್ಚಿನ ಜಬರ್ದಸ್ತು ಹೊಂದಿದ್ದಾರೆ. ಮಂತ್ರಿಗಳ ಪ್ರವಾಸ ಕಾಲದಲ್ಲಂತೂ ಅಧಿಕಾರಿಗಳ ಒಂದು ಪಡೆಯೇ ಅವರ ಜತೆಗಿದ್ದು ಮಂತ್ರಿಯನ್ನು ಜನಸಾಮಾನ್ಯರು ಸಮೀಪಿಸಲೂ ಅವಕಾಶವಿಲ್ಲ. ವಿಧಾನ ಸೌಧದಲ್ಲಂತೂ ಮಂತ್ರಿಗಳ ಭೇಟಿಗೆ ಏಳು ಸುತ್ತಿನ ಕೋಟೆಯನ್ನು ಸುತ್ತಿಯೇ ಒಳಹೋಗಬೇಕು.

ಜನರೊಡನೆ ನೇರ ಸಂಪರ್ಕ ಸಚಿವರಿಗಿಲ್ಲವೆಂದಾದರೆ ಜನಮನದ ತುಡಿತ ಖಂಡಿತಾ ಅವರಿಗೆ ಅರ್ಥವಾಗಲಾರದು. ಜನರ ಅಭಿಪ್ರಾಯಗಳು ಅಧಿಕಾರಿಗಳ ಮೂಲಕ ಅವರಿಗೆ [illegible]ದೀತು ಎಂದು ನಂಬುವುದಂತೂ ಅಶಕ್ಯ. ಆಡಳಿತೆಯ ಮುಖ್ಯಸ್ಥರಿಗೂ ಜನರಿಗೂ ಸಂಪರ್ಕ ಇಲ್ಲವೆಂದಾದರೆ ನೌಕರ ಶಾಹಿಗೆ ಮೇಯಲು ಹುಲುಸಾದ ಹುಲ್ಲುಗಾವಲು ಮಾಡಿಕೊಟ್ಟಂತಾಗುತ್ತದೆ. ಭ್ರಷ್ಟಾಚಾರದ ತಾಂಡವ ಶುರುವಾಗುತ್ತದೆ. ಅಧಿಕಾರಿಗಳೂ ಸಚಿವರೂ ಸಾರ್ವಜನಿಕರಿಗೆ ಸುಲಭದಲ್ಲಿ ದೊರೆಯುವಂತಾದರೆ ಜನಪ್ರಾತಿನಿಧಿಕವಾದ ಆಡಳಿತಕ್ಕೆ ಅರ್ಥಬರುತ್ತದೆ. ಇಲ್ಲವಾದರೆ ಒಮ್ಮೆ ಜನರು ಆರಿಸಿ ಕಳುಹಿಸುವ ಸರಕಾರ ಮುಂದಿನ ಐದು ವರ್ಷಗಳ ತನಕ ಪ್ರತ್ಯೇಕವಾಗಿ ದೂರದ ಗೋಪುರದಲ್ಲಿ ಕುಳಿತು ಜನರನ್ನು ದಮನಿಸುವ ವ್ಯವಸ್ಥೆಯಾಗಿ ಮಾರ್ಪಡುತ್ತದೆ. ಜನರೊಡನೆ ಸಚಿವರಿಗೂ ಶಾಸಕರಿಗೂ ಉನ್ನತ ಅಧಿಕಾರಿಗಳಿಗೂ ಸಂಪರ್ಕ ಕಲ್ಪಿಸುವುದೆಂದರೆ ಜೆ.ಪಿ. ಪ್ರತಿಪಾದಿಸಿದಂತಹ ಜನರಿಗೆ ಶಾಸಕರನ್ನು ಮರಳಿ ಕರೆಸುವ ಅಧಿಕಾರ ಕೊಡುವ ದಾರಿಯಲ್ಲಿ ಒಂದು ಹೆಜ್ಜೆ ಮುಂದೆ ಇರಿಸಿದಂತೆಯೇ ಆಗುತ್ತದೆ.

ಕೇವಲ ಭೇಟಿ ಕೊಡುವುದರಿಂದ ಏನೂ ಆಗುವುದಿಲ್ಲ. ಇಂತಹ ಭೇಟಿ ವೇಳೆ ಬಂದ ಅಹವಾಲುಗಳ ವಿಚಾರದಲ್ಲಿ ಸೂಕ್ತವಾದ ಕ್ರಮಗಳನ್ನು ಕ್ಷಿಪ್ರವಾಗಿ ಜರುಗಿಸುವ ವ್ಯವಸ್ಥೆಯೂ ಇರಬೇಕು. ಅಹವಾಲು ಕೇಳುವ ಒಂದು ಇಲಾಖೆಯೇ ಈಗ ಸರಕಾರದಲ್ಲಿದೆ. ಅದು ಮಾಡುವ ಕೆಲಸ ಬಂದ ಪತ್ರಗಳನ್ನು ಸಂಬಂಧಪಟ್ಟ ಆಯಾ ಇಲಾಖೆಗಳಿಗೆ ರವಾನಿಸಿ ಕೈತೊಳೆದುಕೊಳ್ಳುವ ಅಂಚೆ ಕಚೇರಿ ಕೆಲಸವಷ್ಟೇ ಆಗಿದೆ. ಇಂತಹ ವ್ಯವಸ್ಥೆಗಳು ಪ್ರಯೋಜನಕಾರಿಯಾಗುವುದಿಲ್ಲ. ಯಾವ ಅಧಿಕಾರಿಗೂ ಇದರಿಂದ ಭಯ ಹುಟ್ಟುವುದಿಲ್ಲ

ಸಚಿವರು ಸಾರ್ವಜನಿಕ ಸಂದರ್ಶನದ ಅವಕಾಶ ನೀಡುವುದು ಆಡಳಿತ ಚುರುಕುಗೊಳಿಸುವ ಒಂದು ವಿಧಾನವಾದರೆ ಕೆಂಪುಪಟ್ಟಿಯನ್ನು ನಿವಾರಿಸಬೇಕಾದ್ದು ಇನ್ನೊಂದು ಮುಖ. ಇದನ್ನು ನಿವಾರಿಸದೆ ಭ್ರಷ್ಟಾಚಾರದ ನಿವಾರಣೆ ಆಗದು. ಆಡಳಿತದ ಅಧಿಕಾರದ ವಿಕೇಂದ್ರೀಕರಣವೇ ಇದಕ್ಕೆ ಒಂದು ಮದ್ದು. ಹಾಗೆಯೇ ಲಂಚ ನಿರೋಧ ಅಪರಾಧಗಳಿಗೆ ದಂಡನೆ–ಈ ವ್ಯವಸ್ಥೆಯನ್ನೂ ಬಿಗಿಗೊಳಿಸಬೇಕಾದ್ದು ಅಗತ್ಯ.

ಮೌಲ್ಯಾಧರಿತ ರಾಜಕೀಯವನ್ನೂ ಶುಚಿಯಾದ ಆಡಳಿತೆಯನ್ನೂ ನಡೆಸುವುದಾಗಿ ಭರವಸೆ ಕೊಟ್ಟು ಬಂದ ಈ ಸರಕಾರ ಆ ದಿಸೆಯಲ್ಲಿ ಇನ್ನಷ್ಟೇ ಕೆಲಸ ಪ್ರಾರಂಭಿಸಬೇಕಾಗಿದೆ ಎಂಬುದು ಇಂದು ಆಡಳಿತೆಯ ಎಲ್ಲಾ ಮಟ್ಟಗಳಲ್ಲೂ ಕಂಡುಬರುತ್ತಿರುವ ಸತ್ಯ. ಇಷ್ಟರ ತನಕ ಆಗದಿರುವುದು ಇನ್ನು ಸಾಧ್ಯವಾಗುತ್ತದೆ ಎಂಬ ಬಗ್ಗೆ ಸಂದೇಹವಿದೆ. ಇಂದು ನಡೆಯುತ್ತಿರುವ ಲಂಚ–ರುಷುವತ್ತುಗಳ ವಿದ್ಯಮಾನ ಹಿಂದಿಗಿಂತ ಕಮ್ಮಿಯೇನೂ ಅಲ್ಲ. ಸಾವಿರಗಟ್ಟಲೆ ರೂಪಾಯಿ ಲಂಚ ಪಡೆಯುವ ರಿಜಿಸ್ಟ್ರಾರರೂ ಸಹಕಾರಿ ಸಂಘಗಳ ರಿಜಿಸ್ಟ್ರಾರರೂ ಅಸಿಸ್ಟೆಂಟ್ ಕಮಿಷನರರೂ ನಮ್ಮ ಅಕ್ಕಪಕ್ಕದಲ್ಲೇ ಇದ್ದಾರೆ. ಸಾರಿಗೆ ಇಲಾಖೆಯೆಂಬುದು ಭ್ರಷ್ಟಾಚಾರದ ಗೂಡೇ ಆಗಿದೆ. ಪೊಲೀಸ್ ಇಲಾಖೆಯೂ ಹಿಂದಿಲ್ಲ. ಕಂದಾಯದವರೂ ಕಮ್ಮಿಯಿಲ್ಲ. ನೇಮಕಾತಿಗಳಿಗೂ ಲಂಚದ ಮೊತ್ತ ಹಿಂದಿಗಿಂತ ಹೆಚ್ಚೇ ಇದೆ.

ಆಡಳಿತ ಸುಧಾರಣೆಯೆಂದರೆ ಸುಲಭದ ಮಾತಲ್ಲ. ಜನರಿಗೆ ಅಗತ್ಯವಿರುವ ವ್ಯವಹಾರಗಳು ಸರಕಾರಿ ಕಚೇರಿಗಳಲ್ಲಿ ಕ್ಲಪ್ತಕಾಲದಲ್ಲಿ ಆಗಬೇಕು. ಯಾರ ಕುಮ್ಮಕ್ಕು ಇಲ್ಲದೆ, ಚಾಲನೆಯಿಲ್ಲದೆ, ಪ್ರಚೋದನೆಗೆ ಕಾಯದೆ ಅದು ನಡೆಯಬೇಕು. ಹಾಗಿದ್ದರೆ ಮಾತ್ರವೇ ಭ್ರಷ್ಟಾಚಾರ ಕಮ್ಮಿಯಾಗಿದೆ ಎಂದು ಹೇಳಬಹುದು. ಇಂದು ಕಡತಗಳನ್ನು ವರ್ಷಗಟ್ಟಲೆ ಇಟ್ಟುಕೊಳ್ಳುವ ಕಚೇರಿಗಳಿವೆ. ಅವರು ಯಾವುದಕ್ಕಾಗಿ ಕಾಯುತ್ತಿದ್ದಾರೆಂಬುದು ಬಹಿರಂಗ ಗುಟ್ಟು. ಸರಕಾರಿ ಕಚೇರಿಗಳ ಕಂಬ – ಕಂಬಗಳಿಗೂ ಈ ಗುಟ್ಟು ಗೊತ್ತು.

ಜನರ ಸಂಪರ್ಕ ಹೆಚ್ಚಿದಾಗಲಾದರೂ ಈ ರಹಸ್ಯಗಳೆಲ್ಲ ನಮ್ಮ ಸಚಿವರಿಗೆ ತಿಳಿಯಬಹುದೇನೋ.

ಮುಂಗಾರು

ಬುಧವಾರ, ಜನವರಿ 29, 1986

ಅಧಿಕಾರಕ್ಕೆ ಒಳದಾರಿ ಉಂಟೆ?

ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಪಕ್ಷದ ಹೊಸ ಅಧ್ಯಕ್ಷ ಆಸ್ಕರ್ ಫೆರ್ನಾಂಡಿಸ್ ಅವರು ಬೆಂಗಳೂರಲ್ಲಿ ಪಕ್ಷದವರನ್ನುದ್ದೇಶಿಸಿ ಭಾಷಣ ಮಾಡುತ್ತ ಹೇಳಿದ ಮಾತುಗಳನ್ನು ಅವರ ಪಕ್ಷದವರು ಮಾತ್ರವೇ ಅಲ್ಲದೆ ಈ ರಾಜ್ಯದ ಎಲ್ಲ ರಾಜಕೀಯಾಸಕ್ತರೂ ಮನನ ಮಾಡಬೇಕಾದ ಅಗತ್ಯವಿದೆ. ಬಿಕ್ಕಟ್ಟಿನಲ್ಲಿ ಸಿಲುಕಿರುವ ಕರ್ನಾಟಕದ ಇಂದಿನ ಪರಿಸ್ಥಿತಿಯಲ್ಲಿ ಅವರ ಅಭಿಪ್ರಾಯಕ್ಕೆ ಮಹತ್ವವಿದೆ. ಬರಪೀಡಿತ ಪ್ರದೇಶಗಳಿಗೆ ಹೋಗಿ ಜನಸೇವೆ ಮಾಡಬೇಕೆಂದೂ ಆ ಮೂಲಕ ಜನರ ವಿಶ್ವಾಸವನ್ನು ಮರಳಿ ಪಡೆಯಬೇಕೆಂದೂ ಅವರು ತಮ್ಮ ಪಕ್ಷದವರಿಗೆ ಹಿತನುಡಿ ಹೇಳಿದ್ದಾರೆ. ತಾವೂ ಬರಪೀಡಿತ ಪ್ರದೇಶಗಳ ಪ್ರವಾಸ ನಡೆಸುವುದಾಗಿಯೂ ಅವರು ತಿಳಿಸಿದ್ದಾರೆ.

ನಾಡಿಗೆ ಬೇಕಾಗಿರುವುದು ಅಧಿಕಾರದ ರಾಜಕಾರಣ ಅಲ್ಲ– ಜನಸೇವೆಯ ರಾಜಕಾರಣ. ಆಸ್ಕರ್ ಫೆರ್ನಾಂಡಿಸ್ ಹೇಳಿರುವುದು ಇದನ್ನೇ ಹೊರತು ಬೇರೆಯಲ್ಲ. ಇಂದು ಈ ದೇಶದಲ್ಲಿ ನಡೆದಿರುವುದು ಅಧಿಕಾರದ ರಾಜಕಾರಣ ಹೊರತು ಜನಸೇವೆಯ ರಾಜಕಾರಣವಲ್ಲ. ರಾಜಕಾರಣಿಗಳಿಗೆ ಜನಸೇವೆ ಗೌಣವಾಗಿಬಿಟ್ಟಿದೆ. ಗುಂಪುಗಳನ್ನು ಕಟ್ಟಿ ವಶೀಲಿ ನಡೆಸಿ ನಾಯಕರನ್ನು ಓಲೈಸಿ ಅಧಿಕಾರದ ಆಯಕಟ್ಟಿನ ತಾಣಗಳನ್ನು ಪಡೆಯುವುದೇ ಎಲ್ಲ ರಾಜಕಾರಣಿಗಳ ಜೀವನದ ಪರಮ ಧ್ಯೇಯವಾಗಿಬಿಟ್ಟಿದೆ.

ಇದು ಆಳುವ ಕಾಂಗ್ರೆಸ್ ಪಕ್ಷದಲ್ಲಂತೂ ದಿನ-ದಿನದ ವ್ಯವಹಾರವಾಗಿದೆ. ಆ ಪಕ್ಷದೊಳಗೆ ವ್ಯಕ್ತಿ ಪ್ರತಿಷ್ಠೆಯ ವಿಕೃತಿಯೊಂದು ನುಸುಳಿಬಿಟ್ಟ ಪರಿಣಾಮವಾಗಿ ಬುದ್ಧಿ ಬಲವನ್ನು ಅದು ಕಳೆದುಕೊಂಡಿದೆ. ವಿಚಾರವಂತರು ಅಲ್ಲಿಂದ ದೂರ ಹೋಗುವಂತಾಗಿದೆ. ಈ ಬುದ್ಧಿ ಬಡತನ ಆ ಪಕ್ಷವನ್ನು ಆ ಮೂಲಕ ಅದು ರೂಪಿಸುವ ಸರಕಾರಗಳನ್ನು ಹಾಗೂ ಪರಿಣಾಮವಾಗಿ ಆಡಳಿತೆಯನ್ನು ಬಾಧಿಸಿದೆ. ದೇಶದ ಆಗು ಹೋಗುಗಳ ಬಗ್ಗೆ ಅಭಿವೃದ್ಧಿಯ ತಂತ್ರಗಳ ಬಗ್ಗೆ ಸೂಕ್ತವೂ ಕ್ಷಿಪ್ರವೂ ಆದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಅದಕ್ಕೆ ಸಾಧ್ಯವಾಗದೆ ಜನಜೀವನಕ್ಕೆ ಬಾಧೆಯಾಗಿದೆ. ರಾಜಕಾರಣ ವ್ಯಕ್ತಿ ಕೇಂದ್ರಿತವಾಗದೆ ಮೌಲ್ಯಗಳನ್ನೇ ಕೇಂದ್ರವನ್ನಾಗಿರಿಸಿಕೊಂಡಿದ್ದರೆ, ರಾಜಕೀಯ ಸಂಸ್ಥೆಗಳಲ್ಲಿ ಪ್ರಜಾತಾಂತ್ರಿಕ ವಿಧಾನಗಳನ್ನು ಅನುಸರಿಸಿದ್ದರೆ ಇಂತಹ ವಿಕೃತಿ ಈ ದೇಶದ ಆಡಳಿತದಲ್ಲಿ ಉಂಟಾಗುತ್ತಿರಲಿಲ್ಲ.

ಪಕ್ಷದೊಳಗೆ ಪ್ರಜಾತಾಂತ್ರಿಕ ವಿಧಿ ವಿಧಾನಗಳಿಗೂ ಮೌಲ್ಯಗಳಿಗೂ ಸ್ಥಾನವಿದ್ದರೆ, ಅಂಥ ಪಕ್ಷ ಜನರ ಹೆಚ್ಚು ಸಮೀಪಕ್ಕೆ ಹೋಗುತ್ತದೆ. ಜನಸೇವೆಯ ನೆಲೆಯುಳ್ಳವರಿಗೂ ಸಮಾಜದ ಹಿತದ ಬಗ್ಗೆ ವಿಚಾರ ಮಾಡಬಲ್ಲ ಬುದ್ಧಿಬಲ ಇರುವವರಿಗೂ ನಾಡಿನ ಭವಿಷ್ಯದ ಬಗ್ಗೆ ಸ್ಪಷ್ಟ ಕಲ್ಪನೆಯಿಂದ ಚಿಂತಿಸುವ ಸಾಮರ್ಥ್ಯವುಳ್ಳವರಿಗೂ ಅಂಥ ಪಕ್ಷದಲ್ಲಿ ತಾನೇ ತಾನಾಗಿ ಸ್ಥಾನಮಾನಗಳು ಒದಗಿಬರುತ್ತವೆ. ಪರಿಣಾಮವಾಗಿ ಜನಸೇವೆಯ ರಾಜಕಾರಣ ಬೆಳೆದು ಬರುತ್ತದೆ.

ಇಂದು ಆಗಬೇಕಾದ್ದೇನು ಎಂಬುದನ್ನು ಆಸ್ಕರ್ ಫೆರ್ನಾಂಡಿಸ್ ಸ್ಪಷ್ಟವಾಗಿ ಖಚಿತವಾಗಿ ಹೇಳಿದ್ದಾರೆ. ಕರ್ನಾಟಕದ ಕಾಂಗ್ರೆಸಿನಲ್ಲಿ ಗುಂಪುಗಾರಿಕೆ ಮಾಡುತ್ತ ಉರುಳಿಸೋ ಆಟದಲ್ಲಿ ಮೈಮರೆಯುತ್ತ ಕಾಲ ಕಳೆದ ಮಂದಿ ಮತ್ತೊಮ್ಮೆ ಆಲೋಚನೆ ಮಾಡಬೇಕಾದ ವಿಚಾರ ಇದು. ಅವರು ಜನರ ಹತ್ತಿರ ಹೋಗಬೇಕು. ಜನರ ಸೇವೆ ಮಾಡಬೇಕು. ಇಂದು ಕರ್ನಾಟಕ ಹೊತ್ತಿ ಉರಿಯುತ್ತಿದೆ. ಜನರ ಬದುಕು ಅಸಹನೀಯವಾಗಿದೆ. ಮಳೆ– ಬೆಳೆ ಇಲ್ಲದೆ ಜಾನುವಾರುಗಳಿಗೆ ಮೇವಿಲ್ಲದೆ ಗ್ರಾಮೀಣ ಜೀವನವೇ ನಶಿಸಿ ಹೋಗುವ ಮಹಾ ಗಂಡಾಂತರವಿದೆ. ಈಗ ರಾಜಕಾರಣಿಗಳಿರಲಿ, ಕಾರ್ಯಕರ್ತರಿರಲಿ, ಸಮಾಜ ಸೇವಕರಿರಲಿ ಮಾಡಬೇಕಾದ್ದು ಒಂದೇ. ಅವರೆಲ್ಲ ಹಳ್ಳಿಗಳಿಗೆ ಹೋಗಬೇಕು. ಅಲ್ಲಿ ಜನರನ್ನು ಸಂಘಟಿಸಬೇಕು. ಹಾಳಾಗಿ ಹೋಗುತ್ತಿರುವ ನೈಜ ಕರ್ನಾಟಕದ ಬದುಕನ್ನು ಉಳಿಸಿಕೊಳ್ಳುವುದಕ್ಕೆ ಹೋರಾಡಬೇಕು.

ಸರಕಾರ ಏನು ಮಾಡುತ್ತಿದೆ ಎಂದು ಅಧ್ಯಯನ ಮಾಡಬೇಕು. ಪರಿಹಾರ ಮಾಡಿದ್ದೇವೆ ಎಂದು ಸರಕಾರ ಹೇಳುತ್ತಿರುವ ಅಂಕಿ ಅಂಶಗಳೆಲ್ಲ ನಿಜವೇ ಎಂದು ಪರಿಶೀಲಿಸಬೇಕು. ಎಲ್ಲ ಪರಿಹಾರಗಳೂ ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು. ನಮ್ಮ ರಾಜಕಾರಣಿಗಳು ಕೆಲವು ದಿನ ನಿದ್ರೆ ಬಿಟ್ಟು ಈ ಬರದ ಬಗ್ಗೆ ಅಧ್ಯಯನ ಮಾಡಬೇಕು. ಅವರ ಅಧ್ಯಯನದ ಫಲಿತಾಂಶ ಜನ ಪ್ರಾತಿನಿಧ್ಯದ ವೇದಿಕೆಯಾದ ವಿಧಾನ ಮಂಡಲದಲ್ಲಿ ಮೂಡಿ ಬರಬೇಕು.

ಈ ಕೆಲಸ ಆಗಬೇಕು. ಆಳುವ ಜನತಾ ಪಕ್ಷದವರೂ ಮಾಡಬೇಕಾದ ಕೆಲಸ ಇದೇ. ಕಾಂಗ್ರೆಸ್–ಐನವರ ಹೊಸ ನಾಯಕ ಆಸ್ಕರ್ ಫೆರ್ನಾಂಡಿಸ್ ತಮ್ಮ ಪಕ್ಷದವರಿಗೆ ಈ ಮಾತು ಹೇಳಿದ್ದಾರೆ. ಅದರರ್ಥ ಈ ತನಕ ಈ ಮಂದಿ ತಮ್ಮ ಕರ್ತವ್ಯವನ್ನು ಸೂಕ್ತವಾಗಿ ಮಾಡಿಲ್ಲವೆಂದೇ ಆಗುತ್ತದೆ. ಮಾಡಿಲ್ಲ ಎನ್ನುವುದು ಸತ್ಯವೂ ಆಗಿದೆ.

ಜನಸೇವೆಯ ರಾಜಕಾರಣ ಇಲ್ಲಿಂದಲೇ ಶುರುವಾಗಬೇಕು. ಅಧಿಕಾರಕ್ಕೆ ಒಳದಾರಿಗಳಿಲ್ಲ. ಇದ್ದರೂ ಅದು ಬಾಳುವಂತಹದ್ದಲ್ಲ, ಬೆಲೆಯುಳ್ಳದ್ದೂ ಅಲ್ಲ.

ಮುಂಗಾರು

ಶುಕ್ರವಾರ, ಜನವರಿ 31, 1986

ಎಚ್ಚರ ಬೇಕು

ಬೇಹುಗಾರಿಕೆ ಪ್ರಕರಣವೊಂದರಲ್ಲಿ ಹಲವಾರು ರಾಜಕಾರಣಿಗಳ ಹಾಗೂ ಪತ್ರಕರ್ತರ ಹೆಸರುಗಳು ಬಹಿರಂಗಗೊಂಡಿವೆ. ರಾಮ ಸ್ವರೂಪ್ ಈ ದೇಶದ ಆಗುಹೋಗುಗಳ ರಹಸ್ಯಗಳನ್ನು ಉನ್ನತ ಅಧಿಕಾರ ಪೀಠಕ್ಕೆ ಹತ್ತಿರವಿರುವವರಿಂದ ತಿಳಿದು ತೈವಾನಿಗೂ ಇಸ್ರೇಲಿಗೂ ಇತರ ಕೆಲವು ದೇಶಗಳ ಗೂಢಚರ ಸಂಸ್ಥೆಗಳಿಗೂ ತಿಳಿಸಿದರೆಂದು ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಸಲಾಗಿದೆ.

ಈ ರಾಮಸ್ವರೂಪ್ ಎಂಬವರು ವಿಮಾ ಸಂಸ್ಥೆಯೊಂದರ ಅಧಿಕಾರಿಯಾಗಿದ್ದವರು. ಆಮೇಲೆ ಅದನ್ನು ತೊರೆದು ಅಧಿಕಾರದ ಸ್ಥಾನಗಳಿಗೆ ಹತ್ತಿರ ವಿರುವವರ, ಸರಕಾರಿ ಅಧಿಕಾರಿಗಳ, ಸಂಸತ್ ಸದಸ್ಯರ ಹಾಗೂ ಪ್ರಭಾವಶಾಲಿ ಪತ್ರಕರ್ತರ ಸ್ನೇಹ ಗಳಿಸಿ ರಹಸ್ಯ ಸಂಗ್ರಹಿಸುವ ತನ್ನ ಕೆಲಸವನ್ನು ಸುಗಮಮಾಡಿ ಕೊಂಡಂತೆ ಕಾಣಿಸುತ್ತದೆ.

ರಾಮಸ್ವರೂಪ್ ತೈವಾನಿನ ವ್ಯಾಪಾರ ಪ್ರತಿನಿಧಿ ಸಂಸ್ಥೆಯೊಂದರ ಮುಖ್ಯಸ್ಥರಾಗಿದ್ದರು. ಅಲ್ಲದೆ ಜಾಗತಿಕ ಕಮ್ಯೂನಿಸ್ಟ್ ವಿರೋಧಿ ಲೀಗಿನ ಪ್ರತಿನಿಧಿಯಾಗಿದ್ದರು. ಈ ನೆಲೆಯಲ್ಲಿ ಪ್ರವರ್ತಿಸುವುದು ಈ ವ್ಯಕ್ತಿಗೆ ಸುಲಭವಾಗಿತ್ತು.

ಈ ದೇಶದಲ್ಲಿ ಹಲವಾರು ಸಂಘ ಸಂಸ್ಥೆಗಳಿವೆ. ಮುಕ್ತವಾದ ಸಮಾಜ ವ್ಯವಸ್ಥೆಯನ್ನು ನಾವು ಒಪ್ಪಿಕೊಂಡಿರುವುದರಿಂದ ಸಂಘಟನೆ ನಡೆಸುವುದಕ್ಕೆ, ವ್ಯವಹಾರಗಳ ಅವಕಾಶಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ, ತತ್ವ–ಸಿದ್ಧಾಂತಗಳನ್ನು ಪ್ರಚುರಪಡಿಸುವುದಕ್ಕೆ ಇಲ್ಲಿ ಸಾಕಷ್ಟು ಅವಕಾಶಗಳಿವೆ. ಭಾರತದಲ್ಲಿ ಹಲವಾರು ಮಿತ್ರ ಸಂಘಗಳಿವೆ. ಆಸಕ್ತ ರಾಯಭಾರ ಕಚೇರಿಗಳವರು ಇವುಗಳಿಗೆ ಆಶ್ರಯದಾತರೂ ಆಗಿದ್ದಾರೆ.

ಇವುಗಳ ಮೂಲಕ ಹಲವು ಮಂದಿ ಹಲವು ವಿಧಾನಗಳಲ್ಲಿ ಪ್ರವರ್ತಿಸುತ್ತಾರೆ. ಗಣ್ಯರನ್ನು, ಪ್ರಭಾವಿಗಳನ್ನು, ಅಧಿಕಾರಸ್ಥರನ್ನು ಹತ್ತಿರಮಾಡಿಕೊಳ್ಳುತ್ತಾರೆ. ಅವರ ಸ್ನೇಹ ಮಾಡಿಕೊಳ್ಳುತ್ತಾರೆ. ಒಬ್ಬೊಬ್ಬರದು ಒಂದೊಂದು ಉದ್ದೇಶ ಇರಬಹುದು. ಎಲ್ಲರೂ ಕೆಟ್ಟವರೆನ್ನಲಾಗುವುದಿಲ್ಲ. ಎಲ್ಲರೂ ಬೇಹುಗಾರಿಕೆ ನಡೆಸುವುದಿಲ್ಲ. ಈ ಮಂದಿಯ ಸ್ನೇಹಾಚಾರಕ್ಕೆ ಒಳಗಾಗುವವರೂ ಅಷ್ಟೆ. ಸ್ನೇಹಿತರು ದೊರೆತಾಗ ಯಾರೂ ಬೇಡವೆನ್ನುವುದಿಲ್ಲ. ಮಿತ್ರ ಮಂಡಳಿಗಳ ಸದಸ್ಯರಾದರೆ ವಿದೇಶಯಾತ್ರೆ ಭಾಗ್ಯ ಬರುವುದು ಸಾಧ್ಯ. ಈ ಆಮಿಷವೂ ಇರುತ್ತದೆ. ಲೋಕ ಸಂದರ್ಶನದ ಬಯಕೆ ತಪ್ಪಲ್ಲ. ಉಚಿತವಾಗಿ ಅದು ಬಂದಾಗ ಬೇಡ ಎನ್ನುವ ಸನ್ಯಾಸಿಗಳು ನಮ್ಮಲ್ಲಿ ಕಡಿಮೆ ಇರಬಹುದು.

ರಾಮಸ್ವರೂಪರ ಆಹ್ವಾನವೂ ಇಂತಹದೇ ಇರಬಹುದು. ಭಾರತದ ಹಲವು ರಾಜಕಾರಣಿಗಳೂ ಪತ್ರಕರ್ತರೂ ಹೀಗೆ ಒದಗಿ ಬಂದ ಅವಕಾಶ ಸದುಪಯೋಗಿಸಿಕೊಂಡು ತೈವಾನಿಗೆ ಭೇಟಿ ನೀಡಿದ್ದಾರೆ. ಇದಕ್ಕಿಂತ ಹೆಚ್ಚಿನದನ್ನು ರಾಮಸ್ವರೂಪರ ಮೇಲೆ ಹಾಕಲಾದ ಆರೋಪ ಪಟ್ಟಿ ತಿಳಿಸುವುದಿಲ್ಲ. ಈ ಪಟ್ಟಿಯಲ್ಲಿ ಹಲವರ ಹೆಸರು ಸೇರಿಹೋಗಿದೆ. ಮೊರಾರ್ಜಿ ದೇಸಾಯಿಯವರ ಮಗ ಕಾಂತಿ ಭಾಯಿ ದೇಸಾಯಿ, ಪತ್ರಕರ್ತ ಖುಷವಂತ ಸಿಂಗ್, ಗುರುಪಾದ ಸ್ವಾಮಿ, ಸಿಂಗ್‌ದೇವ್, ಚಂದೂಲಾಲ್ ಚಂದ್ರಾಕರ್, ಪಿ. ಉಪೇಂದ್ರ ಹೀಗೆ ಈ ಪಟ್ಟಿ ಬಲು ದೊಡ್ಡದು. ಈ ಮಂದಿ ಎಲ್ಲರೂ ಬೇಹುಗಾರಿಕೆ ನಡೆಸಿದರು ಎನ್ನಲು ಬಾರದು. ಯಾರೋ, ಯಾವುದೋ ಸಂಸ್ಥೆ ಕರೆದಾಗ ವಿದೇಶಕ್ಕೆ ಹೋಗಿರಬಹುದು. ಯಾರೋ ಬಂದಾಗ ಅವರ ಜತೆ ಕೂತು ಮಾತನಾಡಿರಬಹುದು. ಜತೆಯಾಗಿ ಊಟವನ್ನೂ ಮಾಡಿರಬಹುದು. ಇದಕ್ಕಿಂತ ಹೆಚ್ಚಿನ ಬಾಂಧವ್ಯ ಇತ್ತೇ? ಆಮಂತ್ರಣ ಕೊಟ್ಟ ವ್ಯಕ್ತಿ ಗೂಢಚರನೆಂದು ಇವರಿಗೆಲ್ಲ ತಿಳಿದಿತ್ತೇ? ಆಮಿಷಕ್ಕೆ ಪಕ್ಕಾಗಿ, ಹಣಕ್ಕಾಗಿ, ಬೇರಾವುದೋ ಹಂಗಿಗಾಗಿ ಇವರೆಲ್ಲ ಸರಕಾರಿ ರಹಸ್ಯಗಳನ್ನು ಮಾರಾಟ ಮಾಡಿದರೇ? ಈ ಪ್ರಶ್ನೆಗಳಿಗೆಲ್ಲ ಉತ್ತರಬೇಕು. ಹೌದು ಎಂದಾದರೆ ಮಾತ್ರವೇ ಇವರನ್ನೆಲ್ಲ ದೇಶದ ಹಿತಾಸಕ್ತಿ ಕಡೆಗಣಿಸಿದವರು ಎಂದು ವರ್ಗೀಕರಿಸಬಹುದು.

ಅದಕ್ಕೆ ಪುರಾವೆಗಳಿಲ್ಲ. ಇವರ ಮೇಲೆ ಅಪರಾಧ ಸಾಬೀತುಮಾಡುವ ಪುರಾವೆಗಳಿಲ್ಲವೆಂದೇ ಸರಕಾರಿ ಮೂಲಗಳು ಕೂಡ ಹೇಳುತ್ತವೆ.

ಈ ಪ್ರಕರಣ ಒಂದು ಎಚ್ಚರಿಕೆಯ ಗಂಟೆ. ನಮ್ಮ ಸುತ್ತ ಮುತ್ತಲೂ ಇರುವ ಶತ್ರುಗಳ ಬಗ್ಗೆ, ನಮ್ಮ ಹಿತ ಶತ್ರುಗಳ ಬಗ್ಗೆಯೇ ನಮಗೆ ಅರಿವಿಲ್ಲದಿರುವುದನ್ನು ಇದು ತಿಳಿಸುತ್ತದೆ. ಈ ಜಗತ್ತಿನಲ್ಲಿ ಭಯಂಕರ ಮೋಸದ ಜಾಲಗಳಿವೆ ಎಂಬ ಸತ್ಯವನ್ನು ನಮ್ಮ ಜನ ಮರೆತಿದ್ದಾರೆ. ನಮ್ಮ ವ್ಯವಹಾರಗಳಲ್ಲಿ ಎಚ್ಚರ ಬೇಕು. ನಮ್ಮ ಅಧಿಕಾರಿಗಳು, ರಾಜಕಾರಣಿಗಳು, ಸಂಸತ್ ಸದಸ್ಯರು ವರ್ಚಸ್ವಿಗಳಾದ ವ್ಯಕ್ತಿ, ನಿರತರು ಯಾರಿಗೆ ಏನು ಹೇಳುತ್ತಾರೆ ಎಂಬ ಬಗ್ಗೆ ಎಚ್ಚರ ವಹಿಸಬೇಕು

ಜತೆಗೆ ನಮ್ಮ ಸಾರ್ವಜನಿಕ ಜೀವನದಲ್ಲಿ ನೀತಿ–ನಿಯಮಗಳನ್ನು ಪಾಲಿಸಬೇಕು. ರಾಜಕೀಯ ಸಂಸ್ಥೆಗಳು ತಮ್ಮ ಪದಾಧಿಕಾರಿಗಳಿಗೆ ನಿಯಮ ಸಂಹಿತೆ ರೂಪಿಸಬೇಕು. ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕರ್ತವ್ಯದ ಬಗೆಗೂ ದೇಶದ ಹಿತದ ಬಗ್ಗೆಯೂ ನಮ್ಮ ರಾಜಕಾರಣಿಗಳಲ್ಲೂ ಅಧಿಕಾರಿಗಳಲ್ಲೂ ಇಂತಹ ನಿಷ್ಠೆ ಮತ್ತು ಕಳಕಳಿ ಮೂಡಲಿಲ್ಲವಾದರೆ ದೇಶದ ಆಡಳಿತದ ಬಿಗಿ ಸಡಿಲವಾದೀತು.

ಮುಂಗಾರು
ಭಾನುವಾರ, ಫೆಬ್ರವರಿ 16, 1986

ಫಿಲಿಪ್ಪೀನ್ಸ್‌ನಲ್ಲಿ ಕಪಟ ನಾಟಕ

ಫಿಲಿಪ್ಪೀನ್ಸ್‌ನಲ್ಲಿ ಕ್ಷೋಭೆ ಉಂಟಾಗಿದೆ. ಅಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯ ಫಲಿತಾಂಶದಲ್ಲಿ ಅತಂತ್ರ ಸ್ಥಿತಿ ಉಂಟಾಗಿದೆ.

ಅನೇಕ ದಶಕಗಳ ಕಾಲ ಆಂತರಿಕ ರಾಜಕೀಯ ಕಲಹಗಳಿಂದ ಜರ್ಜರಿತವಾದ ಈ ದೇಶದ ಜನ ನೈಜ ಪ್ರಜಾಪ್ರಭುತ್ವಕ್ಕಾಗಿ ತುಡಿಯುತ್ತಿರುವುದನ್ನು ಪ್ರಸ್ತುತ ನಡೆದ ಚುನಾವಣೆಯಲ್ಲಿ ಕಾಣಬಹುದಾಗಿದೆ. ಶೇಕಡ 80 ರಿಂದ ಶೇಕಡ 90ರ ತನಕ ಮತದಾರರು ಮತದಾನದಲ್ಲಿ ಭಾಗವಹಿಸಿದ್ದರು. ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕಾಗಿ ಈಗಿನ ಅಧ್ಯಕ್ಷ ಫರ್ಡಿನಾಂಡ್ ಮಾರ್ಕೋಸ್ ಅನೇಕ ಹೂಟಗಳನ್ನು ಈ ಚುನಾವಣೆಯಲ್ಲಿ ಹೂಡಿದ್ದರು. ಹಿಂಸೆಯ ತಾಂಡವವೇ ಅಲ್ಲಿ ನಡೆದಿತ್ತು. ಮತಗಟ್ಟೆಗಳ ಅಪಹರಣ ಮಾಡಲಾಗಿತ್ತು. ಎದುರಾಳಿಗಳಿಗೆ ಬೆದರಿಕೆ ಒಡ್ಡಲಾಗಿತ್ತು.

ಇದೆಲ್ಲವನ್ನೂ ಮಾರ್ಕೋಸ್ ಅವರ ನ್ಯೂ ಸೊಸೈಟಿ ಮೂವ್‌ಮೆಂಟ್‌ನ ಕಾರ್ಯಕರ್ತರ ಹೆಸರಿನಲ್ಲಿ ಭದ್ರತಾ ಪಡೆಯವರೂ ಪೊಲೀಸರೂ ನಡೆಸಿದ್ದರು. ಅಲ್ಲಿನ ಆಡಳಿತೆಯನ್ನೂ ಸೈನ್ಯವನ್ನೂ ಸಕ್ರಿಯವಾಗಿ ರಾಜಕೀಯದಲ್ಲಿ ತೊಡಗಿಸುವ ಪ್ರಯೋಗವನ್ನು ಹೀಗೆ ಮಾರ್ಕೋಸ್ ನಡೆಸುತ್ತಿರುವುದು ಇದು ಮೊದಲೇನೂ ಅಲ್ಲ. ತಮ್ಮ ಅಧಿಕಾರದ ಸುಮಾರು ಎರಡು ದಶಕಗಳಿಂದಲೂ ಅವರು ಅದನ್ನೇ ಮಾಡುತ್ತ ಬಂದವರು. ತನಗೆ ಸಡ್ಡು ಹೊಡೆದು ನಿಂತು ಜನರ ಆಶೋತ್ತರಗಳ ಸಾಕಾರ ರೂಪವಾಗಿ ಬೆಳೆಯತೊಡಗಿದ ವಿರೋಧ ಪಕ್ಷ ನಾಯಕ ಅಕ್ವಿನೋರನ್ನು ಅವರು ಮುಗಿಸಿಬಿಟ್ಟದ್ದೂ ಹಾಗೆಯೇ. ವಿದೇಶ ಪ್ರವಾಸ ಮುಗಿಸಿ ಬಂದು ವಿಮಾನದಿಂದ ಇಳಿಯುತ್ತಿದ್ದಂತೆಯೇ ಅವರನ್ನು ಸೈನ್ಯದ ಅಧಿಕಾರಿಗಳೇ ಗುಂಡಿಟ್ಟುಕೊಂದರು. ಫಿಲಿಪ್ಪೀನ್ಸ್‌ನ ಇಂದಿನ ದೊಡ್ಡ ಕ್ಷೋಭೆಯ ಮೂಲ ಅಲ್ಲೇ ಅಡಗಿದೆ.

ಇದೀಗ ಚುನಾವಣೆಯಲ್ಲಿ ಮತದಾರರು ವಿರೋಧ ಪಕ್ಷಗಳ ಕೂಟದ ಅಭ್ಯರ್ಥಿ ಕೊರಾಜೋನ್ ಅಕ್ವಿನೋರನ್ನು ದೇಶದ ಅಧ್ಯಕ್ಷಸ್ಥಾನಕ್ಕೆ ಚುನಾಯಿಸಿದ್ದಾರೆಂಬುದು ವಿಚಾರವಂತರೆಲ್ಲರೂ ಒಪ್ಪುವ ವಿಚಾರ. ಆಕೆ ಕೊಲೆಗೀಡಾದ ವಿರೋಧ ಪಕ್ಷ ನಾಯಕನ ಪತ್ನಿ. ತತ್ವಾದರ್ಶಗಳಿಗಾಗಿ ಬಲಿದಾನ ಮಾಡಿದ ಕುಟುಂಬದಾಕೆಯೆಂಬ ಭಾವನೆಯ ಅಲೆಗಳೇ ಆಕೆಯನ್ನು ವಿಜಯದತ್ತ ತಂದಿವೆ.

ಕೊರಾಜೋನ್ ವಿಜಯಿ ಎಂದು ಅವರ ಬೆಂಬಲಿಗರು ಸಾರಿದ್ದಾರೆ. ತಾನು ವಿಜಯಿ ಎಂದು ಮಾರ್ಕೋಸ್ ಹೇಳುತ್ತಿದ್ದಾರೆ. ಅವರ ನಿಯಂತ್ರಣದಲ್ಲಿರುವ ಎಲ್ಲ ಮಾಧ್ಯಮಗಳೂ ಅದನ್ನು ಹೇಳುತ್ತಿವೆ. ಅಧಿಕೃತ ಚುನಾವಣಾ ಆಯೋಗ ಮಾರ್ಕೋಸ್ ಮುನ್ನಡೆಯಲ್ಲಿದ್ದಾರೆಂದು ಹೇಳಿದೆ. ಈ ಅಂಕೆಸಂಖ್ಯೆಗೂ ಎಣಿಕೆ ನಡೆಸುವ ಕಂಪ್ಯೂಟರಿನ ಅಂಕೆ ಸಂಖ್ಯೆಗೂ ತಾಳೆ ಇಲ್ಲದಿರುವುದನ್ನು ಕಂಡು ಎಣಿಕೆ ನಡೆಸುವ ಕಂಪ್ಯೂಟರ್ ತಜ್ಞರು ಹೊರ ನಡೆದಿದ್ದಾರೆ. ಪರಿಣಾಮವಾಗಿ ಎಣಿಕೆಯ ಕಾರ್ಯವನ್ನು ಮಾರ್ಕೋಸ್ ತನ್ನ ಪಕ್ಷವಾದ ನ್ಯೂ ಸೊಸೈಟಿ ಮೂವ್‌ಮೆಂಟ್‌ನ ಅಧಿಪತ್ಯವಿರುವ ನ್ಯಾಶನಲ್ ಅಸೆಂಬ್ಲಿಗೆ ವಹಿಸಿಕೊಟ್ಟಿದ್ದಾರೆ. ಅಲ್ಲಿಯೂ ಗೊಂದಲ ನಡೆದಿದೆ. ತೆರೆದ ಮತಪೆಟ್ಟಿಗೆಗಳನ್ನು ವೇದಿಕೆಯಲ್ಲಿರಿಸಿಕೊಂಡು ನ್ಯಾಶನಲ್ ಅಸೆಂಬ್ಲಿ ಸದಸ್ಯರು ವಾಗ್ವಾದಕ್ಕಿಳಿದಿದ್ದಾರೆ.

ಈ ಗೊಂದಲದಲ್ಲಿ ಮಾರ್ಕೋಸ್ ವಿಜಯಿಯೆಂದು ಅಸೆಂಬ್ಲಿಯೂ ಚುನಾವಣಾ ಮಂಡಳಿಯೂ ಸಾರುವ ಸಾಧ್ಯತೆಯಿದೆ. ಕೊರಾಜೋನ್ ಅಕ್ವಿನೋಗೆ ಉಪಾಧ್ಯಕ್ಷ ಸ್ಥಾನವನ್ನು ಕೊಡ ಮಾಡಲಾಗಿತ್ತು. ಆಕೆ ಅದನ್ನು ತಿರಸ್ಕರಿಸಿದ್ದರು. ಶಾಂತಿಯುತವಾದ ಪ್ರತಿಭಟನಾ ಚಳವಳಿ ನಡೆಸುವ ನಿರ್ಧಾರವನ್ನು ಅವರು ಈಗಾಗಲೇ ಪ್ರಕಟಿಸಿದ್ದಾರೆ. ವಿರೋಧ ಪಕ್ಷದ ಒಂದು ವಿಭಾಗದ ಬಾಯಿ ಮುಚ್ಚಿಸಲು ಅವರ ಉಪಾಧ್ಯಕ್ಷ ಅಭ್ಯರ್ಥಿ ಸಾಲ್ವದೋರ್ ಎಚ್. ಲಾರೆಲ್‌ರನ್ನು ವಿಜಯಿಯೆಂದು ಪ್ರಕಟಿಸುವ ಹುನ್ನಾರನ್ನೂ ಮಾರ್ಕೋಸ್ ಮಾಡುತ್ತಿದ್ದಾರೆ.

ಇದೆಲ್ಲವೂ ಜಗತ್ತಿನ ಅತ್ಯಂತ ಬಲಾಢ್ಯ ಪ್ರಜಾಪ್ರಭುತ್ವವಾದ ಅಮೆರಿಕ ಸಂಯುಕ್ತ ಸಂಸ್ಥಾನದ ಮೂಗಿನ ಕೆಳಗೇ ನಡೆಯುತ್ತಿದೆ. ಅಮೆರಿಕ ಫಿಲಿಪ್ಪೀನ್ಸ್‌ನಲ್ಲಿ ಹತ್ತಾರು ವಿಮಾನ ನೆಲೆಗಳನ್ನೂ ನೌಕಾ ನೆಲೆಗಳನ್ನೂ ಹೊಂದಿದೆ. ಈ ನೆಲೆಗಳ ಬಾಡಿಗೆಯಾಗಿ ಅದು ವರ್ಷಕ್ಕೆ 25ಕೋಟಿ ಡಾಲರುಗಳನ್ನು ಫಿಲಿಪ್ಪೀನ್ಸ್‌ಗೆ ಕೊಡುತ್ತಿದೆ. ಇತರ ನೆರವೂ ಸಲ್ಲುತ್ತಿದೆ. ಫಿಲಿಪ್ಪೀನ್ಸ್‌ನ ಇಂದಿನ ವಿದ್ಯಮಾನಗಳಿಂದ ಅಮೆರಿಕದ ಸರಕಾರ ರೋಸಿ ಹೋಗಿರುವ ಬಗ್ಗೆ ವರದಿಗಳಿವೆ. ಚುನಾವಣೆಯಲ್ಲಿ ಅಕ್ರಮ ನಡೆದಿದೆಯೆಂದು ಅಮೆರಿಕದ ಸೆನೆಟರ್ ಒಬ್ಬರ ನೇತೃತ್ವದ ವೀಕ್ಷಕ ನಿಯೋಗ ವರದಿ ಮಾಡಿದೆ.

ಅಮೆರಿಕ ಒತ್ತಡ ಹೇರಿದರೆ ಫಿಲಿಪ್ಪೀನ್ಸ್‌ನ ಸರ್ವಾಧಿಕಾರಿ ಮಣಿಯುವುದು ಸಾಧ್ಯ. ಅಲ್ಲಿನ ಜನರಿಗೆ 1946ರಲ್ಲಿ ಅಮೆರಿಕದಿಂದ ಸಿಕ್ಕಿದ ರಾಜಕೀಯ ಸ್ವಾತಂತ್ರ್ಯಕ್ಕೆ ಕೊನೆಗೂ ಅರ್ಥ ಬಂದೀತು. ಆಡಳಿತೆ ಜನತಂತ್ರಕ್ಕೆ ಸಲ್ಲುವಂತಹದ್ದಾಗಿರಬೇಕು ಎಂಬ ಇರಾದೆ ಅಮೆರಿಕಕ್ಕೂ ಇರುವಂತಿದೆ. ಆದರದು ಜನತಂತ್ರದ ಮೇಲಿನ ಪ್ರೀತಿಯಿಂದ ಎನ್ನುವಂತಿಲ್ಲ. ಫಿಲಿಪ್ಪೀನ್ಸ್‌ನಲ್ಲಿ ಕಮ್ಯೂನಿಸಮನ್ನು ಪ್ರತಿರೋಧಿಸಲು ಸರಕಾರಕ್ಕೆ ಜನರ ಬೆಂಬಲಬೇಕು ಎಂಬ ಒಂದೇ ಕಾರಣಕ್ಕಾಗಿ.

ವಿವಾದ ಬೇಗ ಕೊನೆಗೊಳ್ಳದೆ ಇದ್ದರೆ ರಾಜಕೀಯ ಬಿಕ್ಕಟ್ಟು ಕುದಿಯುತ್ತಲೇ ಇದ್ದರೆ ಫಿಲಿಪ್ಪೀನ್ಸ್‌ನಲ್ಲಿ ಸೈನ್ಯವು ಹಸ್ತಕ್ಷೇಪಿಸುವ ಸಾಧ್ಯತೆಯುಂಟು. ಅದು ನಡೆದರೆ ಜನ ಸಮುದಾಯದ ಆಸೆ-ಆಕಾಂಕ್ಷೆಗಳ ಮೇಲೆ ಕಲ್ಲು ಚಪ್ಪಡಿ ಎಳೆಯುವ ಮತ್ತೊಂದು ಅಪರಾಧಕ್ಕೆ ಅಮೆರಿಕವೇ ಹೊಣೆಯಾಗುತ್ತದೆ.

ಮುಂಗಾರು
ಶನಿವಾರ, ಮಾರ್ಚ್ 1, 1986

ಮುತ್ಸದ್ದಿತನ ಅಲ್ಲ

ಪಂಜಾಬು ರಾಜ್ಯದಲ್ಲಿ ಭಯೋತ್ಪಾದಕತೆ ನಿಂತಿಲ್ಲ. ಹೆಚ್ಚುತ್ತಿದೆ. ಇತ್ತೀಚಿನ ದಿನಗಳಲ್ಲಿ ಅಲ್ಲಿ ಅನೇಕ ಕೊಲೆಗಳಾಗಿವೆ. ರೈಲು ನಿಲ್ದಾಣಕ್ಕೆ ಬೆಂಕಿ ಹಚ್ಚುವ ಯತ್ನ ನಡೆದಿದೆ. ಪೊಲೀಸ್ ಠಾಣೆಯೊಂದರಿಂದ ಶಸ್ತ್ರಾಸ್ತ್ರ ದೋಚಲಾಗಿದೆ. ಭಯೋತ್ಪಾದಕ ಕೃತ್ಯಗಳು ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಏಕಪ್ರಕಾರವಾಗಿ ಸಂಭವಿಸುತ್ತಿವೆ. ಉಗ್ರಗಾಮಿ ಸಿಖ್ಖ ಕಾರ್ಯಕರ್ತರು ಸ್ವರ್ಣದೇವಾಲಯವನ್ನು ವಶಪಡಿಸಿಕೊಂಡು ಅದನ್ನೊಂದು ಶಸ್ತ್ರ ಕೋಠಿಯನ್ನಾಗಿ ಮಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಅಕಾಲಿ ದಳವೂ ಎಸ್. ಜಿ. ಪಿ. ಸಿ. ಯೂ ಮುತುವರ್ಜಿ ವಹಿಸಿ ಸರಬತ್ ಖಾಲ್ಸಾ ಕರೆದಿವೆ. ಭಯೋತ್ಪಾದಕತೆಯನ್ನು ಸಂಪೂರ್ಣವಾಗಿ ಮಟ್ಟ ಹಾಕುವಂತೆಯೂ ಸ್ವರ್ಣ ದೇವಾಲಯವನ್ನು ಭಯೋತ್ಪಾದಕರಿಂದ ವಿಮೋಚನೆಗೊಳಿಸುವಂತೆಯೂ ಸಿಖ್ಖರ ಈ ಮಹಾಸಭೆ ಅಕಾಲಿದಳ ಸರಕಾರಕ್ಕೆ ಆದೇಶ ಕೊಟ್ಟಿದೆ.

ಇಷ್ಟು ಬೆಳವಣಿಗೆಗಳು ಪಂಜಾಬಿನಲ್ಲಿ ನಡೆಯುತ್ತಿರುವಂತೆಯೇ ಅತ್ತ ದೆಹಲಿಯಲ್ಲಿ ಪ್ರಧಾನ ಮಂತ್ರಿ ರಾಜೀವ್ ಗಾಂಧಿ ಸಂಸತ್ತಿನಲ್ಲಿ ಹೇಳಿಕೆ ನೀಡುತ್ತ ಪಂಜಾಬಿನಲ್ಲಿ ಭಯೋತ್ಪಾದಕತೆಯನ್ನು ನಿರ್ಮೂಲನ ಮಾಡಲು ಅಕಾಲಿ ಸರಕಾರ ವಿಫಲವಾಗಿದೆಯೆಂದು ದೂರಿದ್ದಾರೆ. ಭಯೋತ್ಪಾದಕತೆಯನ್ನೂ ವಿಧ್ವಂಸಕರನ್ನೂ ಮಟ್ಟ ಹಾಕುವ ಸಂಪೂರ್ಣ ಜವಾಬ್ದಾರಿ ಅಕಾಲಿ ಸರಕಾರದ್ದು ಎಂಬಂತೆ ಅವರು ಮಾತನಾಡಿದ್ದಾರೆ. ಇದಕ್ಕೆ ಕೆಲವು ದಿನಗಳ ಮೊದಲು ಅವರು ಲೋಕಸಭೆಯಲ್ಲಿ ಹೇಳಿಕೆ ಕೊಡುತ್ತ ಪಂಜಾಬಿನ ಸರಕಾರದ ಕಾರ್ಯನಿರ್ವಹಣೆಯನ್ನು ಕೇಂದ್ರ ಸರಕಾರವು ಎಚ್ಚರದಿಂದ ಪರಿಶೀಲಿಸುತ್ತಿದೆಯೆಂಬ ಎಚ್ಚರಿಕೆಯ ಮಾತನ್ನಾಡಿದರು.

ಪಂಜಾಬಿನಲ್ಲಿ ಶಾಂತಿ ಪಾಲನೆ ಮಾಡುವ ಜವಾಬ್ದಾರಿಯನ್ನು ಕೇಂದ್ರ ಸರಕಾರ ಸಂಪೂರ್ಣವಾಗಿ ರಾಜ್ಯ ಸರಕಾರದ ಮೇಲೆ ಹಾಕುವಂತಿಲ್ಲ. ಇದು ಕೇವಲ ಕಾನೂನು ಹಾಗೂ ಶಾಂತಿ ಪಾಲನೆಯ ಪ್ರಶ್ನೆಯಲ್ಲ. ಇದೊಂದು ಜಟಿಲವಾದ ರಾಜಕೀಯ ಪ್ರಶ್ನೆ. ಅದನ್ನು ರಾಜ್ಯ ಸರಕಾರ ಮಾತ್ರವೇ ಬಗೆ ಹರಿಸುವುದಕ್ಕಾಗುವುದಿಲ್ಲ. ಕೇಂದ್ರ ಸರಕಾರದ ಸಕ್ರಿಯ ಪಾಲುದಾರಿಕೆ ಬೇಕು. ಆಗ ಮಾತ್ರ ಈ ಸಮಸ್ಯೆ ಬಗೆಹರಿದೀತು. ಭಯೋತ್ಪಾದಕರನ್ನು ನಿರ್ಮೂಲನಗೊಳಿಸಬೇಕಾದ್ದು ರಾಜ್ಯ ಸರಕಾರದ ಕರ್ತವ್ಯ ನಿಜ. ಈ ಹೊಣೆಗಾರಿಕೆಯನ್ನು ಪ್ರಧಾನಿಯವರು ಹೇಳಿದಂತೆ ಪಂಜಾಬಿನ ಮತದಾರರು ಅಕಾಲಿ ಸರಕಾರಕ್ಕೆ ವಹಿಸಿಕೊಟ್ಟಿದ್ದಾರೆ. ಅದರ ಜತೆಗೇ ಅಕಾಲಿ ಸರಕಾರಕ್ಕೆ ಇನ್ನು ಹಲವು ಕರ್ತವ್ಯಗಳನ್ನೂ ಹೊಣೆಗಾರಿಕೆಗಳನ್ನೂ ಅವರು ವಹಿಸಿಕೊಟ್ಟಿದ್ದಾರೆ. ತಮ್ಮ ಕೆಲವು ಆಶೋತ್ತರಗಳನ್ನು ಪೂರೈಸುವ ಜವಾಬ್ದಾರಿಯನ್ನು ಅಕಾಲಿ ಸರಕಾರ ನಿರ್ವಹಿಸೀತು ಎಂದು ಅವರು ನಿರೀಕ್ಷಿಸಿದ್ದಾರೆ. ಇದು ಸಿಖ್ಖ ಸಮುದಾಯದ ನಿರೀಕ್ಷೆಯಂತೆ ಇತರೆಲ್ಲ ಜನಸಮುದಾಯಗಳ ನಿರೀಕ್ಷೆಯೂ ಆಗಿದೆ. ತಂತಮ್ಮ ವ್ಯವಹಾರಗಳನ್ನೂ ಅಭಿವೃದ್ಧಿಯ ದಿಕ್ಕು–ದೆಸೆಗಳನ್ನೂ ತಾವೇ ನಿರ್ಧರಿಸಬೇಕು. ಆಯಾ ಜನಸಮುದಾಯದ ಜಾಯಮಾನಕ್ಕೆ ಸರಿಯಾಗಿ ಇವುಗಳು ಇರಬೇಕು ಎಂಬುದೇ ಹಲವು ರಾಜ್ಯಗಳ ಜನರ ಬಯಕೆಯಾಗಿದೆ. ರಾಜ್ಯಗಳ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಿಷಯ–ವ್ಯವಹಾರಗಳು ರಾಜ್ಯದಲ್ಲೇ ತೀರ್ಮಾನವಾಗಲಿ. ದೆಹಲಿಯಲ್ಲಿ ತೀರ್ಮಾನಗೊಂಡು ರಾಜ್ಯಗಳ ಮೇಲೆ ಹೇರುವುದು ಬೇಡ ಎಂಬುದು ಈ ದೇಶದ ಬಹುತೇಕ ಮಂದಿಯ ಕೂಗು. ಕೇಂದ್ರವು ಅಗತ್ಯಕ್ಕಿಂತ ಹೆಚ್ಚು ಅಧಿಕಾರಗಳನ್ನು ಕೈಯಲ್ಲಿರಿಸಿಕೊಂಡಿದೆ ಎಂಬುದು ಪಂಜಾಬು ಆಂದೋಲನದಲ್ಲಿ ಎದ್ದಿರುವ ಮೂಲಭೂತವೂ ಮಹತ್ವವೂ ಆದ ವಿಚಾರ.

ಇದನ್ನು ಬಗೆಹರಿಸುವುದಕ್ಕೆ ಕೇಂದ್ರ ಸರಕಾರ ಏನು ಮಾಡಿದೆ? ಸರ್ಕಾರಿಯಾ ಆಯೋಗಕ್ಕೆ ಕೇಂದ್ರ ಸರಕಾರ ಸಹಕಾರ ಕೊಡುತ್ತಿಲ್ಲವೆಂಬ ಆರೋಪವೊಂದು ಇತ್ತೀಚೆಗೆ ಬಂದಿತ್ತು. ಆಯೋಗ ಕಳಿಸಿರುವ ಸುತ್ತೋಲೆಗೆ ಅದಿನ್ನೂ ಉತ್ತರಗಳನ್ನು ಕಳಿಸಿಲ್ಲ. ಪಂಜಾಬು ಒಡಂಬಡಿಕೆಯ ಅನುಷ್ಠಾನವು ಕುಂಟುತ್ತಿದೆ. ಚಂಡೀಗಢದ ಹಸ್ತಾಂತರ ಆಗಿಲ್ಲ. ಮ್ಯಾಥ್ಯೂ ಆಯೋಗ ಸೋತು ಹೋಗಿದೆ. ಅನಂತರದ ಬೆಳವಣಿಗೆಯೇನು ಎಂಬುದು ಇನ್ನೂ ಸ್ಪಷ್ಟವಿಲ್ಲ.

ಸಮಗ್ರ ಪರಿಹಾರದ ದಾರಿಯಲ್ಲಿ ಹೆಜ್ಜೆಗಳನ್ನಿಡದೆ ಕೇವಲ ಪಂಜಾಬು ಸರಕಾರ ಭಯೋತ್ಪಾದಕರನ್ನು ನಿರ್ಮೂಲನ ಮಾಡಿಲ್ಲ ಎಂದು ತೆಗಳುವುದು ನ್ಯಾಯಸಮ್ಮತವೆನಿಸದು. ಅದು ತಾತ್ಕಾಲಿಕ ಲಾಭದ ರಾಜಕೀಯ ತಂತ್ರವೆನಿಸಬಹುದೇ ವಿನಹ ರಾಜಕೀಯ ಮುತ್ಸದ್ದಿತನ ಎನಿಸಲಾರದು.

ಅಶಿಸ್ತು ತಂದ ಅನಾಹುತ

ತಲಚೇರಿ ನಗರದಲ್ಲಿ ಶುಕ್ರವಾರ ಮುಂಜಾನೆ ಐದೂವರೆ ಗಂಟೆಗೆ ಸಂಭವಿಸಿದ ಭೀಕರ ಅಪಘಾತವೊಂದರಲ್ಲಿ 27 ಜನ ಪ್ರಾಣತೆತ್ತಿರುವ ವರದಿ ಬಂದಿದೆ.

ತಲಚೇರಿ ರೈಲು ನಿಲ್ದಾಣದಿಂದ ಎರಡು ಕಿಲೋಮೀಟರು ದಕ್ಷಿಣಕ್ಕೆ ರೈಲುಹಳಿಯ ಮೇಲೆ ನಿಂತು ಸುಡುಮದ್ದು ಪ್ರದರ್ಶನ ನೋಡುತ್ತಿದ್ದ ಜನಜಂಗುಳಿ ಮೇಲೆ ರೈಲೊಂದು ಚಲಿಸಿದ ಪರಿಣಾಮವಾಗಿ ಈ ದುರಂತ ನಡೆದಿದೆ. ಸ್ಥಳೀಯ ಜಗನ್ನಾಥ ದೇವಾಲಯದ ಉತ್ಸವದ ಸುಡುಮದ್ದು ಪ್ರದರ್ಶನವನ್ನು ಎತ್ತರದ ತಾಣದಿಂದ ಕಾಣಲೆಂದು ರೈಲ್ವೇ ಹಳಿ ಏರಿ ಜನ ನಿಂತಿದ್ದರಿಂದಲೇ ಈ ಅಪಘಾತವಾಯಿತೆಂದು ರೈಲ್ವೆ ಅಧಿಕಾರಿಗಳು ಹೇಳುತ್ತಾರೆ. ರೈಲು ಹಾದಿಯು ಆ ಭಾಗದಲ್ಲಿ ವಕ್ರವಾಗಿರುವುದರಿಂದ ರೈಲು ಚಾಲಕನಿಗೆ ಹಳಿಯ ಮೇಲೆ ಜನ ನಿಂತಿರುವುದು ಗೋಚರಿಸಲಿಲ್ಲವೆಂದು ಅವರು ಸ್ಪಷ್ಟನೆ ನೀಡಿದ್ದಾರೆ. ರೈಲಿನ ಶಿಳ್ಳೂ ಸದ್ದೂ ಸುಡುಮದ್ದಿನ ಸದ್ದಿನಲ್ಲಿಯೂ ಪ್ರಭೆಯಲ್ಲಿಯೂ ಮುಳುಗಿಹೋಗಿ ಜನರಿಗೆ ಗೋಚರಿಸದೆ ಹೋಗಿರಬೇಕು. ಜನರ ಗುಂಪು ಚಾಲಕನಿಗೆ ಕಾಣಿಸಿದೆ ಎಂದಾದರೆ ರೈಲನ್ನು ನಿಲ್ಲಿಸುತ್ತಿದ್ದರೆಂದೇ ನಾವೆಲ್ಲ ನಂಬಬೇಕಾಗಿದೆ.

ಆದ್ದರಿಂದ ಈ ದುರಂತದಲ್ಲಿ ಸಾವು ನೋವುಗಳನ್ನುಂಡವರು ತಂತಮ್ಮ ಅವಸ್ಥೆಗೆ ತಾವೇ ಹೊಣೆಗಾರರಾಗುತ್ತಾರೆ. ಭಾರತೀಯರಾದ ನಮ್ಮ ಬದುಕೇ ಹೀಗಾಗಿ ಬಿಟ್ಟಿದೆ. ನಮಗೆ ಆಡಂಬರ ಆಚರಣೆಗೆ, ಮನರಂಜನೆಗೆ ಹೊತ್ತು ಗೊತ್ತಿಲ್ಲ; ಸ್ಥಳದ ಔಚಿತ್ಯ–ಅನೌಚಿತ್ಯದ ಬಗ್ಗೆ ಪರಿವೆಯಿಲ್ಲ. ನಮ್ಮಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಇರುಳಿಡೀ ಕುಳಿತು ವಾಹನ ಸಂಚಾರಕ್ಕೆ ತಡೆಯೊಡ್ಡುತ್ತ ಯಕ್ಷಗಾನ ಬಯಲಾಟ ನೋಡುವ ಜನರಿದ್ದಾರೆ. ರಸ್ತೆ ಮಧ್ಯೆಯೇ ವಾಹನ ಪಾರ್ಕ್ ಮಾಡುವವರಿದ್ದಾರೆ. ತಮ್ಮ ಬದುಕನ್ನು ಹಗುರ ಮಾಡಿಕೊಳ್ಳಲು ರಸ್ತೆ ನಡುವೆ ಗೂಡಂಗಡಿ ಸ್ಥಾಪಿಸಿ ಬೇರೆಯವರ ಬದುಕನ್ನು ಭಾರ ಮಾಡುವವರಿದ್ದಾರೆ. ಹಣದ ಗಂಟು ಮಾಡಿಕೊಳ್ಳಲು ರಸ್ತೆ ಆಕ್ರಮಿಸಿ ಕಟ್ಟಡ ಹಾಕುವವರಿದ್ದಾರೆ.

ನಾಗರಿಕತೆ ಬೆಳೆಯುತ್ತಿದ್ದರೂ ನಾವು ಅನಾಗರಿಕರೇ ಆಗಿ ಉಳಿದಿರುವುದನ್ನು ಇದೆಲ್ಲವೂ ಸೂಚಿಸುತ್ತದೆ. ಬದುಕಿನಲ್ಲಿ ಹೆಚ್ಚು ಶಿಸ್ತು ಅಳವಡಿಸಿಕೊಳ್ಳದಿದ್ದರೆ ತಲಚೇರಿಯಲ್ಲಿ ನಡೆದಂತಹ ದುರಂತಗಳನ್ನು ತಪ್ಪಿಸುವುದು ಕಷ್ಟ.

ಮುಂಗಾರು

ಭಾನುವಾರ, ಮಾರ್ಚ್ 2, 1986

ನಿರೀಕ್ಷೆ ನಿಜವಾಗಲಿ

ಕೇಂದ್ರ ಹಣಕಾಸು ಸಚಿವ ವಿಶ್ವನಾಥ ಪ್ರತಾಪ ಸಿಂಗ್ ಶುಕ್ರವಾರ ಲೋಕಸಭೆಯಲ್ಲಿ ಮಂಡಿಸಿದ ರಾಜೀವ ಗಾಂಧಿ ಸರಕಾರದ ಎರಡನೇ ಆಯವ್ಯಯ ಮುಂಗಡ ಪತ್ರ ಒಂದನೇ ಮುಂಗಡ ಪತ್ರದ ಮುಂದುವರಿಕೆಯೇ ಆಗಿದೆ. ಆರ್ಥಿಕತೆಯ ಸಮಗ್ರ ನೆಲೆ ಬೆಲೆಗಳಲ್ಲಿ ಮಹತ್ವದ ಬದಲಾವಣೆಗಳನ್ನು ಈ ಮುಂಗಡ ಪತ್ರ ತೋರಿಸಿಲ್ಲವಾದರೂ ಕೆಲವು ದಿಕ್ಸೂಚಿಗಳಿವೆ. ಮೊದಲ ಬಾರಿಯ ಮುಂಗಡ ಪತ್ರದಲ್ಲಿ ತೋರಿಬಂದ ಕೆಲವು ವಿಚಾರಗಳನ್ನು ಸರಿಪಡಿಸುವ ಯತ್ನಗಳನ್ನು ಇದರಲ್ಲಿ ಕಾಣುತ್ತೇವೆ.

ಕಳೆದ ಬಾರಿಯ ಆಯವ್ಯಯ ಪತ್ರ ಕೈಗಾರಿಕೆ ಹಾಗೂ ವಾಣಿಜ್ಯ ರಂಗಗಳಿಗೆ ಸಾರಾಸಗಟಾಗಿ ರಿಯಾಯಿತಿಗಳನ್ನೂ ಪರಿಹಾರಗಳನ್ನೂ ನೀಡಿದ್ದರೆ ಈ ಬಾರಿಯ ಮುಂಗಡ ಪತ್ರದಲ್ಲಿಯೂ ಅವುಗಳಿವೆ. ಆದರೆ ಪರಿಹಾರಗಳನ್ನು ಆಯ್ದ ಕ್ಷೇತ್ರಗಳಲ್ಲಿ ಕೊಡಲಾಗಿದೆ. ರಫ್ತು ಹೆಚ್ಚಿಸುವುದಕ್ಕೆ, ಆಮದು ಬದಲಿ ಪ್ರೋತ್ಸಾಹಿಸುವುದಕ್ಕೆ, ದೇಶೀಯ ಉದ್ಯಮಕ್ಕೆ ಬೆಂಬಲ ನೀಡುವುದಕ್ಕೆ, ದೇಶೀಯ ತಂತ್ರಜ್ಞಾನ ಅಭಿವೃದ್ಧಿಗೆ, ಕೈಮಗ್ಗದಂತಹ ಉದ್ಯೋಗಾವಕಾಶ ಅಧಿಕವಿರುವ ರಂಗಗಳಿಗೆ ಪ್ರೋತ್ಸಾಹಕ್ಕೆ ಈ ಪರಿಹಾರಗಳನ್ನು ಮೀಸಲಿಡಲಾಗಿದೆ. ನೀಡಲಾದ ಪರಿಹಾರಗಳ ಪಟ್ಟಿ ನೋಡಿದರೆ ಈ ವಿಷಯ ಸ್ಪಷ್ಟವಾಗುತ್ತದೆ. ಸೀಮೆ ಎಣ್ಣೆ ಸ್ಟವ್‌ಗೆ ಸುಂಕ ರದ್ದು, ದೇಶೀಯ ಎಣ್ಣೆ ಕಾಳು ಉದ್ಯಮಕ್ಕೆ ನೆರವು. ಔಷಧಿ ಹಾಗೂ ವೈದ್ಯ ಉಪಕರಣಗಳ ತೆರಿಗೆ ರದ್ದು. ಸಣ್ಣ ಕೈಗಾರಿಕೆಗಳ ಬಂಡವಾಳ ಮಿತಿ ಏರಿಕೆ, ಅಬಕಾರಿ ತೆರಿಗೆ ವ್ಯವಸ್ಥೆ ಪುನರ್ರಚನೆ, ವನಸ್ಪತಿ ಉದ್ಯಮಕ್ಕೆ ನೆರವು.ಎಣ್ಣೆ ಮಿಲ್‌ಗಳ ರಫ್ತಿಗೆ ಬೆಂಬಲ, ಸಣ್ಣ ಉದ್ದಿಮೆಗೆ ಸಾಲ, ಅದಕ್ಕಾಗಿ ಪ್ರತ್ಯೇಕ ನಿಧಿ, ಉಣ್ಣೆ ಕಂಬಳಿಗೆ ಪರಿಹಾರ, ಹತ್ತಿ–ಕೊಬ್ಬರಿ ತೆರಿಗೆ ರದ್ದು, ಮೀನು ರಫ್ತಿಗೆ ಪ್ರೋತ್ಸಾಹ, ಚಿನ್ನಾಭರಣ ಉದ್ಯಮಕ್ಕೆ ನೆರವು ಇವುಗಳನ್ನೆಲ್ಲ ಸಮಗ್ರವಾಗಿ ಪರಿಶೀಲಿಸಿದಾಗ ಈ ಸರಕಾರದ ಆರ್ಥಿಕ ನೀತಿ ತನ್ನ ವಿಕೃತಿಗಳನ್ನು ಕಳೆದುಕೊಳ್ಳುವ ದಾರಿಯನ್ನು ಕಂಡುಕೊಂಡಿದೆ ಎಂಬುದು.

ಉದ್ಯಮ ಹಾಗೂ ವಾಣಿಜ್ಯ ಚಟುವಟಿಕೆಗಳನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ವ್ಯೂಹ ರಚನೆ ಈ ಪ್ರಯತ್ನದಲ್ಲಿ ಕಾಣಿಸುತ್ತಿದೆ.

ಸರಕಾರ ತನ್ನ ಆರ್ಥಿಕ ನೀತಿಯಲ್ಲಿ ಈ ಬಾರಿ ಬಡ ವರ್ಗಗಳಿಗೆ ಬಾಧೆಯಾಗುವ ತೆರಿಗೆ ಕ್ರಮಗಳನ್ನು ಕೈಗೊಳ್ಳದೆ ಇರುವುದು ಇನ್ನೊಂದು ಮಹತ್ವದ ವಿಚಾರ. ಅಷ್ಟೇ ಅಲ್ಲದೆ ನಗರ ಹಾಗೂ ಗ್ರಾಮೀಣ ರಂಗಗಳಲ್ಲಿ ಕೆಳ ಮಧ್ಯಮ ಹಾಗೂ ಬಡ ವರ್ಗಗಳಿಗೆ ಹೆಚ್ಚು ಉದ್ಯೋಗಾವಕಾಶವನ್ನು ನಿರ್ಮಿಸುವ ಹಾಗೂ ಸ್ವಂತ ಉದ್ಯೋಗಗಳನ್ನು ಉಪಕ್ರಮಿಸಲು ನೆರವಾಗುವ ಸಬ್ಸಿಡಿ ಸಹಿತವಾದ ಸಾಲ ಯೋಜನೆ ಅಭಿವೃದ್ಧಿಯ ದಿಸೆಯಲ್ಲಿ ಹಾಗೂ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರ ನಿವಾರಣೆಯಲ್ಲಿ ಒಂದು ಸಣ್ಣದಾದರೂ ಸ್ವಾಗತಾರ್ಹ ಹೆಜ್ಜೆ.

ಶಿಕ್ಷಣಕ್ಕೆ, ಐ. ಆರ್. ಡಿ. ಪಿ. ಯಂತಹ ಗ್ರಾಮೀಣ ಅಭಿವೃದ್ಧಿ ಕಾರ್ಯಗಳಿಗೆ. ಹಣ ನೀಡಿಕೆಯನ್ನು ಗಮನಾರ್ಹವಾಗಿ ಏರಿಸಲಾಗಿದೆ. ಶಿಕ್ಷಣಕ್ಕೆ ಶೇಕಡಾ 120ರಷ್ಟು ಏರಿಕೆಯಾಗಿದ್ದರೆ ಗ್ರಾಮೀಣ ಅಭಿವೃದ್ಧಿಗೆ ಶೇಕಡಾ 65 ಏರಿಕೆ ಮಾಡಲಾಗಿದೆ. ಇಪ್ಪತ್ತಂಶ ಕಾರ್ಯಕ್ರಮಕ್ಕೆ 1000 ಕೋಟಿ ರೂ. ಹೆಚ್ಚಿಸಲಾಗಿದೆ. ಜತೆಗೆಯೆ ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದವರಿಗೂ ಹಿತ ಮಾಡುವ ಅನೇಕ ಕಾರ್ಯಕ್ರಮಗಳು ವೆಚ್ಚ ಪತ್ರದಲ್ಲಿವೆ. ಸಣ್ಣ ಉದ್ಯಮ ಅಭಿವೃದ್ಧಿಗೆ ನಿಧಿ. ವೇತನ ವರ್ಗದವರಿಗೆ ವರಮಾನ ತೆರಿಗೆಯಲ್ಲಿ ಸಾಕಷ್ಟು ಪರಿಹಾರ, ಕ್ಷೇಮ ನಿಧಿಯ ಬಡ್ಡಿ ಏರಿಕೆ, ಬಹುಮಾನ ತೆರಿಗೆಯಲ್ಲಿ ಪರಿಹಾರ–ಇವುಗಳೆಲ್ಲವೂ ಈ ಜನ ವರ್ಗಕ್ಕೆ ಲಾಭ ತರುವ ಕ್ರಮಗಳು.

ಕಾರು, ಬಣ್ಣದ ಟೆಲಿವಿಷನ್ ಸೆಟ್, ವಾತಾನುಕೂಲ ಯಂತ್ರೋಪಕರಣಗಳು, ರೆಫ್ರಿಜರೇಶನ್, ಕುದುರೆ ಜೂಜಿನ ತೆರಿಗೆ ಏರಿಕೆ, ಸಂಸ್ಕರಿತ ಖಾದ್ಯ ತೈಲದ ಕರ ಹೆಚ್ಚಳ, ಬಟ್ಟೆಯ ತೆರಿಗೆ ಹೆಚ್ಚಳ ಇವುಗಳೆಲ್ಲ ಉಳ್ಳವರು ದೇಶದ ಹಿತಕ್ಕಾಗಿ ಕೊಂಚವಾದರೂ ತ್ಯಾಗ ಮಾಡುವಂತೆ ವಿಧಿಸುವ ಕ್ರಮಗಳು. ಜತೆಗೆಯೇ ಕಂಪೆನಿಗಳ ಸರ್ಚಾರ್ಜು ರದ್ದು ಪಡಿಸಲಾಗಿದೆ. ಉದ್ಯಮ ರಂಗಕ್ಕೆ ನೀಡಲಾದ ಹಲವಾರು ರಿಯಾಯಿತಿಗಳಲ್ಲಿ ಇದೂ ಒಂದು. ಆದರೆ ಕಂಪೆನಿಗಳವರಿಗೆ ಇದರಿಂದ ತೃಪ್ತಿಯಾಗಿರಲಿಕ್ಕಿಲ್ಲ. ಅವರು ಬಹುಕಾಲದಿಂದ ಗೊಣಗುಟ್ಟುತ್ತಿರುವ ಸರ್‌ಟ್ಯಾಕ್ಸ್ ರದ್ದಾಗಬಹುದೆಂದು ನಿರೀಕ್ಷಿಸಿದ್ದರು. ಅವರ ನಿರೀಕ್ಷೆ ಸುಳ್ಳಾಗಿದೆ.

ಕೇಂದ್ರ ಹಣಕಾಸು ಸಚಿವರು ಕಪ್ಪು ಹಣದ ಮೇಲೆ ಯುದ್ಧ ಸಾರಿದ್ದಾರೆ. ಈ ಯುದ್ಧದ ಅಂಗವಾಗಿ ಮಹತ್ವದ ಕ್ರಮವೊಂದನ್ನು ಪ್ರಕಟಪಡಿಸಿದ್ದಾರೆ. ಮೆಟ್ರೊಪಾಲಿಟನ್ ನಗರಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಮೊತ್ತದ ಯಾವುದೇ ಸ್ಥಿರ ಸೊತ್ತನ್ನು .ಮಾರಾಟ ಮಾಡುವವನು ಒಪ್ಪಿಕೊಂಡ (ರಿಜಿಸ್ಟ್ರಿ ದಾಖಲೆಗಳಲ್ಲಿ ನಮೂದಿಸಲಾದ) ಬೆಲೆಗೆ ಸರಕಾರವೇ ಕೊಂಡುಕೊಳ್ಳುವ ಹಕ್ಕನ್ನು ಸರಕಾರ ಪ್ರಕಟಿಸಿದೆ. ಇದೊಂದು ತುಂಬಾ ಮಹತ್ವದ ಮತ್ತು ದೂರಗಾಮಿ ಪರಿಣಾಮಗಳುಳ್ಳ ಶಾಸನ ಕ್ರಮವಾಗಿದೆ. ಸೂಕ್ತವಾಗಿ ಅನುಷ್ಠಾನಗೊಂಡರೆ ಇದು ಕಳ್ಳ ಹಣದ ಬಹ್ವಂಶವನ್ನು ನಿರ್ಮೂಲನ ಮಾಡಬಲ್ಲುದು. ಇಂದು ನಮ್ಮ ನಗರಗಳಲ್ಲಿ ನಡೆಯುವ ಆಸ್ತಿ ಪಾಸ್ತಿ ವ್ಯವಹಾರಗಳಲ್ಲಿ ನಿಜವಾದ ಬೆಲೆಯನ್ನು ಯಾರೂ ದಸ್ತಾವೇಜುಗಳಲ್ಲಿ ಕಾಣಿಸುವುದಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಮುಕ್ಕಾಲಂಶವೂ ಕಳ್ಳ ಹಣವೇ ಆಗಿ ಉಳಿಯುತ್ತದೆ. ಸರಕಾರ ಪ್ರಕಟಿಸಿದ ಕ್ರಮ ಜಾರಿಗೆ ಬಂದರೆ ಕೆಲವಾದರೂ ಸೊತ್ತನ್ನು ಸರಕಾರ ಹೀಗೆ ಕೊಂಡುಕೊಂಡರೆ ಆ ಮೇಲೆ ಕಳ್ಳ ಹಣ ನಿಂತ ನೀರಾಗಿ ಬಿಟ್ಟು ಕೊಳೆತು ನಾಶವಾಗಿ ಹೋದೀತು.

ಅಭಿವೃದ್ಧಿ ಹಾಗೂ ತೆರಿಗೆ ಕ್ರಮಗಳಿಂದ ಸ್ವಾಗತಾರ್ಹವಾದ ಆಯವ್ಯಯ ಪತ್ರದಲ್ಲಿ ಅಪಾಯಕಾರಿಯಾದ ಒಂದು ವಿಚಾರವಿದೆ. ಅದುವೇ 3650 ಕೋಟಿ ರೂಪಾಯಿ ಕೊರತೆ. ಕಳೆದ ವರ್ಷದ ಆಯವ್ಯಯ ಪತ್ರದ ಅಂದಾಜು ಕೊರತೆಯಾದ 3,316 ಕೋಟಿ ರೂಪಾಯಿಯುವರ್ಷಾಂತ್ಯದ ವೇಳೆಗೆ4,490 ಕೋಟಿ ರೂಪಾಯಿಯಾಗಿ ಬೆಳೆಯಿತು. ಅಂದರೆ ಒಂದು ಸಾವಿರ ಕೋಟಿ ರೂಪಾಯಿಗೂ ಅಧಿಕ ಹೆಚ್ಚಳವಾಯಿತು, ಹಾಗಿರುವಲ್ಲಿ ಇಂದು ಕಾಣಿಸಲಾದ 3650 ಕೋಟಿ ರೂಪಾಯಿ ವರ್ಷಾಂತ್ಯದ ವೇಳೆಗೆ 5000 ಕೋಟಿ ರೂಪಾಯಿಯಾಗಿ ಬೆಳೆಯದೆಂದು ಭರವಸೆ ತಾಳಲು ಅವಕಾಶವಿಲ್ಲದಾಗಿದೆ.

ಇಂತಹ ದೊಡ್ಡ ಹಣಕಾಸಿನ ಕೊರತೆಯು ಅತಿಪ್ರಸರಣಕ್ಕೆ ಚಾಲನೆ ಕೊಡುವುದು ಖಂಡಿತ.ಆರ್ಥಿಕತೆಯ ಮೊತ್ತದ ದೃಷ್ಟಿಯಿಂದ ಈ ಕೊರತೆ ಕೇವಲ ಎರಡೂವರೆ ಶೇಕಡವಾದರೂ ಕಳ್ಳ ಹಣದ ಹಾವಳಿ ಈಗಾಗಲೇ ಬಹಳಷ್ಟಿರುವುದರಿಂದ ಕೊರತೆಯನ್ನು ಹಿಡಿತದಲ್ಲಿರಿಸಬೇಕಿತ್ತು. ಆದರೆ ಉದ್ಯಮಕ್ಕೂ ವಾಣಿಜ್ಯಕ್ಕೂ ನೀಡಿರುವ ಪ್ರೋತ್ಸಾಹದ ಚಾಲಕ ಶಕ್ತಿಯು ಉತ್ಪಾದನೆಯನ್ನು ಹೆಚ್ಚಿಸಿ ಅತಿಪ್ರಸರಣವನ್ನು ಹಿಡಿತದಲ್ಲಿರಿಸೀತೆಂದು ಹಣಕಾಸು ಸಚಿವರು ನಿರೀಕ್ಷಿಸಿರಬಹುದು. ಅವರ ನಿರೀಕ್ಷೆ ನಿಜವೆನಿಸಿದರೆ ಈ ದೇಶದ ಜನರ ಸೌಭಾಗ್ಯ.

ಮುಂಗಾರು, ಮಾರ್ಚ್ 4, 1986 ಪುಟ ನಾಲ್ಕು

ಮುಂಗಾರು

ಮಂಗಳವಾರ, ಮಾರ್ಚ್ 4, 1986

ಒಲಿಂಪಿಕ್ಸ್ ಎಂಬ ಬಿಳಿಯಾನೆ

'1992 ರ ಒಲಿಂಪಿಕ್ಸ್ ಕ್ರೀಡಾಕೂಟವನ್ನು ನಡೆಸಲು ಭಾರತ ಯತ್ನಿಸುವುದಿಲ್ಲ.' 'ಈ ಸಲದ ಮುಂಗಡ ಪತ್ರದಲ್ಲಿ ಕ್ರೀಡೆಗಾಗಿ 74 ಕೋಟಿ ರೂಪಾಯಿ ಮೀಸಲಿಡಲಾಗಿದೆ.' -ಎಂಬೆರಡು ಸುದ್ದಿಗಳು ನಮ್ಮ ಮುಂದಿವೆ.

1992 ರ ಒಲಿಂಪಿಕ್ಸನ್ನು ಭಾರತದಲ್ಲಿ ನಡೆಸಲು ಭಾರತೀಯ ಒಲಿಂಪಿಕ್ಸ್ ಸಂಸ್ಥೆ ತುದಿಗಾಲಲ್ಲಿ ನಿಂತಿದ್ದರೂ, ಹಣಕಾಸಿನ ತೊಂದರೆಗಳಿಂದಾಗಿ ಒಲಿಂಪಿಕ್ಸನ್ನು ನಡೆಸುವುದು ಅಸಾಧ್ಯ ಎಂದು ಕೇಂದ್ರ ಸರಕಾರವು ಅಭಿಪ್ರಾಯ ಪಟ್ಟಿದೆ.

'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ' ಇಡುವ ಸಂಪ್ರದಾಯ ನಮ್ಮಲ್ಲಿ ಎಂದಿನಿಂದಲೂ ಇದ್ದದ್ದೆ. ಹಣದುಬ್ಬರ ದಿನೇ ದಿನೇ ಏರುತ್ತಿರುವ, ಆರ್ಥಿಕತೆ ನಿಯಂತ್ರಣಕ್ಕೆ ಸಿಗದ ಈ ದೇಶದಲ್ಲಿ 'ಒಲಿಂಪಿಕ್ಸ್' ಎನ್ನುವುದು ತನ್ನ ನೈಜ ಉದ್ದೇಶದಲ್ಲಿ ಸಾರ್ಥಕತೆ ಪಡೆಯುವುದು ಅಸಾಧ್ಯ.

ಒಲಿಂಪಿಕ್ಸ್ ನಡೆಸುವುದಕ್ಕೆ ಮುಂಚೆ ನಾವು ಆಲೋಚಿಸಬೇಕಾದ ಇನ್ನೂ ಹಲವಾರು ವಿಷಯಗಳಿವೆ. ನಮಗೆ ನಮ್ಮದೇ ಆದ ಸಮಗ್ರ ಕ್ರೀಡಾ ಧೋರಣೆ ಇಲ್ಲ. ಕ್ರೀಡಾಭಿವೃದ್ಧಿಗಾಗಿ ಅಲ್ಪ ಸ್ವಲ್ಪ ಹಣ ಮಂಜೂರಾಗುತ್ತದಷ್ಟೇ ಹೊರತು ಅದು ವ್ಯವಸ್ಥಿತ ರೀತಿಯಲ್ಲಿ ಸದುಪಯೋಗವಾಗುವುದಿಲ್ಲ. ಜತೆಗೇ ಕ್ರೀಡಾ ಸಂಸ್ಥೆಗಳಿಗೆ ಮಂಜೂರಾಗುವ ಅಲ್ಪಸ್ವಲ್ಪ ಹಣದ ಸುತ್ತಲೂ ಗುಂಯ್‌ಗುಡುವ ಪುಢಾರಿಗಳ ಕಾಟ ಬೇರೆ. ದೇಶದ ವಿವಿಧ ರಾಜ್ಯಗಳಲ್ಲಿರುವ ರಾಜ್ಯ ಕ್ರೀಡಾ ಸಂಸ್ಥೆಗಳೂ ಒಂದಕ್ಕಿಂತ ಹೆಚ್ಚು ಬಣಗಳನ್ನು ಸ್ಥಾಪಿಸಿಕೊಂಡು, ತಮ್ಮದೇ 'ನೈಜ ಸಂಸ್ಥೆ'ಯೆಂದು ಸಾಧಿಸಲು ರಾಜಕೀಯಗಳಲ್ಲಿ ತೊಡಗಿರುವುದು, ಈ ರಾಜಕೀಯದ ಮಧ್ಯೆ ಕ್ರೀಡಾಪ್ರತಿಭೆಗಳು ಆಸರೆ, ಪ್ರೋತ್ಸಾಹ ಇಲ್ಲದೆ ಸೊರಗಿರುವುದು ನಮ್ಮ ಮುಂದಿರುವ ನಿತ್ಯ ಸತ್ಯ. ಕೆಲವು ಸಂಸ್ಥೆಗಳಂತೂ ಅಧಿಕಾರಕ್ಕಾಗಿ ನ್ಯಾಯಾಲಯದ ಕಟ್ಟೆ ಹತ್ತಿವೆ.

ಇಂತಹ ವಿಷಣ್ಣ ಪರಿಸರದಲ್ಲಿ ಸ್ವಂತ ಸಾಧನೆಯ ಬಲದಿಂದ ಅರಳುವ ಕ್ರೀಡಾ ಪ್ರತಿಭೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಅದಕ್ಕಾಗಿ ಮೊತ್ತ ಮೊದಲು ಅಶಕ್ತ, ಅಸ್ವಸ್ಥ ಕ್ರೀಡಾ ಸಂಸ್ಥೆಗಳನ್ನು ವಿಸರ್ಜಿಸಿ, ಹೊಸ ರೂಪ ನೀಡಬೇಕು. ಹೊಸ ರೂಪ ನೀಡುವ ಸಂದರ್ಭದಲ್ಲಿ ಪುಢಾರಿಗಳನ್ನು ಕ್ರೀಡಾ ಸಂಸ್ಥೆಗಳಿಂದ ದೂರ ಇಡುವ ಎಚ್ಚರಿಕೆ ಕೂಡಾ ಅತ್ಯಗತ್ಯ.

ಒಲಿಂಪಿಕ್ಸ್‌ಗೆ ಮುಂಚೆ ನಾವು ನಡೆಸಿದ ಏಷ್ಯನ್ ಗೇಮ್ಸ್‌ನಿಂದಾದ ಪ್ರತಿಫಲವಾದರೂ ಏನು? ಎನ್ನುವುದನ್ನು ಗಮನಿಸಬೇಕು. 1982ರ ಏಷ್ಯಾಡ್‌ಗಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಕಟ್ಟಿಸಿದ ಸ್ಟೇಡಿಯಂಗಳು, ನೂರಾರು ಕಟ್ಟಡಗಳು ಇಂದು ಹಾಳು ಸುರಿಯುತ್ತವೆ. ಅವುಗಳನ್ನು ಉಪಯೋಗಿಸುವವರಿಲ್ಲದೆ ಅಳುತ್ತಿವೆ.

ಸಮಗ್ರ ಕ್ರೀಡಾ ನೀತಿಯೊಂದನ್ನು ರೂಪಿಸುವಾಗ ದಿಲ್ಲಿಯಲ್ಲಿ 'ಮೇಳ' ನಡೆಸುವುದನ್ನು ಬಿಟ್ಟು ದೇಶದ ಜೀವಾಳಗಳಾದ ಹಳ್ಳಿಗಳಲ್ಲಿ ಕ್ರೀಡಾಭಿವೃದ್ಧಿಗೆ ಬೇಕಾದ ಬುನಾದಿ ನಿರ್ಮಿಸಬೇಕು. ಹಳ್ಳಿಗಳಲ್ಲಿರುವ ಕ್ರೀಡಾ ಪ್ರತಿಭೆಗಳನ್ನು ಬೆಳಕಿಗೆ ತಂದು ಬೆಳೆಸಲು ಇನ್ನಷ್ಟು ಕ್ರೀಡಾ ಶಾಲೆಗಳನ್ನು ನಿರ್ಮಿಸಬೇಕು. ಗ್ರಾಮೀಣ ಮಟ್ಟದಲ್ಲಿ ರಾಜ್ಯಮಟ್ಟದಲ್ಲಿ ಅಂಗ ಸಂಸ್ಥೆಗಳ ಮೂಲಕ ಪರಿಣಾಮಕಾರಿ ಕ್ರೀಡಾ ಯೋಜನೆಗಳನ್ನು ಹಮ್ಮಿಕೊಳ್ಳಬೇಕು.

ಇತ್ತೀಚೆಗೆ ನಡೆದ ರಾಷ್ಟ್ರೀಯ ಮಟ್ಟದ ಅಂತರಾಜ್ಯ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆಯಾದ ಕ್ರೀಡಾಪಟುಗಳು, ಕ್ರೀಡಾಕೂಟಕ್ಕೆ ಹೋಗಲು ಹಣಕ್ಕಾಗಿ ಪರದಾಡಿ, ಕೊನೆಗೆ ಸ್ವಂತ ಕೈಯಿಂದ ಖರ್ಚುಮಾಡಿ ತೆರಳಿದ ಉದಾಹರಣೆ ನಮ್ಮ ಮುಂದಿರುವಾಗ ದಿಲ್ಲಿಯಲ್ಲಿ ಇನ್ನೊಂದು ಮೇಳ ನಡೆಸಿದರೆ, ನಮ್ಮ ಪ್ರತಿಷ್ಠೆಯನ್ನು ಮೆರೆಸಬಹುದಷ್ಟೇ ಹೊರತು ಅದರಿಂದ ಕ್ರೀಡಾಪಟುಗಳಿಗೆ ನೆರವಾಗಲಿಕ್ಕಿಲ್ಲ.

ಕ್ರಿಕೆಟ್‌ನಂತಹ ಕ್ರೀಡೆಗಳಿಗೆ ಹೋಲಿಸಿದರೆ ಇಂದು ಅಥ್ಲೆಟ್‌ಗಳು ಅನುಭವಿಸುತ್ತಿರುವ ಸಂಕಷ್ಟಗಳು ಹಲವಾರು. ಸರಿಯಾದ ತರಬೇತಿದಾರರು, ಆರ್ಥಿಕ ನೆರವು ಇಲ್ಲದೆ ಮುರುಟಿದ ಅದೆಷ್ಟೋ ಪ್ರತಿಭೆಗಳು ನಮಗೆ ಪಾಠವಾಗಬೇಕು. ದಿಲ್ಲಿಗಳಲ್ಲಿ ನಡೆಸುವ ಒಲಿಂಪಿಕ್ಸ್‌ಗಳ ಬದಲು ರಾಜ್ಯ, ಜಿಲ್ಲಾ ಮಟ್ಟದಲ್ಲಿ ನಡೆಯುವ ಕ್ರೀಡಾಕೂಟಗಳನ್ನು ಫಲಪ್ರದವಾಗಿ ನಡೆಸಬೇಕಾದುದು ಈಗ ಆಗಬೇಕಾಗಿರುವ ಅಗತ್ಯ ಕೆಲಸ.

1986–87 ನೇ ಅವಧಿಗೆ ಮುಂಗಡ ಪತ್ರದಲ್ಲಿ ಕ್ರೀಡೆಗಾಗಿ ಕಳೆದ ವರ್ಷಕ್ಕಿಂತ ಇಮ್ಮಡಿ (ಕಳೆದ ವರ್ಷ 34 ಕೋಟಿ ರೂಪಾಯಿ) ಹಣವನ್ನು ಮೀಸಲಿರಿಸಿರುವುದು ಸ್ವಾಗತಾರ್ಹ.

ಜತೆಗೆ ಪಾಟಿಯಾಲಾದ ರಾಷ್ಟ್ರೀಯ ಶಾಲೆಗೆ ಯೋಜನೇತರ ವೆಚ್ಚಕ್ಕಾಗಿ 2.86 ಕೋಟಿ ಹಾಗೂ ಗ್ರಾಮೀಣ ಕ್ರೀಡಾ ಚಟುವಟಿಕೆಗಳ ಯೋಜನೇತರ ವೆಚ್ಚಕ್ಕಾಗಿ 23 ಲಕ್ಷ ರೂ. ಗಳನ್ನು ಮೀಸಲಿಟ್ಟಿರುವುದು ಶ್ಲಾಘನಾರ್ಹ.

ತಳಹದಿ ಭದ್ರಮಾಡದೆ, ಒಲಿಂಪಿಕ್ಸ್‌ಗಳ ಮಹಡಿ ಕಟ್ಟುವುದು ಕ್ರೀಡಾಭಿವೃದ್ಧಿ ದೃಷ್ಟಿಯಿಂದ ಏನೇನೂ ಲಾಭದಾಯಕವಲ್ಲ.

1992ರ ಒಲಿಂಪಿಕ್ಸನ್ನು ಭಾರತ ಕೈಬಿಟ್ಟಿರುವುದು ಅತ್ಯಂತ ಸೂಕ್ತ ಹಾಗೂ ಸ್ವಾಗತಾರ್ಹ ಕ್ರಮ.

ಮುಂಗಾರು

ಬುಧವಾರ, ಮಾರ್ಚ್ 5, 1986

ಕೊಂಕಣ ರೈಲಿಗೆ ಅನ್ಯಾಯ

ಪಶ್ಚಿಮ ಕರಾವಳಿಯ ಬಹುಭಾಗದಲ್ಲಿ ಅಭಿವೃದ್ಧಿಗೆ ಚಾಲನೆ ಕೊಡುವ ಸಾಮರ್ಥ್ಯವುಳ್ಳ ಕೊಂಕಣ ರೈಲು ಎಂದೇ ಖ್ಯಾತವಾದ ಮುಂಬಯಿ–ಮಂಗಳೂರು ಬ್ರಾಡ್‌ಗೇಜ್ ರೈಲು ಹಾದಿಗೆ ಯೋಜನಾ ಆಯೋಗ ಈಗಾಗಲೇ ಅಂಗೀಕಾರ ನೀಡಿದೆ. ಈ ಹಾದಿಯ ನಿರ್ಮಾಣದ ಕೆಲಸವನ್ನೂ ರೈಲ್ವೆ ಇಲಾಖೆ ಕೈಗೆತ್ತಿಕೊಂಡಿದೆ. ಆದರೆ ಈ ಯೋಜನೆಯ ಕೆಲಸ ಕಾರ್ಯಗಳು ತೊಡಗಿದ ಸುಮಾರು ಒಂದು ದಶಕದಿಂದಲೂ ಮಾರ್ಗದ ನಿರ್ಮಾಣ ಕಾಮಗಾರಿ ಮಹಾರಾಷ್ಟ್ರದ ಕಡೆಯಿಂದ ಮಾತ್ರವೇ ನಡೆಯುತ್ತಿದೆ. ಕರ್ನಾಟಕದ ಬದಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

1986–87ನೇ ಸಾಲಿನ ರೈಲ್ವೆ ಆಯವ್ಯಯ ಪತ್ರದಲ್ಲಿ ಕೊಂಕಣ ರೈಲ್ವೆಯ ಆಪ್ಟಾ-ರೋಹಾ ವಿಭಾಗದ ರೈಲುಹಾದಿ ನಿರ್ಮಾಣಕ್ಕೆ 1.01 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಮಂಗಳೂರಿನಿಂದ ಉಡುಪಿ ತನಕದ ಸುಮಾರು 60 ಕಿಲೋಮೀಟರುಗಳ ಸಮೀಕ್ಷೆ ಪೂರ್ತಿಯಾಗಿದ್ದು ಉಡುಪಿಯಿಂದ ಉತ್ತರಕ್ಕೆ ಸಮೀಕ್ಷೆ ಮುಂದುವರಿದಿದೆಯೆಂದು ರೈಲ್ವೇ ಸಚಿವರು ತಿಳಿಸಿದ್ದಾರೆ. ಮಂಗಳೂರು ಕಡೆಯಿಂದ ಕೊಂಕಣ ರೈಲಿನ ಕಾಮಗಾರಿ ನಡೆಯುವುದೆಂದೋ. ಹಣದ ಕೊರತೆ ಇರುವುದರಿಂದ ಹೊಸದಾಗಿ ರೈಲು ಹಾದಿ ಕಾಮಗಾರಿ ಯಾವುದನ್ನೂ ಕೈಗೆತ್ತಿಕೊಳ್ಳುವುದಕ್ಕೆ ಏಳನೆ ಯೋಜನಾವಧಿಯಲ್ಲಿ ಸಾಧ್ಯವಾಗದು ಎಂದು ಕೆಲವು ತಿಂಗಳುಗಳ ಹಿಂದೆ ಆಸ್ಕರ್ ಫೆರ್ನಾಂಡಿಸ್ ಸೂಚನೆ ನೀಡಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಪಶ್ಚಿಮ ಕರಾವಳಿಯು ತುಂಬಾ ಖನಿಜ ಸಂಪನ್ಮೂಲಗಳನ್ನು ಹೊಂದಿರುವ ಪ್ರದೇಶ. ಇಲ್ಲಿನ ಜನರು-ಅವರು ಯಾವ ರಾಜ್ಯದವರೇ ಇರಲಿ–ಉತ್ಸಾಹಿಗಳು, ಬುದ್ಧಿವಂತರು. ಉದ್ಯಮಶೀಲರು. ಅವಕಾಶಗಳನ್ನು ಆವಿಷ್ಕರಿಸಿಕೊಂಡು ಅಭಿವೃದ್ಧಿ ಸಾಧಿಸುವ ಜಾಯಮಾನದವರು. ಅಂತಹ ಪ್ರದೇಶವೊಂದರಲ್ಲಿ ರೈಲು ಹಾದಿಯಂತಹ ಅತ್ಯಂತ ಅಗ್ಗದ ಸಾರಿಗೆ ಸೌಲಭ್ಯ ಒದಗಿಸಿಕೊಟ್ಟಿದ್ದರೆ ಪಶ್ಚಿಮ ಕರಾವಳಿಯ ಪ್ರಗತಿಯು ಈಗಿನದರ ನಾಲ್ಕು ಪಟ್ಟು ಹೆಚ್ಚುತ್ತಿತ್ತು. ಆದರೆ ಭಾರತದ ರೈಲ್ವೆ ನಕಾಶೆ ನೋಡಿದಾಗ ಪಶ್ಚಿಮ ಕರಾವಳಿಯಲ್ಲಿ ಮಂಗಳೂರಿನಿಂದ ಆಪ್ಟಾ ತನಕ ಖಾಲಿ ಜಾಗ ಗೋಚರಿಸುತ್ತದೆ. ಪೂರ್ವ ಕರಾವಳಿಯಲ್ಲಿ ಉದ್ದಕ್ಕೂ ರೈಲು ಸಂಪರ್ಕವಿದೆ. ದೇಶದ ಮಧ್ಯೆಯೂ ದಕ್ಷಿಣದಿಂದ ಉತ್ತರಕ್ಕೆ ರೈಲು ಸಂಪರ್ಕವಿದೆ. ಪಶ್ಚಿಮದಲ್ಲೊಂದು ಗೋಣಸು ಮಾತ್ರ ತಪ್ಪಿ ಹೋಗಿದೆ.

ಕೊಂಕಣ ರೈಲುಹಾದಿಯ ಉದ್ದ (ಮಂಗಳೂರಿನಿಂದ ಮುಂಬಯಿ ತನಕ) 947 ಕಿಲೋಮೀಟರುಗಳಲ್ಲಿ ಮುಂಬಯಿಯಿಂದ ಆಪ್ಟಾತನಕದ 80ಕಿಲೋಮೀಟರು ಹಾದಿ ಈಗಾಗಲೇ ಸಿದ್ಧವಾಗಿದೆ. ಇನ್ನು 867 ಕಿಲೋಮೀಟರು ಮಾರ್ಗ ರಚನೆ ಆಗಬೇಕು. ಸದ್ಯ ಸರಕಾರದ ಹಣ ಮಂಜೂರಾತಿ ವೈಖರಿಯಂತೆ ವರ್ಷಕ್ಕೆ ಹತ್ತಿಪ್ಪತ್ತು ಕಿಲೋಮೀಟರು ದಾರಿ ತಯಾರಾದೀತು. ಅದು ಈ ಗತಿಯಲ್ಲಿ ನಡೆದರೆ ಮಂಗಳೂರು ತಲುಪಲು ಇನ್ನೆಷ್ಟು ವರ್ಷ ಬೇಕಾದೀತು ಎಂಬುದನ್ನು ಯಾರೂ ಲೆಕ್ಕ ಹಾಕಬಹುದು.

ಕೊಂಕಣ ರೈಲಿನ 244 ಕಿಲೋಮೀಟರುಗಳು ಕರ್ನಾಟಕದಲ್ಲಿರುತ್ತವೆ. ರೈಲ್ವೇ ಇಲಾಖೆಯಲ್ಲಿ ಸಿಬ್ಬಂದಿಗಳ ಸಂಖ್ಯೆ (15 ಲಕ್ಷ ಕಾಯಂ ಸಿಬ್ಬಂದಿ ಹಾಗೂ 2.65 ಲಕ್ಷ ದಿನಗೂಲಿ ಸಿಬ್ಬಂದಿ) ಹಾಗೂ ರೈಲು ದಾರಿಯ ಕಿಲೋಮೀಟರು (61240 ಕಿಲೋಮೀಟರ್– 1981ರ ಮಾರ್ಚ್‌ನಲ್ಲಿದ್ದಂತೆ) ಆಧಾರದಲ್ಲಿ ಲೆಕ್ಕ ಹಾಕಿದರೆ ಕರ್ನಾಟಕದ ಸುಮಾರು ಆರು ಸಾವಿರ ಜನರಿಗೆ ಕಾಯಂ ನೆಲೆಯಲ್ಲಿಯೂ ಒಂದು ಸಾವಿರ ಮಂದಿಗೆ ದಿನಗೂಲಿ ನೆಲೆಯಲ್ಲಿಯೂ ಉದ್ಯೋಗ ದೊರೆಯುತ್ತದೆ. ರೈಲು ಹಾದಿಯಿಂದ ಬರುವ ಪರೋಕ್ಷ ಲಾಭ ಬೇರೆಯೇ ಆಗಿದ್ದು ಇದೆಲ್ಲಕ್ಕಿಂತಲೂ ಮಹತ್ವವಾದದ್ದು. ಈ ರೈಲು ಹಾದಿ ಆದರೆ ಕರಾವಳಿಯುದ್ದಕ್ಕೂ ಕೈಗಾರಿಕೆಗಳ ಸ್ಥಾಪನೆಗೆ ಅದ್ಭುತ ಚಾಲನೆ ದೊರೆಯುತ್ತದೆ. ಕರಾವಳಿ ಜನತೆಗೆ ಮುಂಬಯಿ ಹಾಗೂ ಮಂಗಳೂರಿನ ಸಂಪರ್ಕ ಹೆಚ್ಚುತ್ತದೆ. ಕರಾವಳಿ ಕರ್ನಾಟಕದ ಹಾಗೂ ಒಳನಾಡಿನ ಅನೇಕ ಪ್ರದೇಶಗಳ ಅಭಿವೃದ್ಧಿಗೆ ಈ ಯೋಜನೆ ಖಂಡಿತವಾಗಿ ಚಾಲನೆ ನೀಡುತ್ತದೆ.

ಇಂತಹ ಒಂದು ಮಹತ್ವಾಕಾಂಕ್ಷಿ ಯೋಜನೆಯನ್ನು ತ್ವರಿತವಾಗಿ ನಿರ್ಮಿಸುವುದಕ್ಕೆ, ಕರ್ನಾಟಕದ ಕಡೆಯಿಂದಲೂ ಕಾಮಗಾರಿ ತೊಡಗುವಂತೆ ಜನರು ಧ್ವನಿಯೆತ್ತಬೇಕು. ನಮ್ಮ ಜನಪ್ರತಿನಿಧಿಗಳು ಸೂಕ್ತ ವೇದಿಕೆಗಳಲ್ಲಿ ಈ ವಿಚಾರವನ್ನು ಮಂಡಿಸಿ ಕರಾವಳಿ ರೈಲು ಕರ್ನಾಟಕದ ತುದಿಯಿಂದಲೂ ತೊಡಗಬೇಕಾದ ಅಗತ್ಯವನ್ನು ಶಕ್ತಿಯುತವಾಗಿ ಮಂಡಿಸಬೇಕು. ಹಣವಿಲ್ಲ ಎಂಬ ಸಬೂಬು ಕರ್ನಾಟಕದ ರೈಲ್ವೆ ಯೋಜನೆಗಳಿಗೆ ಮಾತ್ರ ಅನ್ವಯಿಸುವುದೇಕೆ? ಕೇರಳದ ಹಾಗೂ ತಮಿಳ್ನಾಡಿನ ಕಾಮಗಾರಿಗಳಿಗೆ ಏಕೆ ಅನ್ವಯಿಸುವುದಿಲ್ಲ? ರೈಲ್ವೆ ಇಲಾಖೆಯ ಉನ್ನತ ಅಧಿಕಾರದ ಸ್ಥಾನಗಳನ್ನು ಆ ರಾಜ್ಯಗಳ ಮಂದಿಯೇ ಹಿಡಿದು ಕೂತಿದ್ದಾರೆ ಎಂಬುದಕ್ಕಾಗಿಯೇ- ಎಂದು ಕೇಳಬೇಕು.

ಮಂಗಳೂರು ತುದಿಯಿಂದಲೂ ಹಾದಿ ನಿರ್ಮಾಣವನ್ನು ಐದೋ ಹತ್ತೋ ವರ್ಷ ಮುಂದಕ್ಕೆ ಹಾಕುವುದು ಬೇಡ, ಈ ತುದಿಯಿಂದಲೂ ರೈಲು ಹಾದಿ ಹಾಕುವ ಕಾರ್ಯ ಕೂಡಲೇ ಶುರುವಾಗಬೇಕು.

ಮುಂಗಾರು: ಮಾರ್ಚ್ ೬, ೧೯೮೬ ಪುಟ ಏಳು

ಮುಂಗಾರು

ಗುರುವಾರ, ಮಾರ್ಚ್ 6, 1986

ಪುಸ್ತಕದ ಬದನೇಕಾಯಿ

ಖಾಸಗಿ ಶಾಲೆಗಳು ನಡೆಸುವ ಅನ್ಯಾಯ, ಅಕ್ರಮಗಳನ್ನು ತಡೆಯಲು ಹಾಗೂ ಅಗತ್ಯವೆನಿಸಿದಾಗ ಅವುಗಳ ಆಡಳಿತೆಯನ್ನು ವಶಕ್ಕೆತೆಗೆದುಕೊಳ್ಳಲು ಸರಕಾರ ಅಧಿಕಾರ ಕೈಗೆತ್ತಿಕೊಳ್ಳಲಿದೆ. ಅನುದಾನ ಕಾಯಿದೆಯನ್ನು ತಿದ್ದುವ ಮೂಲಕ ಇದನ್ನು ಮಾಡಲಾಗುವುದು ಎಂದು ಕರ್ನಾಟಕ ಶಿಕ್ಷಣ ಸಚಿವ ಎಂ. ರಘುಪತಿ ವಿಧಾನ ಸಭೆಯಲ್ಲಿ ಹೇಳಿದ್ದಾರೆ.

ಖಾಸಗಿ ಶಾಲೆಯವರು ನಡೆಸುವ ದೊಡ್ಡ ಪ್ರಮಾಣದ ಅನ್ಯಾಯ ಎರಡು ವಿಧದವುಗಳು. ಒಂದನೆಯದ್ದು ಶಿಕ್ಷಣಾರ್ಥಿಗಳಿಂದ ಬಲಾತ್ಕಾರವಾಗಿ ದೇಣಿಗೆ ಸಂಗ್ರಹಿಸುವುದು ಹಾಗೂ ಎರಡನೆಯದ್ದು ಶಿಕ್ಷಕ ಸಿಬ್ಬಂದಿ ನೇಮಕಾತಿಯಲ್ಲಿ ಮೀಸಲಾತಿ ನಿಯಮವನ್ನು ಗಾಳಿಗೆ ತೂರಿ ತಮಗೆ ಬೇಕಾದವರಿಗೆ ಉದ್ಯೋಗ ಕೊಡುವುದು. ಮೂರನೆಯ ಒಂದು ಅಕ್ರಮವನ್ನೂ ಅವರು ನಡೆಸುತ್ತಿದ್ದಾರೆ. ಅದುವೇ– ಶಿಕ್ಷಕ ಅಭ್ಯರ್ಥಿಗಳಿಂದ ಲಂಚ ಪಡೆಯುವುದು. ಈ ಮೊತ್ತ ಐದು ಸಾವಿರ ರೂ.ಗಳಿಂದ ಹತ್ತು ಸಾವಿರ ರೂಪಾಯಿ ತನಕ ಉಂಟು. ಶಿಕ್ಷಕರ ಈ ಶೋಷಣೆ ಹಿಂದೆ ಪ್ರತಿ ತಿಂಗಳೂ ಸಂಬಳದಲ್ಲಿ ಒಂದಂಶವನ್ನು ಹಿಡಿದಿಟ್ಟು ಯಾವ್ಯಾವುದೋ ಸೇವೆಗಳಿಗೆ ದೇಣಿಗೆಯಾಗಿ ಮುರಿದುಕೊಳ್ಳುವ ರೂಪದಲ್ಲಿತ್ತು. ಶಾಲೆ ಸಿಬ್ಬಂದಿಗಳಿಗೆ ಸರಕಾರವೇ ನೇರವಾಗಿ ಬ್ಯಾಂಕ್ ಮೂಲಕ ಸಂಬಳ ಪಾವತಿ ಮಾಡುವ ವ್ಯವಸ್ಥೆ ಕಾರ್ಯಗತವಾದ ಮೇಲೆ ಈ ಹಿಡುಗು ನಿಂತು ಹೋಗಿದೆ. ಬದಲಾಗಿ ನೇಮಕಾತಿ ವೇಳೆಯೇ ಏಕಗಂಟಿನಲ್ಲಿ ಈ ಲಂಚವನ್ನು ಮುರಿದುಕೊಳ್ಳಲಾಗುತ್ತದೆ.

ಈ ಅನ್ಯಾಯ-ಅಕ್ರಮಗಳನ್ನು ನಿವಾರಿಸುವುದು ಸರಕಾರಕ್ಕೆ ಅಸಾಧ್ಯವೇನೂ ಅಲ್ಲ. ಖಾಸಗಿ ಶಾಲೆಗಳು ಟ್ರಸ್ಟ್‌ಗಳಾಗಿಯೋ ಸೊಸೈಟಿಗಳಾಗಿಯೋ ನೋಂದಾವಣೆಗೊಳ್ಳುವವೆಂಬ ಸಬೂಬಿನ ಮರೆಯಲ್ಲಿ ಸರಕಾರದ ಹಿಡಿತದಿಂದ ನುಣಚಿಕೊಳ್ಳುವುದಿದ್ದರೆ ಶಾಸನಕ್ಕೆ ಸೂಕ್ತ ತಿದ್ದುಪಡಿ ತಂದರಾಯಿತು. ಅದನ್ನು ಮಾಡುವುದಕ್ಕೆ ಈಗ ಶಿಕ್ಷಣ ಸಚಿವ ರಘುಪತಿಯವರು ಹೊರಟಿದ್ದಾರೆ. ಸ್ವಾಗತಾರ್ಹವಾದ ಕೆಲಸ. ಅವರ ಮಾತಿನ ಭರವಸೆ ಬೇಗನೆ ಕಾರ್ಯರೂಪಕ್ಕೆ ಬರಬೇಕು. ಮುಂದಿನ ಶೈಕ್ಷಣಿಕ ವರ್ಷ ಪ್ರಾರಂಭಗೊಳ್ಳುವ ಜೂನ್ ತಿಂಗಳ ಒಂದನೇ ದಿನಾಂಕಕ್ಕೆ ಮೊದಲೇ ರಘುಪತಿಯವರ ಮಾತು ಕೃತಿಯ ರೂಪಕ್ಕೆ ಇಳಿಯುವುದೆಂದು ಈ ರಾಜ್ಯದ ಶಿಕ್ಷಣ ಪ್ರೇಮಿಗಳು ನಿರೀಕ್ಷಿಸಬಹುದೆ?

ಯಾಕೆಂದರೆ ರಘುಪತಿಯವರ ಹಲವು ಮಾತುಗಳು, ಘೋಷಣೆಗಳು, ಪ್ರತಿಜ್ಞೆಗಳು ಹಾಗೂ ಭರವಸೆಗಳು ಕಾರ್ಯರೂಪಕ್ಕೆ ಬಾರದೆ ಗಾಳಿಯಲ್ಲೇ ಹಾರಾಡುತ್ತಿವೆ. ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಕ್ಯಾಪಿಟೇಶನ್ ಶುಲ್ಕದ ವಿಚಾರವಾಗಿ ರಘುಪತಿಯವರು ದೊಡ್ಡ ಪ್ರತಿಜ್ಞೆಗಳನ್ನು ಮಾಡಿದ್ದರು. ಆ ಮೇಲೆ ಅಂತಹದೇ ಕ್ಯಾಪಿಟೇಶನ್ ಶುಲ್ಕ ಸಂಗ್ರಹಿಸುವ ನಾಲ್ಕೈದು ಮೆಡಿಕಲ್ ಕಾಲೇಜುಗಳಿಗೆ ಅವರ ಸರಕಾರ ಪರವಾನಿಗೆ ನೀಡಿದ್ದಿದೆ. ಮುಖ್ಯಮಂತ್ರಿಗಳು ಈ ಕ್ರಮವನ್ನು ಹಲವಾರು ಬಾರಿ ಬಹಿರಂಗವಾಗಿ ಸಮರ್ಥಿಸಿಕೊಂಡದ್ದಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಅಂತಹ ಯಾವ ಭರವಸೆಯನ್ನೂ ಕೊಟ್ಟಿದ್ದಿಲ್ಲವೆಂಬ ಉಡಾಫೆಯನ್ನಾಡಿದ್ದಿದೆ.

ರಘುಪತಿಯವರು ಈ ಶೈಕ್ಷಣಿಕ ವರ್ಷದ ಆರಂಭದಲ್ಲಿ ಡೊನೇಶನ್ ಪಡೆಯುವ ಇಂಗ್ಲಿಷ್ ಮಾಧ್ಯಮದ ನರ್ಸರಿ ಹಾಗೂ ಪ್ರಾಥಮಿಕ ಶಾಲೆಗಳ ಮೇಲೆ ಗದೆ ಎತ್ತಿದ್ದರು. ದೇಣಿಗೆಯನ್ನು ಒಂದೇ ಹೊಡೆತಕ್ಕೆ ಕತ್ತರಿಸಿ ಹಾಕಿಬಿಟ್ಟ ಘೋಷಣೆಯನ್ನು ಮಾಡಿದ್ದರು. ಅವೆಲ್ಲವೂ ಬಾಯಿ ಮಾತಿನ ಆಟಾಟೋಪವಾಗಿ ಮುಗಿದು ಹೋಗಿತ್ತು. ಇಂದು ಈ ಶಾಲೆಗಳವರು ಮತ್ತೆ ಎಂದಿನಂತೆ ನಿರಾಯಾಸವಾಗಿ ಯಾರ ಭಯವೂ ಇಲ್ಲದೆ ತಮಗೆ ತೋಚಿದಷ್ಟು ದೇಣಿಗೆ ಸಂಗ್ರಹಿಸುತ್ತಿದ್ದಾರೆ.

ರಘುಪತಿಯವರು ಇದೀಗ ಮತ್ತೆ ಅನ್ಯಾಯ-ಅಕ್ರಮ ನಡೆಸುವ, ಅನುದಾನ ಪಡೆಯುವ ಶಾಲೆಗಳ ಆಡಳಿತೆಯನ್ನು ವಶಕ್ಕೆ ತೆಗೆದುಕೊಳ್ಳುವ ಮಾತನ್ನಾಡಿದ್ದಾರೆ. ಅವರ ಮಾತು ಕೃತಿಗಿಳಿದರೆ ವಿದ್ಯಾರ್ಥಿ ಸಮುದಾಯಕ್ಕೂ ಶಿಕ್ಷಣ ವೃಂದಕ್ಕೂ ಬದುಕು ಹಗುರಾಗುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವುದಕ್ಕೂ ಕಲಿಸುವುದಕ್ಕೂ ಒಳ್ಳೆಯ ವಾತಾವರಣ ಉಂಟಾಗುತ್ತದೆ.

ದಕ್ಷಿಣ ಕನ್ನಡದಲ್ಲೊಂದು ಶಾಲೆಯಿದೆ. ಅದಕ್ಕೆ ಸರಕಾರದ ಅನುದಾನ ಸಲ್ಲುತ್ತದೆ. ಅಲ್ಲಿ ಹುಡುಗಿಯರು ಕಲಿಯಲು ಬರುವುದರಿಂದ ಕಲಿಸುವವರ ಮತ್ತು ಹುಡುಗರ ಬುದ್ಧಿ ಹಾಳಾಗುತ್ತದೆ ಎಂಬ ಕಾರಣಕ್ಕೆ ಹುಡುಗಿಯರನ್ನು ಹೊರಗಟ್ಟಲಾಗಿದೆ. ಈ ವಿಚಾರ ರಘುಪತಿಯವರಿಗೂ ಖುದ್ದಾಗಿ ತಿಳಿದಿದೆ. ಅವರು ಇದೀಗ ಹೇಳುತ್ತಿರುವ "ಶಾಲೆಗಳು ಮಾಡುವ ಅನ್ಯಾಯ-ಅಕ್ರಮ"ಗಳಲ್ಲಿ ಈ ಕೃತ್ಯವೂ ಒಳಗೊಳ್ಳುತ್ತದೆ. ಆದ್ದರಿಂದ ರಘುಪತಿಯವರು ಪ್ರಕಟಿಸಿರುವ ಕಾನೂನು ಕ್ರಮವನ್ನು ಮೊತ್ತ ಮೊದಲಿಗೆ ಆ ಶಾಲೆಯ ಮೇಲೆ ಪ್ರಯೋಗಿಸಿ, ಆ ವಿದ್ಯಾ ಸಂಸ್ಥೆಯನ್ನು ಸ್ತ್ರೀ ದ್ವೇಷಿಗಳಿಂದ ವಿಮೋಚನೆ ಮಾಡಿ ಊರಿನ ಹೆಣ್ಣು ಮಕ್ಕಳಿಗೆ ವಿದ್ಯಾದಾನ ಮಾಡಿದ ಪುಣ್ಯ ಕಾರ್ಯಕ್ಕೆ ಕಾರಣೀಭೂತರಾಗಬೇಕು.

ಮುಂಗಾರು

ಶುಕ್ರವಾರ, ಮಾರ್ಚ್ 7, 1986

ಯಾರಿಗಿದೆ – ಸೈದ್ಧಾಂತಿಕ ನೆಲೆ ?

ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಲೋಕ ಸಭೆಯಲ್ಲಿ ರಾಷ್ಟ್ರಪತಿ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ಕೊಡುತ್ತಾ ವಿರೋಧ ಪಕ್ಷಗಳಿಗೆ ತಾತ್ವಿಕ ನೆಲೆ ಇಲ್ಲವೆಂದು ಛೇಡಿಸಿದರೆಂದು ವರದಿಯಾಗಿದೆ. ಇದರರ್ಥ ಅವುಗಳು ತಾತ್ಕಾಲಿಕ ಪ್ರಯೋಜನದ ನೆಲೆಯಲ್ಲಿ ವ್ಯವಹರಿಸುವವು. ಗಾಳಿ ಬಂದಂತೆ ತೂರಿಕೊಳ್ಳುವವು ಎಂದೇ ಆಗುತ್ತದೆ. ಅಲ್ಲದೆ ವಿರೋಧ ಪಕ್ಷಗಳು ಕೋಮು ಸಾಮರಸ್ಯಕ್ಕೆ ಪೂರಕವಾಗಿ ವರ್ತಿಸುತ್ತಿಲ್ಲ ಎಂದೂ ಅವರು ಟೀಕಿಸಿರುವುದೂ ವರದಿಯಾಗಿದೆ. ಕೋಮು ಭಾವನೆಗೆ ಬಲಿಯಾಗುವುದಿಲ್ಲ ಎಂಬ ಆಶ್ವಾಸನೆಯನ್ನು ಕೊಡಬೇಕು ಎಂದು ಪ್ರಧಾನ ಮಂತ್ರಿ ವಿರೋಧ ಪಕ್ಷಗಳೊಡನೆ ಭಾಷೆ ಕೇಳಿರುವುದೂ ವರದಿಯಾಗಿದೆ.

ರಾಜೀವ ಗಾಂಧಿ ಹೇಳಿರುವ ಒಂದು ಮಾತಿನಲ್ಲಿ ತಥ್ಯ ಇದೆ. ಅದುವೇ ರಾಜಕೀಯ ಪಕ್ಷಗಳಿಗೆ ಸೈದ್ಧಾಂತಿಕ ನೆಲೆಗಟ್ಟು ಬೇಕು ಎಂಬುದು. ಸೈದ್ಧಾಂತಿಕ ತಳಹದಿ ಇಲ್ಲದ ಯಾವುದೇ ರಾಜಕೀಯ ಪಕ್ಷವೂ ಬೆಳೆಯಲಾರದು. ಅದಕ್ಕೆ ಜನರನ್ನು ಸಂಘಟಿಸುವ ಸಾಮರ್ಥ್ಯ ಬಾರದು. ವಿಚಾರವಂತರು ಅಂತಹ ರಾಜಕೀಯ ಸಂಸ್ಥೆಗಳ ಸಮೀಪವೂ ಸುಳಿಯಲಾರರು. ಬುದ್ಧಿಬಲವುಳ್ಳವರ ವಿಚಾರದ ಬೆನ್ನೆಲುಬು ಅಂಥ ಪಕ್ಷಕ್ಕೆ ದೊರೆಯಲಾರದು. ಸಿದ್ಧಾಂತವಿಲ್ಲವಿದ್ದರೆ ಕಾರ್ಯಕ್ರಮವೂ ಇರುವುದಿಲ್ಲ. ತತ್ವಾದರ್ಶಗಳ ತಳಹದಿಯಿಲ್ಲದ ಧೋರಣೆಗಳೂ ಕಾರ್ಯಕ್ರಮಗಳೂ ಕೇವಲ ಬಾಹ್ಯಾಡಂಬರದ ಘೋಷಣೆಗಳಾಗಿಬಿಟ್ಟು ನಾಲ್ಕು ದಿನ ಜನರನ್ನು ಮರುಳು ಮಾಡುತ್ತವೆ. ಆಮೇಲೆ ಅವುಗಳ ಟೊಳ್ಳು ಬಯಲಾಗುತ್ತದೆ.

ಜನತೆಯ ಅಭಿವೃದ್ಧಿಯ ಹಿತ ಚಿಂತನೆ ಮಾಡುವ ಎಲ್ಲ ಪಕ್ಷಗಳಿಗೂ ಇಂತಹ ಸೈದ್ಧಾಂತಿಕ ತಳಹದಿ ಬೇಕು. ಆದರೆ ಪ್ರತಿಪಕ್ಷಗಳಿಗೆ ಈ ನೆಲೆಗಟ್ಟು ಇಲ್ಲವೆಂದು ಹೇಳುತ್ತಿರುವ ಪ್ರಧಾನ ಮಂತ್ರಿಯವರೇ ಮುಖ್ಯಸ್ಥರಾಗಿರುವ ಆಳುವ ಪಕ್ಷಕ್ಕೂ ಇಂತಹ ಸಿದ್ಧಾಂತದ ನೆಲೆ ಇಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ರಾಜೀವ ಗಾಂಧಿಯವರ ಸಿದ್ಧಾಂತ ಏನು ಎಂಬುವನ್ನು ಅವರು ಇನ್ನಷ್ಟೇ ಹೇಳಬೇಕಾಗಿದೆ. ದೇಶವನ್ನು 21ನೇ ಶತಮಾನಕ್ಕೆ ನೆಗೆಯಿಸಬೇಕು, ಹೊಸ ತಂತ್ರಜ್ಞಾನ ಅಳವಡಿಸಬೇಕು ಎಂಬ ಅವರ ಆಶಯವೇ ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ನಡೆಸುವ ಚಾಲಕ ಶಕ್ತಿಯೆನಿಸುವುದಿಲ್ಲ. ಆರ್ಥಿಕತೆಯ ಸ್ವಸ್ಥತೆಗೆ ಸರಿಯಾದ ದಿಕ್ಸೂಚಿ ಆಗುವುದಿಲ್ಲ.

ಈ ದೇಶದಲ್ಲಿ ಕಮ್ಯೂನಿಸ್ಟ್ ಪಕ್ಷಕ್ಕೆ ಹೊರತಾಗಿ ಉಳಿದ ಯಾವ ರಾಜಕೀಯ ಪಕ್ಷಕ್ಕೂ ಶಿಸ್ತು, ಬದ್ಧತೆ, ನಿರಾಕಾರವಾದ, ವಿಚಿತ್ರವಾದ ತಾತ್ವಿಕ ಸಂಹಿತೆಯಿಲ್ಲ. ಸೈದ್ಧಾಂತಿಕ ತಳಹದಿಯುಳ್ಳ ಕಾರ್ಯಕ್ರಮಗಳಿಲ್ಲ. ಈ ದೇಶದಲ್ಲಿ ಓಟು ಹೊಂದಿದ ಬಡವರೇ ಅಧಿಕವಿರುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಬಾಯಲ್ಲಿ ಸಮಾನತೆಯ ಸಮಾಜದ ಮಂತ್ರವನ್ನು ಹೇಳುತ್ತ ಅಧಿಕಾರ ಸಿಕ್ಕಿದಾಗೆಲ್ಲ ಸ್ವಂತಕ್ಕೂ ಸ್ವಜನರಿಗೂ ಸ್ವಂತ ವರ್ಗಕ್ಕೂ ಹಿತ ಮಾಡುವ ಊಳಿಗಮಾನ್ಯ- ಪಾಳೇಗಾರಿ ಶಕ್ತಿಗಳಿಂದಲೇ ಎಲ್ಲಾ ರಾಜಕೀಯ ಪಕ್ಷಗಳೂ ತುಂಬಿಕೊಂಡಿವೆ. ಬಲಪಂಥೀಯ ಆಶಯಗಳನ್ನು ಹೊಂದಿ ವಾಸ್ತವದಲ್ಲಿ ಧರ್ಮ ಪುನರುತ್ಥಾನವಾದಿಯೆನಿಸಿದ ಭಾರತೀಯ ಜನತಾ ಪಕ್ಷ ಕೂಡ ಬಾಯಲ್ಲಿ ಸಮಾಜವಾದವನ್ನೂ ಜಾತ್ಯಾತೀತತೆಯನ್ನೂ ಹೇಳುವ ವಿಚಿತ್ರ ವಿದ್ಯಮಾನವನ್ನು ಇಲ್ಲಿ ಕಾಣಬಹುದಾಗಿದೆ. ಕೋಮು ಶಕ್ತಿಗಳಿಗೆ ಬಲಿ ಬೀಳಬೇಡಿ ಎಂದು ಹೇಳುವ ರಾಜೀವ ಗಾಂಧಿಯವರೇ ತಮ್ಮ ಪಕ್ಷವು ಕೇರಳದಲ್ಲಿ ಮುಸ್ಲಿಂಲೀಗ್ ಜತೆ ಸೇರುವ ಸಮಯ ಸಾಧಕತನ ನಡೆಸಿದ್ದನ್ನು ಮರೆಯುವಂತಿಲ್ಲ.

ಈ ಆಶಾಢಭೂತಿತನದಿಂದಾಗಿಯೇ ನಮ್ಮ ಸ್ವಾತಂತ್ರ್ಯೋತ್ತರದ ಅಭಿವೃದ್ಧಿಯ ಪ್ರಯತ್ನಗಳ ಫಲವೆಲ್ಲಾ ಉಳ್ಳವರ ಬಗಲಿಗೆ ಸೇರಿಹೋಗಿ ಬಡವರು ಬಡತನದಲ್ಲಿಯೇ ಇರುವಂತಾಗಿದೆ. ಕಟ್ಟು ನಿಟ್ಟಾದ ಸೈದ್ಧಾಂತಿಕ ತಳಹದಿ ಆಳುವ ಪಕ್ಷಕ್ಕೆ ಇರುತ್ತಿದ್ದರೆ, ಅದನ್ನು ಕರಾರುವಾಕ್ಕಾಗಿ ಪಾಲಿಸಿಕೊಂಡು ಬಂದಿದ್ದರೆ, ಸರಕಾರದ ಕಾರ್ಯಕ್ರಮಗಳು ಈ ತತ್ವ ಸಿದ್ಧಾಂತದ ಪಂಚಾಂಗದ ಮೇಲೆ ರೂಪಿತಗೊಂಡು ಅನುಷ್ಠಾನಕ್ಕೆ ಬಂದಿದ್ದರೆ ಈ ದೇಶದಸ್ಥಿತಿ ಇಂದು ಹೀಗಿರುತ್ತಿರಲಿಲ್ಲ.

ಇಲ್ಲಿ ಯಾರಿಗೂ ಸಿದ್ಧಾಂತ ಇಲ್ಲವಾಗಿದೆ. ಆಳುವ ಪಕ್ಷಕ್ಕೆ ಸೈದ್ಧಾಂತಿಕ ತಳಹದಿಯನ್ನು ಕೊಡುವ ಪ್ರಾಮಾಣಿಕ ಕಾರ್ಯ ಈತನಕವೂ ಆಗಿಲ್ಲ. ಸಿದ್ಧಾಂತಗಳಿಲ್ಲದೆ ರೂಪುಗೊಂಡು ಅಧಿಕಾರಕ್ಕೆ ಬಂದ ಜನತಾ ಪಕ್ಷ ಅಧಿಕಾರದ ಪ್ರಶ್ನೆ ಬಂದಾಗ ಒಡೆದು ಹೋದ ವಾಸ್ತವಿಕತೆಯನ್ನು ನಾವು ಕಂಡಿದ್ದೇವೆ. ಸುಮಾರು ನಾಲ್ಕು ದಶಕಗಳಿಂದಲೂ ಆಳುತ್ತಿರುವ ಕಾಂಗ್ರೆಸ್ ಪಕ್ಷ ಪೊಳ್ಳು ಸಿದ್ಧಾಂತಗಳಿಂದಲೂ ಬೂಟಾಟಿಕೆಯ ಘೋಷಣೆಗಳಿಂದಲೂ ಮೆರೆಯುತ್ತ ವ್ಯಕ್ತಿ ಪೂಜೆಯ ಪರಂಪರೆಯನ್ನು ಬೆಳೆಸಿಕೊಂಡು ಬಂದಿರುವುದನ್ನು ನೋಡಿದ್ದೇವೆ.

ಇಂದು ಸಿದ್ಧಾಂತದ ಬಗ್ಗೆ ನಮ್ಮ ಪ್ರಧಾನಿಗೆ [illegible] ಇರುವುದಾದದರೆ ತಮ್ಮ ಸಿದ್ಧಾಂತ ಏನು ಎಂಬ ಬಗ್ಗೆ ಚಿಂತನೆ ನಡೆಸಬೇಕು. ಆ ನೆಲೆಯಲ್ಲಿ ಜನರ ಬೆಂಬಲ ಕೇಳಬೇಕು. ಅವುಗಳ ತಳಹದಿಯಲ್ಲಿ ಕಾರ್ಯಕ್ರಮ ಹಾಕಿಕೊಂಡು, ಕಾರ್ಯಕರ್ತರನ್ನು ಸಂಘಟಿಸಿ ಪಕ್ಷವನ್ನು ತಳಮಟ್ಟದಿಂದಲೇ ಕಟ್ಟಿ ಮೇಲೇರಿಸಬೇಕು. ಇದರಿಂದ ದೇಶದ ಅಭಿವೃದ್ಧಿಗೆ ದಿಕ್ಕು ಗೋಚರಿಸುತ್ತದೆ. ಸಮಾಜ ಆರೋಗ್ಯಶಾಲಿಯಾಗುತ್ತದೆ. ನಮ್ಮ ಪ್ರಜಾತಂತ್ರ ತನ್ನ ವ್ಯಕ್ತಿ ಪೂಜೆಯ ಭ್ರಮೆಗಳನ್ನು ಕಳಚಿಕೊಂಡು ನಿಜಕ್ಕೂ ಜನರಿಗೆ ಸಲ್ಲುವಂತಹುದಾಗುತ್ತದೆ.

ಮುಂಗಾರು. ಮಾರ್ಚ್ 8, 1986 ಪುಟ ನಾಲ್ಕು

ಮುಂಗಾರು

ಶನಿವಾರ, ಮಾರ್ಚ್ 8, 1986

ನಿಲಂಗೇಕರ್ ನಿರ್ಗಮನ

ಮಹಾರಾಷ್ಟ್ರ ಮುಖ್ಯಮಂತ್ರಿ ಶಿವಾಜಿರಾವ್ ಪಾಟೀಲ್ ನಿಲಂಗೇಕರ್ ರಾಜೀನಾಮೆ ಕೊಟ್ಟಿದ್ದಾರೆ. ಕಳೆದ ಒಂಭತ್ತು ತಿಂಗಳಿನಿಂದ ಭಾರತದ ಅತಿ ದೊಡ್ಡ ವಾಣಿಜ್ಯ ನಗರಿ ಮುಂಬಯಿಯನ್ನೊಳಗೊಂಡ ರಾಜ್ಯ ಮಹಾರಾಷ್ಟ್ರದಲ್ಲಿ ಅಧಿಕಾರ ನಡೆಸಿದ ಅವರು ಆ ರಾಜ್ಯದಲ್ಲಿ ನ್ಯಾಯಾಲಯದ ಪ್ರತಿಕೂಲ ತೀರ್ಪಿಗನುಗುಣವಾಗಿ ಪದತ್ಯಾಗ ಮಾಡಿದ ಎರಡನೇ ಮುಖ್ಯಮಂತ್ರಿ. ಸಿಮೆಂಟ್ ಹಗರಣದಲ್ಲಿ ಹೈಕೋರ್ಟಿನ ತೀರ್ಪಿನ ಪರಿಣಾಮವಾಗಿ 1982ರ ಜನವರಿಯಲ್ಲಿ ಎ. ಆರ್. ಅಂತುಲೆ ನೀಡಿದ ರಾಜೀನಾಮೆ ಆ ರಾಜ್ಯದ ಇಂತಹ ಮೊದಲ ಘಟನೆ.

ನಿಲಂಗೇಕರ್ ಅವರು ತನ್ನ ವರ್ಚಸ್ಸು ಬೀರಿ ತನ್ನ ವೈದ್ಯ ಪುತ್ರಿ ಶ್ರೀಮತಿ ಚಂದ್ರಕಲಾ ಧಾವಳೆ ಅವರ ಎಂ. ಡಿ. ಪರೀಕ್ಷೆಯ ಅಂಕಪಟ್ಟಿಯನ್ನು ತಿದ್ದಿಸಿ ಪಾಸು ಮಾಡಿಸಿಕೊಂಡರು ಎಂಬ ಆರೋಪವೇ ಅವರ ರಾಜೀನಾಮೆಯ ಮೂಲ. ನಿಲಂಗೇಕರ್ ಒತ್ತಡ ಹೇರಿದರು ಎಂಬುದಕ್ಕೆ ನೇರ ಪುರಾವೆಗಳು ಇಲ್ಲವಾದರೂ ಚಂದ್ರಕಲಾ ಧಾವಳೆ ಫೇಲಾದದ್ದು ನಿಜ, ಆಕೆಯನ್ನು ಪಾಸು ಮಾಡಲು ಅಂಕಪಟ್ಟಿಯನ್ನು ತಿದ್ದಿದ್ದು ನಿಜ- ಹೀಗೆ ತಿದ್ದಿರುವುದಕ್ಕೆ ಮುಖ್ಯಮಂತ್ರಿಯವರ ವರ್ಚಸ್ಸು ಕಾರಣವೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ ಎಂದು ಮುಂಬಯಿ ಹೈಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ.

ಅಧಿಕಾರ ಗಿಟ್ಟಿಸಿಕೊಂಡ ರಾಜಕಾರಣಿಗಳು ಸ್ವಂತಕ್ಕೆ ಹಿತಮಾಡಿಕೊಳ್ಳಲು ಯಾವ ಮಟ್ಟಕ್ಕೆ ಇಳಿಯುವರೆಂಬುದಕ್ಕೆ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಈ ಅಂಕಪಟ್ಟಿ ತಿದ್ದುವ ಕಾರ್ಯವೇ ಒಂದು ಒಳ್ಳೆಯ ಉದಾಹರಣೆ. 1985ರ ಉತ್ತರಾರ್ಧದಲ್ಲಿ ನಡೆದ ಎಂ. ಡಿ. (ಸ್ತ್ರೀರೋಗ ಶಾಸ್ತ್ರ) ಪರೀಕ್ಷೆಯ 12 ಮಂದಿ ಅಭ್ಯರ್ಥಿಗಳ ಅಂಕಪಟ್ಟಿಯನ್ನು ತಿದ್ದಿ ಎಲ್ಲರನ್ನೂ ಪಾಸುಮಾಡಲಾಯಿತು. ಪರಿಣಾಮವಾಗಿ ಈ ವಿಭಾಗದಲ್ಲಿ ಶೇಕಡಾ 80ರಷ್ಟು ಮಂದಿ ಪಾಸಾದರು. ಇಂತಹ ಅದ್ಭುತ ಫಲಿತಾಂಶ ಆ ವಿಷಯದಲ್ಲಿ ಹಿಂದೆಂದೂ ಬಂದಿರಲಿಲ್ಲ. ಈ ತಿದ್ದುಪಡಿ ಕಾರ್ಯಾಚರಣೆಯನ್ನು ನಡೆಸಿದವರು ಪರೀಕ್ಷಾ ಮುಖ್ಯಸ್ಥರಾದ ಡಾ| ಎಂ. ವೈ. ರಾವಲ್. ಅವರು ನ್ಯಾಯಾಲಯಕ್ಕೆ ಕೊಟ್ಟ ಸಬೂಬನ್ನು ನ್ಯಾಯಾಲಯ ಒಪ್ಪಿಕೊಂಡಿಲ್ಲ. ಅವರ ಹೇಳಿಕೆ ಗೊಂದಲಪೂರಿತವಾಗಿದೆಯೆಂದು ತೀರ್ಪಿನಲ್ಲಿ ತಿಳಿಸಲಾಗಿದೆ.

ಹಗರಣದ ಪರಿಣಾಮವಾಗಿ 129 ವರ್ಷದಷ್ಟು ಹಳೆಯದಾದ ಮುಂಬಯಿ ವಿಶ್ವವಿದ್ಯಾನಿಲಯ ಆಂತರಿಕ ಕ್ಷೋಭೆಯ ದಾವಾನಲದಲ್ಲಿ ಸಿಲುಕಿದೆ. ಉಪಕುಲಪತಿ ಎಂ. ಎಸ್. ಗೋರೆಯವರೂ ಸಹಾಯಕ ಉಪಕುಲಪತಿ ಎಂ. ಡಿ. ಲಿಮಯೆ, ವಿಶೇಷ ಕರ್ತವ್ಯಾಧಿಕಾರಿ ಎಸ್. ಅರುಣಾಚಲಂ ಇವರೆಲ್ಲ ರಾಜೀನಾಮೆ ಕೊಟ್ಟಿದ್ದಾರೆ. ಉಪಕುಲಪತಿಯವರ ರಾಜೀನಾಮೆ ಸ್ವೀಕೃತವಾದ ಸುದ್ದಿ ಈಗಾಗಲೇ ಬಂದಿದೆ.

ಇವರೆಲ್ಲ ರಾಜೀನಾಮೆ ಕೊಟ್ಟದ್ದಕ್ಕೆ ಕಾರಣ ಒಂದೇ. ವಿಶ್ವವಿದ್ಯಾಲಯವು ಈ ಪ್ರಕರಣದಲ್ಲಿ ಹೈಕೋರ್ಟಿನ ಮುಂದೆ ವಹಿಸಿದ ನಿಲುಮೆಯನ್ನು ಬದಲಾಯಿಸಬೇಕು ಎಂದು ವಿಶ್ವವಿದ್ಯಾನಿಲಯದ ಮೇಲೆ ಸರಕಾರದ ಒತ್ತಡ ಬಲವಾದದ್ದು. ಅಂಕಪಟ್ಟಿ ತಿದ್ದಿರುವುದು ನಿಜವೆಂದು ವಿಶ್ವವಿದ್ಯಾನಿಲಯವು ಹೈಕೋರ್ಟಿನ ಮುಂದೆ ತನ್ನ ಅಫಿಡವಿತ್‌ನಲ್ಲಿ ಒಪ್ಪಿಕೊಂಡಿತ್ತು. ಅಲ್ಲದೆ ಎಲ್ಲಾ ದಾಖಲೆಗಳನ್ನು ವಶಕ್ಕೆ ತೆಗೆದುಕೊಂಡು ನ್ಯಾಯಾಲಯವೇ ಖುದ್ದಾಗಿ ತನಿಖೆ ಮಾಡುವುದಕ್ಕೆ ತನ್ನ ಆಕ್ಷೇಪವಿಲ್ಲವೆಂದೂ ತಿಳಿಸಿತ್ತು. ಈ ನಿಲುಮೆಯನ್ನು ಬದಲಾಯಿಸಬೇಕು ಎಂಬುದು ಸರಕಾರದ ಅಭಿಲಾಷೆಯಾಗಿತ್ತು. ಕಳೆದ 18 ತಿಂಗಳಲ್ಲಿ ಒಮ್ಮೆಯೂ ಮೋರೆ ತೋರಿಸದ ವಿಶ್ವವಿದ್ಯಾನಿಲಯದ ಸರಕಾರಿ ನೇಮಿತ ಸದಸ್ಯ ಮೊನ್ನೆ ಮೊನ್ನೆ ಕಾರ್ಯಕಾರಿ ಮಂಡಳಿಯ ಸಭೆಗೆ ಬಂದು ರಾವಲ್ ತಪ್ಪೊಪ್ಪಿಕೊಂಡ ವಿಚಾರವನ್ನು ಕೋರ್ಟಿಗೆ ತಿಳಿಸಿದ ಅಧಿಕಾರಿ ಅರುಣಾಚಲಂ ಮೇಲೆ ಆರೋಪ ಪಟ್ಟಿ ಹೊರಿಸಬೇಕೆಂದು ಸಲಹೆ ಮಾಡಿದರು. ಕೋರ್ಟಿನಲ್ಲಿ ವಿಶ್ವವಿದ್ಯಾನಿಲಯ ತಳೆದ ನಿಲುವು ಬದಲಾಯಿಸಿ ಪ್ರಕರಣದ ತನಿಖೆಯನ್ನು ಸ್ವತಃ ನಡೆಸುವುದು ತಿಳಿಸಬೇಕೆಂದೂ, ವಿಶ್ವವಿದ್ಯಾನಿಲಯದ ವಕೀಲರನ್ನು ಬದಲಾಯಿಸಬೇಕೆಂದೂ ನಿರ್ಣಯ ಅಂಗೀಕರಿಸುವಂತೆ ಈ ಅಧಿಕಾರಿ ಒತ್ತಡ ಹೇರಿದರು. ಉಪಕುಲಪತಿ ಮತ್ತಿತರರ ರಾಜೀನಾಮೆಗೆ ಇದೇ ಕಾರಣ.

ನ್ಯಾಯಾಲಯದಲ್ಲಿ ಮುಖ್ಯಮಂತ್ರಿ ಪುತ್ರಿಯ ಪರವಾಗಿ ಮಂಡಿಸಿದ ವಾದದಲ್ಲಿ ಆಕೆ ಫೇಲಾದವಳೆಂದೇ ಒಪ್ಪಿಕೊಳ್ಳುವುದಾಗಿಯೂ ತನಿಖೆಯ ಕೆಲಸವನ್ನು ವಿಶ್ವವಿದ್ಯಾಲಯಕ್ಕೆ ಬಿಟ್ಟು ಕೊಡಬೇಕಾಗಿಯೂ ಕೋರಲಾಯಿತು. ಈ ಬೇಡಿಕೆಯನ್ನು ಕೋರ್ಟು ತಿರಸ್ಕರಿಸಿ ತನಿಖೆಯನ್ನು ಹೈಕೋರ್ಟೇ ನಡೆಸುವುದೆಂದು ತಿಳಿಸಿತು.

ಈ ಎಲ್ಲಾ ವಿದ್ಯಮಾನಗಳಲ್ಲಿ ಕಂಡುಬರುವ ವಿಚಾರ ಒಂದೇ. ಮೊದಲಿಂದ ಕೊನೆಯ ತನಕ ಸರಕಾರದ ಕೈಯೊಂದು ಕೆಲಸ ಮಾಡುತ್ತಿದೆ ಎಂಬುದು. ಅದು ಮುಖ್ಯಮಂತ್ರಿ ನಿಲಂಗೇಕರ್ ಅವರದ್ದು ಹೊರತು ಬೇರೆಯವರದ್ದಾಗಿರಲು ಕಾರಣವೇನೂ ಇಲ್ಲ

ತನಗೂ ಈ ಪ್ರಕರಣಕ್ಕೂ ಯಾವ ಸಂಬಂಧವೂ ಇಲ್ಲವೆಂದು ಹೈಕೋರ್ಟಿನಲ್ಲಿ ಹೇಳಿಕೊಂಡ ಮುಖ್ಯಮಂತ್ರಿ ಕೊನೆಗೂ ತೀರ್ಪಿನ ಭಾರಕ್ಕೆ ಮಣಿದು ರಾಜೀನಾಮೆ ಕೊಟ್ಟಿದ್ದಾರೆ. ವರ್ಚಸ್ಸು ಬೀರಿದ್ದಕ್ಕೆ ನೇರ ಪುರಾವೆಗಳಿಲ್ಲವೆಂದು ನ್ಯಾಯಾಲಯವೇ ಹೇಳಿದೆಯೆಂದು ಸಬೂಬಿನ ಮರೆಯಲ್ಲಿ ರಕ್ಷಣೆ ಪಡೆಯುವ ತಂತ್ರಗಾರಿಕೆಗೆ ಅವರು ಇಳಿಯದೆ ಇರುವುದು ಸ್ವಾಗತಾರ್ಹ. ರಾಜೀನಾಮೆ ಅವರದೇ ನಿರ್ಧಾರವೇ ವರಿಷ್ಠ ಮಂಡಳಿಯ ನಿರ್ದೇಶನದ ಪರಿಣಾಮವೇ ಎಂಬುದು ಇನ್ನಷ್ಟೇ ಗೊತ್ತಾಗಬೇಕಿದೆ. ಏನಿದ್ದರೂ ಸಾರ್ವಜನಿಕ ಜೀವನವನ್ನು ಸ್ವಚ್ಛವಾಗಿ ಇರಿಸುವ ನಿಟ್ಟಿನಲ್ಲಿ ಕಾಂಗ್ರೆಸ್ (ಐ) ನಾಯಕರು ತೆಗೆದುಕೊಂಡಿರುವ ಈ ನಿರ್ಧಾರ ಸ್ವಾಗತಾರ್ಹ. ಒಬ್ಬ ನಿಲಂಗೇಕರರ ರಾಜೀನಾಮೆಯಿಂದ ಪಕ್ಷಕ್ಕೇನೂ ನಷ್ಟವಾಗುವುದಿಲ್ಲ. ಜನಹಿತದ ಕಾಳಜಿಯಿಲ್ಲದೆ ಸ್ವಾಂತ ಸುಖಾಯ ಮಾತ್ರ ಮುತುವರ್ಜಿಯಿಂದ ಕೆಲಸ ಮಾಡುವ ಇಂತಹ ಮಂದಿಯನ್ನು ಆ ಪಕ್ಷದಿಂದ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಕಿತ್ತೊಗೆದರೆ ಲಾಭವೇ ಆದೀತು. ಯಾವುದೇ ಜನಪರ ಸಂಸ್ಥೆಗೆ ನಾಯಕತ್ವದ ಕೊರತೆ ಉಂಟಾಗಲಾರದು. ಜನಶಕ್ತಿಯು ಹೊಸ ಹೊಸ ನಾಯಕತ್ವವನ್ನು ನೀಡುತ್ತಲೇ ಇರುತ್ತದೆ.

ನಮ್ಮ ರಾಜಕಾರಣವು ಸ್ವಚ್ಛಗೊಳ್ಳುವ ದಾರಿಯಲ್ಲಿ ನಿಲಂಗೇಕರ್ ಪ್ರಕರಣ ಇನ್ನೊಂದು ಮೈಲಿಗಲ್ಲು. ಈ ಹಗರಣ ಹೊರಗೆ ಬರುವುದಕ್ಕೆ ಕಾರಣರಾದ ಎಲ್ಲರೂ ಅಭಿನಂದನಾರ್ಹರು. ಅಂತಹ ಧೈರ್ಯಶಾಲಿಗಳು ಈ ನಾಡಿನಲ್ಲಿ ಇನ್ನಷ್ಟು ಹೆಚ್ಚಿದರೆ ಮಾತ್ರವೇ ಜನತಂತ್ರದ ಬೇರುಗಟ್ಟಿಯಾಗುತ್ತ ಹೋಗುತ್ತದೆ.

ಮುಂಗಾರು

ಭಾನುವಾರ, ಮಾರ್ಚ್ 9, 1986

ಪಾಪಕ್ಕೆ ಪ್ರಾಯಶ್ಚಿತ್ತ

ಜಮ್ಮು-ಕಾಶ್ಮೀರದ ಜಿ. ಎಂ. ಶಹಾ ಅವರ ನ್ಯಾಶನಲ್ ಕಾನ್ಫರೆನ್ಸಿನ ಸಿಡಿದುಹೋದ ಗುಂಪಿನ ಸರಕಾರ ಬಿದ್ದುಹೋಗಿದೆ. ಆ ಗಡಿ ರಾಜ್ಯದಲ್ಲಿ ರಾಜ್ಯಪಾಲರ ಆಳ್ವಿಕೆಯನ್ನು ಜಾರಿಗೆ ತರಲಾಗಿದೆ. ವಿಧಾನಸಭೆಯನ್ನು ವಿಸರ್ಜಿಸದೆ ಅಮಾನತಿನಲ್ಲಿಡಲಾಗಿದೆ.

ಜಮ್ಮು-ಕಾಶ್ಮೀರದ ಸಂವಿಧಾನದ 92ನೇ ಕಲಮಿನ ಪ್ರಕಾರ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮುಂದಿನ ಆರು ತಿಂಗಳಿಗೆ ರಾಜ್ಯಪಾಲರ ಆಳ್ವಿಕೆ ಊರ್ಜಿತದಲ್ಲಿರುತ್ತದೆ. ಅಸೆಂಬ್ಲಿಯನ್ನು ಉಳಿಸಿಕೊಂಡಿರುವ ಹೆಜ್ಜೆಯನ್ನು ನೋಡಿದರೆ ಮತ್ತೆ ಚುನಾವಣೆ ಇಲ್ಲದೆಯೇ ಚುನಾಯಿತ ಸರಕಾರ ಸ್ಥಾಪಿಸುವ ಇರಾದೆ ಕೇಂದ್ರ ಸರಕಾರಕ್ಕಿರುವಂತೆ ಕಾಣಿಸುತ್ತದೆ.

ಜಿ. ಎಂ. ಶಹಾ ಸರಕಾರ ರಾಜಕೀಯ ಪಾಪದ ಮೊಟ್ಟೆಯೊಡೆದು ಬಂದದ್ದು. ಈ ಮೊಟ್ಟೆಗೆ ಕಾವು ಕೊಟ್ಟವರು ಶಹಾ ಮತ್ತು ಆ ರಾಜ್ಯದ ರಾಜ್ಯಪಾಲ ಜಗಮೋಹನ್. ಇಂಥ ಅನೀತಿಯ ತಳಹದಿಯ ಮೇಲಿನ ಸರಕಾರ ಕೋಮು ಹಿಂಸೆಯ ದಳ್ಳುರಿಗೆ ಸಿಕ್ಕಿ ನಾಶವಾಗಿ ಹೋಗಿದೆ. 20 ತಿಂಗಳ ಹಿಂದೆ ಕೇವಲ ಆರು ಮಂದಿಯಿದ್ದ ಶಹಾ ಗುಂಪಿಗೆ ಕಾಂಗ್ರೆ ಪಕ್ಷ ಬೆಂಬಲ ಸಾರಿತು. ಸಚಿವ ಸ್ಥಾನದ ಆಮಿಷ ತೋರಿಸಿ ಮತ್ತೆ 12 ಮಂದಿ ಶಾಸಕರನ್ನು ಫರೂಕ್ ಅಬ್ದುಲ್ಲರ ನ್ಯಾಶನಲ್ ಕಾನ್ಫರೆನ್ಸಿನಿಂದ ಹೊರಗೆಳೆದು ಅವರಿಗೆಲ್ಲ ರಾಜಭವನದಲ್ಲಿ ಆಶ್ರಯ ಕೊಟ್ಟು ಮಂತ್ರಿಗಳನ್ನಾಗಿ ಪ್ರಮಾಣವಚನ ನೀಡಿ ಹೊಸ ಸರಕಾರ ಸ್ಥಾಪಿಸಲಾಯಿತು. ಫರೂಕ್ ಅಬ್ದುಲ್ಲಾಗೆ ವಿಧಾನ ಸಭೆಯನ್ನು ಎದುರಿಸಿ ಬಲಾಬಲ ಪರೀಕ್ಷೆ ನಡೆಸಲು 24 ಗಂಟೆಗಳ ಸಮಯವನ್ನೂ ಕೊಡದೆ ಅವರ ಸಂಪುಟವನ್ನು ವಜಾ ಮಾಡಲಾಯಿತು.

ರಾಜ್ಯಪಾಲ ಜಗಮೋಹನ್‌ರ ಮತ್ತು ಕಾಂಗ್ರೆಸ್ (ಐ) ಪಕ್ಷದ ಈ ಅನೀತಿಯ ರಾಜಕಾರಣಕ್ಕೆ ಅಂದು ದೇಶದಾದ್ಯಂತ ವಿಚಾರವಂತರೆಲ್ಲರೂ ಛೀಮಾರಿ ಹಾಕಿದ್ದರು. ಶಹಾ ಸರಕಾರವನ್ನು ವಜಾ ಮಾಡಿ ವಿಧಾನಸಭೆ ವಿಸರ್ಜಿಸಿ ಮತ್ತೆ ಚುನಾವಣೆ ನಡೆಸಬೇಕು ಎಂಬ ಬೇಡಿಕೆ ಕಳೆದ 20 ತಿಂಗಳಿಂದಲೂ ಬರುತ್ತಲೇ ಇತ್ತು. ಆದರೆ ರಾಜ್ಯಪಾಲರಾಗಲಿ ಕಾಂಗ್ರೆ ಪಕ್ಷವಾಗಲಿ ಇನ್ನೂ ವಿಚಾರಗಳನ್ನು ನೇರವಾಗಿ ನೋಡಲು ಕಲಿತಂತೆ ಕಾಣಿಸುವುದಿಲ್ಲ.

ಜಮ್ಮು-ಕಾಶ್ಮೀರದ ಪರಿಸ್ಥಿತಿ ಬಗ್ಗೆ ಮೊನ್ನೆ ದೆಹಲಿಯಲ್ಲಿ ಚರ್ಚೆ ನಡೆದಾಗ ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಫರೂಕ್ ಅಬ್ದುಲ್ಲರು ಸರಕಾರ ರಚಿಸುವುದಿದ್ದರೆ ಕಾಂಗ್ರೆ ಪಕ್ಷ ಬೆಂಬಲಕೊಡುವ ಪ್ರಸ್ತಾಪ ಮುಂದಿಟ್ಟರಂತೆ. ಫರೂಕ್ ಅಬ್ದುಲ್ಲ ಸಹಜವಾಗಿಯೇ ಈ ಕೊಡುಗೆಯನ್ನು ತಿರಸ್ಕರಿಸಿದ್ದಾರೆ. ಮಿಸ್ಟರ್ ಕ್ಲೀನ್ ಎಂಬ ಹೆಸರು ಮಾಡಲು ಬಯಸುವ ರಾಜೀವ ಗಾಂಧಿ ತಾನೇ ಉರುಳಿಸಿದ ನ್ಯಾಶನಲ್ ಕಾನ್ಫರೆನ್ಸಿನ ಇನ್ನೊಂದು ಬಣಕ್ಕೆ ಮತ್ತೆ ಬೆಂಬಲ ಕೊಡುವ ಅನೀತಿಯುತ ನಡವಳಿಕೆಗೆ ಮುಂದಾಗಬಾರದಿತ್ತು. ಜಿ. ಎಂ. ಶಹಾ ಕೂಡ ಅಷ್ಟೆ. ಅಧಿಕಾರ ಹೋಗುತ್ತದೆನ್ನುವುದು ಖಚಿತವಾದಾಗ ಫರೂಕ್ ಅಬ್ದುಲ್ಲರೊಡನೆ ರಾಜಿ ಮಾಡಿಕೊಳ್ಳುವ ಮಾತನ್ನಾಡಿದರು. ತಮ್ಮೆರಡು ಬಣಗಳು ವಿಲಯನಗೊಳ್ಳುವವೆಂದೂ ಫರೂಕ್ ಅಬ್ದುಲ್ಲಾರನ್ನು ಸರಕಾರ ರಚಿಸಲು ಕರೆಯಬೇಕೆಂದೂ 20 ತಿಂಗಳ ಹಿಂದಿನ ರಾಜಕೀಯ ಕಪಟ ನಾಟಕದಲ್ಲಿ ಸಹನಟನಾಗಿದ್ದ ಜಗಮೋಹನ್‌ಗೆ ಸಂದೇಶ ಕಳಿಸಿದರು. ಆದರೆ ಜಗಮೋಹನ್‌ಗೆ ಈ ಬಗ್ಗೆ ದೆಹಲಿಯಿಂದ ಕಟ್ಟುನಿಟ್ಟಿನ ಆದೇಶ ಬಂದಿರಬಹುದು. ಕಾಂಗ್ರೆಗೆ ಪಾತ್ರವೇನೂ ಇಲ್ಲದ ವೇದಿಕೆಯನ್ನು ಯಾರಿಗೂ ಒದಗಿಸುವ ಅಧಿಕಾರ ದೆಹಲಿಯಿಂದ ಅವರಿಗೆ ದೊರೆತಿರಲಾರದು. ಅಂತೂ ಕೊನೆಗೂ ಜಿ. ಎಂ. ಶಹಾರ ಅನೀತಿಯುಕ್ತ ಹೆಜ್ಜೆಗೂ ಅವಕಾಶ ದೊರೆಯದೆ ಹೋಯಿತು.

ಕಾಂಗ್ರೆ ಪಕ್ಷದವರೂ ಕೇಂದ್ರ ಸರಕಾರದವರೂ ನೀತಿಯುತ ರಾಜಕಾರಣದಲ್ಲಿಯೂ ಸ್ವಚ್ಛ ಆಡಳಿತೆಯಲ್ಲಿಯೂ ಆಸಕ್ತರಾಗಿದ್ದರೆ ಅವರಿಗೆ ಜಮ್ಮು-ಕಾಶ್ಮೀರದಲ್ಲಿ ಇರುವುದು ಒಂದೇ ದಾರಿ. ವಿಧಾನಸಭೆಯನ್ನು ವಿಸರ್ಜನೆ ಮಾಡಿ ಆರು ತಿಂಗಳೊಳಗೆ ಹೊಸ ಚುನಾವಣೆ ನಡೆಸುವುದು. ಇದು ಹೊರತು ಅಸೆಂಬ್ಲಿಯನ್ನು ಜೀವಂತ ಇರಿಸಿಕೊಂಡು ಸರಕಾರ ರಚಿಸಲು ಅವಕಾಶ ಮಾಡಿಕೊಟ್ಟರೆ ಮತ್ತೆ ರಾಜಕೀಯ ಕುತಂತ್ರಗಾರಿಕೆಗೆ ದಾರಿ ಮಾಡಿಕೊಟ್ಟಂತಾದೀತು.

ಇಂದು ಜಮ್ಮು-ಕಾಶ್ಮೀರದಲ್ಲಿ ಕೋಮುವಾದವು ತಾಂಡವ ನಡೆಸಿದೆ. ಹಿಂಸೆ ಭುಗಿಲೆದ್ದಿದೆ. ಜನಸಾಮಾನ್ಯರ ಜೀವಕ್ಕೆ ಭದ್ರತೆ ಇಲ್ಲವಾಗಿದೆ. ಭಯೋತ್ಪಾದಕರೂ ಪಾಕಿಸ್ತಾನ ಪರ ಶಕ್ತಿಗಳೂ ಅಲ್ಲಿನ ಬೀದಿಗಳಲ್ಲಿ ರಾಜ್ಯಭಾರ ನಡೆಸಿವೆ. ಇದು ಜಿ. ಎಂ. ಶಹಾ ಅವರ 20 ತಿಂಗಳ ಕಾರುಭಾರಿನ ಫಲಿತಾಂಶ. ಈ ವಿಚಾರ ಕೇಂದ್ರಕ್ಕೆ ಅರಿವಾದಾಗ ಸಾಕಷ್ಟು ಅನಾಹುತ ಆಗಿ ಹೋಗಿದೆ.

ಆದರೆ ಈ ಅನಾಹುತದ ಪರಿಮಾರ್ಜನೆಗೆ ಕೇಂದ್ರವು ಹುಡುಕಿರುವ ದಾರಿ ಮಾತ್ರ ಇನ್ನೊಂದು ಪಾಪದ ಮೊಟ್ಟೆಯನ್ನಿಟ್ಟ ಹಾಗಾಗಿದೆ. ರಾಜ್ಯಪಾಲ ಜಗಮೋಹನ್‌ರ ಕೈಯಲ್ಲಿ ರಾಜ್ಯದ ಆಳ್ವಿಕೆ ಕೊಡಲಾಗಿದೆ. ಈ ವ್ಯಕ್ತಿ ಮಹಾ ಭ್ರಷ್ಟಾಚಾರಿಯೆಂದು ಹೆಸರು ಮಾಡಿದವರು. ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ವೇಳೆ ಕಟ್ಟಡ ಹಗರಣವೊಂದರಲ್ಲಿ ಸಿಕ್ಕಿಹಾಕಿಕೊಂಡು ಇತ್ತೀಚೆಗೆ ತಾನೇ ಸುಪ್ರೀಂ ಕೋರ್ಟಿನಿಂದ ವಾಗ್ದಂಡನೆ ಪಡೆದವರು. ತುರ್ತುಸ್ಥಿತಿ ಕಾಲದಲ್ಲಿ ಸಂಜಯಗಾಂಧಿ ದುಷ್ಟಕೂಟದ ಪ್ರಮುಖ ಸದಸ್ಯನೆಂದು ಖ್ಯಾತರಾದವರು. ತುರ್ಕಮಾನ್ ಗೇಟ್ ನೆಲಸಮ ಪ್ರಕರಣದ ಖಳನಾಯಕನೆಂದು ಹೆಸರಾದವರು. ಇವರ ಅಧಿಕಾರ ದಂಡ ಜನಹಿತಕ್ಕೆ ಅನುಕೂಲಕರದ್ದಲ್ಲವೆಂಬ ಭಾವನೆ ಜನಸಾಮಾನ್ಯರಲ್ಲುಂಟು. ಈ ಹಿನ್ನೆಲೆಯಲ್ಲಿ ಕಾಶ್ಮೀರದ ವ್ಯವಹಾರ ನೋಡಿಕೊಳ್ಳಲು ಕೇಂದ್ರ ಸರಕಾರ ಬೇರೆ ರಾಜ್ಯಪಾಲರನ್ನು ನಿಯುಕ್ತಿಗೊಳಿಸುವುದು ವಿಹಿತ.

ಮುಂಗಾರು

ಮಂಗಳವಾರ, ಮಾರ್ಚ್ 11, 1986

ವಿಶ್ವಾಸಕ್ಕೆ ಪ್ರತಿಸ್ಪಂದಿಸಿ

ತನ್ನ ವಾರ್ಷಿಕ ಯೋಜನೆಗೆ ಸಂಪನ್ಮೂಲ ರೂಢಿಸಿಕೊಳ್ಳಲು ರೈಲ್ವೆ ಇಲಾಖೆ 250 ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ಬಾಂಡುಗಳ ರೂಪದಲ್ಲಿ ಸಾಲ ಎತ್ತಲು ತೀರ್ಮಾನಿಸಿದೆ. ಹಾಗೆಯೇ ಕರ್ನಾಟಕ ಸರಕಾರ ವಿದ್ಯುತ್ ಯೋಜನೆಗಳ ನಿರ್ಮಾಣಕ್ಕೆ ಈ ವರ್ಷ 60 ಕೋಟಿ ರೂಪಾಯಿಗಳನ್ನು ಬಾಂಡು ಮಾರಾಟದ ಮೂಲಕ ಸಾಲವಾಗಿ ಸಂಗ್ರಹಿಸಲು ನಿರ್ಧರಿಸಿದೆ. ಕೇಂದ್ರ ಸರಕಾರದ ಸಾರ್ವಜನಿಕ ರಂಗದ ಸಂಸ್ಥೆಗಳಾದ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್ ಹಾಗೂ ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮಗಳು ತಲಾ 100 ಕೋಟಿ ರೂಪಾಯಿಗಳನ್ನು ಬಾಂಡು ಮಾರಾಟದ ಮೂಲಕ ಸಾಲವಾಗಿ ಸಂಗ್ರಹಿಸಿವೆ.

ಸಾರ್ವಜನಿಕ ರಂಗದ ಸಂಸ್ಥೆಗಳು ತಮ್ಮ ಚಟುವಟಿಕೆ ಹಾಗೂ ವ್ಯವಹಾರದ ವಿಸ್ತರಣೆಗೆ ಹೀಗೆ ಸಾರ್ವಜನಿಕರಿಂದ ಸಾಲ ಸಂಗ್ರಹ ಮಾಡುತ್ತಿರುವ ಹೊಸ ಪ್ರವೃತ್ತಿಯೊಂದನ್ನು ಕಾಣುತ್ತಿದ್ದೇವೆ. ಈ ಹಿಂದೆ ಯೋಜನೆಯ ವೆಚ್ಚ ನಿಭಾಯಿಸಲು ಕೇಂದ್ರ ಸರಕಾರವೇ ನೇರವಾಗಿ ಮಾರುಕಟ್ಟೆ ಸಾಲ ಎತ್ತುವ ಸಂಪ್ರದಾಯವಿತ್ತು. ಇದೀಗ ಸರಕಾರ ಸಾರ್ವಜನಿಕ ರಂಗದ ಸಂಸ್ಥೆಗಳ ಅಭಿವೃದ್ಧಿ ಯೋಜನೆಗೆ ಹಣ ಸಂಗ್ರಹಿಸುವ ನೇರ ಜವಾಬ್ದಾರಿಯನ್ನು ಕಳಚಿಕೊಂಡು ಆಯಾ ಸಂಸ್ಥೆಗಳನ್ನೇ ಅದಕ್ಕೆ ಹೊಣೆ ಮಾಡುವಂತಹ ವಿದ್ಯಮಾನ ಕಂಡು ಬರುತ್ತಿದೆ. ಸದ್ಯೋಭವಿಷ್ಯದಲ್ಲಿ ಶೇರು ಹಾಗೂ ಡಿಬೆಂಚರು ಸಂಗ್ರಹ ಮಾಡುವ ಖಾಸಗಿ ಕಂಪೆನಿಗಳ ಜತೆಗೆ ಸಾರ್ವಜನಿಕ ರಂಗದ ಸಂಸ್ಥೆಗಳು ಸಾರ್ವಜನಿಕರಿಂದ ಸಂಪನ್ಮೂಲ ಸಂಗ್ರಹಿಸುವುದಕ್ಕೆ ಪೈಪೋಟಿ ನಡೆಸುವುದನ್ನು ಕಾಣುವುದು ಸಂಭವನೀಯ.

ಸಾರ್ವಜನಿಕ ರಂಗದ ಸಂಸ್ಥೆಗಳು ನೀಡುವ ಬಾಂಡುಗಳು ಸಾರ್ವಜನಿಕರಿಗೆ ಖಾಸಗಿ ಕಂಪೆನಿಗಳ ಡಿಬೆಂಚರುಗಳಿಗಿಂತಲೂ ಹೆಚ್ಚು ಆಕರ್ಷಕವಾಗಿವೆ. ಇವುಗಳಿಗೆ ದೊರೆಯುವ ಬಡ್ಡಿ ಡಿಬೆಂಚರುಗಳಿಗೆ ಸಿಗುವ ಬಡ್ಡಿಗಿಂತ ಶೇಕಡಾ ಒಂದರಷ್ಟು ಕಡಿಮೆಯಾದರೂ ಇವುಗಳಿಗೆ ಇರುವ ಇತರ ಕೆಲವಾರು ಅನುಕೂಲತೆಗಳ ದೃಷ್ಟಿಯಿಂದ ಜನರು ಇವುಗಳನ್ನು ಪಡೆದುಕೊಳ್ಳುತ್ತಿರುವುದು ಕಂಡುಬಂದಿದೆ. ಅನೇಕ ಸಂಸ್ಥೆಗಳ ಬಾಂಡುಗಳು ಬಿಡುಗಡೆಯಾದ ಸ್ವಲ್ಪ ಕಾಲದಲ್ಲೇ ಮಾರಾಟವಾದ ನಿದರ್ಶನಗಳಿವೆ. ಈ ಬಾಂಡುಗಳಿಂದ ದೊರೆಯುವ ಬಡ್ಡಿಯ ಹಣಕ್ಕೆ ವರಮಾನ ತೆರಿಗೆಯಿಂದ ವಿನಾಯಿತಿಯಿದೆ. ಈ ವಿನಾಯಿತಿ 7000 ರೂಪಾಯಿ ತನಕ ದೊರೆಯುತ್ತದೆ. ಎರಡನೆಯದಾಗಿ ಇವುಗಳನ್ನು ವರ್ಗಾಯಿಸಬಹುದಾಗಿದೆ. ಖಾಸಗಿ ಕಂಪೆನಿಗಳ ಡಿಬೆಂಚರು ವರ್ಗಾವಣೆ ತುಂಬ ತ್ರಾಸದಾಯಕವಾದದ್ದು. ಪ್ರತಿ ವರ್ಗಾವಣೆ ವೇಳೆಯೂ ಸರಕಾರಕ್ಕೆ ಸ್ಟಾಂಪ್ ಡ್ಯೂಟಿ ತೆರಬೇಕಾಗಿದೆ. ಸಾರ್ವಜನಿಕ ರಂಗದ ಕಂಪೆನಿಗಳ ಈ ಬಾಂಡುಗಳ ವರ್ಗಾವಣೆಗೆ ಅಂತಹ ಯಾವ ಶರತ್ತುಗಳೂ ಇಲ್ಲ. ಬಾಂಡಿನ ಅವಧಿ ಮುಕ್ತಾಯದ ಸಮಯಕ್ಕೆ ಯಾರು ಅವುಗಳನ್ನು ಸಲ್ಲಿಸುವರೋ ಅವರಿಗೆ ಅಸಲನ್ನೂ ಬಡ್ಡಿಯನ್ನೂ ಪಾವತಿಮಾಡಲಾಗುತ್ತದೆ. ಅಲ್ಲದೆ ಈ ಬಾಂಡುಗಳಲ್ಲಿ ತೊಡಗಿಸಿದ ಹಣಕ್ಕೆ ಸಂಪತ್ತು ತೆರಿಗೆಯಿಂದಲೂ ವಿನಾಯಿತಿಯಿದೆ.

ಈ ಬಾಂಡುಗಳಿಗೆ ಇರುವ ಸವಲತ್ತಿನ ಪರಿಣಾಮವಾಗಿ ಇವುಗಳು ಜನರನ್ನು ಆಕರ್ಷಿಸುತ್ತಿರುವುದು ಶೇರು ಮಾರಾಟ ಮಾಡಲು ಮುಗಿಬೀಳುತ್ತಿರುವ ಖಾಸಗಿ ಕಂಪೆನಿಗಳವರಿಗೆ ಇರುಸುಮುರುಸಿನ ಸ್ಥಿತಿಯನ್ನು ಉಂಟು ಮಾಡಿದೆಯೆಂದು ಹೇಳಲಾಗುತ್ತಿದೆ.

ತಂತಮ್ಮ ಯೋಜನೆಗಳಿಗೆ ಸಂಪನ್ಮೂಲವನ್ನು ಆಂಶಿಕವಾಗಿಯಾದರೂ ಸಂಗ್ರಹಿಸುವ ಹೊಣೆಗಾರಿಕೆಯನ್ನು ಆಯಾ ಸಂಸ್ಥೆಗಳಿಗೇ ಹೀಗೆ ವಹಿಸಿಕೊಟ್ಟಿರುವುದರಲ್ಲಿ ತಪ್ಪೇನೂ ಇಲ್ಲ. ಸಾರ್ವಜನಿಕ ರಂಗದ ಸಂಸ್ಥೆಗಳಿಗೆ ಲಾಭ ಮಾಡುವುದೊಂದೇ ಉದ್ದೇಶ ಆಗಿರದೆ ಇತರ ಸಾಮಾಜಿಕ, ಆರ್ಥಿಕ ಜವಾಬ್ದಾರಿಗಳೂ ಇರುವುದರಿಂದ ಅವುಗಳ ಸಂಪನ್ಮೂಲ ಸಂಗ್ರಹ ಕಾರ್ಯಕ್ಕೆ ಸರಕಾರ ವಿಶೇಷ ಸವಲತ್ತುಗಳನ್ನು ಒದಗಿಸಿಕೊಡುವುದೂ ತಪ್ಪಲ್ಲ. ಆದರೆ ಆಯಾ ಕಂಪೆನಿಗಳು ತಾವೇ ಸಂಪನ್ಮೂಲ ಸಂಗ್ರಹಿಸಬೇಕೆಂಬುದನ್ನು ಒಂದು ನಿಯಮವನ್ನಾಗಿ ಮಾಡಿದರೆ ಕಷ್ಟವಾದೀತು. ಉತ್ತಮವಾಗಿ ನಡೆಯುತ್ತಿರುವ ಐ. ಟಿ. ಐ. ನಂತಹ ಕಂಪೆನಿಗಳಿಗೆ ಸಿಗುವ ಪ್ರೋತ್ಸಾಹವೇ ಬೇರೆಯವರಿಗೂ ಸಿಕ್ಕೀತೆಂಬ ಭರವಸೆಯೇನೂ ಇಲ್ಲ.

ಈ ಸಂಸ್ಥೆಗಳಿಗೆ ಸಂಪನ್ಮೂಲ ರೂಢಿಸಲು ಸಾಕಷ್ಟು ಅವಕಾಶಗಳಿವೆ. ಉಳಿತಾಯದ ಅಭ್ಯಾಸದ ಪರಿಚಯವೇ ಇಲ್ಲದ ಹಲವು ತಾಣಗಳು ನಮ್ಮ ಸಮಾಜದಲ್ಲಿವೆ. ಖಾಸಗಿ ಕಂಪೆನಿಗಳ ಕೈ ಪ್ರವೇಶಿಸದೆ ಇರುವ ಕ್ಷೇತ್ರಗಳಿವೆ. ಹಸಿರು ಕ್ರಾಂತಿಯಿಂದ ಹುಲುಸಾಗಿರುವ ಕೆಲವಾದರೂ ಪ್ರದೇಶಗಳಿವೆ. ಅಲ್ಲಿ ಸಂಪನ್ಮೂಲ ಸಂಗ್ರಹಕ್ಕೆ ಅವಕಾಶವಿದೆ.

ಆದರೆ ಒಂದು ವಿಚಾರವನ್ನು ಈ ಸಂಸ್ಥೆಗಳು ನೆನಪಿಡತಕ್ಕದ್ದು. ಸಾಲ ಸಂಗ್ರಹಿಸಲು ಸರಕಾರ ಅನುಮತಿ ಕೊಟ್ಟಿದೆಯೆಂದ ಮಾತ್ರಕ್ಕೆ ಬೇಕಾಬಿಟ್ಟಿ ಸಾಲ ಪಡೆಯುತ್ತ ಮುಂದುವರಿಯಲು ಅದು ಪರವಾನಿಗೆಯಲ್ಲ. ತಮ್ಮ ಆಡಳಿತವನ್ನು ಬಿಗಿ ಮಾಡಿ, ಉತ್ಪಾದನಾ ವೆಚ್ಚವನ್ನು ಕೆಳಗಿಳಿಸುತ್ತ, ಉತ್ಪಾದಕತೆಯನ್ನು ಹೆಚ್ಚಿಸಿ ವ್ಯವಹಾರವನ್ನು ಲಾಭದಾಯಕವಾಗಿ ಮಾಡುವತ್ತ ಅವುಗಳ ದೃಷ್ಟಿ ಇರಬೇಕು. ಈ ಮೂಲಕ ಮಾತ್ರವೇ ಅವುಗಳು ಸರಕಾರವೂ ಸಾರ್ವಜನಿಕರೂ ಇರಿಸಿದ ವಿಶ್ವಾಸಕ್ಕೆ ಪ್ರತಿಸ್ಪಂದಿಸುವುದು ಸಾಧ್ಯ.

ಮುಂಗಾರು
ಬುಧವಾರ, ಮಾರ್ಚ್ 12, 1986

ಜೀವದೊಡನೆ ಚೆಲ್ಲಾಟಸಲ್ಲದು

ಅಸಾಮಾನ್ಯವಾದ ಕ್ಷಾಮ ಪರಿಸ್ಥಿತಿಯನ್ನು ಎದುರಿಸುತ್ತಿರುವ ಕರ್ನಾಟಕಕ್ಕೂ ಇತರ ಎರಡು ರಾಜ್ಯಗಳಿಗೂ ಹೆಚ್ಚು ನೆರವನ್ನು ಕಳಿಸುವ ಬಗ್ಗೆ ಕೇಂದ್ರ ಸರಕಾರ ಪರಿಶೀಲಿಸುತ್ತಿದೆಯೆಂದು ಲೋಕಸಭೆಯಲ್ಲಿ ಕೃಷಿ ಸಚಿವ ಬೂಟಾಸಿಂಗ್ ಹೇಳಿದ್ದಾರೆ.

ನೆರವಿನ ಬಗ್ಗೆ ಹಣಕಾಸು ಸಚಿವ ಖಾತೆಯನ್ನು ಕೇಳಲಾಗಿದೆ ಎಂದು ಅವರು ಬಹಿರಂಗ ಪಡಿಸಿದ್ದಾರೆ. ಕರ್ನಾಟಕದ ವಿಷಯವಾಗಿ ಸ್ಪಷ್ಟ ಪ್ರಸ್ತಾಪ ಬಂದಾಗ ಬರ ಪರಿಹಾರಕ್ಕೆ ಕೊಟ್ಟ 43.16 ಕೋಟಿ ರೂಪಾಯಿಸ ರಾಜ್ಯ ಸರಕಾರ ಇನ್ನೂ ಯಾಕೆ ಬಿಲ್ ಕಳುಹಿಸಿಲ್ಲ ಎಂದು ಅವರು ಮರುಪ್ರಶ್ನೆ ಹಾಕಿದ್ದಾರೆ. ಇತ್ತ ಕರ್ನಾಟಕ ವಿಧಾನ ಸಭೆಯಲ್ಲಿ ಕಂದಾಯ ಸಚಿವ ಎಸ್.ಆರ್ ಬೊಮ್ಮಾಯಿ ಬರ ಪರಿಸ್ಥಿತಿ ಬಗ್ಗೆ ಮಾತನಾಡುತ್ತ ಮಂಜೂರಾದ 53.31 ಕೋಟಿ ರೂಪಾಯಿಗಳಲ್ಲಿ ಕೇಂದ್ರವು 42 ಕೋಟಿ ರೂಪಾಯಿಗಳನ್ನು ಮಾತ್ರವೇ ಬಿಡುಗಡೆ ಮಾಡಿದ್ದು ಉಳಿದುದನ್ನು ಬಿಡುಗಡೆ ಮಾಡಿಲ್ಲವೇಕೆ ಎಂದು ಆಕ್ಷೇಪಿಸಿದ್ದಾರೆ.

ಕಳೆದ ಮೂರು ತಿಂಗಳಿನಿಂದ ರಾಜ್ಯಕ್ಕೆ ಕೇಂದ್ರದಿಂದ ಬರಪರಿಹಾರ ಕಾರ್ಯಕ್ಕಾಗಿ ಯಾವುದೇ ಹಣ ಬಂದಿಲ್ಲವೆಂದು ಬೊಮ್ಮಾಯಿ ಹೇಳುತ್ತಾರೆ. ಕೇಂದ್ರ ಸರಕಾರದ ಅಧಿಕಾರಿಗಳ ತಂಡ ಕಳೆದ ತಿಂಗಳ ಪೂರ್ವಾರ್ಧದಲ್ಲಿಯೇ ರಾಜ್ಯದಲ್ಲಿ ಪ್ರವಾಸ ಮಾಡಿ ಬರಪರಿಸ್ಥಿತಿ ಅಧ್ಯಯನ ಮಾಡಿ ಪರಿಹಾರ ಕಾರ್ಯ ತೃಪ್ತಿಕರವಾಗಿದೆಯೆಂದು ರಾಜ್ಯ ಸರಕಾರವನ್ನು ಹೊಗಳಿ ಹೋದರೂ ಈ ತನಕವೂ ಹಣ ಬಿಡುಗಡೆಯಾಗಿಲ್ಲ ಎಂಬುದು ಬೊಮ್ಮಾಯಿಯವರ ದೂರು.

ಬರಪರಿಹಾರಕ್ಕೆ ಕೇಂದ್ರವು 53 ಕೋಟಿ ರೂಪಾಯಿಗಳ ಗರಿಷ್ಠ ಮಿತಿ ಹಾಕಿದ್ದರೂ ರಾಜ್ಯ ಸರಕಾರ ಅದಕ್ಕಿಂತಲೂ 34 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಖರ್ಚು ಮಾಡಿದೆಯೆಂದು ಬೊಮ್ಮಾಯಿಯವರು ಹೇಳಿದ್ದಾರೆ. ಇವೆಲ್ಲವನ್ನು ಗಮನಿಸಿದರೆ ಅನಿಸುವುದಿಷ್ಟು. ಬರಪರಿಹಾರಕ್ಕೆ ರಾಜ್ಯ ಸರಕಾರದ ಬಳಿ ಹಣ ಇಲ್ಲ. ಯೋಜನೆಯ ಹಣವನ್ನೇ ಅದು ಬರ ಪರಿಹಾರ ಕಾಮಗಾರಿಗಳಿಗೆ ತಿರುಗಿಸಿದೆ. ಆ ಬಾಬ್ತಿನಲ್ಲಿ ಈಗಾಗಲೇ ಸುಮಾರು 87 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಕೇಂದ್ರ ಸರಕಾರ ಅದರಲ್ಲಿ ಸುಮಾರು ಅರ್ಧಾಂಶ ಹಣವನ್ನು ತುಂಬಿಕೊಟ್ಟಿದೆ. ಉಳಿದ ಹಣ ಕೊಡಲು ಹಿಂದೆಮುಂದೆ ನೋಡುತ್ತಿದೆ. ಕೊಟ್ಟ ಹಣವೆಲ್ಲ ಸದುಪಯೋಗವಾಗಿದೆಯೆ ಇಲ್ಲವೆ, ಮುಂದೆ ಕೊಡುವ ಹಣವೂ ಸದುಪಯೋಗವಾದೀತೇ ಎಂಬ ಸಂದೇಹ ಕೇಂದ್ರ ಸರಕಾರಕ್ಕಿರಬಹುದು.

ಅಲ್ಲದೆ ಇದರಲ್ಲಿ ರಾಜಕೀಯ ಪರಿಗಣನೆಗಳೂ ಇರಬಹುದು. ರಾಜ್ಯ ಕೇಳಿದಂತೆ ಸರಾಗವಾಗಿ ಹಣ ನೀಡುತ್ತಾ ಹೋದರೆ ರಾಜ್ಯ ಸರಕಾರ ಬರ ಪರಿಸ್ಥಿತಿಯನ್ನು ಸುಸೂತ್ರವಾಗಿ ನಿಭಾಯಿಸಿಕೊಂಡು ಅದರಿಂದ ಬರುವ ಕೀರ್ತಿಗೆಲ್ಲ ತಾನೇ ಪಾಲುದಾರನಾಗಬಹುದೆಂಬ ಅಸೂಯೆಯ ಅಂಶವೂ ಇರಬಹುದು. ಜತೆಗೆ ರಾಜ್ಯ ಸರಕಾರವೂ ಅಗ್ಗದ ಅಕ್ಕಿ, ಸೀರೆ, ಧೋತರ, ತಾಳಿಭಾಗ್ಯ ಎಂದೆಲ್ಲಾ ಹತ್ತು ಹಲವು ಅಗ್ಗದ ಜನಪ್ರಿಯತೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಬರಪರಿಹಾರಕ್ಕೆ ಕೊಟ್ಟ ಈ ಹಣ ಕಾರ್ಯಕ್ರಮಗಳ ಒಡಲು ತುಂಬಿಸಿ ಕೇಂದ್ರದ ಹಣದಲ್ಲಿ ರಾಜ್ಯ ಪುಕ್ಕಟೆ ಹೆಸರು ಗಳಿಸುವ ಸಾಧ್ಯತೆಯಿದೆಯೆಂಬ ಹೆದರಿಕೆಯೂ ಕೇಂದ್ರಕ್ಕಿರಬಹುದು.

ಅಂತೂ ಇವೆಲ್ಲಾ ಪರಿಗಣನೆಗಳ ಗಡಿದಾಟಿ ಪರಿಹಾರಕ್ಕೆ ಹಣ ಮಂಜೂರಾಗಿ ಜಿಲ್ಲಾ-ತಾಲೂಕು ಮಟ್ಟಕ್ಕೆ ಬಂದಾಗ ಕರ್ನಾಟಕದ ಬರಪೀಡಿತ ರೈತನೂ ಕೃಷಿ ಕೂಲಿಯವನೂ ಜಾನುವಾರೂ ಸತ್ತು ಸ್ವರ್ಗ ಸೇರುವ ಪರಿಸ್ಥಿತಿ ಬಂದರೂ ಹೆಚ್ಚಲ್ಲ. ಯಾಕೆಂದರೆ ಈಗಲೇ ಪರಿಸ್ಥಿತಿ ಭೀಕರವಿದೆ. ಮುಂಗಾರು ತೊಡಗಲು ಇನ್ನೂ ಎರಡೂವರೆ ಮೂರು ತಿಂಗಳು ಬೇಕು. ಅದಕ್ಕೆ ಮೊದಲು ಮಧ್ಯೆ ಒಂದೆರಡು ಮಳೆ ಬಿದ್ದು ನೆಲ ಹಸನಾದರೆ ರೈತ ಉಳಿದಾನು. ಮುಂದಿನ ಬೆಳೆಗೆ ನೆಲ ಹದ ಮಾಡುವ ಕೆಲಸ ಶುರುಮಾಡಿಯಾನು. ಇಲ್ಲವಾದರೆ ಬೆಳೆ ಅಂತಿರಲಿ-ಜೀವ ಹಿಡಿಯುವುದೇ ಕಷ್ಟವಾದೀತು. ಮುಂದೆ ಎರಡು ತಿಂಗಳಲ್ಲಿ ಮಳೆ ಕಣ್ಣುಮುಚ್ಚಾಲೆಯಾಡಿದರೆ ಉತ್ತರ ಕರ್ನಾಟಕದಲ್ಲಿ ಜನರೂ ಕೂಡ ಹಸಿವು ತಾಳಲಾರದೆ ಸಾಯುವ ಪರಿಸ್ಥಿತಿ ಬಂದೀತು.

ಕೇಂದ್ರ-ರಾಜ್ಯ ಎರಡೂ ಸರಕಾರಗಳ ನಡವಳಿಕೆ ನೋಡಿದರೆ ಅವುಗಳು ಜನರ ಬದುಕಿನೊಡನೆ ರಾಜಕೀಯ ಚೆಲ್ಲಾಟ ಆಡುತ್ತಿರುವಂತೆ ಕಾಣಿಸುತ್ತಿದೆ. ಜನರು ಇತಿಹಾಸದಲ್ಲೇ ಕಾಣಿಸದಂತಹ ದಾರುಣ ಬರಗಾಲದಿಂದ ನರಳುತ್ತಿರುವಾಗ ಸರಕಾರಗಳು ಹಣ ಬಿಡುಗಡೆಗೂ ವೆಚ್ಚಕ್ಕೂ ವಿಹಿನ ವೇಷ ಎಣಿಸುವುದು ಮಾನವೀಯ ನಡವಳಿಕೆಯಲ್ಲ. ರಾಜ್ಯ ಸರಕಾರ ಲೆಕ್ಕ ಕೊಡದಿದ್ದರೆ ಕೇಂದ್ರ ಲೆಕ್ಕ ಕೇಳಲಿ. ವಿನಿಯೋಗ ಸರಿಯಾಗಿ ಆಗದಿದ್ದರೆ ಸೂಕ್ತ ವಿನಿಯೋಗಕ್ಕಾಗಿ ಶರತ್ತು ಹಾಕಲಿ.

ಕೇಂದ್ರ-ರಾಜ್ಯಗಳ ಹಣಕಾಸು ಬಾಂಧವ್ಯದಲ್ಲಿಯೇ ವಿಕೃತಿಯಿರುವುದನ್ನು ನಾವು ಅನೇಕ ದಿನಗಳಿಂದ ಹೇಳುತ್ತಾ ಬಂದಿದ್ದೇವೆ. ರಾಜ್ಯಗಳು ಇಂದು ಪ್ರತಿ ಪೈಸೆ-ಪೈಸೆಗೂ ಕೇಂದ್ರದ ಮುಂದೆ ಸೆರಗೊಡ್ಡಿ ಬೇಡುವ ಮುನಿಸಿಪಾಲಿಟಿಯ ಸ್ಥಾನಕ್ಕಿಳಿದಿವೆ. ಸಂವಿಧಾನದಲ್ಲಿ ಹೇಳಿದ-ಹೇಳದೆ ಇರುವ ಆರ್ಥಿಕ ಅಧಿಕಾರಗಳನ್ನೆಲ್ಲ ಕೇಂದ್ರವೇ ಬಗಲಿಗೆ ಹಾಕಿಕೊಂಡು ಕೂತಿದೆ. ಈ ವಿಕೃತಿ ಸಲ್ಲದು. ಇದರಿಂದ ನಮ್ಮ ಒಕ್ಕೂಟ ಮಾದರಿಯ ರಾಷ್ಟ್ರವ್ಯವಸ್ಥೆಗೇ ಅಪಾಯವಿದೆ. ಗಂಡಾಂತರ ಕಾಲದಲ್ಲಿಯೂ ಇಡಿಯ ದೇಶ ಒಂದು ರಾಜ್ಯದ ನೆರವಿಗೆ ಬರುವುದಿಲ್ಲವೆಂದಾದರೆ ತನಗೆ ಸಲ್ಲತಕ್ಕ ಎಲ್ಲಾ ನಮೂನೆಯ ಆರ್ಥಿಕ ರಾಜಕೀಯ ಅಧಿಕಾರಕ್ಕಾಗಿ ಕರ್ನಾಟಕವೂ ಇತರ ರಾಜ್ಯಗಳೂ ಕೆಲಸ ಮಾಡುವ ನಿಟ್ಟಿನಲ್ಲಿ ಆಲೋಚಿಸುವ ದಿನ ಬಂದೀತು. ಈಗಾಗಲೇ ಅಂತಹ ಆಲೋಚನೆಯ ಆವಿಷ್ಕಾರಗಳು ಹಲವಾರು ರಾಜ್ಯಗಳಲ್ಲಿ ಉದಯಿಸಿ ಬಂದಿವೆ. ತಮಿಳ್ನಾಡು, ಆಂಧ್ರಪ್ರದೇಶ, ಪಂಜಾಬು ಅಸ್ಸಾಮ್‌ಗಳನ್ನು ಈ ಸಾಲಿನಲ್ಲಿ ಸೇರಿಸಬಹುದಾಗಿದೆ.

ಮುಂಗಾರು
ಗುರುವಾರ, ಮಾರ್ಚ್ 13, 1986

ನಾಯಕನನ್ನು ಹೇರಬೇಡಿ

ಮಹಾರಾಷ್ಟ್ರದ ಹೊಸ ಮುಖ್ಯಮಂತ್ರಿಯಾಗಿ ಈಗ ಕೇಂದ್ರ ಸರಕಾರದ ಗೃಹ ಸಚಿವರಾದ ಎಸ್.ಬಿ. ಚವಾಣ್ ಅವರ ಆಯ್ಕೆ ನಡೆದಿದೆ. ಮಹಾರಾಷ್ಟ್ರ ಶಾಸಕಾಂಗ ಪಕ್ಷದೊಳಗೆ ಸರ್ವಾನುಮತಿಯಿಂದ ಅವರ ಚುನಾವಣೆ ನಡೆದಿದೆಯೆಂದು ಹೇಳಲಾಗಿದೆಯಾದರೂ ಈ ಸರ್ವಾನುಮತಿ ಕೃತಕವಾದದ್ದೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರವೇ ಆಗಿದೆ.

ಮಂಗಳವಾರ ಮಧ್ಯರಾತ್ರಿ ಕಳೆದು ಬಹುಹೊತ್ತಾದರೂ ನಾಯಕನ ಆಯ್ಕೆಯ ಕ್ರಿಯೆ ಮುಗಿದಿರಲಿಲ್ಲ. ಅಂದು ಬೆಳಿಗ್ಗೆಯೇ ಕಾಂಗ್ರೆಸ್ ಕೇಂದ್ರ ವರಿಷ್ಠ ಮಂಡಳಿಯ ವೀಕ್ಷಕರು ಬರತೊಡಗಿದ್ದರು. ಬಂದು ರಾಜ್ಯ ಕಾಂಗ್ರೆಸ್ ಶಾಸಕರ ಅಭಿಪ್ರಾಯ ಸಂಗ್ರಹಿಸುವ ಕೆಲಸ ಮಾಡಿದ್ದರು. ಇದೀಗ ರಾಜಸ್ಥಾನದ ರಾಜ್ಯಪಾಲರಾಗಿರುವ ವಸಂತರಾವ್ ಪಾಟೀಲ್ ಅವರ ಆಪ್ತರೆನ್ನಲಾದವರಿಗೂ ಕೇಂದ್ರ ಗೃಹ ಸಚಿವ ಎಸ್. ಬಿ. ಚವಾಣ್ ಅವರಿಗೂ ಮುಖ್ಯಮಂತ್ರಿ ಪದವಿಗಾಗಿ ತೀವ್ರ ಪೈಪೋಟಿ ಉಂಟು ಎಂಬುದು ವೀಕ್ಷಕರಿಗೆ ರಾತ್ರಿಯ ವೇಳೆಗೆ ಸ್ಪಷ್ಟವಾಗಿರಲಿಕ್ಕೆ ಸಾಕು. ಈ ಮಧ್ಯೆ ವಸಂತರಾವ್ ಪಾಟೀಲ್ ಅವರ ಶಿಷ್ಯರೇ ಆಗಿರುವ ಅಂಕಪಟ್ಟಿ ಹಗರಣದ ಪರಿಣಾಮವಾಗಿ ರಾಜೀನಾಮೆ ನೀಡಿರುವ ಮುಖ್ಯಮಂತ್ರಿ ಶಿವಾಜಿರಾವ್ ಪಾಟೀಲ್ ನಿಲಂಗೇಕರ್ ಅವರೇ ಮತ್ತೆ ಮುಖ್ಯಮಂತ್ರಿ ಆಗಬೇಕು ಎಂದು ವಸಂತರಾವ್ ಪಾಟೀಲ್ ಅವರ ಬೆಂಬಲದ ಗುಂಪು ಪಟ್ಟು ಹಿಡಿಯಿತೆನ್ನಲಾಗಿದೆ. ನಿಲಂಗೇಕರ್ ಅವರಿಗೆ ಪಕ್ಷದೊಳಗೆ ಸಾಕಷ್ಟು ಬೆಂಬಲವಿರುವುದೂ ಸ್ಪಷ್ಟವಾಗುತ್ತದೆ. ನಿಲಂಗೇಕರ್ ಅಂಕಪಟ್ಟಿ ಹಗರಣದಲ್ಲಿ ಸಿಲುಕಿರುವ ಮೇಲ್ಮನವಿ ತೀರ್ಮಾನವಾಗುವ ತನಕ ಅವರ ಆಪ್ತರೆನಿಸಿದ ಹಣಕಾಸು ಸಚಿವ ಸುಶೀಲ್ ಕುಮಾರ ಶಿಂಧೆ ಅಥವ ಕೈಗಾರಿಕಾ ಸಚಿವ ಸುಧಾಕರ ನಾಯ್ಕ್ ಮುಖ್ಯಮಂತ್ರಿಯಾಗಬೇಕು ಎಂದೂ ಈ ಗುಂಪು ವಾದಿಸಿತೆನ್ನಲಾಗಿದೆ.

ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ವರಿಷ್ಠಮಂಡಳಿಯ ಕಾರ್ಯ ಬಹು ಕ್ಲಿಷ್ಟವೂ ಗೋಜಲಿನದ್ದೂ ಆಗಿ ಪರಿಣಮಿಸುತ್ತದೆ ಎಂಬುದು ನಿರ್ವಿವಾದ. ನಿಲಂಗೇಕರ್ ಅವರನ್ನು ಪುನರಾಯ್ಕೆ ಮಾಡಲು ಶಾಸಕಾಂಗ ಪಕ್ಷಕ್ಕೆ ಅವಕಾಶ ಕೊಟ್ಟರೆ ರಾಜೀನಾಮೆಯ ಕಪಟ ನಾಟಕವನ್ನಾಡುವುದರಲ್ಲಿ ಕಾಂಗ್ರೆಸ್ ಪಕ್ಷವೂ ಕೂಡ ಹಿಂದಿಲ್ಲವೆಂಬ ಕೆಟ್ಟ ಹೆಸರನ್ನು ಅದು ಹೊತ್ತುಕೊಳ್ಳಬೇಕಾಗುತ್ತದೆ.

ಪರಿಸ್ಥಿತಿ ಹೀಗೇ ಇದ್ದರೂ ಪ್ರಜಾಪ್ರಭುತ್ವದ ಪರಂಪರೆ– ಸಂಪ್ರದಾಯಗಳನ್ನೂ ನೀತಿ-ನಿಯಮಗಳನ್ನೂ ಉಳಿಸಿಕೊಂಡು ಬೆಳೆಸುವ ಹೊಣೆಗಾರಿಕೆ ದೇಶದ ಬಹುಭಾಗವನ್ನು ಆಳುತ್ತಿರುವ ಈ ಪಕ್ಷಕ್ಕೆ ಉಂಟು. ಈ ಕರ್ತವ್ಯದಲ್ಲಿ ಮಾತ್ರ ಅದು ಮಹಾರಾಷ್ಟ್ರದಲ್ಲಿ ಎಡವಿ ಬಿದ್ದಿದೆ ಎಂದು ಹೇಳದೆ ನಿರ್ವಾಹವಿಲ್ಲ. ಕೇಂದ್ರ ನಾಯಕರೊಬ್ಬರನ್ನು ಮಹಾರಾಷ್ಟ್ರದ ಶಾಸಕಾಂಗದ ನಾಯಕನಾಗಿ ಹೇರಿರುವುದು ಆ ರಾಜ್ಯದ ಆಡಳಿತಗೆ ಅನುಕೂಲಕ್ಕಿಂತ ಅನಾನುಕೂಲವೇ ಆಗಲಿದೆ. ಶಾಸಕಾಂಗದ ಬಹುತೇಕ ಮಂದಿ ಎಸ್.ಬಿ. ಚವಾಣ್ ಅವರಿಗೆ ಪ್ರತಿಕೂಲರಿದ್ದಾರೆ ಎಂಬುದಂತೂ ಸತ್ಯ. ಈ ವಾಸ್ತವಿಕತೆಗೆ ಕಣ್ಣು ಮುಚ್ಚಿ ವರಿಷ್ಠ ಮಂಡಳಿಯೂ ಚವಾಣರನ್ನು ಕಳಿಸಿರುವುದು ರಾಜಕೀಯ ಬುದ್ಧಿವಂತಿಕೆಯೆನಿಸುವುದಿಲ್ಲ. ಎಸ್.ಬಿ. ಚವಾಣರು ಮಹಾರಾಷ್ಟ್ರದಲ್ಲಿ ಅಡಿಗಡಿಗೂ ಒಲ್ಲದ ಜನರ ಮಧ್ಯೆ ಬದುಕು ನಡೆಸಬೇಕಾಗುತ್ತದೆ. ಯಾಕೆಂದರೆ ಚವಾಣರು ಅವರ ಆಯ್ಕೆ ಅಲ್ಲ. ಮೇಲಿನಿಂದ ಬಂದು ಕೂತವರು.

ವರಿಷ್ಠ ಮಂಡಳಿ ಈ ಪ್ರಕರಣದಲ್ಲಿ ಇಷ್ಟೆಲ್ಲ ಮುತುವರ್ಜಿ ವಹಿಸುವುದೇ ಬೇಕಾಗಿರಲಿಲ್ಲ. ಕೇವಲ ವೀಕ್ಷಕನಾಗಿಯೇ ಕಾರ್ಯವೆಸಗಬಹುದಿತ್ತು. ನ್ಯಾಯಾಲಯದಿಂದ ಅಪವಾದಕ್ಕೊಳಗಾಗಿರುವ ನಿಲಂಗೇಕರ್ ಅವರನ್ನು ಮಾತ್ರ ಆಯ್ಕೆಯ ಪಟ್ಟಿಯಿಂದ ಹೊರಗಿಡಿ ಎಂಬ ರಾಜಕೀಯ ಸ್ವಚ್ಛತೆಯ ನೀತಿ ಪಾಠವನ್ನು ಶಾಸಕರಿಗೆ ಬೋಧಿಸಿ ಉಳಿದಂತೆ ಅವರ ನಾಯಕನನ್ನು ಆರಿಸಿಕೊಳ್ಳಲು ಶಾಸಕರಿಗೇ ಅಧಿಕಾರ– ಅವಕಾಶಗಳನ್ನು ಒದಗಿಸಬೇಕಿತ್ತು. ಹಾಗೆ ಮಾಡಿದ್ದರೆ ಆರೋಗ್ಯಕರ ಪರಂಪರೆಯನ್ನು ನಿರ್ಮಿಸಿದ ಹಾಗೂ ಬೆಳೆಸಿದ ಕೀರ್ತಿ ಕಾಂಗ್ರೆಸ್ ವರಿಷ್ಠರಿಗೆ ಬರುತ್ತಿತ್ತು. ನೂರಾರು ಮಂದಿ ಜನಪ್ರತಿನಿಧಿಗಳು ಸೇರಿ ನಡೆಸುವ ಆಯ್ಕೆ ಎಂದೂ ಕಳಪೆಯಾಗಿರುವುದಿಲ್ಲ ಎಂಬ ಸತ್ಯವನ್ನು ಮನಗಾಣಬೇಕಿತ್ತು. ಜನರ ಮಧ್ಯೆ ನಾಯಕತ್ವ ಹುಟ್ಟಿ ಬರುತ್ತದೆ ಎಂಬ ಸರಳ ಸೂತ್ರವನ್ನೂ ಕಾಂಗ್ರೆಸ್ ವರಿಷ್ಠರು ಮರೆತಂತಿವೆ. ತಮ್ಮ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ ಹಕ್ಕನ್ನು ಜನರಿಗೂ ಜನಪ್ರತಿನಿಧಿಗಳಿಗೂ ಕೊಡಲೊಪ್ಪದ ಬುದ್ಧಿಗೇಡಿತನವನ್ನೂ ಸರ್ವಾಧಿಕಾರಿ ಪ್ರವೃತ್ತಿಯ ಎಳೆಯನ್ನೂ ಮಹಾರಾಷ್ಟ್ರದಲ್ಲಿ ಚವಾಣರ ಹೇರಿಕೆಯ ಹೆಜ್ಜೆಯಲ್ಲಿ ಕಾಣಬಹುದಾಗಿದೆ. ರಾಜ್ಯ ಸರಕಾರದ ಅಧಿಕಾರಗಳು ಬತ್ತಿ ಹೋಗಿ ಅಧಿಕಾರಗಳು ಕೇಂದ್ರ ಸರಕಾರದ ಕೈಯಲ್ಲಿ ಕೇಂದ್ರೀಕೃತವಾಗುವ ವಿಕೃತಿ ಉಂಟಾಗುವುದು ಇಲ್ಲಿಂದಲೇ ಆಗಿದೆ. ವರಿಷ್ಠ ಮಂಡಳಿಯ ಕೃಪೆಯಿಂದ ಬಂದ ನಾಯಕನು ರಾಜ್ಯದ ಜನಕ್ಕೂ ಶಾಸಕಾಂಗಕ್ಕೂ ಹೊಣೆಯಾಗಿರುವುದಿಲ್ಲ. ಆತನ ರಕ್ಷಣೆಗೆ ಕೇಂದ್ರ ಇರುತ್ತದೆ. ಆತ ರಾಜ್ಯದ ಅಧಿಕಾರಗಳನ್ನೆಲ್ಲ ವರಿಷ್ಠ ಮಂಡಳಿಗೆ ಕಾಣಿಕೆ ಒಪ್ಪಿಸುವುದು ತಪ್ಪುವುದಿಲ್ಲ.

ಆದ್ದರಿಂದಲೇ ರಾಜ್ಯಗಳ ವ್ಯವಹಾರದಲ್ಲಿ ಅನಗತ್ಯ ಹಸ್ತಕ್ಷೇಪದ ಪಟ್ಟಿಯಲ್ಲಿ ನಾಯಕನನ್ನು ಹೇರುವ ಕೆಲಸವೂ ಸೇರುತ್ತದೆ. ಇಂತಹ ಚಟವನ್ನು ಕಾಂಗ್ರೆಸ್ ವರಿಷ್ಠಮಂಡಳಿ ಎಷ್ಟು ಕಡಿಮೆ ಮಾಡುವುದೋ ಜನತಂತ್ರಕ್ಕೆ ಅಷ್ಟು ಒಳ್ಳೆಯದಾಗುತ್ತದೆ.

ಮುಂಗಾರು
ಶನಿವಾರ, ಮಾರ್ಚ್ 15, 1986

ಸೌಜನ್ಯದ ಎಲ್ಲೆ ಮೀರಬೇಡಿ

ವಿರೋಧ ಪಕ್ಷ ನಾಯಕರ ಮೇಲೆ ಕರ್ನಾಟಕದ ಸರಕಾರವು ಪೊಲೀಸರಿಂದ ಗೂಢಚಾರಿಕೆ ನಡೆಸುತ್ತಿದೆಯೆಂದು ರಾಜ್ಯ ವಿರೋಧ ಪಕ್ಷ ನಾಯಕರು ರಾಜ್ಯ ವಿಧಾನಸಭೆಯಲ್ಲಿ ಆಪಾದನೆ ಮಾಡಿದ್ದಾರೆ. ವಿರೋಧ ಪಕ್ಷೀಯರ ಚಲನ–ವಲನಗಳ ಮೇಲೆ ನಿಗಾ ಇರಿಸಲಾಗಿದೆಯಲ್ಲದೆ ಅವರ ಟೆಲಿಫೋನ್ ಮಾತುಕತೆಗಳನ್ನು ಕದ್ದು ಆಲಿಸಲಾಗುತ್ತಿದೆ, ಟೇಪ್ ಮಾಡಿಕೊಳ್ಳಲಾಗುತ್ತಿದೆ, ಅವರ ಸೊತ್ತುಗಳ ಬಗ್ಗೆಯೂ ಗೊತ್ತುಗುರಿಗಳ ಬಗ್ಗೆಯೂ ವಿಚಾರಿಸಲಾಗುತ್ತಿದೆ. ಮುಂತಾಗಿ ಆಪಾದನೆಗಳು ಬಂದಿವೆ.

ಅಧಿಕಾರದಲ್ಲಿರುವ ಪಕ್ಷದವರು ವಿರೋಧ ಪಕ್ಷದವರ ಮೇಲೆ ಗೂಢಚಾರಿಕೆ ಮಾಡುತ್ತಿರುವುದು ಇದೇನೂ ಹೊಸದಲ್ಲ. ಇದು ಎಲ್ಲರೂ ಮಾಡಿಕೊಂಡು ಬಂದ ಕೆಲಸವೇ. ಹಿಂದೆಯೂ ಇಂತಹವೆಲ್ಲ ನಡೆದಿತ್ತು. ಯಾವ ಕಾರ್ಯಾಚರಣೆಯಾದರೂ ಅದಕ್ಕೆ ಇತಿಮಿತಿಗಳಿರಬೇಕು. ಸಭ್ಯತೆಯ, ಸೌಜನ್ಯದ ಎಲ್ಲೆಯನ್ನು ಮೀರಿರಬಾರದು. ವಿರೋಧ ಪಕ್ಷದವರು ಸಮಾಜಘಾತಕರಾಗಿದ್ದರೆ, ಅಂತಹವರ ಜತೆ ಸಂಪರ್ಕ ಹೊಂದಿದ್ದರೆ, ಅದಕ್ಕೆ ಬೇಕಾದ ನೈಜಸಾಕ್ಷ್ಯಾಧಾರಗಳು ಸರಕಾರದ ಬಳಿ ಇದ್ದರೆ ಇಂತಹ ಕಾರ್ಯಾಚರಣೆಗಳನ್ನು ನಡೆಸುವುದಕ್ಕೆ ಸಮರ್ಥನೆ ಇದೆ. ಅವುಗಳ ಫಲಿತಾಂಶಗಳನ್ನು ಸರಕಾರ ಬಹಿರಂಗಪಡಿಸುವುದು ಸೂಕ್ತ.

ಆದರೆ ಪ್ರಸ್ತುತ ವಿದ್ಯಮಾನಗಳನ್ನು ಗಮನಿಸಿದರೆ ಹಗರಣಗಳು ಬಹಿರಂಗಗೊಂಡು ಹೈರಾಣಗೊಂಡಿರುವ ಆಳುವ ಪಕ್ಷ ಅದೇ ಪ್ರಮಾಣದಲ್ಲಿ ವಿರೋಧ ಪಕ್ಷೀಯರನ್ನು ಘಾಸಿಗೊಳಿಸಲು, ಅವರಿಗೆ ಕಿರಿಕಿರಿ ಉಂಟುಮಾಡಲು ಸೌಜನ್ಯ, ಸಭ್ಯತೆಗಳ ಎಲ್ಲೆ ಮೀರಿದ ನಡವಳಿಕೆಗಳನ್ನು ತೋರಿಸುತ್ತಿರುವುದಕ್ಕೆ ಸಾಕ್ಷಿಯುಂಟು. ರಾಜಕಾರಣಿಗಳಾದವರಿಗೆ ಕೂಡ ಖಾಸಗಿ ಜೀವನವಿದೆ, ವ್ಯವಹಾರಗಳಿರುತ್ತವೆ. ಖಾಸಗಿಯವರೊಡನೆಯೋ ಆಪ್ತರೊಡನೆಯೋ ಮಾತುಕತೆ ಮಾಡುವುದು ಮನುಷ್ಯ ಸಹಜವಾದದ್ದೆ. ಇದನ್ನೆಲ್ಲ ಟೇಪ್ ಮಾಡುತ್ತ ಹೋದರೆ, ಟೆಲಿಫೋನ್ ಕದ್ದಾಲಿಸಿದರೆ, ಮನೆಯ ಬಳಿ ಕಾವಲಿಟ್ಟರೆ ಅದು ವ್ಯಕ್ತಿಯೋರ್ವನ ಖಾಸಗಿ ಜೀವನದ ಹೊಸ್ತಿಲೊಳಗೆ ಕಾಲಿಟ್ಟಂತೆ ಆಗುತ್ತದೆ. ಮಾನವೀಯ ಸೌಜನ್ಯದ ಎಲ್ಲೆಕಟ್ಟನ್ನು ಮೀರಿದಂತಾಗುತ್ತದೆ. ರಾಜಕಾರಣದ ನೀತಿಯ ಮಿತಿಯನ್ನು ಉಲ್ಲಂಘಿಸಿದಂತಾಗುತ್ತದೆ.

ಅಧಿಕಾರ ಪೀಠದಲ್ಲಿರುವವರು ಸದಾ ರಾಜಕೀಯ ವಿರೋಧಿಗಳ ಆಕ್ರಮಣಕ್ಕೆ ಗುರಿಯಾಗಿರುತ್ತಾರೆ. ರಾಜನೀತಿಯಲ್ಲಿ ಅದು ಸಹಜವಾದದ್ದು. ಆಳುವವರು ಎಲ್ಲ ತಪ್ಪು ಹೇಳುತ್ತಾರೆ. ಯಾವ ಪ್ರಮಾದ ಮಾಡುತ್ತಾರೆ ಎಂದು ಪ್ರತಿಪಕ್ಷದವರು ಕಾದು ಕೂತಿರುತ್ತಾರೆ. ಆಪಾದನೆಗಳನ್ನು ಅವರು ಸೂಕ್ತ ವೇದಿಕೆಗಳಲ್ಲಿ ಮಾಡಿಯೂ ಮಾಡುತ್ತಾರೆ. [illegible] ಗಂಭೀರವೂ ಆಗಿದ್ದು ಸ್ಫೋಟ ಕೊಡಲು ಶುರು ಮಾಡಿದಾಗ ಸರಕಾರದ ನಾಯಕರು ಪ್ರತಿಕ್ರಿಯೆ ವ್ಯಕ್ತಪಡಿಸುವುದು ಸಹಜವಾದರೂ ಅಂತಹ ಪ್ರತಿಕ್ರಿಯೆ ಸೌಜನ್ಯತೆಯ ಎಲ್ಲೆಯನ್ನು ಮೀರಕೂಡದಲ್ಲ. ಇಂಥ ಕರ್ನಾಟಕದಲ್ಲಿ ಮಾತ್ರ ಹಾಗಾಗಿಲ್ಲ. "ನೀನು" ಎಂದರೆ "ನೀನ್ನಪ್ಪ" ಎಂಬಂತಹ [illegible] ವಿದ್ಯಮಾನಗಳು ಸರಕಾರದ ಕಡೆಯಿಂದ ಕಂಡು ಬಂದವು. ಪೈಗಳ [illegible] ವಿಧಾನ ಸಭೆಯಲ್ಲಿ ನಡೆ[illegible]. ಜನತೆಯು [illegible]

ತಿಳಿಸುವ ಧ್ವನಿಮುದ್ರಿತ ಟೇಪನ್ನು ಆಳುವ ಪಕ್ಷದ ಶಾಸಕರೊಬ್ಬರು ಅಲ್ಲಿ ಪ್ರದರ್ಶನ ಮಾಡಿದರು. ವಿರೋಧ ಪಕ್ಷದ ನಾಯಕನ ಮೇಲೆ ಗಂಭೀರ ಆಪಾದನೆಗಳನ್ನು ಹೇಳುವ ಕ್ರಿಮಿನಲ್ ಒಬ್ಬನದೆನ್ನಲಾದ ತಪ್ಪೊಪ್ಪಿಗೆ ಹೇಳಿಕೆಯನ್ನು ಸರಕಾರದ ಗೃಹ ಸಚಿವರೇ ಹಿಡಿತಂದು ಸದನದಲ್ಲಿ ಓದಿ ಹೇಳುವ ಅಪೂರ್ವ ಪ್ರಸಂಗವನ್ನು ನಮ್ಮ ಜನಪ್ರತಿನಿಧಿಗಳು ಕಂಡರು. ಈ ಹೇಳಿಕೆಗೆ ಅದನ್ನು ನೀಡಿದವನೆನ್ನಲಾದ ವ್ಯಕ್ತಿ ಸಹಿ ಮಾಡಿರಲಿಲ್ಲ. ಸಹಿ ಮಾಡಿದ್ದು ಯಾರೋ ಒಬ್ಬ ಪೊಲೀಸಧಿಕಾರಿ. ಸಹಿಯೇ ಇಲ್ಲದಒಕ್ಕಣೆ ಹೇಳಿಕೆಯಾಗುವುದಿಲ್ಲವೆಂಬ ಕಾನೂನಿನ ನಿಯಮದ ಓನಾಮವೂ ನಮ್ಮ ಗೃಹ ಸಚಿವರಿಗೆ ತಿಳಿದಿಲ್ಲವೇ ಎಂದು ಜನ ಮರುಗುವಂತಾಯಿತು. ಜೀವದಲ್ಲೇ ಇಲ್ಲದ ವ್ಯಕ್ತಿಯೊಬ್ಬನ ಹೇಳಿಕೆ ತನ್ನೆಲ್ಲ ತೂಕವನ್ನು ಕಳೆದುಕೊಳ್ಳುವುದೆಂಬ ವಾಸ್ತವ ಪ್ರಜ್ಞೆಯೂ ಸಚಿವರಿಗೆ ಬಾರದೇ ಹೋಯಿತು. ನ್ಯಾಯಾಂಗದ ಮ್ಯಾಜಿಸ್ಟ್ರೇಟ್ ಓರ್ವರ ಮುಂದೆ ನೀಡಿರುವಂತಹ ಹೇಳಿಕೆಯನ್ನು ಮಾತ್ರವೇ ಈ ದೇಶದ ನ್ಯಾಯಾಂಗವು ತಪ್ಪೊಪ್ಪಿಗೆ ಹೇಳಿಕೆಯೆಂದು ಅಂಗೀಕರಿಸುವುದೆಂಬ ಮೂಲಭೂತ ವಿಚಾರವೂ ಸಚಿವರಿಗೆ ತಿಳಿಯದೆ ಹೋಯಿತು.

ಇವೆಲ್ಲವೂ ರಾಜಕೀಯ ವಿರೋಧಿಗಳನ್ನು ಕಿಡಿ ಹಾಕುವ ಪ್ರಯತ್ನದಲ್ಲಿ ನಮ್ಮ ಆಳುವ ಪಕ್ಷದವರು ಸೌಜನ್ಯದ ಎಲ್ಲೆಯನ್ನು ಮೀರಿದ್ದಾರೆ ಎಂಬುದನ್ನು ಸಾಬೀತು ಪಡಿಸುತ್ತವೆ. ನಮ್ಮಲ್ಲಿ ಜನತಂತ್ರದ ಚೌಕಟ್ಟಾದರೂ ಉಳಿದುಕೊಂಡಿದೆ. ಅದಕ್ಕೆ ತಿರುಳು ತುಂಬುವ ಕೆಲಸವನ್ನು ನಾವು ಮಾಡಬೇಕಾಗಿದೆ. ಬಹುಕಾಲದಿಂದ ರಾಷ್ಟ್ರೀಯ ರಂಗದಲ್ಲಿ ವಿರೋಧ ಪಕ್ಷಗಳ ಸಾಲಿನಲ್ಲಿ ಕೂತು ಆಳುವವರು ನಡೆಸುವ ರಾಜಕೀಯ ಕುತಂತ್ರಗಳನ್ನು ಬಯಲು ಮಾಡುತ್ತ ರಾಜಕೀಯ ನೀತಿ ಪಾಠವನ್ನು ದೇಶಕ್ಕೆ ಹೇಳುತ್ತಿದ್ದ ವಿರೋಧ ಪಕ್ಷಗಳ ಕೂಟಕ್ಕೆ ಸೇರಿದ ಜನತಾ ಪಕ್ಷದವರಿಂದ ಈ ರಾಜ್ಯದ ಈ ದೇಶದ ಜನ ಇಂತಹ ನಡವಳಿಕೆಗಳನ್ನು ನಿರೀಕ್ಷಿಸಿರಲಿಲ್ಲ. ಸಾರ್ವಜನಿಕ ಜೀವನದಲ್ಲಿರುವವರ ಖಾಸಗಿ ಬದುಕಿನ ವಿವರಗಳನ್ನು ಟೇಪ್ ಮಾಡುವ ಹೀನಕೃತ್ಯ ಮಾಡಿ ಈ ಮಂದಿ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಿದ್ದಾರೆ. ಟೆಲಿಫೋನ್ ಕದ್ದಾಲಿಸಿ ತಾವು ಪ್ರತೀಕಾರ ಮಾಡಿದೆವೆಂದು ಬೀಗುತ್ತಿದ್ದಾರೆ. ಈ ಪ್ರಕ್ರಿಯೆಯಲ್ಲಿ ಈ ನಾಡಿನ ರಾಜಕಾರಣದ ಮಟ್ಟವನ್ನು ರಸಾತಳಕ್ಕೆ ಒಯ್ಯುತ್ತಿದ್ದೇವೆ ಎಂಬ ಪರಿವೆ ಅವರಿಗೆ ಇಲ್ಲವಾಗಿದೆ.

ವಿರೋಧ ಪಕ್ಷದವರ ವ್ಯವಹಾರಗಳನ್ನು ಕದ್ದಾಲಿಸಿದ, ಅವರ ಸಂಭಾಷಣೆಗಳನ್ನು ಟೇಪ್ ಮಾಡಿದ ಸರಕಾರದ ಅಧ್ಯಕ್ಷನನ್ನು ಒಂದು ದೇಶದ ಜನಸಮುದಾಯ ಮನೆಗೆ ಕಳಿಸಿದಂತಹ ವಿಶಿಷ್ಟ ವಿದ್ಯಮಾನವನ್ನು ಅಮೆರಿಕದಲ್ಲಿ ಕಂಡಿದ್ದೇವೆ. ಅಲ್ಲಿನ ಜನ ಅಂತಹ ಸಭ್ಯತೆಯನ್ನು ಕಾಪಾಡಿಕೊಂಡಿದ್ದಾರೆ. ರಾಜಕಾರಣಕ್ಕೂ ನೀತಿ-ನಿಯಮಗಳಿವೆಯೆಂದು ಅವರು ರಾಜಕಾರಣಿಗಳಿಗೆ ಪಾಠ ಹೇಳಿದ್ದಾರೆ.

ರಾಜಕಾರಣವು ಅದರ ಸಭ್ಯತೆಯನ್ನು ಮೀರದಿರಲಿ. ಸೌಜನ್ಯದ ಎಲ್ಲೆ ಕಟ್ಟನ್ನು ದಾಟದಿರಲಿ. ರಾಜಕೀಯ ವಿರೋಧದ ನೆಪದಲ್ಲಿ ವೈಯಕ್ತಿಕ ಬದುಕನ್ನು ಜಾಲಾಡುವ ಬೇಹುಗಾರಿಕೆಯನ್ನೂ ವೈಯಕ್ತಿಕ ಆಪಾದನೆಗಳನ್ನೂ ಮಾಡ ಹೊರಟರೆ ರಾಜಕೀಯವು ಸಮುದಾಯ[illegible] ಅಭಿವೃದ್ಧಿಗಾಗಿ ಸಾಧನವಾಗುವ [illegible] ವ್ಯಕ್ತಿ [illegible] ರಾಜ[illegible]

ಮುಂಗಾರು

ಮಂಗಳವಾರ, ಮಾರ್ಚ್ 18, 1986

ವ್ಯಾಪಾರಿಗಳಾದ ವೈದ್ಯರು

ವೈದ್ಯಕೀಯ ವೃತ್ತಿಯಲ್ಲಿರುವವರು ನಡೆಸುವ ಅನಾಹುತಗಳು ಸಾಮಾನ್ಯವಾಗಿ ಬಹಿರಂಗಕ್ಕೆ ಬರುವುದಿಲ್ಲ. ಆದರೂ ಆಗೊಮ್ಮೆ ಈಗೊಮ್ಮೆ ಅವುಗಳು ಸಾರ್ವಜನಿಕರ ಗಮನಕ್ಕೆ ಬರುವುದಿದೆ. ನಡೆಯುವುದು ಸಾವಿರವಾದರೆ ಬಹಿರಂಗಗೊಳ್ಳುವುದು ಒಂದೋ ಎರಡೋ. ಸೇವೆಯ ಸಾಧನವಾಗಬೇಕಾದ ವೈದ್ಯಕ ವೃತ್ತಿಯು ಸಾಮಾನ್ಯ ಜನರನ್ನು ದೋಚುವ ಹಗಲು ದರೋಡೆಯ ದಂಧೆಯಾಗಿದೆ. ಪುತ್ತೂರಿನ ನರ್ಸಿಂಗ್ ಹೋಂ ಒಂದರಲ್ಲಿ ಆರೋಗ್ಯಶಾಲಿ ಗರ್ಭಿಣಿಯೋರ್ವಳು ವೈದ್ಯರ ಅಜಾಗರೂಕತೆಯಿಂದ ಸಾವನ್ನಪ್ಪಿದ ಘಟನೆ ಇದೀಗ ನಾಡಿನ ಜನರ ಗಮನಕ್ಕೆ ಬಂದಿದೆ. ಔಷಧ ಅಂಗಡಿಗಳವರು ಹೇಗೆ ಜನರಿಗೆ ಮೋಸ ಮಾಡುತ್ತಾರೆಂಬುದನ್ನು ಬಳಕೆದಾರರ ಸಂಘಟನೆಯೊಂದು ಇತ್ತೀಚೆಗೆ ತಾನೇ ಮುಂಗಾರು ಮೂಲಕ ಓದುಗರ ಗಮನಕ್ಕೆ ತಂದಿದೆ.

ಮನುಕುಲದ ನೋವನ್ನು ನಿವಾರಿಸಬೇಕಾದ ಒಂದು ಸೇವಾವೃತ್ತಿ, ಆ ವೃತ್ತಿ ಕೈಗೊಳ್ಳುವವನ ಜೀವನಕ್ಕೆ ಬೇಕಾದಷ್ಟು ಮಾತ್ರ ಸಂಪಾದನೆ ತಂದುಕೊಡುವ ಉದ್ಯೋಗವಾಗುವ ಬದಲಾಗಿ ವಾಣಿಜ್ಯ ಮಟ್ಟಕ್ಕೆ ಪರಿವರ್ತಿತವಾಗಿ ಇತರೆಲ್ಲಾ ದಂಧೆಗಳಂತೆ ಹಣ ಮಾಡುವ ವ್ಯಾಪಾರವೆನಿಸಿದೆ. ಇಂದು ವೈದ್ಯರಾಗಿ ಬರುವವರೆಲ್ಲ ಒಂದೆರಡು ವರ್ಷಗಳಲ್ಲೇ ಕಾರುಕೊಳ್ಳುವ ಜಾಗ ಖರೀದಿಸುವ ಹಾಗೂ ಬಂಗಲೆ ಕಟ್ಟಿಕೊಳ್ಳುವ ಕನಸನ್ನು ಕಾಣುತ್ತಾರೆ. ನೂರಕ್ಕೆ ತೊಂಬತ್ತೊಂಬತ್ತು ಮಂದಿಯೂ ಅದನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ.

ಹೀಗೆ ವೈದ್ಯ ಸಮುದಾಯ ಸೊತ್ತು ಮಾಡಿಕೊಳ್ಳುವ ದಾರಿಯಲ್ಲಿ ಜನಸಾಮಾನ್ಯರು ನೋವು ತಿನ್ನುವಂತಾಗಿದೆ. ಹತ್ತು ಹಲವು ರೀತಿಗಳಲ್ಲಿ ರೋಗಿಗಳನ್ನು ವೈದ್ಯರೂ ಔಷಧಿ ಮಾರಾಟಗಾರರೂ ಸೇರಿ ಹಿಂಡಿ ಹಿಪ್ಪೆ ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಇದು ನಡೆಯುತ್ತಿರುವುದು ರೋಗಿಗೆ ಹಾಸಿಗೆ ಒದಗಿಸಿ ಇತರ ಚಿಕಿತ್ಸಾ ಸೌಲಭ್ಯಗಳನ್ನು ಕೊಟ್ಟು ಶಸ್ತ್ರಕ್ರಿಯೆಗಳನ್ನು ನಡೆಸಲಾಗುವುದೆಂಬ ಪ್ರಚಾರ ಮಾಡುತ್ತ ರೋಗಿಗಳನ್ನು ಸೆಳೆಯುವ ನರ್ಸಿಂಗ್ ಹೋಂಗಳಲ್ಲಿ. ನಗರಗಳಲ್ಲಿ ಭವ್ಯ ಕಚೇರಿಗಳನ್ನು ಕಟ್ಟಿ ಕೂತುಕೊಂಡ ಕನ್ಸಲ್ಟೆಂಟ್ಸ್‌ಗಳೆಂಬ ಹೆಸರುಹೊತ್ತ ಒಂದನೇ ದರ್ಜೆ ವೈದ್ಯರುಗಳದ್ದೂ ಇನ್ನೊಂದು ವಿಧದ ಶೋಷಣೆ. ಔಷಧ ಅಂಗಡಿಗಳವರು ಸ್ಪರ್ಧೆಯನ್ನು ನಿವಾರಿಸಿಕೊಂಡಿರುವುದು ಈ ಕ್ಷೇತ್ರದಲ್ಲಿ ಇರುವಂಥ ಅಕ್ರಮಗಳ ಪೈಕಿ ಅತ್ಯಂತ ಸಣ್ಣದು ಅಷ್ಟೆ. ಖೋಟಾ ಔಷಧಿಗಳ ಮೂಲಕ ಜನರ ಆರೋಗ್ಯವನ್ನು ಹಾಳು ಮಾಡುತ್ತಿರುವುದೇ ಈ ಅಂಗಡಿಗಳು ಮಾಡುತ್ತಿರುವ ಪರಮ ಅನ್ಯಾಯ.

ಕೆಲವೇ ಕೆಲವು ಸುಸಜ್ಜಿತ ನರ್ಸಿಂಗ್‌ಹೋಂಗಳನ್ನು ಬಿಟ್ಟರೆ ಉಳಿದ ಯಾವ ನರ್ಸಿಂಗ್‌ಹೋಂಗಳಲ್ಲಿಯೂ ಸಾಕಷ್ಟು ಪರಿಣತ ವೈದ್ಯರಿರುವುದಿಲ್ಲ. ಆಸ್ಪತ್ರೆಗಳಿಗೆ ವೈದ್ಯರಂತೆಯೇ ಪರಿಣತರಾದ, ನುರಿತ ದಾದಿಯರೂ ಅಗತ್ಯ. ಆದರೆ ಹೆಚ್ಚಿನೆಲ್ಲ ನರ್ಸಿಂಗ್ ಹೋಂಗಳಲ್ಲಿಯೂ ಅರೆಬರೆ ತರಬೇತಿಯ ಚುಚು

ವಿಧಾನದಲ್ಲಿ ಆಗಲು ಬಿಡುವುದಿಲ್ಲ. ಒಂದಲ್ಲ ಒಂದು ಕುಂಟು ನೆಪ ಹೇಳಿ, ಮಗು ಮಲಗಿದ್ದು ನೇರಕ್ಕಿಲ್ಲವೆಂಬ ಸಬೂಬು ಕೊಟ್ಟು ತಾಯಿಗೆ ಶಸ್ತ್ರಕ್ರಿಯೆ ಬೇಕೆನ್ನುತ್ತಾರೆ. ಆಕೆಯ ಮನೆಯವರನ್ನು ಹೀಗೆ ಹೆದರಿಸಿ ಸಿಸೇರಿಯನ್ ಮಾಡಿ ಐನೂರು ರೂಪಾಯಿಯಿಂದ ಒಂದು ಸಾವಿರ ರೂಪಾಯಿ ತನಕ ವಸೂಲು ಮಾಡುತ್ತಾರೆ. ನೈಸರ್ಗಿಕವಾಗಿ ಹೆರಿಗೆ ಆಗಲು ಬಿಟ್ಟರೆ ಅನೇಕ ಸಂದರ್ಭಗಳಲ್ಲಿ ವೈದ್ಯರು ಬೆಳಗ್ಗಿಯಿಂದ ಸಂಜೆ ತನಕವೂ ಕಾದು ಕುಳಿತಿರಬೇಕಾಗುತ್ತದೆ ಎಂಬುದಕ್ಕಾಗಿಯೂ ಈ ವಿಧಾನ ಅನುಸರಿಸಲಾಗುತ್ತದೆ. ಹೆರಿಗೆ ಬೇಗ ಆಗಲಿ ಎಂಬುದಕ್ಕಾಗಿ ದ್ವಾರವನ್ನು ಒಂದು ಬದಿಯಿಂದ ಕತ್ತರಿಸಿ ಬಿಡುವ ಅಮಾನವೀಯ ಕೃತ್ಯವನ್ನು ನಡೆಸುವ ವೈದ್ಯರೂ ಹಲವರಿದ್ದಾರೆ.

ವೈದ್ಯರೂ ಔಷಧದಂಗಡಿಯವರೂ ಪರಸ್ಪರ ಶಾಮೀಲಾಗಿ ರೋಗಿಯನ್ನು ಹೀರಿ ತೆಗೆಯುವ ಜಾಲ ಹಲವು ಕಡೆ ಉಂಟು. ಇದು ನಡೆಯುವುದು ಸಣ್ಣ ಪುಟ್ಟ ಪೇಟೆ ಪಟ್ಟಣಗಳಲ್ಲಿ. ವೈದ್ಯ ಔಷಧಿಗೆ ಚೀಟಿ ಕೊಡುತ್ತಾನೆ. ಇಂತಹುದೇ ಅಂಗಡಿಯಲ್ಲಿ ಅದು ದೊರೆಯುವುದೆಂದು ನಿರ್ದೇಶಿಸುತ್ತಾನೆ. ವೈದ್ಯನಲ್ಲಿ ಅಪಾರ ಗೌರವವುಳ್ಳ ಮಂದಿ ಸಹಜವಾಗಿಯೇ ಅದೇ ಅಂಗಡಿಗೆ ಹೋಗುತ್ತಾರೆ. ರಾತ್ರಿ ವೈದ್ಯ ಅಂಗಡಿಗೆ ಬಂದು ತನ್ನ ಚೀಟಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಶೇಕಡಾ ಹದಿನೈದೋ ಇಪ್ಪತ್ತೋ ಪಾಲನ್ನು ಪಡೆಯುತ್ತಾನೆ. ಅನೀತಿಯುತವಾದ ಈ ವ್ಯವಹಾರದ ಪರಿಣಾಮವೆಂದರೆ ರೋಗಿಯ ಶೋಷಣೆ. ಅನಗತ್ಯವಾದ ಔಷಧಿಗಳನ್ನು ಬರೆದುಕೊಡುವ ಪ್ರಲೋಭನೆಗೆ ವೈದ್ಯ ಸಹಜವಾಗಿಯೇ ಇದರಲ್ಲಿ ಒಳಗಾಗುತ್ತಾನೆ.

ವೈದ್ಯರು ರೋಗಿಗಳ ತಲೆ ಒಡೆಯುವ ವ್ಯಾಪಾರಿಗಳಾಗಿ ಮಾರ್ಪಟ್ಟ ಈ ವಿದ್ಯಮಾನ ಉಂಟಾಗಿರುವುದು ಇತ್ತೀಚೆಗೆ-ಕರ್ನಾಟಕವು ಕ್ಯಾಪಿಟೇಶನ್ ಶುಲ್ಕವೆಂಬ ಮಹಾ ಪಿಡುಗನ್ನು ಸೇವೆಯೇ ಪರಮಧ್ಯೇಯವಾಗಿರಬೇಕಾದಂತಹ ವೈದ್ಯಕೀಯ ವೃತ್ತಿಗೆ ಅಂಟಿಸಿದ ಬಳಿಕ. ಈ ರೋಗವನ್ನು ಹುಟ್ಟು ಹಾಕಿದ ಮಹಾ ಕಾರ್ಯ ಮಾಡಿದ ಮಂದಿ ದಕ್ಷಿಣ ಕನ್ನಡ ಜಿಲ್ಲೆಯ ಬುದ್ಧಿಶಾಲಿಗಳು ಎಂದು ವಿಷಾದದಿಂದ ಹೇಳಬೇಕಾಗಿದೆ. ಇಂದು ಕ್ಯಾಪಿಟೇಶನ್ ಶುಲ್ಕ ಕೊಡದೆ ಸರಕಾರದ ಖರ್ಚಿನಲ್ಲಿ ವೈದ್ಯರಾದ ಜನರೂ ಕೂಡ ಕ್ಯಾಪಿಟೇಶನ್ ವೈದ್ಯಣ್ಣಗಳ ಮೇಲ್ಪಂಕ್ತಿ ಅನುಸರಿಸಿ ರೋಗಿಗಳ ಜೇಬಿಗೆ ಕನ್ನ ಹಾಕಿ ಮಹಡಿ ಮನೆ ಕಟ್ಟಿಸುತ್ತಿರುವ ಸಾಮಾಜಿಕ ದ್ರೋಹವನ್ನು ನಡೆಸುತ್ತಿದ್ದಾರೆ. ಸರಕಾರ ಪ್ರತಿಯೊಬ್ಬ ವೈದ್ಯನನ್ನು ತಯಾರು ಮಾಡಲು ಎಂಭತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿ ತನಕ ವೆಚ್ಚ ಮಾಡುತ್ತದೆ. ಸಮಾಜಕ್ಕೆ ಇಷ್ಟು ಋಣವನ್ನು ಉಳಿಸಿಕೊಂಡಿರುವ ಸರಕಾರಿ ಮೆಡಿಕಲ್ ಕಾಲೇಜಿನಲ್ಲಿ ಕಲಿತ ವೈದ್ಯರೂ ಕೂಡ ತಮ್ಮ ವೃತ್ತಿಯನ್ನು ಸೇವೆಯೆಂದು ಪರಿಗಣಿಸದೇ ಇರುವ ಸಾಮಾಜಿಕ ವಿಕೃತಿ ಇಂದು ಉಂಟಾಗಿದೆ.

ಮತ್ತು ಕೇಂದ್ರ ತೆಗೆಯುವ ದಾಖಲೆಗಳು ಇರು ತ್ತವೆ. ಕೆಲವೆಡೆ ಈ ತಾಣಗಳಲ್ಲಿ ನಡೆಯುವ ಮುಖ್ಯ ದಂದೆ. ಇವರೆಲ್ಲ ಕೂಟ ಕಟ್ಟಿಕೊಂಡು ಇಂಥಾ ಸೇವೆಗೆ ಇಂತಿಷ್ಟು ಕನಿಷ್ಠ ಶುಲ್ಕ ಎಂದು ತೀರ್ಮಾನಿಸಿ ಕೊಂಡಿರುತ್ತಾರೆ. ಯಾವ ನರ್ಸಿಂಗ್ ಹೋಂನವರೂ ಅದಕ್ಕಿಂತ ಕಡಿಮೆ ಪಡೆಯಲು ಮಾಡುವಂತಿಲ್ಲ.

ಸಾಮಾನ್ಯವಾಗಿ ನೂರಕ್ಕೆ ತೊಂಬತ್ತೊಂಬತ್ತು ಹೆರಿಗೆ ಸುಸೂತ್ರವಾಗಿ ನೈಸರ್ಗಿಕ ವಿಧಾನದಲ್ಲಿಯೇ ಆಗುವಂತಹದು. ಆದರೆ ಗರ್ಭಿಣಿಯನ್ನು ನರ್ಸಿಂಗ್ ಹೋಂಗೆ ಸೇರಿಸಿ ಬಿಟ್ಟರೆ ಸಾಕು. ಅಲ್ಲಿಂದ ಶುರುವಾಗುತ್ತದೆ ಆಕೆಯ ನರಕಯಾತನೆ. ಸಾಮಾನ್ಯವಾಗಿ ಯಾವ ನರ್ಸಿಂಗ್ ಹೋಂನವರೂ ಹೆರಿಗೆ ನೈಸರ್ಗಿಕ

ಸರಕಾರ ಮೊದಲು ಮಾಡಬೇಕಾದದ್ದು ಇಷ್ಟೆಲ್ಲ ವಿಕಾರವನ್ನು ಹುಟ್ಟಿಸಿದ ಕ್ಯಾಪಿಟೇಶನ್ ಶುಲ್ಕ ಪದ್ಧತಿಯನ್ನು ಒಂದೇ ಹೊಡೆತಕ್ಕೆ ಕಿತ್ತುಹಾಕುವುದು. ಆ ಮೇಲೆ ವೈದ್ಯಕೀಯ ವೃತ್ತಿ ನಿರತರಿಂದ ನಡೆಯುವ ಸಮಾಜ ಕಂಟಕ ಕಾರ್ಯಗಳನ್ನು ಬಯಲಿಗೆಳೆಯಲು ಪ್ರತ್ಯೇಕ ಸಂಸ್ಥೆಯೊಂದನ್ನು ಸ್ಥಾಪಿಸುವುದು. ಲೋಕಾಯುಕ್ತ ಸಂಸ್ಥೆಯಲ್ಲಿ ಸಕಲ ತನಿಖಾಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ಅದಕ್ಕೊದಗಿಸುವುದು. ವೈದ್ಯರ ಹಾಗೂ ನರ್ಸಿಂಗ್ ಹೋಂಗಳ ಸೇವಾ ಮಟ್ಟ ಹಾಗೂ ಶುಲ್ಕ ಸೂಕ್ತವಾಗಿರುವಂತೆ ನೋಡುವ ಹೊಣೆಯನ್ನು ಅದಕ್ಕೆ ವಹಿಸಿಕೊಡುವುದು. ಈಗ ಇರುವಂತಹ ಮೆಡಿಕಲ್ ಕೌನ್ಸಿಲ್ ಇದರಲ್ಲಿ ವಿಫಲವಾಗಿದೆಯೆಂಬುದು ಸ್ಪಷ್ಟ.

Agency: Suraj Advertisers 28/05/2010
Client: BDA GIM
Channel: ETV Kannada
Campaign Date: May 30/05/2010 To 02/06/2010

Program	Start	End	Dur	Spot	FCT	MAY JUNE 10			
						30	31	1	2
	Time	Time				Mo	Tu	We	Th
RODP PRIME TIME	18:00	23:00	30	20	600	5	5	5	5
RODP NON PRIME TIME	7:00	18:00	30	20	600	5	5	5	5
				40	1200	10	10	10	10

ಮುಂಗಾರು, ಮಾರ್ಚ್ 18, 1986 ಪುಟ ನಾಲ್ಕು

ಮುಂಗಾರು

ಬುಧವಾರ, ಮಾರ್ಚ್ 19, 1986

ರಾಜಕೀಯ ತಂತ್ರಗಾರಿಕೆ ಸಲ್ಲದು

ಕರ್ನಾಟಕದಲ್ಲಿ ಬರಪರಿಹಾರ ಕಾಮಗಾರಿಗಳಿಗಾಗಿ ಕೇಂದ್ರ ಸರಕಾರ ಹದಿಮೂರೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆಯೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ (ಐ) ಅಧ್ಯಕ್ಷ ಆಸ್ಕರ್ ಫೆರ್ನಾಂಡಿಸ್ ಅವರು ಪ್ರಕಟಪಡಿಸಿದ್ದಾರೆ. ಈ ವಿಚಾರವನ್ನು ಅವರು ಬಹಿರಂಗಪಡಿಸುತ್ತ ಜತೆಗೆ ಕೇಂದ್ರ ಕೃಷಿ ಸಚಿವ ಬೂಟಾಸಿಂಗ್ ಅವರು ರಾಜ್ಯದ ಬರ ಪರಿಸ್ಥಿತಿ ಅಧ್ಯಯನ ಮಾಡಲು ಸಂಸತ್ ಅಧಿವೇಶನದ ಬಳಿಕ ರಾಜ್ಯಕ್ಕೆ ಎರಡನೇ ಭೇಟಿ ಕೊಡಲಿದ್ದಾರೆ ಎಂದು ತಿಳಿಸಿದ್ದಾರೆ. ಬರಪರಿಹಾರಕ್ಕಾಗಿ ಕಾಯಂ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯದ ಬಗ್ಗೆ ರಾಜ್ಯ ಸರಕಾರದೊಂದಿಗೆ ಚರ್ಚಿಸುವುದಾಗಿಯೂ ಅವರು ತಿಳಿಸಿರುವುದಲ್ಲದೆ ಸದ್ಯದ ಬರಪರಿಸ್ಥಿತಿ ವಿಚಾರವಾಗಿ ಹಣಕಾಸು ಆಯೋಗದ ನಿಯಮಗಳಿಂದ ಹೊರತುಪಡಿಸಿ ಹಣ ನೀಡುವಂತೆ ಕೇಂದ್ರವನ್ನು ಒತ್ತಾಯಿಸಿರುವುದಾಗಿಯೂ ಹೇಳಿದ್ದಾರೆ.

ಇಷ್ಟೇ ಅಲ್ಲದೆ ಬರಪರಿಹಾರ ಕಾರ್ಯದ ಅನುಷ್ಠಾನ ಕುರಿತಂತೆ ಅವರು ರಾಜ್ಯ ಸರಕಾರವನ್ನು ಟೀಕಿಸಿದ್ದಾರೆ.

ರಾಜಕೀಯ ಪಕ್ಷಗಳಿಂದ ಪರಸ್ಪರರ ಟೀಕೆ ಸಹಜವಾದದ್ದು. ಆದರಲ್ಲಿ ವಿಶೇಷವೇನೂ ಇಲ್ಲ. ಇಂತಹ ಟೀಕೆಟಿಪ್ಪಣಿಗಳು ವಿಧಾಯಕವಾಗಿರಬೇಕೆಂದು ಜನರು ನಿರೀಕ್ಷಿಸುತ್ತಾರೆ. ರಾಜಕೀಯ ಪಕ್ಷಗಳ ಪರಸ್ಪರ ಸ್ಪರ್ಧೆಯಿಂದ ಬರಪರಿಹಾರ ಕಾರ್ಯವು ಚುರುಕಾಗಿ ನಡೆದರೆ ಅದರಿಂದ ರಾಜ್ಯದ ಜನಕ್ಕೆ ಅನುಕೂಲವೇ ಆದೀತು. ಸ್ಪರ್ಧೆಯೂ ಟೀಕೆಯೂ ಪರಸ್ಪರರ ದೋಷಗಳನ್ನೂ ಪ್ರಮಾದಗಳನ್ನೂ ಬೆಟ್ಟು ಮಾಡಿ ಜನರ ಗಮನಕ್ಕೆ ತರುವಂತಿರಬೇಕು. ಅಂತಹ ತಪ್ಪುಗಳು ಆಗದಂತೆ ಎಚ್ಚರವಹಿಸುವಂತಾಗಬೇಕು. ಸರಕಾರದ ಜಾಡ್ಯವನ್ನೂ ಔದಾಸೀನ್ಯವನ್ನೂ ಹೋಗಲಾಡಿಸಬೇಕಾದ ಹೊಣೆಗಾರಿಕೆ ಆ ಸರಕಾರದ ನಾಯಕರಿಗೆ ಇರುವಂತೆ ವಿರೋಧಪಕ್ಷಗಳಿಗೂ ಉಂಟು.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಆಳುತ್ತಿರುವ ಜನತಾಪಕ್ಷ ಹಾಗೂ ರಾಜ್ಯದಲ್ಲಿ ವಿರೋಧ ಪಕ್ಷವಾದರೂ ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆ ಪಕ್ಷಗಳು ಅತ್ಯಂತ ದಾರುಣವಾದ ಕರ್ನಾಟಕದ ಬರಪರಿಸ್ಥಿತಿ ವಿಚಾರದಲ್ಲಿ ತಮ್ಮ ಕರ್ತವ್ಯಗಳನ್ನು ಸೂಕ್ತವಾಗಿ ನಿರ್ವಹಿಸಿವೆಯೇ ಎಂದು ಪರಿಶೀಲಿಸಬೇಕಾಗಿದೆ.

ಎಂದು ಕೇಂದ್ರದವರು ಹೇಳುತ್ತಿದ್ದಾರೆ. ಈಗಾಗಲೇ 87 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಕೇಂದ್ರದವರು 53 ಕೋಟಿ ರೂಪಾಯಿ ಕೊಡುತ್ತೇವೆ ಎಂದರೂ ಕೊಟ್ಟದ್ದು ಮಾತ್ರ 42 ಕೋಟಿ ರೂಪಾಯಿ ಎಂದು ಇತ್ತೀಚೆಗೆ ರಾಜ್ಯ ಹೇಳಿತು. "ದಿನಕ್ಕೊಂದು ಕೋಟಿ ಖರ್ಚು ಮಾಡಿದ್ದರೆ ಈ ವೇಳೆಗೆ 120 ಕೋಟಿ ಖರ್ಚಾಗಬೇಕಿತ್ತು. ಅಷ್ಟು ಆಗಿದೆಯೆ" ಎಂದು ಇದೀಗ ಆಸ್ಕರ್ ಫೆರ್ನಾಂಡಿಸ್ ಕೇಳುತ್ತಿದ್ದಾರೆ.

ಖರ್ಚು ಎಷ್ಟಾಗಿದೆ. ಏನೆಲ್ಲ ಕಾಮಗಾರಿ ಆಗಿದೆ. ಜಾನುವಾರುಗಳು ಕ್ಷೇಮವಾಗಿವೆಯೋ, ಜನ ಗುಳೇ ಹೋಗುವುದು ನಿಂತಿದೆಯೆ. ಅವರಿಗೆ ಊಟ ಬಟ್ಟೆಗೆ ತೊಂದರೆ ಇಲ್ಲದಂತಹ ಕೆಲಸ ಕೊಡಲಾಗಿದೆಯೆ ಎಂಬ ವಿಚಾರಗಳನ್ನು ರಾಜ್ಯ ಸರಕಾರ ಜನರ ಮುಂದೆ ಇಟ್ಟಿಲ್ಲ. ಬರದ ಸಮಗ್ರ ಚಿತ್ರ ಏನೆಂದು ಜನರ ಗಮನಕ್ಕೆ ಬಂದಿಲ್ಲ. ಬರಪರಿಹಾರಕ್ಕೆ ಕೈಗೊಳ್ಳಲಾದ ತಾತ್ಕಾಲಿಕ ಹಾಗೂ ಕಾಯಂ ಕಾರ್ಯಕ್ರಮಗಳೇನು ಎಂಬುದನ್ನು ಜನರಿಗೆ ತಿಳಿಸಿಲ್ಲ. ಅದು ದೂರನ್ನೆಲ್ಲ ಕೇಂದ್ರದ ಮೇಲೆ ಹಾಕಿ ಆರಾಮ ಕೂತಂತಿದೆ. ಇದನ್ನು ಅಗ್ಗದ ರಾಜಕೀಯವೆನ್ನದೆ ವಿಧಿಯಿಲ್ಲ.

ಆ ಕಡೆ ಕೇಂದ್ರ ಸರಕಾರವೂ ಅಂತಹುದೇ ನಡವಳಿಕೆಯನ್ನು ತೋರಿಸುತ್ತಿದೆ. ಕೇಂದ್ರದ ಅಧಿಕಾರಿಗಳ ತಂಡ ಬಂದು ಅಧ್ಯಯನ ಮಾಡಿ ಅನುಕೂಲಕರ ವರದಿ ಕೊಟ್ಟರೂ ಹಣ ಬಿಡುಗಡೆಗೆ ಮೀನ ಮೇಷ ಲೆಕ್ಕ ಹಾಕುತ್ತಿದೆ. ಬೂಟಾಸಿಂಗ್ ಬಂದು ಹೋಗಿದ್ದಾರೆ. ಮತ್ತೆ ಬರುತ್ತಾರೆ ಎಂದು ಈಗ ಆಸ್ಕರ್ ಹೇಳುತ್ತಾರೆ. ಕೊನೆಗೂ 13.5 ಕೋಟಿ ರೂಪಾಯಿಗಳನ್ನು ಮತ್ತೆ ಕೇಂದ್ರ ಬಿಡುಗಡೆ ಮಾಡಿದೆ. ಈ ನಡವಳಿಕೆಯಲ್ಲೆಲ್ಲಾ ರಾಜಕೀಯ ತಂತ್ರಗಾರಿಕೆ ಕಾಣಿಸುತ್ತದೆ.

ಹಣ ಬಿಡುಗಡೆ ವಿಚಾರವನ್ನು ರಾಜ್ಯ ಸರಕಾರದ ವರಿಷ್ಠರೇ ಬಹಿರಂಗಪಡಿಸಬಹುದಿತ್ತು. ಅಥವಾ ಕೇಂದ್ರ ಸರಕಾರದ ನಾಯಕರೇ ಹೇಳಬಹುದಿತ್ತು. ಅದು ಒಕ್ಕೂಟ ಮಾದರಿಯ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೂಕ್ತವಾದ ಕ್ರಮ. ಇದೀಗ ಕೇಂದ್ರದಲ್ಲಿನ ತಮ್ಮ ಸರಕಾರ ರಾಜ್ಯಕ್ಕೆ ಇಂತಹ ಉಪಕಾರ ಮಾಡಿದೆಯೆಂದು ರಾಜ್ಯದ ವಿರೋಧ ಪಕ್ಷದ ಅಧ್ಯಕ್ಷರು ಪತ್ರಿಕಾ ಗೋಷ್ಠಿ ಕರೆದು ಜನರಿಗೆ ತಿಳಿಸಿದ್ದಾರೆ, ಅಂತೂ ಹಣ ಬಿಡುಗಡೆ ವಿಚಾರ ಜನರ ಗಮನಕ್ಕೆ

ರಾಜ್ಯದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಮಳೆ ಕೈಕೊಡುತ್ತ ಬಂದು ಇದೀಗ ತೀವ್ರ ರೀತಿಯ ಕ್ಷಾಮವು ರಾಜ್ಯದ ಒಂದೆರಡು ಜಿಲ್ಲೆಗಳನ್ನು ಬಿಟ್ಟರೆ ಉಳಿದೆಲ್ಲಾ ಜಿಲ್ಲೆಗಳನ್ನು ಬಾಧಿಸಿದೆ. ಮೇವಿಲ್ಲದೆ ಜಾನುವಾರುಗಳು ಸಾಯುವಂತಹ ಪರಿಸ್ಥಿತಿಯಿದೆ. ಜನರು ಉದ್ಯೋಗವಿಲ್ಲದೆ ನಗರಗಳಿಗೂ ರಾಜ್ಯದಿಂದ ಹೊರಕ್ಕೂ ಗುಳೇ ಹೋಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಬರಪರಿಹಾರಕ್ಕೆ ದೀರ್ಘಾವಧಿ ಕ್ರಮಗಳ ಜತೆಗೆ ಜನರಿಗೆ ತಾತ್ಕಾಲಿಕವಾಗಿ ಪರಿಹಾರ ಒದಗಿಸುವ, ಅನ್ನ, ಬಟ್ಟೆ, ಉದ್ಯೋಗ ಕೊಡುವ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ನಡೆಸಬೇಕಾದ ಹೊಣೆಗಾರಿಕೆ ರಾಜ್ಯ ಸರಕಾರದ್ದು.

"ನಾವು ಹಣ ಖರ್ಚು ಮಾಡಿದ್ದೇವೆ, ಕೇಂದ್ರದಿಂದ ಬಂದಿಲ್ಲ" ಎಂದು ರಾಜ್ಯ ಸರಕಾರದವರು ಹೇಳುತ್ತಿದ್ದಾರೆ. "ರಾಜ್ಯದವರು ಲೆಕ್ಕ ಕೊಡುತ್ತಿಲ್ಲ"

ಬಂತು. ಸಂತೋಷ.

ಜನರ ಆಶಯ ಇಷ್ಟೇ: ದಯವಿಟ್ಟು ಈ ರಾಜಕೀಯ ಪಕ್ಷಗಳು ಸ್ವಂತ ಹಿತಾಸಕ್ತಿ ಬೆಳೆಸುವ ಹುಮ್ಮಸ್ಸಿನಲ್ಲಿ ನಾಡಿನ ಹಿತ, ಜನ ಸಮುದಾಯದ ಹಿತ ಕಡೆಗಣಿಸಬಾರದು ಎಂಬುದು. ಬರ ಎಂಬುದು ಅತ್ಯಂತ ದಾರುಣವಾದ ಒಂದು ಮಾನವೀಯ ಸಮಸ್ಯೆ. ಅದರಲ್ಲಿ ರಾಜಕೀಯದ ಲೇಪ ಸಲ್ಲದು. ಕೇಂದ್ರ ಕೃಷಿ ಸಚಿವರು ಮತ್ತೆ ಮತ್ತೆ ರಾಜ್ಯಕ್ಕೆ ಬರಬೇಕು. ರಾಜ್ಯದ ವರಿಷ್ಠರೊಂದಿಗೆ ಸಮಾಲೋಚಿಸಬೇಕು. ಬರ ಪರಿಹಾರವೆಂಬುದು ಜನರ ಕಾಮಗಾರಿಯಾಗಬೇಕು. ಅದು ಎರಡು ಪಕ್ಷಗಳ ಕಾರ್ಯಕ್ರಮವಾಗುವುದು ಬೇಡ. ಜನರಿಗೆ ಅದರಲ್ಲಿ ಆಸಕ್ತಿ ಖಂಡಿತಾ ಇಲ್ಲ. ಇದನ್ನು ಎರಡೂ ಪಕ್ಷಗಳು ಅರ್ಥಮಾಡಿಕೊಳ್ಳಬೇಕು. ಸಮಸ್ಯೆ ನಿವಾರಣೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ವಿಚಾರಗಳಲ್ಲಿ ರಾಜಕೀಯ ತಂತ್ರಗಾರಿಕೆ ನಿಲ್ಲಿಸಬೇಕು.

ಮುಂಗಾರು
ಗುರುವಾರ, ಮಾರ್ಚ್ 20, 1986

ಶಿಸ್ತು-ಸುವ್ಯವಸ್ಥೆಯ ಶಾಸನ

ಕಡಲ ಮೀನುಗಾರಿಕೆಯನ್ನು ನಿಯಂತ್ರಣಕ್ಕೊಳಪಡಿಸಿ ಸುವ್ಯವಸ್ಥೆಗೆ ತರುವ ವಿಧೇಯಕವೊಂದು ಕರ್ನಾಟಕ ವಿಧಾನ ಸಭೆಯಲ್ಲಿ ಮಂಜೂರಾಗಿದೆ. ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಮುಖ್ಯವಾಗಿ ಕರಾವಳಿಯ ಎರಡು ಜಿಲ್ಲೆಗಳ ಶಾಸಕರು ಈ ವಿಧೇಯಕವನ್ನು ವಿರೋಧಿಸಿದ್ದಾರೆ. ಮೀನುಗಾರ ಮುಖಂಡರೊಡನೆ ಸಮಾಲೋಚನೆ ಮಾಡದೆಯೇ ಇದನ್ನು ತರಲಾಗಿದೆಯೆಂದು ಅವರು ಟೀಕಿಸಿದ್ದಾರೆ. ವಿಧೇಯಕವು ಬಡ ಮೀನುಗಾರರಿಗೆ ಹಾನಿ ಮಾಡುವುದೆಂಬ ಆರೋಪವೂ ಬಂದಿದೆ.

ವಿರೋಧ ಪಕ್ಷ ಸದಸ್ಯರ ಮೀನುಗಾರಿಕೆ ಬಗೆಗಿನ ಈ ಕಾಳಜಿ ಸ್ವಾಗತಾರ್ಹವಾದದ್ದು. ಆದರೆ ಪ್ರಕೃತದ ಪ್ರಸಂಗದಲ್ಲಿ ವಿಧೇಯಕಕ್ಕೆ ಅವರ ವಿರೋಧ ಕೇವಲ ವಿರೋಧಕ್ಕಾಗಿಯೇ ವಿರೋಧ ಎಂಬಂತೆ ಕಾಣಿಸುತ್ತಿದೆ. ವಿಧೇಯಕದ ಮುಖ್ಯಾಂಶಗಳನ್ನು ನಮ್ಮ ವಿರೋಧಿ ಶಾಸಕರು ಗಮನವಿಟ್ಟು ಅಧ್ಯಯನ ಮಾಡಿರುವಂತೆ ಕಾಣಿಸುತ್ತಿಲ್ಲ.

ವಿಧೇಯಕದಲ್ಲಿ ಎರಡು ಮುಖ್ಯ ವಿಚಾರಗಳು ಅಡಕವಾಗಿವೆ. ಒಂದನೆಯದ್ದು ವಿವಿಧ ಗಾತ್ರ ಹಾಗೂ ಮಟ್ಟದ ಮೀನುಗಾರಿಕೆ ಕಾರ್ಯಾಚರಣೆಗೆ ಸಮುದ್ರದ ಸನ್ನಿವೇಶವನ್ನು ವಿಭಾಗ ಮಾಡಿಕೊಡುವಂತಹದು ಮಹತ್ವದ ವಿಚಾರ. ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ಸಮುದ್ರ ತೀರದ ಆರು ಕಿಲೋಮೀಟರು ಪ್ರದೇಶವನ್ನು ಮೀಸಲಿಟ್ಟು ಪರ್ಸೀನ್ ಹಾಗೂ ಇನ್ನಿತರ ಬೋಟುಗಳವರ ಆಕ್ರಮಣ ಇಲ್ಲದಂತೆ ಸುರಕ್ಷಿತ ತಾಣವನ್ನು ಒದಗಿಸುವ ಇರಾದೆ ವಿಧೇಯಕದ್ದು. ಎರಡನೆಯದ್ದು ಎಲ್ಲಾ ವಿಧದ ಮೀನುಗಾರಿಕೆ ದೋಣಿಗಳವರು ಸರಕಾರಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕಲ್ಲದೆ ಮೀನುಗಾರಿಕೆ ಕಾರ್ಯಾಚರಣೆಗಿಳಿಯಲು ಸೂಕ್ತ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂದು ವಿಧಿಸುವಂತಹದು.

ಈ ಎರಡೂ ನಿಯಮಗಳಿಗೆ ಇಂದು ಕರಾವಳಿಯಲ್ಲಿ ಸಾಕಷ್ಟು ಒಳ್ಳೆಯ ದಂಧೆ ನಡೆಸಿರುವ ಪರ್ಸೀನ್ ದೋಣಿ ಮಾಲಿಕರ ವಿರೋಧ ಇರುವಂತೆ ಕಂಡುಬರುತ್ತಿದೆ. ದೋಣಿ ಮಾಲೀಕರ ಈ ವಿರೋಧವೇ ರಾಜ್ಯ ವಿಧಾನಸಭೆಯಲ್ಲಿಯೂ ಮೂಡಿ ಬಂದಿದೆ ಎಂದು ನಂಬದೆ ವಿಧಿಯಿಲ್ಲ.

ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ತೀರ ಪ್ರದೇಶದಲ್ಲಿ ನಿಶ್ಚಿತ ಋತುವಿನಲ್ಲಿ ಬಂಗುಡೆ ಹಾಗೂ ಬೂತಾಯಿಗಳಂಥ ಜನಪ್ರಿಯ ತಳಿಯ ಮೀನು ತೆಪ್ಪಗಳಲ್ಲಿ ದೊರೆಯುತ್ತವೆ. ಕೆಲವೊಮ್ಮೆ ಬುಟ್ಟಿಯೂ ದೊರೆಯುವುದುಂಟು. ಈ ಮೀನಿನ ತೆಪ್ಪಗಳು ಅವಲಂಬನೀಯವಾದವುಗಳು. ಆಯಾ ಋತುವಿನಲ್ಲಿ ಕಡಲಿಗೆ ಹೊರಟ ರಂಪಣಿಯವರು ಸೋಲು ಕಾಣುವುದು ಕಡಿಮೆ.

ಇತ್ತೀಚೆಗಿನ ವರ್ಷಗಳಲ್ಲಿ ಪರ್ಸೀನ್ ಮೀನುಗಾರಿಕೆ ಲಾಭದಾಯಕ ಉದ್ಯಮವೆನಿಸಿದ್ದೆ, ಲಕ್ಷಾಂತರ ರೂಪಾಯಿ ವಿನಿಯೋಗಿಸಲು ತಾಕತ್ತುಳ್ಳ, ಮೀನುಗಾರ ಸಮುದಾಯದಿಂದ ಹೊರಗಿನವರು ಕೂಡ ಈ ದಂಧೆ ಪ್ರವೇಶಿಸಿದ್ದಾರೆ. ಪರಿಣಾಮವಾಗಿ ಮೀನುಗಾರಿಕೆಯ ನೀತಿ ನಿಯಮಗಳನ್ನೂ ರೀತಿ ರಿವಾಜುಗಳನ್ನೂ ಗಾಳಿಗೆ ತೂರಲಾಗಿದೆ. ತೀರದಲ್ಲಿನ ಅವಲಂಬನೀಯ ಮೀನಿನ ತೆಪ್ಪ ಬಾಚಿಕೊಳ್ಳಲು ಪರ್ಸೀನ್‌ನವರು ರಂಪಣಿಯವರ ಸಾಂಪ್ರದಾಯಿಕ ತಾಣಕ್ಕೂ ಲಗ್ಗೆಯಿಟ್ಟಿದ್ದಾರೆ. ಇದರಿಂದ ರಂಪಣಿಯವರು ಸೊರಗಿ ಹೋಗಿದ್ದಾರೆ. ಪರಿಣಾಮವಾಗಿ ಸಾವಿರಾರು ಮೀನುಗಾರ ತರುಣರ ಪರಂಪರಾಗತ ರಂಪಣಿ ಉದ್ಯೋಗದ ಬೇರು ಕಿತ್ತು ನಗರಗಳಿಗೆ ವಲಸೆಹೋಗಿ ಪರ್ಸೀನ್ ಮೀನುಗಾರಿಕೆಯಲ್ಲಿ ಮಾಲೀಕರುಗಳ ಆಶ್ರಯದಲ್ಲಿ ಕೂಲಿಕಾರರಾಗಿ ದುಡಿಯತೊಡಗಿದ್ದಾರೆ.

ಬಂಡವಾಳ ಮೂಲವಾದ ಪರ್ಸೀನ್ ಉದ್ಯಮ ಬಡ ಮೀನುಗಾರರ ಕೈಗೆ ಎಟಕುವಂತಹದ್ದಲ್ಲ. [illegible] ಮಾತ್ರವೇ ಕಾಲಿಕ್ಕಲು ಸಾಧ್ಯವಾದ ಕ್ಷೇತ್ರ ಆದಾಗಿದೆ. ಪರಿಣಾಮವಾಗಿ ಕರಾವಳಿಯುದ್ದಕ್ಕೂ ಮೀನುಗಾರ ಸಮುದಾಯದ ಸಾಮಾನ್ಯ ತರುಣರು ಬೇರೆಯವರ ಆಶ್ರಯದಡಿಯಲ್ಲಿ ಕೂಲಿ ಕಾರ್ಮಿಕರಾಗಿ ಪರಿವರ್ತಿತವಾಗುವಂತಹ ದೊಡ್ಡ ಸಾಮಾಜಿಕ– ಆರ್ಥಿಕ ಅಧಃಪತನವೊಂದು ಈ ಸಮುದಾಯವನ್ನು ಎದುರಿಸುತ್ತಿದೆ. ತಲೆತಲಾಂತರಗಳಿಂದ ಸ್ವಂತ ಉದ್ಯೋಗದಿಂದ ಸ್ವಾಭಿಮಾನಿಗಳಾಗಿ ಬದುಕಿದ ಈ ಸಮುದಾಯ ಬಂಡವಾಳ ವ್ಯವಸ್ಥೆಯ ಮುಷ್ಟಿಯಲ್ಲಿ ನಲುಗಿ ಹೋಗುವ ದೊಡ್ಡ ಅಪಾಯವಿದೆ.

ಯಾಂತ್ರೀಕೃತ ಮೀನುಗಾರಿಕೆ ಕ್ಷೇತ್ರದಲ್ಲಿ ಕೂಲಿಕಾರ ಬೆಸ್ತರ ಶೋಷಣೆಯು ಮಾಲೀಕರಿಂದ ನಡೆದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದಲೇ ಸದ್ಯ ಮಂಜೂರಾಗಿರುವ ಮಸೂದೆಗೆ ಮಹತ್ವ ಬಂದಿರುವುದು. ಆದ್ದರಿಂದಲೇ ಅದಕ್ಕೆ ಮಾಲೀಕರ ಕೂಟದ ವಿರೋಧವೂ ಬಂದಿರುವುದು.

ಕರಾವಳಿಯಲ್ಲಿ ರಂಪಣಿ ಮೀನುಗಾರಿಕೆಗೆ ಆರು ಕಿಲೋಮೀಟರುಗಳ ರಕ್ಷಿತ ವಲಯವನ್ನು ಒದಗಿಸಿ ಕೊಟ್ಟಿರುವುದು ಈಗಾಗಲೇ ಶಕ್ತಿಹ್ರಾಸದಿಂದ ಹೈರಾಣಗೊಂಡು ಅಳಿಯುತ್ತ ಬಂದಿರುವ ರಂಪಣಿ ಮೀನುಗಾರಿಕೆಗೆ ಜೀವದಾನ ಮಾಡೀತು. ಕರಾವಳಿಯುದ್ದಕ್ಕೂ ಇರುವ ನಮ್ಮ ಲಕ್ಷಾಂತರ ಮೀನುಗಾರ ಕುಟುಂಬಗಳು ಮತ್ತೆ ಸ್ವಂತ ಉದ್ಯೋಗ ದೊರಕಿಸಿಕೊಂಡು ಆತ್ಮಾಭಿಮಾನದಿಂದ ತಲೆಯೆತ್ತುವುದಕ್ಕೆ ಪ್ರೋತ್ಸಾಹದ ನೀರೆರೆದೀತು. ಇದರ ಜತೆಗೆ ಸರಕಾರ ರಂಪಣಿ ಮೀನುಗಾರಿಕೆಗೆ ಸಬ್ಸಿಡಿ ಸಹಿತ ಸಾಲ ಒದಗಿಸುವ ಯೋಜನೆಯನ್ನೂ ವ್ಯಾಪಕವಾಗಿ ಶಕ್ತಿಯುತವಾಗಿ ಜಾರಿಗೆ ತರಬೇಕು.

ಮೀನುಗಾರಿಕೆ ದೋಣಿಗಳ ನೋಂದಾವಣೆ ಹಾಗೂ ಕಾರ್ಯಾಚರಣೆಗೆ ಪರವಾನಿಗೆ ಪಡೆಯಬೇಕೆಂಬ ನಿಯಮಾವಳಿಯಲ್ಲಿ ಅಸಂಗತವಾದುದೇನೂ ಕಾಣಿಸುತ್ತಿಲ್ಲ. ಲೈಸೆನ್ಸಿಂಗ್ ನಿಯಮವು ಮಾಲೀಕರನ್ನು ದಮನಿಸುವ ವ್ಯವಸ್ಥೆಯಾಗದಂತೆ ಏರ್ಪಾಡುಗಳನ್ನು ಮಾಡಬೇಕೆಂದು ಸಂಬಂಧಿತರು ಕೇಳಬಹುದೇ ಹೊರತು ಈ ವ್ಯವಸ್ಥೆಯನ್ನೇ ವಿರೋಧಿಸುವುದು ತಕ್ಕುದಲ್ಲ. ಪರವಾನಿಗೆ ಪಡೆಯಲು ದೋಣಿಗಳವರು ಸೂಕ್ತ ವ್ಯವಸ್ಥೆಗಳನ್ನು ಹೊಂದಿರಬೇಕಾಗುತ್ತದೆ. ದೋಣಿಯಲ್ಲಿ ಜೀವರಕ್ಷಕ ಉಪಕರಣಗಳಿರಬೇಕಾಗುತ್ತದೆ. ದೋಣಿ ಚಲಾಯಿಸಲು ಪರಿಣತ ಸಿಬ್ಬಂದಿಗಳಿರಬೇಕು. ದೋಣಿಯಲ್ಲಿ ಕೆಲಸಮಾಡುವ ಮಂದಿಯ ಹೆಸರು ವಿಳಾಸ, ಕೆಲಸದ ಶರತ್ತುಗಳು ಇವೆಲ್ಲ ಇರುವ ದಾಖಲೆ ಇರಿಸಬೇಕು. ಇದೆಲ್ಲ ಉದ್ಯಮವೊಂದರ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಸ್ವಾಗತಾರ್ಹವಾದ ನಿಯಮಗಳೇ ಆಗಿವೆ. ಕೂಲಿಕಾರರಿಗೆ ಕೂಡ ಇದರಿಂದ ಕೆಲಸದ ಭದ್ರತೆ ದೊರೆಯುತ್ತದೆ. ಅವರಿಗೆ ಕೆಲಸದ ಅವಧಿಯ ಮಿತಿ, ರಜೆಗಳು, ಬೋನಸ್, ಅಪಘಾತ ಪರಿಹಾರ ಇತ್ಯಾದಿ ಸೌಲಭ್ಯಗಳು ದೊರೆಯಬಹುದು.

ಈ ಶಾಸನದಡಿಯಲ್ಲಿ ನಿಯಮಗಳನ್ನು ರೂಪಿಸುವ ವೇಳೆ ಮೀನುಗಾರ ಮುಖಂಡರೊಡನೆ ಚರ್ಚಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ. ಅದನ್ನವರು ನಡೆಸುವರೆಂದೂ, ಇಡಿಯ ಮೀನುಗಾರ ಸಮುದಾಯದ ಅಭಿಪ್ರಾಯಕ್ಕೆ ಈ ಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕೀತೆಂದೂ ನಾವು ಹಾರೈಸುತೇವೆ.

ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸುವ, ಕಡಲಿನ ಜತೆ ಹೋರಾಟವಾದ ಈ ಉದ್ಯಮಕ್ಕೆ ಸರಕಾರ ಉದಾರವಾದ ಪ್ರೋತ್ಸಾಹ ಕೊಡಬೇಕೆಂದು ನಾವು ಬಹುದಿನಗಳಿಂದ ಪ್ರತಿಪಾದಿಸುತ್ತ ಬಂದಿದ್ದೇವೆ. ಆದರೆ ಸಮಾಜದಿಂದ ಸಂಗ್ರಹಿಸಿ ಸರಕಾರ ನೀಡುವ ಪ್ರೋತ್ಸಾಹ ರೂಪದ ಹಣದ ಪಾಲು ಉದ್ಯಮದಲ್ಲಿನ ಎಲ್ಲರಿಗೂ ದೊರೆಯಬೇಕಾದ್ದು ನ್ಯಾಯ; ಬಂಡವಾಳ ಹೂಡಲು ಸಾಮರ್ಥ್ಯವಿರುವ ಕೆಲವೇ ಮಂದಿ ಮಾಲೀಕರಿಗೆ ಮಾತ್ರವೇ ಸಿಕ್ಕಿದರೆ ಸಾಲದು.

ಮುಂಗಾರು

ಗುರುವಾರ, ಮಾರ್ಚ್ 20, 1986

ಶಿಸ್ತು–ಸುವ್ಯವಸ್ಥೆಯ ಶಾಸನ

ಕಡಲ ಮೀನುಗಾರಿಕೆಯನ್ನು ನಿಯಂತ್ರಣಕ್ಕೊಳಪಡಿಸಿ ಸುವ್ಯವಸ್ಥೆಗೆ ತರುವ ವಿಧೇಯಕವೊಂದು ಕರ್ನಾಟಕ ವಿಧಾನ ಸಭೆಯಲ್ಲಿ ಮಂಜೂರಾಗಿದೆ. ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಮುಖ್ಯವಾಗಿ ಕರಾವಳಿಯ ಎರಡು ಜಿಲ್ಲೆಗಳ ಶಾಸಕರು ಈ ವಿಧೇಯಕವನ್ನು ವಿರೋಧಿಸಿದ್ದಾರೆ. ಮೀನುಗಾರ ಮುಖಂಡರೊಡನೆ ಸಮಾಲೋಚನೆ ಮಾಡದೆಯೇ ಇದನ್ನು ತರಲಾಗಿದೆಯೆಂದು ಅವರು ಟೀಕಿಸಿದ್ದಾರೆ. ವಿಧೇಯಕವು ಬಡ ಮೀನುಗಾರರಿಗೆ ಹಾನಿ ಮಾಡುವುದೆಂಬ ಆರೋಪವೂ ಬಂದಿದೆ.

ವಿರೋಧ ಪಕ್ಷ ಸದಸ್ಯರ ಮೀನುಗಾರಿಕೆ ಬಗೆಗಿನ ಈ ಕಾಳಜಿ ಸ್ವಾಗತಾರ್ಹವಾದದ್ದು. ಆದರೆ ಪ್ರಸ್ತುತ ಪ್ರಸಂಗದಲ್ಲಿ ವಿಧೇಯಕಕ್ಕೆ ಅವರ ವಿರೋಧ ಕೇವಲ ವಿರೋಧಕ್ಕಾಗಿಯೇ ವಿರೋಧ ಎಂಬಂತೆ ಕಾಣಿಸುತ್ತಿದೆ. ವಿಧೇಯಕದ ಮುಖ್ಯಾಂಶಗಳನ್ನು ನಮ್ಮ ವಿರೋಧಿ ಶಾಸಕರು ಗಮನವಿಟ್ಟು ಅಧ್ಯಯನ ಮಾಡಿರುವಂತೆ ಕಾಣಿಸುತ್ತಿಲ್ಲ.

ವಿಧೇಯಕದಲ್ಲಿ ಎರಡು ಮುಖ್ಯ ವಿಚಾರಗಳು ಅಡಕವಾಗಿವೆ. ಒಂದನೆಯದ್ದು ವಿವಿಧ ಗಾತ್ರ ಹಾಗೂ ಮಟ್ಟದ ಮೀನುಗಾರಿಕೆ ಕಾರ್ಯಾಚರಣೆಗೆ ಸಮುದ್ರದ ಸನ್ನಿವೇಶವನ್ನು ವಿಭಾಗ ಮಾಡಿಕೊಡುವಂತಹದು ಮಹತ್ವದ ವಿಚಾರ. ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ಸಮುದ್ರ ತೀರದ ಆರು ಕಿಲೋಮೀಟರು ಪ್ರದೇಶವನ್ನು ಮೀಸಲಿಟ್ಟು ಪರ್ಸೀನ್ ಹಾಗೂ ಇನ್ನಿತರ ಬೋಟುಗಳವರ ಆಕ್ರಮಣ ಇಲ್ಲದಂತೆ ಸುರಕ್ಷಿತ ತಾಣವನ್ನು ಒದಗಿಸುವ ಇರಾದೆ ವಿಧೇಯಕದ್ದು. ಎರಡನೆಯದ್ದು ಎಲ್ಲಾ ವಿಧದ ಮೀನುಗಾರಿಕೆ ದೋಣಿಗಳವರು ಸರಕಾರಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕಲ್ಲದೆ ಮೀನುಗಾರಿಕೆ ಕಾರ್ಯಾಚರಣೆಗಿಳಿಯಲು ಸೂಕ್ತ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂದು ವಿಧಿಸುವಂತಹದ್ದು.

ಈ ಎರಡೂ ನಿಯಮಗಳಿಗೆ ಇಂದು ಕರಾವಳಿಯಲ್ಲಿ ಸಾಕಷ್ಟು ಒಳ್ಳೆಯ ದಂಧೆ ನಡೆಸಿರುವ ಪರ್ಸೀನ್ ದೋಣಿ ಮಾಲಕರ ವಿರೋಧ ಇರುವಂತೆ ಕಂಡು ಬರುತ್ತಿದೆ. ದೋಣಿ ಮಾಲೀಕರ ಈ ವಿರೋಧವೇ ರಾಜ್ಯ ವಿಧಾನಸಭೆಯಲ್ಲಿಯೂ ಮೂಡಿ ಬಂದಿದೆ ಎಂದು ನಂಬದೆ ವಿಧಿಯಿಲ್ಲ.

ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ತೀರ ಪ್ರದೇಶದಲ್ಲಿ ನಿಶ್ಚಿತ ಋತುವಿನಲ್ಲಿ ಬಂಗುಡೆ ಹಾಗೂ ಬೂತಾಯಿಗಳಂಥ ಜನಪ್ರಿಯ ತಳಿಯ ಮೀನು ತೆಪ್ಪಗಳಲ್ಲಿ ದೊರೆಯುತ್ತವೆ. ಕೆಲವೊಮ್ಮೆ ಮೊಟ್ಟೆಯೂ ದೊರೆಯುವುದುಂಟು. ಈ ಮೀನಿನ ತೆಪ್ಪಗಳು ಅವಲಂಬನೀಯವಾದವುಗಳು. ಆಯಾ ಋತುವಿನಲ್ಲಿ ಕಡಲಿಗೆ ಹೊರಟ ರಂಪಣಿಯವರು ಸೋಲು ಕಾಣುವುದು ಕಡಿಮೆ.

ಇತ್ತೀಚಿನ ವರ್ಷಗಳಲ್ಲಿ ಪರ್ಸೀನ್ ಮೀನುಗಾರಿಕೆ ಲಾಭದಾಯಕ ಉದ್ಯಮವೆನಿಸಿದ್ದು, ಲಕ್ಷಾಂತರ ರೂಪಾಯಿ ವಿನಿಯೋಗಿಸಲು ತಾಕತ್ತುಳ್ಳ, ಮೀನುಗಾರ ಸಮುದಾಯದಿಂದ ಹೊರಗಿನವರು ಕೂಡ ಈ ದಂಧೆ ಪ್ರವೇಶಿಸಿದ್ದಾರೆ. ಪರಿಣಾಮವಾಗಿ ಮೀನುಗಾರಿಕೆಯ ರೀತಿ ನಿಯಮಗಳನ್ನೂ ರೀತಿ ರಿವಾಜುಗಳನ್ನೂ ಗಾಳಿಗೆ ತೂರಲಾಗಿದೆ. ತೀರದಲ್ಲಿನ ಅವಲಂಬನೀಯ ಮೀನಿನ ತೆಪ್ಪ ಬಾಚಿಕೊಳ್ಳಲು ಪರ್ಸೀನ್‌ನವರು ರಂಪಣಿಯವರ ಸಾಂಪ್ರದಾಯಿಕ ತಾಣಕ್ಕೂ ಲಗ್ಗೆಯಿಟ್ಟಿದ್ದಾರೆ. ಇದರಿಂದ ರಂಪಣಿಯವರು ಸೊರಗಿ ಹೋಗಿದ್ದಾರೆ. ಪರಿಣಾಮವಾಗಿ ಸಾವಿರಾರು ಮೀನುಗಾರ ತರುಣರ ಪರಂಪರಾಗತ ರಂಪಣಿ ಉದ್ಯೋಗದ ಬೇರು ಕಿತ್ತು ನಗರಗಳಿಗೆ ವಲಸೆಹೋಗಿ ಪರ್ಸೀನ್ ಮೀನುಗಾರಿಕೆಯಲ್ಲಿ ಮಾಲೀಕರುಗಳ ಆಶ್ರಯದಲ್ಲಿ ಕೂಲಿಕಾರರಾಗಿ ದುಡಿಯತೊಡಗಿದ್ದಾರೆ.

ಬಂಡವಾಳ ಮೂಲವಾದ ಪರ್ಸೀನ್ ಉದ್ಯಮ ಬಡ ಮೀನುಗಾರರ ಕೈಗೆ ನಿಲುಕುವಂತಹದ್ದಲ್ಲ. ದುಡ್ಡಿನ ಚೀಲವುಳ್ಳವರು ಮಾತ್ರವೇ ಕಾಲಿಕ್ಕಲು ಸಾಧ್ಯವಾದ ಕ್ಷೇತ್ರ ಆದಾಗಿದೆ. ಪರಿಣಾಮವಾಗಿ ಕರಾವಳಿಯುದ್ದಕ್ಕೂ ಮೀನುಗಾರ ಸಮುದಾಯದ ಸಾಮಾನ್ಯ ತರುಣರು ಬೇರೆಯವರ ಆಶ್ರಯದಡಿಯಲ್ಲಿ ಕೂಲಿ ಕಾರ್ಮಿಕರಾಗಿ ಪರಿವರ್ತಿತವಾಗುವಂತಹ ದೊಡ್ಡ ಸಾಮಾಜಿಕ– ಆರ್ಥಿಕ ಅಧಃಪತನವೊಂದು ಈ ಸಮುದಾಯವನ್ನು ಎದುರಿಸುತ್ತಿದೆ. ತಲೆತಲಾಂತರಗಳಿಂದ ಸ್ವಂತ ಉದ್ಯೋಗದಿಂದ ಸ್ವಾಭಿಮಾನಿಗಳಾಗಿ ಬದುಕಿದ ಈ ಸಮುದಾಯ ಬಂಡವಾಳ ವ್ಯವಸ್ಥೆಯ ಮುಷ್ಟಿಯಲ್ಲಿ ನಲುಗಿ ಹೋಗುವ ದೊಡ್ಡ ಅಪಾಯವಿದೆ.

ಯಾಂತ್ರೀಕೃತ ಮೀನುಗಾರಿಕೆ ಕ್ಷೇತ್ರದಲ್ಲಿ ಕೂಲಿಕಾರ ಬೆಸ್ತರ ಶೋಷಣೆಯು ಮಾಲೀಕರಿಂದ ನಡೆದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದಲೇ ಸದ್ಯ ಮಂಜೂರಾಗಿರುವ ಮಸೂದೆಗೆ ಮಹತ್ವ ಬಂದಿರುವುದು. ಅದ್ದರಿಂದಲೇ ಅದಕ್ಕೆ ಮಾಲೀಕರ ಕೂಟದ ವಿರೋಧವೂ ಬಂದಿರುವುದು.

ಕರಾವಳಿಯಲ್ಲಿ ರಂಪಣಿ ಮೀನುಗಾರಿಕೆಗೆ ಆರು ಕಿಲೋಮೀಟರುಗಳ ರಕ್ಷಿತ ವಲಯವನ್ನು ಒದಗಿಸಿ ಕೊಟ್ಟಿರುವುದು ಈಗಾಗಲೇ ಶಕ್ತಿಹ್ರಾಸದಿಂದ ಪ್ರಾಣಗೊಂಡು ಅಳಿಯುತ್ತ ಬಂದಿರುವ ರಂಪಣಿ ಮೀನುಗಾರಿಕೆಗೆ ಜೀವದಾನ ಮಾಡೀತು. ಕರಾವಳಿಯುದ್ದಕ್ಕೂ ಇರುವ ನಮ್ಮ ಲಕ್ಷಾಂತರ ಮೀನುಗಾರ ಕುಟುಂಬಗಳು ಮತ್ತೆ ಸ್ವಂತ ಉದ್ಯೋಗ ದೊರಕಿಸಿಕೊಂಡು ಆತ್ಮಾಭಿಮಾನದಿಂದ ತಲೆಯೆತ್ತುವುದಕ್ಕೆ ಪ್ರೋತ್ಸಾಹದ ನೀರೆರೆದೀತು. ಇದರ ಜತೆಗೆ ಸರಕಾರ ರಂಪಣಿ ಮೀನುಗಾರಿಕೆಗೆ ಸಬ್ಸಿಡಿ ಸಹಿತ ಸಾಲ ಒದಗಿಸುವ ಯೋಜನೆಯನ್ನೂ ವ್ಯಾಪಕವಾಗಿ ಶಕ್ತಿಯುತವಾಗಿ ಜಾರಿಗೆ ತರಬೇಕು.

ಮೀನುಗಾರಿಕೆ ದೋಣಿಗಳ ನೋಂದಾವಣೆ ಹಾಗೂ ಕಾರ್ಯಾಚರಣೆಗೆ ಪರವಾನಿಗೆ ಪಡೆಯಬೇಕೆಂಬ ನಿಯಮಾವಳಿಯಲ್ಲಿ ಅಸಂಗತವಾದುದೇನೂ ಕಾಣಿಸುತ್ತಿಲ್ಲ. ಲೈಸೆನ್ಸಿಂಗ್ ನಿಯಮವು ಮಾಲೀಕರನ್ನು ದಮನಿಸುವ ವ್ಯವಸ್ಥೆಯಾಗದಂತೆ ಏರ್ಪಾಡುಗಳನ್ನು ಮಾಡಬೇಕೆಂದು ಸಂಬಂಧಿತರು ಕೇಳಬಹುದೇ ಹೊರತು ಈ ವ್ಯವಸ್ಥೆಯನ್ನೇ ವಿರೋಧಿಸುವುದು ತಕ್ಕುದಲ್ಲ. ಪರವಾನಿಗೆ ಪಡೆಯಲು ದೋಣಿಗಳವರು ಸೂಕ್ತ ವ್ಯವಸ್ಥೆಗಳನ್ನು ಹೊಂದಿರಬೇಕಾಗುತ್ತದೆ. ದೋಣಿಯಲ್ಲಿ ಜೀವರಕ್ಷಕ ಉಪಕರಣಗಳಿರಬೇಕಾಗುತ್ತದೆ. ದೋಣಿ ಚಲಾಯಿಸಲು ಪರಿಣತ ಸಿಬ್ಬಂದಿಗಳಿರಬೇಕು. ದೋಣಿಯಲ್ಲಿ ಕೆಲಸಮಾಡುವ ಮಂದಿಯ ಹೆಸರು ವಿಳಾಸ, ಕೆಲಸದ ಶರತ್ತುಗಳು ಇವೆಲ್ಲ ಇರುವ ದಾಖಲೆ ಇರಿಸಬೇಕು. ಇದೆಲ್ಲ ಉದ್ಯಮವೊಂದರ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಸ್ವಾಗತಾರ್ಹವಾದ ನಿಯಮಗಳೇ ಆಗಿವೆ. ಕೂಲಿಕಾರರಿಗೆ ಕೂಡ ಇದರಿಂದ ಕೆಲಸದ ಭದ್ರತೆ ದೊರೆಯುತ್ತದೆ. ಅವರಿಗೆ ಕೆಲಸದ ಅವಧಿಯ ಮಿತಿ, ರಜೆಗಳು, ಬೋನಸ್, ಅಪಘಾತ ಪರಿಹಾರ ಇತ್ಯಾದಿ ಸೌಲಭ್ಯಗಳು ದೊರೆಯಬಹುದು.

ಈ ಶಾಸನದಡಿಯಲ್ಲಿ ನಿಯಮಗಳನ್ನು ರೂಪಿಸುವ ವೇಳೆ ಮೀನುಗಾರ ಮುಖಂಡರೊಡನೆ ಚರ್ಚಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ. ಅದನ್ನವರು ನಡೆಸುವರೆಂದೂ, ಇಡಿಯ ಮೀನುಗಾರ ಸಮುದಾಯದ ಅಭಿಪ್ರಾಯಕ್ಕೆ ಈ ಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕೀತೆಂದೂ ನಾವು ಹಾರೈಸುತೇವೆ.

ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸುವ, ಕಡಲಿನ ಜತೆ ಹೋರಾಟವಾದ ಈ ಉದ್ಯಮಕ್ಕೆ ಸರಕಾರ ಉದಾರವಾದ ಪ್ರೋತ್ಸಾಹ ಕೊಡಬೇಕೆಂದು ನಾವು ಬಹುದಿನಗಳಿಂದ ಪ್ರತಿಪಾದಿಸುತ್ತ ಬಂದಿದ್ದೇವೆ. ಆದರೆ ಸಮಾಜದಿಂದ ಸಂಗ್ರಹಿಸಿ ಸರಕಾರ ನೀಡುವ ಪ್ರೋತ್ಸಾಹ ರೂಪದ ಹಣದ ಪಾಲು ಉದ್ಯಮದಲ್ಲಿನ ಎಲ್ಲರಿಗೂ ದೊರೆಯಬೇಕಾದ್ದು ನ್ಯಾಯ; ಬಂಡವಾಳ ಹೂಡಲು ಸಾಮರ್ಥ್ಯವಿರುವ ಕೆಲವೇ ಮಂದಿ ಮಾಲೀಕರಿಗೆ ಮಾತ್ರವೇ ಸಿಕ್ಕಿದರೆ ಸಾಲದು.

ಮುಂಗಾರು
ಗುರುವಾರ, ಮಾರ್ಚ್ 20, 1986

ಶಿಸ್ತು-ಸುವ್ಯವಸ್ಥೆಯ ಶಾಸನ

ಕಡಲ ಮೀನುಗಾರಿಕೆಯನ್ನು ನಿಯಂತ್ರಣಕ್ಕೊಳಪಡಿಸಿ ಸುವ್ಯವಸ್ಥೆಗೆ ತರುವ ವಿಧೇಯಕವೊಂದು ಕರ್ನಾಟಕ ವಿಧಾನ ಸಭೆಯಲ್ಲಿ ಮಂಜೂರಾಗಿದೆ. ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಮುಖ್ಯವಾಗಿ ಕರಾವಳಿಯ ಎರಡು ಜಿಲ್ಲೆಗಳ ಶಾಸಕರು ಈ ವಿಧೇಯಕವನ್ನು ವಿರೋಧಿಸಿದ್ದಾರೆ. ಮೀನುಗಾರ ಮುಖಂಡರೊಡನೆ ಸಮಾಲೋಚನೆ ಮಾಡದೆಯೇ ಇದನ್ನು ತರಲಾಗಿದೆಯೆಂದು ಅವರು ಟೀಕಿಸಿದ್ದಾರೆ. ವಿಧೇಯಕವು ಬಡ ಮೀನುಗಾರರಿಗೆ ಹಾನಿ ಮಾಡುವುದೆಂಬ ಆರೋಪವೂ ಬಂದಿದೆ.

ವಿರೋಧ ಪಕ್ಷ ಸದಸ್ಯರ ಮೀನುಗಾರಿಕೆ ಬಗೆಗಿನ ಈ ಕಾಳಜಿ ಸ್ವಾಗತಾರ್ಹವಾದದ್ದು. ಆದರೆ ಪ್ರಕೃತದ ಪ್ರಸಂಗದಲ್ಲಿ ವಿಧೇಯಕಕ್ಕೆ ಅವರ ವಿರೋಧ ಕೇವಲ ವಿರೋಧಕ್ಕಾಗಿಯೇ ವಿರೋಧ ಎಂಬಂತೆ ಕಾಣಿಸುತ್ತಿದೆ. ವಿಧೇಯಕದ ಮುಖ್ಯಾಂಶಗಳನ್ನು ನಮ್ಮ ವಿರೋಧಿ ಶಾಸಕರು ಗಮನವಿಟ್ಟು ಅಧ್ಯಯನ ಮಾಡಿರುವಂತೆ ಕಾಣಿಸುತ್ತಿಲ್ಲ.

ವಿಧೇಯಕದಲ್ಲಿ ಎರಡು ಮುಖ್ಯ ವಿಚಾರಗಳು ಅಡಕವಾಗಿವೆ. ಒಂದನೆಯದ್ದು ವಿವಿಧ ಗಾತ್ರ ಹಾಗೂ ಮಟ್ಟದ ಮೀನುಗಾರಿಕೆ ಕಾರ್ಯಾಚರಣೆಗೆ ಸಮುದ್ರದ ಸನ್ನಿವೇಶವನ್ನು ವಿಭಾಗ ಮಾಡಿಕೊಡುವಂತಹದು ಮಹತ್ವದ ವಿಚಾರ. ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ಸಮುದ್ರ ತೀರದ ಆರು ಕಿಲೋಮೀಟರು ಪ್ರದೇಶವನ್ನು ಮೀಸಲಿಟ್ಟು ಪರ್ಸೀನ್ ಹಾಗೂ ಇನ್ನಿತರ ಬೋಟುಗಳವರ ಆಕ್ರಮಣ ಇಲ್ಲದಂತೆ ಸುರಕ್ಷಿತ ತಾಣವನ್ನು ಒದಗಿಸುವ ಇರಾದೆ ವಿಧೇಯಕದ್ದು. ಎರಡನೆಯದ್ದು ಎಲ್ಲಾ ವಿಧದ ಮೀನುಗಾರಿಕೆ ದೋಣಿಗಳವರು ಸರಕಾರಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕಲ್ಲದೆ ಮೀನುಗಾರಿಕೆ ಕಾರ್ಯಾಚರಣೆಗಿಳಿಯಲು ಸೂಕ್ತ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂದು ವಿಧಿಸುವಂತಹದ್ದು.

ಈ ಎರಡೂ ನಿಯಮಗಳಿಗೆ ಇಂದು ಕರಾವಳಿಯಲ್ಲಿ ಸಾಕಷ್ಟು ಒಳ್ಳೆಯ ದಂಧೆ ನಡೆಸಿರುವ ಪರ್ಸೀನ್ ದೋಣಿ ಮಾಲಕರ ವಿರೋಧ ಇರುವಂತೆ ಕಂಡು ಬರುತ್ತಿದೆ. ದೋಣಿ ಮಾಲೀಕರ ಈ ವಿರೋಧವೇ ರಾಜ್ಯ ವಿಧಾನಸಭೆಯಲ್ಲಿಯೂ ಮೂಡಿ ಬಂದಿದೆ ಎಂದು ನಂಬದೆ ವಿಧಿಯಿಲ್ಲ.

ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ತೀರ ಪ್ರದೇಶದಲ್ಲಿ ನಿಶ್ಚಿತ ಋತುವಿನಲ್ಲಿ ಬಂಗುಡೆ ಹಾಗೂ ಬೂತಾಯಿಗಳಂಥ ಜನಪ್ರಿಯ ತಳಿಯ ಮೀನು ತೆಪ್ಪಗಳಲ್ಲಿ ದೊರೆಯುತ್ತವೆ. ಕೆಲವೊಮ್ಮೆ ಮಿಟ್ಟಿಯೂ ದೊರೆಯುವುದುಂಟು. ಈ ಮೀನಿನ ತೆಪ್ಪಗಳು ಅವಲಂಬನೀಯವಾದವುಗಳು. ಆಯಾ ಋತುವಿನಲ್ಲಿ ಕಡಲಿಗೆ ಹೊರಟ ರಂಪಣಿಯವರು ಸೋಲು ಕಾಣುವುದು ಕಡಿಮೆ.

ಇತ್ತೀಚಿನ ವರ್ಷಗಳಲ್ಲಿ ಪರ್ಸೀನ್ ಮೀನುಗಾರಿಕೆ ಲಾಭದಾಯಕ ಉದ್ಯಮವೆನಿಸಿದ್ದು, ಲಕ್ಷಾಂತರ ರೂಪಾಯಿ ವಿನಿಯೋಗಿಸಲು ತಾಕತ್ತುಳ್ಳ, ಮೀನುಗಾರ ಸಮುದಾಯದಿಂದ ಹೊರಗಿನವರು ಕೂಡ ಈ ದಂಧೆ ಪ್ರವೇಶಿಸಿದ್ದಾರೆ. ಪರಿಣಾಮವಾಗಿ ಮೀನುಗಾರಿಕೆಯ ನೀತಿ ನಿಯಮಗಳನ್ನೂ ರೀತಿ ರಿವಾಜುಗಳನ್ನೂ ಗಾಳಿಗೆ ತೂರಲಾಗಿದೆ. ತೀರದಲ್ಲಿನ ಅವಲಂಬನೀಯ ಮೀನಿನ ತೆಪ್ಪ ಹಾಕಿಕೊಳ್ಳಲು ಪರ್ಸೀನ್‌ನವರು ರಂಪಣಿಯವರ ಸಾಂಪ್ರದಾಯಿಕ ತಾಣಕ್ಕೂ ಲಗ್ಗೆಯಿಟ್ಟಿದ್ದಾರೆ. ಇದರಿಂದ ರಂಪಣಿಯವರು ಸೊರಗಿ ಹೋಗಿದ್ದಾರೆ. ಪರಿಣಾಮವಾಗಿ ಸಾವಿರಾರು ಮೀನುಗಾರ ತರುಣರ ಪರಂಪರಾಗತ ರಂಪಣಿ ಉದ್ಯೋಗದ ಬೇರು ಕಿತ್ತು, ನಗರಗಳಿಗೆ ವಲಸೆಹೋಗಿ ಪರ್ಸೀನ್ ಮೀನುಗಾರಿಕೆಯಲ್ಲಿ ಮಾಲೀಕರುಗಳ ಆಶ್ರಯದಲ್ಲಿ ಕೂಲಿಕಾರರಾಗಿ ದುಡಿಯತೊಡಗಿದ್ದಾರೆ.

ಬಂಡವಾಳ ಮೂಲವಾದ ಪರ್ಸೀನ್ ಉದ್ಯಮ ಬಡ ಮೀನುಗಾರರ ಕೈಗೆ ಎಟುಕುವಂತಹದ್ದಲ್ಲ. [illegible]

ಸಾಧ್ಯವಾದ ಕ್ಷೇತ್ರ ಆದಾಗಿದೆ. ಪರಿಣಾಮವಾಗಿ ಕರಾವಳಿಯುದ್ದಕ್ಕೂ ಮೀನುಗಾರ ಸಮುದಾಯದ ಸಾಮಾನ್ಯ ತರುಣರು ಬೇರೆಯವರ ಆಶ್ರಯದಡಿಯಲ್ಲಿ ಕೂಲಿ ಕಾರ್ಮಿಕರಾಗಿ ಪರಿವರ್ತಿತವಾಗುವಂತಹ ದೊಡ್ಡ ಸಾಮಾಜಿಕ– ಆರ್ಥಿಕ ಅಧಃಪತನವೊಂದು ಈ ಸಮುದಾಯವನ್ನು ಎದುರಿಸುತ್ತಿದೆ. ತಲೆತಲಾಂತರಗಳಿಂದ ಸ್ವಂತ ಉದ್ಯೋಗದಿಂದ ಸ್ವಾಭಿಮಾನಿಗಳಾಗಿ ಬದುಕಿದ ಈ ಸಮುದಾಯ ಬಂಡವಾಳ ವ್ಯವಸ್ಥೆಯ ಮುಷ್ಟಿಯಲ್ಲಿ ನಲುಗಿ ಹೋಗುವ ದೊಡ್ಡ ಅಪಾಯವಿದೆ.

ಯಾಂತ್ರೀಕೃತ ಮೀನುಗಾರಿಕೆ ಕ್ಷೇತ್ರದಲ್ಲಿ ಕೂಲಿಕಾರ ಬೆಸ್ತರ ಶೋಷಣೆಯು ಮಾಲೀಕರಿಂದ ನಡೆದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದಲೇ ಸದ್ಯ ಮಂಜೂರಾಗಿರುವ ಮಸೂದೆಗೆ ಮಹತ್ವ ಬಂದಿರುವುದು. ಆದ್ದರಿಂದಲೇ ಅದಕ್ಕೆ ಮಾಲೀಕರ ಕೂಟದ ವಿರೋಧವೂ ಬಂದಿರುವುದು.

ಕರಾವಳಿಯಲ್ಲಿ ರಂಪಣಿ ಮೀನುಗಾರಿಕೆಗೆ ಆರು ಕಿಲೋಮೀಟರುಗಳ ರಕ್ಷಿತ ವಲಯವನ್ನು ಒದಗಿಸಿಕೊಟ್ಟಿರುವುದು ಈಗಾಗಲೇ ಶಕ್ತಿಹ್ರಾಸದಿಂದ ಹೈರಾಣಗೊಂಡು ಅಳಿಯುತ್ತ ಬಂದಿರುವ ರಂಪಣಿ ಮೀನುಗಾರಿಕೆಗೆ ಜೀವದಾನ ಮಾಡೀತು. ಕರಾವಳಿಯುದ್ದಕ್ಕೂ ಇರುವ ನಮ್ಮ ಲಕ್ಷಾಂತರ ಮೀನುಗಾರ ಕುಟುಂಬಗಳು ಮತ್ತೆ ಸ್ವಂತ ಉದ್ಯೋಗ ದೊರಕಿಸಿಕೊಂಡು ಆತ್ಮಾಭಿಮಾನದಿಂದ ತಲೆಯೆತ್ತುವುದಕ್ಕೆ ಪ್ರೋತ್ಸಾಹದ ನೀರೆರೆದೀತು. ಇದರ ಜತೆಗೆ ಸರಕಾರ ರಂಪಣಿ ಮೀನುಗಾರಿಕೆಗೆ ಸಬ್ಸಿಡಿ ಸಹಿತ ಸಾಲ ಒದಗಿಸುವ ಯೋಜನೆಯನ್ನೂ ವ್ಯಾಪಕವಾಗಿ ಶಕ್ತಿಯುತವಾಗಿ ಜಾರಿಗೆ ತರಬೇಕು.

ಮೀನುಗಾರಿಕೆ ದೋಣಿಗಳ ನೋಂದಾವಣೆ ಹಾಗೂ ಕಾರ್ಯಾಚರಣೆಗೆ ಪರವಾನಿಗೆ ಪಡೆಯಬೇಕೆಂಬ ನಿಯಮಾವಳಿಯಲ್ಲಿ ಅಸಂಗತವಾದುದೇನೂ ಕಾಣಿಸುತ್ತಿಲ್ಲ. ಲೈಸೆನ್ಸಿಂಗ್ ನಿಯಮವು ಮಾಲೀಕರನ್ನು ದಮನಿಸುವ ವ್ಯವಸ್ಥೆಯಾಗದಂತೆ ಏರ್ಪಾಡುಗಳನ್ನು ಮಾಡಬೇಕೆಂದು ಸಂಬಂಧಿತರು ಕೇಳಬಹುದೇ ಹೊರತು ಈ ವ್ಯವಸ್ಥೆಯನ್ನೇ ವಿರೋಧಿಸುವುದು ತಕ್ಕುದಲ್ಲ. ಪರವಾನಿಗೆ ಪಡೆಯಲು ದೋಣಿಗಳವರು ಸೂಕ್ತ ವ್ಯವಸ್ಥೆಗಳನ್ನು ಹೊಂದಿರಬೇಕಾಗುತ್ತದೆ. ದೋಣಿಯಲ್ಲಿ ಜೀವರಕ್ಷಕ ಉಪಕರಣಗಳಿರಬೇಕಾಗುತ್ತದೆ. ದೋಣಿ ಚಲಾಯಿಸಲು ಪರಿಣತ ಸಿಬ್ಬಂದಿಗಳಿರಬೇಕು. ದೋಣಿಯಲ್ಲಿ ಕೆಲಸಮಾಡುವ ಮಂದಿಯ ಹೆಸರು ವಿಳಾಸ, ಕೆಲಸದ ಶರತ್ತುಗಳು ಇವೆಲ್ಲ ಇರುವ ದಾಖಲೆ ಇರಿಸಬೇಕು. ಇದೆಲ್ಲ ಉದ್ಯಮವೊಂದರ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಸ್ವಾಗತಾರ್ಹವಾದ ನಿಯಮಗಳೇ ಆಗಿವೆ. ಕೂಲಿಕಾರರಿಗೆ ಕೂಡ ಇವರಿಂದ ಕೆಲಸದ ಭದ್ರತೆ ದೊರೆಯುತ್ತದೆ. ಅವರಿಗೆ ಕೆಲಸದ ಅವಧಿಯ ಮಿತಿ, ರಜೆಗಳು, ಬೋನಸ್, ಅಪಘಾತ ಪರಿಹಾರ ಇತ್ಯಾದಿ ಸೌಲಭ್ಯಗಳು ದೊರೆಯಬಹುದು.

ಈ ಶಾಸನದಡಿಯಲ್ಲಿ ನಿಯಮಗಳನ್ನು ರೂಪಿಸುವ ವೇಳೆ ಮೀನುಗಾರ ಮುಖಂಡರೊಡನೆ ಚರ್ಚಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ. ಅವನ್ನವರು ನಡೆಸುವರೆಂದೂ, ಇಡಿಯ ಮೀನುಗಾರ ಸಮುದಾಯದ ಅಭಿಪ್ರಾಯಕ್ಕೆ ಈ ಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕೀತೆಂದೂ ನಾವು ಹಾರೈಸುತ್ತೇವೆ.

ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸುವ, ಕಡಲಿನ ಜತೆ ಹೋರಾಟವಾದ ಈ ಉದ್ಯಮಕ್ಕೆ ಸರಕಾರ ಉದಾರವಾದ ಪ್ರೋತ್ಸಾಹ ಕೊಡಬೇಕೆಂದು ನಾವು ಬಹುದಿನಗಳಿಂದ ಪ್ರತಿಪಾದಿಸುತ್ತ ಬಂದಿದ್ದೇವೆ. ಆದರೆ ಸಮಾಜದಿಂದ ಸಂಗ್ರಹಿಸಿ ಸರಕಾರ ನೀಡುವ ಪ್ರೋತ್ಸಾಹ ರೂಪದ ಹಣದ ಪಾಲು ಉದ್ಯಮದಲ್ಲಿನ ಎಲ್ಲರಿಗೂ ದೊರೆಯಬೇಕಾದ್ದು ನ್ಯಾಯ; ಬಂಡವಾಳ ಹೂಡಲು ಸಾಮರ್ಥ್ಯವಿರುವ ಕೆಲವೇ ಮಂದಿ ಮಾಲೀ- [illegible]

ಮುಂಗಾರು

ಗುರುವಾರ, ಮಾರ್ಚ್ 20, 1986

ಶಿಸ್ತು-ಸುವ್ಯವಸ್ಥೆಯ ಶಾಸನ

ಕಡಲ ಮೀನುಗಾರಿಕೆಯನ್ನು ನಿಯಂತ್ರಣಕ್ಕೊಳಪಡಿಸಿ ಸುವ್ಯವಸ್ಥೆಗೆ ತರುವ ವಿಧೇಯಕವೊಂದು ಕರ್ನಾಟಕ ವಿಧಾನ ಸಭೆಯಲ್ಲಿ ಮಂಜೂರಾಗಿದೆ. ವಿರೋಧ ಪಕ್ಷವಾದ ಕಾಂಗ್ರೆಸ್ ಪಕ್ಷದ ಮುಖ್ಯವಾಗಿ ಕರಾವಳಿಯ ಎರಡು ಜಿಲ್ಲೆಗಳ ಶಾಸಕರು ಈ ವಿಧೇಯಕವನ್ನು ವಿರೋಧಿಸಿದ್ದಾರೆ. ಮೀನುಗಾರ ಮುಖಂಡರೊಡನೆ ಸಮಾಲೋಚನೆ ಮಾಡದೆಯೇ ಇದನ್ನು ತರಲಾಗಿದೆಯೆಂದು ಅವರು ಟೀಕಿಸಿದ್ದಾರೆ. ವಿಧೇಯಕವು ಬಡ ಮೀನುಗಾರರಿಗೆ ಹಾನಿ ಮಾಡುವುದೆಂಬ ಆರೋಪವೂ ಬಂದಿದೆ.

ವಿರೋಧ ಪಕ್ಷ ಸದಸ್ಯರ ಮೀನುಗಾರಿಕೆ ಬಗೆಗಿನ ಈ ಕಾಳಜಿ ಸ್ವಾಗತಾರ್ಹವಾದದ್ದು. ಆದರೆ ಪ್ರಕೃತದ ಪ್ರಸಂಗದಲ್ಲಿ ವಿಧೇಯಕಕ್ಕೆ ಅವರ ವಿರೋಧ ಕೇವಲ ವಿರೋಧಕ್ಕಾಗಿಯೇ ವಿರೋಧ ಎಂಬಂತೆ ಕಾಣಿಸುತ್ತಿದೆ. ವಿಧೇಯಕದ ಮುಖ್ಯಾಂಶಗಳನ್ನು ನಮ್ಮ ವಿರೋಧಿ ಶಾಸಕರು ಗಮನವಿಟ್ಟು ಅಧ್ಯಯನ ಮಾಡಿರುವಂತೆ ಕಾಣಿಸುತ್ತಿಲ್ಲ.

ವಿಧೇಯಕದಲ್ಲಿ ಎರಡು ಮುಖ್ಯ ವಿಚಾರಗಳು ಅಡಕವಾಗಿವೆ. ಒಂದನೆಯದ್ದು ವಿವಿಧ ಗಾತ್ರ ಹಾಗೂ ಮಟ್ಟದ ಮೀನುಗಾರಿಕೆ ಕಾರ್ಯಾಚರಣೆಗೆ ಸಮುದ್ರದ ಸನ್ನಿವೇಶವನ್ನು ವಿಭಾಗ ಮಾಡಿಕೊಡುವಂತಹ ಮಹತ್ವದ ವಿಚಾರ. ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ಸಮುದ್ರ ತೀರದ ಆರು ಕಿಲೋಮೀಟರು ಪ್ರದೇಶವನ್ನು ಮೀಸಲಿಟ್ಟು ಪರ್ಸೀನ್ ಹಾಗೂ ಇನ್ನಿತರ ಬೋಟುಗಳವರ ಆಕ್ರಮಣ ಇಲ್ಲದಂತೆ ಸುರಕ್ಷಿತ ತಾಣವನ್ನು ಒದಗಿಸುವ ಇರಾದೆ ವಿಧೇಯಕದ್ದು. ಎರಡನೆಯದ್ದು ಎಲ್ಲಾ ವಿಧದ ಮೀನುಗಾರಿಕೆ ದೋಣಿಗಳವರು ಸರಕಾರಿ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳಬೇಕಲ್ಲದೆ ಮೀನುಗಾರಿಕೆ ಕಾರ್ಯಾಚರಣೆಗಿಳಿಯಲು ಸೂಕ್ತ ಪರವಾನಿಗೆಯನ್ನು ಪಡೆದುಕೊಳ್ಳಬೇಕು ಎಂದು ವಿಧಿಸುವಂತಹದು.

ಈ ಎರಡೂ ನಿಯಮಗಳಿಗೆ ಇಂದು ಕರಾವಳಿಯಲ್ಲಿ ಸಾಕಷ್ಟು ಒಳ್ಳೆಯ ದಂಧೆ ನಡೆಸಿರುವ ಪರ್ಸೀನ್ ದೋಣಿ ಮಾಲಕರ ವಿರೋಧ ಇರುವಂತೆ ಕಂಡು ಬರುತ್ತಿದೆ. ದೋಣಿ ಮಾಲೀಕರ ಈ ವಿರೋಧವೇ ರಾಜ್ಯ ವಿಧಾನಸಭೆಯಲ್ಲಿಯೂ ಮೂಡಿ ಬಂದಿದೆ ಎಂದು ನಂಬದೆ ವಿಧಿಯಿಲ್ಲ.

ಸಾಂಪ್ರದಾಯಿಕವಾದ ರಂಪಣಿ ಮೀನುಗಾರಿಕೆಗೆ ತೀರ ಪ್ರದೇಶದಲ್ಲಿ ನಿಶ್ಚಿತ ಋತುವಿನಲ್ಲಿ ಬಂಗುಡೆ ಹಾಗೂ ಬೂತಾಯಿಗಳಂಥ ಜನಪ್ರಿಯ ತಳಿಯ ಮೀನು ತೆಪ್ಪಗಳಲ್ಲಿ ದೊರೆಯುತ್ತವೆ. ಕೆಲವೊಮ್ಮೆ ಮಿಟ್ಟಿಯೂ ದೊರೆಯುವುದುಂಟು. ಈ ಮೀನಿನ ತೆಪ್ಪಗಳು ಅವಲಂಬನೀಯವಾದವುಗಳು. ಆಯಾ ಋತುವಿನಲ್ಲಿ ಕಡಲಿಗೆ ಹೊರಟ ರಂಪಣಿಯವರು ಸೋಲು ಕಾಣುವುದು ಕಡಿಮೆ.

ಇತ್ತೀಚೆಗಿನ ವರ್ಷಗಳಲ್ಲಿ ಪರ್ಸೀನ್ ಮೀನುಗಾರಿಕೆ ಲಾಭದಾಯಕ ಉದ್ಯಮವೆನಿಸಿದ್ದು ಲಕ್ಷಾಂತರ ರೂಪಾಯಿ ವಿನಿಯೋಗಿಸಲು ತಾಕತ್ತುಳ್ಳ, ಮೀನುಗಾರ ಸಮುದಾಯದಿಂದ ಹೊರಗಿನವರು ಕೂಡ ಈ ದಂಧೆ ಪ್ರವೇಶಿಸಿದ್ದಾರೆ. ಪರಿಣಾಮವಾಗಿ ಮೀನುಗಾರಿಕೆಯ ನೀತಿ ನಿಯಮಗಳನ್ನೂ ರೀತಿ ರಿವಾಜುಗಳನ್ನೂ ಗಾಳಿಗೆ ತೂರಲಾಗಿದೆ. ತೀರದಲ್ಲಿನ ಅವಲಂಬನೀಯ ಮೀನಿನ ತೆಪ್ಪ ಬಾಚಿಕೊಳ್ಳಲು ಪರ್ಸೀನ್‌ನವರು ರಂಪಣಿಯವರ ಸಾಂಪ್ರದಾಯಿಕ ತಾಣಕ್ಕೂ ಲಗ್ಗೆಯಿಟ್ಟಿದ್ದಾರೆ. ಇದರಿಂದ ರಂಪಣಿಯವರು ಸೊರಗಿ ಹೋಗಿದ್ದಾರೆ. ಪರಿಣಾಮವಾಗಿ ಸಾವಿರಾರು ಮೀನುಗಾರ ತರುಣರ ಪರಂಪರಾಗತ ರಂಪಣಿ ಉದ್ಯೋಗದ ಬೇರು ಕಿತ್ತು, ನಗರಗಳಿಗೆ ವಲಸೆಹೋಗಿ ಪರ್ಸೀನ್ ಮೀನುಗಾರಿಕೆಯಲ್ಲಿ ಮಾಲೀಕರುಗಳ ಆಶ್ರಯದಲ್ಲಿ ಕೂಲಿಕಾರರಾಗಿ ದುಡಿಯತೊಡಗಿದ್ದಾರೆ.

ಬಂಡವಾಳ ಮೂಲವಾದ ಪರ್ಸೀನ್ ಉದ್ಯಮವು ಬಡ ಮೀನುಗಾರರ ಕೈಗೆ ಎಟುಕದಂತಹದ್ದು. ದುಡ್ಡಿನ ಬಲವುಳ್ಳವರು ಮಾತ್ರವೇ ಕಾಲಿಕ್ಕಲು ಸಾಧ್ಯವಾದ ಕ್ಷೇತ್ರ ಅದಾಗಿದೆ. ಪರಿಣಾಮವಾಗಿ ಕರಾವಳಿಯುದ್ದಕ್ಕೂ ಮೀನುಗಾರ ಸಮುದಾಯದ ಸಾಮಾನ್ಯ ತರುಣರು ಬೇರೆಯವರ ಆಶ್ರಯದಡಿಯಲ್ಲಿ ಕೂಲಿ ಕಾರ್ಮಿಕರಾಗಿ ಪರಿವರ್ತಿತವಾಗುವಂತಹ ದೊಡ್ಡ ಸಾಮಾಜಿಕ– ಆರ್ಥಿಕ ಅಧಃಪತನವೊಂದು ಈ ಸಮುದಾಯವನ್ನು ಎದುರಿಸುತ್ತಿದೆ. ತಲೆತಲಾಂತರಗಳಿಂದ ಸ್ವಂತ ಉದ್ಯೋಗದಿಂದ ಸ್ವಾಭಿಮಾನಿಗಳಾಗಿ ಬದುಕಿದ ಈ ಸಮುದಾಯ ಬಂಡವಾಳ ವ್ಯವಸ್ಥೆಯ ಮುಷ್ಟಿಯಲ್ಲಿ ನಲುಗಿ ಹೋಗುವ ದೊಡ್ಡ ಅಪಾಯವಿದೆ.

ಯಾಂತ್ರೀಕೃತ ಮೀನುಗಾರಿಕೆ ಕ್ಷೇತ್ರದಲ್ಲಿ ಕೂಲಿಕಾರ ಬೆಸ್ತರ ಶೋಷಣೆಯು ಮಾಲೀಕರಿಂದ ನಡೆದಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದ್ದರಿಂದಲೇ ಸದ್ಯ ಮಂಜೂರಾಗಿರುವ ಮಸೂದೆಗೆ ಮಹತ್ವ ಬಂದಿರುವುದು. ಆದ್ದರಿಂದಲೇ ಅದಕ್ಕೆ ಮಾಲೀಕರ ಕೂಟದ ವಿರೋಧವೂ ಬಂದಿರುವುದು.

ಕರಾವಳಿಯಲ್ಲಿ ರಂಪಣಿ ಮೀನುಗಾರಿಕೆಗೆ ಆರು ಕಿಲೋಮೀಟರುಗಳ ರಕ್ಷಿತ ವಲಯವನ್ನು ಒದಗಿಸಿ ಕೊಟ್ಟಿರುವುದು ಈಗಾಗಲೇ ಶಕ್ತಿಹ್ರಾಸದಿಂದ ಪ್ರಾಣಗೊಂಡು ಅಳಿಯುತ್ತ ಬಂದಿರುವ ರಂಪಣಿ ಮೀನುಗಾರಿಕೆಗೆ ಜೀವದಾನ ಮಾಡೀತು. ಕರಾವಳಿಯುದ್ದಕ್ಕೂ ಇರುವ ನಮ್ಮ ಲಕ್ಷಾಂತರ ಮೀನುಗಾರ ಕುಟುಂಬಗಳು ಮತ್ತೆ ಸ್ವಂತ ಉದ್ಯೋಗ ದೊರಕಿಸಿಕೊಂಡು ಆತ್ಮಾಭಿಮಾನದಿಂದ ತಲೆಯೆತ್ತುವುದಕ್ಕೆ ಪ್ರೋತ್ಸಾಹದ ನೀರೆರೆದೀತು. ಇದರ ಜತೆಗೆ ಸರಕಾರ ರಂಪಣಿ ಮೀನುಗಾರಿಕೆಗೆ ಸಬ್ಸಿಡಿ ಸಹಿತ ಸಾಲ ಒದಗಿಸುವ ಯೋಜನೆಯನ್ನೂ ವ್ಯಾಪಕವಾಗಿ ಶಕ್ತಿಯುತವಾಗಿ ಜಾರಿಗೆ ತರಬೇಕು.

ಮೀನುಗಾರಿಕೆ ದೋಣಿಗಳ ನೋಂದಾವಣೆ ಹಾಗೂ ಕಾರ್ಯಾಚರಣೆಗೆ ಪರವಾನಿಗೆ ಪಡೆಯಬೇಕೆಂಬ ನಿಯಮಾವಳಿಯಲ್ಲಿ ಅಸಂಗತವಾದುದೇನೂ ಕಾಣಿಸುತ್ತಿಲ್ಲ. ಲೈಸನ್ಸಿಂಗ್ ನಿಯಮವು ಮಾಲೀಕರನ್ನು ದಮನಿಸುವ ವ್ಯವಸ್ಥೆಯಾಗದಂತೆ ಏರ್ಪಾಡುಗಳನ್ನು ಮಾಡಬೇಕೆಂದು ಸಂಬಂಧಿತರು ಕೇಳಬಹುದೇ ಹೊರತು ಈ ವ್ಯವಸ್ಥೆಯನ್ನೇ ವಿರೋಧಿಸುವುದು ತಕ್ಕುದಲ್ಲ. ಪರವಾನಿಗೆ ಪಡೆಯಲು ದೋಣಿಗಳವರು ಸೂಕ್ತ ವ್ಯವಸ್ಥೆಗಳನ್ನು ಹೊಂದಿರಬೇಕಾಗುತ್ತದೆ. ದೋಣಿಯಲ್ಲಿ ಜೀವರಕ್ಷಕ ಉಪಕರಣಗಳಿರಬೇಕಾಗುತ್ತದೆ. ದೋಣಿ ಚಲಾಯಿಸಲು ಪರಿಣತ ಸಿಬ್ಬಂದಿಗಳಿರಬೇಕು. ದೋಣಿಯಲ್ಲಿ ಕೆಲಸಮಾಡುವ ಮಂದಿಯ ಹೆಸರು ವಿಳಾಸ, ಕೆಲಸದ ಶರತ್ತುಗಳು ಇವೆಲ್ಲ ಇರುವ ದಾಖಲೆ ಇರಿಸಬೇಕು. ಇದೆಲ್ಲ ಉದ್ಯಮವೊಂದರ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಸ್ವಾಗತಾರ್ಹವಾದ ನಿಯಮಗಳೇ ಆಗಿವೆ. ಕೂಲಿಕಾರರಿಗೆ ಕೂಡ ಇದರಿಂದ ಕೆಲಸದ ಭದ್ರತೆ ದೊರೆಯುತ್ತದೆ. ಅವರಿಗೆ ಕೆಲಸದ ಅವಧಿಯ ಮಿತಿ, ರಜೆಗಳು, ಬೋನಸ್, ಅಪಘಾತ ಪರಿಹಾರ ಇತ್ಯಾದಿ ಸೌಲಭ್ಯಗಳು ದೊರೆಯಬಹುದು.

ಈ ಶಾಸನದಡಿಯಲ್ಲಿ ನಿಯಮಗಳನ್ನು ರೂಪಿಸುವ ವೇಳೆ ಮೀನುಗಾರ ಮುಖಂಡರೊಡನೆ ಚರ್ಚಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ. ಆದನ್ನವರು ನಡೆಸುವರೆಂದೂ, ಇಡಿಯ ಮೀನುಗಾರ ಸಮುದಾಯದ ಅಭಿಪ್ರಾಯಕ್ಕೆ ಈ ಸಭೆಯಲ್ಲಿ ಪ್ರಾತಿನಿಧ್ಯ ಸಿಕ್ಕೀತೆಂದೂ ನಾವು ಹಾರೈಸುತೇವೆ.

ಲಕ್ಷಾಂತರ ಮಂದಿಗೆ ಉದ್ಯೋಗ ಒದಗಿಸುವ, ಕಡಲಿನ ಜತೆ ಹೋರಾಟವಾದ ಈ ಉದ್ಯಮಕ್ಕೆ ಸರಕಾರ ಉದಾರವಾದ ಪ್ರೋತ್ಸಾಹ ಕೊಡಬೇಕೆಂದು ನಾವು ಬಹುದಿನಗಳಿಂದ ಪ್ರತಿಪಾದಿಸುತ್ತ ಬಂದಿದ್ದೇವೆ. ಆದರೆ ಸಮಾಜದಿಂದ ಸಂಗ್ರಹಿಸಿ ಸರಕಾರ ನೀಡುವ ಪ್ರೋತ್ಸಾಹ ರೂಪದ ಹಣದ ಪಾಲು ಉದ್ಯಮದಲ್ಲಿನ ಎಲ್ಲರಿಗೂ ದೊರೆಯಬೇಕಾದ್ದು ನ್ಯಾಯ; ಬಂಡವಾಳ ಹೂಡಲು ಸಾಮರ್ಥ್ಯವಿರುವ ಕೆಲವೇ ಮಂದಿ ಮಾಲೀಕರಿಗೆ ಮಾತ್ರವೇ ಸಿಕ್ಕಿದರೆ ಸಾಲದು.

ಮುಂಗಾರು

ಶುಕ್ರವಾರ, ಮಾರ್ಚ್ 21, 1986

ಜನರ ಪ್ರತಿನಿಧಿಗಳು ಏಕಿಲ್ಲ ?

ಭೂಸುಧಾರಣಾ ಶಾಸನಕ್ಕೆ ಸಂಬಂಧಪಟ್ಟಂತಹ ಪ್ರಕರಣಗಳ ತೀರ್ಮಾನಕ್ಕೆ ಜಿಲ್ಲಾ ಮಟ್ಟದಲ್ಲಿ ಮೇಲ್ಮನವಿ ಟ್ರಿಬ್ಯೂನಲ್‌ಗಳನ್ನು ಸ್ಥಾಪಿಸುವುದಕ್ಕೆ ಅವಕಾಶ ಮಾಡಿಕೊಡುವ ತಿದ್ದುಪಡಿಯನ್ನು ತರಲಾಗಿದೆ. ಈಗಾಗಲೇ ಸುಗ್ರೀವಾಜ್ಞೆಯ ರೂಪದಲ್ಲಿ ಬಂದ ಈ ತಿದ್ದುಪಡಿ ಬುಧವಾರ ವಿಧಾನ ಸಭೆಯಲ್ಲಿ ವಿಧೇಯಕವಾಗಿ ಅಂಗೀಕೃತವಾಗಿದೆ. ಇದರ ಅಂಗೀಕಾರವನ್ನು ವಿರೋಧ ಪಕ್ಷದವರು ಬಲವಾಗಿ ವಿರೋಧಿಸಿದ್ದಾರೆ. ಈ ತಿದ್ದುಪಡಿಯಿಂದ ಅನಾಹುತವಾದೀತೆಂದು ಅವರು ವರ್ಣಿಸಿದ್ದಾರೆ. ಬೀದಿ ಬೀದಿಗಳಲ್ಲಿ ಕಲಹ ನಡೆದೀತೆಂದೂ, ಇದು ಗೇಣಿದಾರರ ಅವಸಾನಕ್ಕಿರುವ ಕ್ರಮವೆಂದೂ ಟೀಕಿಸಲಾಗಿದೆ.

ಕಾನೂನಿನ ಈ ತಿದ್ದುಪಡಿಯು ನ್ಯಾಯದ ಬಾಗಿಲನ್ನು ಬೆಂಗಳೂರಿನಿಂದ ಜಿಲ್ಲಾ ಕೇಂದ್ರಕ್ಕೆ ಸ್ಥಳಾಂತರಿಸುತ್ತದೆ ಎಂಬ ಒಂದು ಅಂಶವು ಮಾತ್ರ ಈ ನೂತನ ಕ್ರಮದಲ್ಲಿ ಸ್ವಾಗತಾರ್ಹವಾದದ್ದು. ಹಣಬಲವೂ ಬಾಯಿ ಬಲವೂ ಉಳ್ಳ ಭೂಮಾಲೀಕರು ಟ್ರಿಬ್ಯೂನಲ್‌ಗಳ ತೀರ್ಪನ್ನು ಹುಸಿಗೊಳಿಸಲು ರಿಟ್ ಅರ್ಜಿ ಮೂಲಕ ಹೈಕೋರ್ಟಿನ ಮೊರೆ ಹೊಕ್ಕು ತಡೆಯಾಜ್ಞೆ ಪಡೆದು ಒಕ್ಕಲುಗಳನ್ನು ಜಮೀನಿನಿಂದ ಹೊರಗೆಳೆದು ಹಾಕುವ ಕಾರ್ಯಾಚರಣೆ ನಡೆಸಲು ಈ ತನಕ ಅನುಕೂಲವಿತ್ತು. ನೂರಾರು ಮೈಲು ದೂರದ ಬೆಂಗಳೂರಿಗೆ ನೂರಾರು ರೂಪಾಯಿ ಖರ್ಚು ಮಾಡಿ ಹೋಗಿ ವಕೀಲರನ್ನು ಹಿಡಿದು ತನ್ನ ಜಮೀನು ಉಳಿಸಿಕೊಳ್ಳುವುದಕ್ಕೆ ಬಡ ಗೇಣಿದಾರರು ಹೆಣಗಬೇಕಿತ್ತು.

ಆದರೆ ಜಿಲ್ಲಾ ಮೇಲ್ಮನವಿ ಟ್ರಿಬ್ಯೂನಲ್‌ಗಳಲ್ಲಿ ಬಡ ಗೇಣಿದಾರರಿಗೆ ನ್ಯಾಯ ಸಿಕ್ಕೀತೆ? ಸರಕಾರ ಈಗ ತೀರ್ಮಾನಿಸಿರುವಂತೆ ಈ ಟ್ರಿಬ್ಯೂನಲ್‌ಗಳಲ್ಲಿ ಒಬ್ಬರು ನ್ಯಾಯಾಂಗದ ಅಧಿಕಾರಿಯೂ ಇನ್ನೊಬ್ಬರು ಕಂದಾಯ ಇಲಾಖೆಯ ಅಧಿಕಾರಿಯೂ ಸದಸ್ಯರಾಗಿರುತ್ತಾರೆ. ಅಧಿಕಾರೇತರ ಸದಸ್ಯರಾರೂ ಇರುವುದಿಲ್ಲ. ಜನ ಪ್ರತಿನಿಧಿಗಳಿಗೆ ಅಲ್ಲಿ ಜಾಗವಿಲ್ಲ.

ಹೈಕೋರ್ಟುಗಳಲ್ಲಿ ಭೂಶಾಸನಕ್ಕೆ ಸಂಬಂಧಿಸಿದ ಪ್ರಕರಣಗಳ ತೀರ್ಮಾನ ನಾಲ್ಕೈದು ವರ್ಷಗಳಷ್ಟು ವಿಳಂಬವಾಗುವುದರಿಂದ ಒಂದು ವರ್ಷದೊಳಗೇ ಕೇಸನ್ನು ಫೈಸಲ್ ಮಾಡಲು ಈ ಟ್ರಿಬ್ಯೂನಲ್‌ಗಳ ಸ್ಥಾಪನೆ ಕೈಗೊಳ್ಳಲಾಗುವುದೆಂದು ವಿಧೇಯಕದ ಉದ್ದೇಶಗಳಿರುವ ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ. ಪ್ರಕರಣಗಳನ್ನು ಬೇಗ ತೀರ್ಮಾನ ಮಾಡಬೇಕಾದ ಅಗತ್ಯ ಬಹಳವಿದೆಯಾದರೂ ಸರಕಾರವು ನಿಶ್ಚಯಿಸಿರುವ ಹಿತವು ಎಲ್ಲಿಯೂ ತಲೆತಲಾಂತರದಿಂದ ಮಣ್ಣು ಮುಟ್ಟದೆ ದುಡಿಯುವವರ ಕಷ್ಟ ಕಾಯಕದ ಫಲವನ್ನುಂಡು ಬದುಕಿದ ಬಲವುಳ್ಳ ಭೂಮಾಲೀಕ ವರ್ಗಕ್ಕೆ ದಕ್ಕಿ ಹೋಗುವ ಭಯ ಇದೆ. ಸರಕಾರ ರೂಪಿಸಿರುವ ಮೇಲ್ಮನವಿ ಟ್ರಿಬ್ಯೂನಲಿನ ಸ್ವರೂಪವೇ ಅದನ್ನು ಸೂಚಿಸುತ್ತದೆ.

ರಚಿಸಲಾಗುವ ಈ ಮೇಲ್ಮನವಿ ಟ್ರಿಬ್ಯೂನಲ್ ಯಾವುದೆಲ್ಲ ಪ್ರಕರಣಗಳನ್ನು ವಿಚಾರಿಸುವುದು ಎಂಬುದು ಸ್ಪಷ್ಟವಾಗಿಲ್ಲ. ಹೈಕೋರ್ಟು ಹಾಗೂ ಸುಪ್ರೀಂ ಕೋರ್ಟುಗಳಲ್ಲಿ ಈಗ ಬಾಕಿಯಿರುವ ಎಲ್ಲಾ ಪ್ರಕರಣಗಳೂ ಮೇಲ್ಮನವಿ ಟ್ರಿಬ್ಯೂನಲಿಗೆ ವರ್ಗಾವಣೆಗೊಳ್ಳುವವು ಎಂದು ಕಂದಾಯ ಸಚಿವ ಎಸ್.ಆರ್. ಬೊಮ್ಮಾಯಿಯವರು ಸ್ಪಷ್ಟಪಡಿಸಿದ್ದಾರೆ. ಆದರೆ ಈಗ ಬಾಕಿಯಿರುವ ಪ್ರಕರಣಗಳನ್ನು ಮಾತ್ರವೇ ಟ್ರಿಬ್ಯೂನಲ್ ವಿಚಾರಿಸುವುದೇ ಅಥವಾ ಮುಂದೆಯೂ ಬರಬಹುದಾದ ಮೇಲ್ಮನವಿಗಳನ್ನೂ ವಿಚಾರಿಸುವ ಅಧಿಕಾರ ಅದಕ್ಕೆ ಕೊಡಲಾಗಿದೆಯೋ ಎಂಬುದು ಸ್ಪಷ್ಟವಾಗಿಲ್ಲ.

ಮುಂದೆಯೂ ಬರಬಹುದಾದ ಮೇಲ್ಮನವಿಗಳನ್ನು ವಿಚಾರಿಸುವ ಅಧಿಕಾರ ವ್ಯಾಪ್ತಿಯನ್ನು ಅದಕ್ಕೆ ಕೊಡಲಾಗಿದೆ ಎಂದಾದರೆ ವಿರೋಧ ಪಕ್ಷಗಳವರ ಭಯವು ನಿಜವಾದೀತು. ಹಳೆಯ ಪ್ರಕರಣಗಳನ್ನೆಲ್ಲ ಮತ್ತೆ ತೆರೆಯುವ ಆಮಿಷಕ್ಕೆ ಭೂಮಾಲೀಕರು ಒಳಗಾಗಬಹುದು. ಟ್ರಿಬ್ಯೂನಲಿನಲ್ಲಿ ಸರಕಾರಿ ಅಧಿಕಾರಿಯೊಬ್ಬರು ಇರುವುದರಿಂದಲೂ ಜನಪ್ರತಿನಿಧಿಗಳಾರೂ ಇಲ್ಲದೇ ಇರುವುದರಿಂದಲೂ ಸೊತ್ತು ಸವಲತ್ತಿನ ಆಮಿಷ ಒಡ್ಡಿ ಅವರಿಂದ ಕೈಂಕರ್ಯ ಮಾಡಿಸಿಕೊಳ್ಳಲು ಭೂಮಾಲೀಕರಿಗೆ ಅನುಕೂಲವಾಗುತ್ತದೆ. ಇದರ ಪರಿಣಾಮವಾಗಿ ಕರ್ನಾಟಕದ ಹಳ್ಳಿ ಹಳ್ಳಿಗಳಲ್ಲಿ ಮೂಲೆ ಮೂಲೆಗಳಲ್ಲಿ ಸಾಮಾಜಿಕ ಕ್ಷೋಭೆ ಭುಗಿಲೇಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇಡಿಯ ದೇಶದಲ್ಲಿಯೇ ಅತ್ಯಂತ ಪುರೋಗಾಮಿ ಶಾಸನಗಳಲ್ಲಿ ಒಂದೆನಿಸಿದ, ಮಣ್ಣಿನ ಮಕ್ಕಳಿಗೆ ನೆಲದೊಡೆತನವನ್ನು ನೀಡುವ, ಕರ್ನಾಟಕದ ಗ್ರಾಮೀಣ ಮುಖವನ್ನೇ ಬದಲಾಯಿಸಿದ ಈ ಶಾಸನದ ಆಶಯವನ್ನೇ ಮಣ್ಣು ಮುಕ್ಕಿಸುವ ಉಪಕ್ರಮವೇ ಇದು ಎಂದು ಈ ನಾಡಿನ ವಿಚಾರಶೀಲರೆಲ್ಲ ಚಿಂತಿಸುವಂತಾಗಿದೆ.

ಹಾಗಲ್ಲ ಎಂದಾದರೆ ಸರಕಾರ ಈ ವಿಧೇಯಕವನ್ನು ಮತ್ತೆ ಸೂಕ್ತವಾಗಿ ತಿದ್ದಬೇಕು. ಈಗ ಇರುವ ಒಬ್ಬ ನ್ಯಾಯಾಂಗ ಅಧಿಕಾರಿಯೂ ಒಬ್ಬ ಕಂದಾಯ ಇಲಾಖೆ ಅಧಿಕಾರಿಯೂ ಇರಲಿ. ಅಡ್ಡಿ ಇಲ್ಲ. ಜತೆಗೆ ಇನ್ನೂ ಮೂರು ಮಂದಿ ಜನಪ್ರತಿನಿಧಿಗಳನ್ನು ಅವುಗಳಿಗೆ ಸದಸ್ಯರಾಗಿ ನೇಮಿಸಬೇಕು. ಈ ಮೂವರು ಸ್ಥಳೀಯ ಶಾಸಕರ ಸಹಿತ ಎಲ್ಲರೂ ಶಾಸಕರೇ ಆಗಿರಲಿ. ಸರಕಾರದ ಈ ಹೊಸ ಹೆಜ್ಜೆ ಜನಪರವಾಗಬೇಕಿದ್ದರೆ ಮಂಡಳಿಯಲ್ಲಿ ಜನಪರರಾಗಿರುವ ಸದಸ್ಯರಿರಬೇಕು. ಇಂದಿನ ನಮ್ಮ ವ್ಯವಸ್ಥೆಯಲ್ಲಿ ಜನರಿಗೆ ನೇರವಾಗಿ ಹೊಣೆಗಾರರಾಗಿರುವವರು ಶಾಸಕರು. ಅವರಿಗಿಂತ ಹೆಚ್ಚಿನ ದೊರೆಯಬಹುದಾದ ಜನಪ್ರಾತಿನಿಧ್ಯ ಪಡೆದವರು ಇಲ್ಲ. ಭೂಸುಧಾರಣೆಯೆಂಬುದು ಅತ್ಯಂತ ಸಾಮಾಜಿಕ ಕ್ರಾಂತಿಯ ಉದ್ದೇಶವುಳ್ಳ ಒಂದು ಕ್ರಮ. ಆದ್ದರಿಂದ ಅದಕ್ಕೆ ಸಂಬಂಧಿಸಿದ ಮಂಡಳಿಗಳಲ್ಲಿ ಸಾಮಾಜಿಕ ಪುರೋಗಮನದ ದೃಷ್ಟಿಯುಳ್ಳ ಜನಪ್ರತಿನಿಧಿಗಳೇ ಇರಬೇಕಾದ್ದು ಅಗತ್ಯವೂ ಸಹಜವೂ ಆದದ್ದು.

ಎರಡನೆಯದಾಗಿ ಟ್ರಿಬ್ಯೂನಲ್ ವಿಚಾರಿಸಬಹುದಾದ ಪ್ರಕರಣಗಳಿಗೆ ಅವಧಿಯ ಮಿತಿ ಹೇರಬೇಕು. ಯಾರು ಬೇಕಿದ್ದರೂ ಯಾವಾಗಬೇಕಿದ್ದರೂ ಈ ಮಂಡಳಿಯ ಮುಂದೆ ಕೇಸು ಕೊಂಡೊಯ್ದು ಭೂಸುಧಾರಣೆಯ ಆಶಯವನ್ನು ಮಣ್ಣುಪಾಲು ಮಾಡುವುದಕ್ಕೆ ಅವಕಾಶವಿರಬಾರದು. ಈಗ ಹೈಕೋರ್ಟು ಹಾಗೂ ಸುಪ್ರೀಂ ಕೋರ್ಟಿನ ಮುಂದೆ ಬಾಕಿಯಿರುವ ಪ್ರಕರಣಗಳಿಗೆ ಮಾತ್ರ ಟ್ರಿಬ್ಯೂನಲಿನ ವಿಚಾರಣಾಧಿಕಾರವನ್ನು ಮಿತಿಗೊಳಿಸುವುದೇ ಸೂಕ್ತ.

ಮುಂಗಾರು

ಶನಿವಾರ, ಮಾರ್ಚ್ 22, 1986

ನಿಲ್ಲಿಸಿ ಈ ನೀಚ ಪದ್ಧತಿ

ಚಂದ್ರಗುತ್ತಿಯಲ್ಲಿ ಈ ಬಾರಿ ಬೆತ್ತಲೆ ಸೇವೆ ತಡೆಯಲು ಹೋದ ಸಮಾಜ ಸೇವಕರ ಮೇಲೆ ಬೆತ್ತಲೆ ಸೇವೆಯ ಭಕ್ತಾದಿಗಳು ಹಲ್ಲೆ ನಡೆಸಿದ್ದಾರೆ. ನಾಗರೀಕತೆಯ ಗಡಿಯನ್ನು ಮೀರಿದ ಮೌಢ್ಯದ ಕತ್ತಲೆಯ ಸಾಮ್ರಾಜ್ಯದೊಳಗೆ ಧಾರ್ಮಿಕ ವಿಶ್ವಾಸದ ಅಮಲೇರಿ ಉದ್ರಿಕ್ತರಾಗಿ ವಿವೇಕದ ಮಾತು ಹೇಳಲು ಬಂದ ಮಂದಿಗಳಿಗೆಲ್ಲ ಅವಮಾನ ಮಾಡಿದ್ದಾರೆ. ಈ ನಾಡಿನ ವಿಚಾರಶೀಲರು ಧಾರ್ಮಿಕ ನೆಲೆಗಟ್ಟಿನ ಮೌಢ್ಯವು ಯಾವುದೆಲ್ಲ ರೂಪಗಳನ್ನು ತಳೆಯಬಲ್ಲುದೆಂಬುದನ್ನು ಕಂಡು ಅಚ್ಚರಿಪಡುವಂತಾಗಿದೆ. ಸಮಾಜದಲ್ಲಿ ಇಂಥ ಬರ್ಬರತೆ ಇನ್ನೂ ಉಳಿಯಲು ಅವಕಾಶ ಕೊಟ್ಟಿರುವ ನಮ್ಮೆಲ್ಲರ ಬಗ್ಗೆಯೇ ನಾಚಿಕೆಪಟ್ಟುಕೊಳ್ಳುವಂತಾಗಿದೆ.

ಚಂದ್ರಗುತ್ತಿಯಲ್ಲಿ ಬೆತ್ತಲೆಸೇವೆಯನ್ನು ತಡೆಯಲು ಬಂದ ಸಮಾಜ ಸೇವಕರನ್ನು, ಪೊಲೀಸ್ ಜವಾನರನ್ನು ಹಾಗೂ ಅಧಿಕಾರಿಗಳನ್ನು, ಮಹಿಳಾ ಪೊಲೀಸರನ್ನು ಬೆತ್ತಲೆ ಸೇವೆಯ ಬೆಂಬಲಿಗರು ಹಿಡಿದು ಚಚ್ಚಿದ್ದಾರೆ. ಸಾವಿರಾರು ಜನರು ಸೇರಿ ಕೆಲವು ನೂರರಷ್ಟಿದ್ದ ಈ ಮಂದಿಯಲ್ಲಿ ಹಲವರ ಬಟ್ಟೆ ಕಳಚಿ ಹಲ್ಲೆ ನಡೆಸಿದ್ದಾರೆ. ಬೀದಿಯಲ್ಲಿ ಎಳೆದಿದ್ದಾರೆ. ಮಹಿಳಾ ಪೊಲೀಸರನ್ನೂ ಸ್ವಯಂಸೇವಿಕೆಯರನ್ನೂ ಬೆತ್ತಲೆಗೊಳಿಸಿ ಬೆನ್ನಟ್ಟಿದ್ದಾರೆ. ಪೊಲೀಸ್ ಠಾಣೆಯನ್ನೇ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ರೈಫಲ್‌ಗಳನ್ನು ದೋಚಿದ್ದಾರೆ.

ಸಾರ್ವಜನಿಕ ತಾಣದಲ್ಲಿ ಹದಿಹರೆಯದ ಹೆಣ್ಣುಮಕ್ಕಳೂ ಸೇರಿದಂತೆ ಸ್ತ್ರೀಸಮುದಾಯದ ಬಟ್ಟೆಯನ್ನು ಕಳಚಿ ಬೆತ್ತಲೆ ಓಡುವಂತಹ ಸೇವೆ ಒಂದು ಸಾಮಾಜಿಕ ಜಾಡ್ಯ. ಅದನ್ನು ಮಾಡುವ ಬಹಳ ಮಂದಿ ಸ್ವಯಂಪ್ರೇರಣೆಯಿಂದ ಮಾಡುತ್ತಿಲ್ಲ. ಹೆತ್ತವರ ಅಥವ ಗಂಡಂದಿರ ಒತ್ತಡಕ್ಕೆ ಬಲಿಯಾಗಿ ಮಾಡುತ್ತಾರೆ ಎಂಬುದಕ್ಕೆ ಸಾಕಷ್ಟು ಪುರಾವೆಗಳು ಈಗಾಗಲೇ ಬಂದಿವೆ. ಸ್ವಯಂಪ್ರೇರಣೆಯೇ ಇದ್ದರೂ ಅದು ಮೌಢ್ಯ ಮುಚ್ಚಿದ ಧಾರ್ಮಿಕ ಅಂಧ ವಿಶ್ವಾಸವೇ ತಳಹದಿಯಾಗುಳ್ಳ ರೂಢಿಯಿಂದ ಬಂದದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಇದು ನೀಚ ಪದ್ಧತಿ; ಅನಾಗರಿಕವಾದದ್ದು. ಸಭ್ಯ ಜನರು ಹೇಸಿಗೆ ಪಡುವಂತಹದ್ದು. ಮುಗ್ಧ ಜನರ ಶೋಷಣೆಗೆ ಅವಕಾಶ ಮಾಡಿಕೊಡುವುದರಿಂದ ಸಾಮಾಜಿಕ ಕ್ಷೋಭೆಗೆ ದಾರಿಮಾಡಿಕೊಡುವಂತಹದ್ದು. ಈ ಪಿಡುಗು ವರ್ಗ ವ್ಯತ್ಯಾಸದ ಚಿಹ್ನೆಗಳನ್ನು ತೋರಿಸುತ್ತಿರುವುದರಿಂದ, ಸಾಮಾಜಿಕ ತಾರತಮ್ಯಕ್ಕೆ ಒತ್ತುಕೊಡುವಂತಹದ್ದು.

ಆದ್ದರಿಂದ ಇದು ನಿಲ್ಲಬೇಕು ಎಂದು ವಿಚಾರವಂತರೆಲ್ಲಾ ಹೇಳುತ್ತ ಬಂದಿದ್ದಾರೆ. ಸಮಾಜ ಸ್ವಾಸ್ಥ್ಯದ ಬಗ್ಗೆ ಕಾಳಜಿ ಇರುವವರೆಲ್ಲ ಈ ನೀಚ ಪರಂಪರೆ ನಿಲ್ಲಲಿ ಎಂದು ವಾದಿಸುತ್ತಿದ್ದಾರೆ. ಸಾಮಾಜಿಕ ಸ್ಥಿತ್ಯಂತರಕ್ಕೆ ಕ್ರಿಯೆಯ ಮೂಲಕ ಚಾಲನೆ ಕೊಡುವ ದಾರಿಗೆ ಬದ್ಧರಾದ ಜನ ಆಂದೋಲನಕ್ಕೆ ಕೂಡ ಹೊರಟಿದ್ದಾರೆ.

ಈ ಆಂದೋಲನ ಇಂದು ಘರ್ಷಣೆಗೆ ದಾರಿ ಮಾಡಿದೆ. ವಿಚಾರವನ್ನು ವಿರೋಧಿಸುವ ಉದ್ಧಟತನದ ಹಿಂದೆ ಮೌಢ್ಯದ ರಾಶಿಯೇ ಇದೆ. ಈ ವ್ಯವಸ್ಥೆಯನ್ನು ಹೀಗೆಯೇ ಇರಿಸಿಕೊಳ್ಳುವುದರಿಂದ ಲಾಭಗಳಿಸುವ ಶಕ್ತಿಗಳಿವೆ. ಈ ಶಕ್ತಿಗಳನ್ನು ಪ್ರತ್ಯೇಕಿಸುವ ಕೆಲಸದ ಬಗ್ಗೆ ಇಂದು ಹೋರಾಟ ನಡೆಸಿರುವವರು ಗಮನಹರಿಸಬೇಕು. ಜತೆಗೆ ಈ ಮಹಾರೋಗಕ್ಕೆ ಗುರಿಯಾಗಿರುವ ದೀನ ದಲಿತ ಜನಗಳ ಮೌಢ್ಯವನ್ನು ಒಡೆಹಾಕುವ ಕೆಲಸವನ್ನೂ ಕೈಗೊಳ್ಳಬೇಕು. ಈ ಕೆಲಸ ಸುಲಭವಲ್ಲ ಎಂಬುದನ್ನು ಚಂದ್ರಗುತ್ತಿಯಲ್ಲಿ ಗುರುವಾರ ನಡೆದ ವಿದ್ಯಮಾನಗಳು ತೋರಿಸಿಕೊಟ್ಟಿವೆ.

ಧರ್ಮವು ತುಂಬ ವೈಯಕ್ತಿಕವಾದದ್ದು. ಅದನ್ನು ಸಾಮೂಹಿಕ ನೆಲೆಯ ಆಚರಣೆಗೆ ತರುವುದರಿಂದ ಏನೆಲ್ಲ ಅಪಾಯವಿದೆಯೆಂಬುದಕ್ಕೆ ಚಂದ್ರಗುತ್ತಿ ಒಂದು ಉದಾಹರಣೆ. ಧರ್ಮಾಚರಣೆಗಳು ಖಾಸಗಿ ಜೀವನಕ್ಕೆ ಮಾತ್ರ ಸೀಮಿತವಾಗಿರಲಿ. ಮನುಷ್ಯರ ಧಾರ್ಮಿಕ ನಂಬಿಕೆಗಳು ಸಾಮಾಜಿಕ ಸ್ವಾಸ್ಥ್ಯಕ್ಕೆ ಅಪಾಯಕಾರಿಯಾಗದಂತೆ ನೋಡಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮ ರಾಜಕೀಯ ಹಾಗೂ ಸಾಮಾಜಿಕ ಮುಖಂಡರಿಗೆ ಉಂಟು. ಧಾರ್ಮಿಕ ನಾಯಕರೂ ಇದನ್ನು ಅಂಗೀಕರಿಸಬೇಕಾಗುತ್ತದೆ. ತಮ್ಮ ಚಟುವಟಿಕೆಯ ಕ್ಷೇತ್ರ ಯಾವುದೆಂಬುದನ್ನು ಬಲು ಎಚ್ಚರಿಕೆಯಿಂದ ಅವರು ಆಯ್ಕೆ ಮಾಡಬೇಕಾಗುತ್ತದೆ. ಹಾಗೆ ಅವರು ಮಾಡಿದ್ದರೆ ಇಂದು ಈ ದೇಶವನ್ನು ಬಾಧಿಸುತ್ತಿರುವ ಧಾರ್ಮಿಕ ತಳಹದಿಯುಳ್ಳ ಹಲವಾರು ವಿಕಾರಗಳು ಇರುತ್ತಿರಲಿಲ್ಲ. ಮನುಷ್ಯನ ಸಾಮಾಜಿಕ-ಆರ್ಥಿಕ ಬದುಕನ್ನು ಧರ್ಮವು ಆಳಬೇಕು ಎಂಬ ಹಟಮಾರಿತನವೇ ದುರ್ಬಲರ ಹಾಗೂ ಸ್ತ್ರೀಯರ ಶೋಷಣೆಯ ಶಸ್ತ್ರವಾಗಿರುವುದನ್ನು ಅನೇಕ ವಿದ್ಯಮಾನಗಳಲ್ಲಿ ಕಾಣಬಹುದಾಗಿದೆ.

ಚಂದ್ರಗುತ್ತಿಯ ಬೆತ್ತಲೆ ಸೇವೆಯಂತಹ ಅನಾಚಾರಗಳ ನಿವಾರಣೆಯಲ್ಲಿ ಹಿಂದೂ ಧಾರ್ಮಿಕ ಮುಖಂಡರಿಗೆ ದೊಡ್ಡ ಪಾತ್ರವಿದೆ. ಅದನ್ನು ಅವರು ಈ ತನಕ ನಿರ್ವಹಿಸಿಲ್ಲ. ನಾಗರಿಕ ಸಮಾಜಕ್ಕೆ ಸಲ್ಲದ ಧಾರ್ಮಿಕ ವಿಧಿ ವಿಧಾನಗಳನ್ನು ಆಚರಣೆಯಿಂದ ಕಿತ್ತು ಹಾಕುವ ಹೊಣೆಗಾರಿಕೆ ಅವರದ್ದು. ಈ ಕರ್ತವ್ಯ ಭ್ರಷ್ಟತೆಯ ಆರೋಪ ಅವರೆಲ್ಲರ ತಲೆಯ ಮೇಲಿದೆ.

ನಮ್ಮ ಸರಕಾರ ತನ್ನ ಸಾಮಾಜಿಕ ಜವಾಬ್ದಾರಿಯನ್ನು ಚಂದ್ರಗುತ್ತಿಯ ಪ್ರಸಂಗದಲ್ಲಿ ನಿರ್ವಹಿಸಿಲ್ಲ ಎಂದೇ ಹೇಳಬೇಕಾಗಿದೆ. ಅದು ವಹಿಸಿದ ಮೌನ ಈ ನೀಚ ಪದ್ಧತಿಯ ಬೆಂಬಲಿಗರಿಗೆ ಧೈರ್ಯವನ್ನು ಕೊಟ್ಟಿರಬಹುದು. ಬೆತ್ತಲೆ ಸೇವೆಯೆಂಬ ಕರಾಳ ಪದ್ಧತಿಯ ಬಗೆಗೆ ಸರಕಾರ ಗಟ್ಟಿ ದನಿಯಲ್ಲಿ ವಿರೋಧ ಹೇಳಲಿಲ್ಲ. ಅದು ಕಾನೂನುಬಾಹಿರವೆಂದು ಪ್ರಚಾರ ನಡೆಸಿಲ್ಲ. ದೊಡ್ಡ ಮಟ್ಟದಲ್ಲಿ ಅದನ್ನು ಸರಕಾರ ಮಾಡಬೇಕಿತ್ತು. ಬೆತ್ತಲೆಸೇವೆಯೆಂಬುದು ನಿಷೇಧಿತ ನಡವಳಿಕೆಯೆಂದು ಪ್ರಚಾರ ಮಾಡಬೇಕಾಗಿತ್ತು. ನಮ್ಮ ಗೃಹ ಸಚಿವರು ಈ ವಿಚಾರವಾಗಿ ತುಟಿ ಎರಡು ಮಾಡುವ ಗೋಜಿಗೆ ಹೋಗಿಲ್ಲ. ಅವರಿಂದಾಗಲಿ, ಮುಖ್ಯಮಂತ್ರಿಯವರಿಂದಾಗಲಿ ಸ್ಪಷ್ಟ ಮಾತುಗಳು ಬಂದಿದ್ದರೆ ಈ ನೀಚ ಪದ್ಧತಿ ವಿರೋಧಿಸುವ ಜನರಿಗೆ ಧೈರ್ಯ ಹೆಚ್ಚುತ್ತಿತ್ತು. ಬೆತ್ತಲೆ ಸೇವೆಯ ಬೆಂಬಲಿಗರ ಧೈರ್ಯ ಕುಗ್ಗುತ್ತಿತ್ತು. ಪೊಲೀಸರ ಕೆಲಸ ಸುಲಭವಾಗುತ್ತಿತ್ತು. ಧಾರ್ಮಿಕ ಮುಖಂಡರೂ ಸರಕಾರಿ ನಾಯಕರೂ ತಮ್ಮ ಕರ್ತವ್ಯದಲ್ಲಿ ತಪ್ಪಿ ಬಿದ್ದಿರುವ ಕಾರಣದಿಂದಲೇ ಸಮಾಜ ಸುಧಾರಕರ ಕೆಲಸ ಇಂದು ಕಷ್ಟಕರದ್ದಾಗಿ ಪರಿಣಮಿಸಿದೆ. ಸರಕಾರ ತನ್ನೆಲ್ಲಾ ಶಕ್ತಿಯೊಡನೆ ಈ ಅನಾಚಾರವನ್ನು ನಿಲ್ಲಿಸಬೇಕು. ಅದು ಕಾನೂನುಬಾಹಿರವೆಂದು ಸಾರಬೇಕು. ಉಲ್ಲಂಘಿಸುವವರು ಬಂಧನಕ್ಕೆ ಅರ್ಹರೆಂದು ಸಾರಬೇಕು. ಅಂತಹವರನ್ನು ಸೆರೆಹಿಡಿದು ಒಯ್ಯಬೇಕು. ಮುಂದಿನ ಬಾರಿಯಾದರೂ ಅದನ್ನು ಮಾಡಬೇಕು. ಈ ಕಾರ್ಯಾಚರಣೆ ಕಷ್ಟಕರವೆನಿಸಿದರೆ ಜಾತ್ರೆಯನ್ನು ನಿಷೇಧಿಸಬೇಕು. ಸಮಾಜದ ಸ್ಥಿತ್ಯಂತರದಲ್ಲಿ ಆಸಕ್ತರಾದ ಜನರೆಲ್ಲ ಇಂದಿನ ಸೋಲನ್ನು ತಮ್ಮ ಬಲವನ್ನಾಗಿ ಪರಿವರ್ತಿಸಿಕೊಂಡು ಕೆಲಸ ಮಾಡಬೇಕು. ಮುಂದಿನ ಬಾರಿ ಬೆತ್ತಲೆ ಓಡುವುದು ಅಸಾಧ್ಯವೆಂಬ ಪರಿಸ್ಥಿತಿ ನಿರ್ಮಾಣಕ್ಕಾಗಿ ದುಡಿಯಬೇಕು. ರೂಢಿ ಮೂಲವಾದ ಈ ಮೌಢ್ಯವನ್ನು ನಮ್ಮ ಸಮಾಜದಿಂದ ಅಳಿಸಿ ಹಾಕಲು ಪಣ ತೊಡಬೇಕು.

ಮುಂಗಾರು

ಭಾನುವಾರ, ಮಾರ್ಚ್ 23, 1986

ಬೇಕೀಗ ರೈತ - ದಲಿತರ ಒಕ್ಕೂಟ

"ರಾಜ್ಯದ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ರೈತ ಸಂಘಟನೆ ಹಾಗೂ ದಲಿತ ಸಂಘರ್ಷ ಸಮಿತಿಗಳು ಒಟ್ಟಾಗಿ ನಿಂತು ಸಾಮರಸ್ಯದಿಂದ ಹೋರಾಡಬೇಕಾಗಿದೆ"-ಎಂಬ ಅಭಿಪ್ರಾಯ ಇತ್ತೀಚೆಗೆ ಮೈಸೂರಿನಲ್ಲಿ ನಡೆದ ವಿಚಾರಗೋಷ್ಠಿಯೊಂದರಲ್ಲಿ ವ್ಯಕ್ತವಾಗಿದೆ.

ಈ ವಿಚಾರಗೋಷ್ಠಿಯನ್ನೇರ್ಪಡಿಸಿದವರು ಕರ್ನಾಟಕ ರಾಜ್ಯ ರೈತ ವಿದ್ಯಾರ್ಥಿ ಒಕ್ಕೂಟದ ಯುವಕರು. ಇದರಲ್ಲಿ ಭಾಗವಹಿಸಿದವರು ಪ್ರಧಾನವಾಗಿ ಅಧ್ಯಾಪಕರಾದ ಟಿ. ಸುಬ್ರಹ್ಮಣ್ಯಂ ಮತ್ತು ಕೆ. ರಾಮದಾಸ್. ಒಂದು ಸಮಾಜದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಯ ಪರಿವರ್ತನೆ ಅಥವಾ ಮುನ್ನಡೆಯಲ್ಲಿ ಜನಪರ ಹೋರಾಟ ಹಿಡಿಯಬೇಕಾದ ಹಾದಿಯನ್ನು ಈ ಇಬ್ಬರು ಅಧ್ಯಾಪಕರು ಗುರುತಿಸುವ ಯತ್ನ ಮಾಡಿದ್ದಾರೆನ್ನಬಹುದು.

"ರಾಜ್ಯದ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ" ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ತಮ್ಮ ಹೋರಾಟಕ್ಕೆ ಒಂದು ಸಮಾನ ತಾತ್ವಿಕ ನೆಲೆಯನ್ನು ಗುರುತಿಸಿಕೊಳ್ಳಬೇಕೆಂಬುದನ್ನು ಇವರು ಒತ್ತಿ ಹೇಳಿದ್ದಾರೆ. ರಾಜ್ಯದ ಇಂದಿನ ಪ್ರಕ್ಷುಬ್ಧ ಪರಿಸ್ಥಿತಿ ಏನೆಂಬುದರ ವಿವರವಾದ ವಿಶ್ಲೇಷಣೆ ಇವರ ಮಾತಿನಲ್ಲಿ ಇಲ್ಲವಾದರೂ, ಅವರು ಈ ಮಾತನ್ನು ರಾಜಕೀಯ ಪ್ರಕ್ಷುಬ್ಧದ ಕುರಿತಾಗಿ ಹೇಳಿರುವರೆಂದು ಗ್ರಹಿಸಬೇಕಾದುದು ಸೂಕ್ತ.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ರಾಜಕೀಯ ಸ್ತರ ಸೋಗಲಾಡಿತನ, ಬೂಟಾಟಿಕೆ, ಮೋಸ, ವಂಚನೆಯಲ್ಲಿ ಕರ್ನಾಟಕದಷ್ಟು ಬಸವಳಿದು-ಬೆಂಡಾದ ರಾಜ್ಯ ಇನ್ನೊಂದಿರಲಾರದು. ರಾಷ್ಟ್ರೀಯತೆಯ ಸೋಗಿನಲ್ಲಿ ಕೇಂದ್ರೀಕೃತ ರಾಜಕೀಯ ಕೂಟವನ್ನು ಕಟ್ಟಿಕೊಂಡು ಜನರನ್ನು ನಂಬಿಸಿ-ವಂಚಿಸುತ್ತಲೇ ಬಂದಿರುವುದು ಈ ರಾಜ್ಯವನ್ನು ಇದುವರೆಗೆ ಆಳಿದ ರಾಜಕೀಯ ಪಕ್ಷಗಳ ಒಂದು ದಾಖಲೆಯಾಗಿದೆ. ಇದರ ಅರಿವು ನಮ್ಮ ಜನಕ್ಕೆ ಇಲ್ಲವೆಂದಲ್ಲ. ಒಂದು ಜನಪರವಾದ ಹೋರಾಟದ ಮೂಸೆಯಲ್ಲಿ ಅಪ್ಪಟ ರಾಜಕೀಯ ಶಕ್ತಿಯೊಂದು ಪುಟಗೊಂಡಿಲ್ಲದಿರುವುದೇ ನಮ್ಮ ಜನ "ಕಡಿಮೆ ಕೆಟ್ಟವರನ್ನು" ಆಪ್ಪಿಕೊಂಡಿರುವ ಅನಿವಾರ್ಯ ಸಂಕಟಕ್ಕೆ ಕಾರಣವೆನ್ನಬಹುದು. ಹತ್ತಿರದಿಂದ ನೋಡಿದಾಗ "ಕಡಿಮೆ ಕೆಟ್ಟವರು" ಹೆಚ್ಚು ಕೆಟ್ಟವರಿಗಿಂತ ಕಡಿಮೆ ಏನಲ್ಲವೆಂಬುದು ಎಲ್ಲರ ಅನುಭವದ ವಿಚಾರ.

ರಾಷ್ಟ್ರೀಯ ಪಕ್ಷಗಳ ಸೋಗಿನಲ್ಲಿ ಸಮಾಜದ ಪ್ರತಿಷ್ಠಿತರು, ಭಾಷೆಯ ಬಲದಲ್ಲಿ ವಂಚನೆಯ ಜಾಲ ಹೂಡಬಲ್ಲವರು, ಸಮಾಜದ ಸಂಪತ್ತನ್ನು ಸೂರೆ ಹೊಡೆಯುವುದರಲ್ಲಿ ನಿಷ್ಣಾತರಾದ ವಾಣಿಜ್ಯ ಉದ್ಯಮ ಪ್ರಭುಗಳು, ಸೋಗಲಾಡಿಗಳು ಹಾಗೂ ಸಂದರ್ಭ ಸಾಧಕರ ಕೂಟಗಳು ಈ ನಾಡಿನ ಜನಜೀವನದ ಮೇಲೆ ಹಾವಳಿ ನಡೆಸುತ್ತಲೇ ಬಂದಿವೆ. ರಾಜಕೀಯ ಪಕ್ಷಗಳೆನ್ನುವ ಈ ಕೂಟಗಳು ತಮ್ಮ ರಕ್ಷಣಾ ಕವಚವಾಗಿ ಭವ್ಯ ಬದುಕಿನ ನಗರ ಸಂಸ್ಕೃತಿಯನ್ನು ಬೆಳೆಸಿವೆ.

ಈ ದುಷ್ಟ ಕೂಟದ ಕಾಯಕದಿಂದ ಬಳಲಿ-ಬೆಂಡಾದವರು ಗ್ರಾಮವಾಸಿಗಳಾದ ರೈತರು, ಕಾರ್ಮಿಕರು ಮತ್ತು ದಲಿತರು. ರೈತ ಮತ್ತು ದಲಿತ ವರ್ಗಕ್ಕೆ ತಮಗೆ ಆಗುತ್ತಿರುವ ಅನ್ಯಾಯದ ಅರಿವೂ ಇದೆ-ಅನ್ಯಾಯವನ್ನು ನಿವಾರಿಸಿಕೊಳ್ಳಬೇಕೆಂಬ ಉತ್ಕಟ ಆಸೆಯೂ ಇದೆ. 1970ರ ದಶಕದ ಕೊನೆಯ ವರ್ಷಗಳಲ್ಲಿ ರಾಜ್ಯದಲ್ಲಿ ಮೈದಳೆದ ದಲಿತ ಚಳವಳಿ ಹಾಗೂ 1980ರಲ್ಲಿ ಉಬ್ಬರಿಸಿದ ರೈತ ಹೋರಾಟ ರೈತ-ದಲಿತರಲ್ಲಿರುವ ಹೊಸತನದ ಬಯಕೆಯನ್ನು ಹೊತ್ತು ಬಂದಿವೆಯೆನ್ನಬಹುದು.

ಈ ನಾಡಿನಲ್ಲಿ ದಲಿತರಷ್ಟೇ ರೈತರೂ ಶೋಷಿತರು. ದಲಿತರು ಹಿಂದೂ ಸಮಾಜದ ಪ್ರತಿಷ್ಠಿತರ ದಬ್ಬಾಳಿಕೆಗೆ ಈಡಾಗಿರುವವರಾದರೆ ರೈತರು ನಗರ ಮೂಲವಾದ ಆರ್ಥಿಕ ವ್ಯವಸ್ಥೆಯಿಂದ ಹಿಂಡಿ ಹಿಪ್ಪೆಯಾಗಿದ್ದಾರೆ. ಎಲ್ಲ ಕಾಲದಲ್ಲೂ-ಎಲ್ಲ ಮಾನವ ಸಮಾಜದಲ್ಲೂ ಶೋಷಿತ ವರ್ಗದ ಒಡಲುರಿಯಿಂದ ಹೊಸತನದ ಶಕ್ತಿಗಳು ಸ್ಫುಟಿಸಿ ಬಂದಿವೆ. ಪರಿವರ್ತನೆಯ ಹಾದಿಗೆ ಬೆಳಕು ಬಿದ್ದಿದೆ. ಇದೊಂದು ಐತಿಹಾಸಿಕವಾದ ಸತ್ಯ. ಈ ಸತ್ಯದ ನೆಲೆಯಲ್ಲಿ ನಾವಿಂದು ರಾಜ್ಯದ ಸ್ಥಿತಿಗತಿಯನ್ನು ಅವಲೋಕಿಸಿದರೆ ರೈತರು ಮತ್ತು ದಲಿತರ ಸಂಯುಕ್ತ ಹೋರಾಟವೊಂದೇ ಕರ್ನಾಟಕದ ಸಂಕಟಗಳ ನಿವಾರಣೆಗಿರುವ ದಾರಿ.

ಈ ಮಾತನ್ನು ನಾವು 1984ರ ಅಕ್ಟೋಬರ್ ಒಂದರ ಸಂಪಾದಕೀಯದಲ್ಲಿ ಹೇಳಿದ್ದೆವು. ". . . . . ರೈತ ಸಂಘ ಮತ್ತು ದಲಿತ ಸಂಘರ್ಷ ಸಮಿತಿ ಜುಜುಬಿ ಬಯಕೆಗಳನ್ನಿಟ್ಟುಕೊಂಡ ಚಳವಳಿಗಳಲ್ಲ. ನಮ್ಮ ಸತಪ್ತ ನಾಡಿನ ಕ್ರೂರ ಅನ್ಯಾಯಗಳು ಕೊನೆಗೊಳ್ಳಬೇಕು. ಆರ್ಥಿಕ-ಸಾಮಾಜಿಕ ಕುಹಕಗಳು ಇಲ್ಲವಾಗಬೇಕು. ಎಲ್ಲರೂ ಸಮಾನರೆಂದು ಸಾಧಿಸುವ ಹೊಸ ಸಂಸ್ಕೃತಿಯೇ ಉದಯವಾಗಬೇಕೆಂಬ ಮಹತ್ತರ ಆದರ್ಶಗಳನ್ನು ಕಟ್ಟಿಕೊಂಡು ಸಂಘಟನೆಗೆ ಇಳಿದ ಐತಿಹಾಸಿಕ ಆಂದೋಲನಗಳಿವು. ಪೂರ್ಣ ಕ್ರಾಂತಿಯನ್ನೇ ನಿಜವಾಗಿಸಬಲ್ಲ ನಿಟ್ಟಿನಲ್ಲಿ ಇಟ್ಟ ದೃಢ ಹೆಜ್ಜೆಗಳು. . . . . .". ಎಂಬುದನ್ನು ನಾವಂದು ಹೇಳಿದ್ದೆವು. ಅಂತಿಮ ಉದ್ದೇಶ ಒಂದೇ ಆಗಿರುವ ಈ ಎರಡು ಚಳವಳಿಗಳೂ ಪರಸ್ಪರ ಮುನಿಸನ್ನು ಮರೆತು ಆತ್ಮಶೋಧನೆ ಮಾಡಿಕೊಂಡು ನಿರ್ಮಲ ಹೃದಯದಿಂದ ಒಟ್ಟಾಗಿ ಹೋರಾಟಕ್ಕಿಳಿದರೆ ಈ ನಾಡಿನಲ್ಲಿ ಏನಾದರೂ ದೊಡ್ಡದು ನಡೆಯಲು ಸಾಧ್ಯವೆಂಬುದನ್ನು ನಾವು ಇನ್ನೊಮ್ಮೆ ಹೇಳುತ್ತೇವೆ.

ಈ ಎರಡು ಸಂಘಟನೆಗಳು ನಾಡಿನ ಈ ಸಂದಿಗ್ಧ ಕಾಲದಲ್ಲಿ ತಮ್ಮ ಐತಿಹಾಸಿಕ ಪಾತ್ರವನ್ನು ನಿರ್ವಹಿಸಲು ವಿಫಲರಾದರೆ ನಾವು ಭವಿಷ್ಯಹೀನ ಸತ್ತ ದೃಷ್ಟಿ ಜನಾಂಗವೆಂದಾಗಬಹುದು. ಇಂತಹ ಅನಾಹುತ ಆಗಬಾರದೆಂಬಾಸೆಯಿಂದ ವಿಚಾರವಾದಿಗಳು ಮೈಸೂರಿನಲ್ಲಿ ಸಕಾಲಿಕ ಎಚ್ಚರಿಕೆಯ ಮಾತುಗಳನಾಡಿದ್ದಾರೆ. ಹೊಸತನಕ್ಕಾಗಿ ಹಂಬಲಿಸುತ್ತಿರುವ ರೈತ-ದಲಿತ ಯುವಕರು ಅವರ ಮಾತುಗಳನ್ನು ಆಸಕ್ತಿಯಿಂದ ಆಲಿಸಿರುವುದರಿಂದ ರೈತ-ದಲಿತರ ಚಳವಳಿಗೆ ಒಂದು ಸಹಮತದ ತಾತ್ವಿಕ ನೆಲೆ ಇನ್ನು ಮುಂದಾದರೂ ಸಿಕ್ಕೀತೆಂದು ನಾವು ಆಶಿಸುತ್ತೇವೆ.

ಮುಂಗಾರು
ಮಂಗಳವಾರ, ಮಾರ್ಚ್ 25, 1986

ಬೇಕು - ದಲ್ಲಾಳಿಗಳಿಂದ ಬಿಡುಗಡೆ

ಬೆಂಗಳೂರು ಜಿಲ್ಲೆಯಲ್ಲಿ ಮಾಂಸದ ಕೋಳಿ ಸಾಕಣೆಗಾರರು ಮಧ್ಯವರ್ತಿಗಳನ್ನು ನಿವಾರಿಸಿಕೊಳ್ಳಲು ತಮ್ಮದೇ ಆದ ಮಾರಾಟ ಸಹಕಾರ ಸಂಘವನ್ನು ಸ್ಥಾಪಿಸಿಕೊಂಡು ಗ್ರಾಹಕರ ಜತೆ ನೇರ ಸಂಬಂಧ ಸ್ಥಾಪಿಸಿಕೊಳ್ಳಲು ಮುಂದಾಗಿದ್ದಾರೆ. ಇದೊಂದು ಸ್ವಾಗತಾರ್ಹವಾದ ಬೆಳವಣಿಗೆ.

ಮಾಂಸದ ಕೋಳಿ ಸಾಕಣೆಗಾರರನ್ನು ಈ ಸಾಮಗ್ರಿಯ ರಖಂ ವ್ಯಾಪಾರಸ್ಥರು ಎಷ್ಟರ ಮಟ್ಟಿಗೆ ಶೋಷಣೆ ನಡೆಸುತ್ತಿದ್ದಾರೆಂಬುದನ್ನು ಅಂಕಿ ಅಂಶಗಳೇ ಹೇಳುತ್ತವೆ. ಮಧ್ಯವರ್ತಿಗಳಾದ ರಖಂ ವ್ಯಾಪಾರಸ್ಥರು ಕೋಳಿ ಮಾಂಸವನ್ನು ಗ್ರಾಹಕರಿಗೆ ಕೆ.ಜಿಗೆ 18ರೂ.ಗಳಂತೆ ಮಾರಾಟ ಮಾಡುತ್ತಾರೆ. ಅವರು ಕೋಳಿ ಸಾಕುವ ರೈತರಿಗೆ ಕೊಡುವ ಬೆಲೆ ಕೆ. ಜಿ. ಒಂದಕ್ಕೆ 9 ರೂಪಾಯಿಗಳಿಂದ 11 ರೂಪಾಯಿ ತನಕ. ರೈತನಿಗೆ ಕೋಳಿ ಸಾಕುವುದಕ್ಕೆ ಕೆ.ಜಿ. ಒಂದಕ್ಕೆ ಸುಮಾರು 13 ರೂಪಾಯಿ ಖರ್ಚು ತಗಲುತ್ತದೆ. ಹೀಗೆ ರಖಂ ವ್ಯಾಪಾರಿಗಳು ರೈತರನ್ನೂ ಗ್ರಾಹಕರನ್ನೂ ಶೋಷಣೆ ಮಾಡಿ ತಾವು ಕೆ. ಜಿ. ಒಂದಕ್ಕೆ ಆರು ರೂಪಾಯಿಗಳಷ್ಟು ಲಾಭವನ್ನು ಜೇಬಿಗಿಳಿಸುವ ವಿದ್ಯಮಾನ ನಡೆಯುತ್ತ ಬಂದಿದೆ.

ಈ ವ್ಯಾಪಾರಿಗಳಿಗೆ ಬಲು ದೊಡ್ಡ ಬಂಡವಾಳವೇನೂ ಬೇಕಾಗಿಲ್ಲ. ಅವರು ಹೊಂದಿರುವುದು ರಸೆಲ್ ಮಾರ್ಕೆಟಿನಲ್ಲಿ ಒಂದು ಮೇಜು, ಒಂದು ಕುರ್ಚಿ, ಬಳಿಯಲ್ಲೊಂದು ಟೆಲಿಫೋನ್ ಮತ್ತು ಅಂದಂದಿನ ವ್ಯವಹಾರಕ್ಕೆ ಬೇಕಾದಷ್ಟು ನಗದು ಬಂಡವಾಳ ಅಷ್ಟೆ. ಇಷ್ಟನ್ನೇ ಇರಿಸಿಕೊಂಡು ಈ ಮಂದಿ ಕೋಳಿ ಮಾರುಕಟ್ಟೆಯನ್ನು ಆಳುತ್ತಿದ್ದಾರೆ.

ಇದೀಗ ಕೋಳಿ ರೈತರು ಸಹಕಾರಿ ಸಂಘ ರಚಿಸಿಕೊಂಡಿದ್ದಾರೆ. ರಾಜ್ಯ ಸರಕಾರದ ಪಶು ಸಂಗೋಪನೆ ಹಾಗೂ ಪಶುವೈದ್ಯ ಸೇವಾ ಇಲಾಖೆಯ ಬೆಂಬಲ ಇದಕ್ಕಿದೆ. ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಇದರ ಅಧ್ಯಕ್ಷರಾಗಿದ್ದಾರೆ. ಇಲಾಖೆಯ ಇನ್ನೋರ್ವ ಹಿರಿಯ ಅಧಿಕಾರಿ ಸಂಸ್ಥೆಯ ಆಡಳಿತ ನಿರ್ದೇಶಕರಾಗಿದ್ದಾರೆ. ಕೆಲವು ತಿಂಗಳ ಹಿಂದೆಯೆ ಅಸ್ತಿತ್ವಕ್ಕೆ ಬಂದ ಈ ಸಂಸ್ಥೆ ಬೆಂಗಳೂರು ನಗರದಲ್ಲಿ ಕಳೆದ ಭಾನುವಾರದಿಂದ ಗ್ರಾಹಕರಿಗೆ ಕೋಳಿ ಮಾಂಸ ವಿತರಣೆ ಪ್ರಾರಂಭಿಸಿದೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆಯ ಸೌಲಭ್ಯಗಳನ್ನು ಒದಗಿಸಿಕೊಂಡು ತನ್ನ ಜಾಲವನ್ನು ವಿಸ್ತರಿಸಲು ಸಿದ್ಧತೆ ನಡೆಸಿದೆ. ಮೀನುಗಾರಿಕೆ ಇಲಾಖೆ, ತೋಟಗಾರಿಕೆ ಇಲಾಖೆ ಮುಂತಾದವುಗಳ ಶೀತೀಕರಣ ಸೌಲಭ್ಯಗಳ ನೆರವು ಕೇಳಿದೆ. ಸಂಸ್ಥೆ ಈಗ ಮಾಂಸವನ್ನು ಗ್ರಾಹಕರಿಗೆ ಕೆ. ಜಿ. ಗೆ 16 ರೂ.ಗಳಂತೆ ಮಾರಾಟ ಮಾಡುತ್ತಿದ್ದು ರೈತರಿಗೆ 15 ರೂಪಾಯಿಯ ಬೆಲೆ ಕೊಡುತ್ತಿದೆ. ಪರಿಣಾಮವಾಗಿ ಗ್ರಾಹಕರಿಗೂ ರೈತರಿಗೂ ಕೆ. ಜಿ. ಗೆ ಎರಡು ರೂಪಾಯಿಯಂತೆ ಲಾಭ ದೊರೆಯುತ್ತಿದೆ.

ಈ ಸಹಕಾರ ಸಂಘ ಸೇರದಂತೆ ರೈತರನ್ನು ರಖಂ ವ್ಯಾಪಾರಿಗಳು ಬೆದರಿಸುತ್ತಿರುವ ವರದಿಗಳೂ ಬಂದಿವೆ. ವ್ಯವಸ್ಥೆಯೊಂದರ ಸ್ಥಿತ್ಯಂತರ ಆಗುವ ವೇಳೆ ಇಂತಹದೆಲ್ಲ ನಡೆಯುವಂತಹದ್ದೆ. ಅವನ್ನೆಲ್ಲ ಎದುರಿಸಿ ಮುನ್ನಡೆಯುವ ಛಾತಿ ಸಂಬಂಧಪಟ್ಟವರಲ್ಲಿ ಇರಬೇಕು.

ಇಂದಿನ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಎಲ್ಲಾ ವಿಧದ ಸಾಮಗ್ರಿಗಳ ಬೆಳೆಗಾರರು ಮಧ್ಯವರ್ತಿಯ ಕೈಯಲ್ಲಿ ಸಿಲುಕಿ ನಲುಗಿ ಹೋಗುತ್ತಿದ್ದಾರೆ. ಧಾನ್ಯ ಬೆಳೆಯುವವರು, ತರಕಾರಿ ಬೆಳೆಗಾರರು, ತೆಂಗು ಬೆಳೆಗಾರರು, ದ್ರಾಕ್ಷಿ ತೋಟಗಾರರು, ಇತರ ಹಣ್ಣು ಬೆಳೆಯುವವರು ಎಲ್ಲರೂ ತಾವು ಬೆಳೆದ ಸಾಮಗ್ರಿಗಳನ್ನು ಜುಜುಬಿ ಬೆಲೆಗೆ ಮಾರಲೇಬೇಕಾದಂತಹ ಮಾರುಕಟ್ಟೆಯ ಏಕಸ್ವಾಮ್ಯ ವ್ಯವಸ್ಥೆಯನ್ನು ಮಧ್ಯವರ್ತಿಗಳಾದ ರಖಂ ವ್ಯಾಪಾರಿಗಳ ಕೂಟ ಜತನದಿಂದ ಕಾಪಾಡಿಕೊಂಡು ಬಂದಿದೆ. ಬೆಳೆಗಾರರು ಸಾಮಾನ್ಯವಾಗಿ ಹಳ್ಳಿಯೇ ನೆಲೆಯಾಗುಳ್ಳವರಾದ್ದರಿಂದ ಮಧ್ಯವರ್ತಿಗಳು ಪೇಟೆಯ ಜನಗಳಾಗಿದ್ದು ಚಾಲಾಕಿನವರಾದ್ದರಿಂದ ರೈತರು ಸುಲಭದಲ್ಲಿ ಮೋಸ ಹೋಗುತ್ತಾರೆ.

ನಗರವಾಸಿ ಜನರು ಮುಗ್ಧ ಗ್ರಾಮೀಣರ ಮೇಲೆ ನಡೆಸುವ ಈ ಶೋಷಣೆಯ ನಿವಾರಣೆಗೆ ಇರುವುದು ಒಂದೇ ದಾರಿ. ಅದುವೇ ಸಂಘಟನೆ. ಹಲವಾರು ಕ್ಷೇತ್ರಗಳಲ್ಲಿನ ಕೃಷಿಕರು ಈಗಾಗಲೇ ಈ ದಾರಿ ಕಂಡುಕೊಂಡು ಏಳಿಗೆಯ ಮಜಲುಗಳಲ್ಲಿದ್ದಾರೆ. ಕರ್ನಾಟಕ ಮತ್ತು ಕೇರಳಗಳ ಅಡಿಕೆ ಬೆಳೆಗಾರರದ್ದು ಈ ನಿಟ್ಟಿನಲ್ಲಿ ಮಹತ್ವದ ಸಾಧನೆ. ಅದು ಎಲ್ಲಾ ಕೃಷಿಕರಿಗೂ ಮೇಲ್ಪಂಕ್ತಿಯಾದ ಒಂದು ಸಾಧನೆಯಾಗಿದೆ. ಕಾಫಿ ಮಂಡಳಿ, ಏಲಕ್ಕಿ ಮಂಡಳಿ ಇದೀಗ ತಾನೇ ಸ್ಥಾಪನೆಯಾಗುತ್ತಿರುವ ತೆಂಗು ಮಂಡಳಿ ಮುಂತಾದವುಗಳು ಈ ದಿಕ್ಕಿನಲ್ಲಿ ಆಗಿರುವ ಮಹತ್ವದ ಕೆಲಸಗಳು.

ಆದರೂ ಶೋಷಣೆ ಇನ್ನೂ ನಡೆದೇ ಇರುವ ಹಲವಾರು ಕೃಷಿ ಹಾಗೂ ಗ್ರಾಮೋದ್ಯೋಗ ಕ್ಷೇತ್ರಗಳಿವೆ. ಇವುಗಳಲ್ಲೆಲ್ಲ ಬೆಳೆಗಾರರ ಹಾಗೂ ಕುಶಲ ಕರ್ಮಿಗಳ ಸಂಘಟನೆ ಆಗಬೇಕು. ಅದಕ್ಕೆ ಬೆಂಗಳೂರು ಜಿಲ್ಲೆಯ ಕೋಳಿ ಸಾಕಣೆದಾರರಿಗೆ ನೆರವು ಒದಗಿಸಿದಂತೆ ಸರಕಾರದ ಇಲಾಖೆಗಳವರು ಸಾಮಾಜಿಕ ಕಾರ್ಯಕರ್ತರು ಹಾಗೂ ಸಹಕಾರಿ ಚಳವಳಿಯಲ್ಲಿ ಆಸಕ್ತರಾದವರು ಮುತುವರ್ಜಿ ವಹಿಸಿ ಸಂಘಟನೆ ನಡೆಸಬೇಕಾಗಿದೆ. ರಕ್ತ ಹೀರಿ ಹಿಪ್ಪೆ ಮಾಡುವ ದಲ್ಲಾಳಿಗಳಿಂದ ವಿಮೋಚನೆಯಾಗದೆ ಬೆಳೆಗಾರರಿಗೆ ಭವಿಷ್ಯವಿಲ್ಲವೆಂಬುದನ್ನು ಎಲ್ಲರೂ ಮನಗಾಣಬೇಕಾಗಿದೆ.

ಮುಂಗಾರು
ಬುಧವಾರ, ಮಾರ್ಚ್ 26, 1986

ಕಂದಾಯ ನೌಕರರ ಮುಷ್ಕರ

ರಾಜ್ಯದ ಕಂದಾಯ ಇಲಾಖೆಯ ನೌಕರರು ಕಳೆದ ಎಂಟು ದಿನಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ತಹಶೀಲ್ದಾರ್ ಹುದ್ದೆಗೆ ನೇರ ನೇಮಕ ಬೇಡ. ಬಡ್ತಿ ಮೂಲಕವೇ ನೇಮಕ ಆಗಬೇಕು ಎಂಬುದು ಅವರ ಮಹತ್ವದ ಬೇಡಿಕೆ. ಜಿಲ್ಲಾ ಪರಿಷತ್ತು, ತಾಲೂಕು ಪಂಚಾಯತಿ, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿಗಳಲ್ಲಿ ಹುಟ್ಟಿಕೊಳ್ಳುವ ಎಲ್ಲಾ ಉದ್ಯೋಗಗಳಿಗೆ ಕಂದಾಯ ಇಲಾಖೆಯಿಂದಲೇ ಸೇರಿಸಿಕೊಳ್ಳಬೇಕು ಎಂಬುದು ಅವರ ಇನ್ನೊಂದು ಬೇಡಿಕೆ.

ತಾಲೂಕು ಅಭಿವೃದ್ಧಿ ಮಂಡಲಿಯಲ್ಲಿನ ಅನೇಕ ನೌಕರರನ್ನು ಹಾಗೂ ಪಂಚಾಯತಿಗಳ ವಿಸ್ತರಣಾಧಿಕಾರಿಗಳನ್ನು ಕಂದಾಯ ಇಲಾಖೆಗೆ ಸೇರಿಸಿಕೊಂಡದ್ದರಿಂದ ತಮ್ಮ ಸೇವಾ ಹಿರಿಯತನಕ್ಕೆ ಧಕ್ಕೆಯಾಗಿದೆ ಎಂಬುದು ಅವರ ಇನ್ನೊಂದು ಅಹವಾಲು. ಆಹಾರ ಹಾಗೂ ನಾಗರಿಕ ಪೂರೈಕೆ ಇಲಾಖೆಯ ತಾಲೂಕು ಮಟ್ಟದ ಹುದ್ದೆಗಳಿಗೂ ಕಂದಾಯ ಇಲಾಖೆಯಿಂದಲೇ ನೇಮಿಸಿಕೊಳ್ಳಬೇಕು ಎಂಬುದು ಇನ್ನೊಂದು ಬೇಡಿಕೆ. ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದರಂತೆ ತಾಲೂಕನ್ನೂ ಲೋಕಸಭಾ ಕ್ಷೇತ್ರಕ್ಕೊಂದು ಜಿಲ್ಲೆಯನ್ನೂ ರಚಿಸಬೇಕು ಎಂಬುದು ಇನ್ನೊಂದು ಬೇಡಿಕೆ.

ಸರಕಾರ ಮುಷ್ಕರಕ್ಕೆ ಹೊರಟ ಕಂದಾಯ ಇಲಾಖೆ ನೌಕರರ ನಾಯಕರನ್ನು ಕರೆಸಿ ಮಾತುಕತೆ ನಡೆಸಿದೆ. ಅದರಲ್ಲಿ ಅವರ ಅನೇಕ ಬೇಡಿಕೆಗಳನ್ನು ಒಪ್ಪಿಕೊಳ್ಳಲಾಗಿದೆಯೆಂದು ಕಂದಾಯ ಸಚಿವ ಎಸ್. ಆರ್. ಬೊಮ್ಮಾಯಿ ಹೇಳುತ್ತಾರೆ. ಸಂತೋಷದಿಂದ ಅಭಿನಂದಿಸಿ ಎದ್ದು ಹೋದ ನೌಕರ ಮುಖಂಡರು ಮರುದಿನವೇ ಮುಷ್ಕರ ಸಾರಿದರೆಂದು ಬೊಮ್ಮಾಯಿ ಆರೋಪಿಸಿದ್ದಾರೆ.

ಕಂದಾಯ ಇಲಾಖೆಯ ನೌಕರರು ಮಂಡಿಸಿರುವ ಬೇಡಿಕೆಗಳ ಪಟ್ಟಿ ನೋಡಿದರೆ ಅವರಿಗೆ ಈ ವ್ಯವಸ್ಥೆಯಲ್ಲಿ ಮಹಾ ಅನ್ಯಾಯವಾಗಿದೆ ಎಂದೇನೂ ಕಾಣಿಸುವುದಿಲ್ಲ. ಆದ್ದರಿಂದ ಅವರು ನಡೆಸುತ್ತಿರುವ ಈ ಅನಿರ್ದಿಷ್ಟ ಮುಷ್ಕರದಲ್ಲಿ ಜನಸಾಮಾನ್ಯರಿಗೆ ಆಸಕ್ತಿಯಿಲ್ಲ. ಕಂದಾಯ ಇಲಾಖೆಯ ಸಿಬ್ಬಂದಿಗಳ ಜತೆ ನಮ್ಮ ಹಳ್ಳಿ ಮಂದಿ ಬಹಳ ಕಾಲದಿಂದ ಒದ್ದಾಡಿ ಅನುಭವ ಪಡೆದಿದ್ದಾರೆ. ತಾಲೂಕು ಕಚೇರಿಯ ಗುಮಾಸ್ತನಿಗೂ ಜವಾನನಿಗೂ ಹಳ್ಳಿಯ ಜನಸಾಮಾನ್ಯರ ಸೇವೆಗಿರುವ ಗ್ರಾಮಲೆಕ್ಕಿಗನಿಗೂ ಹಿಂದಿನ ಬ್ರಿಟಿಷ್ ಆಡಳಿತ ಕಾಲದ ಕಲೆಕ್ಟರ್ ದೊರೆಗಳ ಜಬರ್ದಸ್ತು ಈಗ ಬಂದಿವೆ ಎಂಬುದು ಈ ಸ್ವತಂತ್ರ ಭಾರತದ ಜನಸಾಮಾನ್ಯರ ಅನುಭವವಾಗಿದೆ. ತಾಲೂಕು ಕಚೇರಿಗಳಲ್ಲಿ ಲಂಚ ಕೊಟ್ಟರೆ ಸಿಬ್ಬಂದಿಗಳು ಹಲ್ಲುಗಿಂಜುತ್ತಾರೆ. ಲಂಚ ಕೊಟ್ಟವನಿಗೆ ಯಾವ ಸೇವೆಯಾದರೂ ಅಲ್ಲಿ ಸಲ್ಲುತ್ತದೆ. ಅದನ್ನು ಕೊಡಲು ಮುಂದಾಗದವನ ಕೆಲಸ ಸ್ಮಶಾನಕ್ಕೆ ಹೋದ ಹೆಣದಂತೆಯೇ. ಇದು ಈ ರಾಜ್ಯದ ಪ್ರತಿಯೊಬ್ಬ ಗ್ರಾಮಸ್ಥನ ಅನುಭವವೆಂದರೆ ತಪ್ಪಲ್ಲ. ಕಂದಾಯ ಇಲಾಖೆ ಸಿಬ್ಬಂದಿ ಅಧಿಕಾರಿಗಳ ಹಿಂದೆ ಕೋಳಿ ಊಟ ಮಾಡುತ್ತ ತಿರುಗುತ್ತಾರೆ ಎಂದು ವಿಧಾನಸಭೆಯಲ್ಲಿ ಜನ ಪ್ರತಿನಿಧಿಗಳು ಟೀಕೆ ಮಾಡಿದ್ದಾರೆ. ಗ್ರಾಮಲೆಕ್ಕಿಗರು ದಾಖಲೆಗಳನ್ನೆಲ್ಲ ಜೇಬಿನಲ್ಲಿಟ್ಟುಕೊಂಡು ಜಿಲ್ಲಾ ಕೇಂದ್ರದಲ್ಲಿ ಬೀಡು ಬಿಡುತ್ತಾರೆ. ಹಳ್ಳಿ ಹಳ್ಳಿಗಳಲ್ಲಿ ಪಟ್ವಾರಿ ಆಗುತ್ತಿದೆ ಎಂದು ಲೇವಡಿ ಮಾಡಿದ್ದಾರೆ. ಇದರಲ್ಲಿ ಉಳ್ಳದ್ದೂ ಸುಳ್ಳಿಲ್ಲ.

ಸರಕಾರಿ ಕೆಂಪುಪಟ್ಟಿಗೆ ಕಂದಾಯ ಇಲಾಖೆಯ ಕೊಡುಗೆ ಬಹಳ ದೊಡ್ಡದು. ಜನರ ಹಿತಕ್ಕಾಗಿರುವ ಯೋಜನೆಗಳನ್ನೂ ಕಾರ್ಯಕ್ರಮಗಳನ್ನೂ ವಿಳಂಬಿಸಿ ಆಶಯ ಕೆಡಿಸಿ ಹುಸಿಗೊಳಿಸುವ ವಿದ್ಯೆ ಕಂದಾಯ ಇಲಾಖೆಯವರಿಗೆ ಕರತಲಾಮಲಕ. ಅನೇಕ ದಶಕಗಳಿಂದಲೇ ಇದು ನಡೆದುಕೊಂಡು ಬಂದಿದೆ.

ಸೇವೆಗಿರುವ ಒಂದು ವ್ಯವಸ್ಥೆ, ಅಭಿವೃದ್ಧಿಯ ಹರಿವಿಗೆ ಕಾಲುವೆಯೊದಗಿಸಬೇಕಾದ ಇಲಾಖೆ ಹೀಗೆ ಜನ ವಿರೋಧಿಯಾಗಿರುವುದರಮಧ್ಯೆಯೇ ಈ ಮಂದಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಷ್ಕರಕ್ಕೆ ಇಳಿದಿರುವುದು ಜನರಿಗೆ ಕುರುವಿನ ಮೇಲೆ ಬೊಕ್ಕೆ ಎದ್ದಂತಹ ಅನುಭವ ಕೊಟ್ಟಿದೆ. ಕಂದಾಯ ಇಲಾಖೆಯವರಿಗೆ ದೂರುಗಳಿರಬಹುದು, ಬೇಡಿಕೆಗಳಿರಬಹುದು, ಅವುಗಳಲ್ಲಿ ಕೆಲವದರಲ್ಲಾದರೂ ನ್ಯಾಯ ಇರಬಹುದು. ಅವುಗಳನ್ನು ಈಡೇರಿಸಿಕೊಳ್ಳಲು ಅವರು ಸಂಧಾನದ ದಾರಿ ಅನುಸರಿಸಬೇಕಿತ್ತು. ಅವರಿಗೆ ವೇತನ ಆಯೋಗ ಸ್ಥಾಪನೆ ಆಗಿದೆ. ಆ ಸಂಸ್ಥೆಯನ್ನು ಅವರು ತಮ್ಮ ಸಮಸ್ಯೆಗಳ ನಿವಾರಣೆಗೆ ಉಪಯೋಗಿಸಿಕೊಳ್ಳಬಹುದಿತ್ತು.

ಈ ವಿದ್ಯಮಾನದಲ್ಲಿ ರಾಜ್ಯ ಸರಕಾರ ಮಾಡಿರುವ ತಪ್ಪೇನೂ ಕಡಿಮೆಯಲ್ಲ. ಜನ ವಿರೋಧಿಗಳಾಗಿ ಪರಿವರ್ತನೆಗೊಳ್ಳುತ್ತಿರುವ ಸರಕಾರಿ ಇಲಾಖೆಗಳ ನೌಕರರು ಕೇಳಿದ್ದನ್ನೆಲ್ಲ ಕೊಟ್ಟು ಅವರನ್ನು ಓಲೈಸುವುದಕ್ಕೆ ಈ ಸರಕಾರ ಬಹಳಷ್ಟು ತ್ಯಾಗಗಳನ್ನು ಜನಸಾಮಾನ್ಯರಿಂದ ಮಾಡಿಸಿದೆ. ರಾಜಕೀಯ ಲಾಭಕ್ಕಾಗಿ ಜನರ ವಿರುದ್ಧ ನೌಕರ ಶಾಹಿಯನ್ನು ಎತ್ತಿಕಟ್ಟಿ ತನ್ನ ಬೇಳೆ ಬೇಯಿಸಿಕೊಂಡ ಈ ಸರಕಾರದ ಮೂಗುದಾರವನ್ನು ಹಿಡಿದು ನೌಕರ ಶಾಹಿಯು ನಡೆಸುತ್ತಿದೆ. ಮೊನ್ನೆ ಮೊನ್ನೆ ವಿಧಾನಸಭೆಯ ಗೇಟಿನ ಮುಂದುಗಡೆಯೇ ಶಾಸಕಾಂಗದ ಸಿಬ್ಬಂದಿಗಳು ಸಭೆ ನಡೆಸಿ ಜನ ಪ್ರಾತಿನಿಧ್ಯದ ಸಂಸ್ಥೆಗೆ ಸವಾಲು ಹಾಕಿದರು. ಶಾಸಕಾಂಗದಲ್ಲಿ ಸರಕಾರಿ ವರದಿಗಾರರು ಸಂಪು ಹೂಡಿ ಸರಕಾರವನ್ನು ಮಂಡಿಯೂರಿಸಲು ಪ್ರಯತ್ನಿಸಿದರು.

ನಿವೃತ್ತಿ ವಯಸ್ಸನ್ನು 55ರಿಂದ 58ಕ್ಕೇರಿಸಿ ಸರಕಾರಿ ನೌಕರರನ್ನು ಓಲೈಸುವ ವೇಳೆ ಇದರಿಂದ ಮುಂದೆ ಬರಬಹುದಾದ ಅನಾಹುತವೇನೆಂದು ಈ ಸರಕಾರದ ಮುಖ್ಯಸ್ಥರಿಗೆ ಪ್ರಜ್ಞೆ ಇದ್ದಿರಲಿಕ್ಕಿಲ್ಲ. ಸಾವಿರಾರು ನಿರುದ್ಯೋಗಿಗಳ ಅನ್ನವನ್ನು ವಂಚಿಸಿ ಇವರಿಗೆ ಅನುಕೂಲ ಮಾಡಿಕೊಟ್ಟ ಪಾಪಕ್ಕೆ ಈ ಸರಕಾರ ಇಂದು ಇಂತಹ ಪ್ರಾಯಶ್ಚಿತ್ತ ಅನುಭವಿಸಬೇಕಾಗಿದೆ.

ಈಗ ಆಗಿರುವುದು ಇಷ್ಟೆ. ಜನದ್ರೋಹ ಮಾಡುತ್ತ ಬಂದ ಇಲಾಖೆಗೆ ಸಾಮಾಜಿಕ ದ್ರೋಹ ಮಾಡಿದ ಸರಕಾರ ಶಾಮೀಲಾಗಿ ಓಲೈಸಿದೆ. ಅದರ ಪರಿಣಾಮ ಜನರು ಇಂದು ಅನುಭವಿಸುತ್ತಿರುವ ಸಂಕಟ. ಅವರಿಗೆ ಈ ಮುಷ್ಕರದಲ್ಲಾಗಲಿ, ಬೇಡಿಕೆಗಳಲ್ಲಾಗಲಿ ಆಸಕ್ತಿ ಇಲ್ಲ. ಅದನ್ನೆಲ್ಲ ಇಲಾಖೆಯವರೂ ಸರಕಾರಿ ಪರಿಷ್ಕರೂ ಸೇರಿ ಬಗೆಹರಿಸಿಕೊಳ್ಳಲಿ. ಜನರ ಕೆಲಸ ಕಾರ್ಯಗಳು ಮಾತ್ರ ನಿಲ್ಲುವುದು ಬೇಡ. ಹಾಗೆ ನಿಂತರೆ ಜನರ ದಮನಕ್ಕೆ ಕಾರಣವಾದ ಕಂದಾಯ ಇಲಾಖೆ ಮತ್ತು ಸರಕಾರ ಎಂಬ ವ್ಯವಸ್ಥೆಗಳೆರಡೂ ಹೊಣೆಯಾಗುತ್ತವೆ.

ಮುಂಗಾರು

ಗುರುವಾರ, ಮಾರ್ಚ್ 27, 1986

ದಿಟ್ಟತನದ ನಿರ್ಣಯ

ಮುಂಬಯಿ ವಿಶ್ವವಿದ್ಯಾನಿಲಯದ ವ್ಯವಹಾರಗಳಲ್ಲಿ ಅನಗತ್ಯವಾಗಿ ಹಸ್ತಕ್ಷೇಪ ನಡೆಸಿದ್ದಕ್ಕಾಗಿ ವಿಶ್ವವಿದ್ಯಾನಿಲಯದ ಕುಲಪತಿಯಾಗಿರುವ ಮಹಾರಾಷ್ಟ್ರ ರಾಜ್ಯಪಾಲ ಕೋನಾ ಪ್ರಭಾಕರ ರಾವ್ ಅವರಿಗೆ ವಿಶ್ವವಿದ್ಯಾನಿಲಯದ ಸೆನೆಟ್ ಛೀಮಾರಿ ಹಾಕಿದೆ. ಈ ವಾಗ್ದಂಡನೆಯನ್ನು ಅದು ವಸ್ತುಶಃ ಸರ್ವಾನುಮತಿಯಿಂದಲೇ ವಿಧಿಸಿದೆ. ವಿರೋಧಿಸಿದ್ದು ಒಬ್ಬರೇ ಒಬ್ಬ ಸದಸ್ಯರು. ಅವರು ಕಾಂಗ್ರೆಸ್ (ಐ) ಪಕ್ಷದ ಅಂಗಸಂಸ್ಥೆಯಾದ ಎನ್. ಎಸ್. ಯು. ಐ. ನಾಯಕರಾದ ಧರ್ಮೇಂದ್ರ ವ್ಯಾಸರು. ರಾಜ್ಯಪಾಲರಿಂದ ನೇಮಕಗೊಂಡ ಸದಸ್ಯರಾದ ಇನ್ನೊಬ್ಬರು ಸಭೆಗೆ ಬಂದಿರಲಿಲ್ಲ.

ರಾಜ್ಯಪಾಲರಿಗೆ ಛೀಮಾರಿ ಹಾಕುವುದರ ಜತೆಗೆ ಈ ನಿರ್ಣಯವು ಮಹಾರಾಷ್ಟ್ರ ಸರಕಾರಕ್ಕೂ ವಾಗ್ದಂಡನೆ ವಿಧಿಸಿದೆ.

ವಿಶ್ವವಿದ್ಯಾನಿಲಯವೊಂದರ ಶೈಕ್ಷಣಿಕ ಮತ್ತಿತರ ಆಡಳಿತ ನಿರ್ವಹಿಸುವ ಸಂಸ್ಥೆಗಳಲ್ಲಿ ಪ್ರಧಾನವಾದ ಸೆನೆಟ್ ವಿಶ್ವವಿದ್ಯಾನಿಲಯದ ಮುಖ್ಯಸ್ಥರೆನಿಸಿದ ರಾಜ್ಯಪಾಲರಿಗೆ ಛೀಮಾರಿ ಹಾಕಿದ ಪ್ರಕರಣವು ಬಹುಶಃ ಭಾರತದ ಶೈಕ್ಷಣಿಕ ಇತಿಹಾಸದಲ್ಲಿ ಇದೇ ಮೊದಲು. ನಮ್ಮ ಶಿಕ್ಷಣ ಕ್ಷೇತ್ರದ ಆರೋಗ್ಯದ ಬಗ್ಗೆಯೂ ಜನತಂತ್ರ ವ್ಯವಸ್ಥೆಯ ಬೆಳವಣಿಗೆಯ ಬಗ್ಗೆಯೂ ಕಾಳಜಿಯಿರುವ ಎಲ್ಲರ ಎದೆಯನ್ನೂ ಹರ್ಷದಿಂದ ಹಗುರಾಗಿ ಮಾಡುವ ಘಟನೆ ಇದಾಗಿದೆ. ತಪ್ಪು ಹೆಜ್ಜೆ ಇಟ್ಟ ಕ್ಷುದ್ರ ರಾಜಕಾರಣಿಯೊಬ್ಬನಿಗೆ ಆತನ ಸ್ಥಾನ ಏನು ಎಂಬುದನ್ನು ತೋರಿಸುವ ಆತ್ಮಬಲವನ್ನು ಪ್ರದರ್ಶಿಸಿರುವ ಮುಂಬಯಿ ವಿಶ್ವವಿದ್ಯಾನಿಲಯದ ಸೆನೆಟ್ 129 ವರ್ಷಗಳ ಇತಿಹಾಸವಿರುವ ಆ ಸಂಸ್ಥೆಗೆ ಅಪಾರ ಗೌರವವನ್ನೂ ಘನತೆಯನ್ನೂ ತಂದು ಕೊಟ್ಟಿದೆ. ಈ ಸಮಾಜದಲ್ಲಿ ಒಂದೆಡೆಯಲ್ಲಿ ಮಾನವೀಯ ಮೌಲ್ಯಗಳು ಕುಸಿದು ಮನುಷ್ಯನ ಸ್ವಾರ್ಥ ಲಾಲಸೆಗಳು ವಿಜೃಂಭಿಸುತ್ತಿದ್ದರೆ ಮೌಲ್ಯಗಳ ಬಗ್ಗೆ ಕಾಳಜಿಯಿರುವ, ಸಮಗ್ರ ಸಮಾಜದ ಹಿತದ ಬಗ್ಗೆ ಕಳಕಳಿಯಿರುವ, ಅದಕ್ಕಾಗಿ ಕೆಲಸ ಮಾಡುವಂತಹ ದಿಟ್ಟತನವನ್ನು, ಧೀಮಂತಿಕೆಯನ್ನು ಪ್ರದರ್ಶಿಸುವ ಸೆನೆಟಿನ ಈ ಕಾರ್ಯ ಚೇತೋಹಾರಿಯಾದದ್ದು. ಇದು ನಮ್ಮ ಶೈಕ್ಷಣಿಕ ರಂಗದಲ್ಲಿಯೂ ರಾಜಕೀಯ ಕ್ಷೇತ್ರದಲ್ಲಿಯೂ ಹೊಸ ಪರಂಪರೆಯೊಂದನ್ನು ಸ್ಥಾಪಿಸುವಂತಹ ಉಪಕ್ರಮವಾಗಿದೆ.

ಈ ದೇಶವನ್ನು ಬಹುಕಾಲದಿಂದ ಆಳಿದ ರಾಜಕೀಯ ಪಕ್ಷವಾದ ಕಾಂಗ್ರೆಸಿನ ಹೊಲಬುಗೆಡಿಸುವ ಚಟುವಟಿಕೆಗಳು ಶಿಕ್ಷಣ ರಂಗವನ್ನೂ ಬಿಟ್ಟಿಲ್ಲ. ಶಿಕ್ಷಣ ಕ್ಷೇತ್ರದಲ್ಲಿ ರಾಜಕಾರಣಿಗಳು ನಡೆಸುವ ಅವಾಂತರಗಳು ಆಗೊಮ್ಮೆ ಈಗೊಮ್ಮೆ ಯಾವರೂ ಬಹಿರಂಗಕ್ಕೆ ಬರುತ್ತವೆ. ರಾಜ್ಯಪಾಲನ ಹುದ್ದೆಯ ಬಲದಿಂದ ರಾಜಕೀಯ ಪುಢಾರಿಗಳು ವಿಶ್ವವಿದ್ಯಾನಿಲಯದ ಮುಖ್ಯಸ್ಥರೂ ಆಗಿಬಿಡುವ ವಿಲಕ್ಷಣ ವ್ಯವಸ್ಥೆಯಿಂದಲೇ ಹೀಗಾಗಿದೆ. ಬುದ್ಧಿಬಲವಿಲ್ಲದ ರಾಜಕೀಯ ರಂಗವು ಶಿಕ್ಷಣ ರಂಗವನ್ನು ಮುಷ್ಟಿಗೆಡಿಸುವ ಈ ವ್ಯವಸ್ಥೆಯಿಂದ ಆ ರಂಗಕ್ಕೆ ತುಂಬಾ ಹಾನಿಯಾಗಿದೆ. ಕಾಂಗ್ರೆಸ್ ಪಕ್ಷ ಅತೃಪ್ತರನ್ನು ತೃಪ್ತಿ ಪಡಿಸಲು, ಜನರು ದೂರೀಕರಿಸಿದ ಜನ ವಿರೋಧಿಗಳಿಗೆ ಆಶ್ರಯವನ್ನು ಒದಗಿಸಲು ರಾಜ್ಯಪಾಲ ಹುದ್ದೆಯೆಂಬ ರಾಜಕೀಯ ರಸಾಯನವನ್ನು ಉಣಬಡಿಸುವ ಸಂಪ್ರದಾಯವನ್ನು ಕಟ್ಟಿ ಬೆಳೆಸಿದೆ. ಈ ಮಂದಿ ರಾಜಭವನಗಳಲ್ಲಿ ಕೂತು ಸಾಕಷ್ಟು ಮೇಯುತ್ತಾರೆ. ಸಹಜವಾಗಿಯೆ ಕೇಂದ್ರ ಸರಕಾರದ ಇಷ್ಟಾನುವರ್ತಿಗಳಾಗುತ್ತಾರೆ.

ವಿಶ್ವವಿದ್ಯಾನಿಲಯಗಳಲ್ಲಿಯೂ ಇವರ ಕೈಗಳು ಹರಿದಾಡುತ್ತವೆ. ಕೆಲವು ವರ್ಷಗಳ ಹಿಂದೆ ಉತ್ತರ ಪ್ರದೇಶದಲ್ಲಿ ರಾಜ್ಯಪಾಲರಾಗಿದ್ದವರೊಬ್ಬರು ಅಲ್ಲಿನ ವಿಶ್ವವಿದ್ಯಾನಿಲಯವೊಂದರಲ್ಲಿ ಅವ್ಯವಹಾರ ನಡೆಸಿದ ರಾಜಕಾರಣಿಯ ಮಗನೊಬ್ಬನ ಅಕೃತ್ಯಗಳನ್ನು ಮುಚ್ಚಿಹಾಕಲು ವಿಶ್ವವಿದ್ಯಾನಿಲಯದ ಉಪಕುಲಪತಿಯ ಹಾಗೂ ಸೆನೆಟ್ ಮತ್ತಿತರ ಸಂಸ್ಥೆಗಳ ಅಭಿಪ್ರಾಯಗಳನ್ನು ಬದಿಗೆ ತಳ್ಳಿದ್ದರು.

ಇದೀಗ ಪದಚ್ಯುತ ಮುಖ್ಯಮಂತ್ರಿ ನಿಲಂಗೇಕರ್ ಅವರ ಪುತ್ರಿಯ ಅಂಕಪಟ್ಟಿ ಹಗರಣದಲ್ಲಿ ಸಿಲುಕಿಕೊಂಡ ಕೋನಾ ಪ್ರಭಾಕರ ರಾವ್ ಅವರ ಚರಿತ್ರೆಯೂ ಶುದ್ಧವಿಲ್ಲ. ಅವರು ಸ್ವಲಾಭಕ್ಕಾಗಿ ಶಿಕ್ಷಣ ರಂಗದಲ್ಲಿ ಹಸ್ತಕ್ಷೇಪಿಸಿದ್ದು ಇದೇನೂ ಮೊದಲಲ್ಲ. ಅವರು ಪಾಂಡಿಚೇರಿಯ ಮೆಡಿಕಲ್ ಕಾಲೇಜಿನಲ್ಲಿ ತಮ್ಮ ಮೊಮ್ಮಗಳಿಗೆ ಖೋಟಾ ಜಾತಿ ಸರ್ಟಿಫಿಕೇಟಿನ ಬಲದಿಂದ ಮೀಸಲಾತಿ ಸೀಟೊಂದನ್ನು ದೊರಕಿಸಿದರು ಎಂಬ ಆರೋಪವಿದೆ. ಈ ಸರ್ಟಿಫಿಕೇಟನ್ನು ಅವರು ಸಿಕ್ಕಿಮ್‌ನ ರಾಜ್ಯಪಾಲರಾಗಿದ್ದಾಗ ಅಲ್ಲಿನ ಸರಕಾರದಿಂದ ಪಡೆಯಲಾಯಿತೆಂಬ ವರದಿಗಳಿವೆ. ಪ್ರಸ್ತುತ ಪ್ರಕರಣದಲ್ಲಿ ಕೋನಾ ಪ್ರಭಾಕರ ರಾಯರು ಮುಂಬಯಿ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರರನ್ನು ರಾಜಭವನಕ್ಕೆ ಕರೆಸಿಕೊಂಡರು. ಅಲ್ಲಿ ರಾಜ್ಯದ ಎಡ್ವೊಕೇಟ್ ಜನರಲ್ ಹಾಜರಿದ್ದರು. ಅಂಕಪಟ್ಟಿ ಹಗರಣದಲ್ಲಿ ವಿಶ್ವವಿದ್ಯಾನಿಲಯವು ಸಲ್ಲಿಸಿದ ಅಫಿದಾವಿತನ್ನು ಹಿಂದೆ ಪಡೆಯುವಂತೆ ರಿಜಿಸ್ಟ್ರಾರರಿಗೆ ರಾಜ್ಯಪಾಲರ ಸಮಕ್ಷಮದಲ್ಲಿ ಸೂಚಿಸಲಾಯಿತು. ವಿಶ್ವವಿದ್ಯಾಲಯದ ವಕೀಲರನ್ನು ಬದಲಾಯಿಸುವಂತೆಯೂ ಹೇಳಲಾಯಿತು.

ಮುಂಬಯಿ ವಿಶ್ವವಿದ್ಯಾನಿಲಯದ ಸೆನೆಟ್ ತನ್ನ ನಿರ್ಣಯದ ಮೂಲಕ ಕೆಲವು ಮೌಲ್ಯಗಳನ್ನೂ ಸಾರ್ವಜನಿಕ ಜೀವನದ ಒಳ್ಳೆಯ ನೀತಿ ನಡವಳಿಕೆಗಳನ್ನೂ ಎತ್ತಿ ಹಿಡಿದಿದೆ. ಸಾರ್ವಜನಿಕ ಬದುಕನ್ನು ನಡೆಸುತ್ತಿರುವ ಜನಗಳು ಹೇಗಿರಬೇಕು ಎಂದು ಮಾರ್ಗದರ್ಶನ ಮಾಡಿದೆ. ವೈಯಕ್ತಿಕ ಜೀವನದಲ್ಲಿ ಶುಚಿತ್ವಕ್ಕೆ ಬದ್ಧರಾದವರು ಸಾರ್ವಜನಿಕ ಜೀವನದಲ್ಲಿ ಮೌಲ್ಯಗಳ ಬಗ್ಗೆ ಕಾಳಜಿಯುಳ್ಳವರು ಈ ಮೌಲ್ಯಪಂಕ್ತಿಯನ್ನು ಗೌರವಿಸಬೇಕು. ಪಾಲಿಸಬೇಕು. ತನ್ನ ಕೊಳಕ ಕೈಗಳಿಂದ ವಿಶ್ವವಿದ್ಯಾನಿಲಯವೊಂದಕ್ಕೆ ಕೆಸರು ಮೆತ್ತಿರುವ ಕೋನಾ ಪ್ರಭಾಕರರಾಯರು ರಾಜ್ಯಪಾಲ ಹುದ್ದೆಯನ್ನು ತೊರೆದು ಮತ್ತೆ ಖಾಸಗಿ ಬದುಕಿಗೆ ಮರಳುವುದರಿಂದ ಮಾತ್ರ ಇಂತಹ ಗೌರವವನ್ನು ಸಲ್ಲಿಸುವುದು ಸಾಧ್ಯ.

ಮುಂಗಾರು
ಶುಕ್ರವಾರ, ಮಾರ್ಚ್ 28, 1986

ರಾಜಕೀಯ ಪರಿಹಾರ ಆಗಿಲ್ಲ

ಪಂಜಾಬು ಮತ್ತೆ ಹೊತ್ತಿ ಉರಿಯ ತೊಡಗಿದೆ. ಈಗ್ಗೆ ಕೆಲವು ತಿಂಗಳುಗಳ ಹಿಂದೆ ರಾಜೀವ್ ಗಾಂಧಿ-ಲೋಂಗೋವಾಲ್ ನಡುವೆ ಪಂಜಾಬಿನ ಸಮಸ್ಯೆಗಳ ನಿವಾರಣೆಗೆ ಒಡಂಬಡಿಕೆಯಾದಾಗ ಒಂದೊಮ್ಮೆಗೆ ನಿಂತು ಹೋದ ಉಗ್ರಗಾಮಿಗಳ ಹಿಂಸಾಚರಣೆ ಇದೀಗ ಮತ್ತೆ ಭುಗಿಲೆದ್ದಿದೆ. ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಸುರ್ಜಿತ್ ಸಿಂಗ್ ಬರ್ನಾಲಾ ಅವರ ಅಕಾಲಿದಳ ಸರಕಾರಕ್ಕೆ ಇತ್ತೀಚೆಗಂತೂ ಒಂದು ದಿನವೂ ಮನಶ್ಶಾಂತಿ ಇಲ್ಲವಾಗಿದೆ. ಆ ಸರಕಾರ ದುರ್ಬಲವಾಗಿದೆ. ಸಿಕ್ಖ್ ಉಗ್ರವಾದಿಗಳಿಗೆ ಬಲ ಬಂದಿದೆ.

ಇತ್ತೀಚಿನ ದಿನಗಳಲ್ಲಿ ಪಂಜಾಬಿನ ನಗರಗಳಾದ ಜಲಂಧರ್, ಬಟಾಲಾ, ಮುಕ್ತ್ಸರ್, ಪಾಟಿಯಾಲಾ, ಚಂಡೀಗಢ, ಆನಂದಪುರ ಸಾಹಿಬ್ ಮುಂತಾದ ಹಲವೆಡೆ ಹಿಂಸಾಚರಣೆ ನಡೆದಿದೆ. ಅಮೃತಸರದಲ್ಲಿರುವ ಸಿಕ್ಖರ ಪರಮ ಧಾರ್ಮಿಕ ಕೇಂದ್ರವಾದ ಸ್ವರ್ಣದೇವಾಲಯವು ಖಾಲಿಸ್ತಾನ ವಾದಿಗಳ ಪ್ರಾತಿನಿಧಿಕ ಸಂಸ್ಥೆಗಳಾಗಿ ಉದಯಿಸಿರುವ ದಮ್ ದಮಿ ತಕ್ಸಾಲ್ ಹಾಗೂ ಅ. ಭಾ. ಸಿಕ್ಖ್ ವಿದ್ಯಾರ್ಥಿ ಫೆಡರೇಶನಿನ ಸಶಸ್ತ್ರ ಕಾರ್ಯಕರ್ತರ ವಶದಲ್ಲಿದೆ. ಪಂಜಾಬು ವಿಧಾನಸಭೆಗೆ ಮುತ್ತಿಗೆ ಹಾಕುವ ಸಂಯುಕ್ತ ಅಕಾಲಿದಳದ ಕಾರ್ಯಾಚರಣೆಯ ಪರಿಣಾಮವಾಗಿ ಮೊನ್ನೆ ಮೊನ್ನೆ ದೊಡ್ಡ ಹಿಂಸಾಕಾಂಡ ನಡೆಯಿತು. ಅಲ್ಲಿ ಮುಖ್ಯಮಂತ್ರಿ ಬರ್ನಾಲಾ, ಅವರ ಸಹೋದ್ಯೋಗಿಗಳು ಹಾಗೂ ಶಾಸಕರು ಅನೇಕ ಗಂಟೆಗಳ ಕಾಲ ವಸ್ತುತಃ ಬಂದಿಗಳಾದರು. ಆನಂದಪುರ ಸಾಹಿಬ್‌ನಲ್ಲಿ ಬುಧವಾರ ಬರ್ನಾಲಾ ಮತ್ತು ಸಹೋದ್ಯೋಗಿಗಳ ಕೊಲೆಗೆ ಹೋಳಿ ಆಚರಣೆ ಸಭೆಯಲ್ಲಿ ಉಗ್ರಗಾಮಿಗಳು ಯತ್ನಿಸಿದರು. ಅದರ ಪರಿಣಾಮ ಪೊಲೀಸ್ ಕಾರ್ಯಾಚರಣೆ, ಗೋಲೀಬಾರು, ಅನೇಕ ಜೀವ ಬಲಿ.

ಇದೀಗ ಕಮ್ಯೂನಿಸ್ಟ್ ನಾಯಕರೊಬ್ಬರನ್ನು ಕೊಂದ ವಾರ್ತೆ ಬಂದಿದೆ. ಉಗ್ರಗಾಮಿಗಳು ಸಂಶಯಿತರನ್ನು ಹೆಕ್ಕಿ ಹೆಕ್ಕಿ ಕೊಲ್ಲುತ್ತಿದ್ದಾರೆ. ತಮ್ಮ ವಿರೋಧಿಗಳು, ಅಲ್ಪಸಂಖ್ಯಾತರ ಪ್ರತಿನಿಧಿಗಳು, ಧರ್ಮನಿಷ್ಠರುಗಳು ಉಗ್ರಗಾಮಿಗಳ ಬಗ್ಗೆ ಸುಳಿವು ಕೊಡುವರೆಂದು ಸಂಶಯವಾದವರನ್ನು ಹುಡುಕಿ ಕೊಲ್ಲುತ್ತಿದ್ದಾರೆ.

ಬಟಾಲಾದಲ್ಲಿ ರಸ್ತೆ ತಡೆ ಚಳವಳಿಯ ನೆಪದಲ್ಲಿ ಕೋಮು ಹಿಂಸೆಯನ್ನು ಬಡಿದೆಬ್ಬಿಸುವ ಯತ್ನ ನಡೆಯಿತು. ಆ ಪಟ್ಟಣವನ್ನು ಉಗ್ರಗಾಮಿಗಳು ದಿನಗಟ್ಟಲೆ ತಮ್ಮ ವಶ ಇರಿಸಿಕೊಂಡಿದ್ದರು. ಈ ಪ್ರವೃತ್ತಿ ಇಡೀ ಪಂಜಾಬಿಗೆ ವ್ಯಾಪಿಸುತ್ತಿದೆ. ಅಲ್ಲಿ ಹಲವು ಕಡೆ ಕೋಮು ಗಲಭೆಗಳಾಗಿವೆ. ಹಿಂದೂ-ಸಿಕ್ಖರಲ್ಲಿ ದ್ವೇಷ ಹುಟ್ಟಿಸಿ, ಪಂಜಾಬನ್ನು ರಣರಂಗವನ್ನಾಗಿ ಮಾಡಿ ಕೋಮು ದ್ವೇಷದ ದಾವಾನಲ ಪಂಜಾಬಿನ ಗಡಿಯನ್ನು ದಾಟಿ ಹೊರಗೂ ಹಬ್ಬಬೇಕೆಂಬುದೇ ಸಿಕ್ಖ್ ಮತಾಂಧರ ಆಶಯವಿರುವಂತೆ ಕಾಣಿಸುತ್ತದೆ. ಈ ಮೂಲಕ ತಮ್ಮ ರಾಜಕೀಯ ಧ್ಯೇಯೋದ್ದೇಶಗಳನ್ನು ಸ್ಥಾಪಿಸಿಕೊಳ್ಳುವ ಇರಾದೆ ಅವರದಾಗಿರುವಂತಿದೆ.

ಈ ತಂತ್ರಗಾರಿಕೆಯಲ್ಲಿ ಅವರು ಗೆಲ್ಲುತ್ತಿರುವ ಸೂಚನೆಗಳೂ ಇವೆ. ಪಂಜಾಬು ಕುರುಕ್ಷೇತ್ರವಾಗುತ್ತಿದೆ. ದೇಶದ ರಾಜಧಾನಿ ದೆಹಲಿಯಲ್ಲಿಯೂ ವಾತಾವರಣ ಸುಗಮವಿಲ್ಲವೆಂಬ ವರದಿಗಳಿವೆ. ಜನರು ಬೀದಿಗಿಳಿಯಲು ಭಯಪಡುವ ಪರಿಸ್ಥಿತಿ ಅಲ್ಲಿ ನಿರ್ಮಾಣಗೊಳ್ಳುತ್ತಿದೆ. ಯಾವ ಕ್ಷಣಕ್ಕೂ ಹಿಂದೂ-ಸಿಕ್ಖ್ ಹಿಂಸೆಯ ದಾವಾನಲವು ಇಂದಿರಾಗಾಂಧಿ ಕೊಲೆಯ ಹಿನ್ನೆಲೆಯಲ್ಲಿ ಆಸ್ಫೋಟಗೊಂಡಂತೆ ಹುಟ್ಟಿಕೊಳ್ಳುವ ಸಂಭಾವ್ಯತೆಯನ್ನು ಅಲ್ಲಗಳೆಯುವಂತಿಲ್ಲ.

ಇಂದು ಪಂಜಾಬಿನ ಬರ್ನಾಲಾ ಸರಕಾರ ಇಕ್ಕಟ್ಟಿನಲ್ಲಿದೆ. ಯಾವುದೇ ಕ್ಷಣಕ್ಕೆ ಅದು ಕುಸಿದು ಬೀಳಬಹುದು ಎಂಬ ಪರಿಸ್ಥಿತಿ ಇದೆ. ಅಕಾಲಿದಳದ ಒಳಗೆ ಈ ಸರಕಾರಕ್ಕೆ ವಿರೋಧಿಗಳಿದ್ದಾರೆ. ಸರಕಾರ ಇಕ್ಕಟ್ಟಿನಲ್ಲಿ ಸಿಲುಕಾಡುವುದನ್ನು ಕಂಡು ಖುಷಿಪಡುವ ಇರಾದೆ ಅಂಥವರಿಗೆ ಇರಬಹುದು. ಉಗ್ರಗಾಮಿಗಳ ಜತೆ ತೆರೆಯ ಮರೆಯಲ್ಲಿ ಅವರು ಶಾಮೀಲೂ ಆಗಿರಬಹುದು. ಇದರಿಂದೆಲ್ಲಾ ಪಂಜಾಬಿಗೂ ಇಡಿಯ ದೇಶಕ್ಕೂ ಯಾವ ರೀತಿಯ ಹಾನಿ ಉಂಟುಮಾಡುತ್ತಿದ್ದೇವೆ ಎಂಬ ಪರಿವೆ ಅವರಿಗಿದ್ದಂತಿಲ್ಲ.

ಪಂಜಾಬಿನ ಸಮಸ್ಯೆ ಪಂಜಾಬಿಗೆ ಮಾತ್ರವೇ ಸೀಮಿತವಾದ್ದಲ್ಲ. ಅದು ಕಾನೂನು ಮತ್ತು ಶಾಂತಿ ಪಾಲನೆಗೆ ಮಾತ್ರವೇ ಸೀಮಿತವಾದ್ದಲ್ಲ. ಆದ್ದರಿಂದ ಪಂಜಾಬಿನ ಒಳಗೇ ಅದನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಪೊಲೀಸರಿಂದಲೂ ಮಿಲಿಟರಿಯಿಂದಲೂ ಈ ಬಿಕ್ಕಟ್ಟು ಬಗೆ ಹರಿಯದು. ರಾಷ್ಟ್ರಪತಿ ಆಳ್ವಿಕೆಯೂ ಪರಿಹಾರ ತಾರದು. ಇದೊಂದು ರಾಜಕೀಯ ಸಮಸ್ಯೆ. ಅದು ರಾಷ್ಟ್ರೀಯ ಸ್ವರೂಪದ್ದಾಗಿದೆ. ಅದು ಇಡಿಯ ಸಿಕ್ಖ್ ಸಮುದಾಯವನ್ನು ಈ ದೇಶದ ಪ್ರಜಾ ಸಮುದಾಯ ನಡೆಸಿಕೊಳ್ಳುವ ರೀತಿಗೆ ಸಂಬಂಧಿಸಿದ್ದಾಗಿದೆ. ಅವರು ಮುಂದಿಟ್ಟಿರುವ ಬೇಡಿಕೆಗಳಿಗೆ ಸಂಬಂಧಿಸಿದ್ದಾಗಿದೆ. ಅವರು ಧ್ವನಿ ಕೊಟ್ಟಿರುವಂತಹ ಈ ದೇಶದ ಹಲವು ಪ್ರದೇಶಗಳ, ಹಲವು ಜನ ಸಮುದಾಯಗಳವರು ಆಸೆ ಪಟ್ಟಿರುವಂತಹ ಭವಿಷ್ಯತ್ ವ್ಯವಸ್ಥೆಗೆ ಸಂಬಂಧಪಟ್ಟಂತಹದ್ದಾಗಿದೆ.

ಪಂಜಾಬು ಹಿಂಸೆಯ ಅಗ್ನಿಕುಂಡವಾಗಿ ಪರಿವರ್ತಿತವಾಗಿ ಸುಮಾರು ಒಂದು ದಶಕವೇ ಆಗಿದೆ. ಸಿಕ್ಖರ ಬೇಡಿಕೆಗಳು ಹಲವು ರೂಪಗಳಲ್ಲಿ ಹಲವು ಬಾರಿ ಈ ದೇಶದ ಜನರ ಮುಂದೆ ಬಂದಿವೆ. ಈ ಹೋರಾಟ ಅಂತರರಾಷ್ಟ್ರೀಯ ಆಯಾಮವನ್ನು ಪಡೆದುಕೊಂಡಿದೆ. ಇದು ಬಹುತೇಕವಾಗಿ ಹಿಂಸೆಯ ಹಾಗೂ ಭಯೋತ್ಪಾದಕತೆಯ ಮಗ್ಗುಲುಗಳನ್ನು ಹೊಂದಿವೆ ಎಂಬುದಂತೂ ನಿಜ. ಅದರ ಜತೆಗೆಯೇ ಈ ಹೋರಾಟಕ್ಕೆ ರಾಜಕೀಯ ಧ್ಯೇಯೋದ್ದೇಶಗಳೂ ಇವೆ.

ಈ ಧ್ಯೇಯೋದ್ದೇಶಗಳಿಗೆ ರಾಜೀವ್-ಲೋಂಗೋವಾಲ್ ಒಡಂಬಡಿಕೆಯಲ್ಲಿ ಕೊಂಚಮಟ್ಟಿಗಾದರೂ ಪರಿಹಾರಗಳನ್ನು ಸೂಚಿಸಲಾಗಿದೆ. ಅದನ್ನು ಪಂಜಾಬಿನ ಸಿಕ್ಖ್ ಸಮುದಾಯ ಒಪ್ಪಿಕೊಂಡ ಸೂಚನೆಗಳು ಅಕಾಲಿದಳವು ಗೆದ್ದ ಚುನಾವಣೆಯಲ್ಲಿ ಕಂಡು ಬಂದವು.

ಆದರೆ ಕೇಂದ್ರ ಸರಕಾರದ ನಮ್ಮ ನಾಯಕರು ಅಲ್ಲಿಗೇ ನಿಂತುಬಿಟ್ಟರು. ಅಕಾಲಿದಳಕ್ಕೆ ಅಧಿಕಾರ ಬಂದದ್ದೇ ಸಿಕ್ಖರ ಸಮಸ್ಯೆಗೆ ಪರಿಹಾರವೆಂಬ ತೀರ್ಮಾನಕ್ಕೆ ಅವರು ಬಂದಂತಿದೆ. ಪಂಜಾಬು ಒಡಂಬಡಿಕೆಯ ವಿಧಿಗಳ ಅನುಷ್ಠಾನ ಅಲ್ಲಿಗೇ ನಿಂತುಬಿಟ್ಟಿದೆ. ಚಂಡೀಗಢದ ವರ್ಗಾವಣೆ ಆಗಿಲ್ಲ. ಇತರ ಕೆಲಸಗಳೂ ಕುಂಟುತ್ತಿವೆ.

ಇದೊಂದು ರಾಷ್ಟ್ರೀಯ ಸಮಸ್ಯೆ. ಅದಕ್ಕೆ ರಾಷ್ಟ್ರೀಯ ಪರಿಹಾರವೇ ಬೇಕು. ಪಂಜಾಬು ಸಮಸ್ಯೆಯು ತಂದಿರುವ ಪ್ರಶ್ನೆಗಳು ಹಲವಾರು. ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕೆ ಸರಕಾರ ಇಡಿಯ ರಾಷ್ಟ್ರವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಇಂದಿನ ಪಂಜಾಬ್ ಸಮಸ್ಯೆ ನಿವಾರಣೆ ಮಾತ್ರವೇ ಅಲ್ಲದೆ ಮುಂದೆ ಅಂತಹ ಸಮಸ್ಯೆಗಳು ಬಾರದಂತೆ ವ್ಯವಸ್ಥೆ ಮಾಡುವ ರಾಜಕೀಯ ಪರಿಹಾರವನ್ನು ದೇಶದ ನಾಯಕತ್ವ ಕಂಡುಕೊಳ್ಳಬೇಕು. ಅಂತಹ ಮುತ್ಸದ್ದಿತನವನ್ನು ದೂರದೃಷ್ಟಿಯ ರಾಜಕೀಯ ಬುದ್ಧಿಮತ್ತೆಯನ್ನು ಅದು ಪ್ರದರ್ಶಿಸಬೇಕು. ಅಂತಹ ಪರಿಹಾರದ ದಾರಿಯಲ್ಲಿ ಈ ದೇಶದ ರಾಜಕೀಯ ಚೌಕಟ್ಟಿನಲ್ಲಿ ಬದಲಾವಣೆಗಳ ಅಗತ್ಯವಿದ್ದರೆ ಅದನ್ನೂ ಮಾಡಲು ಹಿಂಜರಿಯಬಾರದು. ಯಾಕೆಂದರೆ ಇಂದಿನ ಈ ವ್ಯಾಧಿಗೆ ಅಂತಹುದೇ ಪರಿಹಾರದ ಅಗತ್ಯವುಂಟು.

ಮುಂಗಾರು

ಶನಿವಾರ, ಮಾರ್ಚ್ 29, 1986

ಅನ್ಯಾಯ ಪಕ್ಷಪಾತಿ ಅಮೆರಿಕ

ಭೂಮಧ್ಯ ಸಮುದ್ರದ ಸಿದ್ರಾಕೊಲ್ಲಿಯಲ್ಲಿ ಅಮೆರಿಕದ ನೌಕಾಪಡೆಗೂ ಲಿಬಿಯದ ಸೈನ್ಯಕ್ಕೂ ಘರ್ಷಣೆ ನಡೆದಿದೆ. ಅಮೆರಿಕದ ನೌಕೆಗಳು ಕೊಲ್ಲಿಯಲ್ಲಿ ಲಿಬಿಯದ ತೀರದ ತನಕ ಬಂದಿವೆ. ಲಿಬಿಯಕ್ಕೆ ಬೇರೆಲ್ಲಾ ದೇಶಗಳಿಗೆ ಇರುವಂತೆ 12 ಮೈಲುಗಳ ಪ್ರದೇಶ ಮಾತ್ರ ಅವರ ಹಕ್ಕಿನದ್ದು ಎಂದು ಅಮೆರಿಕ ಹೇಳುತ್ತಿದೆ. ಅದನ್ನು ಲಿಬಿಯದ ನಾಯಕ ಕರ್ನಲ್ ಮುಅಮ್ಮರ್ ಗಡ್ಡಾಫಿಯವರಿಗೆ ತಿಳಿಸಿ ಹೇಳುವುದಕ್ಕೆ ಈ ಕಾರ್ಯಾಚರಣೆಯನ್ನು ಅಮೆರಿಕ ನಡೆಸಿದೆ.

ಇಡೀ ಸಿದ್ರಾಕೊಲ್ಲಿ ತನಗೆ ಸೇರಿದೆ ಎಂಬುದು ಲಿಬಿಯದ ವಾದ. ಅದರಂತೆ ಗಡ್ಡಾಫಿ "ಮೃತ್ಯು ರೇಖೆ"ಯೊಂದನ್ನು ಎಳೆದಿದ್ದಾರೆ. ಅದನ್ನು ದಾಟಿ ಬಂದವರನ್ನು ಶಿಕ್ಷಿಸುವ ಪ್ರತಿಜ್ಞೆಯನ್ನು ಅವರು ಮಾಡಿದ್ದಾರೆ. ಮೊನ್ನೆ ನಡೆದ ಕಾರ್ಯಾಚರಣೆಯಲ್ಲಿ ಅಮೆರಿಕ ಅದನ್ನೇ ಮಾಡಿದೆ. ಅಷ್ಟೇ ಅಲ್ಲದೆ ಅಧ್ಯಕ್ಷ ರೇಗನ್ ಅಧಿಕಾರಕ್ಕೆ ಬಂದ ಮೇಲೆ ಹತ್ತಾರು ಬಾರಿ ಆ ರೇಖೆಯನ್ನು ಅಮೆರಿಕದ ಯುದ್ಧ ನೌಕೆಗಳು ದಾಟಿವೆ. ಇದೇ ಕಾರಣಕ್ಕೆ 1981ರ ಆಗಸ್ಟ್‌ನಲ್ಲಿ ಸಿದ್ರಾಕೊಲ್ಲಿಯಲ್ಲಿ ಸಣ್ಣ ಘರ್ಷಣೆ ನಡೆದಿತ್ತು. ಲಿಬಿಯದ ಎರಡು ವಿಮಾನಗಳನ್ನು ಅಮೆರಿಕದ ನೌಕಾಪಡೆ ಹೊಡೆದುರುಳಿಸಿತ್ತು.

ಈ ಎಲ್ಲಾ ವಿದ್ಯಮಾನಗಳ ಮೂಲ ಪ್ಯಾಲೆಸ್ಟೀನಿಯರ ಸಮಸ್ಯೆ. ತಮ್ಮ ತಾಯ್ನೆಲಕ್ಕಾಗಿ ಅನೇಕ ದಶಕಗಳಿಂದ ಈ ಹತಭಾಗ್ಯ ಮಂದಿ ಹೋರಾಟ ನಡೆಸುತ್ತಿದ್ದಾರೆ. ಈ ಹೋರಾಟಕ್ಕೆ ಹಲವು ಮಗ್ಗುಲುಗಳಿವೆ. ಭಯೋತ್ಪಾದಕತೆಯನ್ನೂ ಪ್ಯಾಲೆಸ್ಟೀನಿಯರ ಕೆಲವು ಗುಂಪುಗಳು ಅನುಸರಿಸಿವೆ. ಅಬು ನಿದಾಲ್ ಅವರ ಇಂತಹ ಒಂದು ಗುಂಪಿಗೆ ಲಿಬಿಯವೇ ನೆಲೆಯೆಂದು ಅಧ್ಯಕ್ಷ ರೇಗನ್ ನಂಬಿದ್ದಾರೆ. ಈ ಗುಂಪಿನ ದಾಳಿ ಇಸ್ರೇಲಿನ ವಿರುದ್ಧ ಮಾತ್ರವಲ್ಲದೆ ಅಮೆರಿಕದ ಮೇಲೂ ನಡೆದಿದೆ.

ಕಳೆದ ಡಿಸೆಂಬರ್‌ನಲ್ಲಿ ವಿಯೆನ್ನಾ ಹಾಗೂ ರೋಮ್ ವಿಮಾನ ನಿಲ್ದಾಣಗಳಲ್ಲಿ ಭಯೋತ್ಪಾದಕರ ದಾಳಿ ನಡೆಯಿತು. ಇಟಲಿ ನೌಕೆ ಅಕಿಲಸ್ ಲೌರೋ ಭಯೋತ್ಪಾದಕರ ವಶವಾಯಿತು. ಅದರಲ್ಲಿರುವ ಒಬ್ಬ ಅಮೆರಿಕನ್ ಪ್ರಯಾಣಿಕರನ್ನು ಕೊಲ್ಲುವ ಬೆದರಿಕೆ ಹಾಕಲಾಯಿತು.

ಇವೆಲ್ಲವೂ ಲಿಬಿಯದ ನಾಯಕ ಗಡ್ಡಾಫಿಯವರ ಕುಮ್ಮಕ್ಕಿನಿಂದ ನಡೆಯುತ್ತಿದೆ ಎಂದು ರೇಗನ್ ತಿಳಿದುಕೊಂಡರು. ಅವರು ಗಡ್ಡಾಫಿ ಮೇಲೆ ಹರಿಹಾಯ್ದರು. ಗಡ್ಡಾಫಿಗೆ ಪಾಠ ಕಲಿಸುವುದಾಗಿ ಬೆದರಿಸಿದರು. ಭೂಮಧ್ಯ ಸಮುದ್ರಕ್ಕೆ ನೌಕಾಪಡೆಯನ್ನು ಕಳಿಸಿದರು. ಲಿಬಿಯದ ಮೇಲೆ ಆರ್ಥಿಕ ವಿಧಿ ನಿಷೇಧಗಳನ್ನು ಹೇರಿದರು. ಲಿಬಿಯದಲ್ಲಿರುವ ಅಮೆರಿಕದ ನಾಗರಿಕರೆಲ್ಲರೂ ತಕ್ಷಣ ವಾಪಸಾಗಬೇಕೆಂದು ತಾಕೀತು ಮಾಡಿದರು.

ಈಗ ಸಿದ್ರಾಕೊಲ್ಲಿಯಲ್ಲಿ ಘರ್ಷಣೆ ಆಸ್ಫೋಟಿಸಲು ಅಮೆರಿಕವು ಅಲ್ಲಿಗೆ ನೌಕಾಪಡೆ ಕಳಿಸಿದ್ದೇ ಕಾರಣ. ಮೂರು ವಿಮಾನ ವಾಹಕಗಳ ಸಹಿತ ಮೂವತ್ತು ಯುದ್ಧ ನೌಕೆಗಳನ್ನು ಅಲ್ಲಿಗೆ ಕಳಿಸಲಾಗಿತ್ತು. ಹತ್ತು ದಿನಗಳ ಅಣಕು ಯುದ್ಧದ ಕಾರ್ಯಾಚರಣೆಗಾಗಿ ಈ ಕ್ರಮ. ಇದೆಲ್ಲ ಸಬೂಬು ಅಷ್ಟೆ. ಗಡ್ಡಾಫಿಯವರನ್ನು ಕಾಲುಕೆರೆದು ಜಗಳಕ್ಕೆ ಎಳೆದು ಹೊಡೆತ ನೀಡಿ ಮುಖಭಂಗಗೊಳಿಸುವ ಹುನ್ನಾರು ಅಷ್ಟೆ. ಗಡ್ಡಾಫಿ ಇಡೀ ಕೊಲ್ಲಿ ತನ್ನದೆಂದದ್ದು ಉದ್ಧಟತನವೇ ಇರಬಹುದು. "ಮೃತ್ಯು ರೇಖೆ" ಎಳೆದದ್ದು ಅಧಿಕಪ್ರಸಂಗಿತನವಿರಬಹುದು. ಬೇರಾವ ದೇಶವೂ ಇದನ್ನೆಲ್ಲ ಗಣನೆಗೇ ತೆಗೆದುಕೊಂಡಿಲ್ಲ. ಮೃತ್ಯು ರೇಖೆಯನ್ನು ದಾಟಿ ಲಿಬಿಯದ 'ಬಾಯಿಗೆ ಕೋಲು ತುರುಕಿ' ಕೆಣಕುವ ಕೆಲಸ ಮಾಡಿಲ್ಲ. ಅದನ್ನು ಅಮೆರಿಕದ ರೇಗನ್ ಮಾಡಿದ್ದಾರೆ. ರೇಗನ್‌ರ ಅಧಿಕ ಪ್ರಸಂಗವು ಗಡ್ಡಾಫಿಯವರದಕ್ಕಿಂತ ಕಡಿಮೆಯದ್ದಲ್ಲ. ಒಂದು ತೂಕ ಹೆಚ್ಚಿನದ್ದೇ.

ಅಮೆರಿಕವು ಬಲಾಢ್ಯವಾದ ದೇಶ. ಇಡೀ ಪ್ರಪಂಚದಲ್ಲಿ ಶಾಂತಿ ಸುವ್ಯವಸ್ಥೆ ಏರ್ಪಡಿಸುವ ಹೊಣೆಗಾರಿಕೆ ಎಲ್ಲರಿಗಿಂತ ಅದಕ್ಕೆ ಹೆಚ್ಚಿದೆ. ಅದು ಹೊಣೆಗಾರಿಕೆಯಿಂದ ವ್ಯವಹರಿಸಬೇಕು. ಘನತೆಗಾಂಭೀರ್ಯ ಸಹಿತ ಕೆಲಸಮಾಡಬೇಕು. ಇಂದು ಅದು ಸಿದ್ರಾಕೊಲ್ಲಿಯಲ್ಲಿ ನಡೆಸಿರುವುದು ಪುಂಡು ಪೋಕರಿತನದ ಕೆಲಸ. ಅಮೆರಿಕದಂತಹ ಪ್ರಜಾಪ್ರಭುತ್ವವೊಂದಕ್ಕೆ, ಬಲಾಢ್ಯ ದೇಶವೊಂದಕ್ಕೆ, ಜಾರ್ಜ್ ವಾಷಿಂಗ್ಟನ್, ಅಬ್ರಹಾಂ ಲಿಂಕನ್, ಥಾಮಸ್ ಜೆಫರ್‌ಸನ್, ಥಿಯೋಡೋರ್ ರೂಸ್‌ವೆಲ್ಟ್‌ರಂತಹ ಮುತ್ಸದ್ದಿಗಳು ಮುನ್ನಡೆಸಿದ ದೇಶಕ್ಕೆ ಹೇಳಿಸಿದಂತಹದ್ದಲ್ಲ.

ಅಮೆರಿಕ ಸಿದ್ರಾಕೊಲ್ಲಿಯಲ್ಲಿ ನಡೆಸಿದ ಪುಂಡಾಟಿಕೆಯಿಂದ ಪ್ಯಾಲೆಸ್ಟೀನಿಯರ ಭಯೋತ್ಪಾದಕತೆ ನಿಂತೀತೇ? ಲಿಬಿಯವು ಪ್ರತೀಕಾರ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಗಡ್ಡಾಫಿ ಈಗಾಗಲೇ ಹೇಳಿದ್ದಾರೆ. ಅವರಿಗೆ ಬೆಂಬಲ ನೀಡುವುದಾಗಿ ಪ್ಯಾಲೆಸ್ಟೀನ್ ಗೆರಿಲ್ಲಾ ನಾಯಕ ಅಬು ನಿದಾಲ್ ಸಾರಿದ್ದಾರೆ. ಇದರರ್ಥ ಅಮೆರಿಕದ ಹಾಗೂ ಇಸ್ರೇಲಿನ ವಿರುದ್ಧ ಗೆರಿಲ್ಲಾ ಕಾರ್ಯಾಚರಣೆ ಹೆಚ್ಚುವುದು ಎಂದೇ ಆಗಿದೆ.

ಭಯೋತ್ಪಾದಕತೆ ನಿವಾರಣೆಯ ದಾರಿಯು ಪುಂಡಾಟಿಕೆ ಅಲ್ಲ, ಅದಕ್ಕೆ ಮುತ್ಸದ್ದಿತನಬೇಕು. ನ್ಯಾಯಾನ್ಯಾಯ ವಿವೇಚನೆ ಬೇಕು. ಅಂಥ ನ್ಯಾಯ ಪಕ್ಷಪಾತವನ್ನು ಅಮೆರಿಕವು ಅನುಸರಿಸಿಕೊಂಡು ಬಂದಿದ್ದರೆ ಇಂದು ಪ್ರಪಂಚದಲ್ಲಿ ಅದರ ಮಾತು ಕೃತಿಗಳಿಗೆ ತೂಕ ಬರುತ್ತಿತ್ತು. ಅದು ದುರ್ಜನರ ಪಕ್ಷಪಾತಿಯೆನಿಸಿದ್ದರಿಂದಲೇ ಇಂದು ಅಂತ[illegible]ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಮಗುರಾ[illegible] ಅಮೆರಿಕವು ಇಸ್ರೇಲಿನ ಪರನಿಂತು ಪ್ಯಾಲೆಸ್ಟೀನಿ[illegible]ರಿಗೆ ಅನ್ಯಾಯ ಮಾಡಿದೆ. ದಕ್ಷಿಣ ಆಫ್ರಿಕದ[illegible] ಯರ ಪರನಿಂತು ಕರಿಯರ ಜನ್ಮಸಿದ್ಧ [illegible] ವಂಚನೆಗೆ ಕಾರಣವಾಗಿದೆ. ಮೂರನೆ ವಿಶ್ವದ [illegible] ದೇಶಗಳಲ್ಲಿ ಸರ್ವಾಧಿಕಾರಗಳನ್ನು [illegible] ಜನತಂತ್ರಕ್ಕೆ ಸಲ್ಲದ ಕಾರ್ಯಗಳನ್ನು ಮಾಡಿ[illegible]

ಅಂತರರಾಷ್ಟ್ರೀಯ ಶಾಂತಿ – ಸುವ್ಯ[illegible] ಪಾಲನೆಯ ಉದ್ದೇಶ ಅಮೆರಿಕಕ್ಕಿದ್ದ[illegible] ಮೊದಲು ನ್ಯಾಯಪಕ್ಷಪಾತಿಯಾಗಬೇಕು.

ಮುಂಗಾರು
ಭಾನುವಾರ, ಮಾರ್ಚ್ 30, 1986

ಸರ್ಕಾರಿ ಸಾಹಿತ್ಯ ಮಾಡಬೇಡಿ

ಸಾಹಿತ್ಯ ಅಕಾಡೆಮಿಗೆ ಪೂರ್ಣಾವಧಿ ಅಧ್ಯಕ್ಷರನ್ನು ನೇಮಿಸಬೇಕೆಂದು ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಕೆ. ಎಸ್. ನಿಸಾರ್ ಅಹಮದ್ ಅವರು ಸರಕಾರವನ್ನು ಒತ್ತಾಯಿಸಿರುವುದು ವರದಿಯಾಗಿದೆ.

ಇದು ಸಾಹಿತ್ಯದ ಆರೋಗ್ಯಕರವಾದ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯ ಸಲಹೆ ಏನೂ ಅಲ್ಲ. ಈಗ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಗೌರವದ ನೆಲೆಯಲ್ಲಿ ನೇಮಕಗೊಳ್ಳುವವರು. ಅವರಿಗೆ ಸರಕಾರ ಸಂಬಳ ಕೊಡುವುದಿಲ್ಲ. ಬದಲಾಗಿ ಅಕಾಡೆಮಿ ಸಭೆಗೆ ಹಾಜರು ಶುಲ್ಕ ಹಾಗೂ ಮಾಡಿದ ಪ್ರವಾಸಕ್ಕೆ ಭತ್ಯೆ ದೊರೆಯುತ್ತದೆ. ಅಧ್ಯಕ್ಷರನ್ನು ಪೂರ್ಣಾವಧಿ ನೆಲೆಯಲ್ಲಿ ಬಂದರೆ ಸರಕಾರವೇ ಸಾವಿರಗಟ್ಟಲೆ ಸಂಬಳ ಕೊಡಬಹುದು. ಕಾರು, ಸೇವಕರನ್ನೂ ಕೊಡಬಹುದು. ಕೆಲವರಾದರೂ ಸಾಹಿತಿಗಳಿಗೆ ಇಂತಹ ಸರಕಾರಿ ಸುಕ್ರೀಡೆಯನ್ನು ಒದಗಿಸುವ ಬಯಕೆ ನಿಸಾರ್ ಅಹಮದ್ ಅವರದಾಗಿರಬಹುದು. ಆದರೆ ಇದರಿಂದ ಆಗಬಹುದಾದ ವಿಕೃತಿಗಳ ಕಲ್ಪನೆ ಅವರಿಗಿರಲಿಲ್ಲ.

ಪೂರ್ಣಾವಧಿ ಅಧ್ಯಕ್ಷರಾಗಲು ಸರಕಾರ ಸಾಹಿತಿಗಳನ್ನು ಹುಡುಕುವಂತೆ ಮಾಡಬಹುದು. ನಿಜವಾದ ಸಾಹಿತಿಯಾದವರು ತಮ್ಮ ಸಾಹಿತ್ಯ ವ್ಯವಸಾಯವನ್ನು ಬದಿಗಿಟ್ಟು ಕಚೇರಿ ಕೆಲಸ ಮಾಡುವುದಕ್ಕೆ ಸಾಹಿತ್ಯದ ಆಡಳಿತಗಾರನಾಗಿ ಪತ್ರ ವ್ಯವಹಾರವನ್ನೂ ಹಣಕಾಸು ಲೆಕ್ಕವನ್ನೂ ಮಾಡುತ್ತ ಕುಳಿತಿರಲು ಸಮ್ಮತಿಸುವ ಸಂಭವ ಕಡಿಮೆ. ಆಯಕಟ್ಟಿನ ತಾಣಗಳಲ್ಲಿ ಸೇರಿಕೊಳ್ಳುವ ಇರಾದೆಯಿರುವ, ಅದಕ್ಕಾಗಿ ರಾಜಕೀಯ ಸೂತ್ರಗಳನ್ನೂ ಎಳೆಯಲು ತಯಾರಿರುವ ಮಂದಿ ಮಾತ್ರವೇ ಮುಂದಾಗಬಹುದು.

ಸರಕಾರಕ್ಕೆ ಇಂತಹವರೇ ಬೇಕಾದವರು. ತನಗೆ ಅನುಕೂಲರಾದವರನ್ನು ಅದು ಆಯ್ಕೆ ಮಾಡುವುದು ಖಂಡಿತ. ಯಾರನ್ನೋ ಹಿಡಿದು ಏನೋ ಮಾಡಿ ಕವನ ಸಂಕಲನವೊಂದನ್ನು ಪ್ರಕಟಿಸಿದ ಪೊಲೀಸಧಿಕಾರಿಯೂ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪೀಠದಲ್ಲಿ ಕುಳಿತು ಸಾಹಿತ್ಯ ಕ್ಷೇತ್ರವನ್ನು ಹೊಲಬುಗೆಡಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಇದರಿಂದ ಒಳ್ಳೆಯ ಸಾಹಿತ್ಯಕ್ಕೆ ಸರಕಾರದ ಆರೋಗ್ಯಕರ ಪ್ರೋತ್ಸಾಹ ದೊರೆಯದೇ ಹೋಗಿ [illegible] ಸಾಹಿತ್ಯವೇ ಸರ್ಕಾರಿ ಕೃಪಾಛತ್ರದಡಿಯಲ್ಲಿ ಟನ್ನುಗಟ್ಟಲೆ ಮುದ್ರಣಗೊಂಡು ಈ ರಾಜ್ಯದ ಸಾರ್ವಜನಿಕ ಗ್ರಂಥ ಭಂಡಾರಗಳಲ್ಲಿ ರಾರಾಜಿಸುವ ದಿನಗಳು ಬಂದಾವು. ಪೂರ್ಣಾವಧಿ ಸರಕಾರಿ ಸೇವೆಗೆ ಬರುವ ಅಕಾಡೆಮಿ ಅಧ್ಯಕ್ಷರಿಂದ ಜನಪರ ಸಾಹಿತ್ಯದ ಅಭಿವೃದ್ಧಿಗೆ ತಕ್ಕ ಪ್ರೋತ್ಸಾಹವನ್ನು ನಿರೀಕ್ಷಿಸಿದರೆ ಸಾಹಿತ್ಯ ಕ್ಷೇತ್ರ ಮೋಸ ಹೋಗಬೇಕಾದಿತು. ವಿಕೃತ ವಿಚಾರಗಳನ್ನು ಹೇಳುವ, ಆಳುವ ಪಕ್ಷದ ಸಾಧನೆಗಳನ್ನು ಸಾರುವ ಸರ್ಕಾರಿ ಪ್ರಚಾರ ಸಾಹಿತ್ಯ ಇಂತಹ ಅಕಾಡೆಮಿಯಿಂದ ಪುಂಖಾನುಪುಂಖವಾಗಿ ಬರಬಹುದು. ಅಂತಹ ಸಾಹಿತ್ಯಕ್ಕಾಗಿ ಸರಕಾರವೂ ಕೊಡುಗೈಯಿಂದ ಹಣಕೊಟ್ಟೀತು. ಇಂತಹ ವಿದ್ಯಮಾನವೇನೂ ಕಲ್ಪನೆಗೆ [illegible] ವಿಚಾರವಲ್ಲ. ವಿದೇಶದಲ್ಲೇ ಬದುಕು ಸವೆಸಿದ ಕನ್ನಡದ ಧೀಮಂತರೊಬ್ಬರಿಂದ ಚೆಲುವ ಕನ್ನಡ ನಾಡಿನ ವರ್ಣನೆ ಮಾಡಿಸಿದ ರಾಜ್ಯ ಸರಕಾರದ ಮಹಾಕಾರ್ಯ ಸಿಂಗಾಪೂರದಲ್ಲಿ ಮುದ್ರಣಗೊಂಡ 450 ರೂಪಾಯಿಗಳ ಬಿಳಿಯಾನೆ ರೂಪದಲ್ಲಿ ನಮ್ಮ ಮುಂದಿದೆ. ವಿಚಾರವಂತರೆಲ್ಲ ಒಳ್ಳೆಯ ಸಾಹಿತ್ಯದ ಬೆಳವಣಿಗೆ ಬಗ್ಗೆ ಆಸಕ್ತರಾದವರೆಲ್ಲ ಒಮ್ಮೆ ಈ ಉದ್ಗ್ರಂಥವನ್ನು ನೋಡಬೇಕು. ಸರಕಾರದ ಸಾಹಿತ್ಯ ಪ್ರೋತ್ಸಾಹದ ವಿಧಾನ ಇದಾದರೆ ಇಂತಹ ಪ್ರೋತ್ಸಾಹಬೇಕೇ ಎಂದು ಅವರು ಮರು ವಿಮರ್ಶೆ ಮಾಡಬೇಕು.

ಸಾಹಿತ್ಯವನ್ನು ಸರಕಾರದ ಗುಲಾಮಗಿರಿಗೊಪ್ಪಿಸುವ ಯಾವ ಪ್ರಯತ್ನವೂ ಬೇಡ. ಸಾಹಿತ್ಯ ಹಾಗೂ ಕಲೆಗಳ ಸ್ವಂತಿಕೆಯನ್ನೂ ಸ್ವಾಯತ್ತೆಯನ್ನೂ ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಮ್ಮ ವಿಚಾರವಂತರು ಆಲೋಚಿಸಬೇಕು. ಸಾಹಿತ್ಯದ ಆತ್ಮಗೌರವವನ್ನೂ ಸ್ವಾತಂತ್ರ್ಯವನ್ನೂ ಉಳಿಸಿಕೊಳ್ಳಬೇಕು. ಅಂತಹ ವಾತಾವರಣದಲ್ಲಿ ಮಾತ್ರ ಸಾಹಿತ್ಯವು ಚೈತನ್ಯದ ಬುಗ್ಗೆಯಾಗುತ್ತದೆ. ಜೀವರಸದಿಂದ ಪುಟಿಯುತ್ತದೆ. ಅಂತಹ ಸಾಹಿತ್ಯ ಮಾತ್ರ ಮನುಷ್ಯರಲ್ಲಿ ವಿವೇಚನಾ ಶಕ್ತಿಯನ್ನೂ ನ್ಯಾಯಾನ್ಯಾಯಗಳ ಬಗ್ಗೆ ಸ್ಪಷ್ಟವಾದ ತೀರ್ಮಾನದ ಸಾಮರ್ಥ್ಯವನ್ನೂ ಅನ್ಯಾಯವನ್ನೂ ಅಸತ್ಯವನ್ನೂ ಪ್ರತಿಭಟಿಸುವ ಆತ್ಮಬಲವನ್ನೂ ಕೊಡುತ್ತದೆ. ಸರಕಾರದ ಕೃಪಾಛತ್ರದಡಿಯಲ್ಲಿ ಬದುಕುವ ಸಾಹಿತ್ಯ ಕಲೆಗಳು ದುರ್ಬಲ ಬಲಹೀನವಾಗುತ್ತವೆ.

ಸಾಹಿತ್ಯವನ್ನು ಸರ್ಕಾರದ ಸುಕ್ರೀಡೆಯ ದಾಸನನ್ನಾಗಿ ಮಾಡುವ ಯಾವ ಪ್ರಯತ್ನವೂ ಸಲ್ಲದು.

ಈ ದಾರಿಯಲ್ಲಿ ನಿಸಾರ್ ಅಹಮದ್‌ರಂತಹವರು ಯೋಚಿಸಿದ್ದೇ ತಪ್ಪು. ಸರಕಾರದ ನೆರವು ಬರಲಿ, ಬೇಡ ಅನ್ನಬಾರದು. ಅದು ಪರೋಕ್ಷವಾಗಿರಲಿ. ಕನ್ನಡ ಭಾಷೆ-ಸಂಸ್ಕೃತಿ ಬೆಳೆದಾಗ ಸಾಹಿತ್ಯವೂ ಬೆಳೆಯುತ್ತದೆ. ಪತ್ರಿಕೋದ್ಯಮವೂ ಬೆಳೆಯುತ್ತದೆ. ಅಂತಹ ಭಾಷೆಯನ್ನು ವ್ಯವಹಾರದಲ್ಲಿ ವ್ಯಾಪಕವಾಗಿ ಬಳಕೆಗೆ ತರುವ ಬಗ್ಗೆ ಸರಕಾರ ಕೆಲಸ ಮಾಡಬೇಕು. ಭಾಷೆ-ಸಾಹಿತ್ಯಗಳಿಗೆ ಆದರ ನೆರವು ಈ ರೂಪದಲ್ಲಿರಬೇಕು.

ಮುಂಗಾರು
ಮಂಗಳವಾರ, ಏಪ್ರಿಲ್ 1, 1986

ಸೋರಿಕೆ ನಿಲ್ಲಿಸಿ

ಗ್ರಾಮೀಣ ಉದ್ಯೋಗ ಯೋಜನೆಯ ಅನುಷ್ಠಾನಕ್ಕೆ ಏಳನೆ ಯೋಜನೆಯಲ್ಲಿ ನಿಗದಿಯಾದ ಹಣವಲ್ಲದೆ ಒಟ್ಟು 20 ಲಕ್ಷ ಟನ್ ಧಾನ್ಯವನ್ನು ಮುಂದಿನ ವರ್ಷದಲ್ಲಿ ಉಚಿತವಾಗಿ ನೀಡಲು ಕೇಂದ್ರ ಸರಕಾರ ನಿರ್ಧರಿಸಿರುವುದು ವರದಿಯಾಗಿದೆ.

ಗ್ರಾಮೀಣ ಅಭಿವೃದ್ಧಿಗಾಗಿ ಸರಕಾರವು ಯೋಜನೆಯಲ್ಲಿ ರೂಪಿಸಿರುವ ಕೆಲವಾರು ಕಾರ್ಯಕ್ರಮಗಳು ಅತ್ಯಂತ ಮಹತ್ವದವುಗಳು. ಇವುಗಳು ಸೂಕ್ತವಾಗಿ ಹಾಗೂ ಸಂಪೂರ್ಣವಾಗಿ ಅನುಷ್ಠಾನಗೊಂಡರೆ ಗ್ರಾಮಗಳ ಮುಖವೇ ಬದಲಾಗುವುದು ಸಾಧ್ಯ. ಆದರೆ ಅದು ಆಗಿಲ್ಲ ಅನ್ನುವುದಕ್ಕೆ ಇಂದು ನಮ್ಮ ಹಳ್ಳಿಗಳ ಪೈಕಿ ಅನೇಕವು ಸಾಕ್ಷ್ಯ ಹೇಳುತ್ತವೆ. ಅಭಿವೃದ್ಧಿಯೇ ಆಗಿಲ್ಲವೆಂದಲ್ಲ. ಆಗಿರುವುದು ಕಡಿಮೆ. ಆಗದಿರುವುದೇ ಹೆಚ್ಚು.

ಗ್ರಾಮೀಣ ಅಭಿವೃದ್ಧಿಯ ಸ್ಥಿತಿಗತಿಯು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತ ಸಾಗಿದೆ. ಕೇರಳದಂತಹ ರಾಜ್ಯಗಳಲ್ಲಿ ಗ್ರಾಮಾಭಿವೃದ್ಧಿ ತುಲನಾತ್ಮಕವಾಗಿ ಉತ್ತಮವಿದ್ದರೆ ಕರ್ನಾಟಕದಲ್ಲಿ ಕುಂಟು ನಡೆಯಲ್ಲಿದೆ. ಸ್ಥಳೀಯ ಜನರಲ್ಲಿ ಉಮೇದು-ಉತ್ಸಾಹವಿದ್ದರೆ ಸರಕಾರದ ಕಾರ್ಯಕ್ರಮಗಳು ಜಾರಿಗೆ ಬರುತ್ತವೆ. ಅಧಿಕಾರಿಗಳು ಮನಸ್ಸಿಲ್ಲದಿದ್ದರೂ ಜನರ ಆಶಯಕ್ಕೆ ಬಗ್ಗಿ ಕೆಲಸ ಮಾಡಬೇಕಾಗುತ್ತದೆ. ಅಂತಹ ಜಾಗಗಳಲ್ಲಿ ಭ್ರಷ್ಟಾಚಾರಕ್ಕೂ ಅಕ್ರಮಗಳಿಗೂ ಅವಕಾಶ ಕಮ್ಮಿ – ಕೇರಳದಲ್ಲಿ ಗ್ರಾಮಾಭಿವೃದ್ಧಿ ಇಂದಿನ ಮಟ್ಟದಲ್ಲಿ ಆಗಿರುವುದಕ್ಕೆ ಅಲ್ಲಿನ ಗ್ರಾಮೀಣ ಜನಸಮುದಾಯ ಕೂಡ ಜಾಗೃತಿಗೊಂಡು, ಸರಕಾರದ ಯೋಜನೆ– ಕಾರ್ಯಕ್ರಮಗಳ ವಿವರ ಅರಿತು ಅವುಗಳನ್ನೆಲ್ಲಾ ದುಡಿಸಿಕೊಂಡಿರುವುದೇ ಕಾರಣ.

ಭಾರತದ ಬೇರೆಲ್ಲಾ ರಾಜ್ಯಗಳ ಗ್ರಾಮೀಣ ಸನ್ನಿವೇಶದ ಸ್ಥಿತಿ-ಗತಿ ಹೆಚ್ಚು ಕಡಿಮೆ ಒಂದೇ. ಆದರೆ ವಿದ್ಯೆಯು ತಲುಪುತ್ತಿರುವ ದಕ್ಷಿಣದ ರಾಜ್ಯಗಳ ಕೆಲವು ಹಳ್ಳಿ ಪ್ರದೇಶಗಳಲ್ಲಾದರೂ ಕ್ರಾಂತಿ ನಡೆಯುತ್ತಿದೆ. ಜನರು ಸರಕಾರದ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳ ಆಶ್ರಯದಲ್ಲಿ ಕೆಲಸ ಕಂಡುಕೊಂಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಇದರ ಪರಿಣಾಮವಾಗಿ ಸೊತ್ತು ಸವಲತ್ತುಗಳ ನಿರ್ಮಾಣವಾಗಿದೆ.

ವಿದ್ಯೆಯ ಪ್ರವೇಶ ಆಗದೆ ಇರುವ ಕರ್ನಾಟಕದ ಉತ್ತರ ಭಾಗದ ಹಳ್ಳಿಗಳಂಥ ತಾಣಗಳಲ್ಲಿ ಅಭಿವೃದ್ಧಿ ಕೂಡ ಕುಂಠಿತವಾಗಿದೆ. ಉತ್ತರ ಭಾರತದ ಅನೇಕ ಕಡೆ ಗ್ರಾಮೀಣಾಭಿವೃದ್ಧಿ ಕಡತಗಳಲ್ಲಿ ಮಾತ್ರವೇ ಆದ ಬಗ್ಗೆ ವರದಿಗಳಿವೆ. ಜನರಲ್ಲಿ ತಿಳುವಳಿಕೆ ಇಲ್ಲದೆ ಹೋದಾಗ, ಸರಕಾರದಿಂದ ಊರಿಗೆ ಏನೆಲ್ಲ ಅಭಿವೃದ್ಧಿ ನೆರವು ಬರುತ್ತದೆ ಎಂಬ ವಿವರಗಳು ತಿಳಿಯದೆ ಹೋದಾಗ ಅಂಥ ನೆರವೆಲ್ಲಾ ಹಾರಿ ಹೋಗುತ್ತವೆ. ಅವುಗಳು ಕಡತಗಳಲ್ಲಷ್ಟೆ ಅನುಷ್ಠಾನಗೊಂಡು ಹಣವೆಲ್ಲ ಕಂಟ್ರಾಕ್ಟರರ ಹಾಗೂ ದಲ್ಲಾಳಿಗಳ ಜೇಬು ಸೇರುತ್ತದೆ. ಅಥವ ಕಾರ್ಯಕ್ರಮಗಳೆಲ್ಲ ಕಾಟಾಚಾರಕ್ಕೆ ಮಾತ್ರವೇ ಜಾರಿಗೊಂಡು ವಿನಿಯೋಗವಾದ ಹಣದ ಬಹುಪಾಲು ಅಧಿಕಾರಿಗಳ ಹಾಗೂ ಕಂಟ್ರಾಕ್ಟರರ ಖಾಸಗಿ ಸೊತ್ತಿಗೆ ಸೋರಿ ಹೋಗುತ್ತದೆ.

ಈ ವಿದ್ಯಮಾನ ಬಹಳ ಕಡೆ ಆಗಿದೆ. ಉತ್ತರ ಕರ್ನಾಟಕದ ಬಹಳ ಕಡೆ ಗ್ರಾಮೀಣ ಉದ್ಯೋಗ ಯೋಜನೆಗಳಲ್ಲಿ ದುಡಿದ ಕೂಲಿಕಾರರ ಪಟ್ಟಿ ಹಲವು ಕಡೆ ಖೋಟಾ ಆಗಿದ್ದು ಅಧಿಕಾರಿಗಳೂ ಕಂಟ್ರಾಕ್ಟರರೂ ಹಣ ನುಂಗಿ ಹಾಕಿದ್ದಾರೆ. ಇದೀಗ ನಡೆಯುವ ಬರ ಪರಿಹಾರ ಕಾಮಗಾರಿಯಲ್ಲಿಯೂ ಅದು ನಡೆದಿದೆ.

ಸರಕಾರ ಇದೀಗ 20 ಲಕ್ಷ ಟನ್ ಆಹಾರ ಧಾನ್ಯವನ್ನು ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ ಉಚಿತವಾಗಿ ಕೊಡುವುದಾಗಿ ಘೋಷಿಸಿರುವುದು ಸ್ವಾಗತಾರ್ಹ. ಇದು ತಾತ್ಕಾಲಿಕ ನೆಲೆಯದ್ದಾಗಿ ಅಲ್ಲಿಗೇ ನಿಂತು ಬಿಡಬಾರದು. ಕಾಯಂ ನೆಲೆಯಲ್ಲಿ ಇಷ್ಟು ಅಥವ ಇದಕ್ಕಿಂತಲೂ ಹೆಚ್ಚು ಧಾನ್ಯವನ್ನು ಒದಗಿಸಬೇಕು. ಈ ಬಾರಿ ಏನೋ ಬಂಪರ್ ಬೆಳೆ ಬಂದು ಸರಕಾರಕ್ಕೆ ಇದನ್ನೆಲ್ಲ ಸಂಗ್ರಹಿಸಿಡಲು ಗೋದಾಮುಗಳೇ ಇಲ್ಲದ ಸಂದರ್ಭದಲ್ಲಿ ಧಾನ್ಯದ ಹೊರೆಯನ್ನು ಕಳಚಿಕೊಳ್ಳುವ ಈ ಸುಲಭದ ದಾರಿಯನ್ನು ಅದು ಕಂಡುಕೊಂಡಿರಬಹುದು.

ಕಾಯಂ ನೆಲೆಯಲ್ಲಿ ಇಂತಹ ಪ್ರೋತ್ಸಾಹಗಳನ್ನು ನೀಡುವುದು ಒಂದು ಮುಖವಾದರೆ ಯೋಜನೆಯಲ್ಲಿ ನಿಗದಿತವಾದ ಹಣ ಕ್ಲಪ್ತವಾಗಿ ಹಾಗೂ ಸಂಪೂರ್ಣವಾಗಿ ಆಯಾ ಕಾರ್ಯಕ್ರಮಗಳಿಗೆ ವಿನಿಯೋಗವಾಗಬೇಕು. ಅದು ಮಧ್ಯೆ ಬೇರೆಲ್ಲಿಗೋ ಸೋರಿ ಹೋಗುವುದು ನಿಲ್ಲಬೇಕು. ಇಂಥ ಸೋರಿಕೆಯನ್ನು ನಿಲ್ಲಿಸಬೇಕಾದ ಕರ್ತವ್ಯದ ಕಡೆಗೆ ಅದು ಮೊದಲು ಗಮನ ಕೊಡಬೇಕು. ಹಾಗಿದ್ದರೆ ಗ್ರಾಮಾಭಿವೃದ್ಧಿ ಎಂದೋ ಆಗಿ ಬಿಡುತ್ತಿತ್ತು.

ಮುಂಗಾರು
ಬುಧವಾರ, ಏಪ್ರಿಲ್ 2, 1986

ಅಸಹನೆಯ ಆವೇಶ

ಕನ್ನಡ ಸಾಹಿತ್ಯ ಪರಿಷತ್ ಚುನಾವಣೆಯಲ್ಲಿ ಅಕ್ರಮ ನಡೆದಿದ್ದು ಈ ಚುನಾವಣೆ ರದ್ದುಗೊಳಿಸ ಬೇಕೆಂದೂ ಪರಿಷತ್ತಿಗೆ ಸರಕಾರ ರಿಸೀವರ್ ನೇಮಿಸ ಬೇಕೆಂದೂ ಸಾಹಿತಿ ಡಾ। ಶಿವರಾಮ ಕಾರಂತ ಅವರು ಒತ್ತಾಯಿಸಿರುವುದು ವರದಿಯಾಗಿದೆ. ಚುನಾವಣೆಯ ಅಕ್ರಮಗಳ ಬಗ್ಗೆ ತನಿಖೆಯಾಗಬೇಕೆಂದೂ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದೂ ಅವರು ಆಗ್ರಹಿಸಿದ್ದಾರೆ.

ಸೋತು ಹೋದ ಅಭ್ಯರ್ಥಿಯ ಗುಂಪಿಗೆ ಸೇರಿದ ಹತಾಶ ಸಾಹಿತಿಗಳು ಚುನಾವಣೆಯಲ್ಲಿ ಅಕ್ರಮವಾಗಿದೆಯೆಂಬ ಅಪಪ್ರಚಾರವನ್ನು ನಡೆಸಿದ್ದು. ಇವರ ಮಾತನ್ನು ಸರಕಾರ ಕೇಳಬಾರದೆಂದೂ ಆಗಿರುವ ಚುನಾವಣೆಯ ಫಲಿತಾಂಶವನ್ನು ಎಲ್ಲರೂ ಒಪ್ಪಿಕೊಳ್ಳಬೇಕೆಂದೂ ಕನ್ನಡ ಸಂಘರ್ಷ ಸಮಿತಿಯು ಬೆಂಗಳೂರಿನಲ್ಲಿ ಸಭೆ ನಡೆಸಿ ನಿರ್ಣಯ ಕೈಗೊಂಡಿದೆ.

ಎಲ್. ಎಸ್. ಶೇಷಗಿರಿರಾಯರು ಸೋತು ಎಚ್. ಬಿ. ಜ್ವಾಲನಯ್ಯನವರು ಗೆದ್ದ ಸಾಹಿತ್ಯ ಪರಿಷತ್ ಚುನಾವಣೆ ಹೀಗೆ ವಿವಾದಕ್ಕೆಡೆ ಮಾಡಿದೆ. ಇಂತಹ ವಿವಾದದ ಪರಿಣಾಮವಾಗಿ ಚುನಾವಣೆಯನ್ನು ರದ್ದು ಪಡಿಸಿ ಸರಕಾರ ಆಡಳಿತಾಧಿಕಾರಿಯೊಬ್ಬರನ್ನು ನೇಮಿಸುವ ಸಾಧ್ಯತೆಯೂ ಇದೆ. ಇಂತಹ ಬೇಡಿಕೆ ಕಾರಂತರಂತಹ ಖ್ಯಾತನಾಮರಿಂದ ಬಂದಿದೆ. ಈ ಪ್ರಕರಣದಲ್ಲಿ ಬಹುಮುಖ್ಯವಾದ ತಾತ್ವಿಕ ಪ್ರಶ್ನೆಗಳು ಅಡಗಿವೆ. ಸರಕಾರ ಹಸ್ತಕ್ಷೇಪಿಸಿದರೆ ಅದು ಜನತಂತ್ರದ ನೆಲೆಯುಳ್ಳ ಸಂಸ್ಥೆಯೊಂದರಲ್ಲಿ ಹಸ್ತಕ್ಷೇಪಿಸಿದಂತಾಗುತ್ತದೆ. ಅದು ಸಾಹಿತ್ಯಕ್ಕೆ ಒಳ್ಳೆಯದಲ್ಲ. ಇಂಥ ಕ್ರಮ ಕೆಟ್ಟ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ.

ಸಾಹಿತ್ಯ ಪರಿಷತ್ ಎಂಬುದು ಒಂದು ಜನತಂತ್ರದ ನೆಲೆಯುಳ್ಳ ಸಂಸ್ಥೆ. ಅದರ ಚುನಾವಣೆಗೆ ಸಂಸ್ಥೆಯೇ ತೀರ್ಮಾನಿಸಿಕೊಂಡಂತಹ ವಿಧಿ ವಿಧಾನಗಳಿವೆ. ಅದಕ್ಕನುಗುಣವಾಗಿ ಅಧ್ಯಕ್ಷರ ಚುನಾವಣೆ ನಡೆದಿದೆ. ಈ ಚುನಾವಣೆಯಲ್ಲಿ ಅಕ್ರಮ ಅವ್ಯವಹಾರಗಳೇನಾದರೂ ನಡೆದಿದೆಯೆಂದು ಯಾವನೇ ಅಭ್ಯರ್ಥಿಗೆ ಅನಿಸಿದರೆ ಅವರು ಫಲಿತಾಂಶವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಕ್ಕೆ ಅವಕಾಶವಿದೆ. ಅಕ್ರಮಗಳು ನಡೆದಿದ್ದರೆ ನ್ಯಾಯಾಲಯದಲ್ಲಿ ಸಾಬೀತಾಗಬಹುದು. ಆಗ ಸಂಸ್ಥೆಗೂ ಹಿತವಾದೀತು. ಅದರ ಕಾರ್ಯ ವಿಧಾನವೂ ಸುವ್ಯವಸ್ಥಿತವಾದೀತು.

ಇದನ್ನು ಮಾಡದೆ ಚುನಾವಣೆ ಅಕ್ರಮವೆಂದು ದೂರಿಕೊಳ್ಳುವುದು, ಅದನ್ನು ರದ್ದುಗೊಳಿಸುವಂತೆ ಸರಕಾರಕ್ಕೆ ಮೊರೆಯಿಡುವುದು, ರಿಸೀವರ್ ನೇಮಿಸುವಂತೆ ಒತ್ತಡ ತರುವುದು, ಇವೆಲ್ಲವೂ ಜನತಂತ್ರಕ್ಕೆ ಸಲ್ಲದ ನಡವಳಿಕೆಯಾಗುತ್ತವೆ. ಶಿವರಾಮ ಕಾರಂತರೂ ಇದೀಗ ಈ ಪ್ರಕರಣದಲ್ಲಿ ಅವರಂತೆಯೇ ಆಲೋಚಿಸುತ್ತಿರುವ ಇತರ ಕೆಲವು ಮಂದಿ ಉದ್ದಾಮ ಪಂಡಿತರೂ ಜನತಂತ್ರದ ಮೌಲ್ಯಗಳ ಪರವಾಗಿ ಕೆಲಸ ಮಾಡುವವರೆಂಬ ಖ್ಯಾತಿವೆತ್ತವರು. ಹಿಂದೆ ಈ ನಾಡಿನ ಮಹತ್ವದ ಚುನಾವಣೆಗಳಲ್ಲಿ ಅಕ್ರಮ ನಡೆದಿದೆಯೆಂದು ನ್ಯಾಯಾಲಯ ತೀರ್ಪು ಕೊಟ್ಟಾಗ ಆ ಹೋರಾಟದ ಪರ ಕೆಲಸಮಾಡಿದವರು. ಯಾವುದೇ ಪ್ರಜಾಸತ್ತಾತ್ಮಕ ಸಂಸ್ಥೆಯಲ್ಲಿ ಸರಕಾರದ ಕೆಟ್ಟ ಕೈಗಳ ಹಸ್ತಕ್ಷೇಪ ಸಲ್ಲದೆಂದು ಪ್ರತಿಪಾದಿಸುತ್ತಿರುವವರು.

ಇಂಥವರು ಇಂದು ಸರಕಾರದ ಮೇಲೆ ಒತ್ತಡ ತಂತ್ರ ನಡೆಸುತ್ತಿರುವುದು ಒಳ್ಳೆಯ ಸೂಚನೆಯಲ್ಲ. ಸರಕಾರ ತಮ್ಮ ಕಿಸೆಯಲ್ಲಿದೆ ಎಂಬ ದಾರ್ಷ್ಟ್ಯದಿಂದಲೇ ಇಂಥ ಮಾತುಗಳು ಬರುತ್ತಿವೆಯೆಂದೇ ಹೇಳಬೇಕಾಗಿದೆ.

ಜ್ವಾಲನಯ್ಯನವರು ಕಾರಂತರಂತಹ ಜಗತ್ಪ್ರಸಿದ್ಧ ಸಾಹಿತಿಯಲ್ಲದಿರಬಹುದು. ಆದರೂ ಅವರು ಸಾಹಿತ್ಯದಲ್ಲಿ ಕೆಲಸ ಮಾಡಿದವರು. ಸಾಹಿತ್ಯ ಕ್ಷೇತ್ರದಲ್ಲಿ ಅವರೊಬ್ಬ ನಿಷ್ಠಾವಂತ ಕಾರ್ಯಕರ್ತ. ಸಾಹಿತ್ಯ ಪ್ರಸಾರಕ್ಕಾಗಿ ಅದರ ಗುಣಮಟ್ಟ ಎತ್ತರಿಸುವುದಕ್ಕಾಗಿ ಕೆಲಸ ಮಾಡುತ್ತಿರುವ ಸಾಹಿತ್ಯ ಪರಿಷತ್ತಿನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರು, ಅದೇನೇ ಇರಲಿ ಈಗ ಅವರ ಚುನಾವಣೆ ನಡೆದಿದೆ. ಅದನ್ನು ಜನತಂತ್ರಕ್ಕೆ ಸಲ್ಲುವಂತೆ ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳಬೇಕು. ಅಥವ ಅಕ್ರಮವೇ ನಡೆದಿದೆ ಎಂದಾದರೆ- ಅದಕ್ಕೆ ಸಾಕ್ಷ್ಯಾಧಾರಗಳಿದ್ದರೆ ನ್ಯಾಯಾಲಯದಲ್ಲಿ ಸಾಬೀತು ಪಡಿಸಬೇಕು. ಅದನ್ನೇನೂ ಮಾಡದೆ ಹಿತ್ತಲ ಬಾಗಿಲ ಮೂಲಕ ಪರಿಷತ್ತಿನ ನಿಯಂತ್ರಣವನ್ನು ಸರಕಾರಿ ಅಧಿಕಾರಿಯೊಬ್ಬರ ಕೈಯಲ್ಲಿ ಕೊಡುವ ಯತ್ನ ನಡೆಸುವುದು ಯಾರಿಗೂ ಹಿತ ಮಾಡುವ ಕೆಲಸವಲ್ಲ. ಇಂತಹ ದಾರಿಯೊಂದನ್ನು ನಮ್ಮ ಸಾಹಿತಿಗಳು ಹುಡುಕಿರುವುದು ಅಪ್ರಬುದ್ಧ ಕೆಲಸ. ಅಸಹನೆಯಿಂದುಂಟಾದ ಆವೇಶ. ಸಾಹಿತ್ಯವೂ ಸಾಹಿತ್ಯ ಪರಿಷತ್ತೂ ತಮ್ಮ ಹಾಗೂ ತಮ್ಮಂತಹವರ ಗುತ್ತಿಗೆಯೆಂಬಂತಹ, ಪಿತ್ರಾರ್ಜಿತ ಸೊತ್ತೆಂಬಂತಹ ಉದ್ಧಟತನವೆಂದರೂ ಸರಿಯೆ. ಇದು ಜನತಂತ್ರದ ಮೌಲ್ಯಗಳಿಗೆ ಸಲ್ಲುವಂತಹದ್ದಲ್ಲ. ಸಾಹಿತ್ಯ ಕ್ಷೇತ್ರದ ಹಿರಿಯರಿಗೆ ಸಲ್ಲದ ಮಂದಿ ಪರಿಷತ್ತಿನ ಅಧಿಕಾರಸ್ಥರಾಗಬಾರದೆಂಬ ದಾರ್ಷ್ಟ್ಯ ಕನ್ನಡ ಸಾಹಿತ್ಯದ ದಿಗ್ಗಜರೆನಿಸಿಕೊಂಡವರಿಗೆ ಹೇಳಿಸಿದ್ದಲ್ಲ.

ಸಾಹಿತ್ಯ ಕ್ಷೇತ್ರದಲ್ಲಿಯೂ ಹೊಸತನ ಬರುತ್ತಿದೆ. ಹೊಸ ಗಾಳಿ ಬೀಸುತ್ತಿದೆ. ಇದು ಜನತಂತ್ರದ ಯುಗ. ಜನಪರ ಒಲವುಗಳು ಗಟ್ಟಿಗೊಳ್ಳುತ್ತಿರುವ ಕಾಲಘಟ್ಟ. ಅದನ್ನು ಅಂಗೀಕರಿಸಿಕೊಂಡು ಹೊಸಬರ ಕೊಡುಗೆಯನ್ನು ಸ್ವಾಗತಿಸುವ ದೊಡ್ಡಸ್ತಿಕೆಯನ್ನು ದೊಡ್ಡ ಸಾಹಿತಿಗಳಿಂದ ಸಾಹಿತ್ಯಲೋಕ ನಿರೀಕ್ಷಿಸುತ್ತಿದೆ.

ದೊಡ್ಡ ಸಾಹಿತಿಗಳ ಈ ಒತ್ತಡತಂತ್ರಕ್ಕೆ ಸರಕಾರ ಮಣಿದರೆ ಅದು ಸಾಹಿತ್ಯಲೋಕಕ್ಕೆ ಬಹಳ ದೊಡ್ಡ ಹಾನಿಮಾಡಿದಂತೆ. ಅದರಿಂದ ಯಾರಿಗೂ ಒಳ್ಳೆಯದಾಗದು. ಇವರ ಮಾತು ಕೇಳಿ ಅದು ರಿಸೀವರ್. ನೇಮಕಮಾಡಿದರೆ ಸಾಹಿತಿಗಳೆಲ್ಲರಿಗೂ ಅಪಮಾನ ಮಾಡಿದಂತೆ.

ಮುಂಗಾರು
ಏಪ್ರಿಲ್ , 1986

ಅಪಾಯದ ಅಂಚಿನಲ್ಲಿ

ದೇಶವು ಅಭಿವೃದ್ಧಿ ಪಥದಲ್ಲಿದೆ ಎಂದು ತೋರಿಸಿಕೊಳ್ಳುವ ಯತ್ನವನ್ನು ನಾವು ಬಹಳ ಉತ್ಸಾಹದಿಂದ ನಡೆಸುತ್ತಿರಬಹುದಾದರೂ ಆಗಾಗ ನಮ್ಮ ಬಲಹೀನತೆಗಳು ಬೆಳಕಿಗೆ ಬರುತ್ತಿವೆ. ನಾನಾ ರಂಗಗಳಲ್ಲಿನ ನಮ್ಮ ಸಾಧನೆಗಳಿಗಿಂತಲೂ ಆಡಂಬರ ಪ್ರದರ್ಶನಗಳಿಗೆ ಅಧಿಕ ಮಹತ್ವ ನೀಡುತ್ತಿದ್ದೇವೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದಕ್ಕೊಂದು ನಿದರ್ಶನ ನಮ್ಮ ರಫ್ತು ಸಾಧನೆ ಕಳಪೆಯಾಗಿರುವುದು.

ಆರ್ಥಿಕ ಸ್ವಾವಲಂಬನೆ ಸಾಧಿಸದೆ ನಾವು ಒಂದು ಪ್ರಬಲ ರಾಷ್ಟ್ರವಾಗುವುದು ಅಸಂಭವ. ದೈನಂದಿನ ಆವಶ್ಯಕತೆಗಳಲ್ಲಿ ಸ್ವಾವಲಂಬನೆ ಸಾಧಿಸುವುದರೊಡನೆ ವಿದೇಶ ವಾಣಿಜ್ಯ ವ್ಯವಹಾರದಲ್ಲೂ ಗಣನೀಯ ಮುನ್ನಡೆ ಸಾಧಿಸದಿದ್ದಲ್ಲಿ ಸ್ವಾವಲಂಬನೆ ಪರಿಪೂರ್ಣವೆನಿಸುವುದಿಲ್ಲ. ಅಮೆರಿಕ, ಬ್ರಿಟನ್, ಪಶ್ಚಿಮ ಜರ್ಮನಿ, ಜಪಾನ್ ಮೊದಲಾದ ದೇಶಗಳು ನಾನಾ ರಂಗಗಳಲ್ಲಿ ಸಾರ್ವಭೌಮತೆ ಸಾಧಿಸಿರುವುದು ಅವುಗಳ ಕೈಗಾರಿಕಾ ಕ್ಷೇತ್ರದಲ್ಲಿನ ಉತ್ಪಾದನಾ ಮಟ್ಟ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುವುದರೊಡನೆ ಆ ದೇಶಗಳ ವಿದೇಶ ವಾಣಿಜ್ಯ ಕ್ಷೇತ್ರ ಕೂಡಾ ರಭಸದಿಂದ ವಿಸ್ತರಿಸುತ್ತಿರುವುದೂ ಕಾರಣ. ಕೈಗಾರಿಕಾ ರಂಗದ ಉತ್ಪಾದನಾ ಮಟ್ಟ ದೇಶದ ಆವಶ್ಯಕತೆಗಳನ್ನು ಪೂರೈಸುವುದರೊಡನೆ ವಿದೇಶಗಳಿಗೆ ನಿರ್ಯಾತವಾಗಬೇಕು.

ಜಪಾನ್ ಚಿಕ್ಕ ದೇಶ. ಅದರ ಜನಸಂಖ್ಯೆಗೆ ಬೇಕಾಗುವಷ್ಟು ಆಹಾರ ವಸ್ತುಗಳು ಅಲ್ಲಿ ಬೆಳೆಯುವುದಿಲ್ಲ. ರಭಸದಿಂದ ಬೆಳೆಯುತ್ತಿರುವ ಜಪಾನಿನ ಕೈಗಾರಿಕೆಗಳಿಗೆ ಅಗತ್ಯವಿರುವ ಲೋಹ ಮತ್ತಿತರ ಖನಿಜ ವಸ್ತುಗಳ ಸಂಪನ್ಮೂಲಗಳೂ ಆ ದೇಶದಲ್ಲಿಲ್ಲ. ಆದರೆ ತೀವ್ರ ಕೈಗಾರಿಕಾಕರಣದ ಮೂಲಕ ಜಪಾನು ಜಗತ್ತಿನ ಎಲ್ಲಾ ಮೂಲೆಗಳಲ್ಲೂ ತನ್ನ ಸರಕುಗಳನ್ನು ಸ್ಪರ್ಧಾತೀತ ದರಗಳಲ್ಲಿ ಮಾರಾಟಮಾಡಿ ತನ್ನ ಎಲ್ಲಾ ಆವಶ್ಯಕತೆಗಳನ್ನು ಒದಗಿಸಿಕೊಳ್ಳುವಷ್ಟು ಚತುರತೆ ಸಾಧಿಸಿದೆ. ಜಗತ್ತಿನ ಅಭಿವೃದ್ಧಿ ದೇಶಗಳ ಮೊದಲ ಪಂಕ್ತಿಯಲ್ಲಿ ಸೇರಿದೆ.

ಜಪಾನಿನೊಡನೆ ಅಥವಾ ಇತರ ಮುಂದುವರಿದ ದೇಶಗಳೊಡನೆ ನಮ್ಮ ದೇಶದ ಸ್ಥಿತಿಯನ್ನು ಹೋಲಿಸಿದಾಗ ನಾವು ತುಂಬಾ ಮರುಕ ಪಡಬೇಕಾಗುತ್ತದೆ. ನಮ್ಮಲ್ಲಿ ಮನುಷ್ಯ ಬಲ ಸಾಕಷ್ಟಿದೆ. ನೈಸರ್ಗಿಕ ಸಂಪನ್ಮೂಲಗಳ ಮಟ್ಟಿಗಂತೂ ನಾವು ಇತರರು ಅಸೂಯೆ ಪಡುವಷ್ಟು ಸಂಪನ್ನರಾಗಿದ್ದೇವೆ. ಆದರೆ ನಮ್ಮ ವಿದೇಶಿ ವಾಣಿಜ್ಯ ಸ್ಥಿತಿ ಅಪಾಯದ ಅಂಚಿನಲ್ಲಿದೆ ಎಂದು ಮೊನ್ನೆ ಲೋಕಸಭೆಯಲ್ಲಿ ವಾಣಿಜ್ಯ ಸಚಿವರು ಬಹಿರಂಗಗೊಳಿಸಿದಾಗ ಸರ್ವೇದಾಶ್ಚರ್ಯ ಪಡಬೇಕಾಯಿತು.

ವಾಣಿಜ್ಯ ಖಾತೆಯ ಕಳೆದ ಸಾಲಿನ ವರದಿಯ ಪ್ರಕಾರ ದೇಶದ ವಿದೇಶಿ ಪಾವತಿ ಪರಿಸ್ಥಿತಿ ಶೋಚನೀಯ ಮಟ್ಟಕ್ಕೆ ಇಳಿದಿರುವುದು ಕಂಡುಬರುತ್ತದೆ. ದೇಶದ ಆಯಾತ ಧೋರಣೆಯ ಅಸಮರ್ಪಕತೆ ಮತ್ತು ನಿರ್ಯಾತದ ಸಾಧನೆ ಡೋಲಾಯಮಾನವಾದುದು ಇದಕ್ಕೆ ಕಾರಣ.

ಈ ಮೊದಲು ದೇಶಕ್ಕೆ ಇಂಥಾ ಸ್ಥಿತಿ ಒದಗಿಬಂದಿಲ್ಲ ಎನ್ನಲಾಗದು. ಆದರೆ ವಿದೇಶಗಳ ಅಥವಾ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಗಳ ದಾನಕ್ಕೆ ಕೈಚಾಚಿ ನಾವು ದುಃಸ್ಥಿತಿಯನ್ನು ತಾತ್ಕಾಲಿಕವಾಗಿ ನಿಭಾಯಿಸಿಕೊಂಡಿದ್ದೆವು. ಆದರೆ ಸುಲಭದಲ್ಲಿ ಸಾಲ ಪಡೆಯುವ ದಿನಗಳು ಈಗ ದೂರವಾಗಿದ್ದು ನಾವು ಸ್ವಯಂ ಶಕ್ತಿಯಿಂದ ಮಾತ್ರ ಒದಗಿರುವ ಸಂಕಷ್ಟಗಳಿಂದ ಪಾರಾಗುವ ಕಠಿಣ ಸ್ಥಿತಿ ನೆಲೆ ನಿಂತಿದೆ.

1985-86 ಸಾಲಿನಲ್ಲಿ ದೇಶದ ವಿದೇಶ ಪಾವತಿ, 8,248 ಕೋಟಿ ರೂಪಾಯಿಗಳ ಅಗಾಧ ಮಟ್ಟ ತಲಪಬಹುದೆಂದೂ ಸರಕಾರ ಅಂದಾಜಿಸಿದೆ. ಈ ಆಪತ್ತಿನಿಂದ ಪಾರಾಗುವ ಸಲುವಾಗಿ ಸರಕಾರವು ನಿರ್ಯಾತ ವ್ಯಾಪಾರವನ್ನು ಯುದ್ಧೋಪಾದಿಯಲ್ಲಿ ಹೆಚ್ಚಿಸುವ ಕ್ರಮ ಕೈಗೊಳ್ಳುವುದು ಅನಿವಾರ್ಯ ಎಂದು ಹೇಳಿ ನಿರ್ಯಾತ ವ್ಯಾಪಾರಿಗಳೂ, ಉದ್ದಿಮೆದಾರರೂ ನಿರ್ಯಾತ ವ್ಯಾಪಾರವನ್ನು ಹೆಚ್ಚಿಸುವಂತೆ ಮೊರೆಯಿಟ್ಟಿದೆ.

ಆದರೆ ಈಗ ವಿದೇಶ ವಾಣಿಜ್ಯ ಎದುರಿಸಬೇಕಾಗಿರುವ ಅಪಾಯವನ್ನು ಕೂಡಲೇ ನಿವಾರಿಸುವುದು ಅಸಾಧ್ಯ. ನಿರ್ಯಾತ ವ್ಯಾಪಾರವನ್ನು ವ್ಯವಸ್ಥಿತ ರೀತಿಯಲ್ಲಿ ನಿಧಾನವಾಗಿ ಬೆಳೆಸದಿರುವುದೂ, ನಿರ್ಯಾತ ವಸ್ತುಗಳ ಗುಣಮಟ್ಟ ಕಾಯ್ದುಕೊಳ್ಳದೆ ಅನೇಕ ವಿದೇಶಿ ಗಿರಾಕಿಗಳನ್ನು ಕಳೆದುಕೊಂಡಿರುವುದೂ, ನಿರ್ಯಾತ ವಸ್ತುಗಳ ಬೆಲೆ ಸ್ಪರ್ಧಾತ್ಮಕ ಮಟ್ಟದಲ್ಲಿಲ್ಲದೆ ನಮ್ಮ ನಿರ್ಯಾತ ಸರಕುಗಳಿಗೆ ಗಿರಾಕಿಗಳೇ ಲಭಿಸದಿರುವುದೂ ಇಂದಿನ ದುಃಸ್ಥಿತಿಗೆ ಕಾರಣ.

ಈ ಪರಿಸ್ಥಿತಿಯ ನಡುವೆ ನಿರ್ಯಾತ ವ್ಯಾಪಾರದಲ್ಲಿ ಕೆಲವು ಹಗರಣಗಳು ವರ್ಚಸ್ಸುಳ್ಳವರಿಂದ ಸ್ವಲಾಭಕ್ಕಾಗಿ ನಡೆದು ದೇಶವು ನಷ್ಟಕ್ಕೆ ಗುರಿಯಾದ ಸಂದರ್ಭಗಳೂ ಕೆಲವು ಇವೆ. ಕೆಲವು ವಸ್ತುಗಳ ನಿರ್ಯಾತ ವ್ಯಾಪಾರದಲ್ಲಿ ಕೆಲವು ಸಂಸ್ಥೆಗಳು ಏಕಸ್ವಾಮ್ಯ ಹೊಂದಿದ್ದು ಅವುಗಳೊಡನೆ ಕೆಲವು ಅಧಿಕಾರಿಗಳೂ ಶಾಮೀಲಾಗಿ ವಿದೇಶ ವಿನಿಮಯದಲ್ಲಿ ದೊಡ್ಡ ವಂಚನೆಗಳಾಗಿ ದೇಶವು ದೊಡ್ಡ ಮೊತ್ತದ ವಿದೇಶ ವಿನಿಮಯದಿಂದ ವಂಚಿತವಾಗಿದೆ ಎಂಬುದನ್ನು ಮರೆಯಲಾಗದು.

ಈ ಪರಿಸ್ಥಿತಿಯಲ್ಲಿ ದೇಶದ ವಿದೇಶ ವಾಣಿಜ್ಯ ಕ್ಷೇತ್ರದಲ್ಲಿ ತುರ್ತು ಪರಿಸ್ಥಿತಿಯೊಂದು ಜಾರಿಯಾಗಿ ಈ ನೆಲೆ ನಿಂತಿರುವ ಜಡತೆ, ಅಕ್ರಮ, ಭ್ರಷ್ಟ ಪದ್ಧತಿಗಳು ನಿವಾರಣೆಯಾಗದೆ ಹೋದರೆ ದೇಶವು ಮತ್ತೆ ಮತ್ತೆ ವಿದೇಶಿ ಸಾಲಗಳಿಗೆ ಕೈಚಾಚಿ ತನ್ನ ಆರ್ಥಿಕ ಸ್ವಾತಂತ್ರ್ಯವನ್ನು ಒತ್ತೆಯಿಡುವ ಪ್ರಸಂಗ ಅನಿವಾರ್ಯವಾಗಬಹುದು.

ಮುಂಗಾರು
ಶನಿವಾರ, ಏಪ್ರಿಲ್ 5, 1986

ಪಂಜಾಬು ಎತ್ತಿರುವ ಪ್ರಶ್ನೆ

ಪಂಜಾಬಿನಲ್ಲಿ ಭಯೋತ್ಪಾದಕರ ಹಾವಳಿ ಮಿತಿಯನ್ನು ಮೀರಿದೆ. ಅಲ್ಲಿ ಇತ್ತೀಚಿನ ಕೆಲವು ದಿನಗಳಲ್ಲಿ ಪ್ರತಿ ದಿನವೂ ಹತ್ತಾರು ಮಂದಿ ನಿರಪರಾಧಿಗಳನ್ನು ಕೊಲ್ಲಲಾಗಿದೆ. ಅನೇಕ ನಗರ ಪಟ್ಟಣಗಳಲ್ಲಿ ಉದ್ರಿಕ್ತ ಪರಿಸ್ಥಿತಿ ಇದೆ. ಅನೇಕ ಕಡೆ ಕರ್ಫ್ಯೂ ಹೇರಲಾಗಿದೆ. ಶಾಂತಿ ಪಾಲನೆಗೆ ಕರೆದಾಗ ತಯಾರಿರುವಂತೆ ಸೈನ್ಯಕ್ಕೆ ಸೂಚಿಸಲಾಗಿದೆ.

ಚಂಡೀಗಢವನ್ನು ಪಂಜಾಬಿಗೆ ಹಸ್ತಾಂತರಿಸಬೇಕು ಎಂಬುದು ರಾಜೀವ-ಲೋಂಗೋವಾಲ್ ಒಡಂಬಡಿಕೆಯಲ್ಲಿನ ಒಂದು ಮಹತ್ವದ ವಿಚಾರ. ಈ ವರ್ಗಾವಣೆ 1986ರ ಜನವರಿ 26ರಂದು ಜರುಗಬೇಕೆಂದು ಒಡಂಬಡಿಕೆಯಲ್ಲಿ ನಮೂದಿಸಲಾಗಿತ್ತು.

ಈ ವರ್ಗಾವಣೆಯು ಸಾಧ್ಯವಾಗುವಂತಾಗಲು ಪಂಜಾಬಿನ ಕೆಲವು ಹಿಂದಿ ಭಾಷಾ ಪ್ರದೇಶಗಳನ್ನು ಹರ್ಯಾಣಕ್ಕೆ ಕೊಡುವ ಬಗ್ಗೆ ತಿಳುವಳಿಕೆಯುಂಟಾಗಿತ್ತು. ಆದರೆ ಅಂತಹ ಪ್ರದೇಶಗಳು ಯಾವುವೆಂದು ತೀರ್ಮಾನಿಸಲು ನೇಮಿಸಲಾದ ಮ್ಯಾಥ್ಯೂ ಆಯೋಗ ಈ ಕೆಲಸ ತನ್ನಿಂದಾಗದು ಎಂದು ಕೊನೆಯ ಕ್ಷಣದಲ್ಲಿ ಕೈಚೆಲ್ಲಿ ಕುಳಿತದ್ದರಿಂದ ಚಂಡೀಗಢ ವರ್ಗಾವಣೆ ನಿಗದಿತ ಕಾಲಕ್ಕೆ ನಡೆಯಲಿಲ್ಲ. ಪಂಜಾಬಿನ ಭಯೋತ್ಪಾದಕರು ಮರುಹುಟ್ಟು ಪಡೆದು ಬರಲು ಅನೇಕ ಕಾರಣಗಳ ಪೈಕಿ ಇದೂ ಒಂದು.

ಸರಕಾರ ಮೀನ ಮೇಷ ಎಣಿಸುತ್ತಲೇ ಬಂತು. ಚಂಡೀಗಢ ಮತ್ತು ಇತರ ಪ್ರದೇಶಗಳ ವರ್ಗಾವಣೆ ವಿಚಾರವನ್ನು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ತೂಗುಯ್ಯಾಲೆಯಲ್ಲಿ ಇಡಬೇಕಾಗಿರಲಿಲ್ಲ. ರಾಜಕೀಯ ಇಚ್ಛಾಶಕ್ತಿ ಅವರಲ್ಲಿದ್ದುದೇ ಆಗಿದ್ದರೆ ಅವರು ತಕ್ಷಣವೇ ಸಂಬಂಧಿತ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆಸಿಕೊಂಡು ಸಮಾಲೋಚನೆ ಮಾಡಿ ಒಮ್ಮತದ ತೀರ್ಮಾನವೊಂದನ್ನು ರೂಪಿಸಿ ತನ್ನ ನಿರ್ಧಾರವನ್ನು ಪ್ರಕಟಿಸಬಹುದಿತ್ತು. ಚಂಡೀಗಢದ ಸಮಸ್ಯೆ ಅಲ್ಲಿಗೇ ಮುಗಿಯುತ್ತಿತ್ತು.

ಆದಾಗಲಿಲ್ಲ. ಸರಕಾರ ಮುಂದೆ ಏನು ಮಾಡುತ್ತದೆ ಎಂಬುದು ಅನೇಕ ದಿನಗಳ ಕಾಲ ಊಹಾಪೋಹಕ್ಕೆ ಆಹಾರವಾಯಿತು. ಇದೀಗ ಎರಡು ತಿಂಗಳುಗಳೇ ಕಳೆದುಹೋದ ಮೇಲೆ, ಪಂಜಾಬಿನಲ್ಲಿ ಹಲವಾರು ಜೀವಗಳು ನಷ್ಟವಾದ್ದನ್ನು ಕಂಡು ಪರಿಸ್ಥಿತಿಯ ಗಂಭೀರತೆ ಕೇಂದ್ರ ಸರಕಾರಕ್ಕೆ ಸದ್ಯಕ್ಕಾದರೂ ಅರ್ಥವಾಗಿದೆ. ತಾನೂ ನಿರ್ವಹಿಸಬೇಕಾದ ಕರ್ತವ್ಯಗಳಿವೆ ಎಂದು ಅದಕ್ಕೆ ಅನಿಸಿದೆ. ಈಗ ಪಂಜಾಬಿನ ಹಿಂದಿ ಪ್ರದೇಶಗಳ ತೀರ್ಮಾನಕ್ಕೆ ನ್ಯಾಯಮೂರ್ತಿ ಇ. ಎಸ್. ವೆಂಕಟರಾಮಯ್ಯನವರ ನೇತೃತ್ವದಲ್ಲಿ ಹೊಸ ನ್ಯಾಯಾಂಗ ಆಯೋಗವನ್ನು ನೇಮಿಸಲಾಗಿದೆ. ಈ ಹೆಜ್ಜೆ ತಡವಾದರೂ ಸ್ವಾಗತಾರ್ಹ. ಆಯೋಗವೂ ಪರಿಸ್ಥಿತಿಯ ಗಾಂಭೀರ್ಯವನ್ನು ತಿಳಿದುಕೊಂಡು ತ್ವರಿತ ಗತಿಯಿಂದ ಕೆಲಸ ಮಾಡಿ ಸೂಕ್ತವಾದ ತೀರ್ಮಾನಕ್ಕೆ ಬರುವ ಅಗತ್ಯ ಬಹಳವಿದೆ.

ಕೇಂದ್ರ ಸರಕಾರದ ಕರ್ತವ್ಯ ಇಲ್ಲಿಗೇ ಮುಗಿದಿಲ್ಲ. ಪಂಜಾಬಿನ ಸಮಸ್ಯೆ ತುಂಬ ವಿಶಿಷ್ಟವಾದುದೆಂಬುದು ನಿಜ. ದಾರಿ ತಪ್ಪಿದ ಮಂದಿ ಅಲ್ಲಿದ್ದಾರೆ ಎಂಬುದೂ ಸತ್ಯ. ಅಲ್ಲಿ ಒಂದು ವರ್ಗ-ಅದು ಸಣ್ಣದಿರಲಿ ದೊಡ್ಡದಿರಲಿ-ಮನಸ್ಸು ಮುರಿದುಕೊಂಡು ಖಾಲಿಸ್ತಾನವಾದಿಯಾಗಿ ಪರಿವರ್ತಿತವಾಗಿದೆ. ಇದು ದೇಶವನ್ನು ಒಡೆಯುವ ಪ್ರಯತ್ನ ಎಂದು ಸುಲಭಕ್ಕೆ ಸಾರಾಸಗಟಾಗಿ ತಳ್ಳಿಹಾಕಿದರೆ ಸಮಸ್ಯೆ ಮುಗಿಯುವುದಿಲ್ಲ. ಭಯೋತ್ಪಾದಕತೆಯೂ ಪ್ರತ್ಯೇಕತಾವಾದವೂ ಸುಮ್ಮನೇ ಹುಟ್ಟುವುದಿಲ್ಲ. ಹಾಗೆ ಈ ದೇಶದ ಮಂದಿ ತಿಳಿದು ಕೊಂಡರೆ ಆತ್ಮವಂಚನೆ ಮಾಡಿ ಕೊಂಡಂತೆ. ಇಂದು ಭಯೋತ್ಪಾದಕತೆ ಪ್ಯಾಲೆಸ್ತೀನ್‌ನಲ್ಲಿದೆ. ಶ್ರೀಲಂಕಾದಲ್ಲಿಯೂ ಇದೆ. ಅಲ್ಲೆಲ್ಲ ಅದಕ್ಕೆ ಪ್ರೇರಣವಿರುವುದನ್ನು ನಾವೆಲ್ಲ ಗುರುತಿಸಿದ್ದೇವೆ. ಹೀಗೆ ಗುರುತಿಸುವ ನಮ್ಮ ತಿಳುವಳಿಕೆಯ ಅಲಗು ಖಾಲಿಸ್ತಾನದ ವಿಚಾರದಲ್ಲಿ ಮೊಂಡಾಗಬಾರದು. ನಮ್ಮ ಬುದ್ಧಿಗೆ ಮೌಢ್ಯ ಕವಿಯಬಾರದು. ನಮ್ಮ ವಿವೇಕವು ಪಲಾಯನ ಮಾಡಬಾರದು.

ಪಂಜಾಬಿನ ದಳ್ಳುರಿ ಈ ದೇಶದ ಆಡಳಿತದ, ಹಣಕಾಸಿನ ಮತ್ತು ಇತರ ವ್ಯವಸ್ಥೆಗಳ ವಿಚಾರದಲ್ಲಿ ಮೂಲಭೂತ ಪ್ರಶ್ನೆಯೊಂದನ್ನೆತ್ತಿದೆ. ಅದುವೇ ಅಧಿಕಾರ ವಿಕೇಂದ್ರೀಕರಣದ ಪ್ರಶ್ನೆ. ಅದನ್ನು ಬದಿಗೆ ತಳ್ಳಿ ಮಾರ್ಜಾಲ ಸನ್ಯಾಸಿಗಳಾದರೆ ಪಂಜಾಬಿನ ಸಮಸ್ಯೆಯೂ ತೀರದು. ಅಂತಹ ವಿದ್ಯಮಾನಗಳು ಬೇರೆಡೆ ತಲೆ ಎತ್ತುವುದನ್ನು ತಡೆಯುವುದಕ್ಕೂ ಆಗದು. ರಾಜ್ಯಗಳ ಸ್ವಾಯತ್ತತೆ ಪ್ರಶ್ನೆಯನ್ನು ಸರ್ಕಾರಿಯಾ ಆಯೋಗಕ್ಕೆ ಒಪ್ಪಿಸಬೇಕು ಎಂದು ರಾಜೀವ-ಲೋಂಗೋವಾಲ್ ಒಡಂಬಡಿಕೆಯಲ್ಲಿ ನಮೂದಿಸಲಾಗಿದೆ. ಆ ವಿಚಾರದಲ್ಲಿ ಕೇಂದ್ರ ಸರಕಾರ ಮುಂದಿನ ಹೆಜ್ಜೆ ಇರಿಸಿದೆಯೇ? ಸ್ವಾಯತ್ತತೆ ಪ್ರಶ್ನೆಯನ್ನು ತೀರ್ಮಾನಕ್ಕಾಗಿ ಸರ್ಕಾರಿಯಾ ಆಯೋಗದ ಮುಂದೆ ಅಧಿಕೃತವಾಗಿ ಮಂಡಿಸಿದೆಯೇ? ಆಯೋಗದ ಅಧಿಕಾರ ವ್ಯಾಪ್ತಿಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿದೆಯೇ? ಅಗತ್ಯವೆನಿಸಿದರೆ ಸಂವಿಧಾನದ ಚೌಕಟ್ಟನ್ನು ಬದಲಾಯಿಸುವ ಶಿಫಾರಸುಗಳನ್ನು ಸೂಚಿಸುವ ಅಧಿಕಾರವನ್ನು ಅದಕ್ಕೆ ನೀಡಲಾಗಿದೆಯೇ? ಈ ಯಾವ ಪ್ರಶ್ನೆಗೂ ಅನುಕೂಲಕರ ಉತ್ತರ ಸಿಗಲಾರದು. ಅಂದರೆ ಚಂಡೀಗಢದ ವಿಚಾರದಲ್ಲಿ ತಿಂಗಳುಗಟ್ಟಲೆ ನಿದ್ದೆ ಹೊಡೆದಿರುವ ಸರಕಾರ ಸ್ವಾಯತ್ತೆ ಕೇಳುವ ಆನಂದಪುರ ಸಾಹಿಬ್ ನಿರ್ಣಯದ ವಿಚಾರದಲ್ಲಿಯೂ ಅದನ್ನೇ ಮಾಡಿದೆ.

ನಮ್ಮ ರಾಜಕೀಯ, ಆರ್ಥಿಕ ಹಾಗೂ ಔದ್ಯಮಿಕ ವ್ಯವಸ್ಥೆಯ ಆರೋಗ್ಯದ ಪ್ರಶ್ನೆಯೇ ಇಂದು ಪಂಜಾಬು ಕ್ಷೋಭೆಯ ರೂಪದಲ್ಲಿ ದೇಶದ ಮುಂದೆ ನಿಂತಿದೆ. ಅದಕ್ಕೆ ತಕ್ಕ ಉತ್ತರವನ್ನು ಸರಕಾರ ಕೊಡಬೇಕು. ಹಾಗೆ ಕೊಡುವಂತೆ ಜನರೂ ನೋಡಿಕೊಳ್ಳಬೇಕು.

ಮುಂಗಾರು

ಭಾನುವಾರ, ಏಪ್ರಿಲ್ 6, 1986

ಬೇಕು—ಕಾವಲಿಗೊಂದು ಸಂಸ್ಥೆ

ನ್ಯಾಯಬೆಲೆ ಅಂಗಡಿಗಳಲ್ಲಿ ವಿತರಣೆ ಮಾಡುವ ಆಹಾರಧಾನ್ಯಗಳ ಗುಣಮಟ್ಟ ಚೆನ್ನಾಗಿಲ್ಲವೆಂದು ಸರಕಾರವೇ ಒಪ್ಪಿಕೊಂಡಿದೆ. ಈ ವಿಚಾರ ಪ್ರಜಾ ಜನರಿಗೆ ಬಲು ಹಿಂದೆಯೇ ತಿಳಿದಿತ್ತು. ಸಾಮಾನ್ಯವಾಗಿ ನಗರಗಳಲ್ಲಾದರೂ ಒಳ್ಳೆಯ ಅಕ್ಕಿ ಗೋಧಿ ಜನರಿಗೆ ಸಿಗುತ್ತಿದ್ದವು. ಇದೀಗ ದೆಹಲಿಯಲ್ಲಿಯೂ ಅಂತಹ ವಿದ್ಯಮಾನ ಇರುವುದು ತಮ್ಮ ಅರಿವಿಗೆ ಬಂದಿದೆಯೆಂದು ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಹಾಯಕ ಸಚಿವ ಅಜಿತ್ ಕೆ. ಪಂಜಾ ಹೇಳಿದ್ದಾರೆ. ಆಹಾರಧಾನ್ಯ ಗುಣಮಟ್ಟ ಉತ್ತಮವಿರುವಂತೆ ನೋಡಿಕೊಳ್ಳಲು ರಾಜ್ಯಸರಕಾರಗಳು ಜಂಟಿ ತನಿಖೆ ನಡೆಸಬೇಕೆಂದು ಕೇಂದ್ರ ಸರಕಾರ ರಾಜ್ಯ ಸರಕಾರಗಳಿಗೆ ಸಲಹೆ ಮಾಡಿರುವುದನ್ನು ಅವರು ತಿಳಿಸಿದ್ದಾರೆ.

ಪಡಿತರ ವ್ಯವಸ್ಥೆಯಲ್ಲಿರುವ ನ್ಯೂನತೆಯು ಆಹಾರಧಾನ್ಯಗಳ ಕಳಪೆ ಗುಣಮಟ್ಟದಲ್ಲಿ ಮಾತ್ರವೇ ಅಲ್ಲ. ಪಡಿತರ ವ್ಯವಸ್ಥೆಯಲ್ಲಿ ಅಧಿಕೃತವಾಗಿಯೂ ಅನಧಿಕೃತವಾಗಿಯೂ ಅನ್ಯಾಯಗಳು ನಡೆದುಕೊಂಡೇ ಬಂದಿವೆ. ಹಲವು ರಾಜ್ಯಗಳಲ್ಲಿ ಪಡಿತರಜಾಲವು ಇಂದು ಪೂರ್ಣವಾಗಿ ಖಾಸಗಿಯವರ ಕೈಯಲ್ಲೇ ಇರುವುದರಿಂದ ಪಡಿತರ ಸಾಮಗ್ರಿಗಳನ್ನು ಸೂಕ್ತವಾಗಿ ವಿತರಣೆ ಮಾಡದೆ ಕಳ್ಳದಾರಿಯಿಂದ ಮುಕ್ತ ಮಾರುಕಟ್ಟೆಗೆ ತಿರುಗಿಸುತ್ತಿರುವ ಅದೆಷ್ಟೋ ಪ್ರಕರಣಗಳು ನಡೆಯುತ್ತಿವೆ. ಕರ್ನಾಟಕ ರಾಜ್ಯದಲ್ಲಿಯೂ ಇಂತಹ ವಿದ್ಯಮಾನಗಳು ಹಲವಿವೆ. ನಗರ ಹಳ್ಳಿಗಳೆಂಬ ತಾರತಮ್ಯವಿಲ್ಲದೆ ಇವೆಲ್ಲ ನಡೆಯುತ್ತಿವೆ. ರಾಜ್ಯದ ಹಲವು ಕಡೆ ಪಡಿತರ ವ್ಯವಸ್ಥೆಯನ್ನು ಖಾಸಗಿಯವರ ಕೈಯಿಂದ ತಪ್ಪಿಸಿ ಸಹಕಾರಿ ರಂಗಕ್ಕೆ ನೀಡಿದ್ದರೂ ಈ ಪಿಡುಗು ತಪ್ಪಿಲ್ಲ.

ಎಲ್ಲ ಪ್ರದೇಶಗಳ ಕೆಳವರ್ಗಗಳವರಿಗೆ ದಿನಬಳಕೆಯ ಅವಶ್ಯಕ ಸಾಮಗ್ರಿಗಳು ಸುಲಭವಲ್ಲಿ ಸುಲಭ ಕ್ರಯಕ್ಕೆ ದೊರೆಯಬೇಕು. ಅದಕ್ಕಾಗಿ ಅವರು ಪರದಾಟ ಮಾಡುವುದು ತಪ್ಪಬೇಕು ಎಂಬುದು ನ್ಯಾಯಬೆಲೆ ಅಂಗಡಿ ವ್ಯವಸ್ಥೆಯ ಹಿಂದಿರುವ ತತ್ವವಾಗಿದೆ. ಜೀವನಾವಶ್ಯಕ ಸಾಮಗ್ರಿಗಳ ವಿಚಾರದಲ್ಲಿ ಖಾಸಗಿ ಮುಕ್ತ ಮಾರುಕಟ್ಟೆಯವರು ಮಾಯದಾ ವ್ಯವಹಾರಕ್ಕಾಗಿ ಸಾಮಗ್ರಿಗಳನ್ನು ಅಡಗಿಸಿ ಕೃತಕ ಕೊರತೆ ಸೃಷ್ಟಿಸಿ ಜನರ ಬದುಕಿನೊಂದಿಗೆ ಚೆಲ್ಲಾಟ ಆಡಬಾರದು ಎಂಬ ಉದ್ದೇಶದಿಂದ ನ್ಯಾಯಬೆಲೆ ಸಾಮಗ್ರಿ ವಿತರಣೆ ವ್ಯವಸ್ಥೆ ಬಂದಿದೆ. ಲಾಭವೂ ಇಲ್ಲದೆ ನಷ್ಟವನ್ನೂ ತಂದುಕೊಳ್ಳದೆ ನಡೆಯುವ ವ್ಯವಸ್ಥೆ ಇದಾಗಿದೆ. ಆದರೆ ಸಾರ್ವಜನಿಕರ ಅನುಕೂಲಕ್ಕಾಗಿ ಸರಕಾರವೇ ಪಡಿತರ ಸಾಮಗ್ರಿಗಳಿಗೆ ಸಹಾಯಧನ ನೀಡುವ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈ ಸಹಾಯಧನದ ಪ್ರಯೋಜನ ಗ್ರಾಹಕರಿಗೆ ಸಲ್ಲಬೇಕು ಎಂಬುದು ಎಲ್ಲರೂ ಒಪ್ಪಿಕೊಂಡ ವಿಚಾರ.

ಆದರೆ ಈಗ ಆಗುತ್ತಿರುವುದೇ ಬೇರೆ. ಸಹಾಯಧನವನ್ನೆಲ್ಲಾ ಪಡಿತರವ್ಯವಸ್ಥೆಯ ಉಸ್ತುವಾರಿ ನೋಡಿಕೊಳ್ಳುವ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯೇ ನುಂಗಿಹಾಕುತ್ತದೆ. ಗ್ರಾಹಕರಿಗೆ ಹಸ್ತಾಂತರಿಸುವುದಿಲ್ಲ. ಸ್ಟೋರೇಜ್ ಚಾರ್ಜ್, ಹ್ಯಾಂಡ್ಲಿಂಗ್ ಚಾರ್ಜ್, ಸಾಗಣೆವೆಚ್ಚ ಎಂದೆಲ್ಲ ಹತ್ತಾರು ಚಾರ್ಜುಗಳನ್ನು ನಮೂದಿಸಿ ಪಡಿತರ ಸಾಮಗ್ರಿಗಳ ಬೆಲೆ ವಿಧಿಸಲಾಗಿದೆ. ಈ ಚಾರ್ಜುಗಳೇ ಪಡಿತರ ಧಾನ್ಯದ ಬೆಲೆಯಲ್ಲಿ ಶೇಕಡ 40ರಿಂದ ಶೇಕಡ 50ರ ತನಕ ಆಗುತ್ತದೆ.

ಸರಕಾರ ಮಾರುಕಟ್ಟೆಯಲ್ಲಿ ರೈತರಿಂದ ಲೆವಿ ಮೂಲಕ ಸಂಗ್ರಹಿಸುವ ಬೆಲೆಗೇ ಧಾನ್ಯವನ್ನು ಗ್ರಾಹಕರಿಗೆ ಮಾರುವುದು ಸಾಧ್ಯವಿಲ್ಲವೇ? ಹ್ಯಾಂಡ್ಲಿಂಗ್ ಚಾರ್ಜ್, ಸ್ಟೋರೇಜ್ ಚಾರ್ಜ್ ಮುಂತಾದವನ್ನು ಸಬ್ಸಿಡಿ ಹಣದಿಂದಲೇ ನಿಭಾಯಿಸುವುದಕ್ಕಾಗುವುದಿಲ್ಲವೇ? ಸಬ್ಸಿಡಿ ಎಂಬ ಕಲ್ಪನೆಯೇ ಹುಟ್ಟಿಕೊಂಡದ್ದು ಅದಕ್ಕಾಗಿಯೇ ಅಲ್ಲವೇ?

ಸಚಿವರು ಈಗ ಸೂಚಿಸಿರುವ ಜಂಟಿ ತಪಾಸಣಾ ವ್ಯವಸ್ಥೆ ಕೇವಲ ಧಾನ್ಯಗಳ ಗುಣಮಟ್ಟಕ್ಕೆ ಸಂಬಂಧಿಸಿರಬಾರದು. ಅಷ್ಟೇ ಅಲ್ಲದೆ ಈ ಜಾಗೃತ ವ್ಯವಸ್ಥೆಯು ಸರಕಾರಿ ಅಧಿಕಾರಿ ವಲಯದೊಳಗೆ ಸೀಮಿತಗೊಳ್ಳಲೂ ಬಾರದು. ಜಂಟಿ ತನಿಖೆ ಎಂದರೆ ಏನೆಂದು ಸಚಿವರು ವಿವರಿಸಿಲ್ಲ. ಅದು ಸಾರ್ವಜನಿಕ ಪ್ರತಿನಿಧಿಗಳನ್ನೂ ಒಳಗೊಳ್ಳಬೇಕು. ಪಡಿತರ ಜಾಲದಲ್ಲಿನ ಅಕ್ರಮಗಳ ಬಗ್ಗೆ ಸಾಮಾನ್ಯ ಜನರು ಅಧಿಕಾರಿಗಳ ಬಳಿ ದೂರಿಕೊಳ್ಳಲು ಹಿಂಜರಿಯಬಹುದು. ಅಧಿಕಾರಿಗಳು ವಿಶ್ವಾಸಾರ್ಹರಲ್ಲದೆ ಇರಬಹುದು. ಕಾವಲು ವ್ಯವಸ್ಥೆಯಲ್ಲಿ ಸಾರ್ವಜನಿಕರನ್ನೂ ಸೇರಿಸಿಕೊಂಡರೆ ಈ ಸಮಸ್ಯೆಯನ್ನು ಹೋಗಲಾಡಿಸುವುದು ಸಾಧ್ಯ. ಸಾರ್ವಜನಿಕ ಪ್ರತಿನಿಧಿಗಳು ಉಳ್ಳ ಇಂತಹ ಜಾಗೃತ ಸಮಿತಿಯ ವ್ಯವಸ್ಥೆಯನ್ನು ಎಲ್ಲೆಡೆ ಎಲ್ಲ ಮಟ್ಟಗಳಲ್ಲಿಯೂ ಸರಕಾರ ಜಾರಿಗೆ ತರಬೇಕು. ಅದಕ್ಕಾಗಿ ಆಹಾರ ಹಾಗೂ ನಾಗರಿಕ ಪೂರೈಕೆ ಇಲಾಖೆಯಲ್ಲಿ ಪ್ರತ್ಯೇಕ ವಿಭಾಗವೊಂದನ್ನು ತೆರೆಯಬಹುದು. ಇಲ್ಲವೆ ರಾಜ್ಯಮಟ್ಟದಲ್ಲಿ ಪಡಿತರ ಗ್ರಾಹಕರ ಶಾಸನಬದ್ಧ ಸ್ವಾಯತ್ತ ಸಂಸ್ಥೆಯೊಂದನ್ನು ಸ್ಥಾಪಿಸಬಹುದು. ಇಂತಹ ಯಾವುದೇ ವ್ಯವಸ್ಥೆ ಮಾಡದೆ ಜಂಟಿ ತನಿಖೆಯ ಸಲಹೆ ಮಾತ್ರವೇ ಕೊಡುವುದು ಕೆಲಸಕ್ಕೆ ಬಾರದ ಕಾಟಾಚಾರವಾಗುತ್ತದೆ.

ನ್ಯಾಯಬೆಲೆ ವ್ಯವಸ್ಥೆಯೆಂಬುದು ಈಗ ಕೇವಲ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆಗಳಿಗೆ ಮಿತಿಗೊಂಡಿದೆ. ಆಗೊಮ್ಮೆ ಈಗೊಮ್ಮೆ ಮೈದಾ. ರವೆ, ಖಾದ್ಯ ತೈಲ, ಬಟ್ಟೆಗಳೂ ಬರುವುದಿದೆ. ಸಾಮಗ್ರಿಗಳ ವಿತರಣೆಯಲ್ಲಿ ನಗರಹಳ್ಳಿಗಳೆಂಬ ಭೇದ ಭಾವ ಇರುವುದನ್ನು ಬಹುಕಾಲದಿಂದ ಹಳ್ಳಿಗರು ಅನುಭವಿಸುತ್ತ ಬಂದಿದ್ದಾರೆ. ವಿದ್ಯುತ್ ಅಡುಗೆ ಅನಿಲ ಮುಂತಾದ ಸೌಲಭ್ಯಗಳೆಲ್ಲವು ಇರುವ ನಗರಗಳಲ್ಲಿ ಸೀಮೆಎಣ್ಣೆ ಧಾರಾಳವಾಗಿ ವಿತರಿಸಿ ಹಳ್ಳಿಗಳಲ್ಲಿ ತಿಂಗಳಿಗೆರಡು ಲೀಟರ್ ಕೊಡುವ ಅನ್ಯಾಯವನ್ನು ನಮ್ಮ ಅಧಿಕಾರಿಗಳು ಮಾಡುತ್ತಲೇ ಬಂದಿದ್ದಾರೆ. ಇಂಥ ಅನ್ಯಾಯಗಳೆಲ್ಲ ನಿಲ್ಲಬೇಕು. ಸಾರ್ವಜನಿಕರ ಕಾವಲು ಈ ನಿಟ್ಟಿನಲ್ಲಿಯೂ ಪ್ರಯೋಜನಕಾರಿಯಾದೀತು.

ಜತೆಗೆ ಪಡಿತರ ವ್ಯವಸ್ಥೆಯು ಸಾಮಾನ್ಯನ ಬದುಕಿನ ಹೆಚ್ಚಿನೆಲ್ಲಾ ಸಾಮಗ್ರಿಗಳನ್ನು ಒಳಗೊಳ್ಳಬೇಕು. ಇಂದು ಈ ದೇಶದ ಜನಸಮುದಾಯವನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ಖಾಸಗಿ ವ್ಯಾಪಾರಿ ವರ್ಗದ ಕೈಯಿಂದ ಜನರನ್ನು ಪಾರು ಮಾಡಬೇಕಿದ್ದರೆ ಅದೊಂದೇ ಮಾರ್ಗ.

ಮುಂಗಾರು

ಮಂಗಳವಾರ, ಏಪ್ರಿಲ್ 8, 1986

ಹೋರಾಟದಲ್ಲಿ ಹುಟ್ಟಿ ಬರಲಿ

ಕರ್ನಾಟಕ ರಾಜ್ಯದ ಜನರ ಅಭಿವೃದ್ಧಿಗಾಗಿಯೂ ಸಮಗ್ರ ಮುನ್ನಡೆಗಾಗಿಯೂ ದುಡಿಯುವಂತಹ ಪ್ರಾದೇಶಿಕ ಪಕ್ಷವೊಂದರ ಅಗತ್ಯವಿದೆಯೆಂದು ಕನ್ನಡ ಚಿಂತಕರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಅಭಿಪ್ರಾಯ ಪಟ್ಟ ಗೋಷ್ಠಿಯ ಅಧ್ಯಕ್ಷತೆಯನ್ನು ರೈತ ಚಳುವಳಿಯ ನಾಯಕ ಪ್ರೊ। ಎಂ. ಡಿ. ನಂಜುಂಡಸ್ವಾಮಿ ವಹಿಸಿದ್ದರು.

ರಾಷ್ಟ್ರೀಯ ಮಟ್ಟದಲ್ಲಿ ಜಾಲ ಹರಡಿರುವ ರಾಜಕೀಯ ಪಕ್ಷಗಳಿಂದ ಈ ವೈವಿಧ್ಯಮಯ ದೇಶದ ಪ್ರತಿ ಪ್ರದೇಶದ ಅಭಿವೃದ್ಧಿಯನ್ನು ನೆರವೇರಿಸಿ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ ಎಂಬುದು ಸೈದ್ಧಾಂತಿಕ ವಿಚಾರ ಮಾತ್ರವೇ ಅಲ್ಲ. ಅದು ಸ್ವಾತಂತ್ರ್ಯಾನಂತರದ ಸುಮಾರು ನಾಲ್ಕು ದಶಕಗಳಲ್ಲಿ ವಾಸ್ತವದಲ್ಲಿ ಸಾಬೀತಾಗಿರುವ ವಿಚಾರ. ಎಲ್ಲವೂ ದಿಲ್ಲಿಯಲ್ಲೇ ತೀರ್ಮಾನವಾಗಬೇಕಾಗಿರುವ ಇಂದಿನ ರಾಜಕೀಯ ವಿಕೃತಿಯಲ್ಲಿ ಜನತಂತ್ರವೆಂಬುದು ತನ್ನ ಅರ್ಥವೆಲ್ಲವನ್ನೂ ಕಳೆದುಕೊಂಡಿದೆ. ಅಧಿಕಾರಗಳು ದೆಹಲಿ ಪ್ರಭುತ್ವದ ಕೈಯಲ್ಲಿ ಕೇಂದ್ರೀಕೃತವಾಗಿದೆ. ಅಧಿಕಾರ ವಿಕೇಂದ್ರೀಕರಣ ಆಗಬೇಕು. ಹಾಗೆ ಆದರೆ ಮಾತ್ರವೇ ಇಂದಿನ ಈ ಆಡಳಿತ-ರಾಜಕೀಯ ಚೌಕಟ್ಟು ಉಳಿಯುವುದು ಸಾಧ್ಯ ಎಂದು ಹಲವರು ಹಲವು ಬಾರಿ ಈ ದೇಶದ ಅಧಿಕಾರಾರೂಢ ರಾಜಕಾರಣಿಗಳಿಗೆ ಮನವಿ ಮಾಡಿಕೊಂಡಿದ್ದರೂ ಯಾವುದೂ ಫಲಕಾರಿಯಾಗಿಲ್ಲ. ಅಧಿಕಾರದ ಕೇಂದ್ರೀಕರಣ ನಡೆಯುತ್ತಲೇ ಬಂದಿದೆ.

ಹೀಗೆ ಕೇಂದ್ರೀಕರಣ ನಡೆದಿರುವುದಕ್ಕೆ ಆಳುವ ಪಕ್ಷದ ಮುಖ್ಯಸ್ಥರು ವರ್ಚಸ್ವಿಗಳಾಗಿದ್ದುದು ಈ ರಾಜಕೀಯ ವರ್ಚಸ್ಸಿನ ಪರಿಣಾಮವಾಗಿ ಅವರು ಹೆಚ್ಚೆಚ್ಚು ಸರ್ವಾಧಿಕಾರಿ ಒಲವುಗಳನ್ನು ಪ್ರದರ್ಶಿಸಿದ್ದು ಕಾರಣ. ಅದೇನೇ ಇದ್ದರೂ ಅಧಿಕಾರದ ವಿಕೇಂದ್ರೀಕರಣಕ್ಕೆ ಈ ದೇಶದ ಸಾಂವಿಧಾನಿಕ ಚೌಕಟ್ಟು ಕೂಡ ಕಾರಣವೆನಿಸಿದೆ ಎಂಬುದನ್ನು ಕೂಡ ಅಲ್ಲಗಳೆಯುವಂತಿಲ್ಲ. ನಮ್ಮದು ಹೆಸರಿಗೂ ಕೂಡ ಒಕ್ಕೂಟ ಮಾದರಿ ರಾಷ್ಟ್ರವಲ್ಲ. ನಮ್ಮದು ಏಕಸತ್ತಾಧಿಕಾರದ ವ್ಯವಸ್ಥೆ. ಈ ದೇಶದ ಸಂಸತ್ತಿಗೆ ಹಲವಾರು ವಿಚಾರಗಳಲ್ಲಿ ಸಾರ್ವಭೌಮಾಧಿಕಾರಗಳಿವೆ. ರಕ್ಷಣೆ, ಸಂಪರ್ಕ, ನಾಣ್ಯ ಮುದ್ರಣ, ವಿದೇಶ ವ್ಯವಹಾರ ಇವೆಲ್ಲವೂ ಸಹಜವಾಗಿಯೇ ಕೇಂದ್ರ ಸರಕಾರದ ಕೈಯಲ್ಲಿವೆ. ಅದಲ್ಲದೆ ಹಣಕಾಸು, ಶಿಕ್ಷಣ, ಕಾನೂನು ಹಾಗೂ ಶಾಂತಿಪಾಲನೆ, ಗ್ರಾಮಾಭಿವೃದ್ಧಿ, ಕೃಷಿ, ಕೈಗಾರಿಕೆ, ವಾಣಿಜ್ಯ, ಸಾರಿಗೆ ಇವೆಲ್ಲವುಗಳಲ್ಲಿಯೂ ಕೇಂದ್ರ ಸರಕಾರಕ್ಕೆ ಸಾಕಷ್ಟು ಅಧಿಕಾರಗಳಿವೆ. ಯಾವೊಂದು ವಿಚಾರವೂ ಈ ದೇಶದ ಅನೇಕಾನೇಕ ರಾಜ್ಯಗಳಲ್ಲಿ ಕೇಂದ್ರ ಸರಕಾರದ ಗಮನಕ್ಕೆ ಬಾರದೆ ನಡೆಯುವುದು ಅಸಂಭವವಿದೆ. ಯಾವ ವಿಷಯವೂ ಕೇಂದ್ರದ ಮನಸ್ಸಿಗೆ ವಿರುದ್ಧವಾಗಿ ನಡೆಯುವುದಂತೂ ಕನಸಲ್ಲಿಯೂ ಎಣಿಸುವುದಕ್ಕೆ ಅಸಾಧ್ಯವಾದ ಸಂಗತಿ.

ಈ ವಿಕೃತಿ ರಾಜಕೀಯ ಪಕ್ಷಗಳ ಸ್ವರೂಪದಿಂದಲೂ ದೇಶದ ಆಡಳಿತ ಚೌಕಟ್ಟಿನ ಸ್ವರೂಪದಿಂದಲೂ ಜಂಟಿಯಾಗಿ ಬಂದಿರುವ ಪಿಡುಗು. ಆದ್ದರಿಂದ ಪ್ರಾದೇಶಿಕ ಪಕ್ಷವೊಂದರ ಸ್ಥಾಪನೆ ಮಾತ್ರದಿಂದ ಈ ರೋಗವನ್ನು ಕಿತ್ತುಹಾಕಿ ಬಿಡುವುದು ಸಾಧ್ಯವಾಗಲಾರದು. ಪ್ರಾದೇಶಿಕ ಪಕ್ಷಗಳ ಪ್ರಯೋಗ ಈ ದೇಶದಲ್ಲಿ ನಡೆದಿದೆ. ಜಮ್ಮು-ಕಾಶ್ಮೀರದಲ್ಲಿ ನ್ಯಾಶನಲ್ ಕಾನ್ಫರೆನ್ಸ್ ಕೆಲ ಕಾಲ ಅಧಿಕಾರ ನಡೆಸಿದೆ. ಆದರೆ ಕೇಂದ್ರ ಸರಕಾರ ಖುಷಿ ಬಂದಂತೆ ಅಲ್ಲಿ ಸರಕಾರಗಳನ್ನು ಉರುಳಿಸುವ ಆಟ ನಡೆಸಿದ್ದನ್ನು ನಾವೆಲ್ಲ ಕಂಡಿದ್ದೇವೆ. ತಮಿಳ್ನಾಡಿನಲ್ಲಿ ದಶಕಗಳಿಂದಲೇ ಪ್ರಾದೇಶಿಕ ಪಕ್ಷ ಅಧಿಕಾರ ನಡೆಸುತ್ತಿದೆ. ಈ ಪಕ್ಷಕ್ಕೆ ತನ್ನ ರಾಜ್ಯದಲ್ಲಿ ಸ್ವಂತಿಕೆಯ ದಾರಿಯಲ್ಲಿ ನಡೆಯಲು ತಕ್ಕ ಮಟ್ಟಿಗೆ ಸಾಧ್ಯವಾಗಿದೆಯಾದರೂ ಹಣಕಾಸನ್ನೂ ಯೋಜನೆಗಳನ್ನೂ ದೊರಕಿಸಿಕೊಳ್ಳುವುದಕ್ಕಾಗಿ ಅದು ದಿಲ್ಲಿ ದೊರೆಗಳಿಗೆ ಡೊಗ್ಗು ಸಲಾಮು ಹಾಕುತ್ತ ಮರ್ಜಿ ಕಾಯಬೇಕಾದ ಪ್ರಸಂಗ ಒಂದೆರಡಲ್ಲ.

ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಪಕ್ಷವೇ ಎಲ್ಲಾ ರೋಗಗಳಿಗೂ ಮದ್ದು ಎಂಬ ತೀರ್ಮಾನಕ್ಕೆ ಬಂದರೆ ತಪ್ಪಾದೀತು. ಅಧಿಕಾರ ವಿಕೇಂದ್ರೀಕರಣದ ದಾರಿಯಲ್ಲಿ ಪ್ರಾದೇಶಿಕ ಪಕ್ಷಗಳು ಒಂದು ಮಹತ್ವದ ಹೆಜ್ಜೆಯಾದೀತು ಎಂಬುದಂತೂ ನಿಜ. ಅದುವೇ ಸಕಲ ರೋಗ ವಿನಾಶಿನಿಯಲ್ಲ. ಆಗಬೇಕಾದ್ದು ರಾಜಕೀಯ ಚೌಕಟ್ಟನ್ನೇ ಬದಲಾಯಿಸುವ ಕೆಲಸ. ಅದನ್ನು ಮಾಡದ ವಿನಾ ರಾಜ್ಯದಲ್ಲಿ ಯಾವ ಪಕ್ಷ ಅಧಿಕಾರ ಪಡೆದರೂ ದಿಲ್ಲಿಯವರ ಹಂಗಿನ ಕೂಳೇ ಗತಿ. ಈ ರಾಜಕೀಯ ಆರ್ಥಿಕ ಹಂಗು ರಾಜ್ಯದ ಅಭಿವೃದ್ಧಿಯ ಕಾಲಿಗೆ ಕಟ್ಟಿದ ಕಲ್ಲು. ಈ ಹಂಗನ್ನು ಕಿತ್ತೊಗೆಯುವ ಹೊರತು ಪ್ರಾದೇಶಿಕ ಅಸಮತೋಲನದ ನಿವಾರಣೆ ಆಗಲಾರದು.

ಒಕ್ಕೂಟ ವ್ಯವಸ್ಥೆಯೇ ಹೊಸ ರಾಜಕೀಯ ಚೌಕಟ್ಟಿನ ತಳಪಾಯವಾಗಿರಬೇಕು. ಕೇಂದ್ರವು ರಕ್ಷಣೆ, ನಾಣ್ಯ ಮುದ್ರಣ, ಸಂಪರ್ಕ ಹಾಗೂ ವಿದೇಶ ವ್ಯವಹಾರ-ಇಷ್ಟನ್ನು ಮಾತ್ರ ಇರಿಸಿಕೊಂಡು ಉಳಿದೆಲ್ಲಾ ವ್ಯವಹಾರವನ್ನು ರಾಜ್ಯಗಳಿಗೆ ಬಿಟ್ಟುಕೊಡಬೇಕು. ರಾಜ್ಯಗಳ ರಾಜಕೀಯ ಅಧಿಕಾರ ವಲಯದಲ್ಲಿ ಹಸ್ತಕ್ಷೇಪಿಸುವ ಯಾವ ಅವಕಾಶವೂ ಕೇಂದ್ರಕ್ಕಿರಬಾರದು. ರಾಜ್ಯಗಳ ಅಧಿಕಾರ ವಲಯದೊಳಗಿನ ಯಾವ ವಿಧೇಯಕವೂ ದೆಹಲಿಯ ರಾಷ್ಟ್ರಭವನದಲ್ಲಿ ಅಂಕಿತಕ್ಕಾಗಿ ಸೆರಗೊಡ್ಡಿ ನಿಲ್ಲುವ ರಾಜಕೀಯ ವಿಕಾರವು ಇರಲೇಬಾರದು.

ಇದನ್ನು ಸಾಧಿಸುವ ಮೊದಲ ಹೆಜ್ಜೆಯಾಗಿ ಪ್ರಾದೇಶಿಕ ಪಕ್ಷ ಬರಲಿ. ಆದರೆ ಅದು ನಾಲ್ಕು ಮಂದಿ ಸೇರಿ ಕ್ಲಬ್ಬಿನ ಒಳಗೆ ಕೂತು ಮಾಡುವ ಗುಟ್ಟಿನ ವ್ಯವಹಾರದ ಕೂಸಾಗಬಾರದು. ಇಂತಹ ರಾಜಕೀಯ ಶಕ್ತಿಯು ಜನಪರಹೋರಾಟದ ಕುಲುಮೆಯಲ್ಲಿ ಬೆಂದು ಗಟ್ಟಿಯಾಗಬೇಕು. ಜನರ ಸಮಸ್ಯೆಗಳನ್ನೆತ್ತಿಕೊಂಡು ಹೋರಾಡಬೇಕು. ಅಂಥ ಹೋರಾಟದಲ್ಲಿ ನಾಯಕತ್ವ ಹುಟ್ಟುತ್ತದೆ. ರಾಜಕೀಯ ಪಂಥಾಹ್ವಾನಗಳನ್ನೆದುರಿಸುವ ಸಾಮರ್ಥ್ಯವು ಅಂತಹ ಹೋರಾಟಗಾರರಿಗೆ ಮಾತ್ರವೇ ಬರುತ್ತದೆ.

ಇಂತಹ ಒಂದು ಹೋರಾಟಕ್ಕೆ ಈಗ ನಡೆದಿರುವ ಚಿಂತನೆಯು ಚಾಲನೆ ಕೊಡಬೇಕು.

ಮುಂಗಾರು
ಬುಧವಾರ, ಏಪ್ರಿಲ್ 9, 1986

ಮತ್ತೆ ತಿಹಾರಿಗೆ

ಅಂತರರಾಷ್ಟ್ರೀಯ ಅಪರಾಧಿ ಚಾರ್ಲ್ಸ್ ಗುರುಮುಖ್ ಶೋಭರಾಜ್‌ನನ್ನು ಮುಂಬಯಿ ಪೊಲೀಸರು ಗೋವೆಯಲ್ಲಿ ಸೆರೆ ಹಿಡಿದು ತಮ್ಮ ಸಾಹಸವನ್ನೂ ಚಾಕಚಕ್ಯತೆಯನ್ನೂ ಮೆರೆದಿದ್ದಾರೆ. ಮಾರ್ಚ್ 16ರಂದು ತಿಹಾರ್ ಸೆರೆಮನೆಯಿಂದ ತಪ್ಪಿಸಿಕೊಂಡು ಹೋಗಲು ಚಾರ್ಲ್ಸ್‌ನಿಗೆ ಅವಕಾಶ ಕೊಟ್ಟು ಈದೇಶದ ಜೇಲು ಆಡಳಿತದವರೆಲ್ಲರೂ ಅವಮಾನ- ನಾಚಿಕೆಗಳಿಂದ ತಲೆ ತಗ್ಗಿಸುವಂತೆ ಮಾಡಿದ್ದ ಪ್ರಮಾದವನ್ನು ತಕ್ಕಮಟ್ಟಿಗೆ ತಿದ್ದಿಕೊಳ್ಳುವ ಸಾಧನೆ ಮುಂಬಯಿ ಪೊಲೀಸರದ್ದು. ಅವರಿಗೆ ಅಭಿನಂದನೆ ಸಲ್ಲಬೇಕು.

ಇದೀಗ ಶೋಭರಾಜ್ ಮತ್ತೆ ರಾಜಧಾನಿಯ ತಿಹಾರ್ ಸೆರೆಮನೆಯನ್ನು ಹೊಕ್ಕಿದ್ದಾನೆ. ಈ ಸೆರೆಮನೆ ಇಡಿಯ ದೇಶದಲ್ಲೇ ಅತ್ಯಂತ ಭದ್ರ ಕಾವಲಿನ ಸೆರೆಮನೆಯೆಂದು ಹೆಸರಾಗಿದೆ. ಆದರೆ ವಾಸ್ತವದಲ್ಲಿ ಹಾಗಿಲ್ಲವೆಂಬುದು ಕಳೆದ ಒಂದು ದಶಕದಲ್ಲಿ ನಡೆದ ಹಲವಾರು ಘಟನೆಗಳಿಂದ ಸ್ಪಷ್ಟವಾಗಿದೆ. ಈ ಸೆರೆಮನೆ ಭ್ರಷ್ಟಾಚಾರದ ಕೂಪವಾಗಿದೆ. ಈ ಸೆರೆಮನೆಯ ಅಧಿಕಾರಿಗಳೂ ಸಿಬ್ಬಂದಿಗಳೂ ಅದರೊಳಗಿರುವ ಅಪರಾಧಿಗಳಂತೆಯೇ ಜನಸಮುದಾಯಕ್ಕೆ ಹಾನಿ ತರುವ ಚಟುವಟಿಕೆಗಳನ್ನು ನಡೆಸುವ ಕ್ರಿಮಿನಲ್‌ಗಳೆನಿಸಿದ್ದಾರೆ. ತಿಹಾರ್ ಸೆರೆಯ ಅಧಿಕಾರಿಗಳ ಈ ಕರ್ತವ್ಯಚ್ಯುತಿಯು ಇತರ ಸರಕಾರಿ ಸಿಬ್ಬಂದಿಗಳವರ ಪ್ರಮಾದದಂತಲ್ಲ. ಅದು ಈ ದೇಶದ ಹಾಗೂ ಇತರ ಹಲವಾರು ದೇಶಗಳ ಜನರ ಬದುಕಿಗೆ ಭೀತಿಯನ್ನೂ ಅಭದ್ರತೆಯನ್ನೂ ತರುತ್ತದೆ. ಚಾರ್ಲ್ಸ್ ಶೋಭರಾಜ್ ಅಂತಹ ಕುಖ್ಯಾತ ಅಪರಾಧಿ. ಆತ ಕೊಲೆ, ಸುಲಿಗೆ, ಮಾದಕ ದ್ರವ್ಯ ಕಳ್ಳಸಾಗಣೆ, ಮಾದಕ ದ್ರವ್ಯ ತಿನ್ನಿಸಿ ದರೋಡೆ, ಹಣ ಲಪಟಾವಣೆ, ವಂಚನೆ, ಫೋರ್ಜರಿ ಮುಂತಾದ ಹತ್ತು ಹಲವು ಅಪರಾಧಗಳಲ್ಲಿ ಪರಿಣತ. ಇಸ್ರೇಲಿ ಪ್ರವಾಸಿಯೊಬ್ಬರನ್ನು ವಾರಣಾಸಿಯಲ್ಲಿ ಕೊಲೆ ಮಾಡಿದ್ದಕ್ಕಾಗಿ 1982ರಲ್ಲಿ ನ್ಯಾಯಾಧೀಶರು ಆತನಿಗೆ ಜೀವಾವಧಿ ಸೆರೆವಾಸ ವಿಧಿಸಿದ್ದರು. ಥೈಲೆಂಡ್‌ನಲ್ಲಿ ಆತ ನಡೆಸಿದ ಕೊಲೆ- ದರೋಡೆಗಳೇ ಮೊದಲಾದ ಆರೋಪಗಳ ಬಗ್ಗೆ ವಿಚಾರಣೆಗಾಗಿ ಹಸ್ತಾಂತರಿಸಬೇಕೆಂದು ಆ ದೇಶ ಭಾರತ ಸರಕಾರವನ್ನು ಕೇಳಿತ್ತು, ಈ ದೇಶದ ನ್ಯಾಯಾಂಗವೂ ಅದಕ್ಕೆ ಅನುಮತಿ ಕೊಟ್ಟಿತ್ತು.

ಆದರೂ ಆ ಬಗ್ಗೆ ತೀರ್ಮಾನ ಆಗಿರಲಿಲ್ಲ. ದೆಹಲಿಯಲ್ಲಿ ಭಾರತ ಸರಕಾರದ ಯಾವನೋ ಉನ್ನತ ಅಧಿಕಾರಿ ಕಳೆದ ಹಲವಾರು ತಿಂಗಳುಗಳಿಂದ ಈ ಕಡತವನ್ನು ಮೂಲೆಯಲ್ಲಿಟ್ಟು ಕೂತಿರುವಂತೆ ಕಾಣಿಸುತ್ತದೆ. ತಿಹಾರ್ ಸೆರೆಮನೆಯಲ್ಲಿ ಇರುವಂತಹದೇ ಅಕ್ರಮಗಳೂ ಅವ್ಯವಹಾರಗಳೂ ಕೇಂದ್ರ ಸರಕಾರದ ಇಲಾಖೆಯೊಳಕ್ಕೂ ಹಬ್ಬಿರುವಂತೆ ಕಾಣಿಸುತ್ತದೆ.

ತಿಹಾರ್ ಸೆರೆಮನೆಯ ಅವ್ಯವಸ್ಥೆ, ಅಕ್ರಮ ಹಾಗೂ ಭ್ರಷ್ಟಾಚಾರಗಳ ಬಗ್ಗೆ ಕೆಲವು ವರ್ಷಗಳ ಹಿಂದೆ ದೂರುಗಳು ಬಂದಿದ್ದವು. ರಾಜಧಾನಿಯ ವಕೀಲರೊಬ್ಬರು ಸುಪ್ರೀಂ ಕೋರ್ಟಿನಲ್ಲಿ ತಿಹಾರ್ ವಿಚಾರ ಎತ್ತಿದ್ದರು. ಅಲ್ಲಿನ ಬಾಲಾಪರಾಧಿ ಕೈದಿಗಳನ್ನು ಪ್ರೌಢ ಕೈದಿಗಳು ಸಲಿಂಗ ರತಿಗೊಳಪಡಿಸಿದ ಹೇಯ ವ್ಯವಹಾರವನ್ನು ಸುಪ್ರೀಂಕೋರ್ಟ್ ಪರಿಶೀಲಿಸಿತ್ತು. ಈ ಬಗ್ಗೆ ತನಿಖೆನಡೆಸಬೇಕೆಂದು ದೆಹಲಿಯ ಲೆಫ್ಟಿನಂಟ್ ಗವರ್ನರ್‌ಗೆ ಕೋರ್ಟ್ ಆದೇಶಿಸಿದ್ದಿತು. ಆ ತನಿಖೆಯ ಗತಿ ಏನಾಯಿತೆಂಬುದು ಯಾರಿಗೂ ತಿಳಿದಿಲ್ಲ. ಕಳೆದ ಮೂರು ವರ್ಷಗಳಲ್ಲಿ ಈ ಸೆರೆಮನೆಯಿಂದ ಕೈದಿಗಳು ತಪ್ಪಿಸಿಕೊಂಡ ಐದಾರು ಪ್ರಕರಣಗಳು ನಡೆದಿವೆ. ತುರ್ತು ಪರಿಸ್ಥಿತಿಯ ಉತ್ಕಟಾವಸ್ಥೆಯಲ್ಲಿ ಕೂಡ ಈ ಜೇಲಿನ ವಾರ್ಡೊಂದರ ಕೈದಿಗಳು ಐದೂವರೆ ಮೀಟರು ಸುರಂಗವೊಂದನ್ನು ಕೊರೆದು ರಸ್ತೆಗೆ ದಾರಿ ಮಾಡಿ ತಪ್ಪಿಸಿಕೊಂಡಿದ್ದರು. ಶೋಭರಾಜ್‌ನೇ ಈ ಜೇಲಿನ ಸಂದರ್ಶಕರ ಕೊಠಡಿಯಲ್ಲಿ ತನ್ನ ಯುರೋಪಿಯನ್ ಗೆಳತಿಯೊಬ್ಬಳೊಡನೆ ಗಂಟೆಗಟ್ಟಲೆ ರಮಿಸಿದ ವಿಚಾರವು ಸಂಸತ್ತಿನಲ್ಲಿಯೂ ಗುಲ್ಲೆಬ್ಬಿಸಿತ್ತು.

ಮಾರ್ಚ್ 16ರಂದು ಶೋಭರಾಜ್ ತಪ್ಪಿಸಿಕೊಂಡದ್ದು ಹುಟ್ಟುಹಬ್ಬದ ಪಾರ್ಟಿಯ ನೆಪದಲ್ಲಿ ಜೇಲು ಅಧಿಕಾರಿಗಳಿಗೆ ಮಾದಕ ದ್ರವ್ಯ ಬೆರಸಿದ ಸಿಹಿ ತಿಂಡಿ ತಿನ್ನಿಸುವ ಮೂಲಕ. ಗುರುತರಿಯದ ಮಂದಿ ಕಾರಿನಲ್ಲಿ ಕೂತು ಸೆರೆಮನೆಯೊಳಗೆ ಬರಲು ಜೇಲಿನ ಕಾವಲಿನವರು ಅವಕಾಶ ಕೊಟ್ಟಿದ್ದರು. ಆ ಮೇಲೆ ಸಿಹಿತಿಂಡಿಯ ಸಮಾರಾಧನೆ ನಡೆಯಿತು. ಈ ಸೆರೆಮನೆಯಲ್ಲಿ ಇದೆಲ್ಲಾ ಸಾಮಾನ್ಯ ವಿಚಾರವಾಗಿತ್ತೆಂಬುದನ್ನು ಇದು ಸೂಚಿಸುತ್ತದೆ.

ಚಾರ್ಲ್ಸ್ ಶೋಭರಾಜನಿಗಿಂತ ಹೆಚ್ಚಿನ ಕಾವಲು ಅಗತ್ಯವಿದ್ದ ಕೈದಿ ಇಡಿಯ ಭಾರತದಲ್ಲಿ ಬೇರಾರೂ ಇರಲಿಲ್ಲ. ಹಾಗಿದ್ದ ಸಂದರ್ಭದಲ್ಲಿ ಕೂಡ, ಗರಿಷ್ಠ ಕಾವಲಿನ ತಿಹಾರ್ ಜೇಲಿನಲ್ಲಿಯೂ ಇಂತಹ ಪ್ರಮಾದ ಉಂಟಾದದ್ದು ಅಧಿಕಾರಿಗಳು ಆಸೆ ಆಮಿಷಗಳಿಗೆ ಬಲಿಯಾಗಿ ಕರ್ತವ್ಯ ಚ್ಯುತಿ ನಡೆಸಿರುವುದನ್ನು ಸೂಚಿಸುತ್ತದೆ. ಪರಿಣಾಮವಾಗಿ ಇಡಿಯ ರಾಷ್ಟ್ರಕ್ಕೇ ಅಪಮಾನವನ್ನು ತಂದಿದ್ದಾರೆ.

ತಿಹಾರ್ ಜೇಲಿನಲ್ಲಿ ಕೈದಿಗಳ ಸಂಖ್ಯೆ ಜಾಸ್ತಿಯಾಗಿದೆ, ಸಿಬ್ಬಂದಿ ಸಾಲದು ಎಂದು ಗೃಹಖಾತೆ ರಾಜ್ಯ ಸಚಿವ ರಾಮನಿವಾಸ ಮಿರ್ಧಾ ಲೋಕಸಭೆಯಲ್ಲಿ ಹೇಳಿಕೆ ನೀಡಿದ್ದರು. ಇದೆಲ್ಲ ಸುಮ್ಮನೇ ಸಬೂಬು ಆಗಬಹುದಷ್ಟೆ. ತೊಂದರೆಗಳನ್ನು ನಿವಾರಿಸಿಕೊಳ್ಳಬೇಡಿರೆಂದು ಸರಕಾರದೊಡನೆ ಯಾರೂ ಹೇಳಿಲ್ಲ. 1200 ಕೈದಿಗಳಿಗೆ ಮಾತ್ರವೇ ಅವಕಾಶ ಇರುವಲ್ಲಿ 3000 ಮಂದಿಯನ್ನು ತುರುಕಬೇಕೆಂದು ಯಾರೂ ಒತ್ತಾಯ ಮಾಡಿಲ್ಲ. ಇನ್ನೊಂದು ಜೇಲು ಕಟ್ಟಬೇಡಿರೆಂದೂ ಹೇಳಿಲ್ಲ. ಕೈದಿಗಳ ಸಂಖ್ಯೆ ಕಡಿಮೆ ಮಾಡಲು ದಂಡನೆ ವ್ಯವಸ್ಥೆ ಸುಧಾರಣೆಗೂ ಯಾರೂ ಅಡ್ಡಿ ಮಾಡಿಲ್ಲ.

ಚಾರ್ಲ್ಸ್ ಶೋಭರಾಜ್ ವಿಚಾರಣೆ ಎದುರಿಸುತ್ತ ಸುಮಾರು ಎಂಟು ವರ್ಷ ಕಾಲ ಕರ್ನಾಟಕದ ಸೆರೆಮನೆಗಳಲ್ಲಿ ಬಂದಿಯಾಗಿದ್ದ. ಆ ವೇಳೆ ತಪ್ಪಿಸಿಕೊಳ್ಳುವುದು ಆತನಿಂದಾಗಲಿಲ್ಲ.

ಇದೀಗ ಮತ್ತೆ ಶೋಭರಾಜ್ ಸೆರೆ ಸಿಕ್ಕಿದ್ದಾನೆ. ಆತನನ್ನು ಮತ್ತೆ ತಿಹಾರ್ ಸೆರೆಮನೆಯಲ್ಲಿ ಕೂರಿಸುವ ಪ್ರಮಾದವನ್ನು ಕೇಂದ್ರ ಸರಕಾರ ಮಾಡುವುದು ಬೇಡ. ಥೈಲೆಂಡ್‌ಗೆ ಕಳುಹಿಸಿಬಿಡಲಿ. ಅದಕ್ಕಾಗಿ ಕಡತವನ್ನು ಕಪಾಟಿನಿಂದ ಹೊರತೆಗೆಯಲಿ.

ಮುಂಗಾರು

ಗುರುವಾರ, ಏಪ್ರಿಲ್ 10, 1986

ದೇಶಕ್ಕೆ ಬಂದಿರುವ ಅಪಾಯ

ಪಾಕಿಸ್ತಾನವು ಪರಮಾಣು ಶಸ್ತ್ರವನ್ನು ಹೊಂದಿದರೆ ನಾವು ಕೂಡ ನಮ್ಮದೇ ಪರಮಾಣು ಶಸ್ತ್ರವನ್ನು ಹೊಂದುವ ಬಗ್ಗೆ ಆಲೋಚಿಸಬೇಕಾಗುತ್ತದೆ ಎಂದು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಲೋಕಸಭೆಯಲ್ಲಿ ಹೇಳಿದ್ದಾರೆ. ಅಲ್ಲದೆ ಪಾಕಿಸ್ತಾನ ಸಿಖ್ಖರನ್ನು ಪ್ರಚೋದಿಸಿ ಭಾರತದ ಮೇಲೆ ಛೂಬಿಡುತ್ತಿರುವ ವಿಚಾರವನ್ನು ಈ ಹಿಂದೆಯೇ ಅವರು ಸಾಕಷ್ಟು ಬಾರಿ ಉಲ್ಲೇಖಿಸಿದ್ದಾರೆ. ಇದೀಗ ಶ್ರೀಲಂಕೆಯಲ್ಲಿ ಪಾಕಿಸ್ತಾನ ತಮಿಳರ ಆಶೋತ್ತರಗಳ ವಿರುದ್ಧ ಕೆಲಸ ಮಾಡುತ್ತಿದೆಯೆಂಬುದನ್ನು ಜನರ ಗಮನಕ್ಕೆ ರಾಜೀವ ಗಾಂಧಿ ತಂದಿದ್ದಾರೆ.

ಪಾಕ್ ಅಣ್ವಸ್ತ್ರ ಕಾರ್ಯಕ್ರಮದ ಬಗ್ಗೆ ಪ್ರಧಾನ ಮಂತ್ರಿಯೇ ಈ ಮಾತುಗಳನ್ನು ಹೇಳಬೇಕಿದ್ದರೆ ಆ ದೇಶ ಈಗಾಗಲೇ ಪರಮಾಣು ಬಾಂಬನ್ನು ಹೊಂದಿರುವ ಸಾಧ್ಯತೆ ನಿಚ್ಚಳವೇ ಆಗಿದೆ. ಬಂಡವಾಳಶಾಹಿ ಅಮೆರಿಕದ ಆಪ್ತ ಸ್ನೇಹಿತನಾಗಿರುವುದರಿಂದಲೂ ಅಂತಹ ಕಾರ್ಯಕ್ರಮವನ್ನು ಪಾಕಿಸ್ತಾನ ಯಶಸ್ವಿಯಾಗಿ ನಡೆಸಬಲ್ಲುದೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸಿಖ್ಖ್ ಉಗ್ರಗಾಮಿಗಳಿಗೆ ಪಾಕಿಸ್ತಾನ ಕೊಡುತ್ತಿರುವ ಕುಮ್ಮಕ್ಕಿನ ವಿಚಾರವೂ ಅಷ್ಟೆ. ಅದೇನೂ ಈಗ ಗುಟ್ಟಾಗಿ ಉಳಿದಿಲ್ಲ. ಪಾಕಿಸ್ತಾನವು ಸಿಖ್ಖರನ್ನು ದಾಳಗಳಾಗಿ ಉಪಯೋಗಿಸುವುದು ತೀರಾ ಅಪಾಯಕಾರಿಯಾದ ಆಟವೆಂದು ಪಾಕಿಸ್ತಾನದ ಪ್ರಜಾ ಪಕ್ಷದ ನಾಯಕಿ ಬೆನಜೀರ್ ಭುಟ್ಟೋ ಹೇಳಿರುವುದನ್ನು ಎರಡೂ ದೇಶಗಳ ಜನ ಗಂಭೀರವಾಗಿ ಆಲೋಚಿಸಬೇಕಾಗಿದೆ.

ಪಾಕಿಸ್ತಾನ ಪರಮಾಣು ಬಾಂಬನ್ನು ಹೊಂದುವುದರಿಂದ ಭಾರತೀಯ ಉಪಖಂಡದಲ್ಲಿ ಪರಮಾಣು ಶಸ್ತ್ರ ಪೈಪೋಟಿ ಶುರುವಾಗುತ್ತದೆ ಎಂಬುದು ಖಂಡಿತ. ಅಂಥ ಮೇಲಾಟದಿಂದ ಉಪಖಂಡದ ಜನರ ಜೀವಕ್ಕೆ ಅಪಾಯ ಕಾದಿದೆ ಎಂಬುದು ಒಂದು ಮುಖವಾದರೆ ವರ್ಷ ವರ್ಷವೂ ಆರ್ಥಿಕ, ಸಾಮಾಜಿಕ ಉತ್ಕರ್ಷಕ್ಕಾಗಿ ವೆಚ್ಚವಾಗಬೇಕಾದ ಹಣವು ಅತ್ಯಂತ ವೆಚ್ಚದಾಯಕವಾದ ಪರಮಾಣು ಕ್ಷಿಪಣಿ ನಿರ್ಮಾಣಕ್ಕಾಗಿ ವ್ಯಯವಾಗಿ ಖಜಾನೆ ಬರಿದಾಗುವ ಅಪಾಯ ಇನ್ನೊಂದೆಡೆ.

ಸಿಖ್ಖ್ ಉಗ್ರಗಾಮಿಗಳಿಗೆ ಪಾಕಿಸ್ತಾನ ಕೊಡುತ್ತಿರುವ ಪ್ರಚೋದನೆ–ಬೆಂಬಲ ಕೂಡ ಅಷ್ಟೆ. ಈ ಉಪಖಂಡದಲ್ಲಿ ಇನ್ನೊಂದು ಸಮರಕ್ಕೂ, ಅದರಿಂದುಂಟಾಗಬಹುದಾದ ಸಮುದಾಯದ ನೋವಿಗೂ ದೇಶಗಳು ಒಡೆದು ಹೋಗುವುದಕ್ಕೂ ಈ ವಿದ್ಯಮಾನ ಕಾರಣವಾಗಬಹುದು. ಈ ಹಿನ್ನೆಲೆಯಲ್ಲಿ ಇಂತಹ ಯಾವ ದುಸ್ಸಾಹಸಕ್ಕೂ ಪಾಕಿಸ್ತಾನ ಇಳಿಯುವುದು ಸರಿಯಲ್ಲ. ಅದನ್ನು ತಡೆಯಬೇಕಾದಂತಹ ಕರ್ತವ್ಯ ಭಾರತದ ಸರಕಾರದ್ದು ಹಾಗೂ ಜನರದ್ದು. ಇದಕ್ಕಾಗಿ ಪಾಕಿಸ್ತಾನಕ್ಕೆ ಸೂಕ್ತ ಎಚ್ಚರಿಕೆಯನ್ನು ಹೇಳಬೇಕು. ಸೂಕ್ತರಾದವರಿಂದ ಅದನ್ನು ಹೇಳಿಸಬೇಕು.

ಇದಕ್ಕಾಗಿ ದೇಶದಲ್ಲಿ ತಿಳುವಳಿಕೆ ಮೂಡಬೇಕು. ಈ ಸಮಾಜವನ್ನು, ಇದರ ಆರೋಗ್ಯವನ್ನು ರಕ್ಷಿಸಿಕೊಳ್ಳುವ ಬಗ್ಗೆ ಸಮೂಹ ಚಿಂತನೆ ನಡೆಸಬೇಕು. ನಮ್ಮ ನ್ಯೂನತೆಗಳನ್ನು ನಿವಾರಿಸಿಕೊಳ್ಳುವ ಕೆಲಸ ಮಾಡಬೇಕು. ಈ ನ್ಯೂನತೆ ಹಲವಾರು ರಂಗಗಳಲ್ಲಿವೆ. ಹಲವಾರು ವಿಷಯಗಳಲ್ಲಿವೆ. ಈ ದೇಶವನ್ನು ಒಂದಾಗಿ ಹಿಡಿದಿಟ್ಟುಕೊಳ್ಳುವಂತಹ ರಾಜಕೀಯ ವ್ಯವಸ್ಥೆಯನ್ನು ರೂಪಿಸಬೇಕು. ಈಗಿನ ವ್ಯವಸ್ಥೆ ಅದಕ್ಕೆ ಪೂರಕವಾಗಿಲ್ಲ ಎನ್ನುವುದು ಈಗಾಗಲೇ ನಮಗೆಲ್ಲ ಮನವರಿಕೆಯಾಗುತ್ತಿರುವುದರಿಂದ ಹೊಸ ವ್ಯವಸ್ಥೆಯ ಬಗ್ಗೆ ಚಿಂತನೆ ಹಾಗೂ ಅದರ ಅನುಷ್ಠಾನಕ್ಕೆ ಚಾಲನೆ ದೊರೆಯಬೇಕು.

ರಾಷ್ಟ್ರದ ಬಗ್ಗೆ ಚಿಂತನೆ, ರಾಷ್ಟ್ರಪ್ರೇಮದ ಪ್ರಕಟಣೆ ಸಾಮಾನ್ಯವಾಗಿ ಗಂಡಾಂತರ ಬಂದಾಗ ಆಗುವಂತಹದು. ಸಹಜವಾಗಿಯೇ ರಾಜಕಾರಣಿಗಳು, ಅವರನ್ನು ಕಟ್ಟಿಬೆಳೆಸುವ ಔದ್ಯಮಿಕ ಹಾಗೂ ವಾಣಿಜ್ಯ ವರ್ಗಗಳವರು, ಚಿಂತನೆಗೆ ಚಾಲನೆ ಕೊಡುವವರೆನ್ನಲಾದ ಬುದ್ಧಿಜೀವಿಗಳು ಇಂತಹ ಕಾಲದಲ್ಲಿ ದೇಶಪ್ರೇಮದ ಹೊಳೆಯನ್ನೇ ಹರಿಸುತ್ತಾರೆ. ದೇಶವನ್ನು ಆಳುವ ಮಂದಿ, ಅವರಿಗೆ ಸೊತ್ತು, ಸವಲತ್ತುಗಳ ಕಾಣಿಕೆ ಕೊಡುವ ಹಣವಂತರ ವರ್ಗ ಉಳಿದೆಲ್ಲಾ ಕಾಲಗಳಲ್ಲಿ ಹತ್ತು ಹಲವು ವಿಧಗಳಿಂದ ಸಾಮಾನ್ಯ ಜನರ ಶೋಷಣೆ ಮಾಡಿ ತಾವು ಬೀಗುತ್ತಾರೆ. ನಿಜವಾದ ದೇಶ ಕಟ್ಟುವ ಕೆಲಸ ಮಾಡುವ ಮಂದಿ ಬಡವಾಗುತ್ತಾರೆ. ದೇಶಕ್ಕೆ ಅಪಾಯ ಬಂದಾಗ, ಅದನ್ನು ಉಳಿಸಬೇಕು ಎಂಬ ಅಗತ್ಯ ಉಂಟಾದಾಗ ನಾವೆಲ್ಲ ಒಂದು ಎಂದು ಹೇಳುವ ಮಂದಿ ಈ ಅಪಾಯ ದೂರಾದಾಗ ಸ್ವಂತ ಹಿತಚಿಂತನೆಯನ್ನು ಮಾತ್ರವೇ ಮಾಡುತ್ತಾರೆ.

ಈ ಪ್ರವೃತ್ತಿ ದೂರವಾಗದೆ ಈ ದೇಶವೂ ಈ ದೇಶದ ಜನಗಳೂ ಎಂದೂ ಒಂದಾಗುವುದು ಅಸಾಧ್ಯ. ಸಾಮಾನ್ಯ ಜನ ಬಡವರೂ ಅವಿದ್ಯಾವಂತರೂ ಅಕ್ಷರಶತ್ರುಗಳೂ ಆಗಿ ಉಳಿದರೆ ಅವರಿಂದೂ ದೇಶಪ್ರೇಮಿಗಳಾಗುವುದು ಸಾಧ್ಯವಿಲ್ಲ. ಎಲ್ಲರೂ ದೇಶದ ಬಗ್ಗೆ ಚಿಂತನೆ ನಡೆಸಬೇಕಿದ್ದರೆ ದೇಶ ಎಲ್ಲರದ್ದು ಎಂಬ ಸ್ಥಿತಿ ಉಂಟಾಗಬೇಕು. ಸಬಲರು ದುರ್ಬಲರನ್ನು ದೋಚುವ ಅವಕಾಶಗಳನ್ನು ನಿವಾರಿಸಬೇಕು. ಪ್ರಜಾಸಮೂಹದ ಹಿತದ ಬಗ್ಗೆ ಚಿಂತನೆ ಆಳುವ ವರ್ಗದ ಕಾಳಜಿಯಾಗಬೇಕು. ಯುದ್ಧ ಕಾಲದಲ್ಲಿ ದೇಶ ರಕ್ಷಣೆಗೆ ಕೊಡುಗೈ ದಾನಿಗಳಾಗುವ ಮಂದಿ ಶಾಂತಿ ಕಾಲದಲ್ಲಿ ದೇಶದ ಸಂಪತ್ತಿನ ಸೂರೆ ಮಾಡುವ ಇಂದಿನ ವ್ಯವಸ್ಥೆಯನ್ನು ಬದಲಾಯಿಸುವ ಬಗ್ಗೆ ಪ್ರಧಾನಿ ರಾಜೀವ ಗಾಂಧಿಯವರೂ ಅವರ ಪಕ್ಷದವರೂ ಆಲೋಚಿಸಬೇಕು. ಈ ದೇಶ ಎಲ್ಲರಿಗೂ ಸೇರಿದ್ದು ಎಂಬ ತತ್ವವು ಆಚರಣೆಗೆ ಬಂದಾಗ ಮಾತ್ರವೇ ಎಲ್ಲರೂ ದೇಶದ ರಕ್ಷಣೆಗೆ ತಾವಾಗಿ ಮುಂದಾಗುವಂತಹ ಸ್ಥಿತಿ ಉಂಟಾಗುತ್ತದೆ.

ಮುಂಗಾರು
ಶುಕ್ರವಾರ, ಏಪ್ರಿಲ್ 11, 1986

ಶಿಕ್ಷಣದಲ್ಲಿ ರಾಜಕಾರಣ

ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯವು ವ್ಯಾಪಕವಾಗಿ ಸೇರುತ್ತಿದ್ದು ಇದರಿಂದ ಶಿಕ್ಷಣಕ್ಕೆ ಅಪಾಯವಿದೆಯೆಂದು ಅಧ್ಯಾಪಕರು ಇತ್ತೀಚೆಗೆ ಉಡುಪಿಯಲ್ಲಿ ನಡೆದ ಶಿಕ್ಷಣ ಗೋಷ್ಠಿಯಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಯೂನಿಯನ್ ಚುನಾವಣೆ, ಅದರಿಂದಾಗುವ ಗಲಾಟೆ ಗೊಂದಲಗಳು, ವಿದ್ಯಾರ್ಥಿ ಚಳುವಳಿಯಿಂದ ಆಗುವ ಅನಾಹುತಗಳು, ಶಿಕ್ಷಕರ ಸಂಘಟನೆಗಳಲ್ಲಿ ತಲೆ ಹಾಕುವ ಪಕ್ಷ ರಾಜಕೀಯ, ಅದರಿಂದಾಗಿ ತಲೆದೋರುವ ಮೇಲಾಟಗಳು ಹಾಗೂ ಇದರಿಂದ ಶಿಕ್ಷಣ ರಂಗದ ಮೇಲೆ ಆಗುವ ಕೆಟ್ಟ ಪರಿಣಾಮಗಳು ಬಹುಶಃ ಇವುಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಾಪಕರ ಸಮುದಾಯ ಮೇಲಿನ ಅಭಿಪ್ರಾಯಕ್ಕೆ ಬಂದಿರಬೇಕೆಂದು ಕಾಣಿಸುತ್ತದೆ. ಇದೆಲ್ಲ ತುಂಬ ಮೇಲು- ಮೇಲಿನ ಅಭಿಪ್ರಾಯವೆನಿಸುತ್ತದೆ. ಜನಸಾಮಾನ್ಯರು ಹೇಳುವಂತಹ ಈ ತೆರನಾದ ಶಿಕ್ಷಣ ರಂಗದ ರಾಜಕೀಯವೂ [illegible] ಒಟ್ಟು ಸಮಾಜದಲ್ಲಿನ ರೋಗದ ವಿಸ್ತರಣೆಯೇ ಆಗಿದೆ. ಸಮಾಜದ ರೋಗದ ಗುಣಲಕ್ಷಣಗಳನ್ನೇ ಇದು ಕೂಡ ತೋರಿಸುತ್ತದೆ.

ರಾಜಕರಣ ಎಂದೊಡನೆ ಇಂದು ನಮ್ಮ ಸಮಾಜದಲ್ಲಿ ಕಾಣಸಿಗುತ್ತಿರುವ ಸ್ವಾರ್ಥ ರಾಜಕಾರಣದ ಸ್ವರೂಪವೇ ನಮ್ಮ ಜನರ ಮನಸ್ಸಿನಲ್ಲಿ ಅಚ್ಚೊತ್ತುವುದು ಸಹಜ. ನಮ್ಮಲ್ಲಿರುವ ರಾಜಕೀಯದ ಕರಾಳ ಮುಖದ ಬಗ್ಗೆ ಸಾಮಾನ್ಯ ಜನರು ಸಿನಿಕರಾಗಿರುವುದೂ ಸಹಜವೇ ಆಗಿದೆ. ರಾಜಕಾರಣವೆಂಬುದು ಸ್ವಾರ್ಥವಿರಹಿತವಾಗಿರಬೇಕು. ಅದು ಜನಸಮುದಾಯದ ಉತ್ಕರ್ಷಕ್ಕಾಗಿ ಕೆಲಸ ಮಾಡುವಂತಹುದಾಗಿರಬೇಕು. ಸಮಾಜ ಸಾಗಬೇಕಾದ ದಾರಿಯನ್ನು ನಿರ್ಧರಿಸುವಂತಹದ್ದಾಗಬೇಕು. ಸಮಾಜಕ್ಕೆ ಆರ್ಥಿಕ ಸೌಖ್ಯವನ್ನು ತಂದು ಕೊಡುವ ಗುರಿಯನ್ನು ಹೊಂದಿರಬೇಕು. ಅಭಿವೃದ್ಧಿಯ ಯೋಜನೆಗಳನ್ನು ರೂಪಿಸುವಂತಹದ್ದಾಗಿರಬೇಕು.

ಇಂತಹ ರಾಜಕಾರಣದ ಬಗ್ಗೆ ಸಮಾಜದ ಎಲ್ಲ ವರ್ಗದವರಿಗೂ ಎಲ್ಲ ವಯೋಮಾನದವರಿಗೂ ತಿಳಿಯಬೇಕು. ಆದರಿಂದ ಸಮಾಜವು ಸಾಗಬೇಕಾದ ದಾರಿಯ ಬಗ್ಗೆ ಎಲ್ಲರಲ್ಲಿಯೂ ಖಚಿತ ಕಲ್ಪನೆ ಮೂಡುತ್ತದೆ. ವಿದ್ಯಾರ್ಥಿ ಸಮುದಾಯವನ್ನು ಇಂತಹ ತಿಳುವಳಿಕೆಯ ಪರಿಧಿಯಿಂದ ಹೊರಗಿಡುವುದಕ್ಕಾಗುವುದಿಲ್ಲ.

ಇಂದು ನಮ್ಮ ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ರಾಜಕಾರಣವನ್ನು ಬೋಧಿಸುವುದೆಂದರೆ ಅಣಕ ಪಾರ್ಲಿಮೆಂಟು ರಚಿಸಿ ಸಂಸದೀಯ ವ್ಯವಹಾರದ ನಿಯಮಗಳನ್ನು ತಿಳಿಹೇಳುವುದಷ್ಟೇ ಆಗಿದೆ. ಪ್ರಧಾನಿ ರಾಷ್ಟ್ರಪತಿ. ಸ್ಪೀಕರ್, ನ್ಯಾಯಾಧೀಶರ ಸ್ಥಾನಮಾನ, ಸಂಬಳ ಸಾರಿಗೆ ಕರ್ತವ್ಯ, ಅಧಿಕಾರಗಳು ಇವುಗಳನ್ನೇ ಉರುಹೊಡೆಸುವ ಟೊಳ್ಳು ಕಾರ್ಯಕ್ರಮವಾಗಿದೆ. ವಿದ್ಯಾರ್ಥಿಗಳಲ್ಲಿ ನಾಡಿನ ಭವಿಷ್ಯತ್ ಸ್ವರೂಪದ ಬಗ್ಗೆ ಖಚಿತ ಕಲ್ಪನೆಯನ್ನು ಮೂಡಿಸುವ ಕೆಲಸವನ್ನೇನೂ ಈ ಕಲಿಕೆ ಮಾಡುವುದಿಲ್ಲ. ಸಂಸತ್ತಿನ ಕಲಾಪದ ವಿಧಿವಿಧಾನಗಳ ತಿಳುವಳಿಕೆಯಿಂದ ವಿದ್ಯಾರ್ಥಿಗಳಲ್ಲಿ ರಾಜಕೀಯ, ಆರ್ಥಿಕ ವ್ಯವಸ್ಥೆಯ ಬಗ್ಗೆ ಪ್ರಜ್ಞೆ ಮೂಡೀತು ಎಂದೇನೂ ಭರವಸೆಯಿಲ್ಲ.

ವಿದ್ಯಾರ್ಥಿಗಳಲ್ಲಿ ಅಂತಹ ರಾಜಕೀಯ ಪ್ರಜ್ಞೆಯನ್ನು ಮೂಡಿಸಬೇಕು. ಇಂದಿನ ವ್ಯವಸ್ಥೆಯಲ್ಲಿರುವ ನ್ಯೂನತೆಗಳು ಅವರಿಗೆ ಅರ್ಥವಾಗಬೇಕು. ಈ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಶೋಷಣೆಯ ಚಿತ್ರ ಅವರಿಗೆ ದೊರೆಯಬೇಕು. ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಕೆಲವರಿಗೆ ಸಂಪತ್ತು ದೊರೆತು, ಇನ್ನು ಹಲವರು ದರಿದ್ರರಾಗಿಯೇ ಜೀವಿಸಬೇಕಾದ ಮಾನವರೇ ನಿರ್ಮಿಸಿದ ಅನ್ಯಾಯದ ಅರಿವು ಅವರಿಗೆ ದೊರೆಯಬೇಕು.

ಇಂತಹ ಅನ್ಯಾಯವನ್ನು ಶೋಷಣೆಯನ್ನೂ ಹೋಗಲಾಡಿಸುವ ಹೊಸ ವ್ಯವಸ್ಥೆಯ ಬಗ್ಗೆ ಆಲೋಚಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕು. ಇದು ರಾಜಕಾರಣದ ಒಳ ಅರಿವಿನಿಂದ ಮಾತ್ರ ಬರುವುದು ಸಾಧ್ಯ. ಅನ್ಯಾಯಗಳನ್ನೂ ಅಸಮಾನತೆಗಳನ್ನೂ ನಿವಾರಿಸಿಕೊಂಡು ಅಭಿವೃದ್ಧಿಯ ಕಾರ್ಯಗಳನ್ನು ರೂಪಿಸಿ ಕಾರ್ಯಗತಗೊಳಿಸುವ ಚಿಂತನೆಯ ಹೊಸ ಶಕೆಯನ್ನು ನಮ್ಮ ಶಿಕ್ಷಣರಂಗದಲ್ಲಿ ತೆರೆಯಬೇಕು.

ನಮ್ಮಲ್ಲಿ ಈಗ ಕ್ಷುದ್ರವಾದ ಪಕ್ಷ ರಾಜಕಾರಣವೂ ಸ್ವಾರ್ಥಸಾಧಕ ಸಣ್ಣತನದ ರಾಜಕೀಯವೂ ಉಂಟು ಎಂಬ ಕಾರಣಕ್ಕೆ ನಾಡಿಗೆ ಮುನ್ನಡೆಯನ್ನು ನಿರ್ಧರಿಸುವ ರಾಜಕಾರಣವನ್ನು ದೂರ ಮಾಡುವುದು ಬೇಡ. ಇಂಥ ರಾಜಕಾರಣವಿದ್ದರೆ ಅದನ್ನು ಬದಲಾಯಿಸುವುದಕ್ಕೆ ಪ್ರಯತ್ನಿಸಬೇಕು. ಶಿಕ್ಷಣರಂಗವು ಸಕ್ರಿಯ ರಾಜಕಾರಣದ ಕುರುಕ್ಷೇತ್ರವಾಗಿದ್ದರೆ ಅಂಥ ಸಕ್ರಿಯ ರಾಜಕಾರಣಕ್ಕೆ ಮಿತಿಯನ್ನು ಹಾಕಿಕೊಳ್ಳಬಹುದು. ಹೊರತಾಗಿ ನಾವೆಲ್ಲ ಸಿನಿಕರಾಗಿ ದೇಶದ ಭವಿಷ್ಯದ ಕುರಿತಾದ ಚಿಂತನೆಯ ಬೆಳಕಿನಿಂದ ವಿದ್ಯಾರ್ಥಿ ಸಮುದಾಯವನ್ನು ದೂರ ಇರಿಸುವುದು ಸಲ್ಲದು.

ಮುಂಗಾರು

ಶನಿವಾರ, ಏಪ್ರಿಲ್ 12, 1986

ಗ್ರಾಮಾಂತರಕ್ಕೆ ತಂತ್ರಜ್ಞಾನ

ಈ ದೇಶದ ದಾರಿದ್ರ್ಯ ನಿವಾರಣೆಗಾಗಿ ವಿಜ್ಞಾನವನ್ನೂ ತಂತ್ರಜ್ಞಾನವನ್ನೂ ಗ್ರಾಮಾಂತರ ಪ್ರದೇಶಕ್ಕೆ ಕೊಂಡೊಯ್ಯಬೇಕೆಂದು ಪ್ರಧಾನಿ ರಾಜೀವ ಗಾಂಧಿಯವರು ಪ್ರತಿಪಾದಿಸಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನವನ್ನು ಕೂಡಿ ಯಾಂತ್ರೀಕರಣ ನಡೆಸುವುದಕ್ಕೆ ಅವು ಸ್ಥಾಪಿತ ಹಿತಾಸಕ್ತರಿಂದ ವಿರೋಧವುಂಟೆಂದು ಅವರು ಹೇಳಿದ್ದಾರೆ. ಜನರು ಸದಾ ಅನಕ್ಷರಸ್ಥರೂ ಅಜ್ಞಾನಿಗಳೂ ಆಗಿ ಉಳಿದು ಮೌಢ್ಯದ ಮುಸುಕನ್ನು ತೆರೆಯದೆ ಇರುವುದರಿಂದ ಇಂತಹ ಹಿತಾಸಕ್ತರಿಗೆ ಲಾಭವಿರುವುದರಿಂದಲೇ ಯಾಂತ್ರೀಕರಣವನ್ನು ವಿರೋಧಿಸಲಾಗುತ್ತಿದೆಯೆಂದು ಪ್ರಧಾನಿ ಹೇಳುತ್ತಿದ್ದಾರೆ.

ಗ್ರಾಮಾಂತರ ಪ್ರದೇಶಗಳಿಗೆ ತಂತ್ರಜ್ಞಾನವನ್ನು ಕೊಂಡೊಯ್ದು ಯಾಂತ್ರೀಕರಣ ನಡೆಸುವ ಸರಕಾರದ ಈ ಹೊಸ ಉಪಕ್ರಮವು ಸ್ವಾಗತಾರ್ಹವಾದದ್ದು. ಸರಕಾರ ಕೊನೆಗೂ ಗ್ರಾಮಾಭಿವೃದ್ಧಿಯ ಬಗ್ಗೆ ಹೊಂದಿರುವ ಆಲೋಚನೆಗಳನ್ನು ಕಾರ್ಯರೂಪಗೊಳಿಸುವ ಮನಸ್ಸು ಮಾಡುತ್ತಿರುವುದು ಸಂತೋಷದಾಯಕವಾದ ವಿಚಾರ. ಈ ತನಕವೂ ಸರಕಾರದ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳು ಅನುಷ್ಠಾನವಾದದ್ದು ಕಡಿಮೆ. ಅವುಗಳ ಬಗ್ಗೆ ಬಾಯಿ ಬಡಾಯಿಯೇ ಹೆಚ್ಚು. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಈ ತನಕ ಒಳಗೊಂಡ ಗ್ರಾಮೀಣ ಬಡ ಕುಟುಂಬಗಳ ಸಂಖ್ಯೆಯು ಒಟ್ಟು ಬಡವರಿಗೆ ಹೋಲಿಸಿದರೆ ಅತ್ಯಲ್ಪವೆನಿಸುತ್ತದೆ. ಈ ವೇಗದಲ್ಲಿ ಗ್ರಾಮೀಣ ಬಡವರ ಉದ್ಧಾರದ ಕಾರ್ಯಕ್ರಮಗಳು ನಡೆದರೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಆಗಲು ಒಂದು ಶತಮಾನವೇ ಬೇಕಾದೀತು.

ಆದ್ದರಿಂದ ತ್ವರಿತ ಗತಿಯಲ್ಲಿ ಗ್ರಾಮಾಭಿವೃದ್ಧಿ ಆಗಬೇಕಿದ್ದರೆ ಗ್ರಾಮಾಂತರ ಪ್ರದೇಶದಲ್ಲಿ ಯಂತ್ರ ಕ್ರಾಂತಿ ಆಗಬೇಕು. ದೊಡ್ಡ ಮಟ್ಟದಲ್ಲಿ ತಂತ್ರಜ್ಞಾನ ಅಲ್ಲಿಗೆ ಹರಿಯಬೇಕು ಎನ್ನುವುದು ನಿಜ. ಪ್ರಧಾನಿ ಕಲ್ಪಿಸಿರುವಂತಹ "ಬೇರೆಯವರಿಗೆ ಸರಿ ಮಿಗಿಲೆನಿಸಲು ಒಮ್ಮೆಲೇ ಪ್ರಗತಿಯತ್ತ ನೆಗೆತ" ಆಗಬೇಕು ಎಂಬುದೂ ನಿಜ.

ಹೀಗೆ ಒಮ್ಮೆಲೇ, ಸಾಮೂಹಿಕವಾಗಿ ದೊಡ್ಡ ಪ್ರಮಾಣದಲ್ಲಿ ಗ್ರಾಮಾಂತರ ಪ್ರದೇಶಕ್ಕೆ ತಂತ್ರಜ್ಞಾನ ಕೊಂಡೊಯ್ಯದಿದ್ದರೆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಆಗದು ಎಂಬಂತಹ ಪರಿಸ್ಥಿತಿಯನ್ನು ಉಂಟು ಮಾಡಿರುವುದು ನಮ್ಮ ಸರಕಾರ ಮತ್ತು ಯೋಜನಾಗಾರರು ಹೊರತು ಬೇರಾರೂ ಅಲ್ಲ. ಗ್ರಾಮಾಭಿವೃದ್ಧಿಯ ತಂತ್ರದ ಬಗ್ಗೆ ನಮ್ಮ ಯೋಜನೆ ನಿರ್ಮಾತೃಗಳಿಗೆ ಸ್ಪಷ್ಟ ಕಲ್ಪನೆಯೇ ಇರಲಿಲ್ಲ. ಔದ್ಯಮೀಕರಣದಿಂದ ಅಭಿವೃದ್ಧಿ ಎಂಬ ತಾರಕಮಂತ್ರವನ್ನು ಅಂಗೀಕರಿಸಿದ್ದರೂ ಉದ್ಯಮಗಳು ನಗರದ ಎಲ್ಲೆಗಳನ್ನು ಬಿಟ್ಟು ಅಲುಗಾಡಲಿಲ್ಲ. ಹಳ್ಳಿಗಳಿಗೆ ಹೋಗುವವರು ಯಾರೂ ಇರಲಿಲ್ಲ. ಗಾಂಧೀಜಿ ಪ್ರತಿಪಾದಿಸಿದ ಕೈಗಾರಿಕಾ ನೀತಿಯನ್ನು ನಮ್ಮ ಆಧುನಿಕ ಅರ್ಥಶಾಸ್ತ್ರಜ್ಞರು ಒಪ್ಪಲಿಲ್ಲ. ಭಾರತದಂತಹ ಹಳ್ಳಿಗಳ ನಾಡಿಗೆ ಗೃಹ ಕೈಗಾರಿಕೆಯ ಹೊರತು ಅಭಿವೃದ್ಧಿಗೆ ಬೇರೆ ದಾರಿ ಇಲ್ಲ ಎಂದು ಗಾಂಧೀಜಿ ಪದೇ ಪದೇ ಪ್ರತಿಪಾದಿಸಿದ್ದರು. ಅದನ್ನು ನಮ್ಮ ಸರಕಾರಗಳು ಕಿವಿಯ ಮೇಲೆ ಹಾಕಿಕೊಂಡಿದ್ದರೆ ನಮ್ಮ ಹಳ್ಳಿಗಳು ಇಂದು ಇರುವಂತಹ ಅಧಃಪತನದ ನಿಕೃಷ್ಟ ಸ್ಥಿತಿಗೆ ಇಳಿಯುತ್ತಿರಲಿಲ್ಲ. ಸಾಂಪತ್ತಿಕ ಅಸಮತೋಲನವು ಇಂದು ಇರುವಂತಹ ಭೀಕರ ಸ್ಥಿತಿಯನ್ನು ತಲುಪುತ್ತಿರಲಿಲ್ಲ. ಗಾಂಧೀಜಿ ಯಾಂತ್ರೀಕರಣವನ್ನು ವಿರೋಧಿಸಿರಲಿಲ್ಲ. ಗುಡಿ ಕೈಗಾರಿಕೆಗಳಿಗೆ ಏನು ಬೇಕೋ ಎಷ್ಟು ಬೇಕೋ ಅಷ್ಟು ಯಂತ್ರ ಬಳಸಿಕೊಳ್ಳಿ, ಆದರೆ ಮನುಷ್ಯರು ಮಾಡಬಹುದಾದ ಕೆಲಸವನ್ನು ಯಂತ್ರಕ್ಕೆ ಕೊಟ್ಟು ಮನುಷ್ಯರ ಉದ್ಯೋಗ ಕಿತ್ತುಕೊಳ್ಳಬೇಡಿ ಎಂದಷ್ಟೇ ಅವರು ಹೇಳಿದರು. ಅವರ ಮಾತನ್ನು ಕೇಳಿದ್ದರೆ ಇಂದು ನಮ್ಮ ಹಳ್ಳಿ-ಹಳ್ಳಿಗಳ ಜನರು ಉಂಡುಟ್ಟು ಸುಖವಾಗಿರುತ್ತಿದ್ದರು. ನಗರಗಳಲ್ಲಿ ಸಂಪತ್ತಿನ ಪೆಠಾರಿಗಳು ನಿರ್ಮಾಣಗೊಳ್ಳುತ್ತಿರಲಿಲ್ಲ.

ಈಗಲಾದರೂ ಹಳ್ಳಿಗಳಿಗೆ ತಂತ್ರಜ್ಞಾನವನ್ನು ಹರಿಸಲು "ಒಮ್ಮೆಲೇ ಮುನ್ನೆಗೆತ" ಸಾಧಿಸಲು ಪ್ರಧಾನಿ ರಾಜೀವಗಾಂಧಿ ತಯಾರಿ ನಡೆಸಿದ್ದಾರೆ. ಗ್ರಾಮಾಂತರಕ್ಕೆ ವಿಜ್ಞಾನ ಬರಲಿ, ತಂತ್ರಜ್ಞಾನ ಬರಲಿ, ಯಂತ್ರಗಳೂ ಬರಲಿ. ಗ್ರಾಮಾಂತರದ ಬಗ್ಗೆ ಸರಕಾರದ ಈ ಹೊಸ ಆಸಕ್ತಿಯಿಂದ ಅಲ್ಲಿನ ಜನರ ಬದುಕು ಹಸನಾಗುವುದಿದ್ದರೆ ಸಂತೋಷ. ಈ ತನಕ ಹಳ್ಳಿಯ ಯಾರೂ ಹೀಗೆ ಸಹಾಯ ಮಾಡುತ್ತೇವೆನ್ನುವ ಯಾರನ್ನೂ ದೂರ ಮಾಡಿರಲಿಲ್ಲ. ಅವರ ಬಳಿಗೆ ಯಾರೂ ಬಂದಿರಲಿಲ್ಲ, ಅಷ್ಟೆ, ಅವರ ಯೋಗಕ್ಷೇಮ ಕೇಳುವವರೇ ಇರಲಿಲ್ಲ.

ಹಳ್ಳಿ ಹಳ್ಳಿಗೆ ತಂತ್ರಜ್ಞಾನ ತಲುಪಿಸುತ್ತೇವೆ ಎನ್ನುವ ಪ್ರಧಾನ ಮಂತ್ರಿಗೆ ಬಹುಶಃ ಈ ದೇಶದ ಹಳ್ಳಿಗಳ ಸ್ವರೂಪ ಹಾಗೂ ಇಂದಿನ ಅವುಗಳ ಸ್ಥಿತಿಗತಿಯ ಸ್ಪಷ್ಟ ಕಲ್ಪನೆ ಇದ್ದಂತಿಲ್ಲ. ಈ ದೇಶದಲ್ಲಿ ಸುಮಾರು ಎಂಬತ್ತು ಸಾವಿರ ಹಳ್ಳಿಗಳಿವೆ. ಅವುಗಳಲ್ಲಿ ಅನೇಕ ಹಳ್ಳಿಗಳಿಗೆ ರಸ್ತೆ ಇಲ್ಲ, ವಿದ್ಯುತ್ ಕಾಣದ ಹಳ್ಳಿಗಳೇ ಸಾವಿರ ಗಟ್ಟಲೆ ಇವೆ. ಅಭಿವೃದ್ಧಿ ಮಾಡುತ್ತೇವೆಂದರೆ ಇದನ್ನೆಲ್ಲ ಒದಗಿಸಬೇಕಾಗುತ್ತದೆ. ಅದೆಲ್ಲ ಸುಲಭದಲ್ಲಿ ಆಗುವ ಕೆಲಸವಲ್ಲ. ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಅಪಾರ ಸಂಪನ್ಮೂಲ ಬೇಕಾಗುತ್ತದೆ. ಯಾಂತ್ರೀಕರಣವೆಂದರೆ ದೊಡ್ಡ ಮೊತ್ತದ ಹಣವನ್ನು ಹೂಡಬೇಕಾಗುತ್ತದೆ. ಇದಕ್ಕೆಲ್ಲ ಸಂಪನ್ಮೂಲದ ವ್ಯವಸ್ಥೆ ಮಾಡಬೇಕಾಗುತ್ತದೆ. ಸರಕಾರ ಇದಕ್ಕೆ ಸೂಕ್ತ ಯೋಜನೆ ರೂಪಿಸಿ ಮುಂಗಡ ಪತ್ರದಲ್ಲಿ ನಮೂದಿಸಬೇಕಾಗುತ್ತದೆ. ಇಷ್ಟು ಹಣದ ವ್ಯವಸ್ಥೆಯನ್ನು ಸರಕಾರ ಮಾಡಿಕೊಳ್ಳಬೇಕು. ಅದು ಸರಕಾರದಿಂದ ಸಾಧ್ಯವೇ? ಮುಂಗಡಪತ್ರದ ಅರ್ಧಾಂಶವನ್ನು ಗ್ರಾಮಾಭಿವೃದ್ಧಿಗಾಗಿಯೇ ಮೀಸಲಿರಿಸುವ ರಾಜಕೀಯ ಇಚ್ಛಾಶಕ್ತಿ ಈ ಸರಕಾರಕ್ಕೆ ಉಂಟೆ?

ಮುಂಗಾರು

ಭಾನುವಾರ, ಏಪ್ರಿಲ್ 13, 1986

ಸೋರಿಕೆ ನಿಲ್ಲಿಸಲು ಲಾಟರಿಯೇ?

ಪ್ರಯಾಣಿಕರು ಟಿಕೆಟ್ ತೆಗೆದುಕೊಂಡು ಪ್ರಯಾಣ ಮಾಡುವುದಕ್ಕೆ ಪ್ರೋತ್ಸಾಹ ನೀಡುವ ಬಹುಮಾನ ಯೋಜನೆಯೊಂದನ್ನು ಬೆಂಗಳೂರು ನಗರ ಸಾರಿಗೆ ಪ್ರಾಧಿಕಾರವು ಜಾರಿಗೆ ತಂದಿದೆ. ಪ್ರತಿದಿನ ಒಟ್ಟು ಮೂರು ಸಾವಿರ ರೂಪಾಯಿಗಳನ್ನು ಹೀಗೆ ಬಹುಮಾನ ರೂಪದಲ್ಲಿ ಬಿ. ಟಿ. ಎಸ್. ತನ್ನ ಪ್ರಯಾಣಿಕರಿಗೆ ವಿತರಣೆ ಮಾಡಲಿದೆ. ಮೊದಲ ಬಹುಮಾನ 1000 ರೂಪಾಯಿಗಳು. ಎರಡನೇ ಹಾಗೂ ಮೂರನೇ ಬಹುಮಾನಗಳೂ ಉಂಟು. 100 ರೂ.ಗಳ ಹಲವಾರು ಸಮಾಧಾನಕರ ಬಹುಮಾನಗಳನ್ನೂ ನೀಡಲಾಗುತ್ತದೆ.

ಪ್ರಯಾಣಿಕರು ಟಿಕೆಟ್ ತೆಗೆದುಕೊಳ್ಳುವಂತೆ ಆಮಿಷವೊಡ್ಡಲು ಇಂತಹ ಒಂದು ಲಾಟರಿ ಯೋಜನೆಯನ್ನು ರೂಪಿಸಬೇಕಾಗಿಬಂದದ್ದು ಬಿ. ಟಿ. ಎಸ್. ಸಂಸ್ಥೆಯ ಹತಾಶ ಪರಿಸ್ಥಿತಿಯನ್ನೂ ಶೋಚನೀಯ ಅವಸ್ಥೆಯನ್ನೂ ಸೂಚಿಸುತ್ತದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವಾಗಲಿ ಅದರ ಅಂಗಸಂಸ್ಥೆಯಾದ ಬೆಂಗಳೂರು ಸಾರಿಗೆ ಸಂಸ್ಥೆಯಾಗಲಿ ಸರಕಾರದ ಆಶ್ರಯವಿರುವ ಸಂಸ್ಥೆಗಳು. ಈ ಸಂಸ್ಥೆಗಳಿಗೆ ವಾಹನಗಳನ್ನು ಕೊಳ್ಳಲು, ಕಟ್ಟಡಗಳೇ ಮೊದಲಾದ ಸ್ಥಿರ ಸವಲತ್ತುಗಳನ್ನು ನಿರ್ಮಿಸಿಕೊಳ್ಳಲು ಹಾಗೂ ನಿರ್ವಹಣೆಯ ವೆಚ್ಚಕ್ಕೆ ಕೂಡಾ ಸರಕಾರಿ ಹಣಕಾಸು ಸಂಸ್ಥೆಗಳಿಂದ ಸುಲಭ ಶರತ್ತಿನಲ್ಲಿ ಸಾಲ ದೊರೆಯುತ್ತದೆ. ಅಷ್ಟೇ ಅಲ್ಲದೆ ಸರಕಾರದಿಂದ ಶೇರು ರೂಪದಲ್ಲಿ ಬಂಡವಾಳವೂ ದೊರೆಯುತ್ತದೆ. ಇಂತಹ ಸೌಲಭ್ಯಗಳನ್ನು ಹೊಂದಿದ, ದೊಡ್ಡ ಪ್ರಮಾಣದ ಸಂಸ್ಥೆಯ ನಿರ್ವಹಣಾ ವೆಚ್ಚ ಕಡಿಮೆಯಿದ್ದಾಗಿ ಖಾಸಗಿಯವರು ಅದರೊಂದಿಗೆ ಸ್ಪರ್ಧೆ ನಡೆಸುವುದು ಕಷ್ಟಕರವೆನಿಸಬೇಕು.

ಆದರೆ ಇಂದು ಹಾಗಾಗಿಲ್ಲ. ರಸ್ತೆ ಸಾರಿಗೆ ಸಂಸ್ಥೆಯ ನಿರ್ವಹಣಾ ವೆಚ್ಚ ಬಹಳಷ್ಟು ಏರಿದೆ. ವರ್ಷ ವರ್ಷವೂ ಈ ಸಂಸ್ಥೆಯ ನಷ್ಟದ ಮೊತ್ತ ಜ್ವರದಂತೆ ಏರುತ್ತಿದೆ. ಈ ಸಂಸ್ಥೆಯ ವರಮಾನವು ರೂಟುಗಳಲ್ಲಿ ಸೋರಿಹೋಗುತ್ತದೆ. ಈ ಸಂಸ್ಥೆಯು ಕೊಂಡ ಹೊಸ ಟಯರುಗಳೂ ವಾಹನದ ಇತರ ಬಿಡಿಭಾಗಗಳೂ ಸದ್ದಿಲ್ಲದೆ ಮುಕ್ತ ಮಾರುಕಟ್ಟೆಯಲ್ಲಿ ಪ್ರತ್ಯಕ್ಷವಾಗುತ್ತವೆ. ಈ ಸಂಸ್ಥೆಯ ಖಾತೆಗೆ ಜಮಾ ಆಗಬೇಕಾದ ವರಮಾನದ ಒಂದು ದೊಡ್ಡ ಪಾಲು ಹೀಗೆ ಅದರ ಸಿಬ್ಬಂದಿಗಳ ಜೇಬು ಸೇರಿ ಅವರೆಲ್ಲ ಸೈಟು, ಮನೆಮಾಡಿಕೊಳ್ಳುತ್ತಿದ್ದಾರೆ. ಸಾರ್ವಜನಿಕರಿಗೆ ಸೌಲಭ್ಯವನ್ನು ಒದಗಿಸಲು ಸಂಸ್ಥೆಗೆ ಸಾಧ್ಯವಾಗುತ್ತಿಲ್ಲ. ಆಂತರಿಕ ಸಂಪನ್ಮೂಲದಿಂದಲೇ ಪ್ರತಿವರ್ಷವೂ ಹೊಸ ಬಸ್‌ಗಳನ್ನು ಕೊಂಡು ಸಂಸ್ಥೆಯ ವಾಹನಗಳ ಬಲವನ್ನು ಕನಿಷ್ಠ ಶೇಕಡಾ ಹತ್ತರಷ್ಟಾದರೂ ಹೆಚ್ಚಿಸಿಕೊಳ್ಳಲು ಸಾಧ್ಯವಾಗಬೇಕು. ಆದರೆ ಅದಾಗುತ್ತಿಲ್ಲ. ಹೊಸ ಬಸ್ ಕೊಳ್ಳಲು ಸಂಸ್ಥೆ ಜಾಗತಿಕ ಬ್ಯಾಂಕಿನ ಮುಂದೆ ಅಂಗಲಾಚುವ ಪರಿಸ್ಥಿತಿ ಇದೆ.

ಸಂಸ್ಥೆಯ ಮೇಲೆ ಸಾರ್ವಜನಿಕರಿಗೆ ವಿಶ್ವಾಸವಿಲ್ಲದಾಗಿದೆ. ಅದು ನೀಡುವ ಸೇವೆಯ ಬಗ್ಗೆ ಪ್ರಯಾಣಿಕರಿಗೆ ಏನೇನೂ ತೃಪ್ತಿ-ಸಮಾಧಾನಗಳಿಲ್ಲ. ಅದರ ಸಿಬ್ಬಂದಿಗಳು ನಡೆದುಕೊಳ್ಳುವ ರೀತಿ ಮಾನವೀಯತೆಗೆ ಮುಸುಕೆಳೆಯುವಂತಹದ್ದೆಂದು ಪ್ರಯಾಣಿಕರು ದೂರುತ್ತಾರೆ.

ನಷ್ಟವನ್ನು ತುಂಬಿಸಿಕೊಳ್ಳಲು ಸಂಸ್ಥೆ ಆಡಳಿತೆಯನ್ನು ಸುಧಾರಿಸಿ, ಸೋರಿಕೆಯನ್ನು ನಿಲ್ಲಿಸಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಬದಲು ಸಂಸ್ಥೆಯು ಕೆಲವು ತಿಂಗಳ ಹಿಂದೆ ಪ್ರಯಾಣ ಶುಲ್ಕವನ್ನು ಬಹಳಷ್ಟು ಹೆಚ್ಚಿಸಿತು. ಇದರಿಂದಾಗಿ ಖಾಸಗಿಯವರು ಅಸ್ತಿತ್ವದಲ್ಲಿರುವ ಕಡೆಗಳಲ್ಲೆಲ್ಲಾ ರಸ್ತೆ ಸಾರಿಗೆ ನಿಗಮಕ್ಕೆ ಉತ್ತಮ ಸ್ಪರ್ಧೆ ಕೊಡುವಂತಾಯಿತು. ಖಾಸಗಿಯವರು ಇಲ್ಲದ ಕಡೆಗಳಲ್ಲಿ ಜನರು ನಿಗಮಕ್ಕೆ ಹಿಡಿಶಾಪ ಹಾಕುವಂತಾಯಿತು.

ಜನರು ಟಿಕೆಟನ್ನು ಪಡೆದೇ ಪ್ರಯಾಣಿಸುವಂತೆ ಮಾಡಲು, ಅವರಲ್ಲಿ ಪ್ರಾಮಾಣಿಕತೆಯನ್ನು ಬೆಳೆಸಲು ನಿಗಮದ ಸಿಬ್ಬಂದಿಗಳು ವರಮಾನವನ್ನು ನುಂಗಿ ನೀರು ಕುಡಿಯುವುದನ್ನು ತಡೆಯಲು ಸಂಸ್ಥೆಯು ಆಡಳಿತಾತ್ಮಕ ವ್ಯವಸ್ಥೆಗಳನ್ನು ಸುಧಾರಿಸಿಕೊಳ್ಳಬೇಕು. ತನಿಖೆಯ ವ್ಯವಸ್ಥೆಯಿರಬೇಕು. ಭ್ರಷ್ಟ ಜನರು ತಾವೆಲ್ಲಿ ಸಿಕ್ಕಿಬೀಳುವೆವೋ ಎಂದು ಹೆಜ್ಜೆ ಹೆಜ್ಜೆಗೂ ಭಯಪಡುವ ವಾತಾವರಣವನ್ನು ನಿರ್ಮಿಸಬೇಕು. ಅಂತಹ ವ್ಯವಸ್ಥೆಯನ್ನು ತರಬಲ್ಲ ಸಮರ್ಥರನ್ನು ಸಂಸ್ಥೆಯ ಆಯಕಟ್ಟಿನ ಹುದ್ದೆಗಳಲ್ಲಿ ನಿಯುಕ್ತಿಗೊಳಿಸಬೇಕು.

ಅದನ್ನು ಮಾಡದೆ ಟಿಕೆಟಿಗೆ ಲಾಟರಿ ಮಾಡುವುದರಿಂದ ಪರಿಸ್ಥಿತಿ ಸುಧಾರಿಸೀತೇ? ನಷ್ಟವು ತುಂಬಿಬಂದೀತೇ? ಟಿಕೆಟು ಲಾಟರಿ ಮೂಲಕ ಸಂಸ್ಥೆಯ ವರಮಾನ ಒಮ್ಮೆ ಜಾಸ್ತಿಯಾದರೂ ಬೇರೆ ವಿಧಾನಗಳಿಂದ ಅದನ್ನೆಲ್ಲ ಕರಗಿಸಿ ಬಿಡುವ ತಂತ್ರವನ್ನು ಸಂಸ್ಥೆಯ ಒಳಗಿನ ಹೆಗ್ಗಣಗಳು ರೂಪಿಸಲಾರವೇ? ಈ ಬಗ್ಗೆ ಸಂಸ್ಥೆಯ ವರಿಷ್ಠರು ಆಲೋಚಿಸಿದ್ದಾರೆಯೇ?

ಸಂಸ್ಥೆಯ ಸಂಪನ್ಮೂಲ ಸೋರಿಕೆಯಾಗದಂತೆ ಸೂಕ್ತ ಸಾಂಸ್ಥಿಕ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದೊಂದೇ ದಾರಿ. ಹೊರತು ಲಾಟರಿಯಂತಹ ಆವುಟಗಳಲ್ಲ. ಸರಕಾರವೇ ಹೀಗೆ ಲಾಟರಿ ಸಂಸ್ಕೃತಿಯನ್ನು ಬೆಳೆಸುವುದು ಸಮಾಜದ ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ ಒಳ್ಳೆಯದಲ್ಲ. ಸರಕಾರವೇ ಜನರಿಗೆ ಕನಸಿನ ಬುತ್ತಿಯನ್ನು ಕಟ್ಟಿಕೊಡುವುದು ಹಿತವಲ್ಲ. ಇದು ಸಟ್ಟ ವ್ಯವಹಾರಕ್ಕಿಂತ ಬೇರೇನೂ ಅಲ್ಲ. ಇದೆಲ್ಲ ಜನರನ್ನು ನಿರುದ್ಯೋಗಿಗಳಾಗಿಯೂ ಸೋಮಾರಿಗಳನ್ನಾಗಿಯೂ ಮಾಡುತ್ತದೆ.

ಮುಂಗಾರು

ಬುಧವಾರ, ಏಪ್ರಿಲ್ 16, 1986

ಸುಡಲು ಹೊರಟ ಅಮೆರಿಕ

ಲಿಬಿಯದ ಮೇಲೆ ಅಮೆರಿಕದ ಯುದ್ಧ ವಿಮಾನಗಳು ದಾಳಿ ಮಾಡಿವೆ. ಸಿದ್ರಾಕೊಲ್ಲಿಯಲ್ಲಿ ನೆಲೆನಿಂತ ಅಮೆರಿಕ ಹಾಗೂ ಬ್ರಿಟನಿನ ವಿಮಾನ ವಾಹಕ ನೌಕೆಗಳಿಂದ ಹಾರಿಬಂದ ಹತ್ತಾರು ಯುದ್ಧ ವಿಮಾನಗಳು ಲಿಬಿಯದ ರಾಜಧಾನಿ ಟ್ರಿಪೋಲಿ ಹಾಗೂ ಎರಡನೆ ದೊಡ್ಡ ನಗರವಾದ ಬೆಂಗಾಜಿಯ ಮೇಲೆ ಒಟ್ಟು ಐದು ತಾಣಗಳ ಮೇಲೆ ಗುಂಡು ದಾಳಿ ನಡೆಸಿವೆ. ಲಿಬಿಯ ಅಧ್ಯಕ್ಷ ಕರ್ನಲ್ ಮುಮ್ಮರ್ ಗಡ್ಡಾಫಿ ಒಮ್ಮೊಮ್ಮೆ ತಮ್ಮ ಕೇಂದ್ರ ಕಚೇರಿಯಾಗಿ ಬಳಸುತ್ತಿದ್ದ ಮಿಲಿಟರಿ ನೆಲೆಯ ಮೇಲೂ ದಾಳಿ ನಡೆದಿದೆ ಎನ್ನಲಾಗಿದೆ. ಈ ದಾಳಿಯಲ್ಲಿ ಗಡ್ಡಾಫಿಯವರ ಸಂಬಂಧಿಕರು ಗಾಯಗೊಂಡ ವರದಿಯೂ ಬಂದಿದೆ.

ಬ್ರಿಟನಿನ ನೆರವಿನೊಡನೆ ಅಮೆರಿಕ ನಡೆಸಿರುವಂತಹ ಈ ದಾಳಿ ಪೂರ್ವಯೋಜಿತ. ಇಂತಹ ದಾಳಿಗೆ ಪಶ್ಚಿಮ ಯುರೋಪಿನ ತನ್ನ ಮಿತ್ರ ರಾಷ್ಟ್ರಗಳ ಬೆಂಬಲ ಪಡೆಯಲು ಅಮೆರಿಕವು ಪ್ರತಿನಿಧಿಯೊಬ್ಬರನ್ನು ಮೊನ್ನೆ ಶನಿವಾರ ಕಳಿಸಿತ್ತು. ವಿಶ್ವ ಸಂಸ್ಥೆಯಲ್ಲಿ ಅಮೆರಿಕದ ರಾಯಭಾರಿಯಾಗಿರುವ ಜ। ವರ್ನನ್ ವಾಲ್ಟರ್ಸ್ ಬ್ರಿಟಿಷ್ ಪ್ರಧಾನ ಮಂತ್ರಿ ಮಾರ್ಗರೆಟ್ ಥ್ಯಾಚರ್ ಜತೆ ಮಾತನಾಡಿ ನಂತರ ಪಶ್ಚಿಮ ಜರ್ಮನಿಗೆ ತೆರಳಿದ್ದರು. ತನ್ನ ಆಕ್ರಮಣ ಕೃತ್ಯಕ್ಕೆ ಐರೋಪ್ಯ ಮಿತ್ರರ ಬೆಂಬಲ ಪಡೆಯುವುದೇ ಅಮೆರಿಕದ ಉದ್ದೇಶವಾಗಿತ್ತು.

ಆದರೆ ಬ್ರಿಟನ್ ಒಂದನ್ನು ಬಿಟ್ಟರೆ ಐರೋಪ್ಯರ ಬೆಂಬಲ ಅಮೆರಿಕಕ್ಕೆ ಸಿಕ್ಕಿಲ್ಲ ಎನ್ನಲಾಗಿದೆ. ಭಯೋತ್ಪಾದಕತೆಯನ್ನು ನಿವಾರಿಸುವ ನಿಟ್ಟಿನಲ್ಲಿ ಲಿಬಿಯದ ಮೇಲೆ ಹೀಗೆ ಅಮೆರಿಕವು ಏಕ ಪಕ್ಷೀಯ ವೈಮಾನಿಕ ದಾಳಿ ನಡೆಸುವುದನ್ನು ಅಮೆರಿಕದ ಮಿಲಿಟರಿ ಮಿತ್ರರು ವಿರೋಧಿಸುತ್ತಿದ್ದಾರೆಂದೇ ಹೇಳಲಾಗಿದೆ. ಇಂತಹ ದುಸ್ಸಾಹಸದಿಂದ ಒಂದನೆಯದಾಗಿ ಲಿಬಿಯದ ಕರ್ನಲ್ ಗಡ್ಡಾಫಿ ಹುತಾತ್ಮರೆನಿಸುವುದು ಒಂದು ವಿಚಾರವಾದರೆ ಅಮೆರಿಕದ ಆಡಳಿತೆಯ ಆಯಕಟ್ಟಿನ ತಾಣಗಳಲ್ಲಿರುವ ಇಸ್ರೇಲ್ ಪರ ಶಕ್ತಿಗಳಿಗೆ ಧೈರ್ಯವು ಹೆಚ್ಚಿ ಅಮೆರಿಕವು ಇಸ್ರೇಲಿನ ಪರ ಇನ್ನಷ್ಟು ದುಸ್ಸಾಹಸಗಳನ್ನು ನಡೆಸಲು ಪ್ರಚೋದನೆ ದೊರೆಯುವುದೆಂಬುದು ಐರೋಪ್ಯರ ಈ ವಿರೋಧಕ್ಕೆ ಇನ್ನೊಂದು ಕಾರಣ.

ಅಮೆರಿಕದ ಮೂರು ವಿಮಾನಗಳನ್ನು ಉರುಳಿಸಿರುವುದಾಗಿ ಲಿಬಿಯ ಹೇಳಿದೆ. ಅವುಗಳ ಪೈಲಟರನ್ನು ನಾಗರಿಕರೇ ಕೊಂದಿರುವುದಾಗಿಯೂ ಅದು ತಿಳಿಸಿದೆ. ಒಂದು ವಿಮಾನ ನಾಪತ್ತೆಯಾಗಿರುವುದಾಗಿಯೂ ಅಮೆರಿಕವೇ ಒಪ್ಪಿಕೊಂಡಿದೆ.

ಈ ದಾಳಿಯಲ್ಲಿ ವಸತಿ ಕಟ್ಟಡಗಳೇ ನೆಲ ಸಮವಾಗಿವೆ. ಬಾಂಬು ದಾಳಿಯಲ್ಲಿ ರಸ್ತೆಯಲ್ಲಿದ್ದ ನಾಗರಿಕರು ಸತ್ತ ಸುದ್ದಿಯಿದೆ. ಒಂದು ನೂರಕ್ಕೂ ಹೆಚ್ಚು ಜನರು ಸತ್ತಿರುವುದಾಗಿ ಆಸ್ಪತ್ರೆ ಮೂಲಗಳು ತಿಳಿಸಿವೆ. ಅನೇಕರು ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ.

ಈ ಕೃತ್ಯವನ್ನು ಅಮೆರಿಕವು ಲಿಬಿಯದ ಭಯೋತ್ಪಾದಕತೆ ವಿರುದ್ಧ ನಡೆಸಿದ ಕಾರ್ಯಾಚರಣೆಯೆಂದು ಸಮರ್ಥಿಸಿದೆ. ಪಶ್ಚಿಮ ಬರ್ಲಿನ್‌ನಲ್ಲಿ ಅಮೆರಿಕದ ಸೈನಿಕರೇ ಹೆಚ್ಚಾಗಿ ಭೇಟಿಕೊಡುವ ನೈಟ್ ಕ್ಲಬ್ ಒಂದಕ್ಕೆ ಇತ್ತೀಚೆಗೆ ಭಯೋತ್ಪಾದಕರು ಬಾಂಬೆಸೆದ ಕೃತ್ಯ ಲಿಬಿಯದವರು ನಡೆಸಿದ್ದು ಎಂದು ಅಧ್ಯಕ್ಷ ರೊನಾಲ್ಡ್ ರೇಗನ್ ಆಪಾದಿಸಿದ್ದಾರೆ. ಆ ದಾಳಿಯಲ್ಲಿ ಒಬ್ಬ ಅಮೆರಿಕನ್ ಹಾಗೂ ಒಬ್ಬಾಕೆ ಟರ್ಕಿಯ ಮಹಿಳೆ ಸತ್ತು 230 ಮಂದಿ ಗಾಯಗೊಂಡಿದ್ದರು.

ತಾನೇ ಪ್ರಪಂಚದ ಪೋಲೀಸ್ ಎನ್ನುವಂತೆ ವ್ಯವಹರಿಸುತ್ತಿರುವ, ಶಕ್ತಿಯಿದೆಯೆಂದು ಅದನ್ನು ಕಂಡ ಕಂಡವರ ಮೇಲೆ ಪ್ರಯೋಗಿಸುತ್ತಿರುವ ಅಮೆರಿಕದ ಈ ನಡವಳಿಕೆಗೆ ಜಗತ್ತಿನ ವಿಚಾರವಂತರೆಲ್ಲರೂ ಹೇಸಿಗೆ ಪಡುವಂತಾಗಿದೆ. ವಿವೇಕಿಗಳೆಲ್ಲರೂ ವಿರೋಧಿಸುವಂತಾಗಿದೆ. ಇದೀಗ ದೆಹಲಿಯಲ್ಲಿ ಸಭೆ ನಡೆಸುತ್ತಿರುವ ಅಲಿಪ್ತ ದೇಶಗಳ ವಿದೇಶ ಸಚಿವರುಗಳು ಅಮೆರಿಕದ ಆಕ್ರಮಣದ ಬಗ್ಗೆ ಕಳವಳ ತಾಳಿದ್ದಾರೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಸಭೆ ನಡೆಸಲು ವ್ಯವಸ್ಥೆಯಾಗುತ್ತಿದೆ.

ಅಮೆರಿಕ ಮಾಡಲು ಹೊರಟಿರುವ ಈ ದುಸ್ಸಾಹಸದ ಪರಿಣಾಮಗಳು ತೀವ್ರಗೊಳ್ಳಲಿವೆ. ಜಗತ್ತಿನ ಹಲವು ಭಾಗಗಳ ಹಲವು ಜನರು ಸಂಕಟ ಅನುಭವಿಸಬೇಕಾದ ದಿನಗಳು ಬರಲಿವೆ. ಮಧ್ಯಪ್ರಾಚ್ಯಕ್ಕೆ ಬೆಂಕಿ ಹಾಕಲು ಇದೀಗ ಅಮೆರಿಕ ಹೊರಟಿದೆ. ಅಮೆರಿಕಕ್ಕೆ ಜಗತ್ತನ್ನೇ ಸುಡುವ ಶಕ್ತಿ ಇದೆ. ಅದೀಗ ಅದನ್ನೆ ಮಾಡಲು ಹೊರಟಿರುವಂತಿದೆ. ಲಿಬಿಯದ ಮೇಲಿನ ಈ ಆಕ್ರಮಣದಲ್ಲಿ ಶಾಮೀಲಾದ ಬ್ರಿಟನಿಗೆ ಆ ದೇಶದಲ್ಲಿ 5000 ಮಂದಿ ನಿರಪರಾಧಿ ಬ್ರಿಟಿಷ್ ಪ್ರಜೆಗಳು ಉದ್ಯೋಗಾರ್ಥ ಜೀವಿಸಿದ್ದಾರೆ ಎಂಬ ಸತ್ಯ ಮರೆತಿರಬಹುದು. ವಿದೇಶಿ ಕಂಪೆನಿಗಳವರೆಲ್ಲ ತಂತಮ್ಮ ಕೆಲಸದ ತಾಣಗಳಿಂದ ಹೊರ ಹೋಗಕೂಡದೆಂದು ಇದೀಗ ನಾಲ್ಕು ದಿನಗಳ ಹಿಂದೆ ಗಡ್ಡಾಫಿ ಸರಕಾರ ತಾಕೀತು ಮಾಡಿತ್ತು. ಅಮೆರಿಕದ ದಾಳಿಯ ಮುನ್ಸೂಚನೆ ಅದಕ್ಕೆ ದೊರೆತೇ ಈ ಕ್ರಮವನ್ನು ಅದು ತೆಗೆದುಕೊಂಡಿತ್ತು. ಈ ಬ್ರಿಟಿಷ್ ನಾಗರಿಕರು ಲಿಬಿಯದಲ್ಲಿ ಒತ್ತೆಯಾಳುಗಳಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ. ಅರಬ್ ದೇಶಗಳೆಲ್ಲ ಮತ್ತೆ ಐಕ್ಯದಿಂದ ತೈಲವನ್ನು ಅಸ್ತ್ರವಾಗಿ ಪ್ರಯೋಗಿಸುವ ಸಾಧ್ಯತೆಯನ್ನು ಇಲ್ಲವೆನ್ನಲಾಗುವುದಿಲ್ಲ.

ಪ್ಯಾಲೆಸ್ತೀನಿಯರ ಭಯೋತ್ಪಾದಕತೆಯನ್ನು ಅಮೆರಿಕ ಇಂತಹ ಕೃತ್ಯಗಳಿಂದ ನಿಲ್ಲಿಸುವುದು ಸಾಧ್ಯವಾಗದು. ಪ್ಯಾಲೆಸ್ತೀನಿಯರಿಗೆ ಅನ್ಯಾಯವಾಗಿದೆ. ಅದನ್ನು ಮೊದಲು ನಿವಾರಿಸಬೇಕು. ಆಗ ಭಯೋತ್ಪಾದನೆಯೂ ನಿವಾರಣೆಯಾಗುತ್ತದೆ.

ಅಮೆರಿಕ ಇಂದು ಕೈಗೊಂಡ ದಾಳಿಯಂತಹ ಹೆಜ್ಜೆಯಿಂದ ಇನ್ನೊಂದು ಜಾಗತಿಕ ಸಮರವೇ ಸ್ಫೋಟಗೊಳ್ಳಬಹುದು. ಅದು ಸಂಭವಿಸಿದರೆ ಭೂಗೋಳದ ಮೇಲ್ಮೈ ಸುಟ್ಟು ನಾಶವಾದೀತೆಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಮುಂಗಾರು
ಗುರುವಾರ, ಏಪ್ರಿಲ್ 17, 1986

ವಾಣಿಜ್ಯದಲ್ಲಿ ಕನ್ನಡ

ಕರ್ನಾಟಕ ರಾಜ್ಯದ ನಗರಗಳಲ್ಲಿ ಅಂಗಡಿ ಹಾಗೂ ಸಂಸ್ಥೆಗಳ ನಾಮ ಫಲಕಗಳನ್ನು ಕನ್ನಡದಲ್ಲಿ ಬರೆಯಬೇಕೆಂದು ಹಾಗೂ ಈ ನಿಯಮವನ್ನು ಕಡ್ಡಾಯವಾಗಿ ಜಾರಿಗೆ ತರಬೇಕೆಂದು ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾದ ಪಾಟೀಲ ಪುಟ್ಟಪ್ಪನವರು ಮಂಗಳೂರಿನಲ್ಲಿ ಕರೆಕೊಟ್ಟಿದ್ದಾರೆ. ಈ ನಿಯಮವನ್ನು ಬಹು ಹಿಂದೆಯೇ ಅಂಗೀಕರಿಸಲಾಗಿದ್ದರೂ ಬೆಂಗಳೂರು ಹಾಗೂ ಮಂಗಳೂರುಗಳಲ್ಲಿ ಇದರ ಅನುಷ್ಠಾನವು ವಿಳಂಬವಾಗುತ್ತಿದೆಯೆಂದು ಅವರು ಹೇಳಿದ್ದಾರೆ.

ಬೆಂಗಳೂರು ಮಹಾನಗರವಾಗಿ ಬೆಳೆದಿದ್ದು ದೇಶದ ಹಲವಾರು ರಾಜ್ಯಗಳಿಂದ ಬಂದ ಜನ ಅಲ್ಲಿ ವ್ಯಾಪಾರ,ಉದ್ಯಮ ಹಾಗೂ ಉದ್ಯೋಗಗಳನ್ನು ಅರಸಿಕೊಂಡಿದ್ದಾರೆ.ಹೊರಗಿನವರ ಸಂಸ್ಥೆಗಳು ಅಲ್ಲಿ ಅಸಂಖ್ಯ ಇವೆ.ಸಹಜವಾಗಿಯೇ ಇವರಿಗೆಲ್ಲ ಇಂಗ್ಲಿಷಿನ ಆಕರ್ಷಣೆ ಇರುತ್ತದೆ. ಕನ್ನಡದ ಬಗೆಗಿರುವ ಅಸಡ್ಡೆ, ಅಸಮಾಧಾನಗಳೂ ಕನ್ನಡಿಗರ ಬಗೆಗಿರುವ ತಿರಸ್ಕಾರವೂ ಅವರಿಂದ ಕನ್ನಡದ ಅವಗಣನೆಯ ಕೆಲಸವನ್ನು ಮಾಡಿಸುತ್ತವೆ. ಮಂಗಳೂರಲ್ಲಿ ಇನ್ನೊಂದು ವಿಧ. ಇಲ್ಲಿನ ವ್ಯವಹಾರ ಭಾಷೆ ಪ್ರಧಾನವಾಗಿ ಕನ್ನಡ. ಜತೆಗೆ ತುಳು. ಇನ್ನು ಕೆಲವರ ಮನೆ ಭಾಷೆ ಕೊಂಕಣಿ. ಆದರೆ ಕನ್ನಡದ ಬಗೆಗಿನ ಅವಗಣನೆಗೆ ಇದಾವುದೂ ಕಾರಣವಲ್ಲ. ಈ ಜಿಲ್ಲೆಯ ಬಹು ಮಂದಿ ವಿದ್ಯಾವಂತರು ಮತ್ತು ಯುವಕರು ಬೇರೆ ರಾಜ್ಯಗಳಲ್ಲಿ ಉದ್ಯೋಗವನ್ನು ಅರಸಿಕೊಂಡಿದ್ದಾರೆ. ಹಲವು ಮಂದಿ ಬೇರೆ ರಾಜ್ಯಗಳಲ್ಲಿ ವಾಣಿಜ್ಯೋದ್ಯಮಗಳನ್ನು ಬೆಳೆಸಿಕೊಂಡಿದ್ದಾರೆ. ಅನೇಕ ಸಾವಿರ ಮಂದಿ ಅರಬ್ ಕೊಲ್ಲಿಯ ದೇಶಗಳಲ್ಲಿದ್ದಾರೆ. ಲಕ್ಷಾಂತರ ಮಂದಿ ಮುಂಬಯಿ ಮಹಾನಗರದಲ್ಲಿದ್ದಾರೆ.ಹೀಗಾಗಿ ವಸ್ತುತಃ ಈ ಜಿಲ್ಲೆಯ ಪ್ರತಿ ಕುಟುಂಬಕ್ಕೂ ಹೊರ ರಾಜ್ಯಗಳೊಡನೆ ಸಂಪರ್ಕ ಉಂಟು. ಆರ್ಥಿಕ ಬಾಂಧವ್ಯ ಉಂಟು. ಇದು ಒಂದು ಮುಖವಾದರೆ ಕನ್ನಡ ಭಾಷೆ ಈ ಕರಾವಳಿಯ ಬಹುಭಾಗದ ಮಣ್ಣಿನ ಮಕ್ಕಳ ಭಾಷೆಯಲ್ಲ. ಅದು ತುಳು. ಇದೊಂದು ವಾಸ್ತವಿಕತೆ.ಇದನ್ನು ಮರೆಯುವಂತಿಲ್ಲ. ಈ ಜಿಲ್ಲೆಯ ಉತ್ತರದ ಒಂದಂಶದಲ್ಲಿ ಮಾತ್ರವೇ ಕನ್ನಡವು ನೆಲದೊಡಲಿಂದ ಮೂಡಿದ್ದು. ಕನ್ನಡ ಈ ಜಿಲ್ಲೆಯಲ್ಲಿ ವ್ಯವಹಾರ ಭಾಷೆ; ಗ್ರಾಂಥಿಕ ಭಾಷೆ. ಅದು ಶಾಲೆಯಲ್ಲಿ ಕಲಿತದ್ದು. ಈ ಎರಡು ಮಹತ್ವದ ವಿಚಾರಗಳೇ ದಕ್ಷಿಣ ಕನ್ನಡದ ಜನ ಭಾಷೆಯ ವಿಚಾರದಲ್ಲಿ ಭಾವ ಪರವಶರಾಗುವುದನ್ನು ತಡೆಹಿಡಿದಿವೆ. ಜತೆಗೆ ಇಂಗ್ಲಿಷಿನ ವ್ಯಾಮೋಹವನ್ನು ಬಲಪಡಿಸಿದೆ. ಕಾಸ್ಮೊಪಾಲಿಟನ್ ಸಂಸ್ಕೃತಿಯ ಅನುಯಾಯಿಗಳೆಂಬ ಮಾಯೆಗೆ ಸಿಲುಕಿ ರಾಜ್ಯಭಾಷೆಯ ಅನಿವಾರ್ಯತೆಯನ್ನು ಕಡೆಗಣಿಸುತ್ತಿದ್ದಾರೆ.

ಜತೆಗೆ ಭಾಷೆಯ ಹೆಸರಿನಲ್ಲಿ ದುಡ್ಡಿನ ಚೀಲ ತುಂಬಿಸುವ ಮಂದಿಯೂ ಇಲ್ಲಿ ಹುಟ್ಟಿಕೊಂಡಿದ್ದಾರೆ. ತಾವು ಭಾಷಾ ಅಲ್ಪ ಸಂಖ್ಯಾತರೆಂದು ಹೇಳಿಕೊಂಡು, ಕನ್ನಡವು ತಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿದೆಯೆಂಬ ನಾಟಕವನ್ನಾಡುತ್ತ ಸಂವಿಧಾನ ರಕ್ಷಣೆಯಲ್ಲಿ ವಿದ್ಯೆಯನ್ನು ಹಣದ ಗಂಟು ಕೊಟ್ಟವರಿಗೆ ವಿತರಿಸುವ ವ್ಯಾಪಾರವನ್ನಾಗಿ ಮಾಡಿಕೊಂಡ ಮಂದಿಯೂ ಇಲ್ಲಿದ್ದಾರೆ. ಸ್ವಂತಕ್ಕೆ ಸುಖ ತರುವುದಾದರೆ ಕನ್ನಡದ ಸೇವೆಗೂ ಈ ಮಂದಿ ಸಿದ್ಧ. ಇಂಥವರಿಗೆ ಕನ್ನಡದ ಕೈಂಕರ್ಯವೂ ವ್ಯಾಪಾರ.

ಇದು ಬೆಂಗಳೂರು ಮಂಗಳೂರು ಎಂಬ ಭೇದವಿಲ್ಲದೆ ಎಲ್ಲ ಕಡೆಯ ಮಂದಿ ಎಲ್ಲಾ ಕಾಲಗಳಲ್ಲಿ ಮಾಡಿಕೊಂಡು ಬಂದಿರುವ ಆಚರಣೆ. ಅನಿವಾರ್ಯವಾದಾಗ ಮಾತ್ರ ಈ ಮಂದಿಗೆ ಮಣ್ಣಿನ ಮಕ್ಕಳ ಭಾಷೆಯ ಮೇಲೆ ಪ್ರೀತಿ ಉಕ್ಕುತ್ತದೆ. ಲಾಭವಿದ್ದರೆ ಮಾತ್ರ ನೆಲದ ಕಲೆ ಸಂಸ್ಕೃತಿಗಳ ಮೆರವಣಿಗೆಯನ್ನು ಮಾಡಲು ಲಂಡನಿಗೋ, ಪ್ಯಾರಿಸಿಗೋ ಒಯ್ಯಲು ಇವರೆಲ್ಲ ಸಿದ್ಧ.

ನಮ್ಮ ಮಂದಿಯ ಇಂಥ ಸೋಗಲಾಡಿತನಕ್ಕೆ, ಅಥವ ಅವಜ್ಞೆಯಿಂದುಂಟಾಗುವ ಅವಗಣನೆಗೆ ಪಾಟೀಲಪುಟ್ಟಪ್ಪನವರು ಹೇಳುವ ನಿಯಮವನ್ನು ಕಡ್ಡಾಯಗೊಳಿಸುವ ವಿಧಾನವೂ ಒಂದು ನಿವಾರಣೋಪಾಯ. ಈ ದೇಶದಲ್ಲಿ ಒತ್ತಡ ಬೀಳದೆ, ಅನಿವಾರ್ಯವೆನಿಸದೆ ಎಲ್ಲಿಯೂ ಏನೂ ಜರಗುವುದಿಲ್ಲ. ಯಾವುದೂ ಚಲಿಸುವುದಿಲ್ಲ. ಸರಕಾರಿ ನೌಕರ ಶಾಹಿಯ ಮಟ್ಟಿಗೆ ಇದು ಎಷ್ಟು ಸರಿಯೋ ಸಾರ್ವಜನಿಕ ಹಿತದ ಪ್ರಶ್ನೆಗಳಲ್ಲಿ ಸಾರ್ವಜನಿಕರು ನಿರ್ವಹಿಸಬೇಕಾದ ಜವಾಬ್ದಾರಿಗಳಲ್ಲಿ ಕೂಡ ಅಷ್ಟೇ ಅನ್ವಯಿಸುತ್ತದೆ. ಆದ್ದರಿಂದ ಕನ್ನಡ ಬಳಕೆಗೆ ಅಗತ್ಯವೆನಿಸಿದರೆ ಸೂಕ್ತ ಕಾನೂನುಗಳನ್ನು ಕೂಡ ತರಬೇಕು. ಕನ್ನಡ ಕಾವಲು ಸಮಿತಿಯಂತಹ ಇಡಿಯ ಕನ್ನಡ ಜನಸಮುದಾಯದ ಬೆಂಬಲವೂ ರಕ್ಷಣೆಯೂ ಉಳ್ಳಂತಹ ಸಂಸ್ಥೆ ಅದರ ಅನುಷ್ಠಾನವನ್ನು ನೋಡಿಕೊಳ್ಳಬೇಕು.

ಇಂದು ಪಾಟೀಲ ಪುಟ್ಟಪ್ಪನವರು ಫಲಕಗಳಲ್ಲಿ ಕನ್ನಡ ಬಳಕೆ ವಿಚಾರದಲ್ಲಿ ಮನವೊಲಿಸುವ ನೀತಿ ಅನುಸರಿಸಿದ್ದಾರೆ. ಕನ್ನಡ ಬಳಸಿ ಎಂದು ಅವರು ವಿನಂತಿ ಮಾಡಿಕೊಂಡಿದ್ದಾರೆ. ಇದನ್ನು ಸಂಬಂಧಪಟ್ಟವರೆಲ್ಲ ಗೌರವಿಸಬೇಕು. ಕನ್ನಡ ಕಾವಲು ಸಮಿತಿಯ ಅಧ್ಯಕ್ಷರೆಂದರೆ ಒಬ್ಬ ವ್ಯಕ್ತಿಯಲ್ಲ. ಅದೊಂದು ಶಕ್ತಿ. ಅವರ ವಿನಂತಿಗೆ ಇಡಿಯ ಜನಕೋಟಿಯ ಬಯಕೆಯ ಧ್ವನಿ ಶಕ್ತಿಯಿದೆ, ಕನ್ನಡ ಜನರ ಇಚ್ಛಾ ಶಕ್ತಿ ಅದು. ಅದು ವಿನಂತಿಯೇ ಆದರೂ ಅದಕ್ಕೆ ಸರಕಾರದ ಕಟ್ಟಾಜ್ಞೆಗಿಂತಲೂ ಹೆಚ್ಚಿನದಾದ ಬಲವಿದೆ. ಅದನ್ನು ಕಡೆಗಣಿಸಿ ಈ ನಾಡಿನಲ್ಲಿ ವ್ಯವಹಾರ ನಡೆಸುವುದು ಯಾರಿಗೂ ಕಷ್ಟವಾಗಬಹುದು. ಆದ್ದರಿಂದ ಈ ವಿನಂತಿಯನ್ನು ಎಲ್ಲರೂ ಗೌರವಿಸುವುದು ಎಲ್ಲರಿಗೂ ಹಿತ.

ಮುಂಗಾರು

ಶುಕ್ರವಾರ, ಎಪ್ರಿಲ್ 18, 1986

ಆಷಾಢಭೂತಿ ರಾಜಕಾರಣ

ಕರ್ನಾಟಕದ ಬರ ಪರಿಸ್ಥಿತಿಯ ವೀಕ್ಷಣೆಗೆ ಬಂದ ಪ್ರಧಾನಿ ರಾಜೀವ ಗಾಂಧಿಯವರು ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಅಭಿಪ್ರಾಯ ಹೇಳುತ್ತ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ರಾಜೀನಾಮೆ ಕೊಡಬೇಕೆಂಬ ಮಾತನ್ನಾಡಿದ್ದಾರೆ. ಅದಕ್ಕೆ ರಾಮಕೃಷ್ಣ ಹೆಗಡೆಯವರು ಪ್ರತಿಕ್ರಿಯೆ ವ್ಯಕ್ತಪಡಿಸುತ್ತ ರಾಜೀವ ಗಾಂಧಿಯವರನ್ನು ಖಂಡಿಸಿದ್ದಾರೆ.

ಹೆಗಡೆಯವರು ರಾಜೀವ ಗಾಂಧಿಯವರಿಗೆ ಪತ್ರವೊಂದನ್ನು ಬರೆದಿದ್ದಾರೆ. "ಬೆಂಗಳೂರಿಗೆ ಬಂದು ಇಂತಹ ಟೀಕೆ ಮಾಡುವುದು ನಿಮ್ಮಂತಹವರಿಗೆ ಹೇಳಿಸಿದ್ದಲ್ಲ" ಎಂದು ಹೆಗಡೆಯವರು ರಾಜೀವಗಾಂಧಿಯವರಿಗೆ ಹೇಳಿದ್ದಾರೆ. "ನೀವು ರಾಷ್ಟ್ರೀಯ ಮಟ್ಟದಲ್ಲಿ ಮಾಡುತ್ತಿರುವಂತೆಯೇ ನಾನು ಇಲ್ಲಿ ಸ್ವಚ್ಛವಾದ ಆಡಳಿತ ತರಲು ಪ್ರಯತ್ನ ಪಡುತ್ತಿದ್ದೇನೆ. ಬಹುಶ: ಅದುವೇ ಅಪರಾಧವಾಗಿರುವಂತೆ ಕಾಣಿಸುತ್ತಿದೆ" ಎಂದು ಹೆಗಡೆಯವರು ಈ ಪತ್ರದಲ್ಲಿ ಕಟಕಿಯಾಡಿದ್ದಾರೆ.

ಇದು ಎರಡು ಪರಸ್ಪರ ವಿರೋಧಿಗಳಾಗಿರುವ ರಾಜಕೀಯ ಪಕ್ಷಗಳ ನಾಯಕರೊಳಗೆ ನಡೆಯುತ್ತಿರುವ ಹೋರಾಟದ ನಮೂನೆಯಾಗಿದೆ. ಇದನ್ನು ರಾಜಕೀಯ ಮಟ್ಟದಲ್ಲಿಯೇ ಇರಿಸಿಕೊಳ್ಳುವ ಅಗತ್ಯವಿತ್ತು. ಕರ್ನಾಟಕದಲ್ಲಿ ಜನ–ಜಾನುವಾರಿಗೆ ಅತೀವ ಸಂಕಟವನ್ನೊಡ್ಡಿದ ಬರ ಪರಿಸ್ಥಿತಿ ಏನು ಎಂಬುದನ್ನು ಸ್ವತ: ನೋಡಿ ತಿಳಿಯಲು, ಈ ಸಂಕಟದ ನಿವಾರಣೆಗೆ ಕೇಂದ್ರ ಸರಕಾರ ನಿರ್ವಹಿಸಬೇಕಾದ ಕರ್ತವ್ಯವೇನು ಎಂಬುದನ್ನು ತೀರ್ಮಾನಿಸಲು ಪ್ರಧಾನ ಮಂತ್ರಿಯಾಗಿ ಕರ್ನಾಟಕಕ್ಕೆ ಬಂದಿದ್ದರು. ಅವರು ತನ್ನ ವೇಳೆಯನ್ನೂ ಶಕ್ತಿಯನ್ನೂ ಬುದ್ಧಿ-ಭಾವಗಳ ಗ್ರಹಣ ಸಾಮರ್ಥ್ಯವನ್ನೂ ಸಂಪೂರ್ಣವಾಗಿ ಅದಕ್ಕಾಗಿಯೇ ವ್ಯಯಿಸಬೇಕಾಗಿತ್ತು. ಅವರು ಅಂತಹ ಕರ್ತವ್ಯವನ್ನು ನಿರ್ವಹಿಸುವರೆಂದು ಕರ್ನಾಟಕದ ಜನ ನಿರೀಕ್ಷಿಸಿದ್ದರು. ಆದರೆ ರಾಜೀವ ಗಾಂಧಿಯವರು ಅತ್ಯಂತದಾರುಣ ಮಾನವೀಯ ಸಮಸ್ಯೆಯೊಂದರ ಜತೆಗೆ ಕ್ಷುದ್ರ ರಾಜಕಾರಣವನ್ನು ಬೆರೆಸಿದರು. ಶರಾಬು ಬಾಟ್ಲಿಂಗ್ ಪ್ರಕರಣದಲ್ಲಿ ಸುಪ್ರೀಂಕೋರ್ಟಿನ ತೀರ್ಪಿನನುಸಾರ ಹೆಗಡೆಯವರು ರಾಜೀನಾಮೆ ಕೊಡಬೇಕೆಂದು ಕೇಳಿದರು. ಇದು ರಾಜಕೀಯ ತಂತ್ರಗಾರಿಕೆಯೆನಿಸುತ್ತದೆ. ಮಾನವೀಯ ಸೌಜನ್ಯದ ದೃಷ್ಟಿಯಿಂದ ಅವರದನ್ನು ಮಾಡಬಾರದಾಗಿತ್ತು. ಒಂದು ರಾಜಕೀಯ ಪಕ್ಷದ ಮುಖ್ಯಸ್ಥನ ನೆಲೆಯಲ್ಲಿ ಅವರು ದೆಹಲಿಯಿಂದಲೋ ಮತ್ತೆಲ್ಲಿಂದಲೋ ಹೆಗಡೆಯವರ ರಾಜೀನಾಮೆಯನ್ನು ಕೇಳಬಹುದಾಗಿತ್ತು.

ಬರ ಪರಿಸ್ಥಿತಿ ಸಮೀಕ್ಷೆಯ ಆಡಳಿತಾತ್ಮಕ ಕಾರ್ಯಭಾರದ ನಡುವೆ ಸಾರಾಯಿ ಬಾಟ್ಲಿಂಗ್‌ಗೆ ಸಂಬಂಧಿಸಿ ಮುಖ್ಯ ಮಂತ್ರಿಯ ರಾಜೀನಾಮೆಯನ್ನು ಕೇಳಿದ ಅನೌಚಿತ್ಯವನ್ನು ಮಾಡಿದರೆಂಬ ಕಾರಣಕ್ಕೆ ಹೆಗಡೆಯವರು ತಾನೇನೂ ತಪ್ಪು ಮಾಡಿಲ್ಲವೆಂಬಂತೆ ರಾಜೀವ ಗಾಂಧಿಯವರು ರಾಜೀನಾಮೆ ಕೇಳುತ್ತಿರುವುದೇ ದೊಡ್ಡ ಪ್ರಮಾದ ಎಂಬಂತೆ ವ್ಯವಹರಿಸುತ್ತಿರುವುದು ಸಲ್ಲದ ನಡವಳಿಕೆಯೆನಿಸುತ್ತದೆ. ರಾಜೀವ ಗಾಂಧಿಯವರ ರಾಜಕೀಯ ಅನನುಭವದ ನಡವಳಿಕೆಯನ್ನು ಸ್ವಂತ ಪ್ರಯೋಜನಕ್ಕೆ ಬಳಸಿಕೊಳ್ಳುವ ಜಾಣತನದ ಕೆಲಸವನ್ನು ಹೆಗಡೆಯವರಿಂದು ಮಾಡುತ್ತಿದ್ದಾರೆ.

ಹೆಗಡೆಯವರು ಸ್ವಚ್ಛ ಸರಕಾರದ ಮಾತನ್ನಾಡುತ್ತಿದ್ದಾರೆ. ಸ್ವಚ್ಛತೆಯ ತಮ್ಮ ಪ್ರಯತ್ನವನ್ನು ರಾಜೀವಗಾಂಧಿಯವರ ಸ್ವಚ್ಛತೆಯ ಜತೆಗೆ ಹೋಲಿಸಿಕೊಳ್ಳುತ್ತಿದ್ದಾರೆ. ಇದು ಸುಳ್ಳು ದೇವರಿಗೆ ಕಳ್ಳ ಪೂಜಾರಿ ಸಾಕ್ಷಿ ನಿಂತಂತಾಗಿದೆ. ದೆಹಲಿಯಲ್ಲಿ ರಾಜೀವರೂ ಬೆಂಗಳೂರಲ್ಲಿ ಹೆಗಡೆಯವರೂ ನಡೆಸುತ್ತಿರುವ ಮಹಾಸ್ವಚ್ಛತೆಯುಳ್ಳ ಸರಕಾರಗಳನ್ನು ನಾವಿಂದು ನೋಡುತ್ತಿದ್ದೇವೆ. ಸುಪ್ರೀಂಕೋರ್ಟಿನ ನ್ಯಾಯಾಧೀಶರನ್ನು ವಾಚಾಮಗೋಚರವಾಗಿ ಬೈದು ಭಂಗಿಸಿದ ಮಂತ್ರಿಗಳು ಇಂದು ರಾಜೀವ ಸರಕಾರದಲ್ಲಿ ಮೆರೆಯುತ್ತಿದ್ದಾರೆ. ಸುಪ್ರೀಂಕೋರ್ಟು ವಾಗ್ದಂಡನೆ ಹೇರಿದ ಜಗಮೋಹನ್ ಇನ್ನೂ ರಾಜ್ಯಪಾಲರಾಗಿಯೇ ಇದ್ದಾರೆ. ಅವ್ಯವಹಾರದ ಆರೋಪಗಳು ಸಾಬೀತಾಗಿರುವ ಮಾಜಿಮುಖ್ಯಮಂತ್ರಿ ಅರ್ಜುನಸಿಂಗ್ ರಾಜೀವ ಗಾಂಧಿಯವರ ಪಕ್ಷದ ಉಪಾಧ್ಯಕ್ಷರಾಗಿದ್ದಾರೆ.

ನ್ಯಾಯಾಂಗದ ತೀರ್ಪನ್ನು ತಿರುಚಲು ರಾಜ್ಯಾಂಗವನ್ನೇ ತಿದ್ದಿದ, ಗೃಹ-ಮಂತ್ರಿಗೂ ತಿಳಿಯಪಡಿಸದೆ ತುರ್ತುಸ್ಥಿತಿ ಜಾರಿಗೆ ತಂದು ಮರುದಿನ ಸಂಪುಟ ಸಭೆ ಕರೆದ ಪ್ರಧಾನಮಂತ್ರಿಯ ಪರಂಪರೆಗೆ ಸೇರಿದ ರಾಜೀವ ಗಾಂಧಿ ಇಂದು ಹೆಗಡೆಯವರು ನ್ಯಾಯಾಂಗವನ್ನು ಗೌರವಿಸಬೇಕೆಂಬ ಮಾತನ್ನಾಡುತ್ತಿರುವ ವೈಲಕ್ಷಣವನ್ನು ಕಾಣುತ್ತಿದ್ದೇವೆ. ಕಾಂಗ್ರೆಸ್ ಪಕ್ಷ ನ್ಯಾಯಾಂಗಕ್ಕೆ ಅಗೌರವ ತಂದಿತೆಂದು ಆಕಾಶ-ಭೂಮಿ ಒಂದು ಮಾಡಿದ ರಾಮಕೃಷ್ಣ ಹೆಗಡೆಯವರು ಕೋರ್ಟಿನ ತೀರ್ಪು ತಾಂತ್ರಿಕ ಸ್ವರೂಪದ್ದೆಂದು ಬಾಟ್ಲಿಗೆ ಬಿರಡೆ ಹಾಕಿ ಮೂಲೆಗೆಸೆವ ವಿಚಿತ್ರವೂ ನಡೆಯುತ್ತಿದೆ.

ಅಧಿಕಾರದ ಬಾಯಾರಿಕೆ ಇಂದು ಇವರಿಂದ ಇದೆಲ್ಲವನ್ನೂ ಮಾಡಿಸುತ್ತಿದೆ. ಇಲ್ಲಿ ಕಡಿಮೆ ಕೆಟ್ಟವರು –ಹೆಚ್ಚು ಕೆಟ್ಟವರು ಎಂದು ಆಯ್ಕೆ ಮಾಡುವ ಅವಕಾಶವೇ ಕಾಣಿಸುತ್ತಿಲ್ಲ. ಎಂಟು ಮಂದಿಗೆ ಸರಕಾರದ ಕೃಪಾಕಟಾಕ್ಷ ತೋರಿಸುವುದಕ್ಕಾಗಿ ನಿಯಮಗಳನ್ನು ಮೀರಲಾಯಿತು. ಆಮೇಲೆ ರಿಟ್ ಅರ್ಜಿ ಬಂದ ಮೇಲೆ ನಿಯಮಗಳನ್ನು ಸದ್ದಿಲ್ಲದೆ ಪೂರ್ವಾನ್ವಯವಾಗಿ ತಿದ್ದಲಾಯಿತು ಎಂದು ನ್ಯಾಯಾಂಗವು ಹೇಳಿದಾಗಲೇ ಹೆಗಡೆ ಸರಕಾರದ ಪಾಪದ ಕೊಡ ತುಂಬಿತ್ತು. ಅದನ್ನು ಕವಚಿ ಹಾಕುವ ಪ್ರಯತ್ನವೆಲ್ಲ ಜನರಿಗೆ ಅರ್ಥವಾಗುತ್ತದೆ. ಎಂಟು ಜನರಿಗೆ ಕೃಪೆ ತೋರಿಸುವ ಕೆಲಸವನ್ನು ತಾನು ಮಾಡಿಲ್ಲವಾದರೆ ಬೇರೆ ಯಾರು ಮಾಡಿದರು ಎಂದು ಈ ಸರಕಾರದ ಮುಖ್ಯಮಂತ್ರಿ ಹೇಳಬೇಕು. ನಿಯಮಗಳನ್ನು ಮೀರಿದ್ದು ಯಾಕೆ ಎಂದು ಹೇಳಬೇಕು, ಆಮೇಲೆ ತಿದ್ದಿದ್ದಕ್ಕೆ ಸಬೂಬು ಕೊಡಬೇಕು.

ಆಷಾಢಭೂತಿ ರಾಜಕಾರಣಿಗಳ ಜತೆ ಏಗಬೇಕಾಗಿರುವುದು, ಆಯ್ಕೆ ಮಾಡಲು ಮೂರನೆಯ ಶಕ್ತಿ ಉದಿಸಿ ಬಾರದೆ ಇರುವುದು ಈ ನಾಡಿನ ಜನರ ದುರದೃಷ್ಟವೆನ್ನಬೇಕಾಗಿದೆ. ಈ ನಿರ್ವಾತ ಪರಿಸ್ಥಿತಿ ಹೆಚ್ಚು ಕಾಲ ಇರದು ಎಂಬ ಸತ್ಯವನ್ನು ರಾಜಕಾರಣಿಗಳು ಎಷ್ಟು ಬೇಗ ಅರಿತರೆ ಅಷ್ಟು ಒಳ್ಳೆಯದು.

ಮುಂಗಾರು

ಶನಿವಾರ, ಏಪ್ರಿಲ್ 19, 1986

ಮಾನವಂತಿಕೆಯ ಮಾನದಂಡ ಬೇಕು.

ಶಿವಮೊಗ್ಗ ಜಿಲ್ಲೆಯ ಚಂದ್ರಗುತ್ತಿಯಲ್ಲಿ ರೇಣುಕಾಂಬ ದೇವಿಯ ಭಕ್ತರಿಂದ ನಡೆಯುತ್ತಿರುವ "ಬೆತ್ತಲೆ ಸೇವೆ"ಯನ್ನು ಶಾಸನದ ಮೂಲಕ ನಿಷೇಧಿಸುವ ಆಲೋಚನೆ ಸರಕಾರಕ್ಕಿಲ್ಲವೆಂದು ಕರ್ನಾಟಕದ ಸಮಾಜ ಕಲ್ಯಾಣ ಸಚಿವ ಎ. ಎಲ್. ಪಾಟೀಲರು ಹೇಳಿರುವುದಾಗಿ ವರದಿಯಾಗಿದೆ. "ಬೆತ್ತಲೆ ಸೇವೆ"ಯ ಹರಕೆಯನ್ನು ಅನುಸರಿಸುತ್ತಿರುವ ಜನರಿಗೆ ಅದು "ಬಹಳ ಸೂಕ್ಷ್ಮದ" ವಿಷಯವಾಗಿರುವುದರಿಂದ ಅದನ್ನು ಶಾಸನಬದ್ಧವಾಗಿ ನಿಷೇಧಿಸುವ ಯೋಜನೆ ಸರಕಾರಕ್ಕಿಲ್ಲವೆಂದು ಸಚಿವರು ವಿವರಣೆ ಕೊಟ್ಟಿರುವುದಾಗಿಯೂ ವರದಿಯಾಗಿದೆ.

ಆದರೂ ಈ ಪದ್ಧತಿಯಿಂದ ಭಕ್ತರನ್ನು ದೂರ ವಿಡಲು ಸರಕಾರ ತನ್ನೆಲ್ಲಾ ಯತ್ನಗಳನ್ನು ಚುರುಕುಗೊಳಿಸುವುದಾಗಿ ಸಚಿವ ಪಾಟೀಲರು ಸುದ್ದಿಗಾರರಿಗೆ ತಿಳಿಸಿದ್ದಾರೆ. ಬೆತ್ತಲೆ ಸೇವೆ ಒಂದು ನಾಗರಿಕ ಸಮಾಜಕ್ಕೆ ಕಳಂಕಪ್ರಾಯವಾದ ಸಂಪ್ರದಾಯವೆಂಬುದು ಮಾನ್ಯ ಸಚಿವರ ಮನಸ್ಸಿನ ಒಂದು ಮೂಲೆಗೆ ಮುಟ್ಟಿರಬಹುದು. ಆದರೂ ಮನಸ್ಸಿಗೆ ಮುಟ್ಟಿದ ಈ ಕೊಳೆಯನ್ನು ತೊಳೆದುಕೊಳ್ಳುವ ಆತ್ಮಬಲ ಇವರಿಗಿಲ್ಲದಿರಲೂಬಹುದು. ಅದು ಬೇರೆ ಮಾತು.

ಇದು ಸಚಿವರಾದವರ ಮರ್ಜಿಗೆ ಬಿಟ್ಟ ವಿಚಾರವಲ್ಲ. ಇದು ಸಾರ್ವಜನಿಕ ಸ್ವಾಸ್ಥ್ಯದ ಪ್ರಶ್ನೆ. ಸಾಮಾಜಿಕ ದುರ್ಬಲರನ್ನು ಮೂಢನಂಬಿಕೆಗಳು ಮತ್ತು ಧಾರ್ಮಿಕ ಕಂದಾಚಾರಗಳ ಕೊಚ್ಚೆಯಲ್ಲಿ ಕೆಡವಿ ಅವರು ಸ್ವಾಭಿಮಾನಿ ಮಾನವರಾಗಿ ಬದುಕದಂತೆ ಮಾಡಿರುವ ನೀಚ ಸಂಪ್ರದಾಯಗಳನ್ನು ತೊಡೆದು ಹಾಕುವ ಪ್ರಶ್ನೆ. ಹರಕೆ ಅಥವಾ ನಂಬಿಕೆಯ ಹೆಸರಲ್ಲಿ ಹೆಂಗಸರನ್ನು ಬೆತ್ತಲೆಯಾಗಿ ಮೆರವಣಿಗೆ ಮಾಡಿಸಿ ಅವರ ಮಾನವನ್ನು ಬೀದಿಗೆಸೆವ ಸಾಮಾಜಿಕ ಅನಿಷ್ಟದ ವಿಚಾರ ಇಲ್ಲಿದೆ. ಸಭ್ಯ ನಾಗರಿಕರೆಲ್ಲಾ ಒಕ್ಕೊರಲಿನಿಂದ ಹೀಗಳೆದಿರುವ ಮಾನಗೇಡಿ ಸಂಪ್ರದಾಯವೆಂಬುದನ್ನು ಸಚಿವ ಪಾಟೀಲರು ಅಲ್ಲಗಳೆಯಲಾರರು.

ಮಾನವತೆಯನ್ನು ಜೀವಂತವಾಗಿ ಹೂದನ ಮಾಡುತ್ತಲೇ ಬಂದಿರುವ ನೀಚ ಸಂಪ್ರದಾಯಗಳು, ಮೂಢನಂಬಿಕೆಗಳು ಭಾರತೀಯ ಸಮಾಜದಲ್ಲಿ ಹಲವಾರು ಇವೆ. ದುರ್ಗಿಯನ್ನು ಒಲಿಸಿಕೊಳ್ಳಲು ಮಕ್ಕಳ ಕತ್ತು ಕತ್ತರಿಸಿ ರಕ್ತದ ಓಕುಳಿಯಾಡುವ ಸಂಪ್ರದಾಯ ಹಿಂದೂ ಸಮಾಜದಲ್ಲಿದೆ. ಸತ್ತ ಗಂಡನನ್ನು ಸ್ವರ್ಗಕ್ಕೆ ಕಳುಹಿಸಲು ಮುಗ್ಧ ಹೆಣ್ಣು ಮಕ್ಕಳ ಸಜೀವ ದಹನ ಮಾಡುವ ಪಾಶವೀಕೃತ್ಯವೂ ಈ ದೇಶದ ಒಂದು ಜನವರ್ಗದಲ್ಲಿ ವ್ಯಾಪಕವಾಗಿ ಆಚರಣೆಯಲ್ಲಿತ್ತು. ಇಂತಹ ಪಶುಪ್ರವೃತ್ತಿಗೆ "ಸತಿಸಹಗಮನ"ವೆಂಬ ಹೆಸರಿನ ಧಾರ್ಮಿಕ ಲೇಪಹಚ್ಚಿ ಅದನ್ನೊಂದು ನಂಬಿಕೆಯಾಗಿ ಉಳಿಸಿಕೊಳ್ಳಲಾಗಿತ್ತು. ಇಂತಹ ಹೀನ ಕೃತ್ಯಗಳ ನಂಬಿಕೆಗೆ ನೇತುಬಿದ್ದ ಜನರ ಅಭಿಪ್ರಾಯ ಕೇಳಿ ಬ್ರಿಟಿಷರು ಸತಿ ಸಹಗಮನವನ್ನು ಶಾಸನಬದ್ಧವಾಗಿ ನಿಷೇಧಿಸಿದ್ದಲ್ಲ.

ಸಾಮಾಜಿಕ ಸುಧಾರಣೆಯ ಯಾವುದೇ ಶಾಸನಕ್ಕಾದರೂ ಸಾಮಾಜಿಕ ಸಭ್ಯತೆಯ, ಮಾನವಂತಿಕೆಯ ಅಥವಾ ಮಾನವತೆಯ ಒರೆಗಲ್ಲಿರಬೇಕು. ಸತಿ ಸಹಗಮನ ಅಮಾನುಷ ಸಂಪ್ರದಾಯವೆಂಬುದಕ್ಕಾಗಿಯೇ ಅದನ್ನು ನಿಷೇಧಿಸಲಾಯಿತು. ದುರ್ಗೆಗೆ ಮಕ್ಕಳ ಬಲಿಕೊಡುವ ಪಾಶವೀಕೃತ್ಯ ನಿಷಿದ್ಧವಾದುದೂ ಇದೇ ನೆಲೆಯಲ್ಲಿ. ಇಂತಹ ಸಾಮಾಜಿಕ ಸುಧಾರಣೆಯ ಕೆಲಸವನ್ನು ಬ್ರಿಟಿಷರಂತಹ ಪರಕೀಯ ಪ್ರಭುಗಳು ಮಾಡಿದ್ದರು.

ಭಾರತೀಯ ಸಮಾಜದ ದುರ್ವಿಧಿಯೆಂದರೆ ಸ್ವಾತಂತ್ರ್ಯ ನಂತರ ಈ ದೇಶವನ್ನಾಳಿದ ಪ್ರಜಾ ಪ್ರಭುಗಳು, ಸಾಮಾಜಿಕ ಅನಿಷ್ಟಗಳು, ಮೂಢ ನಂಬಿಕೆಗಳು ಮತ್ತು ಧಾರ್ಮಿಕ ಕಂದಾಚಾರಗಳ ಕೊಚ್ಚೆಯಿಂದ ಜನರನ್ನು ಮೇಲೆತ್ತುವ ಕೆಲಸಕ್ಕೆ ಕೈ ಹಾಕದಿರುವುದು. ಪ್ರಜಾಸಮೂಹ ಮೂಢ ನಂಬಿಕೆಗಳ ಕವಚದಲ್ಲಿರುವಷ್ಟು ಕಾಲ ರಾಜಕಾರಣಿಗಳಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಅನುಕೂಲವಾಗುತ್ತಿರುವುದೇ ಇದಕ್ಕೆ ಕಾರಣವಿರಬಹುದು. ಜನರ ಮೌಢ್ಯ ನಿವಾರಣೆಯಾದರೆ ಈ ರಾಜಕೀಯ ಪ್ರಭುಗಳಿಗೆ ದಿನಕ್ಕೊಂದು ವಂಚನೆಯ ಜಾಲ ಹೆಣೆದು ಹಗಲು ಹಾರಿಸಿಕೊಂಡು ತಿರುಗಲು ಸಾಧ್ಯವಾಗುತ್ತಿರಲಿಲ್ಲ. ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳಾದರೂ ಶೇಕಡಾ 65ರಷ್ಟು ಪ್ರಜಾ ಸಮೂಹವನ್ನು ಅನಕ್ಷರಸ್ಥರನ್ನಾಗಿಸಿಕೊಂಡು ಗಣಕ ಯಂತ್ರದ 21ನೇ ಶತಮಾನಕ್ಕೆ ಜಿಗಿಯುವ ಮಾತನಾಡಲಿಕ್ಕೆ ಸಾಧ್ಯವಾಗುತ್ತಿರಲಿಲ್ಲ. ಒಂದೆಡೆಯಲ್ಲಿ ಬಡ ಮಹಿಳೆಯರ ಮಾನಮುಚ್ಚಿಕೊಳ್ಳಲು ಸೀರೆ ಕೊಟ್ಟು ಇನ್ನೊಂದೆಡೆಯಲ್ಲಿ ಧಾರ್ಮಿಕ ನಂಬಿಕೆಯ ನೆಪದಲ್ಲಿ ಅವರು ಸೀರೆ ಬಿಚ್ಚಿ ಬೆತ್ತಲೆ ಮೆರವಣಿಗೆ ಮಾಡುವುದನ್ನು ನಿಂತು ನೋಡುವುದಕ್ಕಾಗುತ್ತಿರಲಿಲ್ಲ.

ಎ.ಎಲ್. ಪಾಟೀಲರು ಸಮಾಜ ಕಲ್ಯಾಣಸಚಿವರು. ಸಮಾಜದ ಸುಧಾರಣೆಯ ಹೊಣೆ ಅವರ ಮೇಲಿದೆ. ಸಾಮಾಜಿಕ ಸುಧಾರಣೆಯ ಸರಿಯಾದ ಪರಿಕಲ್ಪನೆ ಇವರಿಗೆ ಇರಲಾರದು. ಇಂತಹ ಸಾಮಾಜಿಕ ಧ್ಯೇಯೋದ್ದೇಶಗಳನ್ನು ತಲೆಗೆ ತುರುಕಿಸಿಕೊಂಡು ತಮ್ಮ ಜೀವನದ ಸುಖಾನುಭವಕ್ಕೆ ತೊಂದರೆ ಮಾಡಿಕೊಂಡವರು ಇವರಲ್ಲ. ಸಾಮಾಜಿಕ ಅನಿಷ್ಟಗಳೇನೆಂಬುದರ ಅರಿವೂ ಯಜಮಾನ ಸಂಸ್ಕೃತಿಯ ಈ ಮನುಷ್ಯನಿಗೆ ಇರಲಾರದು, ಅದಕ್ಕಾಗಿಯೇ ಅವರೀಗ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ "ಸಮಾಜ ಕಲ್ಯಾಣ" ಸಚಿವರಾಗುವ ಅರ್ಹತೆ ಗಳಿಸಿರಬೇಕು.

ಮೌಲ್ಯಾಧಾರದ ಮಾತಿನ ಜಾಲದಲ್ಲಿ ಮೌಢ್ಯವನ್ನು ಬೆಳೆಸಿಕೊಂಡು ಹೋಗುತ್ತಿರುವ ನಮ್ಮ ಪ್ರಜಾ ಪ್ರಭುಗಳ ಮೋಸದ ಮುಂದುವರಿಕೆಗೆ ಸಚಿವ ಪಾಟೀಲರ ಮಾತು ಒಂದು ಸಾಮಾನ್ಯ ನಿದರ್ಶನ. ಆದರೆ ಸಮಾಜದಲ್ಲೀಗ ಸ್ಫುಟಿಸುತ್ತಿರುವ ಪರಿವರ್ತನೆಯ ಬಯಕೆ ಹಾಗೂ ಮಾನವೀಯ ಕಳಕಳಿ ಸಚಿವ ಪಾಟೀಲರು ಪ್ರತಿನಿಧಿಸುತ್ತಿರುವ ಸರಕಾರಿ ವ್ಯವಸ್ಥೆಯನ್ನು ಸ್ಫೋಟಗೊಳಿಸುವ ಕಾಲ ಸನ್ನಿಹಿತವಾಗುತ್ತಿದೆಯೆಂಬುದನ್ನು ಅವರು ಮರೆಯದಿರಲಿ.

ಮುಂಗಾರು

ಭಾನುವಾರ, ಏಪ್ರಿಲ್ 20, 1986

ಕಟ್ಟೆಗೆಗೂ ಕೀಳಾದ ಕಬ್ಬು

ರಾಜ್ಯದಲ್ಲಿ ಶೇಕಡಾ 8.5 ಇಳುವರಿ ಕೊಡುವ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳು ಟನ್ನಿಗೆ 195 ರೂಪಾಯಿ ಬೆಲೆ ಕೊಡಬೇಕೆಂದು ರಾಜ್ಯ ಸರಕಾರ ಶಿಫಾರಸು ಮಾಡಿದೆ. ಶೇಕಡಾ 10.5 ಇಳುವರಿಯ ಕಬ್ಬಿಗೆ ಟನ್ನಿಗೆ 250ರೂ. ಸಿಂದ 260ರೂ. ತನಕ ಬೆಲೆ ಕೊಡಬೇಕೆಂದೂ ತೀರ್ಮಾನಿಸಲಾಗಿದೆ.

ಕಬ್ಬಿಗೆ ಸಕ್ಕರೆ ಕಾರ್ಖಾನೆಯವರು ಕೊಡುವ ಬೆಲೆ ಸಾಲದು ಎಂದು ರೈತರು ಬಹುಕಾಲದಿಂದ ಬೇಡಿಕೆ ಸಲ್ಲಿಸುತ್ತ ಬಂದಿದ್ದಾರೆ. ಇದನ್ನು ಈ ತನಕ ಯಾರೂ ಕಿವಿಯ ಮೇಲೆ ಹಾಕಿಕೊಂಡಿಲ್ಲ. ಬೆಳೆಗಾರರ ಹಿತಕ್ಕಿಂತಲೂ ಸಕ್ಕರೆ ಕಾರ್ಖಾನೆ ಮಾಲೀಕರ ಮಾತೇ ಈ ಬೆಲೆ ತೀರ್ಮಾನಿಸುವವರಿಗೆ ವೇದವಾಕ್ಯವಾಗಿದೆ.

ತಮ್ಮ ಉತ್ಪಾದನಾ ವೆಚ್ಚ ಏರಿದೆಯೆಂದು ಕಾರ್ಖಾನೆ ಮಾಲೀಕರು ಹೇಳುತ್ತಾರೆ. ತಮ್ಮ ವಾದದ ಸಮರ್ಥನೆಗಾಗಿ ಅವರು ಉದ್ದವಾದ ಪಟ್ಟಿ ತಯಾರಿಸುತ್ತಾರೆ. ಬಂಡವಾಳ ವೆಚ್ಚ, ಕಾರ್ಮಿಕರ ಸಂಬಳ ಸಾರಿಗೆ. ಇಂಧನ ವೆಚ್ಚ, ಸಾರಿಗೆ ವೆಚ್ಚ ಇದೆಲ್ಲವನ್ನೂ ಪಟ್ಟಿ ಮಾಡುತ್ತಾರೆ. ಸಕ್ಕರೆ ಕೆಟ್ಟು. ಹೋದದ್ದು, ಯಾವುದೋ ಹಂತದಲ್ಲಿ ಎಲ್ಲಿಗೋ ಸೋರಿ ಹೋದದ್ದು ಇದೆಲ್ಲವೂ ಈ ಬಾಬತ್ತಿಗೆ ಸೇರಿ ಹೋಗಿ ಕಾರ್ಖಾನೆಯವರಿಗೆ "ಚಿಕ್ಕಾಸೂ ಲಾಭ" ವಿಲ್ಲವೆಂಬ ನಷ್ಟದ ನಾಟಕ ಕಟ್ಟಲು ನೆರವಾಗುತ್ತದೆ.

ಇಂದು ಸಕ್ಕರೆ ಕಾರ್ಖಾನೆಗಳವರು ಸುಸ್ಥಿತಿಯಲ್ಲಿದ್ದಾರೆ. ಸುಮಾರು ಒಂದು ದಶಕದ ಹಿಂದೆ ಇದ್ದಂತಹ ಅಭದ್ರ ಪರಿಸ್ಥಿತಿಯೇನೂ ಅವರಿಗಿಲ್ಲ. ಅಂದು ಸಕ್ಕರೆ ಉತ್ಪಾದನೆ ತೀವ್ರವಾಗಿ ಏರಿ, ಅದಕ್ಕೆ ಅನುಗುಣವಾಗಿ ದೇಶೀಯ ಬಳಕೆ ಪ್ರಮಾಣ ಏರದೆ ಇದ್ದಾಗ ಬೆಲೆ ಕುಸಿದಿತ್ತು. ಗೋದಾಮುಗಳಲ್ಲಿ ಸಕ್ಕರೆ ಮೂಟೆಗಳು ತುಂಬಿ ಆತಂಕ ಪರಿಸ್ಥಿತಿ ಉಂಟಾಗಿತ್ತು.

ಇಂದು ಪರಿಸ್ಥಿತಿ ಬದಲಾಗಿದೆ. ಮುಕ್ತ ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆ ಕೆ.ಜಿ.ಗೆ ಆರು ರೂಪಾಯಿಯಿಂದ ಏಳು ರೂಪಾಯಿ ತನಕವಿದೆ. ಲೆವಿ ಮಾರುಕಟ್ಟೆಯಲ್ಲಿಯೂ ಬೆಲೆ ಕೆ.ಜಿ.ಗೆ ಸುಮಾರು ಮೂರೂವರೆ ರೂಪಾಯಿ ಉಂಟು. ಅಂದರೆ ಸರಾಸರಿ ಐದು ರೂಪಾಯಿಗೂ ಹೆಚ್ಚಾಯಿತು. ಈ ಲೆಕ್ಕದಲ್ಲಿ ಕಾರ್ಖಾನೆಯವರಿಗೆ ಟನ್ನಿಗೆ ಸುಮಾರು ಐದು ಸಾವಿರ ರೂಪಾಯಿ ದೊರೆತಂತಾಯಿತು. ಇದರಲ್ಲಿ ಸಕ್ಕರೆಯ ಕಚ್ಚಾ ಸಾಮಗ್ರಿಯಾದ ಕಬ್ಬಿಗೆ ಅವರು ಬೆಳೆಗಾರರಿಗೆ ಕೊಡುವುದು ಟನ್ನಿಗೆ 195 ರೂಪಾಯಿ ಮಾತ್ರ. ಇಂದು ಕಾಡಿನಲ್ಲಿ ಯಾರೂ ವ್ಯವಸಾಯ ಮಾಡದೆ ಬೆಳೆಯುವ ಕಟ್ಟಿಗೆಗೆ ಟನ್ನಿಗೆ ನಾನ್ನೂರು ರೂಪಾಯಿಗಳಿಂದ ಐನೂರು ರೂಪಾಯಿ ತನಕ ಬೆಲೆ ಇದೆ. ರೈತರು ಬೆವರಿಳಿಸಿ, ನೀರುಣಿಸಿ, ಹಣಕೊಟ್ಟು ಕೊಂಡ ಗೊಬ್ಬರ ಹಾಕಿ, ಕೊನೆಗೆ ಗಾಡಿಗಳಲ್ಲಿ ಕಾರ್ಖಾನೆಯ ಬಾಗಿಲಿಗೆ ಸಾಗಿಸಿದರೂ ಸಿಗುವ ಬೆಲೆ ಟನ್ನಿಗೆ ಜುಜುಬಿ 195 ರೂಪಾಯಿ.

ಇದು ಮೂರು ಕಾಸಿನ ಬೆಲೆ. ಸರಕಾರ ಅಕ್ಕಿ, ಬತ್ತ, ಕಬ್ಬು, ಗೋಧಿಯಂತಹ ಎಲ್ಲಾ ಕೃಷ್ಯುತ್ಪನ್ನಗಳಿಗೂ ಇಂತಹ ಧೋರಣೆಯನ್ನೇ ವಹಿಸಿಕೊಂಡು ಬಂದಿದೆ. ಕೈಗಾರಿಕಾ ಸಾಮಗ್ರಿಗಳಿಗೆ ಬೆಲೆ ನಿಗದಿ ಮಾಡುವುದಕ್ಕೆ ಸರಕಾರ ವೈಜ್ಞಾನಿಕ ವಿಧಾನವನ್ನು ಅನುಸರಿಸುತ್ತಿದೆ. ಅದಕ್ಕಾಗಿ ಉದ್ಯಮದ ಪ್ರತಿನಿಧಿಗಳೇ ಇರುವ ಸಮಿತಿಯಿದೆ. ಕೃಷ್ಯುತ್ಪನ್ನ ಬೆಲೆ ಆಯೋಗವೆಂಬಂತಹ ಸಂಸ್ಥೆಯೊಂದಿದೆ. ಅದರಲ್ಲಿ ರೈತರ ಪ್ರತಿನಿಧಿಗಳಿಲ್ಲ. ಅವರ ಸಂಸ್ಥೆಗಳಿಗೂ ಪ್ರಾತಿನಿಧ್ಯವಿಲ್ಲ. ಯಾರೋ ಸರಕಾರಿ ಅಧಿಕಾರಿಗಳು ಎಲ್ಲವನ್ನೂ ತೀರ್ಮಾನಿಸುತ್ತಾರೆ.

ರಾಸಾಯನಿಕ ಗೊಬ್ಬರಗಳ ಬೆಲೆ ಹತ್ತು ವರ್ಷಗಳಲ್ಲಿ ಮೂರು ಪಟ್ಟು ಏರಿದೆ. ವ್ಯವಸಾಯಕ್ಕೆ ಬೇಕಾಗುವ ಇತರೆಲ್ಲಾ ಸಾಮಗ್ರಿಗಳ ಬೆಲೆಯೂ ಕೂಲಿಯೂ ಏರಿದೆ. ವಿದ್ಯುತ್ ತುಟ್ಟಿಯಾಗಿದೆ. ಕೃಷಿಯ ಹತ್ಯಾರುಗಳ ಬೆಲೆ ಹೆಚ್ಚಿದೆ. ಸಾಗಣೆಯ ಖರ್ಚು ದುಬಾರಿಯಾಗಿದೆ. ಹೀಗಿದ್ದರೂ ಕಬ್ಬು ಕಟ್ಟಿಗೆಗಿಂತ ಅಗ್ಗವಾಗಿದೆ. ಕಬ್ಬಿಗೆ ಟನ್ನಿಗೆ 250 ರೂಪಾಯಿ ಬೆಲೆ ಸಿಗಬೇಕು ಎಂಬುದು ಏಳೆಂಟು ವರ್ಷಗಳ ಹಿಂದೆ ರೈತರ ಬೇಡಿಕೆಯಾಗಿತ್ತು. ಇಂದು ಅಷ್ಟು ಸಿಕ್ಕಿದರೆ ಸಾಲದು. ಕನಿಷ್ಠ ಸೌದೆಗೆ ಸಿಗುವ ಬೆಲೆಯಾದರೂ ಕಬ್ಬಿಗೆ ಸಿಗಬೇಕು.

ಮುಂಗಾರು

ಮಂಗಳವಾರ, ಏಪ್ರಿಲ್ 22, 1986

ಪ್ರಾಥಮಿಕ ಶಿಕ್ಷಣ ಕೊಡಿ

ಪಿ. ಯು. ಸಿ. ಶಿಕ್ಷಕರು ಬೇಡಿಕೆಗಳನ್ನು ಮಂಡಿಸಿದ್ದಾರೆ. ಪದವಿಪೂರ್ವ ಶಿಕ್ಷಣ ಮಂಡಳಿಗೆ ಸ್ವಾಯತ್ತತೆ ಕೊಡಬೇಕು ಎಂಬುದು ಅವುಗಳಲ್ಲಿ ಪ್ರಧಾನವಾದದ್ದು. ಇದನ್ನು ಅಂಗೀಕರಿಸಿದ್ದರೆ ಜೂನಿಯರ್ ಕಾಲೇಜುಗಳಿಗೆ ಪ್ರತ್ಯೇಕ ಅಸ್ತಿತ್ವ ಬರುತ್ತದೆ. ಅವುಗಳನ್ನೆಲ್ಲ ಪದವಿ ಕಾಲೇಜುಗಳಿಂದಲೂ ಹೈಸ್ಕೂಲುಗಳಿಂದಲೂ ಪ್ರತ್ಯೇಕಿಸಬೇಕಾಗುತ್ತದೆ. ಹೆಚ್ಚು ಶಿಕ್ಷಕರನ್ನು ನೇಮಿಸಬೇಕಾಗುತ್ತದೆ. ಇದೆಲ್ಲ ವೆಚ್ಚದ ಬಾಬುಗಳು. ಇದಕ್ಕೆ ಒಮ್ಮೆಗೆ 80 ಕೋಟಿ ರೂಪಾಯಿಗಳೂ ಆಮೇಲೆ ಪ್ರತಿವರ್ಷ 16 ಕೋಟಿ ರೂಪಾಯಿಗಳೂ ಹೆಚ್ಚಿನ ವೆಚ್ಚ ಬರುತ್ತದೆ ಎಂದು ವಿದ್ಯಾ ಸಚಿವ ಎಂ. ರಘುಪತಿ ಹೇಳುತ್ತಾರೆ. ಈಗ ವಿದ್ಯಾ ಇಲಾಖೆ ಖರ್ಚು ಮಾಡುವ ಹಣದಲ್ಲಿ ಶೇಕಡಾ 90 ರಷ್ಟು ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳ ಸಂಬಳ ಸಾರಿಗೆಗೇ ಖರ್ಚಾಗಿ ವಿದ್ಯಾರ್ಥಿಗಳಿಗೆ ಅನುಕೂಲತೆಗಳನ್ನು ಒದಗಿಸಲು ವೆಚ್ಚಕ್ಕೆ ಹಣ ಒದಗುತ್ತಿಲ್ಲ ಎಂದು ರಘುಪತಿಯವರು ಹೇಳುತ್ತಾರೆ. ವೆಚ್ಚದ ಕಾರಣಕ್ಕಾಗಿ ಅವರು ಪದವಿಪೂರ್ವ ಶಿಕ್ಷಕ ಮಂಡಳಿಗೆ ಸ್ವಾಯತ್ತತೆ ಕೊಡುವ ಸಾಧ್ಯತೆಯನ್ನು ತಳ್ಳಿ ಹಾಕಿದ್ದಾರೆ. ಮಂಡಳಿಗೆ ಶೈಕ್ಷಣಿಕ ಸ್ವಾಯತ್ತತೆಯನ್ನು ಕೊಡುವ ಬಗ್ಗೆ ಮಾತುಕತೆ ನಡೆಸಲು ಅವರು ಸಿದ್ಧರಿದ್ದಾರೆ. ಪಿ.ಯು.ಸಿ. ಶಿಕ್ಷಕರ ಇತರ ಬೇಡಿಕೆಗಳ ಬಗ್ಗೆಯೂ ಸಹಾನುಭೂತಿಯಿಂದ ಪರಿಶೀಲಿಸುವ ಭರವಸೆ ಅವರಿಂದ ಬಂದಿದೆ.

ಪಿ. ಯು. ಸಿ. ಮಂಡಳಿಗೆ ಸ್ವಾಯತ್ತತೆ ಬೇಕು ಎಂಬ ಬೇಡಿಕೆ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ಸಂಬಳ ಸಾರಿಗೆ ಹಾಗೂ ಇತರ ಸೇವಾ ಸೌಕರ್ಯಗಳನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಬಂದಿರುವಂತೆ ಕಾಣಿಸುತ್ತದೆ. ಶಿಕ್ಷಕ ಸಮುದಾಯಕ್ಕೆ ಸೂಕ್ತವಾದ ಸಂಬಳ ಸಾರಿಗೆಯನ್ನೂ ಇತರ ಸೌಲಭ್ಯಗಳನ್ನೂ ಒದಗಿಸಬೇಕೆಂಬ ಬೇಡಿಕೆಗೆ ಬೆಂಬಲ ಕೊಡಬೇಕಾದ್ದು ಅಗತ್ಯವಾದರೂ ಇವಕ್ಕಾಗಿ 80 ಕೋಟಿ ರೂಪಾಯಿ ಖರ್ಚು ಮಾಡಬೇಕಾಗಿದೆ ಎಂಬ ಸಚಿವರ ಮಾತಿನಲ್ಲಿ ತಥ್ಯವಿದ್ದರೆ ಅಷ್ಟು ಖರ್ಚು ಮಾಡಿ ಮಂಡಳಿಗೆ ಸ್ವಾಯತ್ತತೆ ಕೊಡಬೇಕಾದ ಅಗತ್ಯವೇನೂ ಈಗ ಇಲ್ಲ.

ಈ ಸ್ವಾಯತ್ತತೆ ಅಂದರೆ ಏನು? ಅದರಿಂದ ಪಿ. ಯು. ಸಿ. ಶಿಕ್ಷಣದ ಉದ್ಧಾರ ಹೇಗಾಗುತ್ತದೆ? ಈಗ ವಿಶ್ವವಿದ್ಯಾನಿಲಯಗಳಿಗೆ ಸ್ವಾಯತ್ತತೆ ಇಲ್ಲವೇ? ಇದ್ದರೂ ಅವುಗಳು ಸರಕಾರದ ಶಿಕ್ಷಣ ಇಲಾಖೆಯ ಬಾಲದಂತೆ ಕೆಲಸ ಮಾಡುತ್ತಿಲ್ಲವೇ? ನಮ್ಮ ಈ ವ್ಯವಸ್ಥೆಯಲ್ಲಿ ಇನ್ನೆಷ್ಟು ಸಂಸ್ಥೆಗಳು ನಾಮಕೇವಾಸ್ತೆ ಸ್ವಾಯತ್ತತೆ ಹೊಂದಿ ಸರಕಾರದ ಬಾಲಂಗೋಚಿಗಳಾಗಿಲ್ಲ.

ಸ್ವಾಯತ್ತತೆ ಎಂಬುದು ಕಾನೂನು ಮಾಡಿದ ಮಾತ್ರದಿಂದ ಬರುವುದಿಲ್ಲ. ಅದನ್ನು ಅರ್ಥಪೂರ್ಣವಾಗಿ ಅನುಷ್ಠಾನಿಸುವುದಕ್ಕೆ ಸಮರ್ಥರಾದವರು ಬೇಕು. ಅಂಥ ಬುದ್ಧಿ ಶಕ್ತಿಯುಳ್ಳವರು, ಶೈಕ್ಷಣಿಕ ರಂಗದ ಉನ್ನತಿಯ ಬಗ್ಗೆ ಖಚಿತ ಕಲ್ಪನೆಯುಳ್ಳವರು, ಸ್ವಾರ್ಥಿ ರಾಜಕಾರಣಿಗಳ ಒತ್ತಡಗಳನ್ನೂ ಸೆಳೆತಗಳನ್ನೂ ತಡೆದು ನಿಂತು ವ್ಯವಹರಿಸಬಲ್ಲ ಆತ್ಮಬಲವುಳ್ಳವರು ಇಂಥ ಸಂಸ್ಥೆಗಳ ಮುಖ್ಯಸ್ಥರಾದರೆ ಸ್ವಾಯತ್ತತೆಗೇನಾದರೂ ತಿರುಳು ಬರುವುದು ಸಾಧ್ಯ. ಅದು ಸಾಧ್ಯವಾಗದೆ ಹೆಸರಿಗೊಂದು ಸ್ವಾಯತ್ತತೆ ಬಂದರೆ ಸಿಬ್ಬಂದಿಗಳಿಗೇನೋ ಅನುಕೂಲವಾದೀತಷ್ಟೆ ಹೊರತು ವಿದ್ಯೆ ಅರಸಿ ಬರುವ ಮಕ್ಕಳಿಗೇನೂ ಲಾಭವಾಗದು.

ಉನ್ನತ ಶಿಕ್ಷಣದ ಮಂಡಳಿಗಳಿಗೆ ಸ್ವಾಯತ್ತತೆಯನ್ನೋ ಅಧಿಕಾರವನ್ನೋ ಕೊಡುವ, ಉನ್ನತ ಶಿಕ್ಷಣವನ್ನು ವಿಸ್ತರಿಸುವ ಈ ಆಲೋಚನೆಗಳನ್ನೆಲ್ಲ ಸದ್ಯ ಸರಕಾರ ಬದಿಗಿಡಬೇಕು. ಇಂದು ನಮ್ಮಲ್ಲಿ ಕಲಿಸಲಾಗುತ್ತಿರುವ ಉನ್ನತ ಶಿಕ್ಷಣದಿಂದ ನಿರುದ್ಯೋಗಿ ತರುಣ-ತರುಣಿಯರ ಸೈನ್ಯ ತಯಾರಾಗುತ್ತಿದೆಯೇ ಹೊರತು ಅವರಿಗಾಗಲಿ ಸಮಾಜಕ್ಕಾಗಲಿ ಯಾವ ಪ್ರಯೋಜನವೂ ಆಗುತ್ತಿಲ್ಲ.

ಸರಕಾರ ಮೊದಲು ಮಾಡಬೇಕಾದ್ದು ಈ ನಾಡಿನ ಎಲ್ಲ ಮಕ್ಕಳಿಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಕೊಡುವಂತಹದ್ದು. ಅದನ್ನು ಎರಡೋ ಮೂರೋ ವರ್ಷಗಳಲ್ಲಿಯೇ ಅದು ಸಾಧಿಸಬೇಕು. ಈ ರಾಜ್ಯದ ಒಂದೇ ಒಂದು ಮಗುವೂ ಶಾಲೆಗೆ ಹೋಗದೆ ದನ ಮೇಯಿಸುತ್ತಲೋ ಸೆಗಣಿ ಹೆಕ್ಕುತ್ತಲೋ ತಿರುಗಾಡದಂತಹ ಪರಿಸ್ಥಿತಿಯನ್ನು ಉಂಟು ಮಾಡಬೇಕು. ಅದಕ್ಕಾಗಿ ಎಷ್ಟು ಬೇಕೋ ಅಷ್ಟು ಸಂಪನ್ಮೂಲವನ್ನು ಶಿಕ್ಷಣದಲ್ಲಿ ತೊಡಗಿಸಬೇಕು. ಇಷ್ಟನ್ನು ಈ ಸರಕಾರ ಮಾಡಿದರೆ ಅದೊಂದು ದೊಡ್ಡ ಸಾಧನೆಯಾಗುತ್ತದೆ. ಈ ಸಮಾಜದ ಮುಖವನ್ನೇ ಬದಲಾಯಿಸುವಂತಹ ದೊಡ್ಡ ಕ್ರಾಂತಿಗೆ ಚಾಲನೆ ದೊರೆಯುತ್ತದೆ.

ಹೊರತು ಪಿ. ಯು. ಸಿ. ಮಂಡಳಿಗೆ ಸ್ವಾಯತ್ತತೆ ಉಂಟೇ, ವಿಶ್ವವಿದ್ಯಾನಿಲಯಗಳಲ್ಲಿ ಏನು ನಡೆಯುತ್ತಿದೆ ಎಂಬುದೆಲ್ಲ ಸಮಾಜವನ್ನು ಅಷ್ಟಾಗಿ ಬಾಧಿಸುವ ವಿಚಾರಗಳಲ್ಲ. ಸರಕಾರ ಈ ಸ್ವಾಯತ್ತತೆ ಕೊಡುವ ಅಥವ ಬಿಡುವ ವಿಚಾರ ಮಾಡುವ ಬದಲು ಪ್ರೌಢಶಾಲಾ ಶಿಕ್ಷಣವನ್ನು ವೃತ್ತಿಪರಗೊಳಿಸುವ ಬಗ್ಗೆ ಯಾದರೂ ಆಲೋಚಿಸಲಿ.

ಮುಂಗಾರು

ಬುಧವಾರ, ಎಪ್ರಿಲ್ 23, 1986

ಬಿಗಿಗೊಂಡ ಕಾವಲು

ರಾಜ್ಯದಲ್ಲಿ 6000 ಸಹಕಾರ ಸಂಘಗಳನ್ನು ಮುಚ್ಚಲು ತೀರ್ಮಾನಿಸಲಾಗಿರುವುದನ್ನು ರಾಜ್ಯ ಸಹಕಾರ ಸಚಿವ ಆರ್. ಎಲ್. ಜಾಲಪ್ಪನವರು ಪ್ರಕಟಿಸಿದ್ದಾರೆ. ಈ ಪೈಕಿ 3400 ಸಹಕಾರ ಸಂಘಗಳನ್ನು ಈಗಾಗಲೇ ಮುಚ್ಚಲಾಗಿದ್ದು ಇನ್ನುಳಿದ 2600 ಸಂಘಗಳನ್ನು ಮುಚ್ಚಲು ಕ್ರಮ ತೆಗೆದುಕೊಳ್ಳಲಾಗುತ್ತಿದೆಯೆಂದು ಅವರು ಹೇಳಿದ್ದಾರೆ.

ಸಹಕಾರ ಸಂಘಗಳಲ್ಲಿ ನಡೆಯುತ್ತಿರುವ ಅಕ್ರಮಗಳ ನಿವಾರಣೆಗೆ ಹಾಗೂ ಈ ಮೂಲಕ ಸರಕಾರದ ಹಣವೂ ಸೋರಿ ಹೋಗುತ್ತಿರುವುದನ್ನು ತಡೆಯಲು ಮೇಲಿನದ್ದು ಸರಕಾರ ನಡೆಸುತ್ತಿರುವ ಒಂದು ಕ್ರಮವಾದರೆ ಸಹಕಾರ ಸಂಘಗಳಲ್ಲಿ ಹಣದ ಅಕ್ರಮ ನಡೆಸುವವರ ವಿರುದ್ಧ ಕ್ರಿಮಿನಲ್ ಕೇಸು ಹಾಕುವ ಅಧಿಕಾರವನ್ನು ಡಿ.ಸಿ.ಸಿ. ಬ್ಯಾಂಕುಗಳ ಅಧ್ಯಕ್ಷರಿಗೆ ನೀಡಲು ನಿರ್ಧರಿಸಿರುವುದು ಇನ್ನೊಂದು ಮಹತ್ವದ ಕ್ರಮವಾಗಿದೆ.

ಸಹಕಾರ ಚಳುವಳಿ ಸಮರ್ಥವಾಗಿ ನಡೆದರೆ, ಪ್ರಾಮಾಣಿಕರ ಕೈಯಲ್ಲಿ ಅದು ಬೆಳೆದರೆ, ನಾಲ್ಕು ಜನರಿಗೆ ದೊರೆಯುವ ಹಿತದಲ್ಲೇ ತಮ್ಮ ಹಿತವೂ ಅಡಗಿದೆ ಎಂಬ ಸಾಮಾಜಿಕ ಬದುಕಿನ ತಿರುಳನ್ನು ಅರಿತ ಮಂದಿ ಈ ಚಳುವಳಿಯ ನಿಯಂತ್ರಣವನ್ನು ಹೊಂದಿದ್ದರೆ, ಅದು ಊರಿಗೆ ಉಪಕಾರಿಯಾಗುವಂತಹ ಆಂದೋಲನವೆನಿಸುವುದರಲ್ಲಿ ಸಂದೇಹವೇನೂ ಇಲ್ಲ. ಸಹಕಾರ ಚಳುವಳಿಯು ಏನೆಲ್ಲ ಸಾಧಿಸಬಹುದು ಎಂಬುದಕ್ಕೆ ಚೆನ್ನಾಗಿ ನಡೆಯುತ್ತಿರುವ ಅನೇಕ ಸಹಕಾರ ಸಂಘಗಳೇ ಉದಾಹರಣೆ. ಸಹಕಾರ ತತ್ವದ ತಳಹದಿಯಲ್ಲಿ ಗುಜರಾತಿನ ಆನಂದ್‌ನಲ್ಲಿ ತೊಡಗಿದ ಹಾಲು ಉತ್ಪಾದನೆ ಆಂದೋಲನ ಇಂದು ಸಹಸ್ರಾರು ಉತ್ಪಾದಕರಿಗೂ ಗ್ರಾಹಕರಿಗೂ ಅನುಕೂಲತೆಯನ್ನು ತಂದು ಕೊಟ್ಟಿದೆ. ಸಹಕಾರಿ ತತ್ವದ ನೆಲೆಯಲ್ಲಿ ಗುಡಿ ಕೈಗಾರಿಕೆಯನ್ನು ಸಂಘಟಿಸಿದ ಲಿಜ್ಜತ್ ಪಪ್ಪಡ್ ಸಂಸ್ಥೆ ಇದೀಗ ಸಾವಿರಾರು ಮಹಿಳೆಯರಿಗೆ ಉದ್ಯೋಗವನ್ನು ಒದಗಿಸಿ ಕೊಟ್ಟು ಬದುಕಿಗೆ ಆಸರೆಯಾಗಿದೆ. ಸಂಕಟದ ಕಾಲದಲ್ಲಿ ಅಡಿಕೆ ಬೆಳೆಗಾರರು ಹುಟ್ಟುಹಾಕಿದ ಕ್ಯಾಂಪ್ಕೊ, ಪಾಯಿದಾ ವ್ಯವಹಾರ ನಡೆಸುವ ಬಂಡವಾಳಿಗರಿಗೆ ಸಮರ್ಥ ಉತ್ತರವನ್ನು ಕೊಟ್ಟು ಲಕ್ಷಾಂತರ ಬೆಳೆಗಾರರ ಬದುಕನ್ನು ಹಸನುಗೊಳಿಸಿದೆ. ಇಂತಹ ನಿದರ್ಶನಗಳು ನೂರಾರಿವೆ. ಇವುಗಳ ಯಶಸ್ವಿ ಕತೆಯ ಹಿಂದೆ ಸಮರ್ಥ ನಾಯಕತ್ವದ ಇತಿಹಾಸವಿದೆ. ಸಾಮಾಜಿಕ ಕಳಕಳಿಯುಳ್ಳವರ, ಸಮೂಹ ಹಿತದ ದೃಷ್ಟಿಯುಳ್ಳ ಪ್ರಾಮಾಣಿಕರ ಜೀವನಗಾಥೆಯಿದೆ. ಜನರಿಂದ ಹನಿ ಹನಿಯಾಗಿ ಬಂದ ಸಂಪನ್ಮೂಲವನ್ನು ಕ್ರೋಡೀಕರಿಸಿ ಸರಕಾರದಿಂದ ಬರುವ ನೆರವನ್ನು ದೊರಕಿಸಿಕೊಂಡು ಉದ್ದಿಮೆ ವ್ಯವಹಾರಗಳನ್ನು ಕಟ್ಟಿ ಬೆಳೆಸಿದ ಪರಿಣತಿಯ ಪುರಾವೆ ಇವೆ.

ಸಹಕಾರ ಚಳವಳಿಗೆ ಇನ್ನೊಂದು ಮುಖವೂ ಇದೆ. ಅದನ್ನೇ ಜಾಲಪ್ಪನವರು ಹೇಳಿದ್ದು. ನಮ್ಮ ಗ್ರಾಮಾಂತರಗಳಲ್ಲಿ ಅನಾಥ ವಿಧವೆಯರ, ದುರ್ಬಲ ಸೋದರರ ದರಿದ್ರ ಕೆಳವರ್ಗದವರ ಜಮೀನು ಸೊತ್ತುಗಳನ್ನು ಯಾವುದಾದರೊಂದು ದಾರಿಯಿಂದ ಬಗಲಿಗೆ ಹಾಕಿಕೊಳ್ಳುತ್ತಿದ್ದ ಸ್ವಾರ್ಥಿ ಮನುಷ್ಯರೇ ಸ್ವಾತಂತ್ರ್ಯಾನಂತರದಲ್ಲಿ ಬೆಳೆದ ಸಹಕಾರ ಚಳುವಳಿಯಲ್ಲಿ ಸೇರಿಕೊಂಡು ಜನರೂ ಸರಕಾರವೂ ಸುರಿದ ಹಣವನ್ನು ಗುಳುಂಕರಿಸುವ ವಿದ್ಯಮಾನ ನಡೆದು ಬಂದಿದೆ. ಅನೇಕ ಸಹಕಾರಿ ಸಂಘಗಳು ಇದೇ ಕಾರಣಕ್ಕಾಗಿ ದಿವಾಳಿ ಎದ್ದಿವೆ. ಬೇನಾಮಿ ವ್ಯಕ್ತಿಗಳಿಗೆ ಸಾಲ ಕೊಟ್ಟು ಬಡವಾದ ಸಹಕಾರ ಸಂಘಗಳಿವೆ. ಅವುಗಳ ನಿಯಂತ್ರಣ ಹಿಡಿದವರು ಲಕ್ಷಾಂತರ ರೂಪಾಯಿ ಸಂಪತ್ತು ಮಾಡಿಕೊಂಡ ನಿದರ್ಶನಗಳಿವೆ.

ಈ ಮಂದಿಯ ಮೇಲೆ ಯಾರಿಗೂ ನಿಯಂತ್ರಣವಿರಲಿಲ್ಲ. ಜನಹಿತದ ಪ್ರಜ್ಞೆಯ ಪ್ರೇರಣೆ ಪಡೆದವರ ಮುಂದಾಳುತನವಿರಬೇಕಾದ ಸಹಕಾರ ಚಳವಳಿಯು ಸ್ವಾರ್ಥಿ ರಾಜಕೀಯ ಪುಢಾರಿಗಳ ಕೈಸೇರಿದ್ದೇ ಇದಕ್ಕೆ ಪ್ರಧಾನ ಕಾರಣ.

ವ್ಯವಹಾರದ ಸೂಕ್ಷ್ಮಗಳು ಜನಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಸಂಘದ ವ್ಯವಹಾರಗಳ ಮೇಲೆ ನಿಗಾ ಇಡುವುದು ಕಾವಲಿನ ಕಣ್ಣಿರಿಸುವುದು ಸಾಮಾನ್ಯ ಸದಸ್ಯರಿಗೆ ಹೀಗಾಗಿ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಇಲ್ಲಿ ಸರಕಾರದ ಪಾತ್ರಕ್ಕೆ ಮಹತ್ವ ಬರುತ್ತದೆ. ಸಹಕಾರ ಸಂಘಗಳ ವ್ಯವಹಾರಗಳ ಮೇಲೆ ಅದು ಕಾವಲಿನ ಕಣ್ಣು ಇರಿಸಬೇಕಾಗುತ್ತದೆ. ಲೆಕ್ಕಪತ್ರಗಳ ಪರಿಶೋಧನಾ ಕಟ್ಟುನಿಟ್ಟನ್ನು ಕರಾರುವಾಕ್ಕಾಗಿ ಆಗಾಗ್ಗೆ ನಡೆಸಲೇ ಬೇಕಾಗುತ್ತದೆ. ಇಲ್ಲದೆ ಹೋದರೆ ಅಕ್ರಮ ನಡೆಸುವವರಿಗೆ ಅನುಕೂಲವಾದಂತಾಗುತ್ತದೆ. ಜತೆಗೆ ಸದಸ್ಯರೂ ಕರ್ತವ್ಯ ಮರೆಯುವಂತಿಲ್ಲ. ಸೂಕ್ತ ನಿಗಾ ಅವರೂ ಇಡಬೇಕಾಗುತ್ತದೆ. ಆಡಳಿತ ಮಂಡಳಿ ಆಯ್ಕೆ ನಡೆಸುವ ವೇಳೆಯೇ ಮುನ್ನೆಚ್ಚರಿಕೆ ವಹಿಸಿದರೆ ಎಷ್ಟೋ ಸಂಘಗಳ ಆರೋಗ್ಯವನ್ನು ಕಾಪಾಡಬಹುದು.

ಸರಕಾರ ಈಗ ಮಾಡುತ್ತಿರುವ ಉಪಕ್ರಮಗಳು ಸ್ವಾಗತಾರ್ಹ. ನಷ್ಟದಲ್ಲಿ ನಡೆಯುವ ಸಂಘಗಳನ್ನು ಮುಚ್ಚುವುದರಿಂದ ಜನರ ಹಣದ ಸೋರಿಕೆ ನಿಲ್ಲುತ್ತದೆ. ಕ್ರಿಮಿನಲ್ ಕೇಸು ಹಾಕುವ ಅಧಿಕಾರವನ್ನು ಡಿ.ಸಿ.ಸಿ. ಬ್ಯಾಂಕಿನ ಅಧ್ಯಕ್ಷರಿಗೆ ಕೊಡುವುದರಿಂದ ಕಾವಲನ್ನು ಬೆಂಗಳೂರಿಂದ ಜಿಲ್ಲಾ ಕೇಂದ್ರಕ್ಕೆ ತಂದಂತಾಗುತ್ತದೆ.

ಮುಂಗಾರು

ಗುರುವಾರ, ಏಪ್ರಿಲ್ 24, 1986

ಬಿಳಿಯಾನೆ ಆಗದಿರಲಿ

ಮಂಗಳೂರು ತೈಲ ಶುದ್ಧೀಕರಣ ಸ್ಥಾವರವು ಇನ್ನು ಕನಸಿನ ಕೂಸಲ್ಲ. ಅದು ವಾಸ್ತವಿಕಕ್ಕೆ ಬರಲಿದೆ. ಯೋಜನೆಯನ್ನು ಸ್ಥಾಪಿಸಲು ಕೇಂದ್ರ ಸರಕಾರ ಅಂತಿಮ ತೀರ್ಮಾನ ತೆಗೆದುಕೊಂಡಿದೆಯೆಂದು ಕೇಂದ್ರ ಪೆಟ್ರೋಲಿಯಂ ಹಾಗೂ ಪ್ರಾಕೃತಿಕ ಅನಿಲ ಸಚಿವ ಚಂದ್ರಶೇಖರ ಸಿಂಗ್ ಅವರು ಕರ್ನಾಟಕದ ಕೈಗಾರಿಕಾ ಸಚಿವ ಜೆ. ಎಚ್. ಪಟೇಲರಿಗೆ ತಿಳಿಸಿರುವುದಲ್ಲದೆ ತೈಲಾಗಾರದ ಉತ್ಪನ್ನಗಳನ್ನು ಆಧರಿಸಿದ ಉಪ ಉದ್ದಿಮೆಗಳ ಸ್ಥಾಪನೆ ಕಾರ್ಯವನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ.

ವರ್ಷಕ್ಕೆ 30 ಲಕ್ಷ ಟನ್ ಕಚ್ಚಾ ತೈಲವನ್ನು ಶುದ್ಧೀಕರಿಸುವ ಸಾಮರ್ಥ್ಯ ಹೊಂದಲಿರುವ ಮಂಗಳೂರು ತೈಲಾಗಾರಕ್ಕೆ ಇನ್ನು ಕೇಂದ್ರ ಸರಕಾರದ ಸಾರ್ವಜನಿಕ ಬಂಡವಾಳ ವಿನಿಯೋಗ ಮಂಡಳಿಯು ಮಂಜೂರಾತಿ ನೀಡಬೇಕಾಗಿದೆ. ಆಮೇಲೆ ಪ್ರಸ್ತಾಪಕ್ಕೆ ಕೇಂದ್ರ ಸಚಿವ ಸಂಪುಟ ಅಂತಿಮ ಅನುಮೋದನೆ ನೀಡಬೇಕು. ಆದ್ದರಿಂದ ಈಗ ಕೇಂದ್ರ ಸಚಿವರು ರಾಜ್ಯದ ಕೈಗಾರಿಕಾ ಸಚಿವರಿಗೆ ಹೇಳಿರುವುದು ತಾಂತ್ರಿಕವಾಗಿ ಕೇಂದ್ರ ಸರಕಾರದ ಅಂತಿಮತೀರ್ಮಾನವೆನಿಸುವುದಿಲ್ಲ. ಬಾಯಿ ಮಾತಿನ ಭರವಸೆ ಅಷ್ಟೆ. ಆದರೂ ಈ ಬಾಯಿ ಮಾತಿನ ಭರವಸೆ ಕೂಡ ಈ ತನಕ ಇದ್ದ ಅನಿಶ್ಚಿತ ಪರಿಸ್ಥಿತಿಗೆ ತೆರೆ ಎಳೆದಿದೆ ಎಂಬುದರಿಂದ ಸ್ವಾಗತಾರ್ಹವಾದದ್ದು. ಈ ಯೋಜನೆ ಕೊನೆಗೂ ಮಂಗಳೂರು ಕರಾವಳಿಯಲ್ಲಿ ಸಾಕಾರಗೊಂಡೀತು ಎಂಬುದು ಕರ್ನಾಟಕದ ಜನ ಸಮುದಾಯದ ನಿರೀಕ್ಷೆ.

ಈ ಯೋಜನೆಯ ವೆಚ್ಚ 900 ಕೋಟಿ ರೂಗಳು. ಸಾರ್ವಜನಿಕ ಹಾಗೂ ಖಾಸಗಿ ಇವೆರಡೂ ಭಾಗವಹಿಸುವ ಜಂಟಿರಂಗದಲ್ಲಿ ಇದರ ಸ್ಥಾಪನೆ. ಹಣ ಹೂಡಿಕೆ ವಿಚಾರದಲ್ಲಿ ಸರಕಾರದ ಕೆಲಸ ಹಗುರವಾಗಲೆಂದೇ ಈ ಹೆಜ್ಜೆ. ಖಾಸಗಿರಂಗದ ಪಾಲುದಾರ ಕಂಪೆನಿಗೆ ಅನುವು ಮಾಡಲಾಗುವ ಬಂಡವಾಳವು ಶೇಕಡಾ 26ರಷ್ಟು. ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಶನ್ ಈ ಯೋಜನೆ ಕಟ್ಟಿ ನಡೆಸುವ ಸಾರ್ವಜನಿಕ ರಂಗದ ಸಂಸ್ಥೆಯಾಗಿದ್ದು ಖಾಸಗಿರಂಗದ ಜುವಾರಿ ಅಗ್ರೋ ಕೆಮಿಕಲ್ಸ್, ಇಂಡಿಯನ್ ರೇಯಾನ್ಸ್, ಸೆಂಚುರಿ ಸ್ಪಿನ್ನಿಂಗ್ ಮಿಲ್ಸ್, ಲಾರ್ಸನ್ ಅಂಡ್ ಟೂಬ್ರೋ, ಯುನೈಟೆಡ್ ಬ್ರೂವರೀಸ್, ಪೆಲ್ ಇಂಟರ್‌ನ್ಯಾಶನಲ್ ಮುಂತಾದ ಕಂಪೆನಿಗಳು ಪಾಲುದಾರಿಕೆ ಪಡೆಯಲು ಆಸಕ್ತವಾಗಿವೆ. ಜೂನ್ ಹೊಳಗೆ ಕೇಂದ್ರ ಸಚಿವ ಸಂಪುಟವು ಯೋಜನೆಗೆ ಅಂತಿಮ ಒಪ್ಪಿಗೆ ನೀಡುವ ಸಂಭವವಿದೆ.

ತೈಲಾಗಾರವೆಂಬುದು ನಾಡಿನ ಅಭಿವೃದ್ಧಿಯ ದಾರಿಯಲ್ಲಿ ಒಂದು ಮಹತ್ವದ ಮೈಲಿಗಲ್ಲು. ತೈಲವು ಆಧುನಿಕ ಬದುಕಿನ ಹತ್ತು ಹಲವು ಅನುಕೂಲತೆಗಳನ್ನು ಒದಗಿಸಿದೆ. ಇಂಧನವನ್ನು ಒದಗಿಸುವುದೇ ಅಲ್ಲದೆ ಇತರ ಹಲವಾರು ಕೈಗಾರಿಕೆಗಳಿಗೆ ಮೂಲವಸ್ತುವನ್ನು ಒದಗಿಸುತ್ತದೆ. ಈ ನಿಟ್ಟಿನಲ್ಲಿ ಕನ್ನಡದ ಕರಾವಳಿಯಲ್ಲಿ ಈ ಯೋಜನೆ ಸಾಕಾರ ರೂಪವನ್ನು ಪಡೆದಾಗ ಗೊಬ್ಬರ, ಪ್ಲಾಸ್ಟಿಕ್, ಔಷಧ ಮುಂತಾದ ಇತರ ಉದ್ಯಮಗಳಿಗೂ ಚಾಲನೆ ದೊರೆಯಲಿದೆ.

900 ಕೋಟಿ ರೂಪಾಯಿಗಳ ಯೋಜನೆ ಎಂದಾಗ ಸಹಜವಾಗಿಯೇ ಈ ಸ್ಥಾವರದಲ್ಲಿ ಅನೇಕ ಮಂದಿಗೆ ಉದ್ಯೋಗಾವಕಾಶವಿದೆ. ಇಂತಹ ಉದ್ಯೋಗ ತಮ್ಮ ಮಂದಿಗೇ ಸಿಗಬೇಕು ಎಂದು ಸ್ಥಳೀಯ [illegible]ದು ಸಹಜ. ಅದ[illegible] [illegible] ಸಮರ್ಥನೀಯ[illegible]

ಒಂದು ಪ್ರದೇಶದಲ್ಲಿ ಸ್ಥಾಪನೆಗೊಳ್ಳುವ ಯೋಜನೆಯಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯದಿದ್ದರೆ ಅಂತಹ ಯೋಜನೆಗೂ ಅದರಿಂದಾಗುವ ಅಭಿವೃದ್ಧಿಗೂ ಅರ್ಥವೇ ಇಲ್ಲ. ಯೋಜನೆಗಳಲ್ಲಿ ಹೊರಗಿನ ಮಂದಿಯನ್ನು ತಂದು ತುರುಕುವುದರಿಂದ ಸಾಮಾಜಿಕ ಏರುಪೇರು ಕೂಡ ಉಂಟಾಗುತ್ತದೆ. ಆರ್ಥಿಕ ವಿಕೃತಿ–ವಿಪರ್ಯಾಸಗಳೂ ಹುಟ್ಟಿಕೊಳ್ಳುತ್ತವೆ.

ಇಂದು ಮಂಗಳೂರು ಆಸುಪಾಸಿನಲ್ಲಿ ಇಂತಹ ವಿದ್ಯಮಾನ ಆಗಿರುವುದನ್ನು ಕಾಣುತ್ತಿದ್ದೇವೆ. ನವ ಮಂಗಳೂರು ಬಂದರದಲ್ಲಿ ಎಷ್ಟು ಮಂದಿ ಸ್ಥಳೀಯರಿಗೆ ಉದ್ಯೋಗ ಸಿಕ್ಕಿದೆ ಎಂಬುದರ ಬಗ್ಗೆ ಈ ಯೋಜನೆಯ ರೂವಾರಿಗಳು, ಈಗ ಈ ಪ್ರದೇಶದ ನಾಯಕತ್ವ ವಹಿಸಿರುವ ರಾಜಕಾರಣಿಗಳು, ಆಡಳಿತ ನೋಡಿಕೊಳ್ಳುತ್ತಿರುವ ಸ್ಥಳೀಯಧಿಕಾರಿಗಳು ಆತ್ಮಶೋಧನೆ ಮಾಡಿಕೊಳ್ಳಬೇಕು. ನವಮಂಗಳೂರು ಬಂದರಿಗಾಗಿ ತಮ್ಮ ಜಮೀನನ್ನು ತ್ಯಾಗಮಾಡಿದ ಕುಟುಂಬಗಳಿಗೆ ಕೂಡ ಒಂದೊಂದು ಉದ್ಯೋಗವೂ ಈ ಬಂದರದಲ್ಲಿ ಸಿಕ್ಕಿದ್ದಿಲ್ಲ. ಮಂಗಳೂರು ಪರಿಸರದಲ್ಲಿ ಕಡಲಿನೊಡನೆ ಸೆಣಸಿ, ಮಣಿಸಿ ಬದುಕು ನಡೆಸುವ ಸ್ಥಳೀಯ ಸಾಹಸಿಗ ಮಂದಿ ಹಲವರಿದ್ದಾರೆ. ಒಂದು ಆಧುನಿಕ ಬಂದರವನ್ನು ನಿರ್ವಹಿಸಬಲ್ಲ, ಅದಕ್ಕಾಗಿ ತಯಾರಾಗಬಲ್ಲ ದೇಹಬಲವೂ ಬುದ್ಧಿಬಲವೂ ಈ ಜನಕ್ಕಿದೆ. ಆದರೆ ಇಂದು ನವಮಂಗಳೂರಿನಲ್ಲಿ ಆಗಿರುವುದೇ ಬೇರೆ. ತಮಿಳ್ನಾಡಿನಿಂದಲೂ, ಕೇರಳದಿಂದಲೂ ಬಂದ ಜನ ಅಲ್ಲಿ ತುಂಬಿಕೊಂಡಿದ್ದಾರೆ.

ಮಂಗಳೂರು ಮೊದಲೇ ಜನನಿಬಿಡ ನಗರ. ಅಲ್ಲಿ ವಾಸಕ್ಕೆ ಮನೆಯಿಲ್ಲ, ಉಪಯೋಗಕ್ಕೆ ನೀರು ಸಾಕಷ್ಟಿಲ್ಲ. ಹೊರಗಿಂದ ಬಂದ ಮಂದಿ ಇದೆಲ್ಲ ಪಡಿಪಾಟಲು ಅನುಭವಿಸಬೇಕಾಗಿದೆ. ಜನತೆಗೆ ಸ್ಥಳೀಯ ಜನರ ಜೀವನವೇ ದುರ್ಭರವಾಗಿದೆ. ಅಲ್ಲಿನ ಜೀವನ ವೆಚ್ಚ ಸಾಮಾನ್ಯವಾಗಿ ಬಯಲು ಸೀಮೆಯ ನಗರಗಳದ್ದಕ್ಕಿಂತ ದುಪ್ಪಟ್ಟು ಇದೆ.

ಇನ್ನೂ ಮತ್ತಷ್ಟು ಮಂದಿ ಹೊರಗಿನವರನ್ನು ತಂದು ಮಂಗಳೂರು ನಗರದ ಹೊಟ್ಟೆ ಬೆಳೆಸುವುದು ಸಲ್ಲದು. ಅದು ತಾಳಿಕೊಳ್ಳಲಾರದು. ಅದಕ್ಕಾಗಿ ಮಂಗಳೂರು ತೈಲಾಗಾರದ ಉದ್ಯೋಗಗಳನ್ನು ಸ್ಥಳೀಯ ಯುವಕರಿಗೇ ಕೊಡಿ. ದಕ್ಷಿಣ ಕನ್ನಡದಲ್ಲಿ ಸಾಕಷ್ಟು ಪ್ರತಿಭಾಶಾಲಿ ತರುಣರ ದಂಡೇ ಇದೆ. ಪರಿಣತರೂ ಇದ್ದಾರೆ. ಹಲವಾರು ವರ್ಷ ನುರಿತ ಅನುಭವಿ ಆಡಳಿತಗಾರರನ್ನೋ ಅನುಭವಿ ತಂತ್ರಜ್ಞರನ್ನೋ ಒಂದಿಬ್ಬರನ್ನು ಬೇಕಿದ್ದರೆ ಹೊರಗಿಂದ ತನ್ನಿ. ಉಳಿದ ಹುದ್ದೆಗಳಿಗೆಲ್ಲ ಸ್ಥಳೀಯರಿಂದಲೇ ಆಯ್ಕೆ ಮಾಡಿ. ಈ ಯೋಜನೆಯನ್ನು ಸಾಕಾರಗೊಳಿಸುವುದಕ್ಕಾಗಿ ಸಾವಿರಾರು ಕುಟುಂಬಗಳು ತಮ್ಮ ಮನೆ ಮಾರುಗಳನ್ನು ತ್ಯಾಗಮಾಡಿವೆ. ಅಂತಹ ಕುಟುಂಬಗಳಿಗೆ ಯೋಜನೆಯಲ್ಲಿ ಉದ್ಯೋಗ ಒದಗಿಸಬೇಕು. ಅದು ಕರ್ತವ್ಯ.

ಇದನ್ನು ಅಧಿಕಾರಿಗಳು ಕಡ್ಡಾಯವಾಗಿ ಮಾಡಬೇಕು. ರಾಜಕಾರಣಿಗಳು ಈ ಬಗ್ಗೆ ಗಮನಹರಿಸಬೇಕು. ಸಾರ್ವಜನಿಕರು, ಸಂಘ ಸಂಸ್ಥೆಗಳು ಈ ವಿಷಯದಲ್ಲಿ ಕಣ್ಗಾವಲು ಇಡಬೇಕು. ಮಂಗಳೂರು ತೈಲಾಗಾರದ ಶೇಕಡಾ 90ರಷ್ಟು ಉದ್ಯೋಗ ಕರಾವಳಿಯ ಜನರಿಗೇ ಸಿಗಬೇಕು. ಆದಾಗಲಿಲ್ಲವೆಂದಾದರೆ [illegible]

ಮುಂಗಾರು

ಶುಕ್ರವಾರ, ಏಪ್ರಿಲ್ 25, 1986

ದುಷ್ಟರ ಕೈಯಲ್ಲಿ ದೂರದರ್ಶನ

ದೂರದರ್ಶನ ಸಂಸ್ಥೆಯ ಸುದ್ದಿ ಸಂಗ್ರಹ ಹಾಗೂ ಅದರ ವ್ಯವಸ್ಥೆ ಸುಧಾರಿಸುವುದಾಗಿಯೂ ಮಾರ್ಗದರ್ಶಕ ಸೂತ್ರಗಳನ್ನು ಹಾಕಿಕೊಟ್ಟು ವಾರ್ತೆಗಳು ಹಾಗೂ ಕಾರ್ಯಕ್ರಮಗಳ ಆಯ್ಕೆಯಲ್ಲಿ ಸ್ವಾಯತ್ತತೆ ನೀಡಲಾಗುವುದೆಂದೂ ಸಮಾಚಾರ ಹಾಗೂ ಪ್ರಸಾರ ಸಚಿವ ವಿ.ಎನ್. ಗಾಡ್ಗೀಳ್ ಅವರು ಲೋಕಸಭೆಗೆ ತಿಳಿಸಿದ್ದಾರೆ.

ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹಬ್ಬುತ್ತಿರುವ ಟೆಲಿವಿಷನ್‌ನಲ್ಲಿ ತೋರಿಸಲಾಗುತ್ತಿರುವ ಕಾರ್ಯಕ್ರಮಗಳ ಗುಣಮಟ್ಟದ ಬಗ್ಗೆ, ಅದು ಸುದ್ದಿ ಆಯ್ಕೆಯಲ್ಲಿ ತೋರಿಸುತ್ತಿರುವ ಪಕ್ಷಪಾತದ ಬಗ್ಗೆ, ಜನರಲ್ಲಿ ಕಾಣಿಸಿಕೊಳ್ಳುವ ಜಾಹೀರಾತುಗಳು ನಮ್ಮ ಸಮಾಜದ ಮೌಲ್ಯಗಳ ನೆಲೆಗಟ್ಟನ್ನೇ ಕೊರೆದು ತೆಗೆಯುತ್ತಿರುವ ಬಗ್ಗೆ ಸಂಸತ್ತಿನಂತಹ ಜನಪ್ರಾತಿನಿಧಿಕ ಸಂಸ್ಥೆಗಳಲ್ಲಿಯೂ ವೃತ್ತಪತ್ರಿಕಾ ಮಾಧ್ಯಮದಲ್ಲಿಯೂ ಬಹಳಷ್ಟು ಟೀಕೆಗಳು ಬಂದಿವೆ. ದೂರದರ್ಶನದ ಆಡಳಿತೆ ನಡೆಯುವ ದೆಹಲಿಯ 'ಮಂಡಿ ಹೌಸ್' ನಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರದ ಬಗ್ಗೆ ಬಹಳ ಜನರು ಬರೆದಿದ್ದಾರೆ. ಕ್ರೀಡಾ ಪ್ರಸಾರಗಳ ಹಾಗೂ ಇತರ ವೀಕ್ಷಕ ವಿವರಣೆಗಳ ಕುತೂಹಲಕಾರಿ ಘಟ್ಟಗಳಲ್ಲಿ ನಿರ್ದಿಷ್ಟ ಕಂಪೆನಿಗಳ ಜಾಹೀರಾತುಗಳನ್ನು ಪ್ರದರ್ಶಿಸಿ, ಆ ಕಂಪೆನಿಗಳಿಗೆ ಹಿತ ಮಾಡುವುದೂ ನೋಟಕರಿಗೆ ರಸಭಂಗ ಉಂಟು ಮಾಡುವುದೂ ನಡೆಯುತ್ತಿದೆ ಎಂದು ಬಹಳಷ್ಟು ಮಂದಿ ದೂರಿದ್ದಾರೆ.

ದೂರದರ್ಶನದ ಈ ಕಳಪೆ ಕಾರ್ಯ ನಿರ್ವಹಣೆಗೆ ಮುಖ್ಯವಾಗಿ ಎರಡು ಕಾರಣಗಳಿವೆ. ಒಂದನೆಯದ್ದು ಅದರ ಆಡಳಿತೆಯಲ್ಲಿ ನಡೆಯುತ್ತಿರುವ ರಾಜಕೀಯ ಹಸ್ತಕ್ಷೇಪ. ಎರಡನೆಯದು ಈ ಮಾಧ್ಯಮದ ಉಸ್ತುವಾರಿಯ ಕೆಲಸವನ್ನು "ಕಳಪೆ ತಲೆ"ಗಳ ಕೈಯಲ್ಲಿ ಕೊಟ್ಟಿರುವುದು. ಪಕ್ಷಪಾತರಹಿತವಾಗಿ ಕೆಲಸ ಮಾಡಿ ನಾಡಿನ ಜನರಲ್ಲಿ ಸಂಸ್ಕೃತಿಯ ಬಗ್ಗೆ ವಿಕೃತಿಯಿಲ್ಲದ ನೇರವಾದ ತಿಳುವಳಿಕೆಯನ್ನೂ ರುಚಿಶುದ್ಧಿಯನ್ನೂ ಹುಟ್ಟಿಸಬೇಕಾದ ಸಂಸ್ಥೆಯೊಂದು ಭ್ರಷ್ಟಾಚಾರದ ಬಲೆಯಲ್ಲಿ ಬಿದ್ದು ಕಳಪೆ ಕಾರ್ಯಕ್ರಮಗಳ ನಿರ್ಮಾಪಕರಿಗೂ ಅವಕಾಶ ದೊರೆಯುತ್ತಿರುವುದು ಮೂರನೆಯ ಕಾರಣವಾಗಿದೆ.

ರಾಜಕೀಯ ಹಸ್ತಕ್ಷೇಪವು ದೂರದರ್ಶನದಂತಹ ಯಾವುದೇ ಸಂಸ್ಥೆಯ ಪ್ರಕೃತಿಯನ್ನು ಕೆಡಿಸುತ್ತದೆ. ವೃತ್ತಿಪರ ನಿಷ್ಠೆಯಿಂದ ಕೆಲಸ ಮಾಡುವುದಕ್ಕೆ ಅಸಾಧ್ಯವಾದಂತಹ ವಾತಾವರಣವು ಅದರಿಂದ ನಿರ್ಮಾಣವಾಗುತ್ತದೆ. ಅಂಥ ಸಂಸ್ಥೆಯಲ್ಲಿ ಪ್ರತಿಭೆಯೂ ಸಾಮರ್ಥ್ಯವೂ ಉಳ್ಳ ಮಂದಿಯಿದ್ದರೂ ಅವೆಲ್ಲ ನಿಷ್ಪ್ರಯೋಜಕವಾಗುತ್ತದೆ. ರಾಜಕೀಯ ಅಧಿಕಾರಾರೂಢರಿಗೆ ಮಣಿದು ಬದುಕಬೇಕಾದಂತಹ, ಇಲ್ಲವಾದರೆ ವಲಸೆ ಹೋಗಬೇಕಾದಂತಹ ಪರಿಸ್ಥಿತಿ ಉಂಟಾಗುತ್ತದೆ. ಕಾರ್ಯಕ್ರಮಗಳ ಗುಣಮಟ್ಟವು ಇದರಿಂದಾಗಿ ಇಳಿಯುತ್ತದೆ. ವಾರ್ತೆ ಹಾಗೂ ಕಾರ್ಯಕ್ರಮಗಳ ಆಯ್ಕೆಯಲ್ಲಿ ರಾಜಕೀಯ ಹಾಗೂ ಇನ್ನಿತರ ರೀತಿಯ ಪಕ್ಷಪಾತವು ತಲೆ ಹಾಕುತ್ತದೆ. ಇದರಿಂದ ಈ ಮಾಧ್ಯಮದ ಮೇಲೆ ದೇಶದ ಜನರಿಗೆ ಇರುವಂತಹ ನಂಬಿಕೆಯೂ ನಾಶವಾಗುತ್ತದೆ.

ಈ ನಂಬಿಕೆಯನ್ನು ಉಳಿಸಿಕೊಳ್ಳುವ ಕೆಲಸವನ್ನು ಮೊದಲು ಸರಕಾರ ಮಾಡಬೇಕು. ಟೆಲಿವಿಷನ್, ರೇಡಿಯೋ ಮುಂತಾದ ಸಂಸ್ಥೆಗಳಿಗೆ ಕಾರ್ಯ ನಿರ್ವಹಣೆ ಸ್ವಾತಂತ್ರ್ಯವನ್ನು ಸರಕಾರ ಕೊಡದೇ ಇದ್ದರೆ ಅಂಥ ನಂಬಿಕೆಯನ್ನು ಉಳಿಸಿ, ಬೆಳೆಸುವುದಕ್ಕಾಗುವುದಿಲ್ಲ. ಇಂದು ಅಂತಹ ಸ್ವಾತಂತ್ರ್ಯವನ್ನು ಕೊಟ್ಟ ತಕ್ಷಣ ಅವುಗಳು ವಿರೋಧ ಪಕ್ಷಗಳ ನಿಯಂತ್ರಣಕ್ಕೊಳಪಟ್ಟು ನಾಳೆ "ದೇಶದ್ರೋಹಿ" ಸಂಸ್ಥೆಗಳಾಗಿ ಮಾರ್ಪಡುವವೆಂಬ ವಿಚಾರವೇನಾದರೂ ಸರಕಾರಕ್ಕಿದೆಯೆ? ಈ ಸಂಸ್ಥೆಗಳನ್ನು ಆಳುವ ಪಕ್ಷದ ರಾಜಕಾರಣಿಗಳು ಕೈವಶದಲ್ಲಿರಿಸಿಕೊಳ್ಳುವುದರಿಂದ ಈ ದೇಶದಲ್ಲಿ ಗುಲಾಮಗಿರಿಯ ಸಂಸ್ಕೃತಿಯನ್ನು ಮಾತ್ರವೇ ಬೆಳೆಸುವುದು ಸಾಧ್ಯವಾಗುತ್ತದೆ. ವಿಷಯ- ವಿದ್ಯಮಾನಗಳನ್ನು ಸೂಕ್ತವಾದ ನೆಲೆಯಲ್ಲಿ ವಿಚಾರಿಸಿ ತೀರ್ಮಾನಿಸುವ ತಿಳುವಳಿಕೆಯನ್ನೂ ದೃಷ್ಟಿಕೋನವನ್ನೂ ನಿರ್ಭಯವನ್ನೂ ಜನರಲ್ಲಿ ರೂಪಿಸುವುದು ಅಸಾಧ್ಯವಾಗುತ್ತದೆ. 21 ನೇ ಶತಮಾನಕ್ಕೆ ನೆಗೆಯಲು ಗುಲಾಮಗಿರಿಯ ಕುಂಟರ ಸೈನ್ಯ ಮಾತ್ರ ತಯಾರಾಗಿರುತ್ತದೆ.

ಸ್ವಾಯತ್ತತೆ ಕೊಡಬೇಕು–ಜತೆಗೆ ಸೌಂದರ್ಯಾನುಭೂತಿಯನ್ನು ವಿಕೃತಿಯಿಲ್ಲದೆ ಪ್ರತಿಫಲಿಸಲು ಸಾಮರ್ಥ್ಯವುಳ್ಳ ಕಲೆ, ಸಂಸ್ಕೃತಿಗಳ ಬಗ್ಗೆ ನೈಜ ಕಾಳಜಿಯೂ ಅರಿವೂ ಉಳ್ಳ, ಈ ದೇಶದ ಜನಜೀವನವನ್ನು ಹತ್ತಿರದಿಂದ ನೋಡಿ ತಿಳಿದ ಪ್ರತಿಭಾವಂತರ ಕೈಯಲ್ಲಿ ದೂರದರ್ಶನವನ್ನು ಕೊಡಬೇಕು. ಇಂದು ದೂರದರ್ಶನವನ್ನು ಮುಂಬಯಿ ಸಿನೆಮಾ ರಂಗದ ಬುದ್ಧಿಗೇಡಿ ಮೂರ್ಖಶಿಖಾಮಣಿಗಳು ಆಳುತ್ತಿದ್ದಾರೆ. ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳಲ್ಲಿ ಈ ದೇಶದ ಜನಜೀವನವನ್ನು ವಿಕೃತವಾಗಿ ಚಿತ್ರಿಸಿ ಹಿಂಸೆ ಹಾಗೂ ಅಸಹ್ಯಗಳೇ ಭಾರತೀಯ ಜನ ಜೀವನವೆಂಬಂತೆ ತೋರಿಸಿ ಸಾಮಾಜಿಕ ಮೌಲ್ಯಗಳ ಕುಲಗೆಡಿಸಿದ ಧನದಾಹಿ ಖೂಳರ ದಂಡೇ "ಮಂಡಿ ಹೌಸ್"ಗೆ ದಾಂಡಾಯಿಸಿದೆ. ಅಲ್ಲಿನ ಅಧಿಕಾರಿಗಳನ್ನು ಲಕ್ಷ ಕೊಟ್ಟು ಕೊಳ್ಳುವ ಕೆಲಸ ನಡೆಯುತ್ತಿದೆ. ನಮ್ಮ ಜನಜೀವನವನ್ನು ಕೊಂಚವೂ ಪ್ರತಿನಿಧಿಸದ, ಧನಕ್ಕೆ ವಿಕಾರಗಳನ್ನೇ ಉಣಿಸುವ ಅಸಹ್ಯವಾದ, ಅಸಭ್ಯವಾದ ವಿಲಕ್ಷಣ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ದೂರದರ್ಶನವೆಂದರೆ ಮಿನಿ ಮುಂಬಯಿ ಸಿನೆಮಾ ರಂಗವೇ ಆಗಿದೆ. ಇದೀಗ ಈ ರಂಗದ ಹಣದ ಹದ್ದುಗಳೆರಡು ದೂರದರ್ಶನಕ್ಕಾಗಿ ಮಹಾಭಾರತವನ್ನೂ ರಾಮಾಯಣವನ್ನೂ ಚಿತ್ರಿಸಲು ಹೊರಟಿವೆ. ವಿಚಾರವಂತರು ಈ ವಿಷಯದಲ್ಲಿ ತಕ್ಷಣ ಧ್ವನಿಯೆತ್ತಬೇಕು. ಇವೆರಡು ಮಹಾಕಾವ್ಯಗಳು ನಮ್ಮ ಜನಜೀವನದಿಂದ ಒಡಮೂಡಿದ ಕಥಾನಕಗಳು. ಅವುಗಳನ್ನು ಮುಂಬಯಿ ಸಿನೆಮಾದವರು ಕುಲಗೆಡಿಸುವುದಕ್ಕೆ ಬಿಡಬಾರದು.

ದೂರದರ್ಶನವನ್ನು ದುಷ್ಟರ ಕೈಯಿಂದ ಬಿಡಿಸಬೇಕಾದ ಕಾಲ ಬಂದಿದೆ.

ಮುಂಗಾರು

ಮಂಗಳವಾರ, ಏಪ್ರಿಲ್ 29, 1986

ಬೆಳೆಯದ ಬೆಳೆಗಾರರು

ಭಾರತವು ಕಳೆದ ಮೇ ತಿಂಗಳಿನಿಂದ ಫೆಬ್ರುವರಿ ತನಕದ ಅವಧಿಯಲ್ಲಿ 19.5 ಲಕ್ಷ ಟನ್ ವಿದೇಶಿ ಸಕ್ಕರೆ ಆಮದು ಮಾಡಿಕೊಂಡಿತು. ದೇಶೀಯ ಸಕ್ಕರೆ ಉತ್ಪಾದನೆ ಕುಸಿದ ಕಾರಣ ಸಕ್ಕರೆ ಬಳಕೆದಾರರಿಗೆ ಅನುಕೂಲ ಮಾಡಿಕೊಡಲು ಆಮದು ಮಾಡಿಕೊಳ್ಳಲಾಯಿತೆಂಬ ಸಬೂಬನ್ನು ಕೊಡಲಾಗಿದೆ.

ಭಾರತದ ಆಳುವ ವರ್ಗವು ಬೆಳೆಸಿಕೊಂಡು ಬಂದಿರುವ ನಗರ ಕೇಂದ್ರೀಕೃತ ಸಂಸ್ಕೃತಿಯಲ್ಲಿ ಇದಲ್ಲದೆ ಬೇರೇನೂ ಆಗುವುದು ಸಾಧ್ಯವಿಲ್ಲ. ಈ ದೇಶದಲ್ಲಿ ಬೆಳೆಯುವುದನ್ನು ಸುಲಭದಲ್ಲಿ ಬೆಳೆಸಲು ಸಾಧ್ಯವಿರುವುದನ್ನು ನಗರಗಳ ಮಂದಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಆಮದು ಮಾಡಿಕೊಳ್ಳಲು ಸರಕಾರ ಹಿಂದೆ ಮುಂದೆ ನೋಡುವುದಿಲ್ಲ. ರೈತರ ಹಿತ ಸರಕಾರದ ಧೋರಣೆಯಲ್ಲಿಲ್ಲ. ಹಳ್ಳಿಯ ಬೆಳವಣಿಗೆಯ ದೃಷ್ಟಿ ಸರಕಾರದ ಧೋರಣೆಗಳಿಗೆ ಇಲ್ಲ. ನಗರಗಳ ಶ್ರೀಮಂತರಿಗೆ ಅನುಕೂಲ ಮಾಡಲೆಂದು ಸರಕಾರ ಸಕ್ಕರೆ ಹೊರಗಿನಿಂದ ತರಿಸಿಕೊಳ್ಳುತ್ತದೆ. ಬಟ್ಟೆ ಗಿರಣಿಗಳವರಿಗೆ ಹಿತವೆನಿಸಲು ಹತ್ತಿಯನ್ನು ಪಾಕಿಸ್ತಾನದಿಂದ ಆಮದು ಮಾಡುತ್ತದೆ. ರೇಷ್ಮೆ ಬಟ್ಟೆ ಕಾರ್ಖಾನೆಗಳವರಿಗೆ ಲಾಭ ತಂದುಕೊಡಲು ಚೀನದ ಕಚ್ಚಾ ರೇಷ್ಮೆ ತರಿಸುತ್ತದೆ. ಗ್ರಾಹಕರು ಕೋಪಗೊಳ್ಳದಿರಲೆಂದು ತೆಂಗಿನೆಣ್ಣೆಯನ್ನೂ ತಾಳೆ ಎಣ್ಣೆಯನ್ನು ಬೇರೆಡೆಗಳಿಂದ ಆಮದು ಮಾಡಲಾಗುತ್ತಿದೆ.

ಇದು ಸರಕಾರದ ನಿರಂತರ ನೀತಿ. ಎಲ್ಲೋ ಆಗೊಮ್ಮೆ ಈಗೊಮ್ಮೆ ಕಾಣಿಸಿಕೊಳ್ಳುವ ವಿಕಾರವಲ್ಲ. ಸ್ವಾತಂತ್ರ್ಯಾನಂತರದಲ್ಲಿ ಅನುಗಾಲವೂ ನಡೆದು ಬಂದಿರುವ ನೀತಿ. ನಗರ ಕೇಂದ್ರಿತವಾದ ಸಂಸ್ಕೃತಿ ಪರಂಪರೆಯಿಂದಾಗಿ ಹೀಗಾಗಿದೆ. ನಗರಗಳಲ್ಲಿ ಬೆಳೆದವರೇ ನಮ್ಮ ನಾಯಕರಾಗುತ್ತಾರೆ. ಹಳ್ಳಿಯವರು ನಗರದವರಾಗಲು ಹಾರೈಸುತ್ತಾರೆ. ನಗರದ ರೀತಿ ನೀತಿಗಳೇ ನಮಗೆ ಆದರ್ಶವಾಗುತ್ತವೆ. ಅವುಗಳೇ ಮೌಲಿಕವಾಗುತ್ತವೆ. ಆದ್ದರಿಂದಲೇ ನಮ್ಮ ಅಧಿಕಾರ ವ್ಯವಸ್ಥೆಯು ನಗರಗಳ ಹಿತ ಕಾಯುವ ಕೆಲಸವನ್ನು ಮಾಡುತ್ತದೆ.

ಆದ್ದರಿಂದಲೇ ಕೈಗಾರಿಕಾ ರಂಗಕ್ಕೆ ಇಲ್ಲಿ ಸಕಲ ಸವಲತ್ತುಗಳು ಸಲ್ಲುತ್ತವೆ. ಉದ್ಯಮಿಗಳೇ ನಮ್ಮ ಸಮಾಜದ ನಾಯಕರಾಗುತ್ತಾರೆ. ಹಣದ ವ್ಯವಹಾರ ಮಾಡುವವರು ಬುದ್ಧಿ ಜೀವಿಗಳನ್ನು ಆಳುತ್ತಾರೆ. ಕೃಷಿಯಂತಹ ಸೃಜನಶೀಲ ಕ್ರಿಯೆಯು ಎರಡನೇ ಪಂಕ್ತಿಯಲ್ಲಿ ತೃಪ್ತಿ ಪಟ್ಟುಕೊಳ್ಳಬೇಕಾಗುತ್ತದೆ.

ಇದು ಸಮಾಜದ ನೀತಿಯೂ ಹೌದು, ಸರಕಾರದ್ದೂ ಹೌದು. ಈ ನೆಲದಲ್ಲಿ ಬೆಳೆಯುತ್ತಿರುವುದಕ್ಕೆ ಬೆಳೆಸಬಹುದಾದ್ದಕ್ಕೆ ಪ್ರೋತ್ಸಾಹ ಕೊಡುವುದು ಸರಕಾರದ ಕರ್ತವ್ಯವಾಗಿತ್ತು. ಆ ಮೂಲಕ ಮಾತ್ರವೇ ಕೃಷಿಕ್ಷೇತ್ರವನ್ನೂ ಗ್ರಾಮೀಣ ಪರಿಸರವನ್ನು ಅಭಿವೃದ್ಧಿಗೆ ತರುವುದು ಸಾಧ್ಯವಿತ್ತು. ಇದನ್ನು ಸರಕಾರ ಮಾಡಿಲ್ಲ. ಉದ್ಯಮ ಬೆಳೆದರೆ ಸಾಕು: ದೇಶದ ಉದ್ಧಾರ ಆಗುತ್ತದೆ ಎಂಬ ಭ್ರಮೆ ಈ ದೇಶದ ರಾಜಕೀಯ ನೇತಾರರನ್ನು ಆಡಳಿತಾಧಿಕಾರಿಗಳನ್ನು ನೆಹರೂ ಯುಗದಿಂದಲೇ ಬಾಧಿಸುತ್ತ ಬಂದಿದೆ. ಹತ್ತು ಹಲವು ಬಗೆಗಳಲ್ಲಿ ಅದು ಪ್ರಕಟವಾಗಿದೆ. ಕೈಗಾರಿಕೆ ಹಾಗೂ ಕೃಷಿ ಕ್ಷೇತ್ರಗಳ ಉತ್ಪನ್ನಗಳ ಬೆಲೆನಿಗದಿಗೆ ಅನುಸರಿಸುವ ವಿಧಾನದಲ್ಲೂ ಈ ತಾರತಮ್ಯವು ಸುಸ್ಪಷ್ಟ. ಕೈಗಾರಿಕಾ ಕ್ಷೇತ್ರಕ್ಕೆ ಸರಕಾರವು ಕೊಡುವ ಸಹಾಯಧನಕ್ಕೂ ಕೃಷಿ ಕ್ಷೇತ್ರಕ್ಕೆ ಕೊಡುವಂತಹದ್ದಕ್ಕೂ ಅಜಗಜಾಂತರ. ಸಾರ್ವಜನಿಕ ಹಣಕಾಸು ಸಂಸ್ಥೆಗಳ ಮೂಲಕ ಸರಕಾರವು ಕೈಗಾರಿಕಾ ರಂಗಕ್ಕೆ ಹರಿಯಿಸುವ ಹಣಕಾಸಿನ ಮೊತ್ತ ಅಪಾರ.

ಈ ನೀತಿಯ ಪರಿಣಾಮವಾಗಿಯೇ ಕೃಷಿಕ್ಷೇತ್ರವು ಸೊರಗಿದೆ; ಗ್ರಾಮಾಂತರ ಪರಿಸರ ಬಡವಾಗಿದೆ.

ದೇಶೀಯ ಗಿರಣಿ ಉದ್ಯಮ ಆಧುನಿಕಗೊಳ್ಳುತ್ತಿದೆ. ದೇಶದ ಬಟ್ಟೆ ಮಾರುಕಟ್ಟೆ ಸುಧಾರಿಸುತ್ತಿದೆ ಎಂಬ ಪರಿಸ್ಥಿತಿ ಉಂಟಾದಾಗ ಸರಕಾರ ಹತ್ತಿಯನ್ನು ಆಮದು ಮಾಡಿಕೊಂಡು ಹತ್ತಿಬೆಳೆಗಾರರನ್ನು ಸೊರಗಿಸಿದೆ. ತೆಂಗಿನ ಕಾಯಿ ಕೃಷಿ ಹಬ್ಬುತ್ತ ಗ್ರಾಹಕರ ಸಂಖ್ಯೆ ಬೆಳೆಯುತ್ತ ಕಾಯಿಗಳಿಗೂ ಎಣ್ಣೆಗೂ ಉತ್ತಮ ಬೆಲೆ ಇರುವಂತಹ ಮಾರುಕಟ್ಟೆ ಪರಿಸ್ಥಿತಿಗೆ ಬಂದ ತಕ್ಷಣ ಸರಕಾರ ಎಣ್ಣೆಯನ್ನು ಆಮದು ಮಾಡಿಕೊಂಡಿತು. ಇದೀಗ ತೆಂಗಿನ ಬೆಳೆಗಾರರು ಮತ್ತೆ ಏಳದಂತಾಗಿದ್ದಾರೆ. ರೇಷ್ಮೆ ವಿಷಯದಲ್ಲಿಯೂ ಅಷ್ಟೆ. ದೇಶೀಯ ಬೆಳೆಗಾರರ ಸ್ಥಿತಿ ಸುಧಾರಿಸುತ್ತಿದೆ ಎಂಬ ನಿರ್ಣಾಯಕ ಹಂತದಲ್ಲಿ ಚೀನದಿಂದ ಕಚ್ಚಾ ರೇಷ್ಮೆ ಆಮದು ಮಾಡಲಾಯಿತು. ಸಕ್ಕರೆ ಆಮದಿನ ವಿದ್ಯಮಾನ ಇತ್ತೀಚೆಗಿನ ವಿದ್ಯಮಾನ.

ದೇಶೀಯ ಬೆಳೆಗಾರರು ಬೆಳೆಯಲು ಬಿಡದ ಈ ನೀತಿಯ ವಿರುದ್ಧ ಜನ ಪ್ರತಿನಿಧಿಗಳು ದನಿಯೆತ್ತಬೇಕು.

ಮುಂಗಾರು
ಬುಧವಾರ, ಏಪ್ರಿಲ್ 30, 1986

ಹತ್ತರಲ್ಲಿ ಹನ್ನೊಂದಾಗದಿರಿ

ಜನತಾಪಕ್ಷದ ಅಧ್ಯಕ್ಷತೆ ಕುರಿತಾದ ಅನಿಶ್ಚಿತ ಪರಿಸ್ಥಿತಿ ನಿವಾರಣೆಯಾಗಿದೆ. ಸ್ಪರ್ಧೆಯ ಕಣಕ್ಕೆ ಇಳಿದಿದ್ದ ಐವರು ನಾಯಕರೂ ಹಿಂತೆಗೆದಿದ್ದಾರೆ. ಇನ್ನೂ ಒಂದು ಅವಧಿಗೆ ಅಧ್ಯಕ್ಷನಾಗಿ ಮುಂದುವರಿಯಲು ಚಂದ್ರಶೇಖರ್ ಒಪ್ಪಿದ್ದಾರೆ. ಅವರ ಚುನಾವಣೆಯ ವಿಧಿ ವಿಧಾನಗಳನ್ನು ಪೂರೈಸುವುದು ಮಾತ್ರ ಇನ್ನು ಬಾಕಿ ಉಳಿದಿರುವ ವಿಚಾರ.

ಚಂದ್ರಶೇಖರ್ ಹಾಗೂ ಇತರ ನಾಯಕರು ಈ ರಾಜಕೀಯ ಸಂಸ್ಥೆಯನ್ನು ನಡೆಸಿಕೊಂಡು ಬಂದ ಹಿನ್ನೆಲೆಯಲ್ಲಿ ಇದು ಜನಮನಕ್ಕೆ ಸ್ಪಂದಿಸಿದೆಯೆ, ಅಂತಹ ಸಾಧ್ಯತೆ ಭವಿಷ್ಯದಲ್ಲಿ ಉಂಟೆ ಎಂದು ಪರಿಶೀಲಿಸಬೇಕಾಗುತ್ತದೆ.

ಜನತಾಪಕ್ಷಕ್ಕೆ ಒಂದು ಪುರೋಗಾಮಿ ಸೈದ್ಧಾಂತಿಕ ತಳಹದಿಯನ್ನೂ ಜನಪರ ಹೋರಾಟದ ಕಾರ್ಯಕ್ರಮಗಳ ಚೌಕಟ್ಟನ್ನೂ ಒದಗಿಸಲು ಜಯಪ್ರಕಾಶ ನಾರಾಯಣ್ ಪ್ರಯತ್ನ ಪಟ್ಟಿದ್ದರು. ಜೆ. ಪಿ. ಯವರ ವಿಚಾರಧಾರೆಯಿಂದ ಪ್ರಭಾವಿತರಾದ ಬಹುಮಂದಿ ಅವರ ಹರಕೆಯ ಬಲವಿರುವ ಆ ಪಕ್ಷದತ್ತ ಆಕರ್ಷಿತರಾಗಿದ್ದರು. ಒಂದು ಹಂತದಲ್ಲಿ ಈ ದೇಶದ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಕಂಡು ಕೇಳಿ ಅರಿಯದಂತಹ ಜನ ಬೆಂಬಲವೂ ಆ ಪಕ್ಷಕ್ಕೆ ಸಿಕ್ಕಿತ್ತು.

ಇಂದು ಈ ಪಕ್ಷದಲ್ಲಿ ಚಂದ್ರಶೇಖರ್ ಅವರಂತಹ ಸಮಾಜವಾದಿಗಳು ಗ್ರಾಮೀಣ ಭಾರತದ ಅಭ್ಯುದಯದ ಬಗ್ಗೆ ಚಿಂತನೆ ನಡೆಸುವ ಸಮರ್ಥರಿದ್ದಾರೆ. ಜಾರ್ಜ್ ಫೆರ್ನಾಂಡಿಸ್ ಅವರಂತಹ ಜನಪರ ಹೋರಾಟಗಾರರಿದ್ದಾರೆ. ಮಧು ದಂಡವತೆಯವರಂತಹ ಬುದ್ಧಿಶಾಲಿಗಳೂ ನಾಡಿನ ಅಭ್ಯುದಯದ ಬಗ್ಗೆ ಸೂಕ್ತ ಯೋಜನೆಗಳ ಹೊಳಹು ಹಾಕಬಲ್ಲ ಪ್ರತಿಭಾಶಾಲಿಗಳಿದ್ದಾರೆ. ಬಿಜುಪಟ್ನಾಯಕ್‌ರಂತಹ ಸಂಘಟನಾ ಚತುರರಿದ್ದಾರೆ. ಇಷ್ಟೆಲ್ಲಾ ಇದ್ದರೂ ಈ ಪಕ್ಷ ಕೇಂದ್ರದಲ್ಲೊಮ್ಮೆ ಆಳ್ವಿಕೆಯ ಅಧಿಕಾರ ಪಡೆದರೂ ಆಮೇಲೆ ಕರ್ನಾಟಕದಲ್ಲಿ ಅಧಿಕಾರ ಹಿಡಿದರೂ ಅದೊಂದು ಸಂಪ್ರದಾಯವಾದಿ ಪಕ್ಷಕ್ಕಿಂತ ಭಿನ್ನವಾದ ರಾಜಕೀಯ ಶಕ್ತಿಯೆಂಬುದನ್ನು ಸಾಬೀತುಪಡಿಸಲು ಆದರಿಂದಾಗಿಲ್ಲ. ಅದೊಂದು ಪುರೋಗಾಮಿ ರಾಜಕೀಯ ಪಕ್ಷವೆಂಬ ಸೂಚನೆಯನ್ನು ಎಲ್ಲಿಯೂ ನೀಡಿದ್ದಿಲ್ಲ. ಆ ಪಕ್ಷದ ನಾಯಕರ ತಲೆಯಲ್ಲಿರಬಹುದಾದ ಆಲೋಚನೆಗಳು ಕಾರ್ಯಕ್ರಮಗಳ ರೂಪಕ್ಕೆ ಎಂದೂ ಇಳಿದದ್ದಿಲ್ಲ.

ಅಧಿಕಾರದಲ್ಲಿದ್ದಾಗಲೂ ಅಧಿಕಾರದಿಂದ ಹೊರಗಿದ್ದಾಗಲೂ ಈ ಪಕ್ಷ ಸುಧಾರಣಾವಾದವನ್ನು ಹಮ್ಮಿಕೊಂಡು ಬಂದಿದೆಯಲ್ಲದೆ ಸಾಮಾಜಿಕ ವ್ಯವಸ್ಥೆಯ ಆಮೂಲಾಗ್ರ ಪರಿವರ್ತನೆಗಾಗಿ ಕೆಲಸ ಮಾಡುವ ಸೂಚನೆಗಳನ್ನು ಕೂಡ ತೋರಿಸಿದ್ದಿಲ್ಲ. ಭಾರತದಂತಹ ದಟ್ಟದರಿದ್ರರ ನಾಡಿನಲ್ಲಿ ದುಡಿಮೆ ಹಾಗೂ ಗಳಿಕೆಯ ಅವಕಾಶಗಳನ್ನು ಎಲ್ಲರಿಗೂ ಸಮಾನವಾಗಿ ಹಂಚಿಕೊಡುವ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕಾದ್ದು ಸರಕಾರವೊಂದರ ಮೂಲಭೂತ ಕರ್ತವ್ಯ. ಬಹುಜನರ ದುಡಿಮೆಯಿಂದ ಬರುವ ಸೊತ್ತು ಕೆಲವೇ ಜೇಬುಗಳಲ್ಲಿ ಕೂಡಿಬೀಳದಂತಹ ಸಮಾಜವಾದಿ ವ್ಯವಸ್ಥೆಯನ್ನು ತರುವ, ಅದನ್ನು ಪ್ರತಿಪಾದಿಸುವ ಯಾವುದೇ ರಾಜಕೀಯ ಪಕ್ಷಕ್ಕಾದರೂ ಈ ದೇಶದಲ್ಲಿ ಬೆಳೆಯುವ ಅವಕಾಶವಿದೆ. ಇಲ್ಲಿನ ಜನರ ಆಶೋತ್ತರಗಳೇ ಅಂತಹದ್ದು. ಆದರೆ ಈ ಅವಕಾಶವನ್ನು ಸಮಾಜವಾದಿ ಎನಿಸಿಕೊಳ್ಳುವ ಜನತಾ ಪಕ್ಷ ಸಮರ್ಥವಾಗಿ ದುಡಿಸಿಕೊಂಡಿಲ್ಲ ಎಂಬುದು ಸತ್ಯ. ಆದ್ದರಿಂದಲೇ ಜನಮನವನ್ನು ಸೆಳೆಯುವುದು ಅದರಿಂದಾಗಿಲ್ಲ.

ಆ ಪಕ್ಷದ ಸರಕಾರ ಇರುವ ಕರ್ನಾಟಕದ ಸ್ಥಿತಿಗತಿ ಪರಿಶೀಲಿಸಿದರೆ ಈ ಸತ್ಯದ ಅರಿವಾದೀತು. ಇಲ್ಲಿ ಅದು ಸುಧಾರಣಾವಾದವನ್ನೇ ಅನುಸರಿಸಿದೆ. ಸ್ಥಿತ್ಯಂತರಕ್ಕೆ ಚಾಲನೆ ಕೊಡುವ ಕೆಲಸವನ್ನೇ ಕೈಬಿಟ್ಟಿದೆ. ಕ್ಯಾಪಿಟೇಶನ್ ಶುಲ್ಕದ ವಿಚಾರದಲ್ಲಿ ಖಾಸಗಿ ಮೆಡಿಕಲ್ ಕಾಲೇಜುಗಳವರೊಂದಿಗೆ ಕೈಜೋಡಿಸಿದ ವಿದ್ಯಮಾನವೇ ಇದನ್ನು ಸಾರಿ ಹೇಳುತ್ತದೆ. ಮಿಕ್ಕಂತೆ ಸಣ್ಣಪುಟ್ಟ ಅಗ್ಗದ ಜನಪ್ರಿಯತೆಯ ಕಾರ್ಯಕ್ರಮಗಳ ನಾಟಕಗಳನ್ನಾಡುತ್ತಿದೆಯೇ ವಿನಹ ಬಡವರ ಬದುಕನ್ನು ತಳಸ್ಪರ್ಶಿಯಾಗಿ ತಲಪುವ, ತಟ್ಟಿ ಎಬ್ಬಿಸುವ, ಅವಕಾಶಗಳ ಬಾಗಿಲು ತೆರೆಯುವ ಕೆಲಸಗಳನ್ನು ಅದು ಮಾಡಿಲ್ಲ.

ಇಂತಹ ತೇಪೆಯ ಕೆಲಸಕ್ಕೆ, ಸುಧಾರಣಾವಾದಕ್ಕೆ ಜನರಿಗೆ ಜನತಾ ಪಕ್ಷವೇ ಆಗಬೇಕಿಂದಿಲ್ಲ. ಬೇರಾವ ಪಕ್ಷವಾದರೂ ಆದೀತು, ಬಿ.ಜೆ.ಪಿ. ಯೂ ಆದೀತು, ಬಡವರ ಉದ್ಧಾರದ ಮಾತಾಡುವ ಕಾಂಗ್ರೆಸ್ (ಐ) ಪಕ್ಷವಾದರೂ ಆದೀತು; ಜನತಾ ಪಕ್ಷವೇ ಏಕೆ?

ಇದನ್ನು ಆ ಪಕ್ಷದ ಎಲ್ಲ ನಾಯಕರು ಆಲೋಚಿಸಬೇಕು.ಮತ್ತೆ ಅಧಿಕಾರಕ್ಕೆ ಬರುವ ಅಧ್ಯಕ್ಷರೂ ಚಿಂತಿಸಬೇಕು. ಕಾರ್ಯಕರ್ತರೂ ಸಮಾಲೋಚಿಸಬೇಕು. ಸೈದ್ಧಾಂತಿಕ ವಿಚಾರಗಳನ್ನು ಕಾರ್ಯಕ್ರಮಗಳ ಪಾತಳಿಯಲ್ಲಿ ಎರಕ ಹೊಯ್ಯುವ ಕೆಲಸದಲ್ಲಿ ಜನತಾ ಪಕ್ಷ ಸೋತಿರುವುದು ಯಾಕೆಂದು ಮನನ ಮಾಡಬೇಕು. ಸಮಗ್ರವಾಗಿ ಆರ್ಥಿಕ- ಸಾಮಾಜಿಕ ಪರಿವರ್ತನೆಗೆ ಚಾಲನೆ ಕೊಡುವ ಒಂದು ಜನಪರ ಹೋರಾಟವಾಗಿ, ಜನತಾ ಆಂದೋಲನವಾಗಿ ಪರಿವರ್ತಿತವಾದರೆ ಮಾತ್ರ ಆ ಪಕ್ಷಕ್ಕೆ ಭವಿಷ್ಯವಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಇಲ್ಲವಾದರೆ ಪಕ್ಷಗಳು ಹುಲುಸಾಗಿ ಹುಟ್ಟುವ ಭಾರತೀಯ ರಾಜಕಾರಣದಲ್ಲಿ ಇದೂ ಒಂದಾಗಿ, ಹತ್ತರಲ್ಲಿ ಹನ್ನೊಂದಾಗಿ ಮುಕ್ತಾಯಗೊಂಡೀತು.

ಮುಂಗಾರು
ಗುರುವಾರ, ಮೇ 1, 1986

ಅಪ್ಪಟ ವ್ಯಕ್ತಿತ್ವಕ್ಕೆ ಸಿಕ್ಕಿದ ಬೆಲೆ

1975ರಲ್ಲಿ ಭಾರತಕ್ಕೆ ಬಂದೊದಗಿದ ವಿಪತ್ತಿನ ನಿವಾರಣೆಗೆ ರಾಷ್ಟ್ರೀಯ ಸದ್‌ಶಕ್ತಿಯ ಸಂಕೇತವಾಗಿ ತಲೆ ಎತ್ತಿದ ಜನತಾ ಪಕ್ಷ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಹಲವು ಬಗೆಯ ಏಳುಬೀಳುಗಳನ್ನು ಅನುಭವಿಸಿದೆ. 1977ರಲ್ಲಿ ವಿಜಯೋನ್ಮಾದದ ಆಗಸಕ್ಕೇರಿ 1980ರಲ್ಲಿ ಸೋಲಿನ ಅಗಾಧ ಆಳಕ್ಕೆ ಕುಸಿದಿದೆ. ಅಂದಿನಿಂದ ಇಂದಿನವರೆಗೆ ಆ ಪಕ್ಷ ಹಲವು ವಿಧದ ಗೊಂದಲಗಳ ಕೊಚ್ಚೆಯಲ್ಲಿ ಸಿಕ್ಕಿ ಒಂದಡಿ ಮುಂದಿಡಲಾಗದೆ ತಡವರಿಸುತ್ತಲೇ ಇದೆ.

ಇಂತಹ ದುಃಸ್ಥಿತಿಯಲ್ಲೂ ಆ ಪಕ್ಷ ಇಂದು ರಾಷ್ಟ್ರೀಯ ಪರ್ಯಾಯ ಪಕ್ಷವಾಗಿ ಮೇಲೇಳುವ ಹೊಂಗನಸು ಕಾಣುತ್ತಿರುವುದಕ್ಕೆ ಮುಖ್ಯ ಕಾರಣ ಅದರ ಸ್ಥಾಪಕ ಅಧ್ಯಕ್ಷ ಚಂದ್ರಶೇಖರ್ ಮತ್ತವರ ಸಮಾಜವಾದಿ ಸ್ನೇಹಿತರು ಸಕ್ರಿಯರಾಗಿರುವುದು.

ಸತತವಾಗಿ ಹತ್ತು ವರ್ಷಗಳ ಕಾಲ ರಾಜಕೀಯವಾಗಿ ಹೆಳವನಂತಾದ ಪಕ್ಷವೊಂದನ್ನು ಮುನ್ನಡೆಸುವ ಕಾಯಕದಲ್ಲಿ ಸೋತು ಸುಣ್ಣವಾದ ಸಮಾಜವಾದಿ ಚಂದ್ರಶೇಖರ್ ಅಧ್ಯಕ್ಷ ಪದವನ್ನು ತ್ಯಜಿಸುವ ಸಂಕಲ್ಪದಲ್ಲೇ ಪುಣೆಯ ಮಹಾಧಿವೇಶನಕ್ಕೆ ಹೋಗಿದ್ದರು. ಅಧ್ಯಕ್ಷ ಪದ ಚಂದ್ರಶೇಖರ್‌ಗೆ ಬೇಡವಾದರೆ ತಮಗೆ ಬೇಕೆನ್ನುವ ಐವರೂ ಎದ್ದಿದ್ದರು.

ಕಳೆದ ಎರಡು ದಿನಗಳಿಂದ ಜನತಾ ಪಕ್ಷದ ಮಹಾಧಿವೇಶನದಲ್ಲಿ ನಡೆದ ಲಾಬಿ ಚಟುವಟಿಕೆಗಳನ್ನು ಗಮನಿಸಿದರೆ ಆ ಪಕ್ಷಕ್ಕೆ ಚಂದ್ರಶೇಖರ್ ನಾಯಕತ್ವ ಅನಿವಾರ್ಯವೆಂಬುದರ ಅರಿವು ಪಕ್ಷದ ಎಲ್ಲಾ ವಲಯಗಳಲ್ಲಿ ಆಳವಾಗಿ ಇರುವುದು ಕಂಡುಬರುತ್ತದೆ. ಸಮಾಜವಾದಿಗಳು, ಸುಧಾರಣಾವಾದಿಗಳು ಹಾಗೂ ಸಂಪ್ರದಾಯವಾದಿಗಳ ಸಮ ಮಿಶ್ರಣವಾಗಿರುವ ಜನತಾ ಪಕ್ಷ ಚಂದ್ರಶೇಖರ್ ಅವರನ್ನೇ ಮತ್ತೆ ಅಧ್ಯಕ್ಷರಾಗಿ ಆಯ್ಕೆ ಮಾಡುವುದರ ಮೂಲಕ ತನ್ನ ಹಿತದ ಪ್ರಜ್ಞೆಯನ್ನು ತೋರಿಸಿದೆಯೆನ್ನಬಹುದು.

ಚಂದ್ರಶೇಖರ್ ನೇತೃತ್ವದಲ್ಲಿ ಜನತಾ ಪಕ್ಷ ಸಮಾಜವಾದಿಗಳ ಪ್ರಭಾವದ ನೆಲೆತಕ್ಕೆ ಸಿಕ್ಕಿ ಸಂಪ್ರದಾಯವಾದಿಗಳ ರಾಜಕೀಯ ಅಸ್ತಿತ್ವ ಕಳಚಿಹೋಗುವುದೆಂಬ ಭಯ ಆವರಿಸಿದ ಬಳಗವೊಂದಿದೆ. ಈ ಬಳಗಕ್ಕೆ "ಸ್ವಕಲ್ಪಿತ ಪುರುಷೋತ್ತಮ" ಮೊರಾರ್ಜಿ ದೇಸಾಯಿ ಮಹಾ ಪುರೋಹಿತರಾಗಿದ್ದಾರೆ. ಸಮಾಜವಾದಿಗಳನ್ನು ಮನಸಾರೆ ದ್ವೇಷಿಸುವ ಹಳೆಯ ಕಾಂಗ್ರೆಸ್ಸಿನ ಮೊರಾರ್ಜಿ ಬಳಗ ಕಳೆದ ಎರಡು ವರ್ಷಗಳಿಂದ ಚಂದ್ರಶೇಖರ್ ವಿರುದ್ಧ ಪಿತೂರಿ ಮಾಡುತ್ತಲೇ ಬಂದಿದೆ. ಇವರ ಈ ಪಿತೂರಿಗೆ ದೆಹಲಿಯ ಪತ್ರಕರ್ತರ ಕಾಣಿಕೆ ದೊಡ್ಡ ಪ್ರಮಾಣದಲ್ಲಿ ಸಂದಿದೆ. ಚಂದ್ರಶೇಖರ್‌ಗೆ ಜನತಾ ಅಧ್ಯಕ್ಷರಾಗಿ ಮುಂದುವರಿವ ಮನಸ್ಸಿಲ್ಲವೆಂಬುದನ್ನು ಈ "ಮೇಧಾವಿ" ಪತ್ರಕರ್ತರು ಸಾರಿ ಹೇಳುತ್ತಲೇ ಬಂದಿದ್ದರು. ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರಿಗೆ ಆ ಪಟ್ಟವನ್ನೂ ಕಟ್ಟಿದ್ದರು.

ಒಬ್ಬ ಠಾಕೂರ್ ಜನಾಂಗಕ್ಕೆ ಸೇರಿದ ಚಂದ್ರಶೇಖರ್ ರಾಷ್ಟ್ರೀಯ ಪಕ್ಷವೊಂದರ ಅಧ್ಯಕ್ಷನಾಗಿರುವುದು ದೆಹಲಿ ಪತ್ರಕರ್ತರ ಕೂಟಕ್ಕೆ ಹಿಡಿಸದ ವಿಚಾರ. ರಾಷ್ಟ್ರೀಯ ನಾಯಕತ್ವಕ್ಕೆ ಬೇಕಾದ ಜಾಣ್ಮೆ ಮೇಧಾ ಶಕ್ತಿ ರಾಮಕೃಷ್ಣ ಹೆಗಡೆಯವರಲ್ಲಿ ಮೇಳೈಸಿದೆಯೆಂಬ ಚಿತ್ರವನ್ನು ಇವರು ಸುಂದರವಾಗಿ ಬಿಡಿಸಿದ್ದರು. ಚಂದ್ರಶೇಖರ್ ಅಧ್ಯಕ್ಷ ಪದ ತ್ಯಜಿಸುವುದಾಗಿ ಸಾರಿ ಹೇಳಲು ಹತ್ತು ವರ್ಷಗಳಿಂದ ಹೊತ್ತ ಭಾರವನ್ನು ಕೆಳಗಿಳಿಸಬೇಕೆಂಬ ಬಯಕೆಗಿಂತ ಹಳೆಯ ಕಾಂಗ್ರೆಸ್ಸಿಗರ ಸಣ್ಣತನ ಮತ್ತು "ಪತ್ರಕರ್ತ ಪಿಶಾಚಿಗಳ" ಕಾಟದಿಂದ ರೋಸಿಹೋಗಿರುವುದೇ ಕಾರಣವೆನ್ನಬಹುದು.

ಬೇರೆಲ್ಲರನ್ನೂ ಮೂದಲಿಸುವುದೇ ತನ್ನ ದೊಡ್ಡಸ್ತಿಕೆಯೆಂದು ತಿಳಿದುಕೊಂಡು, 90ರ ಗಡುವಿನಲ್ಲೂ ಇನ್ನೊಮ್ಮೆ ಪ್ರಧಾನಿಯಾಗುವ ಹೊಂಗನಸು ಕಾಣುತ್ತಿರುವ ಮೊರಾರ್ಜಿ ದೇಸಾಯಿ ಜನತಾ ಅಧ್ಯಕ್ಷರಾಗಿ ಚಂದ್ರಶೇಖರ್ ಪುನರಾಯ್ಕೆಯಿಂದ ಬಹಳ ನೊಂದಿರಬಹುದು. ಇತಿಹಾಸದ ಕಸದ ಬುಟ್ಟಿಗೆ ಸೇರುತ್ತಿರುವ ಮೊರಾರ್ಜಿ ದೇಸಾಯಿ ಮತ್ತವರ ಅನುಯಾಯಿಗಳಿಗೆ ಇದರಿಂದ ಆಘಾತವಾಗಿರಬಹುದು.

ಅಧ್ಯಕ್ಷರ ಆಯ್ಕೆಯ ಕೊನೆಗಳಿಗೆಯಲ್ಲಿ ನಾಟಕೀಯವಾಗಿ "ಅಗ್ನಿವೇಶ" ತಾಳಿದ ಈ ಮೊರಾರ್ಜಿ ಬಳಗದ ಮುಖಕ್ಕೆ ಚುನಾವಣಾ ಫಲಿತಾಂಶ ಸರಿಯಾಗಿ ಮಸಿ ಬಳಿದಿದೆ. ಇವರು ಛೂ ಬಿಟ್ಟ "ಅಗ್ನಿವೇಶ" ಪುಸ್ಸೆಂದು ಹೊಗೆ ಕಾರಿತೇ ಹೊರತು ಬೆಂಕಿಯಾಗಿ ಉರಿಯಲಿಲ್ಲ.

ಒಟ್ಟಿನಲ್ಲಿ ಈ ಚುನಾವಣೆ ಚಂದ್ರಶೇಖರ್ ಅವರ ಅಪ್ಪಟ ವ್ಯಕ್ತಿತ್ವಕ್ಕೆ ಬೆಲೆ ಬರಿಸಿದೆ. ಅವರ ಸಮಾಜವಾದಿ ಸಿದ್ಧಾಂತಕ್ಕೆ ಒಂದು ನಿಶ್ಚಿತ ನೆಲೆಯನ್ನು ದೊರಕಿಸಿದೆ. ಜನತಾ ಪಕ್ಷದಲ್ಲಿ ಇನ್ನೂ ಸಚೇತನವಾಗಿ ಇದೆಯೆನ್ನಲಾದ ಪುರೋಗಾಮಿ ಪ್ರಜ್ಞೆಗೆ ಸಾಕ್ಷಿಯನ್ನೊದಗಿಸಿದೆ. ಅಂದ ಮಾತ್ರಕ್ಕೆ ಈ ಚುನಾವಣೆ ಜನತಾ ಪಕ್ಷವನ್ನು ಒಂದು ಅಪ್ಪಟ ಸಮಾಜವಾದಿ ಶಕ್ತಿಯಾಗಿ ಮಾರ್ಪಡಿಸಿತೆಂದು ನಾವು ಹೇಳುತ್ತಿಲ್ಲ.

ಕೀಟಲೆ ರಾಜಕೀಯದಲ್ಲಿ, ಚಿಲ್ಲರೆ ತಂತ್ರಗಾರಿಕೆಯಲ್ಲಿ ನಿಷ್ಣಾತರಾದ "ಹಳೆಯ ಕಾಂಗ್ರೆಸ್ ಹೆಗ್ಗಣಗಳ" ಸಂಖ್ಯೆ ಜನತಾ ಪಕ್ಷದಲ್ಲಿ ಇನ್ನೂ ಸಾಕಷ್ಟಿದೆ. ಸ್ವಹಿತದ ಗುಹೆಗಳನ್ನು ಕೊರೆದು ಮನೆ ಕೆಡಹುವ ಸಾಮರ್ಥ್ಯ ಈ ಹೆಗ್ಗಣಗಳಿಗಿದೆ. ಮುಂದಿನ ದಿನಗಳಲ್ಲಿ ಪಕ್ಷವನ್ನು ಸಾಮಾಜಿಕ-ಆರ್ಥಿಕ ಪರಿವರ್ತನೆಯ ಹರಿಕಾರನಾಗಿ ಕಟ್ಟುವ ಕಾರ್ಯಕ್ಕಿಂತ ಹೆಚ್ಚಾಗಿ "ಹೆಗ್ಗಣಗಳು" ತೋಡಿದ ಮೋಳೆ ಮುಚ್ಚುವ ಕೆಲಸವೇ ಅವರಿಗೆ ದೊಡ್ಡದಾಗುವ ಅಪಾಯವಿದೆ.

ಈ ಪರಿಸ್ಥಿತಿಯಲ್ಲಿ ಭವಿಷ್ಯದ ಬಗ್ಗೆ ಆಸೆಯ ಕಣ್ಣಿಡಲು ಕಾರಣವಾದ ಒಂದು ಅಂಶವೆಂದರೆ, ಚಂದ್ರಶೇಖರ್‌ಗೆ ಬಲಕೊಡಬಲ್ಲ ಬುದ್ಧಿಜೀವಿಗಳು, ಪ್ರಾಮಾಣಿಕರು ಹಾಗೂ ಸಮಾಜವಾದಿ ಹೋರಾಟಗಾರರ ಸಂಖ್ಯೆ ಆ ಪಕ್ಷದಲ್ಲಿ ಸಾಕಷ್ಟಿದೆ. ಅವರ ಕೈ ಈಗ ಮೇಲಾಗಿದೆ.

ರಾಷ್ಟ್ರೀಯ ಪರ್ಯಾಯ ಪಕ್ಷವಾಗಿ ಬೆಳೆಯಬೇಕೆಂಬ ಆಸೆ ಹೊತ್ತ ರಾಜಕೀಯ ಪಕ್ಷವೊಂದಕ್ಕೆ ಆದರ್ಶ ನಾಯಕತ್ವವೆನ್ನಬಹುದಾದ ಎಲ್ಲ ಗುಣಗಳೂ ಚಂದ್ರಶೇಖರ್ ಅವರಲ್ಲಿದೆ. ಜನಪರವಾದ ಚಿಂತನೆಯಲ್ಲಿ ಚಂದ್ರಶೇಖರ್ ಅವರಷ್ಟು ತಲ್ಲೀನರಾದ ರಾಜಕಾರಣಿ ಇಂದಿನ ತಲೆಮಾರಿನಲ್ಲಿ ಇನ್ನೊಬ್ಬರಿಲ್ಲವೆನ್ನಬಹುದು. ಸರಳತೆ-ಸಜ್ಜನಿಕೆ-ಪ್ರಾಮಾಣಿಕತೆ ಅಪರೂಪದ ವಸ್ತುಗಳಾಗಿರುವ ಇಂದಿನ ರಾಜಕಾರಣಿಗಳ ಸಮೂಹದಲ್ಲಿ ಚಂದ್ರಶೇಖರ್ ಎದ್ದು ಕಾಣುವ
ನಾಯಕತ್ವವನ್ನು ಮುಂದುವರಿಸ
ಜನತಾ ಪಕ್ಷಕ್ಕೆ ಬಹು ದೊಡ್ಡ ಲಾ

ಮುಂಗಾರು

ಶುಕ್ರವಾರ, ಮೇ 2, 1986

ರೋಗ ಮೂಲಕ್ಕೆ ಮದ್ದು ಮಾಡಿ

ಸಿಕ್ಖರ ಪರಮಪವಿತ್ರ ಕ್ಷೇತ್ರವಾದ ಅಮೃತಸರದ ಸ್ವರ್ಣದೇವಾಲಯದೊಳಗೆ ಮತ್ತೆ ಪೊಲೀಸರೂ ಸೈನಿಕರೂ ಪ್ರವೇಶಿಸಿ ಕಾರ್ಯಾಚರಣೆ ನಡೆಸಿದ್ದಾರೆ. ಅನೇಕ ಮಂದಿಯನ್ನು ಬಂಧಿಸಲಾಗಿದೆ. ಸಾವುನೋವುಗಳಾದ ವರದಿಯೂ ಇದೆ.

ಐವರು-ಉಗ್ರಗಾಮಿಗಳಿರುವ ಪಂಥೀಯ ಸಮಿತಿಯು ಖಲಿಸ್ತಾನ ದೇಶದ ಸ್ಥಾಪನೆಯನ್ನು ಸ್ವರ್ಣದೇವಾಲಯದಿಂದ ಘೋಷಿಸಿರುವುದೇ ಪಂಜಾಬಿನ ಅಕಾಲಿದಳ ಸರಕಾರವು ಈ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾರಣವಾಯಿತು. ಪಂಥೀಯ ಸಮಿತಿಯನ್ನು ಈ ವರ್ಷದ ಜನವರಿ 26ರಂದು ಸ್ವರ್ಣಮಂದಿರದಲ್ಲಿ ಜರಗಿದ ಸರ್ಬತ್ ಖಾಲ್ಸಾ ನೇಮಿಸಿತ್ತೆನ್ನಲಾಗಿದೆ. ಈ ಸಮಿತಿಯಲ್ಲಿ ಒಳಗೊಂಡವರಲ್ಲಿ ಮೂವರು ಕೊಲೆ ಪ್ರಕರಣಗಳೂ ಸೇರಿದಂತೆ ಅನೇಕ ದುಷ್ಕರ್ಮಗಳಲ್ಲಿ ಪೊಲೀಸರಿಗೆ ಬೇಕಾದವರು. ಸದ್ಯವೇ ಖಲಿಸ್ತಾನ ಸರಕಾರವನ್ನು ಸ್ವರ್ಣದೇವಾಲಯದಲ್ಲಿ ರಚಿಸುವುದಾಗಿಯೂ ಪಂಥೀಯ ಸಮಿತಿಯು ಪ್ರಕಟಿಸಿತ್ತು. ದೆಹಲಿಯೇ ಖಲಿಸ್ತಾನದ ರಾಜಧಾನಿಯಾಗಿರುವುದೆಂದೂ ಅದು ಸಾರಿತ್ತು.

ಇದೊಂದು ಪ್ರತ್ಯೇಕತಾವಾದಿ ಪಂಥಾಹ್ವಾನವೆಂದು ಅಕಾಲಿದಳ ಸರಕಾರದ ಮುಖ್ಯಮಂತ್ರಿ ಸುರ್ಜಿತ್‌ಸಿಂಗ್ ಬರ್ನಾಲಾ ವರ್ಣಿಸಿದ್ದಾರೆ. ಇದನ್ನು ಸಂಪೂರ್ಣವಾಗಿ ಎದುರಿಸಬೇಕೆಂದು ಅವರು ಹೇಳಿದ್ದಾರೆ. ಈ ಮಾತನ್ನು ಕೃತಿಯಲ್ಲಿಯೂ ತೋರಿಸಿದ್ದಾರೆ.

ಭಾರತ ಸರಕಾರಕ್ಕೆದುರಾಗಿ ನಡೆಯುತ್ತಿರುವ ಸಿಕ್ಖರ ಹೋರಾಟ ದಾರಿತಪ್ಪಿದೆ ಎಂಬುದು ಸ್ಪಷ್ಟ. ಒಂದನೆಯದ್ದಾಗಿ ಈ ಮಂದಿ ಪ್ರತ್ಯೇಕ ದೇಶವನ್ನು ಕೇಳುತ್ತಿದ್ದಾರೆ. ಅದನ್ನು ಬಲಪ್ರಯೋಗದಿಂದ ಕಿತ್ತುಕೊಳ್ಳಲು ಮುಂದಾಗಿದ್ದಾರೆ. ಅದಕ್ಕಾಗಿ ಯಾವ [illegible] ಕೃತ್ಯಗಳನ್ನು ಮಾಡಲು ತಯಾರಾಗಿದ್ದಾರೆ. ಹೋರಾಟದ ದಾರಿಗಿಂತಲೂ ಅವರ ಗುರಿ ಅವರಿಗೆ ಮುಖ್ಯವಾಗಿದೆ. ಎರಡನೆಯದ್ದಾಗಿ ಧರ್ಮವನ್ನೂ ಆಳ್ವಿಕೆಯನ್ನೂ ಅವರು ಪರಸ್ಪರ ತಳಕು ಹಾಕುತ್ತಿದ್ದಾರೆ. ಧಾರ್ಮಿಕ ಪುನರುತ್ಥಾನವಾದಿಗಳಾದ ಈ ಜನ ಸರಕಾರವು ಧಾರ್ಮಿಕ ತತ್ವಗಳ ನೆಲೆಯಲ್ಲಿ ನಡೆಯಬೇಕು ಎಂಬ ಧೋರಣೆ ವಹಿಸಿದ್ದವರು. ಆದ್ದರಿಂದಲೇ ಸಹಜವಾಗಿ ತಮ್ಮ ಹೋರಾಟಕ್ಕೆ ಧರ್ಮದ ನೆಲೆಯನ್ನು ಕಂಡುಕೊಂಡಿದ್ದಾರೆ. ಧಾರ್ಮಿಕ ಕೇಂದ್ರಗಳಲ್ಲಿ ಆಶ್ರಯ ಪಡೆದಿದ್ದಾರೆ. ದೇವಾಲಯವನ್ನು ಶಸ್ತ್ರಾಲಯವನ್ನಾಗಿ ಪರಿವರ್ತಿಸಿದ್ದಾರೆ.

ಸಿಕ್ಖರ ಬೇಡಿಕೆಗಳು ಈ ದೇಶದ ಆಳ್ವಿಕೆ ವ್ಯವಸ್ಥೆಯ ಬಗ್ಗೆ ಹಲವು ಮಹತ್ವದ ಪ್ರಶ್ನೆಗಳನ್ನೆತ್ತಿದ್ದುವು. ಆದರೆ ಅವರ ಹೋರಾಟ ಇಂದು ದಾರಿ ತಪ್ಪಿದೆ. ಹೀಗೆ ದಾರಿ ತಪ್ಪುವುದಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಸರಕಾರ ಈ ಆಂದೋಲನವನ್ನು ನಡೆಸಿಕೊಂಡ ವಿಧಾನವೂ ಒಂದು.

ಇಂದು ಮಾತ್ರ ಸಿಕ್ಖರ ಆಂದೋಲನದ ಒಂದು ವಿಭಾಗ ದೇಶದ್ರೋಹಿಯಾಗಿ ಪರಿಣಮಿಸಿದೆ. ಅದನ್ನು ಸೂಕ್ತವಾಗಿ ಎದುರಿಸಬೇಕು. ಸರಕಾರ ಅದನ್ನು ಮಾಡುತ್ತಿದೆ. ಈ ಹೆಜ್ಜೆಗೆ ಸಮಾಜದ ಎಲ್ಲಾ ವಿಭಾಗಗಳ ಬೆಂಬಲವಿದೆ. ಈ ದೇಶವನ್ನು ಒಂದಾಗಿ ಉಳಿಸಿಕೊಳ್ಳಬೇಕೆಂಬ ವಿಚಾರದಲ್ಲಿ ಸಹಮತವಿರುವ ಎಲ್ಲರೂ ಅದನ್ನು ಬೆಂಬಲಿಸಲೇಬೇಕಾಗುತ್ತದೆ.

ಇದು ಮಿಲಿಟರಿ ಹಾಗೂ ಪೊಲೀಸ್ ಕಾರ್ಯಾಚರಣೆಯ ಪ್ರಶ್ನೆಯಾಯಿತು. ಭಯೋತ್ಪಾದಕರನ್ನು ಮಟ್ಟ ಹಾಕುವ ವಿಚಾರವಾಯಿತು. ಹೋರಾಟವನ್ನು ರಾಜಕೀಯ ನೆಲೆಯಲ್ಲಿ ಎದುರಿಸುವ ವಿಚಾರ ಪ್ರತ್ಯೇಕವೇ ಉಂಟು. ಪಂಜಾಬು ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಕೊಳ್ಳದೆ ಇದ್ದರೆ ಇಂದು ಕೆಲವೇ ಕೆಲವು ಮಂದಿ ಇರುವ ಭಯೋತ್ಪಾದಕರ, ಸಿಕ್ಖ್ ಉಗ್ರಗಾಮಿಗಳ ಸಂಖ್ಯೆ ಬ್ರಹ್ಮಾಂಡವಾಗಿ ಬೆಳೆದೀತು. ಈ ಹೋರಾಟದಲ್ಲಿ ಅಕಾಲಿದಳ ಸರಕಾರವೂ ಪಕ್ಷವೂ ಕೊಚ್ಚಿ ಹೋದೀತು. ಅಕಾಲಿದಳಕ್ಕೆ ಮತಹಾಕಿ ಈ ದೇಶದ ಒಳಗೆಯೇ ಉಳಿಯಲು ನಿರ್ಧರಿಸಿರುವ ಬಹುಸಂಖ್ಯಾತ ಸಿಕ್ಖರನ್ನು ಹಾಗೆ ಉಳಿಸಿಕೊಳ್ಳುವುದು ಭಾರತ ಸರಕಾರಕ್ಕೂ ಈ ದೇಶದ ಜನ ಸಮುದಾಯಕ್ಕೂ ಸಾಧ್ಯವಾಗಲಾರದು.

ರಾಜಕೀಯ ಪರಿಹಾರ ವ್ಯಾಪಕವಾಗಿರಬೇಕು. ಅದು ರಾಜೀವ-ಲೋಂಗೋವಾಲ ಒಡಂಬಡಿಕೆಯ ಅನುಷ್ಠಾನಕ್ಕೆ ನಿಂತು ಬಿಡಬಾರದು. ಅದಕ್ಕಿಂತಲೂ ಮುಂದೆ ಹೋಗಬೇಕು.

ಪಂಜಾಬು ಆಂದೋಲನ ಎತ್ತಿದ ಪ್ರಶ್ನೆಗಳು ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಪಟ್ಟದ್ದು. ಈ ಆಶಯವನ್ನು ಈಡೇರಿಸುವುದಕ್ಕೆ ಸೂಕ್ತವೂ ಸಮರ್ಥವೂ ಆದ ಕ್ರಮಗಳನ್ನು ತೆಗೆದುಕೊಳ್ಳದ ವಿನಹ ಈ ಆಂದೋಲನದ ಬೆಂಕಿಯನ್ನು ನಂದಿಸುವುದು ಹಾಗೂ ಅದರ ಹರಡುವಿಕೆಯನ್ನು ತಡೆಯುವುದು ಅಸಾಧ್ಯ. ಸಿಕ್ಖ್ ಆಂದೋಲನದ ಮೂಲವು ಆರ್ಥಿಕ ಶೋಷಣೆಯಲ್ಲಿದೆ. ಗ್ರಾಮೀಣ ಸಿಕ್ಖ್ ರೈತರನ್ನು ಪೇಟೆಯ ಉಚ್ಚವರ್ಗದ ಹಿಂದುಗಳು ಹೀರಿ ಹಿಂಡಿ ಹಿಪ್ಪೆಮಾಡುತ್ತಿರುವ ಸಾಮಾಜಿಕ ವಿಕೃತಿಯಲ್ಲಿದೆ. ಈ ವಿದ್ಯಮಾನದ ನಿವಾರಣೆಗೆ ಸೂಕ್ತ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳ ಅನುಷ್ಠಾನಬೇಕು. ಇದಕ್ಕೆಲ್ಲ ರಾಜಕೀಯ ಇಚ್ಛಾಶಕ್ತಿ ಬೇಕು. ಇಂದು ಅಂಥ ಸಾಮರ್ಥ್ಯ ನಮ್ಮನ್ನಾಳುವವರಿಗೆ ಉಂಟೆ? ಅದರ ಮೇಲೆ ಎಲ್ಲವೂ ತೀರ್ಮಾನವಾಗುತ್ತದೆ.

ಮುಂಗಾರು ಮೇ. 3. 1986 ಪುಟ ನಾಲ್ಕು

ಮುಂಗಾರು

ಶನಿವಾರ, ಮೇ 3, 1986

ಚಿಲ್ಲರೆ ಚಳವಳಿ ಬೇಡ!

ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ರಾಜೀನಾಮೆಗೆ ಒತ್ತಾಯಿಸಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಚಳವಳಿ ಮಾಡಿದೆ. ಹತ್ತು ದಿನಗಳ ಕಾಲ ನಡೆದ ಈ ಚಳವಳಿ ಮೊದಲ ಹಂತದ್ದೆಂದು ಹೇಳಲಾಗಿದೆ. ಎರಡನೆಯ ಹಂತದ ಚಳವಳಿಯನ್ನು ಇನ್ನು ಕೆಲವೇ ದಿನಗಳಲ್ಲಿ ತೀರ್ಮಾನಿಸುವುದಾಗಿ ಘೋಷಿಸಲಾಗಿದೆ.

ಈ ಚಳವಳಿಯ ನೇತಾರರಾಗಿ ಕೆಲಸ ಮಾಡಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಆಸ್ಕರ್ ಫೆರ್ನಾಂಡಿಸ್ ತಮ್ಮ ಚಳವಳಿ ಅದ್ಭುತ ಯಶಸ್ಸು ಪಡೆಯಿತೆಂದು ಎದೆಯುಬ್ಬಿ ಹೇಳಿದ್ದಾರೆ.

ಕಾಂಗ್ರೆಸ್ ಜನರು ನಡೆಸಿದ ಈ ಚಳವಳಿ ಯಶಸ್ವಿಯಾಯಿತೇ? ಅಥವಾ ಇಲ್ಲವೇ? ಎನ್ನುವುದು ನಮ್ಮ ದೃಷ್ಟಿಯಲ್ಲಿ ಗೌಣ ವಿಚಾರ.ಆದರೆ ಇದರ ಪರಿಣಾಮಗಳೇನು?- ಎನ್ನುವುದು ಒಂದು ಪ್ರಸ್ತುತ ಪ್ರಶ್ನೆಯಾಗಿ ಎದ್ದು ಬರುತ್ತದೆ.

ಇದು ಎಳೆ- ಎಳೆಯಾಗಿ ಬಿಡಿಸಿ ಇಡಬೇಕಾದ ಪ್ರಶ್ನೆ. ಒಂದು ಜನತಂತ್ರ ವ್ಯವಸ್ಥೆಯಲ್ಲಿ ಸಂಘಟಿತ ಪ್ರಜಾವರ್ಗ ತನ್ನ ಬೇಡಿಕೆಗಳ ಈಡೇರಿಕೆಗಾಗಿ ಅಥವಾ ಆದ ಅನ್ಯಾಯವನ್ನು ಪ್ರತಿಭಟಿಸಲು ಚಳವಳಿ ಮಾಡಬಹುದು. ಒಂದು ದುರ್ಬಲ ಸಮಾಜದಲ್ಲಿ ಸರ್ವಶಕ್ತವಾದ ಸರಕಾರದ ವಿರುದ್ಧ ಸಂಘಟಿತ ಜನವರ್ಗ ಇಂತಹ ಚಳವಳಿ ಹೂಡಬೇಕಾಗಿ ಬರಬಹುದು. ಆ ಮೂಲಕ ಜನರ ಸಮಸ್ಯೆಯ ಮೇಲೆ ಬೆಳಕು ಚೆಲ್ಲಿ- ಸರಕಾರದ ಕಣ್ಣು ತೆರೆಯಿಸಿ- ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಬಹುದು.

ಆಳುವ ಪಕ್ಷವೊಂದರ ಧ್ಯೇಯ-ಧೋರಣೆಗಳನ್ನು ಶಾಶ್ವತ ನೆಲೆಯಲ್ಲಿ ವಿರೋಧಿಸಿ, ರಾಜಕೀಯಕ್ಕೆ ಹೊಸತೊಂದು ಶಾಶ್ವತ ನೆಲೆ ಒದಗಿಸುವ ಉದ್ದೇಶವಿದ್ದ ರಾಜಕೀಯ ಪಕ್ಷವೊಂದು ಚಳವಳಿ ನಡೆಸಲು ಜನತಂತ್ರದಲ್ಲಿ ಅವಕಾಶವಿದೆ.

ಬಾಟ್ಲಿಂಗ್ ಹಗರಣದಲ್ಲಿ ರಾಮಕೃಷ್ಣ ಹೆಗಡೆಯವರ ಸರಕಾರದ ಮೌಲ್ಯಾಧಾರದ ಮಾತುಗಳೆಲ್ಲಾ ಮಣ್ಣು ಮುಕ್ಕಿವೆಯೆಂಬುದನ್ನು ವಿಚಾರವಂತ ಜನರೆಲ್ಲ ಒಪ್ಪಿಕೊಂಡಿದ್ದಾರೆ. ಎಲ್ಲರಿಗೂ ಎದ್ದು ಕಾಣುವ ಅಥವಾ ಮೇಲ್ನೋಟದಲ್ಲೇ ಸಾಬೀತಾಗಿರುವ ಬಾಟ್ಲಿಂಗ್ ಹಗರಣದಿಂದಾಗಿ ಈ ರಾಜ್ಯವನ್ನಾಳುವ [illegible] ಹಕ್ಕನ್ನು ಹೆಗಡೆ ಕಳಕೊಂಡಿರುವರೆಂಬುದನ್ನು ನಾವು ನಿಷ್ಠುರವಾಗಿ ಹೇಳಿದ್ದೆವು. ನಾಡಿನ ಇನ್ನೂ ಕೆಲವು ಪತ್ರಿಕೆಗಳು ಇದನ್ನೇ ಹೇಳಿದ್ದವು. ಇದರ ಬಿಸಿ ಅವರಿಗೂ ಮುಟ್ಟಿತ್ತು. ಅದಕ್ಕಾಗಿಯೇ ಒಮ್ಮೆ ರಾಜೀನಾಮೆ ಕೊಟ್ಟಿದ್ದರು. ಒಂದು ವಿಲಕ್ಷಣ ರಾಜಕೀಯ ಕಾರಣದಿಂದಾಗಿ ಮತ್ತೆ ಅಧಿಕಾರಕ್ಕೆ ಬಂದಿದ್ದಾರೆ. ಈ ದೃಷ್ಟಿಯಿಂದ ಮುಖ್ಯಮಂತ್ರಿಯಾಗಿ ರಾಮಕೃಷ್ಣ ಹೆಗಡೆಯವರ ಮುಂದುವರಿಕೆ ಒಂದು ರಾಜಕೀಯ ಪ್ರಶ್ನೆಯಾಗಿ ಉಳಿಯುತ್ತದೆ.

ಕಾಂಗ್ರೆಸ್ ಪಕ್ಷಕ್ಕೆ ಹೆಗಡೆಯವರಿಗಿಲ್ಲದ ನೈತಿಕ ನೆಲೆಗಟ್ಟು ಇರುವುದಾಗಿದ್ದರೆ, ಅದು ಇದನ್ನೊಂದು ರಾಜಕೀಯ ಸವಾಲಾಗಿ ಅಂಗೀಕರಿಸಬೇಕಿತ್ತೇ ಹೊರತು ಚಳವಳಿಯಂತಹ ಅಗ್ಗದ ಆವುಟಕ್ಕಿಳಿಯಬಾರದಿತ್ತು. ಈ ಚಳವಳಿಯ ಮೂಲಕ ಹೆಗಡೆ ವಿರುದ್ಧ ಸಾರ್ವಜನಿಕ ಅಭಿಪ್ರಾಯ ರೂಪಿಸಲು ತನ್ನಿಂದ ಸಾಧ್ಯವೆಂದು ಕಾಂಗ್ರೆಸ್ ಪಕ್ಷ ತಿಳಿದುಕೊಂಡಿದ್ದರೆ ಅದು ದೊಡ್ಡ ತಪ್ಪು.

ಹತ್ತಾರು ವರ್ಷಗಳ ಕಾಲ ಅಧಿಕಾರ ಸ್ಥಾನಗಳಲ್ಲಿ ಮೆರೆದಾಡಿ - ಮೆಂದು-ಮೆದ್ದು [illegible] ಬೆಳೆಸಿಕೊಂಡ ಕಾಂಗ್ರೆಸ್ ಜನರು ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆ ಅಥವಾ ನೈತಿಕತೆಯ ಮಾತನಾಡಿದರೆ ಜನ ನಗುವರೇ ಹೊರತು ಮತ್ತೇನು ಇಲ್ಲ. ಕಾಂಗ್ರೆಸ್ ಪಕ್ಷ ವಿಧಾನ ಮಂಡಲದಲ್ಲಿ ಹೆಗಡೆ ವಿರುದ್ಧ ಬಾಟ್ಲಿಂಗ್ ಹಗರಣದ ಅಸ್ತ್ರ ಬಿಟ್ಟು ಹೆಜ್ಜೆ-ಹೆಜ್ಜೆಗೂ ಸೋತಿದೆ. ಈ ಕಾಂಗ್ರೆಸ್ ಜನರ ಹಳೆಯ ಸಂಗಾತಿಯಾದ ಹೆಗಡೆಯವರಿಗೆ ಇವರ ಬತ್ತಳಿಕೆಯಲ್ಲಿ ನೈತಿಕತೆಯ ಅಸ್ತ್ರ ಬರಿ

ಸರಕಾರ ನಡೆಸುತ್ತಿರುವ ರಾಜಕೀಯ ಪಕ್ಷವೊಂದು ಪೂರ್ಣಜನ ವಿರೋಧಿಯಾಗಿ ಮಾರ್ಪಟ್ಟು, ನಾಗರಿಕರ ಸ್ವಾತಂತ್ರ್ಯವನ್ನು ಅಪಹರಿಸಿ, ಅವರ ಮೇಲೆ ನಿತ್ಯ ದಬ್ಬಾಳಿಕೆ ನಡೆಸುವ ಸ್ಥಿತಿಯಲ್ಲಿ ಅಸಹಾಯಕರಾಗಿ ಹಿಂಸೆ ಪಡುವ ಸನ್ನಿವೇಶದಲ್ಲಿ (1975ರಲ್ಲಿ ಆದಂತೆ) ರಾಜಕೀಯ ಪಕ್ಷವೊಂದು ಜನ ಪರವಾಗಿ ನಿಂತು ಸರಕಾರದ ವಿರುದ್ಧ ಚಳವಳಿ ಹೂಡುವುದಕ್ಕೆ ಸಮರ್ಥನೆ ಇದೆ. ಅಥವಾ ಸರಕಾರದ ಹೊಲಸು ಕೃತ್ಯಗಳ ಕೊಡ ತುಂಬಿ ಗಬ್ಬು ವಾಸನೆ ಬೀರಲಾರಂಭಿಸಿದಾಗ ಜನ ರೋಸಿ ಹೋಗಿದ್ದರೆ ಇಂತಹ ಜನರ ಭಾವನೆಗಳಿಗೆ ರಾಜಕೀಯ ರೂಪ ಕೊಡಲು ನಡೆಸುವ ಚಳವಳಿಗೂ ಒಂದು ಅರ್ಥವಿದೆ.

ಆದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಹೆಗಡೆ ವಿರುದ್ಧ ನಡೆಸಿದ ಮೊದಲ ಹಂತದ ಚಳವಳಿ ಅಥವಾ ಮುಂದೆ ಅದು ತೀವ್ರಗೊಳಿಸಲಿರುವ ಚಳವಳಿಗೆ ಒಂದು ತರ್ಕಬದ್ಧವಾದ ವೈಚಾರಿಕ ಹಿನ್ನೆಲೆ ಇದ್ದ ಹಾಗೆ ಕಾಣುವುದಿಲ್ಲ. ಇವರ ಚಳವಳಿ ರಾಜ್ಯದಲ್ಲಿ ಬರ ಪರಿಹಾರ ಕಾರ್ಯ, ಆಡಳಿತದ ವೈಫಲ್ಯದ ವಿರುದ್ಧವಾಗಿದ್ದರೆ ಅದಕ್ಕೊಂದು ಅರ್ಥವಿತ್ತು. ಚಳವಳಿಯ ಕಾಲದಲ್ಲಿ ಕಾಂಗ್ರೆಸ್ ಜನರು ಈ ವಿಚಾರಕ್ಕೆ ಎಲ್ಲಿಯೂ ಒತ್ತು ಕೊಟ್ಟಂತೆ ಕಾಣುವುದಿಲ್ಲ. "ಸಾರಾಯಿ ಬಾಟ್ಲಿಂಗ್ ಹಗರಣದಲ್ಲಿ ಸುಪ್ರೀಂ ಕೋರ್ಟ್ ಹೆಗಡೆ ಸರಕಾರಕ್ಕೆ ವಾಗ್ದಂಡನೆ ಮಾಡಿದೆ. ಆದ್ದರಿಂದ ಈ ಸರಕಾರ ತೊಲಗಬೇಕು" ಎಂಬುದು ಚಳವಳಿಯಲ್ಲಿ ಒತ್ತುಕೊಟ್ಟ ವಿಚಾರ ಜೋರಾಗಿ ಕೇಳಿಬಂದ ಮಾತು. ಬರಪರಿಹಾರ ಅಥವಾ ಆಡಳಿತದ ಇತರ ವೈಫಲ್ಯಗಳ ಮಾತು ಪ್ರಾಸಂಗಿಕವಾಗಿ ಅಲ್ಲಲ್ಲಿ ಕೇಳಿ ಬಂದಿರಬಹುದು. ಈ ದೃಷ್ಟಿಯಿಂದ ಕಾಂಗ್ರೆಸ್ ಚಳವಳಿಗೆ "ಹೆಗಡೆ ಹಟಾವೊ" ಉದ್ದೇಶದ ಪ್ರತಿಮೆ ಬಂದಿದೆ.

ದಾಗಿರುವುದು ಸರಿಯಾಗಿ ಗೊತ್ತಿದೆ.

ಸಂಸದೀಯ ಸದನಗಳಲ್ಲಿ ರಾಜಕೀಯ ವಿರೋಧಿಯನ್ನು ಸೋಲಿಸಲು ಇದ್ದ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗದೆ ಒದ್ದಾಡಿದ ಈ ಕಾಂಗ್ರೆಸ್ ಪಕ್ಷ, ಜನ ಸಮೂಹವನ್ನು ಹೆಗಡೆ ವಿರುದ್ಧ ಎತ್ತಿ ಕಟ್ಟುವ ಚಳವಳಿಗೆ ಇಳಿದಿರುವುದು ಆ ಪಕ್ಷವನ್ನು ಇಂದಿಗೂ ಬಾಧಿಸುತ್ತಿರುವ ಬುದ್ಧಿ ಬಡತನಕ್ಕೆ ಸಾಕ್ಷಿಯೆನ್ನಬಹುದು.

ಬಾಟ್ಲಿಂಗ್ ಹಗರಣದಲ್ಲಿ ಹೆಗಡೆಯವರು ರಾಜಕೀಯವಾಗಿ ಗೆದ್ದರೂ ನೈತಿಕವಾಗಿ ಸೋತಿದ್ದರು. ಫೆಬ್ರವರಿಯಲ್ಲಿ ಅವರು ಒಮ್ಮೆ ರಾಜೀನಾಮೆ ಕೊಟ್ಟು ಮತ್ತೆ ಅಧಿಕಾರಕ್ಕೆ ಬಂದಾಗ ಅವರ ಪ್ರತಿಷ್ಠೆ ಕುಸಿದು ಬಿದ್ದಿತ್ತು. ಇಂತಹ ಕುಸಿತದಲ್ಲೇ ಅವರು ಇರುವಾಗ ಕಾಂಗ್ರೆಸ್ ಪಕ್ಷ ಹೆಗಡೆ ರಾಜೀನಾಮೆಗೆ ಒತ್ತಾಯಿಸುವ ಚಳವಳಿ ಮಾಡಿ ಹೆಗಡೆಯವರಿಗೆ ತುಂಬಾ ಉಪಕಾರ ಮಾಡಿದೆ.

ಕಾಂಗ್ರೆಸ್ ಪಕ್ಷದ ಚಳವಳಿ ಹೆಗಡೆಯವರಿಗೆ ಸಾರ್ವಜನಿಕ ಸಹಾನುಭೂತಿಯನ್ನು ಗಳಿಸಿಕೊಟ್ಟಿದೆ. ಅವರ ಪ್ರತಿಷ್ಠೆಯ ಪತಾಕೆ ಮೇಲಕ್ಕೆ ಏರಲಾರಂಭಿಸಿದೆ. ಜನತಾ ಪಕ್ಷದಲ್ಲಿ ಕಳಚಿ ಹೋಗುತ್ತಿದ್ದ ಹೆಗಡೆ ಬಲ ಈಗ ಕೂಡಿಕೊಳ್ಳಲಾರಂಭಿಸಿದೆ.

ಕಾಂಗ್ರೆಸ್ ಜನರಿಗೆ ರಾಜಕೀಯದ ಪ್ರಜ್ಞೆ ಅಥವಾ ಅರಿವು ಏನಾದರೂ ಇರುವುದಾದರೆ ಹೆಗಡೆ ಹಟಾವೊ ಚಳವಳಿಯನ್ನು ಮತ್ತೆ ಮುಂದುವರಿಸಬಾರದು. ನೈತಿಕತೆಯಲ್ಲಿ ಹೆಗಡೆಯವರಿಗಿಂತ ನೀವು ಭಿನ್ನರೇ, ಎಂದು ಹೇಳಬೇಕಾಗುತ್ತದೆ. ಇನ್ನಾದರೂ ನೀವು ಇಂತಹ ಚಿಲ್ಲರೆ ಚಳವಳಿಯ ಹಾದಿ ಬಿಟ್ಟು ಜನಪರವಾದ ಹೋರಾಟಕ್ಕಿಳಿವ ದಾರಿ ನೋಡಿರೆಂದು ಹೇಳಲೇಬೇಕಾಗಿದೆ.

ಮುಂಗಾರು

ಭಾನುವಾರ, ಮೇ 4, 1986

ಚೆರ್ನೋಬೈಲ್ ದುರಂತ

ರಷ್ಯದ ಉಕ್ರೇನ್ ಪ್ರಾಂತ್ಯದ ಚೆರ್ನೋಬೈಲ್‌ನಲ್ಲಿ ಪರಮಾಣು ವಿದ್ಯುತ್ ಸ್ಥಾವರವೊಂದರಲ್ಲಿ ಅಪಘಾತ ನಡೆದಿದೆ. ಸ್ಥಾವರದ ರಿಯಾಕ್ಟರ್‌ನಲ್ಲಿ ನಿಯಂತ್ರಿತ ಅಣುಸ್ಫೋಟ ನಡೆಯುವ ಪ್ರಧಾನ ಭಾಗವೇ ಸುಟ್ಟುಹೋದ ಬಗ್ಗೆ ವರದಿಗಳಿವೆ. ಈ ಅಣು ಬೆಂಕಿ ಇನ್ನೂ ನಂದಿದಂತಿಲ್ಲ. ಅಪಘಾತದಲ್ಲಿ ಸಾವು ನೋವಿಗೀಡಾದವರ ಸಂಖ್ಯೆಯ ಬಗ್ಗೆ ವಿರೋಧಾಭಾಸದ ವರದಿಗಳು ಬಂದಿವೆ. ಇಬ್ಬರು ಸತ್ತು ನೂರಾರು ಮಂದಿ ಗಾಯಗೊಂಡಿದ್ದಾರೆಂದು ರಷ್ಯದ ಸರಕಾರ ಅಧಿಕೃತವಾಗಿ ಹೇಳಿದರೆ ಸಾವಿರಾರು ಮಂದಿ ಸತ್ತು ಹೋಗಿದ್ದಾರೆಂದು ಅಮೆರಿಕದ ಮಾಧ್ಯಮಗಳು ಪ್ರಚಾರ ಮಾಡುತ್ತಿವೆ.

ಅದೇನೋ ಇರಲಿ – ಅಪಘಾತ ನಡೆದಿರುವುದಂತೂ ನಿಜ. ಅನೇಕಾರು ಸಾವು ನೋವುಗಳು ನಡೆದಿರಬಹುದು. ಇವೆಲ್ಲವೂ ಅಭಿವೃದ್ಧಿಯ ಅನಿವಾರ್ಯ ಸಂಕಟಗಳು. ಪರಮಾಣು ಶಕ್ತಿಯ ಬಳಕೆ ಸೂಕ್ತವಾಗಿ ಆದರೆ ಅದು ಮನುಕುಲಕ್ಕೊಂದು ವರದಾನ ಎಂಬುದನ್ನು ಈ ಪ್ರಪಂಚ ಮನಗಂಡಿದೆ. ಆದ್ದರಿಂದಲೇ ಪರಮಾಣು ಶಕ್ತಿಯನ್ನು ಶಾಂತಿಯುತ ಬಳಕೆಗೆ ಮಾತ್ರ ಹೂಡಬೇಕು-ಮಿಲಿಟರಿ ಉದ್ದೇಶಕ್ಕೆ ಕೂಡದು ಎನ್ನುವ ಒತ್ತಾಯವು ಮೂಡಿ ಬಂದಿದೆ. ಪರಮಾಣು ಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಹೂಡುವ ಬಗ್ಗೆ ಸಂಶೋಧನೆಗಳು ನಡೆದಿವೆ. ವಿದ್ಯುತ್ ಉತ್ಪಾದನೆ ಇವುಗಳಲ್ಲಿ ಮಹತ್ವವಾದದ್ದೂ ತುಂಬಾ ಕಾರ್ಯಸಾಧ್ಯವಾದದ್ದು ಆಗಿದೆ. ಅಣು ವಿದ್ಯುತ್ ಸ್ಥಾವರಗಳನ್ನು ಹೆಚ್ಚೆಚ್ಚು ದೇಶಗಳು ಕಟ್ಟಿಕೊಳ್ಳುತ್ತಿವೆ. ಪರಮಾಣು ಶಕ್ತಿ ತಂತ್ರಜ್ಞಾನವನ್ನು ಕರಗತ ಮಾಡಿಕೊಳ್ಳಲು ಹಾರೈಸುತ್ತಿವೆ. ಸ್ವಂತ ತಂತ್ರಜ್ಞಾನ ಇಲ್ಲದಿರುವ ದೇಶಗಳು ಅದನ್ನು ವಿದೇಶಗಳಿಂದ ತರಿಸಿಕೊಳ್ಳಲು ಹವಣಿಸುತ್ತಿವೆ. ಪರಮಾಣು ಶಕ್ತಿಯ ಮಿಲಿಟರಿ ಬಳಕೆಯನ್ನು ತಾತ್ವಿಕವಾಗಿ ವಿರೋಧಿಸುವ ದೇಶಗಳು ಕೂಡಾ ಈ ಶಕ್ತಿಯ ಶಾಂತಿಯುತ ಬಳಕೆಗೆ ವಿರೋಧ ಹೊಂದಿಲ್ಲ.

ಇಂದಿನ ಸಂದರ್ಭದಲ್ಲಿ ವಿದ್ಯುತ್ ಉತ್ಪಾದನೆಗೆ ಪರಮಾಣು ಶಕ್ತಿಯು ಭವಿಷ್ಯದ ಬಗ್ಗೆ ಭರವಸೆಯನ್ನು ಹುಟ್ಟಿಸುತ್ತಿರುವ ಮೂಲವೆನಿಸಿದೆ. ಜಲವಿದ್ಯುತ್ ಉತ್ಪಾದನೆಯ ಅವಕಾಶಗಳು ಕಮ್ಮಿಯಿವೆ. ಇದು ಎಲ್ಲರಿಗೂ ಸಲ್ಲುವಂತಹದ್ದಲ್ಲ. ಭೌಗೋಲಿಕವಾಗಿಯೂ ಹವಾಮಾನಕ್ಕನುಗುಣವಾಗಿಯೂ ಜಲವಿದ್ಯುತ್ ಉತ್ಪಾದನೆಯ ಸಾಧ್ಯತೆಗಳು ಹೆಚ್ಚು ಕಮ್ಮಿಯಾಗುತ್ತವೆ. ಪಶ್ಚಿಮಘಟ್ಟದ ಸಾಲುಗಳೇ ದೇಶದ ಎಲ್ಲೆಡೆಯೂ ಇರುವುದಿಲ್ಲ. ನೂರೈವತ್ತಂಗುಲ ವರ್ಷಕ್ಕೆ ಮಳೆ ಬೀಳುವ ತಾಣಗಳು ನಮ್ಮಲ್ಲಿ ಹೆಚ್ಚಿಲ್ಲ. ಉಷ್ಣ ವಿದ್ಯುತ್ ಸ್ಥಾವರಕ್ಕೆ ಇಂಧನವಾದ ಕಲ್ಲಿದ್ದಲಾಗಲಿ ನೈಸರ್ಗಿಕ ಅನಿಲವಾಗಲಿ ಮುಗಿಯದ ಮೂಲವಲ್ಲ. ಅಕ್ಷಯವೆನಿಸಿದ ಸೌರಶಕ್ತಿಯನ್ನಾಗಲಿ ಸಮುದ್ರದ ತೆರೆಯನ್ನಾಗಲಿ ಗಾಳಿಯ ವೇಗವನ್ನಾಗಲಿ ಯಂತ್ರಕ್ಕೆ ಬಿಗಿದು ವಿದ್ಯುತ್ ಉತ್ಪಾದಿಸುವುದೆಲ್ಲವೂ ಭವಿಷ್ಯದ ಬಸಿರಿನಿಂದ ಬರಬೇಕಾದ ಸಂಗತಿಗಳು, ಈಗ ಇವುಗಳ ಬಗ್ಗೆ ಸಂಶೋಧನೆಯೇ ಪ್ರಾಥಮಿಕ ಹಂತದಲ್ಲಿದೆ. ಇವುಗಳಿಂದ ಮನುಕುಲಕ್ಕೆ ಬೇಕಾದ ಇಂಧನವನ್ನು ಪಡೆದುಕೊಳ್ಳುವ ಕನಸನ್ನು ಕೂಡ ಕಾಣುವುದು ಈಗ ಹುಚ್ಚುತನವೆನಿಸೀತು.

ಇಂಥ ಸಂದರ್ಭದಲ್ಲಿ ಪರಮಾಣು ವಿದ್ಯುತ್ ಮಾನವ ಜನಾಂಗಕ್ಕೆ ವರದಾನವಾಗಿ ಬಂದಿದೆ. ಜತೆಗೆ ಶಾಪವಾಗಿಯೂ ಪರಿಣಮಿಸಿದೆ. ಅಪಘಾತವೇನಾದರೂ ನಡೆದರೆ ಪರಮಾಣು ವಿಷವು ಜನರನ್ನು ಕೊಲ್ಲುವುದಲ್ಲದೆ ರೋಗಗಳಿಗೂ ಕಾರಣವಾಗಿ ಜನ ಸಮುದಾಯ ನರಳಿ ಸಾಯುವಂತಾಗುತ್ತದೆ. ಮುಂದಿನ ಪೀಳಿಗೆಗಳಿಗೆ ಗುಣವಾಗದ ರೋಗಗಳು ಬಡಿಯುತ್ತವೆ. ಮಕ್ಕಳು ಅಂಗವಿಕಲರಾಗಿ ಹುಟ್ಟುತ್ತವೆ. ಪರಮಾಣು ರಿಯಾಕ್ಟರ್‌ನ ಭಸ್ಮವು ಸಾವಿರಾರು ವರ್ಷ ವಾತಾವರಣದಲ್ಲಿ ಕರಗದೆ, ಮಣ್ಣಿನಲ್ಲಿ ಮಣ್ಣಾಗದೆ ನಂಜಾಗಿಯೇ ಉಳಿಯುತ್ತದೆ.

ಇಷ್ಟೆಲ್ಲ ಅಪಾಯಗಳ ನಡುವೆಯೂ ಈ ಇಂಧನ ಮೂಲವು ಮನುಷ್ಯನಿಗೆ ಆಶೆ-ಭರವಸೆಗಳನ್ನು ನೀಡುತ್ತಿದೆ. ಪರಮಾಣು ವಿದ್ಯುತ್ ಉತ್ಪಾದನೆಯ 44 ವರ್ಷಗಳ ಇತಿಹಾಸದಲ್ಲಿ ನಡೆದ ದೊಡ್ಡ ಅಪಘಾತಗಳು ಎರಡೇ. ಒಂದು ಅಮೆರಿಕದ ಥ್ರೀಮೈಲ್ ಐಲೆಂಡ್‌ನಲ್ಲಿ ಏಳು ವರ್ಷಗಳ ಹಿಂದೆ ನಡೆದದ್ದೊಂದು; ಇದೀಗ ಚೆರ್ನೋಬೈಲ್‌ನಲ್ಲಿ ನಡೆದದ್ದಿನ್ನೊಂದು.

ಅಪಘಾತಗಳು ನಡೆಯಬಾರದು. ನಡೆಯದಂತೆ ಸೂಕ್ತ ವ್ಯವಸ್ಥೆಗಳನ್ನು ಮಾಡಬೇಕು. ಭದ್ರತೆ ಇನ್ನಷ್ಟು ಬಿಗಿಯಾಗಬೇಕು. ತಪಾಸಣೆ ಇನ್ನಷ್ಟು ಕಟ್ಟುನಿಟ್ಟಿನದಾಗಬೇಕು. ಅಣುವಿದ್ಯುತ್ ಸ್ಥಾವರದ ತಪಾಸಣೆಗಿರುವ ಅಂತರ್ರಾಷ್ಟ್ರೀಯ ವ್ಯವಸ್ಥೆ ಚುರುಕಾಗಬೇಕು. ಅರ್ಧ ಶತಮಾನದಲ್ಲಿ ಎರಡಲ್ಲ-ಶತಮಾನಕ್ಕೊಂದು ಕೂಡ ಇಂಥ ದುರ್ಘಟನೆ ನಡೆಯಬಾರದು.

ಮಾನವ ಜನಾಂಗಕ್ಕೆ ಸಂಕಟ ತಂದ ಈ ದುರ್ಘಟನೆ ಕೂಡ ಬೃಹತ್ ಶಕ್ತಿ ಸಮರಕ್ಕೆ ಇನ್ನೊಂದು ಆಯುಧವಾದಂತಿದೆ. ಚೆರ್ನೋಬೈಲ್ ಘಟನೆಯನ್ನು ಅಮೆರಿಕವು ರಷ್ಯವನ್ನು ಹೊಡೆಯುವ ಬಾರುಕೋಲಾಗಿ ಉಪಯೋಗಿಸುತ್ತಿದೆ. ಗಾಜಿನ ಮನೆಯೊಳಗೆ ಕೂತವರು ಎಸೆಯುವ ಕಲ್ಲು ಇದಾಗಿದೆ. ಚೆರ್ನೋಬೈಲ್ ರಷ್ಯದಲ್ಲಿರುವಂತೆಯೇ ಥ್ರೀಮೈಲ್ ಐಲೆಂಡ್ ಅಮೆರಿಕದಲ್ಲಿಯೂ ಇದೆ.

ಮುಂಗಾರು, ಮೇ 6, 1986

ಮುಂಗಾರು
ಮಂಗಳವಾರ, ಮೇ ೬, ೧೯೮೬

ಶಿಕ್ಷಕರ ಸಮಸ್ಯೆ–ಸಮಾಜದ ಸಮಸ್ಯೆ

ಪಿ. ಯು. ಸಿ. ಮೌಲ್ಯ ಮಾಪಕರು ಬೆದರಿಕೆಯೊಡ್ಡಿದ್ದ ಮೌಲ್ಯಮಾಪನ ಬಹಿಷ್ಕಾರವನ್ನು ಹಿಂದೆಗೆದುಕೊಂಡಿದ್ದಾರೆ. ಪಿ. ಯು. ಸಿ. ಶಿಕ್ಷಕರ ಸಂಘಟನೆಗೂ ಸರಕಾರಕ್ಕೂ ಮಾತುಕತೆ ನಡೆದು ಒಡಂಬಡಿಕೆ ಆಗಿದೆ. ಶಿಕ್ಷಕರ ದರ್ಜೆ ಹಾಗೂ ಭರತಿ ನಿಯಮಗಳನ್ನು ಸುಧಾರಿಸಲು ಸರಕಾರ ಒಪ್ಪಿದೆ. ಕಿರಿಯ ಕಾಲೇಜುಗಳನ್ನು ಪದವಿ ಪೂರ್ವ ಕಾಲೇಜುಗಳೆಂದು ಕರೆಯಲು ಕೂಡ ಸರಕಾರ ಒಪ್ಪಿಕೊಂಡಿದೆ. ಭಡತಿ ಅವಕಾಶಗಳ ಬಗ್ಗೆ ಸಹಾನುಭೂತಿಯಿಂದ ಪರಿಶೀಲಿಸುವ ಭರವಸೆ ನೀಡಿದೆ.

ಈ ಒಡಂಬಡಿಕೆ ಸ್ವಾಗತಾರ್ಹ. ಎಲ್ಲರಿಗೂ ಹಿತ ವಹಿಸುವ ಬೆಳವಣಿಗೆ ಇದಾಗಿದೆ. ಕಿರಿಯ ಕಾಲೇಜುಗಳ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳಿಗೆ ಉತ್ತಮ ಜೀವನದ ಅವಕಾಶ ಅಷ್ಟರ ಮಟ್ಟಿಗೆ ಉಂಟಾಗುತ್ತದೆ. ಪದವಿ ಕಾಲೇಜುಗಳಿಗೆ ಭರ್ತಿ ಮಾಡಿಕೊಳ್ಳುವ ವೇಳೆಯೂ ಕಿರಿಯ ಕಾಲೇಜುಗಳಲ್ಲಿ ಅನುಭವವನ್ನೂ ಕಲಿಸುವುದರಲ್ಲಿ ಪರಿಣತಿಯನ್ನೂ ಪಡೆದಿರುವವರಿಗೆ ಆದ್ಯತೆ ಕೊಡುವ ನೀತಿಯನ್ನೂ ಸರಕಾರ ಅಳವಡಿಸಿಕೊಂಡರೆ ಹಿತ. ಬದುಕಿನಲ್ಲಿ ಮೇಲೆ ಬರುವ ಅವಕಾಶಗಳನ್ನು ಈ ಶಿಕ್ಷಕ ಸಮುದಾಯಕ್ಕೆ ತೆರೆಯುವುದರಿಂದ ವೃತ್ತಿಯಲ್ಲಿ ಹೊಸ ಸಾಧನೆಗಳನ್ನು ನಡೆಸುವ ಜೀವನೋತ್ಸಾಹವನ್ನು ಅವರಲ್ಲಿ ತುಂಬಿಸಿದಂತಾಗುತ್ತದೆ.

ಈಗ ಆಗಿರುವ ಒಡಂಬಡಿಕೆಯಿಂದ ಹಾಗೂ ಅದರ ಪರಿಣಾಮವಾಗಿ ಮೌಲ್ಯ ಮಾಪನ ಬಹಿಷ್ಕಾರವು ಮುಕ್ತಾಯಗೊಂಡುದರಿಂದ ವಿದ್ಯಾರ್ಥಿ ಸಮುದಾಯವೂ ಅವರ ಹೆತ್ತವರೂ ಸಮಾಧಾನ ಪಡುವಂತಾಗಿದೆ. ತಾಂತ್ರಿಕ ಶಿಕ್ಷಣಕ್ಕೂ ಇತರ ವಿಭಾಗಗಳ ಪ್ರೌಢ ಶಿಕ್ಷಣಕ್ಕೂ ಬಾಗಿಲು ತೆರೆದು ಕೊಡುವ ಮಜಲು ಪದವಿ ಪೂರ್ವ ಶಿಕ್ಷಣವಾಗಿರುವುದರಿಂದ ಅದರ ಮೌಲ್ಯಮಾಪನ ಸೂಕ್ತ ಕಾಲದಲ್ಲಿ ನಡೆದು ಫಲಿತಾಂಶ ಪ್ರಕಟಣೆಗೊಳ್ಳಬೇಕು. ಇಲ್ಲವಾದರೆ ಸಾವಿರಾರು ಯುವಜನರಿಗೆ ತೊಂದರೆ.

ಇಂತಹ ತೊಂದರೆ ಬಹುಜನರಿಗೆ ಉಂಟಾಗುತ್ತದೆ ಎಂಬ ಪ್ರಜ್ಞೆ ಸರಕಾರಕ್ಕೆ ಮೊದಲೇ ಇರಬೇಕಾಗಿತ್ತು. ಜ್ಯೂನಿಯರ್ ಕಾಲೇಜುಗಳ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಗಳು ತಮ್ಮ ಬೇಡಿಕೆ ಪಟ್ಟಿಯನ್ನು ಬಹು ಹಿಂದೆಯೇ ಸಲ್ಲಿಸಿದ್ದರು. ಜನ ಸಮುದಾಯದ ಸಮಸ್ಯೆಗಳನ್ನು ನಿವಾರಣೆ ಮಾಡುವ ಕಾರ್ಯಕ್ಕೆ ಸರಕಾರ ಆದ್ಯತೆ ಕೊಡಬೇಕು. ಈ ಆದ್ಯತೆಯ ವಿಷಯದ ಪಟ್ಟಿಯಲ್ಲಿ ಶಿಕ್ಷಕರ ಬೇಡಿಕೆಯೂ ಸೇರಬೇಕಿತ್ತು. ಸಾಕಷ್ಟು ಮೊದಲೇ ಶಿಕ್ಷಕರ ಪ್ರತಿನಿಧಿಗಳನ್ನು ಕರೆದು ಸರಕಾರ ಮಾತನಾಡಬೇಕಿತ್ತು. ಅಂತಿಮ ಕ್ಷಣದಲ್ಲಾದರೂ ಸರಕಾರದ ಪ್ರತಿನಿಧಿಗಳು ಶಿಕ್ಷಕರ ಪ್ರತಿನಿಧಿಗಳೊಡನೆ ಸೌಹಾರ್ದಯುತ ಒಡಂಬಡಿಕೆಗೆ ಬಂದು ವಾತಾವರಣವನ್ನು ತಿಳಿಗೊಳಿಸಿ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಹೆತ್ತವರಿಗೆ ಹಿತಮಾಡಿದೆ.

ಶಿಕ್ಷಕರ ಬೇಡಿಕೆ ಒಂದು ಸಾರ್ವಜನಿಕ ಮಹತ್ವದ ವಿಷಯ. ಇಡಿಯ ಸಮಾಜವನ್ನು ಬಾಧಿಸುವಂತಹದು. ಇದರಲ್ಲಿ ಶಿಕ್ಷಕರು ಮಾತ್ರವೇ ಆಸಕ್ತಿ ವಹಿಸಿದರೆ ಸಾಲದು. ಕಲಿಕೆಯ ಮಟ್ಟ ಕೆಳಗಿಳಿದಾಗ, ವಿದ್ಯಾರ್ಥಿ ಅಶಾಂತಿ ತಲೆದೋರಿದಾಗ, ಫಲಿತಾಂಶ ಬರುವುದು ತಡವಾದಾಗ ಸರಕಾರವನ್ನೂ ಶಿಕ್ಷಕ ಸಮುದಾಯವನ್ನೂ ದೂರುವ ಹೆತ್ತವರು ಮತ್ತು ಸಾರ್ವಜನಿಕರು ಶಿಕ್ಷಣ ರಂಗಕ್ಕೆ ಸಂಬಂಧ ಪಟ್ಟ ವಿಚಾರಗಳಲ್ಲಿ ಸಕ್ರಿಯ ಆಸಕ್ತಿ ವಹಿಸುವ ವಿದ್ಯಮಾನ ಕಂಡು ಬರುವುದಿಲ್ಲ. ತಮ್ಮ ಮಕ್ಕಳ ಭವಿಷ್ಯದ ಬದುಕಿಗೆ ಸಂಬಂಧ ಪಟ್ಟ ವಿಷಯಗಳಲ್ಲೇ ಹೆತ್ತವರಿಗೆ ದಿವ್ಯ ನಿರಾಸಕ್ತಿಯಿದೆ. ಶಿಕ್ಷಣದ ಓರೆಕೋರೆಗಳ ಬಗ್ಗೆಯಾಗಲಿ ಶಿಕ್ಷಕರಿಗಿರುವ ಸಮಸ್ಯೆಗಳ ಬಗ್ಗೆಯಾಗಲಿ ಹೆತ್ತವರು ಅಥವ ಸಾಮಾಜಿಕರು ಸಾರ್ವಜನಿಕ ವೇದಿಕೆಗಳಲ್ಲಿ ಚರ್ಚೆ ಮಾಡುವ ಪರಿಪಾಠ ನಮ್ಮಲ್ಲಿಲ್ಲ. ಇಂತಹ ವಿಷಯಗಳಲ್ಲಿ ಈ ಸಮಾಜದ ಮನಸ್ಸೇ ಜಡ್ಡುಗಟ್ಟಿದೆ. ನಮ್ಮ ಸರಕಾರಗಳು ಪ್ರಾಥಮಿಕ- ಮಾಧ್ಯಮಿಕ ಶಾಲೆಗಳ ಶಿಕ್ಷಕರಿಂದ ಯಾವುದೆಲ್ಲ ಬಿಟ್ಟಿ ಚಾಕರಿ ಮಾಡಿಸುತ್ತದೆಯೆಂಬ ಕಲ್ಪನೆಯಾದರೂ ಸಾರ್ವಜನಿಕರಿಗೆ ಉಂಟೆ? ದಿನ ಬೆಳಗಾದರೆ ಕುರಿಕೋಳಿ ಲೆಕ್ಕ ಮಾಡಿ, ಮಕ್ಕಳಿಗೆ ಹಾಲು-ಉಪ್ಪಿಟ್ಟು ಮಾಡಿಕೊಟ್ಟು ಸುಸ್ತಾಗುವ ಶಿಕ್ಷಕರು ಮಕ್ಕಳಿಗೆ ಯಾವಾಗ–ಏನನ್ನು ಹೇಳಿಕೊಟ್ಟಾರು?

ಇದೆಲ್ಲ ಯಾರ್ಯಾರಿಗೋ ಸಂಬಂಧ ಪಟ್ಟ ವಿಚಾರಗಳಲ್ಲ. ತಮ್ಮ ಮಕ್ಕಳ ಭವಿಷ್ಯದ ಪ್ರಶ್ನೆ ಎಂದು ಹೆತ್ತವರು ತಿಳಿಯಬೇಕು. ಶಿಕ್ಷಕರ ಸಮಸ್ಯೆ ಸಾರ್ವಜನಿಕರ ಸಮಸ್ಯೆ ಕೂಡ ಹೌದು. ಮಕ್ಕಳ ಬುದ್ಧಿ-ಭಾವಗಳನ್ನು ಶುದ್ಧವಾಗಿ, ಆರೋಗ್ಯಕರವಾಗಿ ಬೆಳೆಸುವ ಹೊಣೆಗಾರಿಕೆಯಿರುವ ಶಿಕ್ಷಕ ಸಮುದಾಯದ ಬದುಕು ಕೂಡ ಆರೋಗ್ಯವಂತವಾಗಿರುವಂತೆ, ಮಕ್ಕಳಲ್ಲಿ ಚೈತನ್ಯ ತುಂಬಬೇಕಾದ ಇವರು ನಿರಂತರವಾಗಿ ಜೀವನೋತ್ಸಾಹದಿಂದ ಪುಟಿಯುವಂತೆ ನೋಡಿಕೊಳ್ಳಬೇಕಾದ ಹೊಣೆ ಸಮಾಜಕ್ಕುಂಟು.

ಮುಂಗಾರು

ಬುಧವಾರ, ಮೇ 7, 1986

ರಾಷ್ಟ್ರಪತಿ ಪೀಠಕ್ಕೆ ಮಾನವತೆಯ ಮೆರುಗು

ರಾಷ್ಟ್ರಪತಿ ಗ್ಯಾನಿ ಜೇಲ್‌ಸಿಂಗ್ ಅವರು 70 ವರ್ಷಗಳನ್ನು ಪೂರ್ತಿ ಗೊಳಿಸಿದ್ದಾರೆ. ಆದರೂ ತರುಣರ ಹುರುಪು ಅವರಲ್ಲಿದೆ. ದೇಹದ ಮತ್ತು ಮನಸ್ಸಿನ ಆರೋಗ್ಯವನ್ನು ಅವರು ಚೆನ್ನಾಗಿ ಕಾಪಾಡಿಕೊಂಡು ಬಂದಿರುವುದೇ ಅವರ ಈ ಚಿರ ತಾರುಣ್ಯಕ್ಕೆ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ.

ಜೇಲ್ ಸಿಂಗ್ 1982ರ ಜುಲೈ ತಿಂಗಳ 15ನೇ ದಿನಾಂಕ ಈ ದೇಶದ ರಾಷ್ಟ್ರಪತಿಯಾಗಿ ಚುನಾಯಿತರಾದರು. ಅದಕ್ಕೆ ಮೊದಲು ಅವರು ಕೇಂದ್ರ ಸಚಿವ ಸಂಪುಟದಲ್ಲಿ ಗೃಹ ಸಚಿವರಾಗಿದ್ದರು, ಅದಕ್ಕೂ ಹಿಂದೆ ಪಂಜಾಬಿನ ರಾಜ್ಯ ಸರಕಾರದಲ್ಲಿ ಸಚಿವರಾಗಿದ್ದರು. ಕಾಂಗ್ರೆಸ್ ಪಕ್ಷದ ರಾಜ್ಯ ಘಟಕದ ಮುಖ್ಯಸ್ಥನಾಗಿಯೂ ಕಾರ್ಯ ನಿರ್ವಹಿಸಿದ್ದರು, ನೀಲಂ ಸಂಜೀವ ರೆಡ್ಡಿಯವರ ನಿವೃತ್ತಿಯ ಬಳಿಕ 1982ರಲ್ಲಿ ಗ್ಯಾನಿ ಜೇಲ್ ಸಿಂಗರು ರಾಷ್ಟ್ರಪತಿ ಆದುವಕ್ಕೆ ಅವರು ಈ ಎಲ್ಲಾ ಹುದ್ದೆಗಳನ್ನು ನಿರ್ವಹಿಸಿದರು ಎಂಬುದಕ್ಕಿಂತಲೂ ಜೇಲ್ ಸಿಂಗರು ಅಪ್ಪಟ ಜನ ನಾಯಕ ಎನ್ನುವುದೇ ಕಾರಣವಾಯಿತು ಎಂಬುದು ಹೆಚ್ಚು ಮಹತ್ವದ್ದು.

ಜೇಲ್ ಸಿಂಗರು ಹುಟ್ಟಿದ್ದು ಹಳ್ಳಿಯಲ್ಲಿ. ಕರಕುಶಲ ಕಸುಬುದಾರರ ಕುಟುಂಬವೊಂದರಲ್ಲಿ. ಭಾರತದಂತಹ ದೊಡ್ಡ ದೇಶವೊಂದರ ಅತಿ ದೊಡ್ಡ ಹುದ್ದೆಗೇರಿದ ಈ ವ್ಯಕ್ತಿ ಶಾಲೆಗೆ ಹೋಗಿ ಕಲಿತವರಲ್ಲ. ಇಂಗ್ಲಿಷ್ ಭಾಷೆ ಈ ನಾಯಕನಿಗೆ ಏನೇನೂ ತಿಳಿಯದು. ಕಲಿತದ್ದೆಲ್ಲ ಪಂಜಾಬಿ ಹಾಗೂ ಹಿಂದಿಯಲ್ಲಿ. ಕಲಿತದ್ದೂ ಅನೌಪಚಾರಿಕವಾದ ಓದಿನಿಂದಲೇ.

ಆದರೂ ಜೇಲ್‌ಸಿಂಗ್ ಗಳಿಸಿಕೊಂಡ ಲೋಕಜ್ಞಾನವೂ ನಾಯಕತ್ವದ ಗುಣಗಳೂ ಅಪಾರ. ಜೇಲ್ ಸಿಂಗ್ ಅವರದು ಈ ಮಣ್ಣಿನಿಂದ ಒಡಮೂಡಿ ಬಂದ ಬದುಕು. ಬಡತನದ ಮೂಸೆಯಲ್ಲಿ ಬೆಂದು ಪುಟವಿಕ್ಕಿದ ಅಪ್ಪಟ ಬಂಗಾರ ಅದು. ಈ ನೆಲದ ಮಕ್ಕಳ ಬದುಕಿನ ಬವಣೆಗಳೆಲ್ಲವನ್ನೂ ಅರಿತ ನೈಜ ಜನಪ್ರತಿನಿಧಿ. ಗ್ರಾಮೀಣ ಜನ ಸಮುದಾಯದ, ರೈತವರ್ಗದ ಚೈತನ್ಯಶೀಲತೆಯನ್ನೂ ಪ್ರಾಮಾಣಿಕತೆಯನ್ನೂ ಮಾನವೀಯತೆಯ ಬಗೆಗಿನ ಕಳಕಳಿಯನ್ನು ಒಡಲಲ್ಲಿ ಧರಿಸಿದ ಈ ಇಂಗ್ಲಿಷ್ ಬಾರದ ಮನುಷ್ಯ ಇಂದು ಸಾಮಾನ್ಯ ಮನುಷ್ಯರಿಗಿಂತೆಲ್ಲ ಬಹಳ ದೊಡ್ಡವನಾದ ಮಾನವ.

ಈ ಮನುಷ್ಯನಿಗೆ ಬದುಕಿನಲ್ಲಿಯೂ ಭಾರತೀಯ ರಾಜಕಾರಣದಲ್ಲಿಯೂ ಮೇಲೇರಲು ಇಂಗ್ಲಿಷ್ ಜ್ಞಾನವೆಂಬ ಏಣಿ ಇರಲಿಲ್ಲ. ಆದರೂ ಅವರು ಏರಿದ್ದಾರೆ. ಭಾರತೀಯ ರಾಜಕಾರಣದ ಅಂತಹ ವೈಲಕ್ಷಣ್ಯಗಳಲ್ಲಿ ಒಬ್ಬರು ಕಾಮರಾಜ ನಾಡಾರರು, ಇನ್ನೊಬ್ಬರು ಜೇಲ್‌ಸಿಂಗರು. ಇಂದು ಕೇಂದ್ರ ಸರಕಾರದ ಕಾರ್ಯಾಂಗದ ಮುಖ್ಯಸ್ಥರಿಗೂ ರಾಷ್ಟ್ರಪತಿಗಳಿಗೂ ವೈಯಕ್ತಿಕವಾದ ಭಿನ್ನಮತಗಳಿವೆಯೆಂಬ ವದಂತಿಯಿದೆ. ಇಂತಹ ಭಿನ್ನಮತಗಳು ಕಾಣಿಸಿಕೊಂಡದ್ದಕ್ಕೂ ಬಹುಶ: ಈ ರಾಷ್ಟ್ರಪತಿಗೆ ಆಧುನಿಕ ಜಗತ್ತಿನ ನಾಯಕರೊಂದಿಗೆ ಸುಲಲಿತವಾಗಿ ವ್ಯವಹರಿಸಲು ಅಗತ್ಯವುಳ್ಳ ಇಂಗ್ಲಿಷ್ ಭಾಷೆಯ ಜ್ಞಾನ ಇಲ್ಲದಿರುವುದೇ ಕಾರಣವಿರಬಹುದು.

ಇಂತಹ ಸನ್ನಿವೇಶದಲ್ಲಿಯೂ ಜೇಲ್‌ಸಿಂಗರು ತಮ್ಮ ಮಾನಸಿಕ ಸಮತೋಲನವನ್ನು ಉಳಿಸಿಕೊಂಡಿದ್ದಾರೆ. ತುಂಬ ಗಾಂಭೀರ್ಯದಿಂದಲೇ ನಡೆದುಕೊಂಡಿದ್ದಾರೆ. ಜೇಲ್‌ಸಿಂಗರು ಸದಸ್ಯರಾಗಿರುವ ಸಿಕ್ಖ ಸಮುದಾಯವಿಂದು ವಸ್ತುಶಃ ಮನಸ್ಸು ಮುರಿದುಕೊಂಡು ದೂರ ನಿಂತಿದೆ. ಪಂಜಾಬು ರಾಜ್ಯ ಕ್ಷೋಭೆಯಿಂದ ತಲ್ಲಣಗೊಂಡಿದೆ. ಈ ಸಮಸ್ಯೆಗೆ ಪರಿಹಾರವು ಬಿಸಿಲು ಗುದುರೆಯಂತೆ ಮುಂದಕ್ಕೋಡುತ್ತಿದೆ. ಇಂತಹ ಅತ್ಯಂತ ದಾರುಣವಾದ, ರುದ್ರ ಗಂಭೀರವಾದ ವಾತಾವರಣದಲ್ಲಿ ಕೂಡ, ತೀವ್ರತಮವೆನ್ನಬಹುದಾದ ಮಾನಸಿಕ ತುಮುಲದಲ್ಲಿಯೂ ಈ ರಾಷ್ಟ್ರಪತಿ ಅತ್ಯಂತ ಗಾಂಭೀರ್ಯದಿಂದಲೇ ನಡೆದುಕೊಂಡಿದ್ದಾರೆ. ಸೌಜನ್ಯದ ಎಲ್ಲೆಯನ್ನು, ಔಚಿತ್ಯದ ಗಡಿಯನ್ನು ಅವರು ಒಮ್ಮೆಯೂ ದಾಟಿದ್ದಿಲ್ಲ.

ಅವರ ಈ ಗುಣವೇ ಅವರಿಗೆ ಒಲವನ್ನು ತಂದು ಕೊಟ್ಟಿದೆ. ಇಂದು ಪಂಜಾಬಿನ ಮಾರಣಹೋಮಕ್ಕೆ ಮುಕ್ತಾಯ ತರಬಲ್ಲಂತಹ ರಾಜಕೀಯ ಹೊಂದಾಣಿಕೆಯ ದಾರಿಯನ್ನು ತೋರಿಸುವ ಸಾಮರ್ಥ್ಯ ಇರುವವರಲ್ಲಿ ಜೇಲ್‌ಸಿಂಗರು ಒಬ್ಬರು.

ಎಲ್ಲಕ್ಕಿಂತ ಹೆಚ್ಚು ಈ ರಾಷ್ಟ್ರಪತಿ ತನ್ನ ಹುದ್ದೆಗೆ ಭಾರತೀಯ ರೈತನ ಮುಗ್ಧತೆಯ, ಪ್ರಾಮಾಣಿಕತೆಯ, ಮಾನವೀಯತೆಯ ಬಗೆಗಿನ ಕಳಕಳಿಯ ಮೆರುಗನ್ನು ತಂದು ಕೊಟ್ಟಿದ್ದಾರೆ. 1954ರಲ್ಲಿ ಈ ದೇಶದಲ್ಲಿ ರಾಷ್ಟ್ರಪತಿಯಾಗಿದ್ದ ವ್ಯಕ್ತಿ ವಾರಣಾಸಿಯಲ್ಲಿ ಪುರೋಹಿತರ ಪಾದತೊಳೆದು ನೀರನ್ನು ತೀರ್ಥವೆಂದು ಕುಡಿದವರು. ಅದಕ್ಕಾಗಿಯೇ ಡಾ। ರಾಮಮನೋಹರ ಲೋಹಿಯಾರಂಥವರಿಂದ ಕಟು ಟೀಕೆಗೆ ಒಳಗಾದವರು. ಪರಂಪರೆಯ ಮೌಢ್ಯಗಳನ್ನೇ ಉಳಿಸಿ ಬೆಳೆಸುವ ಈ ವ್ಯವಸ್ಥೆಯಲ್ಲಿ ಜೇಲ್‌ಸಿಂಗರಂತಹ ಮಾನವತಾವಾದಿಗಳು ಮೇಲಕ್ಕೇರುವುದು ಅಪರೂಪ. ಮೊನ್ನೆ ಮೊನ್ನೆ ರಾಜಸ್ಥಾನದ ದೇವಾಲಯವೊಂದಕ್ಕೆ ಹರಿಜನರಿಗೆ ಪ್ರವೇಶವಿಲ್ಲವೆಂಬ ಕಾರಣಕ್ಕೆ ತಾನೂ ಪ್ರವೇಶ ಮಾಡಲು ನಿರಾಕರಿಸುವ ಮೂಲಕ ಜೇಲ್ ಸಿಂಗರು ತಮ್ಮ ಹುದ್ದೆಗೆ ಮಾನವೀಯತೆಯ ಮೆರುಗು ಕೊಟ್ಟಿದ್ದಾರೆ.

ಮುಂಗಾರು
ಗುರುವಾರ, ಮೇ 8, 1986

ಕರಾರು ನೇಮಕಾತಿ ವ್ಯವಸ್ಥೆ

ಸಾರ್ವಜನಿಕ ರಂಗದ ಉದ್ಯಮ ಸಂಸ್ಥೆಗಳ ಸಾಮರ್ಥ್ಯವನ್ನು ಸುಧಾರಿಸುವುದಕ್ಕಾಗಿ ಅವುಗಳ ಮುಖ್ಯಸ್ಥರ ಸೇವಾವಧಿಯನ್ನು ಐದು ವರ್ಷಗಳಿಗೆ ಸೀಮಿತಗೊಳಿಸಲಾಗುವುದೆಂದು ಪ್ರಧಾನ ಮಂತ್ರಿ ರಾಜೀವಗಾಂಧಿಯವರು ಪ್ರಕಟಿಸಿದ್ದಾರೆ. ಈಗ ತಮ್ಮ ಅಸಾಮರ್ಥ್ಯದಿಂದ ಜನರ ಲೇವಡಿಗೆ ತುತ್ತಾಗಿರುವ ಸಾರ್ವಜನಿಕ ರಂಗದ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ಸುಧಾರಿಸಿ ಅವುಗಳನ್ನು ಆರೋಗ್ಯಶಾಲಿಗಳನ್ನಾಗಿ ಮಾಡುವ ದಿಕ್ಕಿನಲ್ಲಿ ಇದೊಂದು ಗಮನಾರ್ಹವಾದ ಸ್ವಾಗತಾರ್ಹ ಹೆಜ್ಜೆಯಾಗಿದೆ.

ಇಂದು ಸಾರ್ವಜನಿಕ ರಂಗದ ಕೈಗಾರಿಕೆಗಳು ಹಾಗೂ ವಾಣಿಜ್ಯ ಸಂಸ್ಥೆಗಳು ನಾಡಿಗೆ ಬಿಳಿಯಾನೆಗಳಾಗಿವೆ. ಅವುಗಳ ಆಡಳಿತೆಯ ಮೇಲೆ ಯಾರಿಗೂ ನಿಯಂತ್ರಣ ಇಲ್ಲವಾಗಿರುವುದರಿಂದ ಅವುಗಳ ಆಡಳಿತ ವೆಚ್ಚವು ಏರಿದೆ. ಇದರ ಪರಿಣಾಮವಾಗಿ ಅವುಗಳ ಉತ್ಪಾದನಾ ವೆಚ್ಚವು ನಿಯಂತ್ರಣ ಮೀರಿ ಬೆಳೆದಿದೆ. ಸಾರ್ವಜನಿಕ ಕೈಗಾರಿಕಾ ಸಂಸ್ಥೆಗಳೆಂಬವು ಜನಸಮುದಾಯದ ಪ್ರಯೋಜನಕ್ಕೊದಗುವ ಬದಲು ಅವುಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳಿಗೂ ಇತರ ಸಿಬ್ಬಂದಿ ವರ್ಗಕ್ಕೂ ಹಿಂಡುವ ಹಸುವಾಗಿ ಪರಿವರ್ತಿತವಾಗಿವೆ. ಇದರ ಪರಿಣಾಮ ಸುಸ್ಪಷ್ಟ. ಸಾರ್ವಜನಿಕ ರಂಗದ ಅನೇಕ ಸಂಸ್ಥೆಗಳು ನಷ್ಟದಲ್ಲಿ ನಡೆಯುತ್ತಿವೆ. ಸರಕಾರವು ಹೂಡಿರುವ ಸಾವಿರಾರು ಕೋಟಿ ರೂಪಾಯಿ ಬಂಡವಾಳವು ಹೀಗೆ ಅಸಮರ್ಥ ಕೈಗಳಿಗೆ ದೊರೆತು ವ್ಯರ್ಥವಾಗುತ್ತಿದೆ. ಲಾಭ ಗಳಿಸುತ್ತ ಇನ್ನಷ್ಟು ವಿಸ್ತರಣೆಗೊಂಡು ಸಮಾಜಕ್ಕೆ ಉಪಯೋಗಿಯಾಗಿ ಮತ್ತಷ್ಟು ಉದ್ಯೋಗಾವಕಾಶಗಳನ್ನೂ ಉಂಟು ಮಾಡಬೇಕಾದ ಸಂಸ್ಥೆಗಳು ಹೀಗೆ ಸರಕಾರಿ ರಂಗಕ್ಕೆ ಕೆಟ್ಟ ಹೆಸರನ್ನು ತಂದುದಲ್ಲದೆ ಸರಕಾರಿ ಆರ್ಥಿಕ ಕ್ಷೇತ್ರವನ್ನೇ ಜಡವನ್ನಾಗಿಯೂ ರೋಗಿಷ್ಟವನ್ನಾಗಿಯೂ ಮಾಡಿವೆ.

ಇದಕ್ಕೆ ಕಾರ್ಯಕಲ್ಪ ಮಾಡುವ ದಿಕ್ಕಿನಲ್ಲಿ ಅವುಗಳ ಮುಖ್ಯಾಧಿಕಾರಿಗಳ ಅವಧಿಯನ್ನು ಐದು ವರ್ಷಕ್ಕೆ ಮಿತಿಗೊಳಿಸುವುದು ಹಾಗೂ ಸಾಮರ್ಥ್ಯವನ್ನು ತೋರಿಸಿದವರಿಗೆ ಮಾತ್ರ ಸೇವಾವಧಿ ವಿಸ್ತರಣೆಯ ಸೌಲಭ್ಯ ನೀಡುವುದು ಮಹತ್ವದ ಹೆಜ್ಜೆಯಾಗಿದೆ.

ಈ ತತ್ವವನ್ನು ಸಾರ್ವಜನಿಕ ರಂಗದ ಕೈಗಾರಿಕಾ ಸಂಸ್ಥೆಗಳಿಗೆ ಮಾತ್ರವೇ ಮಿತಿಗೊಳಿಸದೆ ಸರಕಾರದ ಎಲ್ಲಾ ಇಲಾಖಾ ಮುಖ್ಯಸ್ಥರಿಗೂ ಐ.ಎ.ಎಸ್. ಹಾಗೂ ರಾಜ್ಯಗಳ ಸೇವಾಶ್ರೇಣಿಗಳವರಿಗೂ ಅನ್ವಯಿಸುವುದು ಸೂಕ್ತ. ಜಡ್ಡು ಹಿಡಿದು ಸಂವೇದನಾ ಶಕ್ತಿಯನ್ನೇ ಕಳೆದುಕೊಂಡಿರುವ ಸರಕಾರಿ ನೌಕರ ಶಾಹಿಯಲ್ಲಿ ಚಟುವಟಿಕೆಯ ರಕ್ತ ಸಂಚಾರವನ್ನು ಪುನರಾರಂಭಿಸಲು ಇದರಿಂದ ಸ್ವಲ್ಪಮಟ್ಟಿಗಾದರೂ ಸಾಧ್ಯವಾದೀತು. ಈಗ ಸರಕಾರಿ ಕಡತಗಳನ್ನು ಬಿಗಿದು ಕೂತಿರುವ ಕೆಂಪು ಪಟ್ಟಿಯನ್ನು ಸಡಿಲಿಸಲು ಸಹಾಯಕವಾದೀತು.

ಸರಕಾರದ ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು, ಕಮಿಷನರುಗಳು, ಕಾರ್ಯದರ್ಶಿಗಳು, ಇಂಜಿನಿಯರುಗಳು ಡೈರೆಕ್ಟರುಗಳು, ವೈದ್ಯಾಧಿಕಾರಿಗಳ ವಸ್ತುತಃ ಐ.ಎ.ಎಸ್. ಮತ್ತು ಕೆ.ಎ.ಎಸ್‌ನ ಎರಡೂ ಶ್ರೇಣಿಗಳಲ್ಲಿನ ಎಲ್ಲಾ ಅಧಿಕಾರಿಗಳ ನಿವೃತ್ತಿವಯೋಮಿತಿಯನ್ನು ಐವತ್ತಕ್ಕೆ ಇಳಿಸಬೇಕು. ಆ ಬಳಿಕ ಸಂಬಂಧಿತ ಹುದ್ದೆಗಳಿಗೆ ನೇಮಕವನ್ನು ಕರಾರು ನೆಲೆಯಲ್ಲಿ ನಡೆಸಬೇಕು. ಇಂತಹ ನೇಮಕದ ಅವಧಿಯು ಸಂಕ್ಷಿಪ್ತವಾಗಿರಬೇಕಲ್ಲದೆ ಸಂಬಂಧಿತ ಅಧಿಕಾರಿಯು ತನ್ನ ಹುದ್ದೆಯಲ್ಲಿ ತೃಪ್ತಿಕರವಾಗಿಯೂ ಸಮರ್ಥವಾಗಿಯೂ ಕಾರ್ಯ ನಿರ್ವಹಿಸಿದರೆ ಮಾತ್ರವೇ ಕರಾರು ನೆಲೆಯ ನೇಮಕವನ್ನು ವಿಸ್ತರಿಸಲಾಗುವುದೆಂಬ ಶರತ್ತು ವಿಧಿಸಬೇಕು. ಹಾಗೆ ಸಾಮರ್ಥ್ಯವನ್ನು ಪ್ರದರ್ಶಿಸಿ ಚುರುಕಾಗಿಯೂ ನಿಷ್ಪಕ್ಷಪಾತಿಯಾಗಿಯೂ ಶುಚಿಯಾಗಿಯೂ ಕೆಲಸ ಮಾಡಿ ಆಡಳಿತೆಯನ್ನು ಸುಧಾರಿಸಿದ ಅಧಿಕಾರಿಗಳಿಗೆ ಮಾತ್ರವೇ ಕರಾರು ನೆಲೆಯ ಮರು ನೇಮಕವನ್ನು ನೀಡಬೇಕು. ಇದನ್ನು ಅನುಷ್ಠಾನಕ್ಕೆ ತರಲು ಕಾನೂನು ಸಂಬಂಧವಾದ ಅಡೆ-ತಡೆಯಿದ್ದರೆ ಕಾನೂನನ್ನು ತಿದ್ದಬೇಕು, ಅಗತ್ಯವೆನಿಸಿದರೆ ರಾಜ್ಯಾಂಗದಲ್ಲಿಯೂ ಸೂಕ್ತ ತಿದ್ದುಪಡಿ ಮಾಡಬೇಕು.

ಇಂದು ಸರಕಾರಿ ಅಧಿಕಾರಿಗಳು, ಇಲಾಖಾ ಮುಖ್ಯಸ್ಥರು ಪರಂಪರೆಯ ನಡವಳಿಕೆಗಳ ರೀತ್ಯಾ "ರಕ್ಷಿತ ಜೀವಿ"ಗಳಾಗಿರುವುದರಿಂದ 58 ವರ್ಷಗಳ ತನಕ ಅವರನ್ನು ಯಾರೂ ಮುಟ್ಟುವುದು ಸಾಧ್ಯವಿಲ್ಲವಾಗಿದೆ. ಅವರ ಮೇಲೆಯೂ ಕ್ರಮ ಕೈಗೊಳ್ಳುವುದು ಸಾಧ್ಯವಿದೆಯೆಂಬ ವಿಧಿಯೊಂದು ರಾಜ್ಯಾಂಗದಲ್ಲಿದ್ದರೂ ಅದರ ಬಳಕೆ ನಡೆದ ನಿದರ್ಶನಗಳು ಇಲ್ಲವೇ ಇಲ್ಲವೆಂದರೂ ತಪ್ಪಲ್ಲ. ಇದರ ಪರಿಣಾಮವಾಗಿ ಅಧಿಕಾರಿಗಳು ಹುಲುಸಾಗಿ ಮೆಂದು ಹೊಟ್ಟೆ ತುಂಬಿಸಿ ಕೊಳ್ಳುವುದನ್ನು ತಡೆಯುವುದಕ್ಕೆ ಯಾರಿಗೂ ಸಾಧ್ಯವಾಗುತ್ತಿಲ್ಲ. ಸರಕಾರಿ ಇಲಾಖೆಗಳಲ್ಲಿ ಭ್ರಷ್ಟಾಚಾರವು ತಾಂಡವವಾಡಲು ಇದೂ ಒಂದು ಕಾರಣವಾಗಿದೆ.

ಸರಕಾರಿ ಕಾರ್ಯನಿರ್ವಹಣೆಗೆ ಕಾಯಕಲ್ಪ ಮಾಡಬೇಕಿದ್ದರೆ ಇದು ಒಂದು ದಾರಿ. ಐವತ್ತಕ್ಕೆ ನಿವೃತ್ತಿ ಮಾಡಿ, ಆ ಮೇಲೆ ಕರಾರು ನೆಲೆಯಲ್ಲಿ ಶರತ್ತು ಸಹಿತ ಅವಧಿಬದ್ಧ ಮರು ನೇಮಕಾತಿ ವ್ಯವಸ್ಥೆ ಜಾರಿಗೆ ತನ್ನಿ.

ಮುಂಗಾರು

ಶುಕ್ರವಾರ, ಮೇ 9, 1986

ದೊಡ್ಡ ನಾಯಕರ ಸಣ್ಣತನ

ಬೆಳಗಾವಿ ಮತ್ತೆ ಸುದ್ದಿ ಮಾಡುತ್ತಿದೆ. ಆ ನಗರದ ಕಾರ್ಪೊರೇಶನ್ ಬೆಳಗಾವಿ ಮಹಾರಾಷ್ಟ್ರದ ಜತೆ ವಿಲಯನಗೊಳ್ಳಬೇಕೆಂದು ಒತ್ತಾಯಿಸಿ ನಿರ್ಣಯ ಅಂಗೀಕರಿಸಿದೆ. ಬೆಳಗಾವಿಯಲ್ಲಿ ಕನ್ನಡ ಆಡಳಿತ ಭಾಷೆ ಅನುಷ್ಠಾನದ ಪ್ರಗತಿ ಬಗ್ಗೆ ಪರಿಶೀಲಿಸಲು ಬಂದ ಕನ್ನಡ ಕಾವಲು ಸಮಿತಿಯ ಅಧ್ಯಕ್ಷ ಪಾಟೀಲ ಪುಟ್ಟಪ್ಪ ಅವರನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯ ಕಾರ್ಪೊರೇಟರುಗಳು ಕೆಟ್ಟದಾಗಿ ನಡೆಸಿಕೊಂಡಿದ್ದಾರೆ. ನಿಯಮ ಮೀರಿ ಕಾರ್ಯವೆಸಗಿದ್ದಕ್ಕಾಗಿ ಯಾಕೆ ಬರ್ಖಾಸ್ತುಗೊಳಿಸಬಾರದೆಂದು ಕೇಳಿ ಕರ್ನಾಟಕ ಸರಕಾರವು ಬೆಳಗಾವಿ ಮಹಾನಗರ ಪಾಲಿಕೆಗೆ ನೋಟೀಸು ನೀಡಿದೆ. ಮಹಾರಾಷ್ಟ್ರದಲ್ಲಿ ವಿಲಯನ ಆಗ್ರಹಿಸಿ ನಿಪ್ಪಾಣಿಯ ನಗರ ಸಭೆಯೂ ನಿರ್ಣಯ ಅಂಗೀಕರಿಸಿದೆ. ಕೊಲ್ಹಾಪುರದಲ್ಲೊಂದು ಸರ್ವ ರಾಜಕೀಯ ಪಕ್ಷಗಳ ಸಭೆ ನಡೆದು ಜೂನ್ ಒಂದರೊಳಗೆ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಕೇಂದ್ರ ಸರಕಾರಕ್ಕೆ ಕೊನೆಯೆಚ್ಚರಿಕೆ ನೀಡಿದೆ. ಜೂನ್ ಒಂದರಿಂದ ಬೆಳಗಾವಿಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆ ಕಡ್ಡಾಯ ಮಾಡಿರುವ ಸರಕಾರದ ಆಜ್ಞೆ ಹಿಂದೆಗೆಯುವಂತೆ ಶಿವಸೇನೆಯು ಎಚ್ಚರಿಕೆ ನೀಡಿದೆ. ಮುಂಬಯಿಯಲ್ಲಿರುವ ಕನ್ನಡ ಶಾಲೆಗಳನ್ನು ಮುಚ್ಚಿಸುವುದಾಗಿ ಅದು ಪ್ರತಿ ಬೆದರಿಕೆಯನ್ನೂ ಹಾಕಿದೆ.

ಗಡಿ ಹಾಗೂ ಭಾಷೆಗೆ ಸಂಬಂಧಿಸಿದ ಪ್ರಶ್ನೆಯೊಂದು ಮತ್ತೆ ಕುದಿದು ನಾಡಿನಲ್ಲಿ ಕ್ಷೋಭೆ ಎಬ್ಬಿಸುವುದರ ಮುನ್ಸೂಚನೆ ಈ ವಿದ್ಯಮಾನಗಳಲ್ಲಿ ಕಾಣಿಸುತ್ತಿದೆ. ಭಾಷೆ ಮತ್ತು ಗಡಿ ನಮ್ಮ ಜನಸಮುದಾಯಗಳ ಭಾವ ವಿಕಾರಗಳನ್ನು ಸದಾ ಕೆರಳಿಸಿ ಹೋರಾಟಕ್ಕಿಳಿಸುವ ಸಂಗತಿಗಳಾಗಿವೆ. ಭಾಷೆ ಮತ್ತು ಭೌಗೋಲಿಕ ಸಮಗ್ರತೆ ಹಾಗೂ ಐಕ್ಯ ಮತ್ತು ಜನಾಂಗಗಳ ಪ್ರತ್ಯೇಕ ಸ್ವರೂಪಗಳು ವಿಧಾಯಕ ವಿಷಯಗಳಾಗಿರಬೇಕೇ ವಿನಹ ವಿನಾಶಕಾರಿಯಾಗಿರಬಾರದು. ಆದರೆ ಇವುಗಳನ್ನು ದೇಶದ ಕೆಲವು ಭಾಗಗಳಲ್ಲಿ ರಾಜಕೀಯ ನಾಯಕರುಗಳು ಜನರ ಭಾವನೆಗಳನ್ನು ಕೆರಳಿಸುವುದಕ್ಕೆ ಉಪಯೋಗಿಸುತ್ತಿರುವ ವಿದ್ಯಮಾನ ನಡೆದು ಬಂದಿದೆ.

ಬೆಳಗಾವಿ ಅಂತಹ ಬೆಳವಣಿಗೆಗಳನ್ನು ಉಂಟು ಮಾಡಿರುವಂತಹ ವಿಚಾರ. ಬೆಳಗಾವಿ ಬಗ್ಗೆ ವಿವಾದ ಎದ್ದಿತ್ತು. ಅದರ ಪರಿಹಾರಕ್ಕೆ ಮೆಹರ್ ಚಂದ್ ಮಹಾಜನರಂತಹ ನ್ಯಾಯವೇತ್ತರ ನೇತೃತ್ವದಲ್ಲಿ ಆಯೋಗವನ್ನು ನೇಮಿಸಲಾಗಿತ್ತು. ಆಯೋಗ ತೀರ್ಮಾನವನ್ನೂ ಹೇಳಿತ್ತು. ಆದರೆ ಮಹಾರಾಷ್ಟ್ರದ ರಾಜಕೀಯ ನಾಯಕರು ಅದನ್ನೊಪ್ಪಿಕೊಳ್ಳಲಿಲ್ಲ.

ರಾಷ್ಟ್ರೀಯ ಐಕ್ಯದ ತತ್ವವನ್ನು ಪ್ರತಿಪಾದಿಸುವವರಲ್ಲಿ ಮಹಾರಾಷ್ಟ್ರದ ರಾಜಕಾರಣಿಗಳೇನೂ ಹಿಂದಿಲ್ಲ. ಅಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿದ ದೊಡ್ಡ ನಾಯಕರು ಆಗಿ ಹೋಗಿದ್ದಾರೆ. ಈಗಲೂ ಅಲ್ಲಿ ರಾಷ್ಟ್ರೀಯ ಮಟ್ಟದ ನಾಯಕರಿದ್ದಾರೆ. ಮೊನ್ನೆ ಕೊಲ್ಹಾಪುರದ ಸರ್ವ ಪಕ್ಷ ಸಭೆಯ ಅಧ್ಯಕ್ಷತೆ ವಹಿಸಿದ ಸಮಾಜವಾದಿ ನಾಯಕ ಎಸ್. ಎಂ. ಜೋಶಿ ಅಂತಹವರಲ್ಲಿ ಒಬ್ಬರು. ಇವರೆಲ್ಲರೂ ರಾಷ್ಟ್ರೀಯ ವೇದಿಕೆಯಲ್ಲಿ ರಾಷ್ಟ್ರೀಯ ಭಾವೈಕ್ಯದ ಹಾಗೂ ಸಮಗ್ರತೆಯ ಮಾತನ್ನಾಡುತ್ತಲೂ ರಾಜ್ಯದ ಒಳಗೆ ಭಾಷಾ ನೆಲೆಯಲ್ಲಿ ಜನರನ್ನು ಪರಸ್ಪರ ಎತ್ತಿ ಕಟ್ಟಿ ಕ್ಷೋಭೆ ನಿರ್ಮಿಸುತ್ತಲೂ ರಾಜಕಾರಣ ನಡೆಸುವ ಸಣ್ಣತನದ ಕೆಲಸ ಮಾಡುತ್ತಲೇ ಬಂದಿದ್ದಾರೆ. ಈ ದ್ವಂದ್ವವು ನಮ್ಮೆಲ್ಲಾ ನಾಯಕರನ್ನೂ ಬಾಧಿಸಿದೆ. ಕನ್ನಡಿಗರೂ ಇದಕ್ಕೆ ಹೊರತಲ್ಲ. ಕರ್ನಾಟಕದ ನಾಯಕರೂ ಈ ವಿಚಾರದಲ್ಲಿ ಆತ್ಮಶೋಧನೆ ಮಾಡಿಕೊಳ್ಳಬೇಕಾದ ಅಗತ್ಯವುಂಟು.

ಈ ದೇಶದಲ್ಲಿ ಹಲವು ಭಾಷೆಗಳನ್ನಾಡುವ ಜನಸಮುದಾಯಗಳಿವೆ. ಜನ ಸಮುದಾಯಗಳನ್ನು ನೀರಿನ ಟ್ಯಾಂಕಿಗಳಂತೆ ಬೇರೆ ಬೇರೆಯಾಗಿ ಇರಿಸುವುದು ಅಶಕ್ಯ. ರಾಜ್ಯಗಳ ಗಡಿಗಳಲ್ಲಿ ಆಯಾ ರಾಜ್ಯದ ಅಧಿಕೃತ ಭಾಷೆಯನ್ನರಿಯದ ಭಾಷಾ ಅಲ್ಪ ಸಂಖ್ಯಾತರು ಇರುವುದು ಸಾಧ್ಯ. ಬೆಳಗಾವಿಯಲ್ಲಿ ಮರಾಠಿಗರಿದ್ದಾರೆ. ಮುಂಬಯಿಯಲ್ಲಿ ಕನ್ನಡಿಗರಿದ್ದಾರೆ. ಈ ವಾಸ್ತವಿಕತೆಯನ್ನು ಸಂಬಂಧಪಟ್ಟವರೆಲ್ಲ ಒಪ್ಪಿಕೊಳ್ಳಬೇಕು. ಮುಂಬಯಿಯ ಕನ್ನಡಿಗರು ಆ ರಾಜ್ಯದ ಬದುಕಿನ ಸಾಮರಸ್ಯ ಕೆಡದಂತೆ ಹೊಂದಿಕೊಂಡು ಬಾಳಬೇಕು. ಬೆಳಗಾವಿಯ ಮರಾಠಿಗರೂ ಅಷ್ಟೆ.

ರಾಷ್ಟ್ರೀಯ ಕಲ್ಪನೆ ಇದ್ದವರು ಮಾಡಬೇಕಾದ ಕೆಲಸ ಅದು. ಆದರೆ ಮಹಾರಾಷ್ಟ್ರದಲ್ಲಿ ಹಾಗಾಗಿಲ್ಲ. ಅಲ್ಲಿನ ಕಾಂಗ್ರೆಸ್ ನಾಯಕರಿರಲಿ, ಬಿಜೆಪಿಯವರಿರಲಿ, ಜನತಾದವರಿರಲಿ– ಎಲ್ಲರೂ ಗಡಿಪ್ರಶ್ನೆಯನ್ನು ಭಾಷಾವಿವಾದವನ್ನೂ ಕೆರಳಿಸಿ, ಮುಂಬಯಿಯಲ್ಲಿ ದಾಕ್ಷಿಣಾತ್ಯರ ಮೇಲೆ ಮರಾಠಿಗರನ್ನು ಎತ್ತಿಕಟ್ಟಿ ರಾಷ್ಟ್ರಹಿತಕ್ಕೆ ಆಘಾತ ಮಾಡುತ್ತಲೇ ಬಂದಿದ್ದಾರೆ. ಈಗಲೂ ಅವರು ಅದನ್ನೇ ಮಾಡುತ್ತಿದ್ದಾರೆ.

ಕೇಂದ್ರ ಸರಕಾರ ರಾಜಕೀಯ ಮುತ್ಸದ್ದಿತನದಿಂದ ನಡೆದುಕೊಂಡಿದ್ದರೆ ಈ ಗೊಂದಲಗಳೆಲ್ಲ ಹುಟ್ಟಿಕೊಳ್ಳುತ್ತಿರಲಿಲ್ಲ. ಕೇಂದ್ರದ ನಾಯಕರು ಈ ವಿವಾದವನ್ನು ಶೀತಾಗಾರಕ್ಕೆ ತಳ್ಳಿದರು. ನನೆಗುದಿಗೆ ಹಾಕಿದರು. ಸುಮ್ಮನೇ ಬಿಟ್ಟರೆ ಸತ್ತುಹೋದೀತೆಂಬ ಅತಿಬುದ್ಧಿವಂತಿಕೆ ತೋರಿಸಿದರು. ಅದನ್ನೇ ಈಗ ಅವರು ಪಂಜಾಬಿನಲ್ಲಿಯೂ ಮಾಡುತ್ತಿದ್ದಾರೆ. ಪ್ರಶ್ನೆ ಕೊಳೆಯಲು ಬಿಟ್ಟು ಅವುಗಳು ದುರ್ನಾತ ಬೀರಿ ಮೂಗು ಮುಚ್ಚಿಕೊಳ್ಳಬೇಕಾದ ಪರಿಸ್ಥಿತಿ ಪಂಜಾಬಿನಲ್ಲಿ ಉಂಟಾಗಿದೆ. ಬೆಳಗಾವಿ ವಿಚಾರವೂ ಅಷ್ಟೇ. ರಾಷ್ಟ್ರದ ನಾಯಕರ ರಾಜಕೀಯ ಅಪ್ರಬುದ್ಧತೆಯಿಂದಲೂ ರಾಜಕೀಯ ಇಚ್ಛಾಬಲದ ಅಭಾವದಿಂದಲೂ ಈ ಪ್ರಶ್ನೆ ಕುದಿಯುತ್ತ ನಾಡಿನ ಜನ ಜೀವನವನ್ನು ಪ್ರಕ್ಷುಬ್ಧಗೊಳಿಸುತ್ತಿದೆ.

ಮುಂಗಾರು

ಶನಿವಾರ, ಮೇ 10, 1986

9000 ಜನರ ಬದುಕಿನ ಪ್ರಶ್ನೆ

ಬೆಂಗಳೂರಿನ ಇಂಡಿಯನ್ ಟೆಲಿಫೋನ್ ಇಂಡಸ್ಟ್ರಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಇಲೆಕ್ಟ್ರಾನಿಕ್ ಸ್ವಿಚಿಂಗ್ ಸಿಸ್ಟಮ್ ಕಾರ್ಖಾನೆಯನ್ನು ಅಲ್ಲಿ ಸ್ಥಾಪಿಸದೆ ಉತ್ತರ ಭಾರತಕ್ಕೆ ಸ್ಥಳಾಂತರಿಸುವ ತಂತ್ರಗಾರಿಕೆ ವಿರುದ್ಧ ಹೋರಾಟ ನಡೆಸಲು ಐ.ಟಿ.ಐ. ಸಂಸ್ಥೆಯ ನೌಕರರ ಸಂಘ ತೀರ್ಮಾನಿಸಿದೆ.

ಇಲೆಕ್ಟ್ರಾನಿಕ್ ಸ್ವಿಚಿಂಗ್ ವ್ಯವಸ್ಥೆಯನ್ನು ನಮ್ಮ ದೂರವಾಣಿ ವಿನಿಮಯ ಕೇಂದ್ರಗಳಲ್ಲಿ ಅಳವಡಿಸಬೇಕಾದ್ದು ಅನಿವಾರ್ಯ. ಈಗ ದೇಶದ ಎಲ್ಲೆಡೆ ಇರುವ ಸ್ಟ್ರೌಗರ್ ಹಾಗೂ ಕ್ರಾಸ್‌ಬಾರ್ ಉಪಕರಣಗಳು ಹಳೆಯ ನಮೂನೆಯವಾಗಿದ್ದು ಅವುಗಳು ವಿಶ್ವಾಸಕ್ಕೆ ಅರ್ಹವಾದವುಗಳಲ್ಲವೆಂಬುದು ಈ ದೇಶದ ಟೆಲಿಫೋನ್ ಬಳಕೆದಾರರ ಅನುಭವ ವೇದ್ಯ ಸತ್ಯ. ಟೆಲಿಫೋನ್ ವ್ಯವಸ್ಥೆಯ ಆಧುನೀಕರಣ ಆಗಲೇ ಬೇಕು. ಅದಕ್ಕೆ ಇಲೆಕ್ಟ್ರಾನಿಕ್ ಸ್ವಿಚಿಂಗ್ ವ್ಯವಸ್ಥೆಯನ್ನು ಉತ್ಪಾದಿಸಿ ಅಳವಡಿಸಬೇಕು. ಟೆಲಿಫೋನ್‌ಗೆ ಬೇಡಿಕೆ ಈ ದೇಶದಲ್ಲಿ ಅಗಾಧವಾಗಿದೆ. ಈಗ ನಮ್ಮಲ್ಲಿ ಒಂದು ಸಾವಿರ ಮಂದಿಗೆ ನಾಲ್ಕು ಟೆಲಿಫೋನ್‌ಗಳಂತೆ ಉಂಟು. ಸುಮಾರು 35 ಲಕ್ಷ ಟೆಲಿಫೋನ್‌ಗಳು ಅಸ್ತಿತ್ವದಲ್ಲಿವೆ. 2000 ಸಂವತ್ಸರದ ವೇಳೆಗೆ 2.4 ಕೋಟಿ ಟೆಲಿಫೋನ್‌ಗಳ ಅಗತ್ಯ ಬರುವುದೆಂದು ಯೋಜನಾ ಆಯೋಗವು ಅಂದಾಜು ಮಾಡಿದೆ.

ಇಷ್ಟು ಟೆಲಿಫೋನ್‌ಗಳನ್ನೂ ಅದಕ್ಕೆ ತಕ್ಕಂತೆ ಬೆಳೆಯುವ ಸಂಪರ್ಕ ಜಾಲಕ್ಕೆ ಬೇಕಾದ ಸ್ವಿಚಿಂಗ್ ಮತ್ತಿತರ ಉಪಕರಣಗಳನ್ನೂ ನಮ್ಮಲ್ಲೇ ಉತ್ಪಾದಿಸುವುದು ಬೇಡವೇ? ಎಲ್ಲವನ್ನೂ ಆಮದು ಮಾಡಿಕೊಂಡು ನಿಭಾಯಿಸುವುದು ಸಾಧ್ಯವೇ? ಏಳನೆ ಯೋಜನೆಯಲ್ಲಿ ಸುಮಾರು 700 ಕೋಟಿ ರೂಪಾಯಿ ವೆಚ್ಚದಲ್ಲಿ ಸಂಪರ್ಕ ಉಪಕರಣಗಳನ್ನು ಆಮದು ಮಾಡಿಕೊಳ್ಳಲು ಸರಕಾರ ನಿರ್ಧರಿಸಿದ ಹಿನ್ನೆಲೆಯಲ್ಲಿ ಇಲೆಕ್ಟ್ರಾನಿಕ್ ವಿಚಾರದಲ್ಲಿ ದೇಶೀಯ ಉತ್ಪಾದನೆಗೆ ಹಣ ವೆಚ್ಚ ಮಾಡುವುದು ಕಿಳಿಗೇಡಿತನವೆಂಬ ತೀರ್ಮಾನಕ್ಕೇನಾದರೂ ಸರಕಾರ ಬಂದಿದೆಯೇ ಎಂಬ ಸಂದೇಹ ಉಂಟಾಗುವುದು ಸಹಜ.

ಬೆಂಗಳೂರಿನ ಪ್ರಸ್ತಾಪಿತ ಇಲೆಕ್ಟ್ರಾನಿಕ್ ಸ್ವಿಚಿಂಗ್ ಕಾರ್ಖಾನೆಯ ವಿಷಯದಲ್ಲಿ ಉದ್ಯೋಗಾವಕಾಶದ ಪ್ರಶ್ನೆ ತುಂಬ ಮಹತ್ವದ್ದು. ಬೇರೆಲ್ಲಾ ಪರಿಗಣನೆಗಳ ನಡುವೆ ಅದನ್ನೂ ನಮ್ಮ ಯೋಜನೆ ತೀರ್ಮಾನಿಸುವವರು ಪರಿಶೀಲಿಸಬೇಕು. ಬೆಂಗಳೂರಿನ ಐ.ಟಿ.ಐ ಈಗ ಹಳೆ ನಮೂನೆಯ ಸ್ವಿಚಿಂಗ್ ಉಪಕರಣಗಳನ್ನು ಉತ್ಪಾದಿಸುತ್ತಿದೆ. 1989ರ ವೇಳೆಗೆ ಈ ಉಪಕರಣಗಳ ಉತ್ಪಾದನೆಯನ್ನು ನಿಲ್ಲಿಸಲಾಗುತ್ತವೆ. ಆ ವೇಳೆಗೆ ಇಲೆಕ್ಟ್ರಾನಿಕ್ ಸ್ವಿಚಿಂಗ್ ಉಪಕರಣಗಳ ಕಾರ್ಖಾನೆ ಕಾರ್ಯಾರಂಭಿಸಬೇಕು. ಇಲ್ಲವಾದರೆ 9,000 ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ಇವರಿಗೆ ಐಟಿಐನಲ್ಲಿ ಕೆಲಸವಿಲ್ಲವೆಂದಾದರೆ ಸರಕಾರ ಬೇರೆಲ್ಲಿ ಕೆಲಸ ಕೊಡುತ್ತದೆ? ಆಧುನಿಕ ಸಂಪರ್ಕ ಸಾಮಗ್ರಿಗಳ ಉತ್ಪಾದನೆಯ ಪರಿಣತಿಯನ್ನೂ ಅನುಭವವನ್ನೂ ಗಳಿಸಿಕೊಂಡಿರುವ ಈ ಮಂದಿಯ ಅನುಭವದ ಲಾಭವನ್ನು ಬೇರೆ ಯಾವ ರೂಪದಲ್ಲಿ ಸರಕಾರ ಸಮಾಜಕ್ಕೆ ಒದಗಿಸಿ ಕೊಡುತ್ತದೆ?

ಇಲೆಕ್ಟ್ರಾನಿಕ್ ಸ್ವಿಚಿಂಗ್‌ನ ಒಂದನೇ ಘಟಕವೇ ಬೆಂಗಳೂರಲ್ಲಿ ಸ್ಥಾಪನೆಗೊಳ್ಳುವ ಪ್ರಸ್ತಾಪ ಇತ್ತು. ಹಟಾತ್ತಾಗಿ ಯೋಜನೆಯನ್ನು ಉತ್ತರಪ್ರದೇಶದ ಮಾನಕಪುರಕ್ಕೆ ವರ್ಗಾಯಿಸಲಾಯಿತು. ಈ ಜಾಗ ರಾಜೀವ ಗಾಂಧಿಯವರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಇಲೆಕ್ಟ್ರಾನಿಕ್ ಸ್ವಿಚಿಂಗ್‌ನ ಎರಡನೇ ಘಟಕವನ್ನು ಬೆಂಗಳೂರಲ್ಲೇ ಸ್ಥಾಪಿಸಲಾಗುವುದೆಂದು ಸಂಬಂಧಪಟ್ಟ ಸಚಿವರು ಸಂಸತ್ತಿನಲ್ಲಿ ಆಶ್ವಾಸನೆಯನ್ನೂ ಕೊಟ್ಟಿದ್ದರು. ಆದರೀಗ ಕೇಂದ್ರ ಸರಕಾರದ ಮಾತಿನ ಧಾಟಿಯೇ ಬೇರೆಯಾಗಿದೆ. ಜಾಗದ ಬಗ್ಗೆ ಇನ್ನೂ ತೀರ್ಮಾನ ಆಗಿಲ್ಲ ಎಂದು ಪ್ರಕಟಿಸಲಾಗಿದೆ. ಹಾಗಿದ್ದರೆ 9000 ನೌಕರರಿಗೆ ಸರಕಾರ ಯಾವ ಗತಿಯನ್ನು ಕಾಣಿಸುತ್ತದೆ ಎಂಬುದನ್ನು ಹೇಳಬೇಕು.

ಕರ್ನಾಟಕಕ್ಕೆ ಅನೇಕ ದಶಕಗಳ ಹಿಂದೆ ದೊರೆತ ಕೆಲವು ದೊಡ್ಡ ಉದ್ಯಮಗಳ ಹೊರತು ಆ ಮೇಲೆ ಇಲ್ಲಿನ ಕೈಗಾರಿಕಾರಂಗವನ್ನು ಬೆಳೆಸುವುದಕ್ಕೆ ಕೇಂದ್ರ ಪ್ರೋತ್ಸಾಹ ಕೊಟ್ಟಿಲ್ಲ. ಪರಿಣಾಮವಾಗಿ ಕರ್ನಾಟಕ ಕೈಗಾರಿಕೆಯಲ್ಲಿ ಹಿಂದೆ ಬಿದ್ದಿದೆ. ವಿಜಯನಗರ ಉಕ್ಕಿನ ಕಾರ್ಖಾನೆಯು ಕೆಸರುಕಲ್ಲು ಮಣ್ಣು ತಿನ್ನುತ್ತಿದೆ. ವಿದ್ಯುತ್ ಸ್ಥಾವರಗಳ ಸ್ಥಾಪನೆ ಆಗದೆ ಈ ರಾಜ್ಯವು ತೀವ್ರ ವಿದ್ಯುತ್ ಅಭಾವದ ಮುಷ್ಟಿಯಲ್ಲಿದೆ. ಬೇರಾವ ದೊಡ್ಡ ಯೋಜನೆಯೂ ಕಳೆದ ಎರಡು ದಶಕಗಳಲ್ಲಿ ಕರ್ನಾಟಕದಲ್ಲಿ ಆಗಿಲ್ಲ. ಮಂಗಳೂರು ತೈಲಾಗಾರದ ಬಗ್ಗೆ ಭರವಸೆಯ ಮಾತುಗಳು ಬರುತ್ತಿವೆಯೇ ಹೊರತು ಕೇಂದ್ರ ಸಂಪುಟದ ತೀರ್ಮಾನ ಇನ್ನಷ್ಟೇ ಬರಬೇಕಾಗಿದೆ. ರಾಜ್ಯದಲ್ಲಿ ರೈಲು ಜಾಲ ವಿಸ್ತರಿಸುವುದರಲ್ಲಿ ಇಲಾಖೆಯೂ ಹಿಂದಿದೆ.

ಉತ್ತರದಲ್ಲಿ ಅಭಿವೃದ್ಧಿ ಆಗಬಾರದೆಂದು ಯಾರೂ ಹೇಳುವುದಿಲ್ಲ. ಆದರೆ ಅಭಿವೃದ್ಧಿಯ ಅಸಮತೋಲನ ಮಾತ್ರ ಆಗಬಾರದು. ಸ್ವಿಚಿಂಗ್ ಕಾರ್ಖಾನೆ ವಿಷಯದಲ್ಲಿ 9000 ಕಾರ್ಮಿಕರ ಬದುಕಿನ ಪ್ರಶ್ನೆ ಕೂಡಾ ಸೇರಿದೆ

ಆದ್ದರಿಂದ ಆ ಕಾರ್ಖಾನೆ ಬೆಂಗಳೂರಲ್ಲಿ ಆಗಬೇಕು. ಸಂಬಂಧಪಟ್ಟವರೆಲ್ಲ ರಾಜಕೀಯ ಭಿನ್ನಮತ ಬದಿಗಿಟ್ಟು ಇದಕ್ಕಾಗಿ ಕೆಲಸ ಮಾಡಬೇಕು.

ಮುಂಗಾರು
ಗುರುವಾರ, ಮೇ 15, 1986

ಜನಹಿತದ ಕಲ್ಪನೆಬೇಕು

ಹದಿನೇಳು ತಿಂಗಳುಗಳಲ್ಲಿ ಮೂರನೆಯ ಬಾರಿ ಮೊನ್ನೆ ದಿನಾಂಕ 12ರಂದು ಕೇಂದ್ರ ಸಚಿವ ಸಂಪುಟದ ಪುನರ್ಘಟನೆ ನಡೆಯಿತು. ಇಬ್ಬರು ಕ್ಯಾಬಿನೆಟ್ ದರ್ಜೆಯವರೂ ಸೇರಿದಂತೆ 12ಮಂದಿ ಹೊಸ ಸಚಿವರು ಪ್ರಧಾನ ಮಂತ್ರಿ ರಾಜೀವಗಾಂಧಿಯವರ ಸಂಪುಟ ಸೇರಿದರು.

ಮಾನವ ಸಂಪನ್ಮೂಲ ಅಭಿವೃದ್ಧಿಯೆಂಬ ಹೊಸ ಹೆಸರಿನ ಶಿಕ್ಷಣ ಖಾತೆಯ ಮಂತ್ರಿಯಾಗಿ ಮಾಡಲಾಗಿದ್ದ ಪಿ.ವಿ ನರಸಿಂಹರಾವ್ ಅವರೇ ಕೆಲವು ದಿನಗಳಿಂದ ನೋಡಿಕೊಳ್ಳುತ್ತಿದ್ದ ಗೃಹ ಸಚಿವ ಖಾತೆಯನ್ನು ಪಂಜಾಬಿನ ಬೂಟಾಸಿಂಗರಿಗೆ ವಹಿಸಿಕೊಡಲಾಗಿದೆ. ಎಂಟು ತಿಂಗಳಿನಿಂದ ವಿದೇಶ ವ್ಯವಹಾರ ಖಾತೆ ನೋಡಿಕೊಳ್ಳುತ್ತಿದ್ದು, ಪ್ರಮಾದವೇನನ್ನೂ ಮಾಡದೆ ಕೆಲಸ ಕಾರ್ಯಗಳನ್ನು ತೂಗಿಸಿಕೊಂಡು ಹೋಗುತ್ತಿದ್ದ ಬಿ.ಆರ್. ಭಗತ್‌ರನ್ನು ಕೈಬಿಡಲಾಗಿದೆ. ಇದು ಯಾವ ರಾಜಕೀಯ ಕಾರಣಕ್ಕೋ ಗೊತ್ತಾಗಿಲ್ಲ. ಆಡಳಿತೆಯ ಸುಧಾರಣೆಯ ದೃಷ್ಟಿಯಿಂದಂತೂ ಆಗಿರಲಿಕ್ಕಿಲ್ಲ. ಹತ್ತು ವರ್ಷಗಳಿಂದ ಅಧಿಕಾರ ಸ್ಥಾನದಿಂದ ಹೊರಗಿದ್ದ ಮಾಜಿ ಲೋಕಸಭಾ ಸ್ಪೀಕರ್ ಜಿ.ಎಸ್. ಧಿಲ್ಲಾನ್ ಅವರನ್ನು ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿ ಖಾತೆಯ ಸಚಿವರನ್ನಾಗಿ ಮಾಡಲಾಗಿದೆ. ಜಮ್ಮು ಕಾಶ್ಮೀರದ ಕಾಂಗ್ರೆ ಘಟಕದ ಅಧ್ಯಕ್ಷ ಮುಫ್ತಿ ಮೊಹಮ್ಮದ್ ಸಯೀದ್ ಅವರನ್ನು ಕೇಂದ್ರಕ್ಕೆ ತೆಗೆದುಕೊಂಡದ್ದು ಕೇವಲ ರಾಜಕೀಯ ಕಾರಣಕ್ಕಾಗಿ ಎಂಬುದು ಸ್ಪಷ್ಟ.

ರಾಜ್ಯ ದರ್ಜೆಗೆ ತೆಗೆದುಕೊಂಡ ಇತರ ಹತ್ತು ಮಂದಿಯನ್ನು ಪ್ರಾದೇಶಿಕ ಪ್ರಾತಿನಿಧ್ಯದ ಉದ್ದೇಶಕ್ಕಾಗಿ ಸೇರಿಸಿಕೊಂಡಂತಿದೆ. ಇವರಲ್ಲಿ ಅನೇಕರ ಆಡಳಿತ ಸಾಮರ್ಥ್ಯ ಇನ್ನಷ್ಟೇ ಗೋಚರವಾಗಬೇಕಾಗಿದೆ. ಅಷ್ಟೇ ಅಲ್ಲದೆ ದಕ್ಷಿಣಕ್ಕೆ ಸಂಪುಟದಲ್ಲಿ ಪ್ರಾತಿನಿಧ್ಯ ಕಮ್ಮಿ ಇದೆ. ಆಗಸ್ಟ್ ತಿಂಗಳಲ್ಲಿ ಪೂರ್ಣಗೊಳ್ಳುವ ಕಾಂಗ್ರೆ ಸಾಂಸ್ಥಿಕ ಚುನಾವಣೆಯ ನಂತರ ಇನ್ನೊಂದು ಸಂಪುಟ ಪುನರ್ಘಟನೆ ಮಾಡಿ ಈ ಕೊರತೆಯನ್ನು ತುಂಬಿಸಿಕೊಳ್ಳುವ ಸೂಚನೆಗಳಿವೆ.

ಈ ಮೂರು ಬಾರಿಯ ಸಂಪುಟ ಪುನಾರಚನೆಯಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತಿರುವ ವಿಚಾರವೆಂದರೆ ಕಾಂಗ್ರೆ ಪಕ್ಷದಲ್ಲಿ ಪ್ರತಿಭೆಯ ಅಭಾವ ಇದೆ ಎಂಬುದು. ಕಾಂಗ್ರೆ ಒಂದು ದೊಡ್ಡ ರಾಷ್ಟ್ರೀಯ ಪಕ್ಷ. ಅದನ್ನು ಬುದ್ಧಿ ಬಡತನವು ಇಷ್ಟು ದೊಡ್ಡ ಮಟ್ಟದಲ್ಲಿ ಬಾಧಿಸಿರುವುದು ವಿಚಿತ್ರವೆನಿಸುತ್ತದೆ. ಈ ವಿದ್ಯಮಾನಕ್ಕೆ ಮುಖ್ಯ ಕಾರಣ ಸ್ವಾತಂತ್ರ್ಯಾನಂತರದ ನಡುಗಾಲದಲ್ಲಿ ನಮ್ಮ ರಾಜಕಾರಣವು ಹಾಗೂ ಅಧಿಕಾರ ವ್ಯವಸ್ಥೆಯು ವ್ಯಕ್ತಿಪೂಜೆಯತ್ತ ವಾಲಿದ್ದು ಹಾಗೂ ತತ್ವದ ನೆಲೆಯಿಲ್ಲದ, ಜನಸೇವೆಯ ಹಿನ್ನೆಲೆಯಿಲ್ಲದ ಮಂದಿ ರಾಜಕಾರಣವನ್ನು ಉದ್ಯೋಗವನ್ನಾಗಿಸಿಕೊಂಡು ಭ್ರಷ್ಟಗೊಂಡ ಅಧಿಕಾರ ವ್ಯವಸ್ಥೆಯೆಂಬ ಹುಲುಸಾದ ಹುಲ್ಲುಗಾವಲಿನಲ್ಲಿ ಮೇದು ಅಡ್ಡಾಡ ತೊಡಗಿದ್ದು.

ಇದರ ಪರಿಣಾಮವಾಗಿ ಇಷ್ಟು ದೊಡ್ಡ ಪಕ್ಷದಲ್ಲಿ ಸಂಪುಟದ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಬಲ್ಲ ತಾಕತ್ತುಳ್ಳ ಜನರ ಪೈಕಿ ಹೆಕ್ಕಿ ತೆಗೆಯುವಂತಹ ಸಮೃದ್ಧಿಯ ಸನ್ನಿವೇಶವು ಇಲ್ಲದೆ ಹೋಯಿತು.

ಇದನ್ನು ಸುಧಾರಿಸುವ ಕೆಲಸವನ್ನು ಈ ಪಕ್ಷದ ಅಪ್ರತಿಹತ ನಾಯಕರೆನಿಸಿದ ರಾಜೀವಗಾಂಧಿಯವರು ಮಾಡಬೇಕಿತ್ತು. ನಾಯಕತ್ವ ವಹಿಸಿ 17 ತಿಂಗಳೇ ಕಳೆದು ಹೋದರೂ ಅವರು ಆ ಬಗ್ಗೆ ವಿಶೇಷ ಗಮನ ಕೊಟ್ಟಂತಿಲ್ಲ. ಪಕ್ಷಕ್ಕೆ ತತ್ವದ ಸಿದ್ಧಾಂತದ ತಳಹದಿಯನ್ನು ಒದಗಿಸಬೇಕು. ಇಲ್ಲವಾದರೆ ರಾಜಕಾರಣವು ತನ್ನ ಧ್ಯೇಯೋದ್ದೇಶಗಳನ್ನು ಕಳೆದುಕೊಳ್ಳುತ್ತದೆ. ಆಡಳಿತಕ್ಕೆ ಮೊನಚು ದೊರೆಯದೆ ಹೋಗುತ್ತದೆ. ಜನಹಿತದ ಕಲ್ಪನೆಯೂ ನಾಡಿನ ಅಭಿವೃದ್ಧಿಯ ಪರಿಕಲ್ಪನೆಯೂ ಉಳ್ಳ ಜನರು ತಯಾರಾಗದೆ ಹೋಗುತ್ತಾರೆ. ಇಂತಹ ನಾಯಕತ್ವದ ಅಭಾವ ಇರುವಲ್ಲಿ ಎಷ್ಟು ಸಂಪುಟ ಪುನರ್ರಚನೆಗಳು ನಡೆದರೂ ಆಡಳಿತವು ಕಸುವನ್ನು ಗಳಿಸಿಕೊಂಡು ಜನಸಾಮಾನ್ಯರಿಗೆ ಹಿತ ಮಾಡುವ ಕೆಲಸ ಪೂರೈಸುವುದಿಲ್ಲ.

ಮುಂಗಾರು
ಶುಕ್ರವಾರ, ಮೇ 16, 1986

ನ್ಯಾಯ ಪರಿಪಾಲನೆಯ ಹೊಸ ಮಜಲು

ಭೂಪಾಲದಲ್ಲಿ 1984 ರ ಡಿಸೆಂಬರ್ 3 ನೇ ದಿನಾಂಕ ಸಂಭವಿಸಿದ ಭಯಾನಕ ಅನಿಲ ಸ್ರಾವ ದುರಂತಕ್ಕೆ ಸಂಬಂಧಿಸಿದಂತೆ ಅಮೆರಿಕದ ಫೆಡರಲ್ ಜಿಲ್ಲಾ ನ್ಯಾಯಾಲಯವು ಮಹತ್ವದ ತೀರ್ಪನ್ನು ಕೊಟ್ಟಿದೆ. ಈ ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬದವರಿಗೆ ಹಾಗೂ ಅಂಗವಿಕಲರಾದವರಿಗೆ ಹಾಗೂ ಗಾಯಗೊಂಡವರಿಗೆ ಪರಿಹಾರ ಕೊಡುವ ವಿವಾದವನ್ನು ಭಾರತದ ನ್ಯಾಯಾಲಯದಲ್ಲೇ ವಿಚಾರಣೆಗೊಳಪಡಿಸಿ ಬಗೆಹರಿಸಿಕೊಳ್ಳಬೇಕೆಂದು ಅಮೆರಿಕದ ನ್ಯಾಯಾಧೀಶ ಜಾನ್. ಎಫ್. ಕೀನನ್ ಮೊನ್ನೆ 12 ರಂದು ತೀರ್ಪು ಕೊಟ್ಟಿದ್ದಾರೆ.

ಈ ತೀರ್ಪು ಸಾಮಾನ್ಯ ರೂಪದ್ದಾಗಿದ್ದರೆ ಪ್ರಕರಣದಲ್ಲಿ ಪ್ರತಿವಾದಿಯಾಗಿರುವ ಯೂನಿಯನ್ ಕಾರ್ಬೈಡ್ ಕಾರ್ಪೊರೇಶನಿಗೆ ಅನುಕೂಲವೂ ಸಂತೋಷವೂ ಆಗುತ್ತಿತ್ತು. ವಿಚಾರಣೆಯು ಅಮೆರಿಕದಲ್ಲಾಗಕೂಡದು, ಭಾರತದಲ್ಲೇ ಆಗಬೇಕು ಎಂದು ಕಾರ್ಪೊರೇಶನಿನ ವಾದವಾಗಿತ್ತು. ಭಾರತದಲ್ಲಿ ಕೋರ್ಟುಗಳು ವಿಧಿಸುವ ಪರಿಹಾರದ ಮೊತ್ತ ಕಡಿಮೆ ಎಂಬುದು ಈ ವಾದಕ್ಕೆ ಒಂದು ಕಾರಣವಾಗಿದ್ದರೆ ಭಾರತದ ನ್ಯಾಯಾಂಗದ ಯಾವ ಆಜ್ಞೆಯೂ ಯೂನಿಯನ್ ಕಾರ್ಬೈಡ್‌ನ ಭೂಪಾಲ ಘಟಕದ ಆಸ್ತಿ-ಪಾಸ್ತಿಗಳನ್ನು ಮೀರಿ ಹೋಗದು ಎಂಬ ತಿಳುವಳಿಕೆಯು ಇನ್ನೊಂದು ಪ್ರಬಲ ಕಾರಣವಾಗಿತ್ತು.

ಭಾರತದಲ್ಲಿ ಇಂತಹ ವಿಚಾರಣೆಯನ್ನೆದುರಿಸಲು ಯೂನಿಯನ್ ಕಾರ್ಬೈಡ್‌ಗೆ ಫೆಡರಲ್ ಕೋರ್ಟಿನ ನ್ಯಾಯಾಧೀಶರು ಕೆಲವು ಮಹತ್ವದ ಷರತ್ತುಗಳನ್ನು ಹಾಕಿರುವುದರಿಂದಲೇ ಈ ತೀರ್ಪಿಗೆ ಮಹತ್ವ ಬಂದಿದೆ. ಭಾರತೀಯ ನ್ಯಾಯಾಂಗವು ಈ ಪ್ರಕರಣದಲ್ಲಿ ನೀಡಿದ ಯಾವುದೇ ತೀರ್ಪನ್ನು ಗೌರವಿಸುವುದಾಗಿ ಫೆಡರಲ್ ಕೋರ್ಟು ಹೇಳಿದೆ. ಭಾರತೀಯ ನ್ಯಾಯಾಲಯವು ಕೇಳುವ ಎಲ್ಲಾ ದಾಖಲೆಗಳನ್ನೂ ಸಾಕ್ಷ್ಯಗಳನ್ನೂ ಮಂಡಿಸಬೇಕೆಂದು ಕಾರ್ಬೈಡ್ ಸಂಸ್ಥೆಗೆ ನಿರ್ದೇಶ ನೀಡಲಾಗಿದೆ. ಭಾರತೀಯ ನ್ಯಾಯಾಲಯದ ತೀರ್ಪಿಗೆ ಕಂಪೆನಿಯು ಬದ್ಧವಾಗಿರಬೇಕೆಂದು ವಿಧಿಸಲಾಗಿದೆ. ಅಲ್ಲದೆ ಅಮೆರಿಕದ ಸಿವಿಲ್ ಪಟ್ಲೆಗಳಲ್ಲಿ ಉಪಯೋಗಿಸುವಂತಹ ದಂಡನೆ ವಸೂಲಿ ನಿಯಮಗಳನ್ನೇ ಭಾರತದಲ್ಲಿನ ತೀರ್ಪಿಗೆ ಸಂಬಂಧಿಸಿಯೂ ಒಪ್ಪಿಕೊಳ್ಳಬೇಕೆಂದು ತಿಳಿಸಲಾಗಿದೆ.

ಇದೆಲ್ಲವನ್ನೂ ಪರಿಶೀಲಿಸಿದರೆ ಅಮೆರಿಕದ ನ್ಯಾಯಾಲಯವು ನೀಡಿದ ತೀರ್ಮಾನ ಅಂತರ್‌ರಾಷ್ಟ್ರೀಯ ನ್ಯಾಯ ಪರಿಪಾಲನೆ ಕ್ಷೇತ್ರದಲ್ಲಿ ಒಂದು ಹೊಸ ಮಜಲು ಎಂಬ ಪರಿಗಣನೆಗೆ ಅರ್ಹವೆನಿಸುತ್ತದೆ. ಈ ತೀರ್ಪಿನ ಮೂಲಕ ಭಾರತದ ನ್ಯಾಯಾಂಗವನ್ನು ಅಮೆರಿಕದ ನ್ಯಾಯಾಂಗವು ಗೌರವಿಸಿ ಮಾನ್ಯ ಮಾಡಿದಂತಾಗಿದೆ. ಭೂಪಾಲದ ಅನಿಲ ದುರಂತದ ಪರಿಹಾರ ನೀಡಿಕೆಗೆ ಸಂಬಂಧಪಟ್ಟ ಹಾಗೆ ಅಮೆರಿಕದ ನ್ಯಾಯಾಂಗವು ತನ್ನ ವ್ಯಾಪ್ತಿಯನ್ನೇ ಭಾರತಕ್ಕೂ ವಸ್ತುಶಃ ವಿಸ್ತರಿಸಿದಂತಾಗಿದೆ. ಭಾರತದಲ್ಲಿ ನೀಡುವ ಯಾವುದೇ ತೀರ್ಪನ್ನು ಅಮೆರಿಕದಲ್ಲಿ ಅನುಷ್ಠಾನಿಸಬಹುದಾಗಿದೆ. ಅಮೆರಿಕದ ಕಾರ್ಯಾಂಗವು ಅದನ್ನು ಮಾಡಲೇಬೇಕಾಗುತ್ತದೆ. ಫೆಡರಲ್ ಕೋರ್ಟಿನ ನ್ಯಾಯಾಧೀಶರ ಅಭಿಪ್ರಾಯವನ್ನು ಗಮನಿಸಿದರೆ ಮುಂದೆ ಈ ಪ್ರಕರಣ ಭಾರತದ ಸುಪ್ರೀಂಕೋರ್ಟನ್ನು ತಲುಪಿದರೆ, ಅದು ನೀಡಬಹುದಾದ ತೀರ್ಪನ್ನು ಅಮೆರಿಕದ ಸುಪ್ರೀಂ ಕೋರ್ಟು ತನ್ನ ತೀರ್ಮಾನವೆಂದೇ ಪರಿಗಣಿಸಿ ಜಾರಿಗೆ ಕೊಡಬಹುದಾದ ಸೂಚನೆಗಳಿವೆ.

ಇದು ಅಂತರ್‌ರಾಷ್ಟ್ರೀಯ ನ್ಯಾಯಾಂಗ ಸಹಕಾರದಲ್ಲಿ ಒಂದು ಮಹತ್ವದ ಮೈಲಿಗಲ್ಲು. ಇಂತಹ ಒಳ್ಳೆಯ ಪರಂಪರೆ ಬೆಳೆದರೆ ತೃತೀಯ ಜಗತ್ತಿನ ಸಾಮಾನ್ಯ ಜನರನ್ನು ಮೋಸ ಮಾಡಿ ದೋಚಿ ಹಣದ ಗಂಟು ಮಾಡುವೆವೆಂಬ ಮುಂದುವರಿದ ದೇಶಗಳ ಬಹುರಾಷ್ಟ್ರೀಯ ಕಂಪೆನಿಗಳು ಎಚ್ಚರದಿಂದ ಕೆಲಸ ಮಾಡುವಂತಾಗುತ್ತದೆ.

ಭೋಪಾಲ ದುರಂತದ ಸಂತ್ರಸ್ತರಿಗೆ ನ್ಯಾಯಾಲಯದ ಹೊರಗೆ ಒಡಂಬಡಿಕೆಯಾಗುವುದಿದ್ದರೆ 420 ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ಕೊಡಲು ಯೂನಿಯನ್ ಕಾರ್ಬೈಡ್ ಈಗಾಗಲೇ ಒಪ್ಪಿಕೊಂಡಿದೆ. ಅದನ್ನು ಭಾರತ ಸರಕಾರ ತಳ್ಳಿಹಾಕಿತ್ತು. ಇದೀಗ ಭಾರತದ ಕೋರ್ಟಿನಲ್ಲಿ ಪ್ರಕರಣ ಇತ್ಯರ್ಥಗೊಳ್ಳಬೇಕು. ಅದನ್ನು ಕಂಪೆನಿ ಒಪ್ಪಿಕೊಳ್ಳಬೇಕು ಎಂದು ಅಮೆರಿಕ ನ್ಯಾಯಾಲಯ ತೀರ್ಮಾನ ಹೇಳಿರುವುದರಿಂದ ಭಾರತ ಸರಕಾರ ಕ್ಷಿಪ್ರವಾಗಿ ಕೇಸು ದಾಖಲಿಸಬೇಕು. ವಿಚಾರಣೆ ತ್ವರಿತವಾಗಿ ನಡೆಯಬೇಕು. ಭಾರತದ ನ್ಯಾಯಾಲಯವೂ ನ್ಯಾಯ ತೀರ್ಮಾನದಲ್ಲಿ ಅಮೆರಿಕದ ಉದಾರ ನೀತಿಯನ್ನು ಸರಿಗಟ್ಟಬೇಕು.

ಮುಂಗಾರು
ಶನಿವಾರ, ಮೇ 17, 1986

ಸತ್ಯ ಬಚ್ಚಿಡಬೇಡಿ

ತನಿಖಾ ಆಯೋಗಗಳ ವರದಿಗಳನ್ನು ಸಂಸತ್ತಿನಲ್ಲಿ ಹಾಗೂ ಶಾಸನ ಸಭೆಗಳಲ್ಲಿ ಮಂಡಿಸದೆ ತಡೆ ಹಿಡಿಯುವ ಅಧಿಕಾರವನ್ನು ಸರಕಾರವು ಸುಗ್ರೀವಾಜ್ಞೆಯೊಂದರ ಮೂಲಕ ಕೈಗೆ ತೆಗೆದುಕೊಂಡಿದೆ. 1952 ರ ತನಿಖಾ ಆಯೋಗಗಳ ಶಾಸನದ ಮೂರನೇ ವಿಭಾಗವನ್ನು ತಿದ್ದುವ ಮೂಲಕ ಈ ಅವಕಾಶವನ್ನು ನಿರ್ಮಿಸಲಾಗಿದೆ. ಈ ಕಾನೂನಿನ ಅನ್ವಯ ನೇಮಿಸಲಾದ ನ್ಯಾಯಾಂಗ ತನಿಖಾ ಆಯೋಗಗಳ ವರದಿಗಳನ್ನು ಸರಕಾರದ ಸೂಕ್ತ ಟಿಪ್ಪಣಿ ಸಹಿತ ಸಂಸತ್ತಿನಲ್ಲಿ ಅಥವ ರಾಜ್ಯ ಸರಕಾರಗಳಾದರೆ ರಾಜ್ಯ ಶಾಸನಸಭೆಯಲ್ಲಿ ಆರು ತಿಂಗಳೊಳಗೆ ಮಂಡಿಸಬೇಕು ಎಂದು ಮೂರನೇ ವಿಭಾಗವು ತಿಳಿಸುತ್ತದೆ.

ಈಗ ಇದನ್ನು ತಿದ್ದಲಾಗಿದ್ದು "ಭಾರತದ ಸಾರ್ವಭೌಮತೆ ಹಾಗೂ ಸಮಗ್ರತೆಯ ಹಿತದೃಷ್ಟಿಯಿಂದ. ರಾಷ್ಟ್ರದ ಭದ್ರತೆ ದೃಷ್ಟಿಯಿಂದ ವಿದೇಶಿ ರಾಷ್ಟ್ರಗಳ ಜತೆಗಿನ ಸ್ನೇಹಪರ ಬಾಂಧವ್ಯದ ದೃಷ್ಟಿಯಿಂದ ಅಥವಾ ಸಾರ್ವಜನಿಕ ಹಿತದ ದೃಷ್ಟಿಯಿಂದ" ತನಿಖಾ ಆಯೋಗಗಳ ವರದಿಯನ್ನು ತಡೆಹಿಡಿಯಬಹುದು ಎಂದು ತಿದ್ದುಪಡಿಯು ಹೇಳುತ್ತದೆ.

ದೇಶದಲ್ಲಿ, ಮುಖ್ಯವಾಗಿ ಪಂಜಾಬಿಗೆ ಸಂಬಂಧಿಸಿ ಕ್ಷೋಭೆ, ಇರುವುದೇ ಈ ತಿದ್ದುಪಡಿಗೆ ಹಿನ್ನೆಲೆಯಾಗಿದೆ. ಪಂಜಾಬಿನ ಕ್ಷೋಭೆಯಿಂದ ಹುಟ್ಟಿದ ಹಲವು ವಿದ್ಯಮಾನ ಹಾಗೂ ಪ್ರಶ್ನೆಗಳ ವಿಷಯವಾಗಿ ಈಗ ನ್ಯಾಯಾಂಗ ತನಿಖಾ ಆಯೋಗಗಳು ತನಿಖೆ ನಡೆಸುತ್ತಿವೆ. ಅವುಗಳ ಪೈಕಿ ಒಂದೆರಡರ ಕೆಲಸ ಕಾರ್ಯಗಳು ಮುಗಿದಿರುವ ಸೂಚನೆಗಳಿವೆ. ಇಂದಿರಾಗಾಂಧಿ ಕೊಲೆಯ ಬಗ್ಗೆ ತನಿಖೆ ನಡೆಸಿದ ಥಕ್ಕರ್ ಆಯೋಗ ಹಾಗೂ ದೆಹಲಿಯಲ್ಲಿ ಸಿಕ್ಖರ ಮೇಲೆ ನಡೆದ ಹಿಂಸಾಚಾರವನ್ನು ವಿಚಾರಿಸಿದ ರಂಗನಾಥ ಮಿಶ್ರಾ ಆಯೋಗ ವರದಿಗಳನ್ನು ಈಗಾಗಲೇ ಸಲ್ಲಿಸಿರಬಹುದು. ಅಥವ ಸಿದ್ಧಪಡಿಸುತ್ತಿರಬಹುದು. ಇವೆರಡೂ ಆಯೋಗಗಳು ವಿಚಾರಣೆಯನ್ನು ರಹಸ್ಯವಾಗಿ ನಡೆಸಿದ್ದವು. ಇದೇ ವೇಳೆ ಪಂಜಾಬ್-ಹರ್ಯಾಣ ಗಡಿ ಪ್ರಶ್ನೆ ಬಗ್ಗೆ ಇ. ಎಸ್. ವೆಂಕಟರಾಮಯ್ಯ ಆಯೋಗವು ತನಿಖೆ ನಡೆಸುತ್ತಿದೆ. ಈ ಎಲ್ಲಾ ಆಯೋಗಗಳ ವರದಿಗಳು ಸೂಕ್ಷ್ಮ ಸ್ವರೂಪದವುಗಳಾಗಿರುವ ಸಾಧ್ಯತೆ ಇದೆ. ಆದ್ದರಿಂದಲೇ ಈ ವರದಿಗಳನ್ನು ಅಗತ್ಯವೆನಿಸಿದರೆ ಬಚ್ಚಿಡಲು ಬೇಕಾದ ಪೂರ್ವ ಸಿದ್ಧತೆಯನ್ನು ಕೇಂದ್ರ ಸರಕಾರ ಈ ಸುಗ್ರೀವಾಜ್ಞೆಯ ಮೂಲಕ ಮಾಡಿದೆ.

ದೇಶವನ್ನಾಳಲು, ವಿಶೇಷ ಅಧಿಕಾರಗಳು ಬೇಕು. ಎಂಬ ಕಲ್ಪನೆಯೇ ನಮ್ಮನ್ನಾಳುವವರು ಸರಿದಾರಿಯಲ್ಲಿಲ್ಲವೆಂಬುದನ್ನು ಸೂಚಿಸುತ್ತದೆ. ಈಗ ಸರಕಾರ ಕೈಗೆ ತೆಗೆದುಕೊಂಡಿರುವ ನಿಜಾಂಶವನ್ನು ಬಚ್ಚಿಡುವ ಅಧಿಕಾರ ದುರುಪಯೋಗಕ್ಕೆ ಈಡಾಗುವ ಎಲ್ಲಾ ಸಾಧ್ಯತೆಗಳಿವೆ. ಆದ್ದರಿಂದ ಈ ಪ್ರವೃತ್ತಿ ಒಳ್ಳೆಯದಲ್ಲ.

ದೇಶದಲ್ಲಿ ಕ್ಷೋಭೆ ಇದ್ದರೆ ಅದನ್ನು ಶಮನಮಾಡಬೇಕು. ಕ್ಷೋಭೆಯು ಸಾಮಾಜಿಕ, ಆರ್ಥಿಕ, ರಾಜಕೀಯ ಕಾರಣಗಳಿಂದ ಹುಟ್ಟುತ್ತದೆ. ಕ್ಷೋಭೆಯ ಮೂಲದಲ್ಲಿರುವ ಪ್ರಶ್ನೆಗಳನ್ನು ಅರಿತು ರಾಜಕೀಯ ಮುತ್ಸದ್ದಿತನದಿಂದ ಅವುಗಳನ್ನು ಬಗೆಹರಿಸಬೇಕು. ಪರಿಸ್ಥಿತಿಯು ವಿಪತ್ಕಾರಿಯಾಗಿದ್ದರೆ ವಿಚ್ಛಿದ್ರಕಾರಕ ಶಕ್ತಿಗಳ ಕೈಮೇಲಾಗಿದ್ದರೆ ಸಮಯ-ಸಂದರ್ಭಕ್ಕೆ ತಕ್ಕಹಾಗೆ ವಿಶೇಷಾಧಿಕಾರಗಳನ್ನು ಕೈಗೆ ತೆಗೆದುಕೊಂಡು ಅಂಥ ಶಕ್ತಿಗಳನ್ನು ದಮನಮಾಡುವುದು ಸರಿ. ಆದರೆ ಹೀಗೆ ವಿಶೇಷಾಧಿಕಾರಗಳನ್ನು ವಹಿಸಿಕೊಳ್ಳುವ ಕೆಲಸವನ್ನು ಜನ ಪ್ರತಿನಿಧಿಗಳ ಸಮ್ಮತಿಯಿಂದಲೇ ಮಾಡಬೇಕು. ಅಂಥ ಸಂದರ್ಭ ಒದಗಿ ಬಂದಿದೆಯೆ. ಅಂಥ ವಿಶೇಷಾಧಿಕಾರದ ಅಗತ್ಯವುಂಟೇ ಎಂದು ಪ್ರಜಾಜನರು ಚರ್ಚಿಸಿ ಅಭಿಪ್ರಾಯ ಪ್ರಕಟಿಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ.

ಇಂದು ಸರಕಾರ ವಹಿಸಿಕೊಂಡಿರುವ ಈ ವಿಶೇಷಾಧಿಕಾರವು ಅವಕಾಶಮಾಡಿರುವುದು ಸತ್ಯವನ್ನು ಮುಚ್ಚಿ ಹಾಕಲಿಕ್ಕೆ. ಸತ್ಯವನ್ನು ಜನರಿಂದ ಮರೆಮಾಚುವುದರಿಂದ ಜನತಂತ್ರವನ್ನು ಬೆಳೆಸುವುದಕ್ಕಾಗುವುದಿಲ್ಲ. ಇದರಿಂದ ಆಡಳಿತ ವ್ಯವಸ್ಥೆಯು ಗೂಢಾತ್ಮಕವಾಗಿ ಪರಿಣಮಿಸುವುದರಿಂದ ವದಂತಿಗಳಿಗೆ ಚಾಲನೆ ದೊರೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನೌಕರ ಶಾಹಿಯು ಲಂಗುಲಗಾಮಿಲ್ಲದೆ ಯಾರ ಹೆದರಿಕೆಯೂ ಇಲ್ಲದೆ ಬೆಳೆದು ಬೀಗುತ್ತದೆ. ಮುಕ್ತವಾಗಿ ನಡೆಯದ ಸರಕಾರ ವ್ಯವಸ್ಥೆಯಲ್ಲಿ ಸಾಮಾನ್ಯ ಜನರನ್ನು ಅಧಿಕಾರಿಗಳು ಶೋಷಿಸುತ್ತಾರೆ. ಎಂತಹ ಪರಿಸ್ಥಿತಿಯೇ ಬಂದರೂ ನಿಜಸ್ಥಿತಿಯನ್ನು ಬಚ್ಚಿಡುವಂತ ವ್ಯವಸ್ಥೆಯ ಬಗ್ಗೆ ಆಲೋಚಿಸುವುದೇ ತಪ್ಪು. ಇದೀಗ ಸರಕಾರ ದಿಕ್ಕೆಟ್ಟು ವರ್ತಿಸಲು ತೊಡಗಿರುವ ಸೂಚನೆ ಈ ಸುಗ್ರೀವಾಜ್ಞೆಯಲ್ಲಿ ಕಾಣಿಸುತ್ತದೆ. ಪರಿಸ್ಥಿತಿಯನ್ನೆದುರಿಸಲು ಜನರ ಸಮ್ಮತಿಯೊಡನೆ ಕಾರ್ಯಾಚರಣೆ ನಡೆಸಬೇಕೇ ಹೊರತು ಜನರಿಂದ ಸತ್ಯವನ್ನು ಬಚ್ಚಿಡುವುದು ಸಲ್ಲದು.

ಸತ್ಯವನ್ನು ಜನರಿಂದ ಮರೆಮಾಚುವ ಪರಂಪರೆ ಬೆಳೆದರೆ ರಾಜಕೀಯ ಭ್ರಷ್ಟಾಚಾರವನ್ನು ನೀರೆರೆದು ಪೋಷಣೆ ಮಾಡಿದಂತಾಗುತ್ತದೆ. ಭ್ರಷ್ಟಾಚಾರ ಆರೋಪಗಳ ಬಗ್ಗೆ ನಡೆಯುವ ನ್ಯಾಯಾಂಗ ತನಿಖೆಗಳೆಲ್ಲವೂ ಹಲ್ಲು ಕೀಳಿಸಿಕೊಂಡ ಷಂಡ ವ್ಯವಸ್ಥೆಯಾಗುತ್ತದೆ.

ದೆಹಲಿಯಲ್ಲಿ 1984 ರ ನವೆಂಬರ್‌ನಲ್ಲಿ ನಡೆದ ಸಿಕ್ಖರ ಮೇಲಿನ ದೌರ್ಜನ್ಯದ ಕುರಿತಾದ ಆಯೋಗದ ವರದಿಯಲ್ಲಿ ಸರಕಾರಕ್ಕೆ ಅಪ್ರಿಯವೆನಿಸಿದ, ತಾಳಿಕೊಳ್ಳಲು ಸಾಧ್ಯವಾಗದ, ಜನರ ತಿಳುವಳಿಕೆಗೆ ಬಂದರೆ ಸ್ವಂತಕ್ಕೆ ಅಪಾಯವಾಗಬಹುದಾದ ವಿಚಾರಗಳಿವೆ ಎಂಬ ಗುಮಾನಿಯನ್ನು ಜನರು ತಾಳುವುದು ಸಾಧ್ಯ. ದೆಹಲಿ ಗಲಭೆಗಳಲ್ಲಿ ಅಪರಾಧಿಗಳಾದವರನ್ನು ಸರಕಾರ ರಕ್ಷಿಸುತ್ತಿದೆ ಎಂಬ ಭಾವನೆಯೂ ಇದರಿಂದ ಉಂಟಾಗುತ್ತದೆ. ಅಪರಾಧಿಗಳಾದವರನ್ನು ರಕ್ಷಿಸಲು ಹೋಗದೆ, ಕಾನೂನಿನ ಹಿಡಿತಕ್ಕೆ ಒಳಪಡಿಸುವುದರಿಂದ, ಕನಿಷ್ಠ ಮೂಲೆಗಾದರೂ ಸೇರಿಸುವುದರಿಂದ ಈ ಸರಕಾರ ನಿಷ್ಪಕ್ಷಪಾತಿ ಎಂಬ ಭಾವನೆಯನ್ನು ಜನರಲ್ಲಿ, ಮುಖ್ಯವಾಗಿ ಸಿಕ್ಖರಲ್ಲಿ ಮೂಡಿಸುವುದು ಸಾಧ್ಯ. ಅದನ್ನು ಮಾಡದೆ ದಿಕ್ಕೆಟ್ಟು, ಕಂಗೆಟ್ಟು ಉಗ್ರವೂ ಕಠಿಣವೂ ಆದ ಅಧಿಕಾರಗಳನ್ನು ಕೈಗೆ ತೆಗೆದುಕೊಳ್ಳುವುದರಿಂದ ಪಂಜಾಬಿನ ವಿಷಯದಲ್ಲಿ ಈ ತನಕ ಅನುಸರಿಸಿಕೊಂಡು ಬಂದ ರಾಜಕೀಯ ಅಪ್ರಬುದ್ಧತೆಯ ನೀತಿಯನ್ನೇ ಮುಂದುವರಿಸಿದಂತಾಗುತ್ತದೆ.

ಮುಂಗಾರು

ಭಾನುವಾರ, ಮೇ 18, 1986

ಹುಳುಕು ಹುಡುಕುವ ಕೆಲಸ

ಹಂಪ ನಾಗರಾಜಯ್ಯನವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆದ ಪರಿಷತ್ತಿನ ಹಣಕಾಸಿನ ವ್ಯವಹಾರಗಳ ಬಗ್ಗೆ ಹಾಗೂ ಕಳೆದ ಫೆಬ್ರುವರಿಯಲ್ಲಿ ನಡೆದ ಪರಿಷತ್ತಿನ ಅಧ್ಯಕ್ಷರ ಚುನಾವಣೆಯಲ್ಲಿ ನಡೆದುದೆನ್ನಲಾದ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಏಕ ಸದಸ್ಯ ನ್ಯಾಯಾಂಗ ಆಯೋಗವೊಂದನ್ನು ರಾಜ್ಯ ಸರಕಾರ ನೇಮಕ ಮಾಡಿದೆ.

ಆಯೋಗದ ತನಿಖೆಯ ವ್ಯಾಪ್ತಿಯಲ್ಲಿ ಈ ಕೆಳಗಿನ ಕೆಲವು ವಿಚಾರಗಳು ಮಹತ್ವದ್ದಾಗಿವೆ: "ಹಂಪ ನಾಗರಾಜಯ್ಯನವರು ಅಧ್ಯಕ್ಷರಾಗಿದ್ದ ವೇಳೆ ಪರಿಷತ್ತಿನಲ್ಲಿ ಅಧಿಕಾರದ ದುರುಪಯೋಗ ಆಗಿದೆಯೇ. ಪರಿಷತ್ತಿನ ಹಣಕಾಸನ್ನು ನಾಗರಾಜಯ್ಯ ದುರ್ಬಳಕೆ ಮಾಡಿದ್ದಾರೆಯೇ. ನಾಗರಾಜಯ್ಯನವರು ಅಧಿಕಾರಾವಧಿಯಲ್ಲಿ ಖೋಟಾ ಸದಸ್ಯರನ್ನು ಸೇರಿಸಿಕೊಂಡಿದ್ದಾರೆಯೇ. ಫೆ. 16ರಂದು ನಡೆದ ಅಧ್ಯಕ್ಷರ ಚುನಾವಣೆಯಲ್ಲಿ ಕಾನೂನುಬಾಹಿರವಾದ ಕೆಲಸಗಳು ನಡೆದಿವೆಯೇ. ಅಕ್ರಮ ನಡೆದಿದ್ದರೆ ಅದಕ್ಕೆ ಹೊಣೆ ಯಾರು. ನಾಗರಾಜಯ್ಯನವರ ಅಧಿಕಾರವಧಿಯಲ್ಲಿ ಇನ್ನೇನಾದರೂ ದುರಾಡಳಿತ ನಡೆದಿದೆಯೇ?"

ಆಯೋಗದ ತನಿಖೆಗೆ ಒಳಪಡುವ ವಿಷಯ ವ್ಯಾಪ್ತಿಯನ್ನು ಗಮನಿಸಿದರೆ ಇದು ಮಾಮೂಲಿ ತನಿಖೆಯಂತೆ ಕಾಣಿಸದೆ ಬಲು ವಿಶೇಷದ್ದಾಗಿರುವಂತೆ ಕಾಣಿಸುತ್ತದೆ. ತನಿಖೆ ನಡೆಸಲು ಈ ತನಕ ಸರಕಾರಗಳು ಪಾಲಿಸಿ ಬಂದಿರುವ ನಿರ್ದಿಷ್ಟ ವಿಷಯಗಳನ್ನು ನಮೂದಿಸಿಕೊಡುವ ಸಂಪ್ರದಾಯವನ್ನು ಬದಿಗಿಟ್ಟು "ಇವರ ಅಧಿಕಾರಾವಧಿಯಲ್ಲಿ ಇನ್ನೇನಾದರೂ ದುರಾಡಳಿತ ನಡೆದಿದೆಯೇ? "ಎಂದು ಶೋಧ ನಡೆಸುವ ಅಧಿಕಾರವನ್ನು ಆಯೋಗಕ್ಕೆ ವಹಿಸಿಕೊಡಲಾಗಿದೆ. ಈ ಅಧಿಕಾರ ವ್ಯಾಪ್ತಿಯನ್ನು ಹೊಂದಿದ ಆಯೋಗವು ಹಂಪ ನಾಗರಾಜಯ್ಯ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎರಡು ಅಧಿಕಾರಾವಧಿಗಳಿಗೆ ಸಂಬಂಧಪಟ್ಟಂತೆ ಪರಿಷತ್ತಿನ ಎಲ್ಲಾ ವ್ಯವಹಾರಗಳ ಬಗ್ಗೆಯೂ ತನಿಖೆ ನಡೆಸಬಹುದಾಗಿದೆ. ಪರಿಷತ್ತಿನ ಎಲ್ಲಾ ಕಡತಗಳನ್ನೂ ಜಾಲಾಡಿ ಹುಡುಕಿ ನೋಡಬಹುದಾಗಿದೆ. ಅಗತ್ಯವೆನಿಸಿದರೆ ಪರಿಷತ್ತಿನ ಎಲ್ಲಾ ಸಿಬ್ಬಂದಿ ವರ್ಗದ ಹಾಗೂ ಪರಿಷತ್ತಿನ ಜತೆ ವ್ಯವಹಾರ ನಡೆಸಿದ ಎಲ್ಲಾ ಜನರನ್ನೂ ಕರೆದು ವಿಚಾರಿಸಬಹುದಾಗಿದೆ.

ಭ್ರಷ್ಟಾಚಾರ ನಡೆದಿದೆ ಎಂದು ಮೇಲ್ನೋಟಕ್ಕೆ ಕಾಣಿಸಿದ ಪ್ರಕರಣಗಳಿಗೆ ಸಂಬಂಧಿಸಿ ಮಾತ್ರವೇ ನ್ಯಾಯಾಂಗ ತನಿಖಾ ಆಯೋಗವನ್ನು ನೇಮಿಸುವುದು ಸಂಪ್ರದಾಯ. ಈ ಪ್ರಕರಣದಲ್ಲಿ ಭ್ರಷ್ಟಾಚಾರದ ಹಾಗೂ ಚುನಾವಣಾ ಅಕ್ರಮದ ಆರೋಪಗಳನ್ನೇ ಹುಡುಕಿ ಕೊಡಲು ಆಯೋಗವೊಂದನ್ನು ನೇಮಿಸಿದ ಹಾಗಿದೆ. ಇದನ್ನು ಹುಳುಕು ಹುಡುಕುವ ಕೆಲಸವೆಂದಲ್ಲದೆ ಬೇರಾವ ಹೆಸರಿನಿಂದಲೂ ಕರೆಯಲುಬರುವುದಿಲ್ಲ. ಹಿತಾಸಕ್ತರು ಯಾರೋ ಆಪಾದನೆ ಮಾಡಿದರು ಎಂದಾಕ್ಷಣ ನ್ಯಾಯಾಂಗ ಆಯೋಗಗಳನ್ನು ನೇಮಿಸುತ್ತ ಹೋದರೆ ಸರಕಾರಕ್ಕೆ ನ್ಯಾಯಾಂಗ ಆಯೋಗಗಳ ಕೆಲಸ ಹೊರತು ಬೇರಾವ ಕೆಲಸಕ್ಕೂ ಸಮಯ ಸಿಗಲಾರದು.

ಸಾಹಿತ್ಯ ಪರಿಷತ್ತಿನ ವ್ಯವಹಾರದಲ್ಲಿ ಸರಕಾರ ತನ್ನ ಕೆಟ್ಟ ಕೈಗಳನ್ನು ಹಾಕಿದ ಈ ವಿದ್ಯಮಾನದ ಹಿಂದೆ ಸ್ಥಾಪಿತ ಹಿತಾಸಕ್ತರ ಕೈವಾಡ ಬಹಳ ಇರುವುದು ಗುಟ್ಟಿನ ವಿಚಾರವೇನೂ ಅಲ್ಲ. ಈ ಕೂಟ ಬಹುಕಾಲದಿಂದ ಹಿತ್ತಲ ಬಾಗಿಲಿನ ಮೂಲಕವಾದರೂ ಪರಿಷತ್ತನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಹೂಟ ನಡೆಸಿತ್ತು. ಪರಿಷತ್ತಿಗೆ ಸರಕಾರಿ ಆಡಳಿತಾಧಿಕಾರಿಯನ್ನು ನೇಮಿಸುವ ಯತ್ನದಲ್ಲಿ ಸೋತ ನಂತರ ಪ್ರಕರಣವನ್ನು ನ್ಯಾಯಾಲಯಕ್ಕೊಯ್ಯಲಾಯಿತು. ಅಲ್ಲಿ ಆಜ್ಞೆ ಪಡೆದು ಪರಿಷತ್ತಿನ ಕಡತಗಳನ್ನು ಪೋಲೀಸರು ಬಂದು ಜಾಲಾಡಿದರು. ಹೈಕೋರ್ಟಿನಿಂದ ಬಂದ ತಡೆಯಾಜ್ಞೆ ಈ ಕಾರ್ಯಾಚರಣೆಯನ್ನು ನಿಲ್ಲಿಸಿತು. ಇದೀಗ ಸರಕಾರ ಲಂಗುಲಗಾಮಿಲ್ಲದ ನ್ಯಾಯಾಂಗ ತನಿಖೆಯನ್ನು ಪ್ರಕಟಿಸಿ ತನ್ನವರಿಗೆ ಹಿತ ಮಾಡುವ ಹಾಗೂ ಅವರಿಗಾಗದವರಿಗೆ ಕಾಟ ಕೊಡುವ ಹೀನಾಯ ದಾರಿಯನ್ನು ಹಿಡಿದಿದೆ. ಸಭ್ಯ ನಡವಳಿಕೆಯ ಬಗ್ಗೆ ಕಾಳಜಿಯಿರುವ ಯಾವ ಸರಕಾರವೂ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯೊಂದರ ವ್ಯವಹಾರವನ್ನು ಬೀದಿಗೆಳೆಯುವ ಕೆಲಸ ಮಾಡಬಾರದು.

ಪರಿಷತ್ತಿಗೆ ಸರಕಾರ ಅನುದಾನ ಕೊಡುತ್ತದೆ. ಈ ಅನುದಾನಕ್ಕೆ ಸಂಬಂಧಪಟ್ಟ ನಿಯಮದನ್ವಯವೇ ಆ ಸಂಸ್ಥೆಯ ಲೆಕ್ಕಪತ್ರಗಳನ್ನು ಕಾಲಕಾಲಕ್ಕೆ ತಪಾಸಣೆಗೊಳಪಡಿಸುವ ಕೆಲಸವನ್ನು ಸರಕಾರ ಮಾಡಬಹುದಿತ್ತು. ಇದೀಗ ಸ್ವಾಯತ್ತ ಸಂಸ್ಥೆಯೊಂದರ ವ್ಯವಹಾರದಲ್ಲಿ ಹಸ್ತಕ್ಷೇಪಿಸಿದ್ದರ ಪರಿಣಾಮ ಒಳ್ಳೆಯದಾಗದು.

ಚುನಾವಣೆಯಲ್ಲಿ ಸ್ಪರ್ಧಿಸಿ ಸೋತು ಮುಖಭಂಗ ಹೊಂದಿದ ಗುಂಪೊಂದು ಸರಕಾರವನ್ನು ಬುಟ್ಟಿಗೆ ಹಾಕಿಕೊಂಡು ನಡೆಸಿರುವ ಅತಿಕ್ರಮವೇ ಈ ತನಿಖಾ ಆಯೋಗವಲ್ಲದೆ ಬೇರೆಯಲ್ಲ.

ಮುಂಗಾರು
ಮಂಗಳವಾರ, ಮೇ 20, 1986

ಸಿಕ್ಖರಿಗೆ ಪಾಠ ಹೇಳಿದ ಗುರು

ಏಪ್ರಿಲ್ 30ರಂದು ಅಮೃತಸರದ ಸ್ವರ್ಣ ದೇವಾಲಯದೊಳಕ್ಕೆ ಪೊಲೀಸರನ್ನು ಕಳಿಸಿ ಕಾರ್ಯಾಚರಣೆ ನಡೆಸಿ "ಸಿಕ್ಖ ಸಮುದಾಯದ ಮನನೋಯಿಸಿದ್ದಕ್ಕಾಗಿ" ಪ್ರಾಯಶ್ಚಿತ್ತ ಮಾಡಿಕೊಳ್ಳುವಂತೆ ಸಿಕ್ಖ ಧರ್ಮದ ಪ್ರಧಾನ ಗುರುಪೀಠದವರಾದ ಪಂಚ ಗುರುಗಳು ತಾಕೀತು ಮಾಡಿದ್ದಾರೆ. ಯಾವುದಾದರೊಂದು ಗುರುದ್ವಾರದಲ್ಲಿ ಒಂದು ವಾರ ಕಾಲ ಯಾತ್ರಾರ್ಥಿಗಳ ಪಾದರಕ್ಷೆಯನ್ನು ಶುಚಿಗೊಳಿಸಬೇಕು ಎಂಬುದಲ್ಲದೆ ಇನ್ನೂ ನಾಲ್ಕು ಸೇವೆಗಳನ್ನು ಸಿಖ್ ಧಾರ್ಮಿಕ ನಾಯಕರು ಬರ್ನಾಲಾಗೆ ವಿಧಿಸಿದ್ದರು. ಇದನ್ನು ಬರ್ನಾಲಾ ಪಾಲಿಸಿದ್ದಾರೆ. ನಿನ್ನೆ ಅವರು ಗುರುದ್ವಾರ ಆನಂದಪುರ ಸಾಹಿಬ್‌ಗೆ ತೆರಳಿ ಐವತ್ತು ಮಂದಿ ಯಾತ್ರಾರ್ಥಿಗಳ ಪಾದರಕ್ಷೆ ಶುಚಿಗೊಳಿಸಿದರು. ಇನ್ನು ಒಂದು ವಾರ ಕಾಲ ಅವರ ಈ ಪ್ರಾಯಶ್ಚಿತ್ತ ರೂಪದ ಸೇವೆ ಮುಂದುವರಿಯಲಿದೆ.

ಕಾನೂನಿನ ದೃಷ್ಟಿಯಲ್ಲಿ ಅವರು ಇದನ್ನು ಮಾಡಬೇಕಾಗಿರಲಿಲ್ಲ. ಅವರು ಒಂದು ರಾಜ್ಯದ ಮುಖ್ಯಮಂತ್ರಿ. ಪಂಜಾಬಿನ ಜನಸಮುದಾಯ ಅಕಾಲಿ ದಳಕ್ಕೆ ಮತಕೊಟ್ಟು ಬಹುಮತ ನೀಡಿ ಅಧಿಕಾರಕ್ಕೇರಿಸಿದ್ದಾರೆ. ಅಮೃತಸರದ ಸ್ವರ್ಣ ದೇವಾಲಯದಲ್ಲಿ ಖಾಲಿಸ್ತಾನವಾದಿ ಉಗ್ರಗಾಮಿಗಳು ಸೇರಿಕೊಂಡದ್ದು, 1984ರ ಜೂನ್‌ನಲ್ಲಿ ಬ್ಲೂಸ್ಟಾರ್ ಕಾರ್ಯಾಚರಣೆ ನಡೆಸಿ ಅವರನ್ನೆಲ್ಲ ನಿರ್ಮೂಲನಮಾಡಿದ್ದು ಈ ಎಲ್ಲಾ ಚಾರಿತ್ರಿಕ ಹಿನ್ನೆಲೆ ಎಲ್ಲರಿಗೂ ತಿಳಿದಿರುವಂತಹದ್ದು. ಖಾಲಿಸ್ತಾನ ವಾದಿಗಳು ಮೊನ್ನೆ ಮೊನ್ನೆ ಸ್ವರ್ಣ ದೇವಾಲಯದಿಂದ ಪ್ರತ್ಯೇಕ ಖಾಲಿಸ್ತಾನ ಸ್ಥಾಪನೆಯ ಘೋಷಣೆ ಮಾಡಿದರು. ದೆಹಲಿಯೇ ತಮ್ಮ ರಾಜಧಾನಿಯಾಗಿರುವುದೆಂದು ಈ ಗುಂಪು ಪ್ರಕಟಿಸಿತು. ಸಿಕ್ಖ ಉಗ್ರಗಾಮಿಗಳನ್ನು ಸೇರಿಸಿಕೊಂಡು ಖಾಲಿಸ್ತಾನ ಸೈನ್ಯ ಕಟ್ಟುವುದಾಗಿ ಘೋಷಿಸಿದರು. ಇದೆಲ್ಲವೂ ದೇಶದ್ರೋಹಿ ಕಾರ್ಯವೆಂಬುದನ್ನು ಈ ದೇಶದ ಯಾರಿಗೂ ಯಾರೂ ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ. ಎಲ್ಲಾ ಸಿಕ್ಖರಿಗೂ ಇದು ಗೊತ್ತು. ಸಿಕ್ಖರ ಧಾರ್ಮಿಕ ನಾಯಕರಿಗೂ ಗೊತ್ತು. ಸ್ವರ್ಣದೇವಾಲಯವನ್ನು ಹೊಕ್ಕು ಕೂತು ಧರ್ಮನಿಂದೆ ಮಾಡುವವರನ್ನು ಸೂಕ್ತ ಕಾರ್ಯಾಚರಣೆಯಿಂದ ಹೊರ ಹಾಕುವುದಕ್ಕೆ ಅಕಾಲಿದಳ ಸರಕಾರಕ್ಕೆ ಆನಂದಪುರ ಸಾಹಿಬ್‌ನಲ್ಲಿ ಜರಗಿಸಲಾದ ಸರ್ಬತ್ ಖಾಲ್ಸಾ ಆದೇಶ ಕೊಟ್ಟಿತ್ತು. ಇದೂ ಕೂಡ ಸಿಕ್ಖ ಪಂಚ ಪ್ರಧಾನರಿಗೆ ತಿಳಿಯದಿರುವ ವಿಚಾರವಲ್ಲ.

ಪೊಲೀಸ್ ಕಾರ್ಯಾಚರಣೆ ಸಮರ್ಥನೀಯ. ಅದಕ್ಕೆ ಸಕಾರಣಗಳಿದ್ದವು ಎಂಬುದನ್ನು ಗುರುಪೀಠವೇ ಒಪ್ಪಿಕೊಂಡಿದೆ. ಆದರೂ "ಮನನೊಂದಿರುವ ಸಿಕ್ಖ"ರನ್ನು ಸಮಾಧಾನಪಡಿಸಲು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕೆಂದು ಆದೇಶಿಸಿದೆ. ನೈತಿಕವಾಗಿ ಕೂಡ ಈ ತಾಕೀತನ್ನು ಒಪ್ಪಿಕೊಳ್ಳಬೇಕಾದ ಕರ್ತವ್ಯವಾಗಲಿ ಹೊಣೆಗಾರಿಕೆಯಾಗಲಿ ಬರ್ನಾಲಾ ಅವರಿಗಿರಲಿಲ್ಲ.

ಆದರೂ ಧಾರ್ಮಿಕ ನಾಯಕರ ತೀರ್ಪಿಗೆ ಮುಖ್ಯಮಂತ್ರಿ ತಲೆಬಾಗಿದ್ದಾರೆ. ಇದು ಆ ವ್ಯಕ್ತಿಯಲ್ಲಿ ಹುದುಗಿರುವ ವಿನಯವನ್ನು, ಸರಳತೆ-ಸಜ್ಜನಿಕೆಗಳನ್ನೂ ಬಯಲಿಗೆ ತಂದಿದೆ. ಕಾನೂನಿನ ಕಟ್ಟುಪಾಡುಗಳೂ ಹೊಣೆಗಾರಿಕೆಗಳೂ ತನ್ನ ಮೇಲೆ ಎಳ್ಳಷ್ಟು ಇಲ್ಲದಿದ್ದರೂ ಕೂಡ ಸುರ್ಜಿತ್ ಸಿಂಗ್ ಬರ್ನಾಲಾ ಪಾದರಕ್ಷೆ ಒರೆಸುವ ಈ ಸೇವೆಯನ್ನು ಕೈಕೊಂಡು, ವ್ಯಕ್ತಿಗಿಂತ ಸಮಾಜ ದೊಡ್ಡದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕಾನೂನಿನ ವಿಧಿಗಳಿಗಿಂತ ಸಾಮಾಜಿಕ ಶಾಂತಿ ಮಹತ್ವದ್ದೆಂಬುದನ್ನು ಅವರು ಅರಿತಿದ್ದಾರೆ. ವ್ಯಕ್ತಿಯೋರ್ವನ ಮಾನಾಪಮಾನದ ವಿಚಾರಕ್ಕಿಂತಲೂ ಪ್ರತಿಷ್ಠೆಯ ಪ್ರಶ್ನೆಗಿಂತಲೂ ಜನಸಮುದಾಯವೊಂದರ ಮನಸ್ಸಿಗೆ ಆಗಬಹುದಾದ ನೋವಿನ ಶಮನವು ಮೊದಲು ಆಗಬೇಕು ಎಂಬುದನ್ನು ಬರ್ನಾಲಾ ತೋರಿಸಿಕೊಟ್ಟಿದ್ದಾರೆ. ಸೀಖ (ಶಿಷ್ಯ)ನಾಗಿ ಗುರುದ್ವಾರಕ್ಕೆ ಒಂದು ಶಿಕ್ಷೆಯ ರೂಪದಲ್ಲಿ ಪಾಠವನ್ನು ಪಠಿಸಿದ ಈ ಮನುಷ್ಯ ನಿಜವಾಗಿ ಗುರುವೇಆಗಿ ಸಿಖ್ಖರಿಗೆಲ್ಲ ಪಾಠ ಹೇಳಿದಂತಾಗಿದೆ.

ಇದರಿಂದ ಅವರ ವ್ಯಕ್ತಿತ್ವ ಬೆಳೆದಿದೆ. ಇಂದು ಲಂಗುಲಗಾಮಿಲ್ಲದೆ ಹಿಂಸೆ ನಡೆಸುತ್ತಾ, ನಿರಪರಾಧಿಗಳನ್ನು ಕೊಲ್ಲುತ್ತಾ, ಸಾಗುವ ಉಗ್ರಗಾಮಿಗಳೂ ಅವರನ್ನು ಪರೋಕ್ಷವಾಗಿಯಾದರೂ ಬೆಂಬಲಿಸುವ ಸಿಖ್ ಧಾರ್ಮಿಕ ನಾಯಕರೂ ಪಿಗ್ಮಿಗಳಾಗಿದ್ದಾರೆ.

ಬರ್ನಾಲಾ ಮಾಡಿರುವ ಸೇವೆ ಸಣ್ಣದಲ್ಲ. ಅವರು ಯಾತ್ರಾರ್ಥಿಗಳ ಪಾದರಕ್ಷೆಯ ಧೂಳು ಒರೆಸುವ ಸಾಂಕೇತಿಕ ಸೇವೆಯ ಮೂಲಕ ಈ ದೇಶದ ಸಿಖ್ಖರಿಗೂ ಇತರರಿಗೂ ಬಲುದೊಡ್ಡ ಸೇವೆ ಮಾಡಿದ್ದಾರೆ. ಪಂಜಾಬಿನ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಈ ಹೆಜ್ಜೆಯ ಮೂಲಕ ಬರ್ನಾಲಾ ಹೆಚ್ಚು ಶಕ್ತಿ ಸಾಮರ್ಥ್ಯಗಳನ್ನು ಗಳಿಸಿಕೊಂಡಿದ್ದಾರೆ.

ಇಂತಹ ಒಬ್ಬ ವಿವೇಕಿಯನ್ನು, ಸಜ್ಜನನನ್ನು ವಿನಯಶೀಲನನ್ನು ಶಕ್ತಿಗುಂದಿಸುವ ಕಾರ್ಯವನ್ನು ಅವರ ಪಕ್ಷದವರೂ ಮಾಡಬಾರದು; ಪಂಜಾಬು ಪ್ರಶ್ನೆಯನ್ನು ಬಗೆಹರಿಸಿ ಕ್ಷೋಭೆಯನ್ನು ತಣಿಸಬೇಕಾದ ಮೂಲಭೂತ ಕರ್ತವ್ಯವನ್ನು ಹೊತ್ತಿರುವ ಕೇಂದ್ರ ಸರಕಾರದ ನಾಯಕರೂ ಮಾಡಬಾರದು. ನಮ್ಮ ಸಾರ್ವಜನಿಕ ಜೀವನದ ಮುಖಂಡರು, ರಾಜಕೀಯ ನೇತಾರರು, ಜನಹಿತದ ಬಗ್ಗೆ ಕಾಳಜಿಯಿರುವ ಎಲ್ಲಾ ಮಂದಿ ಬರ್ನಾಲಾರ ನಡವಳಿಕೆಯಿಂದ ಕಲಿಯತಕ್ಕಂತಹದ್ದು ಬೆಟ್ಟದಷ್ಟಿದೆ.

ದಕ್ಷಿಣದ ಭಗೀರಥ

ಎಂಭತ್ತನಾಲ್ಕರ ಹರೆಯದಲ್ಲಿ ಭಾನುವಾರ ತೀರಿಕೊಂಡ ಕೇಂದ್ರದ ಮಾಜಿ ನೀರಾವರಿ ಸಚಿವ ಡಾ। ಕೆ.ಎಲ್. ರಾವ್ ಅವರು ಎಲ್ಲಾ ಇಂಜಿನಿಯರರಂತಲ್ಲ. ಎಲ್ಲಾ ಮಂತ್ರಿಗಳಂತೆಯೂ ಅಲ್ಲ. ಅವರ ಬದುಕಿನಲ್ಲಿ ಒಂದು ಉದ್ದೇಶವಿತ್ತು. ಆ ಉದ್ದೇಶವನ್ನು ಕಾರ್ಯಗತಕ್ಕೆ ತರುವ ಛಲವೂ ಬಹಳಷ್ಟು ಇತ್ತು.

ಈ ನಾಡಿನ ನದಿಗಳನ್ನು ಪಳಗಿಸಿ ಭೂಮಿಯನ್ನು ಹನಿಸಿ ಹಸನುಮಾಡಿ ಜನಜೀವನವನ್ನು ಬೆಳಗಿಸುವುದು ಸಾಧ್ಯವೆಂಬ ಅದಮ್ಯವಾದ ನಂಬಿಕೆ ಅವರದ್ದಾಗಿತ್ತು. ಈ ದೇಶದ ಪ್ರತಿ ಅಂಗುಲವನ್ನೂ ಎಲ್ಲಾ ಋತುಗಳಲ್ಲಿಯೂ ತೋಯಿಸಿ ಹಸುರನ್ನು ಬೆಳೆಸಿ ಕಾಳನ್ನು ಕೊಯ್ಯುವುದು ಸಾಧ್ಯವೆಂಬ ತಿಳುವಳಿಕೆ ಅವರದ್ದಾಗಿತ್ತು.

ಅದನ್ನು ಆಗುಮಾಡುವುದಕ್ಕೆ ಅಗತ್ಯವಿರುವ ಕಲ್ಪನಾ ಸಾಮರ್ಥ್ಯ ಅವರಿಗಿತ್ತು. ಜೋಗವನ್ನು ಕಂಡ ಮೋಕ್ಷಗುಂಡಂ ವಿಶ್ವೇಶ್ವರಯ್ಯ ಹರಿದು ಹಾಳಾಗುವ ನೀರಿನ ಝರಿಯಿಂದ ಬದುಕನ್ನು ಬೆಳಗುವ ವಿದ್ಯುತ್ತನ್ನು ಪಡೆಯುವ ಯೋಜನೆಯನ್ನು ರೂಪಿಸಿದಂತೆ ಡಾ। ಕೆ. ಎಲ್. ರಾವ್ ಅವರದ್ದೂ ವಿಶ್ವವ್ಯಾಪ್ತಿಯಾಗುವ ಕಲ್ಪನೆ.

ಈ ಆಧುನಿಕ ಭಗೀರಥ ಇನ್ನಷ್ಟು ಕಾಲ ಬದುಕಿದ್ದರೆ ಇನ್ನಷ್ಟು ಕಾಲ ಅಧಿಕಾರ ಅವರ ಕೈಯಲ್ಲಿರುತ್ತಿದ್ದರೆ ಉತ್ತರದ ಗಂಗೆ ದಕ್ಷಿಣಕ್ಕೆ ಹರಿದು ಬರುತ್ತಿದ್ದಳು. ಕಾವೇರಿಯೊಂದಿಗೆ ಸೇರುತ್ತಿದ್ದಳು.

ಇಂಜಿನಿಯರ್ ಆದರೂ ಕೆ. ಎಲ್. ರಾವ್ ಬರೇ ಇಂಜಿನಿಯರರಲ್ಲ. ನಾಡಿನ ಭವಿಷ್ಯವನ್ನು ಕಟ್ಟಿ ರೂಪಿಸಬಲ್ಲ ಇಂಜಿನಿಯರ್ ಅವರು. ಈ ದೇಶದ ಹೆಚ್ಚಿನ ಎಲ್ಲಾ ದೊಡ್ಡ ನೀರಾವರಿ ಹಾಗೂ ಜಲ ವಿದ್ಯುತ್ ಯೋಜನೆಗಳ ಹಿಂದೆ ಅವರ ಆಸಕ್ತಿಯ ಪಾಲುದಾರಿಕೆಯ ಕಥೆಯಿದೆ.

ಗಂಗೆಯನ್ನು ದಕ್ಷಿಣಕ್ಕೆ ಹರಿಸುವ ಈ ಕಲ್ಪನೆ ಹುಚ್ಚುತನದ್ದೆಂದು ಕೆಲವರಿಗೆ ಅನಿಸಿದ್ದುಂಟು. ಇನ್ನು ಹಲವರು ಆ ಬಗ್ಗೆ ಚಿಂತಿಸಿದ್ದುಂಟು. ಗಂಭೀರವಾಗಿ ಕೂತು ಲೆಕ್ಕಾಚಾರ ಹಾಕಿದವರುಂಟು. ಅಧ್ಯಯನ ನಡೆಸಿದವರುಂಟು. ಉತ್ತರದಲ್ಲಿ ಮಳೆಗಾಲ ಶುರುವಾದಾಗ ದಕ್ಷಿಣದಲ್ಲಿ ಮಲೆನಾಡಿನಲ್ಲಿಯೂ ಪೀಠಭೂಮಿಯಲ್ಲಿಯೂ ನೆಲ ಒಣಗಿರುತ್ತದೆ. ಉತ್ತರದಲ್ಲಿ ನೆರೆ ಹಾವಳಿಯ ವೇಳೆ ದಕ್ಷಿಣದಲ್ಲಿ ಬರಗಾಲ ಇರುತ್ತದೆ. ಉತ್ತರದಿಂದ ನೀರನ್ನು ದಕ್ಷಿಣಕ್ಕೆ ಹರಿಯಿಸಿದರೆ ನೆರೆಯೂ ಕಮ್ಮಿಯಾದೀತು. ತಿಂಗಳುಗಟ್ಟಲೆ ಪ್ರಯಾಣಿಸಿ ನೀರು ದಕ್ಷಿಣಕ್ಕೆ ತಲುಪಿದಾಗ ದಕ್ಷಿಣದ ಬಾಯಾರಿದ ನೆಲ ಚೈತನ್ಯದಿಂದ ನಲಿದೀತು.

ಇಂದು ಇಂಥ ಒಂದು ಭೂಮ ಯೋಜನೆ ಕಾರ್ಯಸಾಧ್ಯವಲ್ಲ ಎಂದು ಸರಕಾರ ತಳ್ಳಿಹಾಕಿದೆ. ಆದರೆ ವಿಶ್ವವಿಶಾಲಕ್ಕೆ ಕಲ್ಪನಾವಿಲಾಸವನ್ನು ಚಾಚುವ ಕೆ. ಎಲ್. ರಾವ್‌ರಂಥವರು ಮುಂದೊಂದು ದಿನ ಇಂಥ ಮಹಾಯೋಜನೆಯನ್ನು [illegible] ರೂಪಕ್ಕಿಳಿಸಬಹುದು. ಪ್ರಪಂಚದ ಯಾವ ದೊಡ್ಡ ಕೆಲಸಕ್ಕೂ ದೊಡ್ಡದಾಗಿ ಆಲೋಚಿಸುವ ದೊಡ್ಡ ಮನಸ್ಸುಗಳೇ ಬೇಕಾಗುತ್ತವೆ. ಡಾ। ಕೆ. ಎಲ್. ರಾವ್ ಅಂತಹವರಲ್ಲೊಬ್ಬರು.

ಮುಂಗಾರು

ಬುಧವಾರ, ಮೇ 21, 1986

ಕೊಂಕಣ ರೈಲಿನ ಕರುಣ ಕಥೆ

ಕೊಂಕಣ ರೈಲು ಎಂದೇ ಹೆಸರಾದ ಮಂಗಳೂರು-ಮುಂಬಯಿ ಬ್ರಾಡ್‌ಗೇಜ್ ರೈಲು ದಾರಿಯ ನಿರ್ಮಾಣ ಕಾರ್ಯವನ್ನು ಮಂಗಳೂರಿನ ಕಡೆಯಿಂದಲೂ ನಡೆಸುವುದಾಗಿ ರೈಲ್ವೇ ಸಚಿವ ಬನ್ಸೀಲಾಲ್ ಸೋಮವಾರ ಬೆಂಗಳೂರಿನಲ್ಲಿ ಪ್ರಕಟಿಸಿದ್ದಾರೆ. ಅವರು ಮಾಡಿರುವ ಈ ಘೋಷಣೆ ನಿಜವಾಗಿಯೂ ಕಾರ್ಯಗತಕ್ಕೆ ಬಂದರೆ, ಅದಕ್ಕೆ ರೈಲ್ವೇ ಖಾತೆಯ ಅಧಿಕಾರಿಗಳು ಅವಕಾಶ ಕೊಟ್ಟರೆ ಅದು ಸ್ವಾಗತಾರ್ಹ. ಅಷ್ಟೇ ಅಲ್ಲ ಕರಾವಳಿ ಕರ್ನಾಟಕದ ಜನತೆಯ ಪುಣ್ಯವೇ ಎನ್ನಬೇಕು.

ಯಾಕೆಂದರೆ ರೈಲ್ವೆ ಖಾತೆ ಬಹುಕಾಲದಿಂದ ಕರ್ನಾಟಕವನ್ನು ಕಡೆಗಣಿಸುತ್ತಲೇ ಬಂದಿದೆ. ಇದು ಐತಿಹಾಸಿಕ ಸತ್ಯ. ದಾಖಲೆಗಳೇ ಅದನ್ನು ಹೇಳುತ್ತವೆ. ದಕ್ಷಿಣ ಭಾರತದಲ್ಲಿ ರೈಲ್ವೆ ಅಭಿವೃದ್ಧಿಯ ದೊಡ್ಡ ಪಾಲನ್ನು ತಮಿಳ್ನಾಡು, ಕೇರಳ ಹಾಗೂ ಆಂಧ್ರ ಪ್ರದೇಶಗಳೇ ಬಗಲಿಗೆ ಹಾಕಿಕೊಂಡಿವೆ. ಹಾಗಾಗುವಂತೆ ಆ ಇಲಾಖೆಯಲ್ಲಿ ಸೇರಿಕೊಂಡಿರುವ ಅಧಿಕಾರಿಗಳು ನೋಡಿಕೊಂಡಿದ್ದಾರೆ. ಕರ್ನಾಟಕದ ಎಚ್. ಸಿ. ದಾಸಪ್ಪ, ಸಿ. ಎಂ. ಪೂಣಚ್ಚ, ಕೆಂಗಲ್ ಹನುಮಂತಯ್ಯ ಹಾಗೂ ಟಿ. ಎ. ಪೈ ಅವರೆಲ್ಲ ರೈಲ್ವೆ ಮಂತ್ರಿಗಳಾಗಿದ್ದರು. ಆ ನಂತರ ಸಿ. ಕೆ. ಜಾಫರ್ ಷರೀಫ್ ಆ ಇಲಾಖೆಯಲ್ಲಿ ಕಿರಿಯ ಸಚಿವರಾಗಿದ್ದರು. ಇವರೆಲ್ಲರೂ ಕರ್ನಾಟಕದ ಬಗ್ಗೆ ವಹಿಸಿದ ಆಸಕ್ತಿಯೆಲ್ಲವೂ ಕಾರ್ಯರೂಪಕ್ಕೆ ಬಾರದಂತೆ ನೋಡಿಕೊಳ್ಳುವುದರಲ್ಲಿ ಇಲಾಖೆಯ ಅಧಿಕಾರಿಗಳು ಸಫಲರಾಗಿದ್ದಾರೆ.

ಆದ್ದರಿಂದಲೇ ಬನ್ಸೀಲಾಲರ ಮಾತು ಕೃತಿಗಿಳಿಯುವುದರ ಬಗ್ಗೆ ನಮಗೆ ಸಂದೇಹ. ಮುಂಬಯಿ ಮಂಗಳೂರು ರೈಲು ದಾರಿಯ ನಿರ್ಮಾಣವೇ ಇನ್ನೂ ಪ್ರಾರಂಭವಾಗಿಲ್ಲವೆಂದೂ ಅದನ್ನು ಪ್ರಾರಂಭಿಸುವ ವೇಳೆ ಎರಡೂ ಕಡೆಯಿಂದ ಪ್ರಾರಂಭಿಸಲಾಗುವುದೆಂದೂ ಸಚಿವರ ಪತ್ರಿಕಾಗೋಷ್ಠಿಯಲ್ಲಿ ಅಧಿಕಾರಿಗಳು ಸತ್ಯವಲ್ಲದ ವಿಚಾರವೊಂದನ್ನು ಹೇಳಿದ್ದಾರೆ. ಮುಂಬಯಿ-ಆಪ್ಟಾ ದಾರಿ ಈಗಾಗಲೇ ಸಿದ್ಧವಾಗಿ ರೈಲು ಓಡುತ್ತಿದೆ. ಆಪ್ಟಾ-ರೋಹಾ ದಾರಿಯ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಕೆಲಸಕ್ಕಾಗಿ ಈ ವರ್ಷದ ರೈಲ್ವೆ ವೆಚ್ಚಪತ್ರದಲ್ಲಿ ಒಂದು ಕೋಟಿ ರೂಪಾಯಿಯನ್ನು ನೀಡಲಾಗಿದೆ.

ಸಮೀಕ್ಷಾ ಕಾರ್ಯ ಮುಗಿದಿರುವ ಮಂಗಳೂರು-ಉಡುಪಿ ನಡುವಿನ ಸುಮಾರು 60 ಕಿ. ಮೀ. ಉದ್ದಕ್ಕೆ ದಾರಿ ನಿರ್ಮಾಣ ಕೆಲಸ ಶುರುವಾಗುವುದೆಂಬುದು ಸಚಿವರ ಹೇಳಿಕೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಮಂಗಳೂರು-ರೋಹಾ ನಡುವಿನ ರಸ್ತೆ ಸಮೀಕ್ಷೆ ಕೆಲಸವನ್ನು ಮತ್ತೆ ಹೊಸದಾಗಿ ಬೆಂಗಳೂರಿನ ದಕ್ಷಿಣ ರೈಲ್ವೆ ನಿರ್ಮಾಣ ಸಂಸ್ಥೆಗೆ ವಹಿಸಿಕೊಡಲಾಗಿದೆ. ಅಂದರೆ ಇದರರ್ಥ ಈ ಸಮೀಕ್ಷಾ ಕಾರ್ಯ ಮುಗಿಯುವ ತನಕ ನಿರ್ಮಾಣದ ಕೆಲಸ ಶುರುವಾಗುವುದಿಲ್ಲ ಎಂದೇ ಆಗಿದೆ. ಈ ಸಮೀಕ್ಷೆ ಮುಗಿದಾಗ ಇನ್ನು ಎರಡೋ ಮೂರೋ ನಾಲ್ಕೋ ವರ್ಷ ದಾಟಿ ಈಗ ಏಳು ವರ್ಷವೇ ಸಂದು ಹೋದರೂ ಕೆಲಸ ಕುಂಟುತ್ತಲೇ ನಡೆದಿದೆ. ಈ ತನಕ ವೆಚ್ಚವಾದದ್ದು ಆರು ಕೋಟಿ ರೂಪಾಯಿ ಮಾತ್ರ. 1986-87ರ ಆಯವ್ಯಯ ಪತ್ರದಲ್ಲಿ ಈ ಕಾಮಗಾರಿಗೆ ಕೊಡಲಾದ ಮೊತ್ತ ಬರೇ 49 ಲಕ್ಷ ರೂಪಾಯಿ. ಹೆಚ್ಚು ಕೊಟ್ಟರೂ ಈ ಯೋಜನೆ ಈ ದಶಕದೊಳಗೆ ಮುಗಿಯುವುದು ಸರ್ವಥಾ ಅಶಕ್ಯ.

ಬೆಂಗಳೂರು-ಗುಂಟಕಲ್ ಬ್ರಾಡ್‌ಗೇಜ್ ಪರಿವರ್ತನೆ ಕೆಲಸ ಎರಡು ವರ್ಷ ಕೆಳಗೆ ಮುಗಿಯಿತು. ಬೆಂಗಳೂರು - ಮುಂಬಯಿ ನಡುವೆ ನೇರ ರೈಲು "ಉದ್ಯಾನ ಎಕ್ಸ್‌ಪ್ರೆಸ್" ಓಡಲೂ ಶುರುವಾಯಿತು. ಆದರೂ ಈ ಲೈನಿನ ಉದ್ದಕ್ಕೂ ಅತ್ಯಗತ್ಯವಾದ ಮೇಲ್-ಸೇತುವೆಗಳು, ಗೇಟುಗಳು, ನಿಲ್ದಾಣ ಕಟ್ಟಡಗಳು ಸಿಬ್ಬಂದಿಗಳಿಗೆ ವಸತಿಗಳು, ಪ್ರಯಾಣಿಕರಿಗೆ ಸೌಕರ್ಯಗಳು ಯಾವುವೂ ಆಗಿಲ್ಲ.

ಕನ್ಯಾಕುಮಾರಿಯಿಂದ ಕಾಶ್ಮೀರಕ್ಕೆ ನೇರ ದುಪ್ಪಟ್ಟು ಬ್ರಾಡ್‌ಗೇಜ್ ಸಂಪರ್ಕ ಕಲ್ಪಿಸಬೇಕೆಂಬುದು, ರೈಲ್ವೆಯ ಮಹತ್ವಾಕಾಂಕ್ಷೆ, ಇದರನ್ವಯ ಬ್ರಾಡ್‌ಗೇಜ್ ಜೋಡಿ ಲೈನು ತಮಿಳ್ನಾಡಿನ ಜೋಲಾರ್‌ಪೇಟೆ ತನಕ ಬಂದು ನಿಂತುಬಿಟ್ಟಿದೆ. ಅಲ್ಲಿಂದ ಕೇವಲ ನೂರಾಐವತ್ತು ಕಿಲೋಮೀಟರ್ ದೂರದ ಬೆಂಗಳೂರಿಗೆ ಬಂದಿಲ್ಲ.

ಚಿತ್ರದುರ್ಗ-ರಾಯದುರ್ಗ ನಡುವೆ ಸಂಪರ್ಕ ಕಲ್ಪಿಸುವ 16 ಕೋಟಿ ರೂಪಾಯಿ ವೆಚ್ಚದ ಯೋಜನೆ ಕುಂಟುತ್ತ ಸಾಗಿದೆ. ಹಿಂದುಳಿದ ಹಲವಾರು ಜಿಲ್ಲೆಗಳಿಗೆ ಅನುಕೂಲವಾಗುವ, ಬರಪೀಡಿತ ಜನರಿಗೆ ಉದ್ಯೋಗ ಕಲ್ಪಿಸುವ ಈ ಕಾಮಗಾರಿಗೆ ಈ ತನಕ ಮೂರು ಕೋಟಿ ರೂ. ಕೂಡ ಖರ್ಚುಮಾಡಿಲ್ಲ. ಈ ವರ್ಷ 20 ಲಕ್ಷ ರೂ. ನೀಡಲಾಗಿದೆ.

ಕರ್ನಾಟಕದ ಎಲ್ಲಾ ರೈಲು ಕಾಮಗಾರಿಗಳ ಕತೆ ಇದೇ ಆಗಿದೆ. ಬೆಂಗಳೂರಿನ ದ. ರೈಲ್ವೆ ನಿರ್ಮಾಣ ಸಂಸ್ಥೆಯ ಸಿಬ್ಬಂದಿಗಳು ಕೆಲಸವಿಲ್ಲದೆ ಕೂತಿದ್ದಾರೆ. ಹಣವಿಲ್ಲದೆ ಸಾವಿರಾರು ಕಾರ್ಮಿಕರನ್ನು ಮನೆಗೆ ಕಳಿಸಬೇಕಾದ ಅನಿವಾರ್ಯ ಸಂಕಟ ಎದುರಾಗಿದೆ.

ಕರ್ನಾಟಕಕ್ಕೆ ಪಕ್ಷಪಾತ ಮಾಡಿದ ಕತೆಯನ್ನು ಹೇಳಿದರೆ ಯಲಹಂಕದಲ್ಲಿ ರೈಲ್ವೆ ಅಚ್ಚುಗಾಲಿ ಕಾರ್ಖಾನೆ ಕಟ್ಟಿದ್ದೇವೆ ಎಂದು ರೈಲ್ವೆ ಸಚಿವರು ಬೆಟ್ಟು ಮಾಡುತ್ತಾರೆ. ಆದರೆ ಈ ಕಾರ್ಖಾನೆ ಕರ್ನಾಟಕಕ್ಕೆ ಮಾಡಿದ ಮೋಸದ ವ್ಯವಹಾರ ಬೇರೆಯೇ ಇದೆ. ಸಾವಿರಾರು ಮಂದಿಗೆ ಉದ್ಯೋಗ ಒದಗಿಸುವ ಈ ಸಂಸ್ಥೆಯಲ್ಲಿ ಶೇಕಡಾ ಒಂದರಷ್ಟು ಕೂಡಾ ಕನ್ನಡಿಗರಿಲ್ಲ. ಎಲ್ಲಾ ಕೆಲಸಗಳಿಗೂ ತಮಿಳ್ನಾಡಿನಿಂದಲೂ ಕೇರಳದಿಂದಲೂ ಜನರನ್ನು ತಂದು ತುಂಬಲಾಗಿದೆ. ಅಧಿಕಾರಿ ಮಟ್ಟದಲ್ಲಂತೂ ಕನ್ನಡಿಗರ ಸುಳಿವೇ ಇಲ್ಲ. ಈ ಕಾರ್ಖಾನೆ ಇಲ್ಲಿನ ನೆಲ ಕಬಳಿಸಿ, ನೀರು ಕುಡಿದು ವಿದ್ಯುತ್ ನುಂಗಿ ದೇಶದ ಎಲ್ಲೆಡೆಗೆ ರೈಲ್ವೇ ಉಪಕರಣ ಪೂರೈಸುತ್ತದೆ. ಹೊರರಾಜ್ಯದ ಜನಕ್ಕೆ ಕೆಲಸ ಕೊಡುತ್ತದೆ. ಕರ್ನಾಟಕಕ್ಕೊಂದು [illegible]

ಮುಂಗಾರು, ಮೇ 21, 1986 ಪುಟ ನಾಲ್ಕು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

<u>ಪತ್ರಿಕಾ ಪ್ರಕಟಣೆ</u>　　　　　ದಿನಾಂಕ 14:1:2010

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 13:1:2010ರ ರಾತ್ರಿಯಲ್ಲಿ ಸುಮಾರು 350 ಕೋಟಿ ರೂಪಾಯಿಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯಿಯನ್ನು ಅಂತಿಮಗೊಳಿಸಿ ಕಾರ್ಯದೇಶ ನೀಡಿದೆ ಎಂದು ಕೆಲವು ಮಾಧ್ಯಮಗಳಲ್ಲಿ ಆಗಿರುವ ವರದಿ ಸಂಪೂರ್ಣ ನಿರಾಧರವಾಗಿದೆ.

ಹಾಗೆಯೇ ಈ ಟೆಂಡರ್ ಪ್ರಕ್ರಿಯೆಯಲ್ಲಿ ಸಿಬ್ಬಂದಿಗಳು ರಾತ್ರಿ ಪೂರ್ತಿ ಕಾರ್ಯನಿರತರಾಗಿದ್ದಾರೆಂಬುದು ಸಹ ಸಂಪೂರ್ಣ ಸುಳ್ಳಾಗಿರುತ್ತದೆ.

ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಳ್ಳುವ ಕೆಲವು ಕಾಮಗಾರಿಗಳಿಗೆ ಕಾನೂನು ರೀತ್ಯ ಇ-ಪ್ರೆಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಮಾತ್ರ ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳ ಪ್ರಕ್ರಿಯೆ ಇನ್ನೂ ಎರಡು ತಿಂಗಳ ನಂತರ ಅಂತಿಮಗೊಳ್ಳಲಿದೆ. ಸದರಿ ಕಾಮಗಾರಿಗಳು 2009-2010ರ ಅನುಮೋದಿತ ಆಯವ್ಯಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯು ದಿನ ನಿತ್ಯದ ಕಾರ್ಯವಾಗಿದ್ದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಟೆಂಡರ್ ಕರೆಯುವ, ಕಾರ್ಯದೇಶ ನೀಡುವ, ಕಾಮಗಾರಿ ಚಾಲನೆ ನೀಡುವ ಪ್ರಕ್ರಿಯೆಯು ನಿರಂತರವಾಗಿ ಕಾನೂನು ರೀತ್ಯ ನಡೆಯುತ್ತಿರುತ್ತದೆ.

ದಿನಾಂಕ 13:1:2010 ರಂದು ಹನ್ನೊಂದು ವಿವಿಧ ಕಾಮಗಾರಿಗಳಿಗೆ ಟೆಂಡರ್ ಕರೆದಿದ್ದು ಇದರ ಮೊತ್ತ ಸುಮಾರು 95 ಕೋಟಿಯಾಗಿರುತ್ತದೆ. ಇದು ಪತ್ರಿಕಾ ಪ್ರಕಟಣೆಯೇ ಹೊರತು ಗುತ್ತಿಗೆದಾರರಿಗೆ ನೀಡಿರುವ ಕಾರ್ಯದೇಶವಲ್ಲ. ಈ ಟೆಂಡರ್‌ಗಳು ಅಂತಿಮಗೊಳ್ಳಸಲು ಇನ್ನೂ ಎರಡು ತಿಂಗಳ ಕಾಲಾವಕಾಶವಿರುತ್ತದೆ.

ಮುಂದುವರೆದು, ಈಗಾಗಲೇ ಸುಮಾರು ಎರಡು ತಿಂಗಳ ಹಿಂದೆ ಟೆಂಡರ್ ಕರೆದಿದ್ದ ಮೂರು ವಿದ್ಯುತ್ ಕಾಮಗಾರಿಗಳ ಆರ್ಥಿಕ ಬಿಡ್ ತೆರೆಯಲಾಗಿದೆ. ಇದರ ಮೊತ್ತ 7.62 ಕೋಟಿ ರೂ.ಗಳು ಕಾರ್ಯದೇಶ ನೀಡಿರುವುದಿಲ್ಲ.

ಸಾರ್ವಜನಿಕ ಸಂಪರ್ಕಾಧಿಕಾರಿ

...ರೈಲು ಹಾದಿ ಜಾಲ ವಿಸ್ತರ... ಮಹಾವಂಚನೆಯ, ನಿಶ್ಚೀಮ ...ತ್ಯ, ತಿರಸ್ಕಾರದ ಹಾಗೂ ಪರಮ ಪಕ್ಷಪಾತದ ಕಥೆಯಾಗಿದೆ. ಎರಡು ದಶಕಗಳ ಹಿಂದೆಯೇ ಜನರು ಕನಸು ಕಂಡ, ಇಡಿಯ ದೇಶದ ರೈಲ್ವೆ ಜಾಲದಲ್ಲಿ ಒಂದು ತಪ್ಪಿ ಹೋದ ಮಹತ್ವದ ಗೊಣಸು ಎನಿಸಿರುವ ಕೊಂಕಣ ರೈಲ್ವೆಗೇ ಹೀಗಾದರೆ ಕರ್ನಾಟಕದ ಉಳಿದೆಲ್ಲ ರೈಲ್ವೆಯೋಜನೆಗಳ ಗತಿ ದುರ್ಗತಿಯೇ ಆಗಿದೆ.

ಬೆಂಗಳೂರು-ಮೈಸೂರು ಬ್ರಾಡ್‌ಗೇಜ್ ಪರಿವರ್ತನೆ ಕಾಮಗಾರಿಯನ್ನು ಪರಿಶೀಲಿಸೋಣ. ಇದರ ನಿರ್ಮಾಣ ಕಾರ್ಯ 1979ರಲ್ಲಿ ಪ್ರಾರಂಭಗೊಂಡಿತು. ಇದರ ಒಟ್ಟು ವೆಚ್ಚ 26 ಕೋಟಿ ರೂಪಾಯಿಗಳು.

...ತೊಡಿಸುತ್ತದೆ.

ಜನ ಎಚ್ಚರಗೊಳ್ಳದಿದ್ದರೆ ರೈಲ್ವೆ ಇಲಾಖೆಯ ಈ ಮಲತಾಯಿ ನಡವಳಿಕೆ ಇನ್ನೂ ನಡೆದೀತು. ಕೊಂಕಣ ರೈಲು ಮೈಲಾರ ಸುತ್ತಿ ಬರಬೇಕಾದೀತು. ಬೆಂಗಳೂರು-ಮೈಸೂರು ಬ್ರಾಡ್‌ಗೇಜ್ 21ನೇ ಶತಮಾನದ ಕನಸಾದೀತು. ರೈಲ್ವೆ ಸಚಿವರು ಎಷ್ಟೇ ಪ್ರಾಮಾಣಿಕರಿದ್ದರೂ ಕಳಕಳಿಹೊಂದಿದ್ದರೂ ಅವರ ಬೆನ್ನ ಹಿಂದೆ ಇಲಾಖೆಯ ಅಧಿಕಾರಿಗಳು ಕಾಮಗಾರಿ ಮಂಜೂರಾತಿಯಲ್ಲಿ ಕುಂಭಕೋಣ ಮಾಡದೆ ಬಿಡಲಾರರು.

ಇದು ಆಗದಂತೆ ನೋಡಿಕೊಳ್ಳಬೇಕಾದ್ದು ಕನ್ನಡಿಗರ, ಅವರನ್ನು ಪ್ರತಿನಿಧಿಸುವ ರಾಜಕೀಯ, ಸಾಮಾಜಿಕ ಮುಖಂಡರ ಹೊಣೆಗಾರಿಕೆ.

ಮುಂಗಾರು
ಶುಕ್ರವಾರ, ಮೇ 23, 1986

ಸಹ್ಯಾದ್ರಿ ವಿಶ್ವವಿದ್ಯಾನಿಲಯಕ್ಕೆ ಸ್ವಾಗತ

ಶಿವಮೊಗ್ಗದಲ್ಲಿ ಸಹ್ಯಾದ್ರಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವುದಕ್ಕೆ ರಾಜ್ಯ ಸರಕಾರವು ಬೇಗನೆ ಅಂತಿಮ ನಿರ್ಧಾರ ಕೈಗೊಳ್ಳಲಿದೆಯೆಂದು ರಾಜ್ಯ ಶಿಕ್ಷಣ ಸಚಿವ ಎಂ. ರಘುಪತಿ ಅವರು ತಿಳಿಸಿದ್ದಾರೆ. ಈ ಕುರಿತಾದ ಜಯರಾಮನ್ ಸಮಿತಿಯ ವರದಿ ಬಗ್ಗೆ ಸಚಿವ ಸಂಪುಟವು ಈ ತಿಂಗಳ 25ರಂದು ನಡೆಸಲಿರುವ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಿದೆಯೆಂದು ಅವರು ಸೂಚನೆ ಕೊಟ್ಟಿದ್ದಾರೆ.

ಶಿವಮೊಗ್ಗದಲ್ಲಿ ಒಂದು ವಿಶ್ವವಿದ್ಯಾನಿಲಯದ ಸ್ಥಾಪನೆ ಅಗತ್ಯವೆಂಬುದನ್ನು ಜಯರಾಮನ್ ಸಮಿತಿ ಎತ್ತಿ ಹಿಡಿದಿದೆ. ಎರಡು-ಮೂರು ಸ್ಥಳಗಳನ್ನು ಅದು ಸೂಚಿಸಿದೆ. ಮಲೆನಾಡಿನ ಜಿಲ್ಲೆಗಳಾದ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಅಲ್ಲದೆ ಬಯಲುಸೀಮೆಯ ಚಿತ್ರದುರ್ಗ ಜಿಲ್ಲೆಯೂ ವಿದ್ಯಾ ಪ್ರಸಾರದಲ್ಲಿ ಮುಂದುವರಿದ ಜಿಲ್ಲೆಗಳಾಗಿದ್ದು ಬುದ್ಧಿವಂತರ ನಾಡು ಎಂದೇ ಖ್ಯಾತವಾಗಿದೆ. ಮಲೆನಾಡಿನ ಸಾಗರ-ಶಿವಮೊಗ್ಗ ಸೆರಗು ಅನೇಕ ಮಂದಿ ಸಮಾಜವಾದಿಗಳನ್ನು ನಾಡಿಗಿತ್ತ ಭೂಮಿಯಾಗಿದೆ. ಈ ಮೂರೂ ಜಿಲ್ಲೆಗಳಲ್ಲಿ ಈಗಾಗಲೇ ಅನೇಕ ಪ್ರಥಮ ದರ್ಜೆ ಕಾಲೇಜುಗಳಿವೆ. ಮೆಡಿಕಲ್ ಕಾಲೇಜುಗಳೂ ಇಂಜಿನಿಯರಿಂಗ್ ಕಾಲೇಜುಗಳೂ ಇವೆ. ಇವೆಲ್ಲದರ ಆಡಳಿತೆಯನ್ನು ಸುಧಾರಿಸುವ ದೃಷ್ಟಿಯಿಂದ ಶಿವಮೊಗ್ಗದಲ್ಲಿ ಮೇಲೆ ಹೇಳಿದ ಮೂರು ಜಿಲ್ಲೆಗಳಿಗೂ ಒತ್ತಿನ ಉತ್ತರ ಕನ್ನಡ ಜಿಲ್ಲೆಗೂ ಸೇರಿದಂತೆ ವಿಶ್ವ ವಿದ್ಯಾನಿಲಯವೊಂದರ ಸ್ಥಾಪನೆ ಅತ್ಯಗತ್ಯ.

ಸಹ್ಯಾದ್ರಿ ವಿಶ್ವವಿದ್ಯಾನಿಲಯ ಸ್ಥಾಪನೆಗೆ ಕೇಂದ್ರ ಸರಕಾರವೂ ಅನುಕೂಲಕರವಿದೆ ಎಂದು ಸಚಿವ ರಘುಪತಿ ಮೊನ್ನೆ ತಾನೇ ಬಹಿರಂಗ ಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಈ ವಿದ್ಯಾಕೇಂದ್ರಕ್ಕೆ ಯು. ಜಿ. ಸಿ. ಯ ಅನುಮತಿ ಹಾಗೂ ಅನುದಾನ ಪಡೆಯುವುದಕ್ಕೂ ಏನೂ ಕಷ್ಟವಾಗಲಿಕ್ಕಿಲ್ಲ. ಆದರೆ ಯು.ಜಿ.ಸಿ. ಅನುದಾನ ಪಡೆಯುವುದು ಸಂಬಂಧಿತ ವಿಶ್ವವಿದ್ಯಾನಿಲಯವು ಸಾಧಿಸುವ ಬೆಳವಣಿಗೆ ಹಾಗೂ ಹೊಂದುವ ಶೈಕ್ಷಣಿಕ ಮಟ್ಟವನ್ನು ಆಧರಿಸಿರುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಶಿವಮೊಗ್ಗ ಹಾಗೂ ಆಸುಪಾಸಿನ ಜಿಲ್ಲೆಗಳಿಗೆ ವಿಶ್ವವಿದ್ಯಾನಿಲಯ ಬೇಕು ಎಂಬುದು ನಿನ್ನೆ ಮೊನ್ನೆಯ ಕನಸಲ್ಲ; ಅದು ದಶಕಗಳಿಂದ ರೂಪುಗೊಂಡ ಜನರ ಆಶೋತ್ತರ. ಈ ಆಶೋತ್ತರವನ್ನು ಸಾಕಾರಗೊಳಿಸುವ ಮೊದಲ ಹೆಜ್ಜೆಯಾಗಿ ಶಿವಮೊಗ್ಗದ ಸಮೀಪದ ಬಿ. ಆರ್. ಪ್ರಾಜೆಕ್ಟ್‌ನಲ್ಲಿ ಸ್ನಾತಕೋತ್ತರ ಕೇಂದ್ರ ರೂಪುಗೊಂಡು ಒಂದು ದಶಕಕ್ಕಿಂತ ಮೇಲಾಯಿತು. ಆದರೆ ಈ ಕೇಂದ್ರ ಇನ್ನೂ ಕೂಡ ಬೇಕಾದ ಎಲ್ಲಾ ಅಂಗಾಂಗಗಳನ್ನು ಪಡೆದುಕೊಳ್ಳದೆ ವಿಕಲಾಂಗವಾಗಿಯೇ ಉಳಿದಿದೆ. ಈ ಕೇಂದ್ರದಲ್ಲಿ ಇತ್ತೀಚಿನವರೆಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ವಾಸಕ್ಕೆ ಯೋಗ್ಯವಾದ ಕಟ್ಟಡಗಳಿರಲಿಲ್ಲ. ಊಟೋಪಚಾರದ ವ್ಯವಸ್ಥೆಯಿರಲಿಲ್ಲ. ಶಿಕ್ಷಕ ಸಮುದಾಯಕ್ಕೆ ವಸತಿಯಿರಲಿಲ್ಲ. ನಿವೇಶನಕ್ಕೆನಗರದಿಂದ ಹೋಗಿಬರಲು ವಾಹನ ಸೌಕರ್ಯವಿರಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದ ನಿಸ್ಸೀಮ ನಿರ್ಲಕ್ಷ್ಯದಿಂದಾಗಿಯೇ ಹೀಗಾಗಿತ್ತು. ತಮಗಾಗದವರಿಗೆ ಕರಿ ನೀರಿನ ಶಿಕ್ಷೆ ಕೊಡುವ ಅಂಡಮಾನವಾಗಿ ಈ ಕೇಂದ್ರವನ್ನು ಮೈಸೂರು ವಿ.ವಿ. ವರಿಷ್ಠರು ಉಪಯೋಗಿಸುತ್ತಿದ್ದರು ಎಂಬ ವಿಚಾರ ಗುಟ್ಟಿನದೇನೂ ಅಲ್ಲ.

ವಿಶ್ವವಿದ್ಯಾನಿಲಯ ಸ್ಥಾಪನೆಯೊಂದಿಗೆ ಕಲಿಕೆಯ ಸೌಕರ್ಯಗಳು ಸುಧಾರಿಸಬಹುದು. ಇದೊಂದು ಮಾಮೂಲಿ ವಿ. ವಿ. ಆಗುವ ಬದಲು ಹೊಸ ಬಗೆಯ ಜ್ಞಾನ ಕೇಂದ್ರವಾಗುವುದೆಂದೂ ಶಾಲಾ ಕಾಲೇಜುಗಳನ್ನು ನಡೆಸುವ ಹತ್ತರಲ್ಲಿ ಹನ್ನೊಂದಾದ ಆಡಳಿತ ಕೇಂದ್ರವಾಗದೆ ಸಂಶೋಧನಾ ಕೇಂದ್ರವಾಗಿ ರೂಪುಗೊಳ್ಳುವುದೆಂದೂ ಸಚಿವ ರಘುಪತಿ ಹೇಳಿದ್ದಾರೆ.

ಅವರ ಹೇಳಿಕೆ ಕಾರ್ಯರೂಪಕ್ಕೆ ಬರುವುದೆಂದು ವಿದ್ಯಾಸಕ್ತರು ನಿರೀಕ್ಷಿಸಿದ್ದಾರೆ. ಅದೊಂದು ಕೇವಲ ಮಾಮೂಲಿ ಸಂಶೋಧನಾ ಕೇಂದ್ರವೂ ಆಗಬಾರದು. ನಾಡಿಗೆ ಅಗತ್ಯವಾದ ವಿದ್ಯೆ ಯಾವುದು, ಉರು ಹೊಡೆಯುವ ವಿದ್ಯೆ ಎಷ್ಟು ಬೇಕು, ಬದುಕಲು ತಿಳಿಸುವ ವಿದ್ಯೆ ಎಷ್ಟು ಬೇಕು ಎಂದು ಸಂಶೋಧನೆ ಮಾಡಿ ಕಾರ್ಯಕ್ರಮದ ರೂಪದಲ್ಲಿ ಅದನ್ನು ಅನುಷ್ಠಾನಕ್ಕೆ ತಂದು ಜನಜೀವನಕ್ಕೆ ಬೆಳಕು ಕೊಡುವ ಜನೋಪಯೋಗಿ ಸಂಸ್ಥೆಯಾಗಿ ಇದು ಬೆಳೆಯಬೇಕಲ್ಲದೆ ಕೆಲಸಕ್ಕೆ ಬಾರದ ಒಣಪಂಡಿತರನ್ನು ಪೂರೈಸುವ ಕಾರ್ಖಾನೆಯಾದರೆ ಸಾಲದು.

ಮುಂಗಾರು
ಭಾನುವಾರ, ಮೇ 25, 1986

ಶ್ರೀಲಂಕಾ ತಮಿಳರ ಸ್ವಾತಂತ್ರ್ಯ ಹೋರಾಟ

ಶ್ರೀಲಂಕೆಯ ಕ್ಷೋಭೆ ಇದು ನಾಲ್ಕನೇ ವರ್ಷದಲ್ಲಿ ಮುಂದುವರಿಯುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸಲು ಶ್ರೀಲಂಕೆಯ ಸರಕಾರ 1983ರಲ್ಲಿ ಭಾರತ ಸರಕಾರದ ಪ್ರಭಾವವನ್ನು ಬಯಸಿತು. ಇಂದಿಗೂ ಕೂಡ ಈ ಸಮಸ್ಯೆ ನಿವಾರಣೆಯಾಗಿಲ್ಲ. ಕುಂಟುತ್ತಲೂ ಕುರುಡುತ್ತಲೂ ಬಂದ ಮಾತುಕತೆಗಳೂ ಸಂಧಾನಗಳೂ ಸದ್ಯಕ್ಕೆ ನಿಂತೇ ಹೋಗಿವೆ. ಶ್ರೀಲಂಕೆಯ ಜಯವರ್ಧನೆ ಸರಕಾರ ಇದೀಗ ಅಂತಿಮವಾಗಿ ಮಿಲಿಟರಿ ಕಾರ್ಯಾಚರಣೆಯ ಮೂಲಕ ಪರಿಹಾರ ಕಂಡುಕೊಳ್ಳಲು ಮುಂದಾಗಿದೆ.

ಅದಕ್ಕಾಗಿ ಅದು ದಕ್ಷಿಣದಿಂದ ತನ್ನ ಸೇನೆಯನ್ನೆಲ್ಲ ತಂದು ಉತ್ತರದಲ್ಲಿ ಜಾಫ್ನಾ ನಗರದ ಕೋಟೆಯೊಳಗಡೆ ನೆಲೆ ನಿಲ್ಲಿಸಿದೆ. ಪಾಕಿಸ್ತಾನದಿಂದಲೂ ಇಸ್ರೇಲ್‌ನಿಂದಲೂ ಶಸ್ತ್ರಾಸ್ತ್ರ ಸರಂಜಾಮುಗಳನ್ನು ತರಿಸಿಕೊಂಡಿದೆ. ಮಿಲಿಟರಿ ಸಲಹೆಗಾರರನ್ನು ಕರೆಸಿಕೊಂಡಿದೆ. ಪಾಶ್ಚಾತ್ಯ ಕೂಲಿಸಿಪಾಯಿಗಳು ಶ್ರೀಲಂಕಾ ಸೈನ್ಯದಲ್ಲಿ ಸೇರಿಕೊಂಡಿದ್ದಾರೆ. ಜಾಫ್ನಾ ನಗರ ಕಳೆದ ಅನೇಕ ತಿಂಗಳುಗಳಿಂದ ವಸ್ತುಶಃ ತಮಿಳು ಹೋರಾಟಗಾರರ ವಶವಿದೆ. ಜಾಫ್ನಾದ ಎಂಟೂವರೆ ಲಕ್ಷ ಜನಸಂಖ್ಯೆಯ ಶೇಕಡಾ 99ರಷ್ಟು ತಮಿಳರು. ಇವರೆಲ್ಲರ ಅಪಾರ ಸಹಾನುಭೂತಿಯೂ ಬೆಂಬಲವೂ ತಮಿಳು ಹೋರಾಟಗಾರರಿಗಿದೆ.

ಈ ನಗರವನ್ನು ತಮಿಳು ಹೋರಾಟಗಾರರಿಂದ ಕಿತ್ತು ಅವರನ್ನು ನಾಮಾವಶೇಷರನ್ನಾಗಿ ಮಾಡಿ ತಮಿಳು ಜನಸಮುದಾಯವನ್ನು ಮಣಿಸುವ ಆಲೋಚನೆ ಜಯವರ್ಧನೆ ಹಾಗೂ ಅವರ ಆಪ್ತರಾದ ರಕ್ಷಣಾ ಸಚಿವ ಲಲಿತ್ ಅತುಲತ್‌ಮುದಲಿ ಅವರದ್ದು. ಅದಕ್ಕಾಗಿಯೇ ಈ ಅಂತಿಮ ಕಾರ್ಯಾಚರಣೆ. ಜಾಫ್ನಾ ನಗರವನ್ನು ಸೆರೆಹಿಡಿದು ಸುತ್ತು ಜನಸಮುದಾಯವನ್ನು ಬಗ್ಗುಬಡಿದು ಹಳ್ಳಿಗಳಿಗೂ ಅರಣ್ಯಕ್ಕೂ ಓಡಿಸಿ ತಮಿಳರ ಜನಾಂಗ ಸಮಸ್ಯೆಯನ್ನೇ ಕೊಂದುಬಿಡುವ ಕುತ್ಸಿತ ಆಲೋಚನೆ ಇದಾಗಿದೆ.

ಶ್ರೀಲಂಕೆಯ ಒಟ್ಟು ಒಂದೂವರೆ ಕೋಟಿ ಜನಸಂಖ್ಯೆಯಲ್ಲಿ ಒಂದು ದೊಡ್ಡ ಜನವಿಭಾಗ ತಾವು ಎರಡನೇ ದರ್ಜೆಯ ಪ್ರಜೆಗಳಾಗಿ ಬದುಕಲು ತಯಾರಿಲ್ಲವೆಂದು ಸಿಟೆದು ನಿಂತಿದ್ದಾರೆ. ಸ್ವಯಮಾಡಳಿತೆಯ ಬೇಡಿಕೆ ಅವರದ್ದಾಗಿದೆ. ಜತೆಗೆ ಇಂತಹ ಸ್ವಾಯತ್ತ ಪ್ರಾಂತವನ್ನು ತಮಿಳು ಭಾಷಾ ನೆಲೆಯಲ್ಲಿ ರಚಿಸಬೇಕು ಎಂದು ಅವರು ಆಗ್ರಹಿಸುತ್ತಿದ್ದಾರೆ.

ಅವರ ಬೇಡಿಕೆಗಳು ಶ್ರೀಲಂಕೆಯ ರಾಜಕೀಯ ನಾಯಕರಿಗೆ ಗೊತ್ತು. ಈ ಬೇಡಿಕೆಗಳಿಗೆ ಪ್ರತಿಸ್ಪಂದಿಸುವ ಆಶ್ವಾಸನೆಯನ್ನು, ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕುವ ಭರವಸೆಯನ್ನು ಶ್ರೀಲಂಕಾ ಅಧ್ಯಕ್ಷ ಜೂನಿಯಸ್ ಜಯವರ್ಧನೆ ಭಾರತಕ್ಕೆ ಕೊಟ್ಟಿದ್ದರು. ಆ ಮೇಲೆ ಹಿಂದೇಟು ಹೊಡೆದರು. ತಮಿಳು ಮೂಲದವರಿಗೆ ಸ್ವಾಯತ್ತತೆ, ಸ್ವಯಮಾಡಳಿತ ಅಥವ ಅದಕ್ಕೆ ಸಮನಾದ ವ್ಯವಸ್ಥೆ ಮಾಡುವುದಾಗಿ ಭಾರತದ ಪ್ರಧಾನಿಗೆ ದೆಹಲಿಯಲ್ಲಿ ಭಾಷೆಕೊಟ್ಟು ಹೋಗಿದ್ದರು. ಆ ಮೇಲೆ ಮೊನ್ನೆ ಮೊನ್ನೆ ಸಮಸ್ಯೆ ಪರಿಹಾರಕ್ಕೆ ಹೊಸ ಪ್ರಸ್ತಾಪಗಳನ್ನು ಮುಂದಿಡುವ ಭರವಸೆಯನ್ನು ಶ್ರೀಲಂಕೆ, ಭಾರತಕ್ಕೆ ನೀಡಿತ್ತು. ಆದರೆ ಅಂಥ ಯಾವ ಪ್ರಸ್ತಾಪವೂ ಬರಲಿಲ್ಲ. ಬದಲಾಗಿ ಶ್ರೀಲಂಕೆ ಸರಕಾರ ನೇರವಾಗಿ ಸೈನ್ಯವನ್ನು ಕಾರ್ಯಾಚರಣೆಗಿಳಿಸಿದೆ.

ಈ ಹಿನ್ನೆಲೆಯಲ್ಲಿ ಭಾರತಕ್ಕೆ ಈ ಮಾತುಕತೆಗಳಿಂದ ಹಿಂದಕ್ಕೆ ಸರಿಯದೆ ಬೇರೆ ದಾರಿ ಇಲ್ಲ. ಶ್ರೀಲಂಕೆ ಮಾತಿಗೆ ತಪ್ಪುತ್ತಲೇ ಬಂದಿದೆ. ಅದರ ಜತೆಗೆ ಶ್ರೀಲಂಕೆಯನ್ನು ಮುಗಿಸಿಬಿಡಲು ಭಾರತ ಪ್ರಯತ್ನಿಸುತ್ತಿದೆಯೆಂಬ ಕೂಗನ್ನೂ ಹಾಕುತ್ತಿದೆ. ನಿಜಕ್ಕೂ ಪರಿಸ್ಥಿತಿ ಹಾಗಿಲ್ಲ ಎಂಬುದನ್ನೂ ಎಲ್ಲರೂ ಕಾಣಬಹುದಾಗಿದೆ. ಜನಸಮುದಾಯವೊಂದರ ಆಶೋತ್ತರಗಳನ್ನು ಈಡೇರಿಸಬೇಕಾದ ಜನತಂತ್ರದ ನೀತಿಗನುಗುಣವಾದ ಸ್ಪಂದನ ಶ್ರೀಲಂಕಾ ನಾಯಕರಲ್ಲಿದ್ದರೆ ಅವರು ಸಮಸ್ಯೆಯ ಮೂಲ ಹುಡುಕುವುದು ಬಿಟ್ಟು ಭಾರತದ ಮೇಲೆ ಹರಿಹಾಯುತ್ತಿರಲಿಲ್ಲ.

ಶ್ರೀಲಂಕೆ ಮಿಲಿಟರಿ ಪರಿಹಾರದಲ್ಲಷ್ಟೇ ಆಸಕ್ತವಾಗಿದ್ದರೆ ಭಾರತ ಈ ವ್ಯವಹಾರದಿಂದಲೇ ಹಿಂದೆ ಸರಿಯುವುದು ಎಂದು ಭಾರತ ಸರಕಾರ ಎಚ್ಚರಿಕೆ ನೀಡಿರುವುದು ಅರ್ಥಪೂರ್ಣವಾಗಿದೆ.

ಈ ಪ್ರಶ್ನೆಯನ್ನು ಭಾರತ ಸರಕಾರದ ಅಧಿಕಾರಿಗಳ ತೀರ್ಮಾನಕ್ಕೆ ಬಿಟ್ಟು ಈ ದೇಶದ ಜನ ತೆಪ್ಪಗೆ ಕೂತುಕೊಳ್ಳುವಂತಿಲ್ಲ. ಇದು ಕೇವಲ ತಮಿಳುನಾಡಿನ ಜನರಿಗೆ ಸಂಬಂಧಪಟ್ಟ ವಿಚಾರವೂ ಆಗಿ ಉಳಿಯಬಾರದು. ಇಡಿಯ ದೇಶದ ಜನ ಇದರಲ್ಲಿ ಆಸಕ್ತಿ ವಹಿಸಬೇಕಾಗಿದೆ. ನಮ್ಮ ಒತ್ತಿನ ನಾಡಿನ ಒಂದು ಭಾಷಾ ಹಾಗೂ ಜನಾಂಗೀಯ ಅಲ್ಪಸಂಖ್ಯಾತ ಸಮುದಾಯದ ರಾಜಕೀಯ ಆಶೋತ್ತರಗಳ ವಿಚಾರ ವಿಚಾರವಂತರಾದ, ಪ್ರಜಾತಂತ್ರದ ಮೌಲ್ಯಗಳ ಬೆಳವಣಿಗೆಯಲ್ಲಿ ಆಸಕ್ತರಾದ ಎಲ್ಲರಿಗೂ ಸಂಬಂಧಪಟ್ಟಂತಹದು. ಶ್ರೀಲಂಕೆಯಲ್ಲಿ ನಡೆಯುತ್ತಿರುವುದು ಕೇವಲ ಭಯೋತ್ಪಾದಕತೆಯಲ್ಲ. ಕೆಲವೇ ಅಲ್ಪಸಂಖ್ಯಾತ ಹಕ್ಕುಗಳಿಗಾಗಿರುವ ಚಳವಳಿಯೂ ಅಲ್ಲ. ಅಲ್ಲಿ ನಡೆಯುತ್ತಿರುವುದನ್ನು ಒಂದು ಜನಾಂಗದ ಬಿಡುಗಡೆಗಾಗಿರುವ ಸ್ವಾತಂತ್ರ್ಯ ಹೋರಾಟವೆಂದೇ ಕರೆಯಬೇಕಾಗಿದೆ.

ಮುಂಗಾರು

ಮಂಗಳವಾರ, ಮೇ 27, 1986

ಹೆತ್ತವರ ಸಂಕಟ

ಜೂನ್ ಎರಡನೇ ದಿನಾಂಕ ರಾಜ್ಯದ ಎಲ್ಲಾ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳು ಪುನರಾರಂಭಗೊಳ್ಳಲಿವೆ. ಎಸೆಸೆಲ್ಸಿ ಫಲಿತಾಂಶ ಈಗಾಗಲೇ ಪ್ರಕಟಗೊಂಡಿದ್ದು ಕಾಲೇಜುಗಳಿಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗ್ಯೂ ಭರತಿ ಕಾರ್ಯ ನಡೆಯುತ್ತಿದೆ. ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯೆ ಕೊಡಬೇಕೆಂದು ಹೆತ್ತವರು ಸಹಜವಾಗಿಯೇ ಬಯಸುತ್ತಾರೆ. ಈ ಬಯಕೆಯ ದುರ್ಲಾಭವನ್ನು ಪಡೆಯಬಯಸುವ ಮಂದಿ ಸಾಕಷ್ಟಿದ್ದಾರೆ. ಇದರ ಪರಿಣಾಮವಾಗಿ ಅನೇಕ ವಿದ್ಯಾಸಂಸ್ಥೆಗಳು ವಿದ್ಯೆಯ ಮಾರಾಟದ ಅಂಗಡಿಗಳಾಗಿ ಪರಿವರ್ತಿತವಾಗಿವೆ. ಈ ವಿದ್ಯಮಾನ ಕರ್ನಾಟಕದಲ್ಲಿ ಹುಟ್ಟಿಕೊಂಡು ಅನೇಕ ವರ್ಷಗಳಾದವು. ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಕಲಿಕೆಗೆ ತಲೆ ಶುಲ್ಕ ಸಂಗ್ರಹದ ವಿದ್ಯಮಾನದಿಂದ ಹುಟ್ಟಿಕೊಂಡು ಬೆಳಗಿಳಿದು ಬಂದ ಈ ಪ್ರವೃತ್ತಿ ಕರ್ನಾಟಕದಲ್ಲಿ ಬೇರು ಬಿಟ್ಟು ಒಂದೆರಡು ದಶಕಗಳೇ ಸಂದು ಹೋದವು.

ಈ ಅನಿಷ್ಟವನ್ನು ನಿಲ್ಲಿಸಲು ಈ ರಾಜ್ಯದಲ್ಲಿ ಆಡಳಿತ ನಡೆಸಿದ ಯಾವ ಸರಕಾರವೂ ಗಂಭೀರ ಪ್ರಯತ್ನವನ್ನು ಮಾಡಿದ್ದೇ ಇಲ್ಲ. ಬದಲಾಗಿ ಇಂಗ್ಲಿಷ್ ಮಾಧ್ಯಮದ ನರ್ಸರಿ ಶಾಲೆಗಳನ್ನು, ಪ್ರಾಥಮಿಕ ಶಾಲೆಗಳನ್ನು ತೆರೆಯಲು ಮನಬಂದಂತೆ ಪರವಾನಿಗೆಯನ್ನು ನೀಡಲಾಗಿದೆ. ಪರಿಣಾಮವಾಗಿ ರಾಜಧಾನಿಯಾದ ಬೆಂಗಳೂರಿನಲ್ಲಿ ಇಂಗ್ಲಿಷ್ ನರ್ಸರಿ ಹಾಗೂ ಪ್ರೈಮರಿ ಶಾಲೆಗಳು ಅಣಬೆಗಳಂತೆ ಹುಟ್ಟಿಕೊಂಡಿವೆ. ಇತರ ನಗರಗಳಲ್ಲಿಯೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಇದೆ.

ಬೆಂಗಳೂರಿನಲ್ಲಿ ಬೇರೆ ರಾಜ್ಯಗಳಿಂದ ಬಂದ ಅಸಂಖ್ಯ ಮಂದಿ ಬಾಡಿಗೆ ಕಟ್ಟಡ ಸಿಗದಿದ್ದರೆ ಉಪನಗರಗಳಲ್ಲಿ ವಾಸಕ್ಕೆ ಪಡೆದುಕೊಂಡ ಮನೆಗಳಲ್ಲಿಯೇ ಒಂದು ಕೋಣೆಯಲ್ಲಿ ನರ್ಸರಿ ಶಾಲೆ ಎಂದು ಬೋರ್ಡು ತಗುಲಿಸಿಕೊಂಡು ಅಮಾಯಕರಾದ ಇಂಗ್ಲಿಷ್ ವಿದ್ಯಾಕಾಂಕ್ಷಿ ಹೆತ್ತವರಿಂದ ಹಣ ಸೂರೆ ಹೊಡೆಯುತ್ತಿದ್ದಾರೆ.

ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಇಲ್ಲ. ಈ ರಾಜ್ಯದ ಮಕ್ಕಳೆಲ್ಲ ಕನ್ನಡ ಮಾಧ್ಯಮದಲ್ಲೇ ಕಲಿಯಬೇಕು ಎಂಬ ಸರಕಾರದ ನಿಲುಮೆಯ ಪರಿಣಾಮವಾಗಿ ಇಂಗ್ಲಿಷ್ ವಿದ್ಯೆ ಬಯಸುವವರು ಅದಕ್ಕಿರುವ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕಾದ, ಅದು ಎಲ್ಲಿ ಸಿಗುವುದೋ ಎಂದು ಹುಡುಕಿಕೊಂಡು ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಅವರು ಅಸಹಾಯಕರಾಗಿದ್ದಾರೆ. ಅವರನ್ನು ನರ್ಸರಿ ಹಾಗೂ ಪ್ರಾಥಮಿಕ ಶಾಲೆಯಂಗಡಿ ತೆರೆದವರು ಸಾರಾಸಗಟಾಗಿ ಶೋಷಣೆ ಮಾಡುವ ಅರಾಜಕ ಪರಿಸ್ಥಿತಿ ಉಂಟಾಗಿದೆ.

ಸರಕಾರದ ನೀತಿಯ ಪರಿಣಾಮವಾಗಿ ಇದು ಸಂಭವಿಸಿದೆ. ಅತ್ತ ಇಂಗ್ಲಿಷ್ ಮಾಧ್ಯಮದ ಶಾಲೆಗಳವರನ್ನು ಕೇಳುವವರಿಲ್ಲ; ಇತ್ತ ಕನ್ನಡ ಮಾಧ್ಯಮದ ಶಾಲೆಗಳಿಗೆ ಗತಿಯಿಲ್ಲ. ಈ ಪರಿಸ್ಥಿತಿಯನ್ನು ನಿಯಂತ್ರಿಸುತ್ತೇವೆ, ಶಿಕ್ಷಣ ಸಂಸ್ಥೆಗಳಲ್ಲಿ ದೇಣಿಗೆ- ವಂತಿಗೆ- ದುಬಾರಿ ಶುಲ್ಕ ಪರಿಸ್ಥಿತಿಯನ್ನು ನಿವಾರಿಸುತ್ತೇವೆ ಎಂದು ಶಿಕ್ಷಣ ಸಚಿವ ಎಂ. ರಘುಪತಿಯವರು ಕಳೆದ ವರ್ಷ ಉತ್ಸಾಹದಿಂದಲೇ ಕಾರ್ಯಾಚರಣೆಗಿಳಿದರು. ಆದರೆ ಅವರ ಕೆಲಸಗಳು ಅರೆಬೆಂದಂತಾಗಿವೆ. ಒಮ್ಮೆ ಶಾಲೆಗಳಲ್ಲಿ ಯಾವುದೇ ರೂಪದ ದೇಣಿಗೆ ಸಲ್ಲದು ಎಂದು ಅವರು ತಾಕೀತು ಮಾಡಿದರು. ಶಿಕ್ಷಣ ಶುಲ್ಕದ ಬಗ್ಗೆ ಏನೂ ಹೇಳದೆ ಅದನ್ನು ಆ ಮೇಲೆ ಪ್ರಕಟಿಸುವುದಾಗಿ ಹೇಳಿದರು. ಆ ಮೇಲೆ ಈ ವಿಚಾರ ತೀರ್ಮಾನಕ್ಕೆ ಸಮಿತಿಯೊಂದನ್ನು ನೇಮಿಸಿದರು. ಅದು ವಿದ್ಯೆ ಮಾರಿ ಹಣ ಮಾಡಬೇಕೆನ್ನುವವರಿಗೆ ಸಂತೋಷವನ್ನುಂಟುಮಾಡುವ ಸೊಗಸಾದ ವರದಿಯನ್ನು ಸಲ್ಲಿಸಿತು. ದೇಣಿಗೆಯ ಮೊತ್ತವು ವರ್ಷಕ್ಕೆ ಐವತ್ತು ರೂಪಾಯಿಗಳನ್ನು ಮೀರಬಾರದು ಎಂದು ಈ ಶಿಫಾರಸು ವಿಧಿಸಿದರೂ ಶಿಕ್ಷಣ ಶುಲ್ಕದ ಮೊತ್ತಕ್ಕೆ ಯಾವ ಮಿತಿಯೂ ಸಲ್ಲದೆಂದು ತೀರ್ಮಾನ ಹೇಳಿತು.

ಇದೀಗ ದೇಣಿಗೆ ವಿಚಾರದಲ್ಲಿ ಸಚಿವ ಸಂಪುಟವು ತೀರ್ಮಾನವೊಂದನ್ನು ತೆಗೆದುಕೊಂಡಿದೆಯೆಂದು ಸಚಿವ ಎಂ. ರಘುಪತಿ ಹೇಳಿದ್ದಾರೆ. ಅದನ್ನು ಮುಂದೆ ಪ್ರಕಟಿಸಲಾಗುವುದು ಎಂದೂ ಕೂಡ ಅವರು ತಿಳಿಸಿದ್ದಾರೆ. ಪ್ರಕಟಣೆಯನ್ನು ಯಾಕೆ ಮುಂದಕ್ಕೆ ಹಾಕಬೇಕೆಂದು ನಮಗೆ ಅರ್ಥವಾಗುತ್ತಿಲ್ಲ. ಇದರ ಉದ್ದೇಶವೇನೆಂಬುದು ಸಾಮಾನ್ಯರಿಗೆ ತಿಳಿಯುವುದಿಲ್ಲ. ಶಾಲೆಗಳು ನಾಳೆ-ನಾಡಿದ್ದರಲ್ಲಿ ಪುನರಾರಂಭಗೊಳ್ಳಲಿವೆ. ನರ್ಸರಿಗಳಿಗೂ ಪ್ರಾಥಮಿಕ ಶಾಲೆಗಳಿಗೂ ಮಕ್ಕಳ ಸೇರ್ಪಡೆ ನಡೆಯುತ್ತಿದೆ. ರಾಜ್ಯದಾದ್ಯಂತ ಹೆತ್ತವರ-ಪೋಷಕರ ಸುಲಿಗೆ ನಡೆಯುತ್ತಿದೆ. ಕಟ್ಟಡ, ಶಾಲಾಭಿವೃದ್ಧಿ ನಿಧಿ, ಹೆತ್ತವರ ಸಂಘದ ನಿಧಿ ಎಂದು ಹಣ ಸಂಗ್ರಹ ನಡೆದಿದೆ. ಯಾವ ಮೊತ್ತಕ್ಕೂ ರಶೀದಿ ಇಲ್ಲ. ಶಾಲೆಗಳ ಹೆಸರಿನಲ್ಲಿ ಸಾಕಷ್ಟು ಮಂದಿ ಗಂಟು ಮಾಡಿಕೊಳ್ಳುತ್ತಾರೆ. ಕಾರು- ಬಂಗಲೆಕೊಳ್ಳುತ್ತಾರೆ. ಹಿಂದೆ ದೇಣಿಗೆ ಮೊತ್ತಕ್ಕೆ ರಶೀದಿ ಕೊಡಲಾಗುತ್ತಿತ್ತು. ಹಣ ಶಾಲೆಯ ಅಭಿವೃದ್ಧಿಗಾಗಿಯೇ ಖರ್ಚಾಗುತ್ತಿತ್ತು. ಈಗ ಎಲ್ಲವೂ ಬೇನಾಮಿ ವ್ಯವಹಾರವೇ. ಸಿಕ್ಕಿದವರು ದಕ್ಕಿಸಿಕೊಳ್ಳುತ್ತಾರೆ.

ಇಷ್ಟಕ್ಕೂ ಕಾರಣ ನಮ್ಮ ರಾಜ್ಯ ಸರಕಾರ. ಅನುಷ್ಠಾನಕ್ಕೆ ಅಸಾಧ್ಯವಾದ ನಿಯಮಗಳನ್ನು ಮಾಡಿದ್ದು. ನಿಯಂತ್ರಣಕ್ಕೆ ಅಸಾಧ್ಯವಾದ ಕೆಲಸಕ್ಕೆ ಹೊರಟದ್ದು. ಅಥವ ನಿಯಂತ್ರಿಸುವ ಉದ್ದೇಶವೇ ಇಲ್ಲದೆ ಶಾಲೆಗಳವರನ್ನು ದರೋಡೆ ಸುಲಿಯುವ ತಂತ್ರಗಾರಿಕೆ ಮಾಡಿದ್ದು. ಹೆತ್ತವರ ಸಂಕಟವನ್ನು ದುಪ್ಪಟ್ಟುಗೊಳಿಸಿದ ಮಹಾಪರಾಧಿ ಬೇರಾರೂ ಅಲ್ಲ- ನಮ್ಮ ಈ ಸರಕಾರವೇ. ಸಾಧ್ಯವಿದ್ದರೆ ಈ ಸರಕಾರ- ಈ ಶಿಕ್ಷಣಮಂತ್ರಿ ಇಂಗ್ಲಿಷ್ ಮಾಧ್ಯಮದ ಶಾಲೆ ನಡೆಸುವ ಹಣದ ಹದ್ದುಗಳನ್ನು ಹೊಡೆದೋಡಿಸಬೇಕಿತ್ತು. ಇಲ್ಲವಾದರೆ ಸುಮ್ಮನೆ ಕುಳಿತಿರಬೇಕಿತ್ತು.

ಮುಂಗಾರು
ಮಂಗಳವಾರ, ಜೂನ್ 3, 1986

ಬೆಳಗಾವಿ ಪಂಜಾಬ್ ಆಗದು

ಗಡಿನಗರವಾದ ಬೆಳಗಾವಿಯಲ್ಲಿ ಕ್ಷೋಭೆ ಎದ್ದಿದೆ. ಬೆಳಗಾವಿ ಹೊರವಲಯದ ಹಿಂಡಲಗಡಲ್ಲಿ ಎರಡು ಸಾವಿರ ಜನರ ಗುಂಪು ಹುಚ್ಚೆದ್ದು ಹಿಂಸಾ ಕೃತ್ಯದಲ್ಲಿ ತೊಡಗಿದ್ದಾಗ ನಿನ್ನೆ ಪೊಲೀಸ್ ಕಾರ್ಯಾಚರಣೆ ನಡೆಯಿತು. ಗೋಲಿಬಾರು ಆಯಿತು. ಇಬ್ಬರು ಸತ್ತರು.

ಇದೆಲ್ಲ ಮಹಾರಾಷ್ಟ್ರದ ನಾಯಕರು ಪ್ರಾರಂಭಿಸಿರುವ ಕನ್ನಡ ವಿರೋಧಿ ಸತ್ಯಾಗ್ರಹದಿಂದಾಗಿ ಆಗಿದೆ. ಬೆಳಗಾವಿಯು ಮಹಾರಾಷ್ಟ್ರಕ್ಕೆ ಸೇರತಕ್ಕದ್ದೆಂದು ಬೆಳಗಾವಿ ಮಹಾನಗರಪಾಲಿಕೆಯಲ್ಲಿ ಕೆಲವು ತಿಂಗಳುಗಳ ಹಿಂದೆ ನಿರ್ಣಯವಾದುದೆ ಈಗ ನಡೆಯುತ್ತಿರುವ ಈ ಕ್ಷೋಭೆಗೆ ಚಾಲನೆ ಕೊಟ್ಟ ವಿಚಾರ. ಆಮೇಲೆ ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ಸರ್ವಪಕ್ಷ ಸಭೆ ನಡೆಯಿತು. ಬೆಳಗಾವಿಯಲ್ಲಿ ಹೋರಾಟ ನಡೆಸಬೇಕೆಂಬ ನಿರ್ಧಾರ ಅದರಲ್ಲಿ ಆಯಿತು. ಆ ಬಳಿಕ ಮಹಾರಾಷ್ಟ್ರದ ನಾಯಕರು ಕನ್ನಡವನ್ನು ವಿರೋಧಿಸುವ, ಕರ್ನಾಟಕದ ಸರಕಾರವನ್ನು ಟೀಕಿಸುವ, ಬೆಳಗಾವಿ ಮಹಾರಾಷ್ಟ್ರದ್ದೆಂದು ವಾದಿಸುವ ಹೇಳಿಕೆಗಳ ಸರಣಿಯನ್ನೇ ಹೊರಡಿಸಿದರು. ಬೆಳಗಾವಿಯಲ್ಲಿ ತಾವು ನಡೆಸುವ ಸತ್ಯಾಗ್ರಹ ಶಾಂತಿಯುತವಾಗಿ ಗಾಂಧೀ ತತ್ವದ ತಳಹದಿಯಲ್ಲಿ ನಡೆಯು [illegible] ಕೊಟ್ಟರು. [illegible] ಅಲ್ಲಿನ [illegible] ಎರಡೂ ಕಡೆಯ [illegible] ಹಿಂಡಲಗದಲ್ಲಿ ನಡೆದ [illegible] ಗಳನ್ನು ಎಸೆದು [illegible] ಕಚೇರಿಗಳನ್ನು ಧ್ವಂಸ ಮಾಡಿದರು. ಹಿಂಡಲಗ ಸೆರೆಮನೆಯ ಮೇಲೆ ದಾಳಿಯಿಟ್ಟು ಪೊಲೀಸರನ್ನು ಗಾಯಗೊಳಿಸಿದರು.

ಇದೆಲ್ಲವೂ ಬೆಳಗಾವಿಯಲ್ಲಿ ಕನ್ನಡವನ್ನು ಕಡ್ಡಾಯಗೊಳಿಸಬಾರದೆಂಬ ಒತ್ತಾಯವನ್ನು ಜಾರಿಗೆ ತರುವುದಕ್ಕಾಗಿ. ಭಾಷಾ ಅಲ್ಪ ಸಂಖ್ಯಾತರಿರುವ ಪ್ರದೇಶಗಳಲ್ಲಿ ಮಕ್ಕಳಿಗೆ ಪ್ರಾಥಮಿಕ ಶಾಲಾ ಮಟ್ಟದಲ್ಲಿ ಮಾತೃಭಾಷೆಯಲ್ಲೇ ಕಲಿಯುವ ಹಕ್ಕು ಇರಬೇಕು ಎಂಬುದು ಭಾಷಾವಾರು ಪ್ರಾಂತ ರಚನೆ ಆಯೋಗದ [illegible]ಯವಾಗಿತ್ತು. ಇದರ ಪರಿಣಾಮವಾಗಿಯೇ ಈ ಅವಕಾಶವನ್ನು ಸಂವಿಧಾನದ ಕಲಮುಗಳಲ್ಲಿ ಅಳವಡಿಸಲಾಯಿತು. ಆದರೆ ಮಾಧ್ಯಮಿಕ ಶಿಕ್ಷಣಕ್ಕೆ ಸಂಬಂಧಿಸಿ ಇದನ್ನು ಹೇಳುವಂತಿಲ್ಲ. ಅಂಥ ರಕ್ಷಣೆ ಈ ವಿಭಾಗದಲ್ಲಿ ಭಾಷಾ ಅಲ್ಪಸಂಖ್ಯಾತರಿಗಿಲ್ಲ. ರಾಜ್ಯಾಂಗವು ಈ ವಿಚಾರದಲ್ಲಿ ಏನೂ ಹೇಳುವುದಿಲ್ಲ. ಭಾಷಾವಾರು ಪ್ರಾಂತ ರಚನಾ ಆಯೋಗವೂ ಈ ವಿಚಾರವಾಗಿ ಏನೂ ಹೇಳದೆ ಕೇಂದ್ರ ಸರಕಾರವೇ ರಾಜ್ಯಗಳೊಡನೆ ಸಮಾಲೋಚನೆಯಿಂದ ಈ ವಿಚಾರವಾಗಿ ಸ್ಪಷ್ಟವಾದ ನೀತಿಯೊಂದನ್ನು ರೂಪಿಸಬೇಕು ಎಂದು ಕೇಂದ್ರಕ್ಕೆ ಮನದಟ್ಟು ಮಾಡಿತ್ತು. ಆದರೆ ಇನ್ನು ಕೂಡ ಈ ವಿಚಾರದಲ್ಲಿ ಕೇಂದ್ರವು ಖಚಿತವಾದ ಧೋರಣೆ ರೂಪಿಸಿಲ್ಲ. ಯಾವ ರಾಜ್ಯದೊಡನೆಯೂ ಅದು ಸಂವಾದ-ಸಮಾಲೋಚನೆ ಮಾಡಿದ್ದೂ ಇಲ್ಲ. ಎಲ್ಲಾ ರಾಜ್ಯಗಳೂ ಪ್ರಾಥಮಿಕ ಮಟ್ಟದಲ್ಲಿ ಅಲ್ಪ ಸಂಖ್ಯಾತರಿಗೆ ಮಾತೃಭಾಷೆಯಲ್ಲಿ ಕಲಿಯುವ ಹಕ್ಕನ್ನು ನೀಡಿದ್ದರೂ ಮೇಲ್ಮಟ್ಟದಲ್ಲಿ ಅಂಥ ಅವಕಾಶ ಇಲ್ಲ.

ಬೆಳಗಾವಿಯಲ್ಲಿಯೂ ಅಷ್ಟೆ. ಪ್ರಾಥಮಿಕ ಮಟ್ಟದಲ್ಲಿ ಮಾತೃಭಾಷೆಯಲ್ಲೇ ಕಲಿಯುವ ಹಕ್ಕು ಮರಾಠಿ ಅಲ್ಪ ಸಂಖ್ಯಾತರಿಗಿದೆ. ಮಾಧ್ಯಮಿಕ ಮಟ್ಟದಲ್ಲಿ ಕನ್ನಡವು ಕಡ್ಡಾಯವಾಗಿ ಪ್ರಥಮ ಭಾಷೆಯಾಗಬೇಕು ಎಂದು ಕರ್ನಾಟಕ ಸರಕಾರ ಆಜ್ಞೆ ಹೊರಡಿಸಿದ್ದು 1982ರಲ್ಲಿ. ಗೋಕಾಕ ಚಳವಳಿಯ ಪರಿಣಾಮವಾಗಿ ಹೊರಟ ಆಜ್ಞೆ ಇದಾಗಿದೆ. ಇದು ಇಡಿಯ ರಾಜ್ಯಕ್ಕೆ ಅನ್ವಯಿಸುವಂತಹದ್ದು. ಹಾಗೆಯೇ ಬೆಳಗಾವಿಗೂ ಅನ್ವಯಿಸಿದೆ. ಅಂದು ಬೆಳಗಾವಿಯಲ್ಲಿ ಇಂತಹ ಸತ್ಯಾಗ್ರಹವೇನೂ ನಡೆಯಿಲ್ಲ. ಕನ್ನಡ ಪ್ರಥಮಭಾಷೆಯು ಕಾಲಕ್ರಮ 1987-88ರಲ್ಲಿ ಇಡಿಯ [illegible] ಮಟ್ಟದಲ್ಲಿ ಪೂರ್ಣವಾಗಿ ಅನುಷ್ಠಾನಕ್ಕೆ ಬರುತ್ತದೆ.

ವಸ್ತುಶಃ ಮಹಾರಾಷ್ಟ್ರದ ನಾಯಕರಿಗೆ ಭಾಷೆಯ ಪ್ರಶ್ನೆ ಮಹತ್ವದಲ್ಲ. ಮಾತುಕತೆಗೆ ಅವರು ತಯಾರಿಲ್ಲ. ಮಹಾಜನ ವರದಿಯಲ್ಲಿ ಮಹಾರಾಷ್ಟ್ರಕ್ಕೆ ಸೇರಿಸಲು ಶಿಫಾರಸು ಮಾಡಲಾಗಿರುವ ಪ್ರದೇಶಗಳಲ್ಲಿ ಕಡ್ಡಾಯ ಕನ್ನಡ ಪ್ರಥಮ ಭಾಷೆ ಆಜ್ಞೆಯನ್ನು ತಡೆಹಿಡಿಯಲು ಕರ್ನಾಟಕ ಮುಖ್ಯಮಂತ್ರಿ ಒಪ್ಪಿಕೊಂಡಿದ್ದಾರೆ, ಉಳಿದಂತೆಯೂ ಮಾತುಕತೆಗೆ ತಯಾರೆಂದು ಅವರು ತಿಳಿಸಿದ್ದಾರೆ. ಮರಾಠಿಗರಿಗೆ ಅದು ಬೇಕಾಗಿಲ್ಲವೆಂದೇ ಕಾಣಿಸುತ್ತಿದೆ. ಬೆಳಗಾವಿ ಪ್ರಶ್ನೆಯನ್ನು ಪಂಜಾಬಿಗೆ ಹೋಲಿಸಿ ಅವರು ಹಿಂದೆ ಹಲವು ಬಾರಿ ಮಾತನಾಡಿದ್ದರು. ಇದೀಗ ಅಂಥ ಕ್ಷೋಭೆಯನ್ನು ಇಲ್ಲಿ ನಿರ್ಮಿಸಿ ಗಡಿವಿವಾದವನ್ನು ಮತ್ತೆ ತೆರೆದು ಬೆಳಗಾವಿಯನ್ನು ಕಬಳಿಸುವ ವ್ಯಾಪಕ ತಂತ್ರದ ಅಂಗವೇ ಈ ಸತ್ಯಾಗ್ರಹದಂತೆ ಕಾಣಿಸುತ್ತದೆ.

ಇಂತಹ ಕ್ಷೋಭೆಯಿಂದ ಖಂಡಿತ ಈ ಪ್ರಶ್ನೆ ಬಗೆಹರಿಯದು. ಬೆಳಗಾವಿ ಎಂದಿಗೂ ಪಂಜಾಬ್ ಆಗದು. ಇದನ್ನು ಮರಾಠಿಗರು ಬೇಗನೆ ಅರ್ಥ ಮಾಡಿಕೊಂಡು ವಸ್ತುಸ್ಥಿತಿ ತಿಳಿದರೆ ಎಲ್ಲರಿಗೂ ಕ್ಷೇಮ.

ಮುಂಗಾರು

ಬುಧವಾರ, ಜೂನ್ 4, 1986

ನಿಸರ್ಗದ ನಾಶ ಸಲ್ಲದು

ನಾಳೆ, ಜೂನ್ ದಿನಾಂಕ ಐದರಂದು ಜಾಗತಿಕ ಪರಿಸರ ದಿನ.

ಪರಿಸರದ ಬಗ್ಗೆ ಚಿಂತಿಸುವ ಪರಿಸರವನ್ನು ರಕ್ಷಿಸಲು ಪಣತೊಡುವ, ಪರಿಸರವನ್ನು ಉಳಿಸಿ, ಅದು ಮನುಷ್ಯರಿಗೂ ಇತರ ಲಕ್ಷಾನುಲಕ್ಷ ಜೀವಿಗಳಿಗೂ ಬದುಕಲು ಯೋಗ್ಯವಿರುವಂತೆ ಮಾಡುವ ಕೆಲಸ ಒಂದು ದಿನ ನಡೆದರೆ ಸಾಲದು; ದಿನ ದಿನವೂ ಆಗಬೇಕಾದ್ದು. ವ್ಯಕ್ತಿ ವ್ಯಕ್ತಿಯೂ ಮಾಡಬೇಕಾದ್ದು. ಈ ನಿಸರ್ಗವನ್ನು ನಾಶಮಾಡಿದರೆ ಜೀವಿ ಸಂಕುಲವೇ ನಾಶವಾದೀತು ಎಂಬ ಪ್ರಜ್ಞೆ ಮೂಲತ: ಮನುಷ್ಯರಲ್ಲಿ ಉಂಟಾಗಬೇಕು.

ಒಂದು ಕಾಲದಲ್ಲಿ ಈ ಭೂಮಿಯ ಮೇಲೆ ನಿಸರ್ಗ ಹಸುರಾಗಿತ್ತು. ಹಸುರಿನ ಹರವು ದಟ್ಟವಾಗಿತ್ತು. ಈ ದೇಶವನ್ನೇ ತೆಗೆದುಕೊಂಡರೂ ಅರ್ಧಾಂಶಕ್ಕಿಂತಲೂ ಹೆಚ್ಚು ಪ್ರದೇಶ ಅರಣ್ಯದಿಂದ ಆವೃತವಾಗಿತ್ತು. ಬ್ರಿಟಿಷರು ಈ ದೇಶಕ್ಕೆ ಬಂದು ಆಳ್ವಿಕೆ ತೊಡಗಿ ಒಂದೆರಡು ಶತಮಾನದ ಬಳಿಕವೂ ಕನಿಷ್ಠ ನೂರಕ್ಕೆ ಮೂವತ್ತರಷ್ಟು ಭಾಗ ಅರಣ್ಯದಿಂದ ಸಮೃದ್ಧವಾಗಿತ್ತು. ಇಂದು ಸರಕಾರಿ ದಾಖಲೆಗಳಲ್ಲಿ ಸುಮಾರು 15 ಕೋಟಿ ಎಕರೆ ಜಾಗದಲ್ಲಿ ಕಾಡುಗಳಿವೆ. ಅಂದರೆ ಅದು ಒಟ್ಟು ಭೂಭಾಗದ ಶೇಕಡಾ 23 ಆಯಿತು. ಆದರೆ ವಾಸ್ತವಿಕವಾಗಿ ಅಷ್ಟಿಲ್ಲ. ವಾಸ್ತವಿಕವಾಗಿ ಈಗ ಇರುವ ಕಾಡು ಈ ದೇಶದ ಇಡಿಯ ನೆಲ ಭಾಗದ ಶೇಕಡಾ ಹತ್ತೋ ಹನ್ನೆರಡೋ ಅಂಶ ಮಾತ್ರ ಆದೀತು. ಉಳಿದುದೆಲ್ಲವನ್ನು ಮಾನವ ಸಂತತಿ ನುಂಗಿ ನೀರು ಕುಡಿದಿದೆ.

1902ರ ಕಾಲಕ್ಕೆ ಭಾರತದ ಜನಸಂಖ್ಯೆ ಸುಮಾರು ಇಪ್ಪತ್ತೆರಡು ಕೋಟಿ. ಇಂದು ಅದು ಎಪ್ಪತ್ತು ಕೋಟಿಯನ್ನು ಮೀರಿದೆ. ಜನ ಸಂಖ್ಯೆಯ ಈ ಉತ್ಪಾತವೇ ನಿಸರ್ಗವನ್ನು ನುಂಗಿ ನೊಣೆದಿದೆ. ಲೌಕಿಕ ಬದುಕಿನ ಬೆಳವಣಿಗೆಗಾಗಿ, ಮಾನವ ಜೀವನದ ದಿನ ನಿತ್ಯದ ಅವಶ್ಯಕತೆಗಳಿಗಾಗಿ ಸಸ್ಯ ಸಂಪತ್ತು ಸೂರೆಯಾಗಿದೆ. ಮನೆಕಟ್ಟಲು ಮರ ಬೇಕು. ಕೃಷಿಗೆ ಸೊಪ್ಪು ಬೇಕು. ಆಹಾರ ಬೇಯಿಸಲು ಸೌದೆ ಬೇಕು. ದಿನ ನಿತ್ಯದ ಉಪಯೋಗದ ಸಾಮಗ್ರಿಗಳ ತಯಾರಿಕೆಯ ಕಚ್ಚಾ ಮಾಲಾಗಿ ಸಸ್ಯ ಸಾಮಗ್ರಿಗಳು ಬೇಕು. ಅವುಗಳ ಸಂಸ್ಕರಣಕ್ಕೆ ಇಂಧನವಾಗಿ ಸೌದೆ ಬೇಕು. ಕಾಗದಕ್ಕೆ ಬಿದಿರು ಬೇಕು. ಬಟ್ಟೆಗೆ ಮರಬೇಕು. ಮನೆ ಮಠಗಳಿಗೆ, ಇತರ ನಾಗರಿಕ ಉಪಯೋಗಗಳಿಗೆ ನೆಲ ಬೇಕು. ಅದಕ್ಕಾಗಿ ಕಾಡು ನಾಶವಾಗಬೇಕು.

ಆಹಾರ ಬೆಳೆಯಲು ಕಾಡು ಕಡಿದು ಹೊಲಗದ್ದೆ ಮಾಡಿದೆವು. ನಿಸ್ಸಾರವಾಗುತ್ತಿರುವ ಅವುಗಳನ್ನು ಮತ್ತೆ ಸಾರವತ್ತಾಗಿ ಮಾಡಲು ಸೊಪ್ಪು ಗೊಬ್ಬರಕ್ಕಾಗಿ ಮತ್ತಷ್ಟು ಕಾಡು ಸವರಿದೆವು. ಈ ಕೃಷಿ ಕಾರ್ಯದ ಮೇರೆ ಮೀರಿದ್ದೇ ಕಾರಣವಾಗಿ ಉತ್ತರದಲ್ಲಿ ಥಾರ್ ಮರು ಭೂಮಿ ಬೆಳೆಯಿತು. ಆಫ್ರಿಕಾದಲ್ಲಿ ಸಹರಾ ಮರುಭೂಮಿ ಉಂಟಾದದ್ದು ಇಂತಹದೇ ವಿದ್ಯಮಾನದಿಂದ. ಉತ್ತರ ಅಮೇರಿಕದಲ್ಲಿ ಕಾಡು ಕಡಿದು ಬೆಳೆ ಬೆಳೆಸಿದ ಲಕ್ಷಾಂತರ ಎಕರೆ ಜಮೀನು ಇಂದು ನಿಸ್ಸಾರವಾಗಿ, ಬಿರುಗಾಳಿಯ ಹೊಡೆತಕ್ಕೆ ಸಿಲುಕಿ ಮಣ್ಣಿನ ರಾಶಿ ರಾಶಿಯೇ ಚಲಿಸಿ ಮರುಭೂಮಿಯಾಗಿ ಪರಿವರ್ತನೆಗೊಳ್ಳುತ್ತಿದೆ.

ಸಸ್ಯರಾಶಿಯು ಜೀವನಿಧಿ. ಅರಣ್ಯವೇ ಮನುಕುಲಕ್ಕೆ ಬದುಕಿನ ಶಿಕ್ಷಣ ಕೊಟ್ಟಿದೆ. ಆಮ್ಲಜನಕದ ಮೂಲವೇ ಸಸ್ಯ. ಕಾಡೇ ನದಿ, ಹೊಳೆ, ಹಳ್ಳಗಳ ತಾಯಿ. ಕಾಡನ್ನು ಕಡಿದು ನಾಶಮಾಡಿದರೆ ಬಯಲು ಬೆತ್ತಲಾಗುತ್ತದೆ. ಭೂಮಿಗೂ ಮಾನವನ ಬದುಕಿಗೂ ರಕ್ಷಣೆ ಇಲ್ಲವಾಗುತ್ತದೆ. ನೀರು ದೂರ ಸರಿಯುತ್ತದೆ, ಭೂಮಿ ಬೆಂಗಾಡಾಗಿ ಬದುಕು ಅಸಹನೀಯವಾಗುತ್ತದೆ. ಗಾಳಿಯೂ ಅಳಿದುಳಿದ ನೀರೂ ಕಲುಷಿತಗೊಳ್ಳುತ್ತದೆ. ಅಭಿವೃದ್ಧಿಯನ್ನು ನಿಸರ್ಗದೊಂದಿಗೆ ಸರಿದೂಗಿಸದೆ ಅವಿವೇಕದಿಂದ ನಡೆದದ್ದೇ ಈ ಎಲ್ಲಾ ಅನಾಹುತದ ಮೂಲ.

ಗಾಳಿಯನ್ನು ಸ್ವಚ್ಛಗೊಳಿಸಲು, ನೀರನ್ನು ಶುದ್ಧೀಕರಿಸಲು–ಆ ಮೂಲಕ ಪರಿಸರವನ್ನು ನಿರ್ಮಲವಾಗಿಡಲು ಸಸ್ಯರಾಶಿಯನ್ನು ಬೆಳೆಸುವ ಬದಲು ಮಾನವ ತಂತ್ರಜ್ಞಾನದ ಮೊರೆ ಹೊಕ್ಕಂತಹ ವಿಲಕ್ಷಣ ಸನ್ನಿವೇಶವನ್ನು ಕಾಣುತ್ತಿದ್ದೇವೆ.

ಗಂಗಾ ನದಿಯನ್ನು ಶುದ್ಧವಾಗಿಡಲು ಹಿಮಾಲಯದ ತಪ್ಪಲಲ್ಲಿಯೂ ಬಯಲಲ್ಲಿಯೂ ಕಾಡು ಬೆಳೆಸುವ ಬದಲು ಪೇಟೆಗಳಲ್ಲಿ ನೀರನ್ನು ಸೋಸುವ ದೊಡ್ಡ ಯಂತ್ರಗಳ ಕೃತಕ ವಿಧಾನವನ್ನು ನಮ್ಮ ಸರಕಾರ ಅನುಸರಿಸುತ್ತಿದೆ.

ಇಂದು ಭೂಗೋಲದಲ್ಲಿ ನಿಮಿಷಕ್ಕೆ ಸುಮಾರು 50 ಎಕ್ರೆಯಂತೆ ಕಾಡನ್ನು ಕಬಳಿಸಲಾಗುತ್ತಿದೆ. ಇದರಲ್ಲಿ ಭಾರತದ ಪಾಲು ಸಣ್ಣದೇನಲ್ಲ.

ಜೀವಾಧಾರವಾದ ಸಸ್ಯ ಸಂಪತ್ತಿನಲ್ಲಿ, ಆ ಸಂಪತ್ತುಳ್ಳ ಅರಣ್ಯವನ್ನು ಉಳಿಸಿಬೆಳೆಸಬೇಕಾದ್ದು, ವಿಸ್ತರಿಸಬೇಕಾದ್ದು. ಸಮಾಜದ ಕರ್ತವ್ಯ. ಸರಕಾರ ಇದಕ್ಕಾಗಿ ಸೂಕ್ತ ಕಾರ್ಯಕ್ರಮಗಳನ್ನೂ ಕಾನೂನುಗಳನ್ನೂ ಜಾರಿಗೆ ತರಬೇಕು. ಮನುಷ್ಯನ ಬದುಕಿಗೂ ಅಭಿವೃದ್ಧಿಗೂ ಬೇಕಾದ ಅನಿವಾರ್ಯವಾದ ಅರಣ್ಯ ಮೂಲದ ಸಾಮಗ್ರಿಗಳಿಗೆ ಬದಲಿ ಮೂಲಗಳನ್ನು ಅಳವಡಿಸುವ ಕೆಲಸವನ್ನು ಸಾಮೂಹಿಕ ನೆಲೆಯಲ್ಲಿ ಮಾಡಬೇಕು. ಉರುವಲು ಕಟ್ಟಿಗೆಯ ಬದಲು ಜೀವಾನಿಲ ಘಟಕಗಳ ಪ್ರಯೋಜನ ಪಡೆಯಬಹುದು. ಸೌರ ಶಾಖವನ್ನು ಬಳಸಬಹುದು. ಮನೆ ಕಟ್ಟಲು ಬದಲಿ ಸಾಮಗ್ರಿಗಳನ್ನು ಉಪಯೋಗಿಸಬಹುದು. ಕಾಡಿನ ನಾಶವನ್ನು ಅನಿವಾರ್ಯವಾದ ಅಭಿವೃದ್ಧಿ ಯೋಜನೆಗಳಿಗಷ್ಟೇ ಸೀಮಿತಗೊಳಿಸಿ ಅನಿವಾರ್ಯವಲ್ಲದ್ದಕ್ಕೆ ಬೇರೆ ವ್ಯವಸ್ಥೆ ಮಾಡಿಕೊಳ್ಳಬೇಕು. ಅಭಿವೃದ್ಧಿಯನ್ನೂ ನಿಸರ್ಗದೊಂದಿಗೆ ಸಮತೋಲನ ಮಾಡಬೇಕು. ಇರುವ ಕಾಡನ್ನೆಲ್ಲ ಉಳಿಸಿಕೊಳ್ಳಬೇಕು. ಇಲ್ಲದಿರುವಲ್ಲಿ ಬೆಳೆಸಬೇಕು. ಗಂಗಾ–ಸಿಂಧೂ–ಯಮುನಾ ಬಯಲು, ಹಿಮಾಲಯದ ತಪ್ಪಲು, ದಕ್ಷಿಣ ಪೀಠ ಭೂಮಿ–ಇಲ್ಲೆಲ್ಲ ಇರುವ ಬೋಳು ಭೂಮಿಗೆ ಹಸಿರುಡುಗೆ ತೊಡಿಸಬೇಕು. ದೃಢನಿರ್ಧಾರದಿಂದ ಕೆಲಸಮಾಡಿದರೆ, ಜನಕ್ಕೆ ಸೂಕ್ತ ತಿಳುವಳಿಕೆ ಕೊಟ್ಟರೆ ಸರಕಾರಕ್ಕೆ ಈ ಕೆಲಸ ಸಾಧ್ಯ.

ಮುಂದಿನ ಪೀಳಿಗೆಗಳು ಬೆಂಗಾಡಿನಲ್ಲಿ ಬಾಯ್ಬಿಡದಂತಾಗಲು ಇಷ್ಟು ಕೆಲಸವನ್ನು ನಾವು ಮಾಡಬೇಕು. ಒಳ್ಳೆಯ ಪರಿಸರದ ಬಳುವಳಿಯನ್ನು ಅವರಿಗಾಗಿ ನಾವು ಕೊಡಬೇಕು.

ಮುಂಗಾರು

ಶನಿವಾರ, ಜೂನ್ 7, 1986

ಬನ್ಸೀಲಾಲರಿಂದ ಸಾಧ್ಯವೆ?

ಹರ್ಯಾಣದಲ್ಲಿ ಹಠಾತ್ ರಾಜಕೀಯ ಬದಲಾವಣೆಯಾಗಿದೆ. ಹಠಾತ್ ಬದಲಾವಣೆ ಹರ್ಯಾಣದ ರಾಜಕೀಯದ ಜಾಯಮಾನವೇ ಆಗಿದೆ. ಈಗ ಪದತ್ಯಾಗ ಮಾಡಿರುವ ಭಜನ್‌ಲಾಲ್ ರಾತ್ರಿ ಬೆಳಗಾಗುವುದರೊಳಗೆ ಇಡಿಯ ಜನತಾ ಶಾಸಕಾಂಗ ಪಕ್ಷವನ್ನೇ ಕಾಂಗ್ರೆಸ್ ಶಾಸಕಾಂಗ ಪಕ್ಷವಾಗಿ ಪರಿವರ್ತಿಸಿದ ಕೀರ್ತಿಗೆ ಪಾತ್ರರಾದವರು. ಅವರ ಪೂರ್ವಾಧಿಕಾರಿಗಳಾಗಿದ್ದ ದೇವೀಲಾಲರೂ ಅಷ್ಟೇ ಜಬರ್ದಸ್ತಿನ ರಾಜಕಾರಣಿಯೆಂದು ಖ್ಯಾತರಾದವರು. ಸಂಪುಟ ರಚನೆಗೆ ಸಂಬಂಧಪಟ್ಟ ವಿವಾದದಲ್ಲಿ ಶಾಸಕರ ಸಂದೋಹದ ಎದುರಲ್ಲೇ ರಾಜ್ಯಪಾಲರನ್ನು ತರಾಟೆಗೆ ತೆಗೆದುಕೊಂಡವರೆಂಬ ಹೆಸರೂ ದೇವೀಲಾಲರಿಗೆ ಬಂದಿತ್ತು. ಹರ್ಯಾಣವನ್ನು 1968ರಿಂದ 1975ರವರೆಗೆ ಆಳಿದ ಹಾಗೂ ಇದೀಗ ಮತ್ತೆ ಮುಖ್ಯಮಂತ್ರಿಯಾಗಿ ಅಧಿಕಾರ ಪಡೆಯುತ್ತಿರುವ ಬನ್ಸಿಲಾಲರೂ ದಢಾದುಢಿ ರಾಜಕಾರಣಕ್ಕೆ ಖ್ಯಾತರಾದವರು. ತುರ್ತು ಪರಿಸ್ಥಿತಿ ಕಾಲದಲ್ಲಿ ಸಂಜಯಗಾಂಧಿ ಕೂಟದಲ್ಲಿದ್ದ ಅತ್ಯಂತ ಮಹತ್ವದ ವ್ಯಕ್ತಿ ಇವರಾಗಿದ್ದು ಅಂದು ಈ ಕೂಟವನ್ನು "ನಾಲ್ವರ ದುಷ್ಟಕೂಟ" ಎಂದು ನಾಡು ಕರೆದಿತ್ತು.

ಆದರೆ ದೇಶದ ಇತರೆಡೆ ಸಾಮಾನ್ಯ ಜನಕ್ಕೆ ತಿಳಿಯದ ಹಲವಾರು ವಿಚಾರಗಳು ಬನ್ಸೀಲಾಲರ ಆಡಳಿತೆಗೆ ಸಂಬಂಧಿಸಿ ಉಂಟು. ಅವರ ಸರ್ವಾಧಿಕಾರಿ ಪ್ರವೃತ್ತಿಯ ಕತೆಗಳು ಏನೇ ಇರಬಹುದು. ಮನೆನೆಲಸಮದ ಕತೆಗಳಿರಬಹುದು. ಅವರ ಮೇಲೆ ಕೋರ್ಟು ಖಟ್ಲೆಗಳು ನಡೆದಿರಬಹುದು, ಅವರನ್ನು ತನಿಖಾ ಆಯೋಗ ನಿಂದಿಸಿರಬಹುದು. ಆದರೆ ಬನ್ಸೀಲಾಲರೇ ಆಧುನಿಕ ಹರ್ಯಾಣದ ನಿರ್ಮಾತೃವೆಂದರೆ ತಪ್ಪಲ್ಲ. 1968ರ ನವೆಂಬರ್ ಒಂದರಿಂದ 1975ರ ನವೆಂಬರ್ 30ರ ತನಕ ಅವರು ಹರ್ಯಾಣದ ಮುಖ್ಯಮಂತ್ರಿಯಾಗಿದ್ದರು.

ಈ ಅವಧಿಯಲ್ಲಿ ಹರ್ಯಾಣವು ಸಾಧಿಸಿದ ಆರ್ಥಿಕ ಪ್ರಗತಿ ಅದ್ಭುತ. ಅದು ಪಂಜಾಬಿಗೆ ಸರಿಗಟ್ಟುವಂತಹುದು. 1966ರ ನವೆಂಬರ್‌ನಲ್ಲಿ ಹರ್ಯಾಣ ರಾಜ್ಯ ನಿರ್ಮಾಣ ಆದಾಗ ಆ ರಾಜ್ಯದ ಬಹುಪಾಲು ಬಂಜರು ಭೂಮಿಯಾಗಿತ್ತು. ಅಲ್ಲಿ ಹರಿಯುವುದು ಒಂದು ಸಣ್ಣ ನದಿ. ಒತ್ತಿನ ಪಂಜಾಬಿನಂತೆ ಅಥವ ಉತ್ತರ ಪ್ರದೇಶದಂತೆ ನದಿಗಳ ಜಾಲ ಅಲ್ಲಿಲ್ಲ. ಸಮೀಪದ ರಾಜಸ್ಥಾನಕ್ಕೂ ಹರ್ಯಾಣಕ್ಕೂ ಸಾಮ್ಯವಿದೆ. 1966ರ ವೇಳೆಗೆ ಹೆಚ್ಚಿನ ಭೂಮಿಯು ಬೆಂಗಾಡಾಗಿತ್ತು. ಆ ವೇಳೆ ಇದರ ನೀರಾವರಿ ಕೃಷಿಭೂಮಿ 35,000 ಎಕ್ರೆ ಮಾತ್ರ. ಇಂದು ಅದು ಸುಮಾರು 27 ಲಕ್ಷ ಎಕ್ರೆಗೇರಿದೆ. ಹರ್ಯಾಣ ಭೂಮಿಯ ಒಡಲಲ್ಲಿ ಅಡಗಿದ ನೀರಿನ ಸಂಪತ್ತನ್ನು ಕೊಳವೆ ಬಾವಿಗಳ ಮೂಲಕ ತೆಗೆದು ಕೃಷಿ ವಿಸ್ತರಿಸಲಾಗಿದೆ. ಅಲ್ಲಿಂದು ಲಕ್ಷಾಂತರ ಕೊಳವೆ ಬಾವಿಗಳಿವೆ. ಎತ್ತು ನೀರಾವರಿಗಳಿವೆ. 1966ರ ಹರ್ಯಾಣವನ್ನು 1986ರ ಹರ್ಯಾಣದೊಂದಿಗೆ ಹೋಲಿಸಿದರೆ ಬತ್ತದ ಬೆಳೆ ಆರು ಪಟ್ಟು ಏರಿದೆ. ಗೋಧಿ ಹಾಗೂ ಆಲೂಗಡ್ಡೆ ನಾಲ್ಕುಪಟ್ಟು ಹೆಚ್ಚಿದೆ. ಹತ್ತಿ ಎರಡು ಪಾಲು ಹೆಚ್ಚಿದೆ. ಅಂದು ಆಹಾರದಲ್ಲಿ ಕೊರತೆ ಅನುಭವಿಸುತ್ತಿದ್ದ ಆ ರಾಜ್ಯ ಇಂದು ಈ ದೇಶದ ಧಾನ್ಯದ ಕಣಜವೆನಿಸಿದೆ.

ಕೈಗಾರಿಕೆಯ ಕತೆಯೂ ಅಷ್ಟೆ. ಹರ್ಯಾಣ ಇಂದು ಕೈಗಾರಿಕಾ ರಂಗದಲ್ಲಿ ಮುಂಚೂಣಿಯಲ್ಲಿದೆ. ದೆಹಲಿಯ ಒತ್ತಿನಲ್ಲಿರುವ ಫರೀದಾಬಾದ್ ಹಾಗೂ ವಲ್ಲಭಗಢಗಳು ದೇಶದಲ್ಲೇ ಬಲು ದೊಡ್ಡ ಔದ್ಯಮಿಕ ಕೇಂದ್ರಗಳಾಗಿವೆ. 1966ರಲ್ಲಿ 4500ರಷ್ಟಿದ್ದ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಇಂದು 50,000 ಆಗಿ ಬೆಳೆದಿದೆ. ತನಗೆಬೇಕಾದ ಎಲ್ಲ ವಿದ್ಯುತ್ತನ್ನೂ ಉಷ್ಣ ವಿದ್ಯುತ್ ಸ್ಥಾವರಗಳ ಮೂಲಕ ಅದು ಉತ್ಪಾದಿಸುತ್ತಿದೆ. ಈ ಜಾಲವನ್ನು ಇನ್ನೂ ವಿಸ್ತರಿಸುತ್ತಿದೆ. ಹರ್ಯಾಣದ ಎಲ್ಲ ಹಳ್ಳಿಗಳಿಗೂ ಒಂದೇ ವರ್ಷದೊಳಗೆ ವಿದ್ಯುತ್ ಪೂರೈಕೆ ವಿಸ್ತರಿಸಿದ ಹೆಗ್ಗಳಿಕೆ ಬನ್ಸೀಲಾಲರ ಸರಕಾರದ್ದು. ವಿದ್ಯುತ್ ಬಾರದ ಒಂದೇ ಒಂದು ಹರಿಜನ ಕೇರಿ ಆ ರಾಜ್ಯದಲ್ಲಿಲ್ಲ ಎಂದರೆ ಅತಿಶಯೋಕ್ತಿ ಅಲ್ಲ.

ಹರ್ಯಾಣದ ಜನ ಧೀರರು. ಹಳ್ಳಿಯ ಮುಗ್ಧರೇ ಸೇರಿಕೊಂಡು ಒಂದು ಹಿಂದುಳಿದ ರಾಜ್ಯವನ್ನು ಆಧುನಿಕತೆಯೆಡೆಗೆ ಕೊಂಡೊಯ್ದ ಕತೆ ಹರ್ಯಾಣದ ಜಾಟರದ್ದು. ರೈತ ಜನಾಂಗವಾದ ಜಾಟರು ಹರ್ಯಾಣದಲ್ಲಿ ರಾಜಕೀಯವಾಗಿ ಪ್ರಬಲರು. ಮಧ್ಯಪ್ರದೇಶ ಹಾಗೂ ಉತ್ತರ ಪ್ರದೇಶಗಳಲ್ಲಿಯೂ ಜಾಟರು ಸಾಕಷ್ಟು ಸಂಖ್ಯೆಯಲ್ಲಿದ್ದರೂ ಹರ್ಯಾಣದವರು ರಾಜಕೀಯವಾಗಿ ಹೆಚ್ಚು ಪ್ರಭಾವಿಗಳೆನಿಸಿದ್ದಾರೆ. ಶೈಕ್ಷಣಿಕವಾಗಿಯೂ ಅವರು ಮುಂದಿದ್ದಾರೆ. ಇದೇ ಕಾರಣಕ್ಕೆ ಈ ಪ್ರದೇಶ ಪಂಜಾಬಿನ ಭಾಗವಾಗಿದ್ದಾಗ ಪ್ರಾದೇಶಿಕ ಪಕ್ಷಪಾತದ ವಿರುದ್ಧ ದನಿಯೆತ್ತಿ ಪ್ರತ್ಯೇಕ ರಾಜ್ಯಗಳಿಸುವ ಸಾಮರ್ಥ್ಯ ಅವರಿಗೆ ಬಂತು.

ಜಾಟರು ನೇರ ನಡೆಯುವರು, ಆದ್ದರಿಂದಲೇ ಒರಟರು. ನಯ ನಾಜೂಕುತನ ಅರಿತವರಲ್ಲ. ಆದ್ದರಿಂದಲೇ ಹರ್ಯಾಣದ ರಾಜಕೀಯ ಸ್ಥಿತ್ಯಂತರಗಳಿಗೆ ಅಗ್ನಿಪರ್ವತ ಸ್ಫೋಟಿಸಿದಂತಹ ಶಕ್ತಿಯಿರುತ್ತದೆ.

ಇದೀಗ ಹರ್ಯಾಣದಲ್ಲಿ ಆಗಿರುವ ರಾಜಕೀಯ ಬದಲಾವಣೆಗೆ ಪಂಜಾಬಿನ ವಿದ್ಯಮಾನದ ಹಿನ್ನೆಲೆಯಿದೆ, ಪಂಜಾಬಿನ ಜತೆ ಗಡಿವಿವಾದದಲ್ಲಿ ಹರ್ಯಾಣ ಸಿಕ್ಕಿಹಾಕಿಕೊಂಡಿದೆ. ಈ ಗಡಿ ವಿವಾದಕ್ಕೂ ಪಂಜಾಬಿನ ಕ್ಷೋಭೆಗೂ ನಿಕಟವಾದ ನಂಟಿದೆ. ಈ ವಿವಾದದಲ್ಲಿ ಸೂಕ್ತವಾಗಿ ವ್ಯವಹರಿಸಿ ಬಿಕ್ಕಟ್ಟನ್ನು ಬಗೆಹರಿಸಲು ಅನುಕೂಲರಾಗಲಿಲ್ಲ ಎಂಬ ಕಾರಣಕ್ಕಾಗಿ ಭಜನ್‌ಲಾಲರ ಬದಲಾವಣೆಯಾಯಿತು. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೆ ಹೊಸ ಮುಖ್ಯಮಂತ್ರಿ ಬನ್ಸೀಲಾಲರಿಗೆ ಸಾಧ್ಯವಾಗುವುದೇ ಎಂಬುದನ್ನು ಕಾಲವೇ ನಿರ್ಧರಿಸಬೇಕಾಗಿದೆ, ಅವರಿಂದ ಇದು ಸಾಧ್ಯವಾಗಬೇಕು ಎಂದು ಈ ದೇಶದ ಹಿತವನ್ನು ಬಯಸುವ ಎಲ್ಲರೂ ಹಾರೈಸುತ್ತಾರೆ.

ಮುಂಗಾರು
ರವಿವಾರ, ಜೂನ್ 8, 1986

ಸಂಸ್ಕೃತಿಯ ಶಿಖರ
ಕಲಶ

ಕನ್ನಡ ಕಟ್ಟಿದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇನ್ನಿಲ್ಲ. 96ರ ತುಂಬು ಹರೆಯದಲ್ಲಿ ಅವರ ನಿರ್ಗಮನ. ಮಾಸ್ತಿ ಆಯುಸ್ಸಿನಲ್ಲಿ ಮಾತ್ರ ಪೂರ್ಣತೆ ಪಡೆದವರಲ್ಲ. ಬದುಕಿನಲ್ಲಿಯೂ ಅದನ್ನು ಸಾಧಿಸಿದವರು. ಬರಹದಲ್ಲಿಯೂ ಅನನ್ನು ತೋರಿಸಿದವರು.

ಮಾಸ್ತಿ ಪ್ರತಿಭಾವಂತ ವಿದ್ಯಾರ್ಥಿ. ಮದ್ರಾಸು ವಿಶ್ವವಿದ್ಯಾನಿಲಯದ ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದು ಉತ್ತೀರ್ಣರಾದ ಬುದ್ಧಿವಂತ ಅವರು. ಬಿ.ಎ. ವಿದ್ಯಾರ್ಥಿ ಆಗಿರುವಾಗಲೇ ಸಾಹಿತ್ಯ ಲೋಕ ಅವರನ್ನು ಕೈಬೀಸಿ ಕರೆಯಿತು. 1910-11ರ ವೇಳೆಗೇ ಅವರ ಮೊದಲ ಸಣ್ಣಕತೆ ಸಿದ್ಧವಾಗಿತ್ತು. ಅವರಿಗೆ ಹೆಸರು ತಂದಂತಹ, ಒಳ್ಳೆಯ ಸಣ್ಣಕತೆಗೊಂದು ಮಾದರಿಯಾಗಿ ಇಂದಿಗೂ ನಿಲ್ಲುವಂತಹ "ಸುಬ್ಬಣ್ಣ" ಬರೆದದ್ದು 1928ರಲ್ಲಿ.

ಮಾಸ್ತಿ ಅವರ ಬರಹದ ಬದುಕು ಏಳು ದಶಕಗಳುದ್ದಕ್ಕೆ ವ್ಯಾಪಿಸಿದೆ. ಅವರ ಸಾಹಿತ್ಯ ರಚನೆ ಅಷ್ಟೆ ವ್ಯಾಪಕವೂ ಆಗಿದೆ. ಕಾವ್ಯ, ಸಣ್ಣಕತೆ, ಪ್ರಬಂಧ, ಕಾದಂಬರಿ, ನಾಟಕ, ವಿಮರ್ಶೆ-ಯಾವುದನ್ನೂ ಅವರು ಬಿಟ್ಟವರಲ್ಲ. ಈ ಎಲ್ಲ ಪ್ರಕಾರಗಳಲ್ಲಿ ಯಾರಿಗೂ ಬಿಟ್ಟುಕೊಟ್ಟವರೂ ಅಲ್ಲ. ಅವರ ಒಂದೊಂದು ಕೃತಿಯೂ ಒಳ್ಳೆಯ ಕಲಾಕೃತಿ. ಬುದ್ಧಿ-ಭಾವಗಳ ಸಮತೋಲನವುಳ್ಳ ಸೃಷ್ಟಿ ಅವುಗಳು.

ಕೊಡಗಿನ ಕೊನೆಯ ದೊರೆ ಚಿಕವೀರ ರಾಜೇಂದ್ರನ ಕತೆ ಹೇಳುವ ಭಾವ ನಿರ್ಭರವಾದ ಕೃತಿ ಅವರಿಗೆ 1985ರಲ್ಲಿ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟದ್ದು. ಅವರ ಇನ್ನೊಂದು ಕಾದಂಬರಿ, ಕೆಳದಿಯ ದೊರೆಗೂ ಹೃದಯಾಲಿಗೂ ನಡೆಯುವ ಸಂಘರ್ಷವನ್ನು ಒಳತೋಟಿಯಿಂದ ಚಿತ್ರಿಸುವ "ಚೆನ್ನ ಬಸವ ನಾಯಕ"ನೂ ಅಷ್ಟೆ. ಜ್ಞಾನಪೀಠ ಪ್ರಶಸ್ತಿಗಳಿಸಿಕೊಟ್ಟ ಕೃತಿಗೆ ಸರಿಸಮವಾಗಿ ನಿಲ್ಲತಕ್ಕದ್ದು. "ನವರಾತ್ರಿ" ಅವರ ಇನ್ನೊಂದು ಉತ್ಕೃಷ್ಟ ಕಲಾಕೃತಿ. ಅವರ ಎರಡೂ ದೊಡ್ಡ ಕಾದಂಬರಿಗಳು ಜಾತೀಯ ವಿವಾದದ ದೂಳನ್ನು ಎಬ್ಬಿಸಿದ್ದುಂಟು.

ಆದರೆ ಮಾಸ್ತಿ ಎಲ್ಲ ವಿವಾದಗಳಿಂದ ದೂರ. ಅವರು ಪ್ರಾಂಜಲ ಮನಸ್ಸಿನ ದೊಡ್ಡ ಮನುಷ್ಯ. ಗುಂಪುಗಾರಿಕೆ ಅವರಿಂದ ಹರದಾರಿ ದೂರ. ಸಾಹಿತ್ಯ ಲೋಕದಲ್ಲಿ ಮೇಲೇರುವುದಕ್ಕೆ ಹೊಗಳು ಭಟ್ಟಂಗಿಗಳ "ನೀ ನನಗಾದರೆ ನಾ ನಿನಗೆ" ಕೂಟಗಳನ್ನು ಕಟ್ಟಿಕೊಂಡವರಲ್ಲ. ನೇರ ನಡೆ ಮತ್ತು ನೇರ ನುಡಿ ಅವರದ್ದು. ವಿನಯಶೀಲತೆ ಅವರ ದೊಡ್ಡಗುಣ. ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಬಲು ಹಿಂದೆಯೇ ಬಂದಿದ್ದರೂ ಅದಕ್ಕೆ ಅರ್ಹರಾದ ಹಿರಿಯರಿದ್ದಾರೆ ಎಂಬ ಕಾರಣಕ್ಕೆ ಹಲವಾರು ಬಾರಿ ತಿರಸ್ಕರಿಸಿದವರು. ಕನ್ನಡ ಕಟ್ಟಿದ ಕೆಲವೇ ಮೊದಲಿಗರಲ್ಲಿ ಮಾಸ್ತಿ ಪ್ರಮುಖರು. ಈ ಶತಮಾನದ ಆದಿಯಿಂದಲೇ ಅವರು ಅದನ್ನು ಮಾಡಿದವರು. ಕನ್ನಡ ಕಟ್ಟುವ ಕಾರ್ಯ ಅಂದು ಇಂದಿನಂತಲ್ಲ. ಅದು ಲಾಭದಾಯಕವಾಗಿರಲಿಲ್ಲ. ಮಾಸ್ತಿಯಂತಹವರು ಕನ್ನಡದ ಕೆಲಸ ಹಿಡಿದದ್ದು ಸೊತ್ತು ಸಂಪಾದನೆಗಾಗಿ ಅಲ್ಲ. ಆತ್ಮ ಸಂತೋಷಕ್ಕಾಗಿ. ಕನ್ನಡವನ್ನು ಇಟ್ಟಿಗೆಯ ಮೇಲೆ ಇಟ್ಟಿಗೆ ಇಟ್ಟು ಕಟ್ಟಿದ ಕನ್ನಡ ಕೆಲಸಗಾರರಲ್ಲಿ ಮಾಸ್ತಿ ಒಬ್ಬರು. ಕನ್ನಡದ ಕೆಲಸ ಅವರಿಗೆ ಜ್ಞಾನಪೀಠ ಪ್ರಶಸ್ತಿಯನ್ನೋ ಹೆಸರನ್ನೋ ಹಣವನ್ನೋ ತಂದಿದ್ದರೆ ಅದು ಇತ್ತೀಚೆಗೆ. ದಶಕಗಳಷ್ಟು ಕಾಲ ಅವರು ಕನ್ನಡಕ್ಕಾಗಿ ಕೈಯಿಂದ ವೆಚ್ಚಮಾಡಿದವರು. ಎರಡು ದಶಕಗಳ ಕಾಲ "ಜೀವನ" ಪತ್ರಿಕೆಯನ್ನು ನಡೆಸಲು ಸ್ವಂತ ಹಣ ಖರ್ಚು ಮಾಡಿದವರು.

ಸಾತ್ವಿಕ ಬದುಕು ಸುತ್ತಲಿನವರಿಗೆ ಆದರ್ಶವಾಗುತ್ತದೆ. ಸಂಸ್ಕೃತಿ ಪೂರಿತ ಸೌಜನ್ಯದ ನಡವಳಿಕೆ ನಾಡಿಗೆ ನಿದರ್ಶನವಾಗುತ್ತದೆ. ಮಾಸ್ತಿಯವರದ್ದು ಅಂತಹ ಬದುಕು. ಸಾಹಿತ್ಯವೂ ಹಾಗೇನೇ. ಸಂಸ್ಕೃತಿಯನ್ನೂ ಒಳ್ಳೆಯ ಜೀವನದ ಆದರ್ಶಗಳನ್ನೂ ಸಮಾಜದಲ್ಲಿ ಮೈಗೂಡಿಸುತ್ತದೆ. ಮುನ್ನಡೆಗೆ ದಾರಿ ತೋರಿಸುತ್ತದೆ. ಮಾಸ್ತಿಯವರು ಬರೆದದ್ದು ಅಂತಹ ಸಾಹಿತ್ಯ. "ಮಾಸ್ತಿ ನಮ್ಮ ಸಂಸ್ಕೃತಿಯ ಶಿಖರ ಪ್ರಾಯ ವ್ಯಕ್ತಿ. ಅವರು ನಮ್ಮ ಮೌಲ್ಯಗಳು ಹಾಗೂ ಪರಂಪರೆಯ ಸತ್ವವನ್ನು ಅರ್ಥಮಾಡಿಕೊಳ್ಳಲು ಜನರಿಗೆ ನೆರವಾದರು"-ಈ ಮಾತು ಹೇಳಿದವರು ಪ್ರಧಾನ ಮಂತ್ರಿ ರಾಜೀವ ಗಾಂಧಿ. ಅದು ಮಾಸ್ತಿಯವರ ಬದುಕು-ಬರಹಗಳಿಗೆ ಒಪ್ಪುವ ಮಾತು.

ಮುಂಗಾರು

ಮಂಗಳವಾರ, ಜೂನ್ 10, 1986

ಹಿಂದುಳಿದವರ ಸಂಘಟನೆ

ಕಷ್ಟದ ಬಗ್ಗೆ ಕೊರಗುವುದನ್ನು ಬಿಡಬೇಕು. ಅದರ ನಿವಾರಣೆಗಾಗಿ ಎಲ್ಲ ವರ್ಗದವರೂ ಒಂದಾಗಿ ಪ್ರಯತ್ನಿಸಬೇಕು. ಇದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಬಿ. ಜನಾರ್ದನ ಪೂಜಾರಿ ಅವರು ಹೇಳಿದ ಮಾತು. ಹಿಂದುಳಿದವರ ಅಭಿವೃದ್ಧಿಗೆ ಹಿಂದುಳಿದ ಎಲ್ಲಾ ಜಾತಿಯವರೂ ಒಟ್ಟಾಗಿ ದುಡಿಯಬೇಕು. ಮನೋಭಾವ ವಿಶಾಲವಾಗಬೇಕು. ಹಾಗಾದರೆ ಮಾತ್ರವೇ ಹಿಂದುಳಿದವರನ್ನು ಮುಂದೆ ತರಲು ಸಾಧ್ಯ ಎಂದು ಅವರೆಂದಿದ್ದಾರೆ. ನಾವು ಮನುಷ್ಯರಾಗಿ ಬದುಕಬೇಕು. ಯಾವುದೇ ಜಾತಿಯವರನ್ನೂ ಯಾರೂ ಶೋಷಣೆ ಮಾಡಬಾರದು ಎಂದಿದ್ದಾರೆ ಪೂಜಾರಿಯವರು.

ಪೂಜಾರಿಯವರ ಈ ಮಾತುಗಳನ್ನು ವಿಚಾರವಂತರು ಮನನಮಾಡಬೇಕಾಗಿದೆ. ಹಿಂದುಳಿದವರ ಹಿತಚಿಂತಕರು ಚರ್ಚಿಸಬೇಕಾಗಿದೆ. ಪೂಜಾರಿಯವರ ಮಾತುಗಳಲ್ಲಿ ಸತ್ಯವಿದೆ. ಈ ಸತ್ಯದ ಅರಿವು ಅವರಿಗೆ ಒಂದು ದಶಕದ ರಾಜಕೀಯ ಜೀವನದಲ್ಲಿ ಆದದ್ದು. ಅದು ಈ ದೇಶದ ಜನಜೀವನದ ನಿಕಟ ಅವಲೋಕನದಿಂದ ಬಂದದ್ದು. ಹಿಂದುಳಿದ ವರ್ಗಗಳ ಅಸಹಾಯಕ ಮಂದಿಯ ಒಡನಾಟದಿಂದ ಉಂಟಾದದ್ದು.

ಬಡವರೂ, ಹಿಂದುಳಿದವರೂ, ಅವಿದ್ಯಾವಂತರೂ ಆಗಿ ಉಳಿದಿರುವ ಈ ದೇಶದ ಮಂದಿಯ ಬದುಕನ್ನು ಹಸನು ಮಾಡುವ ಹೊಸ ಹಾದಿಯನ್ನು ಈ ಸಚಿವರು ಮಾಡುತ್ತಿದ್ದಾರೆ. ಲಕ್ಷಾಂತರ ಮಂದಿ ಅಂತಹ ಸಹಾಯ ಈಗಾಗಲೇ ಪಡೆದುಕೊಂಡಿದ್ದಾರೆ. ಇನ್ನಷ್ಟು ಮಂದಿ ಅದಕ್ಕಾಗಿ ಕಾದು ನಿಂತಿದ್ದಾರೆ. ಹೀಗೆ ಸರಕಾರದ ಕಡೆಯಿಂದ ಮಾಡಬಹುದಾದ ಸಹಾಯವನ್ನು ಮಾಡಲು ಈ ವ್ಯಕ್ತಿ ಪ್ರಯತ್ನಿಸುತ್ತಿದ್ದಾರೆ.

ಸರಕಾರದಿಂದಲೇ ಎಲ್ಲವೂ ಆಗುವುದಿಲ್ಲ ಎಂಬ ಅರಿವು ಅವರಿಗಾಗಿರಬಹುದು. ಸರಕಾರದ ಪ್ರಯತ್ನಗಳಿಗೂ ಮಿತಿಯುಂಟು. ಅಥವಾ ಸರಕಾರವನ್ನು ಕ್ರಿಯೆಗೆ ಹಚ್ಚಲು ಸಾಮಾಜಿಕವೂ-ರಾಜಕೀಯವೂ ಆದ ಚಾಲನೆ ಬೇಕಾಗುತ್ತದೆ.

ಈ ಚಾಲಕ ಶಕ್ತಿಯ ಬಗ್ಗೆಯೇ ಜನಾರ್ದನ ಪೂಜಾರಿ ಮಾತನಾಡುತ್ತಿದ್ದಾರೆ. ಹಿಂದುಳಿದವರನ್ನು ಮುಂದೆ ತರಲು ಎಲ್ಲಾ ಹಿಂದುಳಿದವರೂ ಒಗ್ಗಟ್ಟಿನಿಂದ ಪ್ರಯತ್ನಿಸಬೇಕು. ಈಗ ಹರಿ ಹಂಚಾಗಿರುವ ಪ್ರಯತ್ನ ಒಟ್ಟು ಸೇರಿದರೆ ಬಹಳಷ್ಟನ್ನು ಸಾಧಿಸಬಹುದು. ಹಿಂದುಳಿದ ವರ್ಗಗಳಲ್ಲಿ ಮುಂದೆ ಬರಬೇಕು. ಅಸಮಾನತೆಯನ್ನು ತೊಡೆದುಹಾಕಬೇಕು. ಶೋಷಣೆಯನ್ನು ಎದುರಿಸಬೇಕು, ಅವಮಾನವನ್ನು ಪ್ರತಿಭಟಿಸಬೇಕು ಎಂಬ ತಿಳುವಳಿಕೆಯೇ ಕಡಿಮೆ. ಈ ಅಜ್ಞಾನ ಅವಿದ್ಯೆಯಿಂದ ಉಂಟಾದದ್ದು. ಇತ್ತೀಚಿನ ದಿನಗಳಲ್ಲಿ ಉಂಟಾದ ಅಕ್ಷರ ಕ್ರಾಂತಿಯು ಸಾಮಾಜಿಕ ಪ್ರಜ್ಞೆಗೆ ಎಡೆಮಾಡಿತು. ಅದರ ಪರಿಣಾಮವಾಗಿ ರಾಜಕೀಯ ಜಾಗೃತಿ ಉಂಟಾಯಿತು. ಹೀಗಾಗಿ ಅಲ್ಲೊಂದು-ಇಲ್ಲೊಂದು ಹಿಂದುಳಿದ ಜಾತಿಗಳವರು ಸಂಘಟನೆಗೆ ತೊಡಗಿದರು. ಈ ಸಂಘಟನೆಗಳೇ ಕೇವಲ ಸಾಮಾಜಿಕಧಾರ್ಮಿಕ ಎಲ್ಲೆಯೊಳಗೇ ಮಿತಿಗೊಂಡವು. ಈ ಎಲ್ಲೆಯನ್ನು ಮೀರಿ ರಾಜಕೀಯ-ಶೈಕ್ಷಣಿಕ ಚಟುವಟಿಕೆಗಳಿಗೂ ದಾರಿ ಮಾಡಿದ್ದು ಕಡಿಮೆ.

ಇದರ ಪರಿಣಾಮವಾಗಿಯೇ ಹಿಂದುಳಿದವರ ಈ ಸಂಘಟನಾ ಪ್ರವೃತ್ತಿ, ನಿರೀಕ್ಷೆಯ ಮಟ್ಟಕ್ಕೆ ಬರಲಿಲ್ಲ. ಅಗತ್ಯವುಳ್ಳ ಆಯಾಮವನ್ನು ಪಡೆದುಕೊಳ್ಳಲಿಲ್ಲ. ಆದ್ದರಿಂದಲೇ ಹಿಂದುಳಿದವರು ಒಟ್ಟಾಗಬೇಕಾದ ಅಗತ್ಯವುಂಟು. ಮನೋಭಾವ ವಿಶಾಲವಾಗಬೇಕು. ಪರಸ್ಪರರಿಗೆ ನೆರವಾಗಬೇಕು. ಈ ಏಣಿಯಲ್ಲಿ ಸ್ವಲ್ಪ ಮೇಲಿರುವವರು ಕೆಳಗಿನವರಿಗೆ ಸಹಾಯಹಸ್ತ ಚಾಚಬೇಕು. ಸಂಘಟನೆಯಲ್ಲಿ ನುರಿತವರು ಅದರ ಉಪಾಯಗಳನ್ನು ಇತರರಿಗೆ ಹೇಳಿಕೊಡಬೇಕು. ಧಾರ್ಮಿಕ ಸಂಘಟನೆ ಆಚರಣೆಗಳನ್ನು ಮುಂದು ಮಾಡದೆ ಹಿನ್ನೆಲೆಯಲ್ಲಷ್ಟೆ ಇಟ್ಟು ಸಾಮಾಜಿಕವಾಗಿಯೂ ಆರ್ಥಿಕವಾಗಿಯೂ ಲಾಭದಾಯಕವಾಗುವಂತಹ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕು. ಇದರಿಂದ ಸ್ವಂತ ಸಮುದಾಯದ ಉದ್ಧಾರವಲ್ಲದೆ ತಮ್ಮಂತೆಯೇ ಹತಭಾಗ್ಯರಾದ ಮಂದಿಯ ಏಳಿಗೆಯೂ ಜತೆಗೇ ಆಗುವುದು.

ಇದಕ್ಕಾಗಿ ಹಿಂದುಳಿದವರ ಒಕ್ಕೂಟವೊಂದನ್ನು ರಚಿಸಿಕೊಳ್ಳುವ ಬಗ್ಗೆ ಆಲೋಚಿಸಬೇಕು. ಹಿಂದುಳಿದವರ ಸಂಘಟನಾ ಶಕ್ತಿಯನ್ನು ರಾಜಕೀಯ ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳುವ ವಿಧಾನವೇ ಇದು. ಯಾವ ಸರಕಾರವೂ ಆ ಮೇಲೆ ಹಿಂದುಳಿದವರ ಉದ್ಧಾರವನ್ನು ಕಡೆಗಣಿಸುವುದು ಅಸಾಧ್ಯವಾಗುತ್ತದೆ. ಸೋಗಲಾಡಿತನದ ದಿನಗಳೂ ದೂರಾಗುತ್ತವೆ.

ದೀನರನ್ನು, ದಲಿತರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಬಗ್ಗೆ, ಅದಕ್ಕಾಗಿ ಸರಕಾರ ಮಾಡಬಹುದಾದ ಕೆಲಸಗಳ ಬಗ್ಗೆ ದಿನ-ದಿನವೂ ಪ್ರತಿಪಾದಿಸುತ್ತಿರುವ ಜನಾರ್ದನ ಪೂಜಾರಿಯವರು ಇಂದು ಒಂದು ಜಾತಿಯ ನಾಯಕರಾಗಿ ಉಳಿದಿಲ್ಲ. ಅವರು ಎಲ್ಲ ಹಿಂದುಳಿದವರ, ಎಲ್ಲ ಹತಭಾಗ್ಯರ ಆಶೋತ್ತರಗಳನ್ನು ಪ್ರತಿನಿಧಿಸುತ್ತಿರುವವರು. ಹಿಂದುಳಿದ ಎಲ್ಲ ಜಾತಿಗಳವರ ಸಂಘಟನೆಗೆ ಅವರೀಗ ಚಾಲನೆ ಕೊಡಬೇಕು. ಅದರಿಂದ ಹಿಂದುಳಿದವರಿಗೆ ಒಳ್ಳೆಯದಾದೀತು.

ಮುಂಗಾರು

ಗುರುವಾರ, ಜೂನ್ 12, 1986

ಹೊಸ ಒಲವು

ಕರ್ನಾಟಕದ ಕಾಂಗ್ರೆಸ್ (ಐ) ಶಾಸಕಾಂಗ ಪಕ್ಷ ನಾಯಕ ಎಸ್. ಬಂಗಾರಪ್ಪ ಅವರು ತಮ್ಮ ಹುದ್ದೆಗೆ ರಾಜೀನಾಮೆಕೊಟ್ಟಿದ್ದಾರೆ. ಅವರ ಪಕ್ಷದ ವರಿಷ್ಠ ಮಂಡಳಿಯು ಅದನ್ನು ಅಂಗೀಕರಿಸಿದೆ. ಬಂಗಾರಪ್ಪನವರ ರಾಜೀನಾಮೆಗೆ ಕಾರಣವಾದ ಜಮೀನಿಗೆ ಸಂಬಂಧಪಟ್ಟ ಪ್ರಕರಣದಲ್ಲಿ ಬಂಗಾರಪ್ಪನವರ ಮೇಲ್ಮನವಿಯು ಹೈಕೋರ್ಟಿನಲ್ಲಿ ತೀರ್ಮಾನಗೊಳ್ಳುವ ತನಕ ಪ್ರತಿಪಕ್ಷ ನಾಯಕ ಸ್ಥಾನವನ್ನು ಖಾಲಿ ಇರಿಸುವುದಾಗಿಯೂ ವರಿಷ್ಠ ಮಂಡಳಿ ಪ್ರಕಟಿಸಿದೆ.

ಜಮೀನಿನ ವ್ಯವಹಾರಕ್ಕೆ ಸಂಬಂಧ ಪಟ್ಟಂತೆ ಬಂಗಾರಪ್ಪನವರ ನಡವಳಿಕೆ ತಪ್ಪೇ, ಸರಿಯೆ ಎಂಬ ಜಿಜ್ಞಾಸೆ ಈಗ ಅಪರ್ಯಾಪ್ತ. ಪ್ರಕರಣ ಹೈಕೋರ್ಟಿನ ಮುಂದೆ ಉಂಟು.ಅಲ್ಲಿ ವಿಚಾರಣೆ ನಡೆಯಲಿದೆ.

ತಮಗೆ ಸಂಬಂಧಿಸಿರುವ ಪ್ರಕರಣವೊಂದು ವಿವಾದವನ್ನುಂಟುಮಾಡಿ ಕೋರ್ಟು ಕಟ್ಟೆ ಹತ್ತಿ ಈ ಪ್ರಕರಣದ ಮರು ವಿಚಾರಣೆ ನಡೆಯಬೇಕು ಎಂದು ಹೈಕೋರ್ಟು ಸಂಬಂಧಿತ ಭೂನ್ಯಾಯ ಮಂಡಳಿಗೆ ಆದೇಶಿಸಿದ ಪರಿಣಾಮವಾಗಿ ತನ್ನ ರಾಜಕೀಯ ಹುದ್ದೆಗೆ ರಾಜೀನಾಮೆ ನೀಡಿರುವಂತಹ ಬಂಗಾರಪ್ಪನವರ ನಡವಳಿಕೆ ಅವರ ಪಕ್ಷದ ಸಂಸ್ಕೃತಿಗೆ ವಿರುದ್ಧವಾದದ್ದು. ಹಾಗೆ ನೋಡಿದರೆ ಬಹುತೇಕ ಭಾರತೀಯ ರಾಜಕೀಯ ಅಧಿಕಾರಸ್ಥರ ಪರಂಪರೆಗೂ ವಿರುದ್ಧವಾದದ್ದು.

ಸಾರ್ವಜನಿಕರು ನಿಂದಿಸತೊಡಗಿದಾಗ, ನ್ಯಾಯಾಂಗವು ಪ್ರತಿಕೂಲ ತೀರ್ಪು ಕೊಟ್ಟಾಗ ನ್ಯಾಯಾಂಗ ತನಿಖಾ ಆಯೋಗಗಳು ಆರೋಪ ಸಾಬೀತು ಪಡಿಸುವ ವರದಿಯನ್ನು ಕೊಟ್ಟಾಗ ಈ ಅಭಿಪ್ರಾಯಕ್ಕೆ ತಲೆ ಬಾಗದೆ ಸಬೂಬು ಹೇಳಿ ಅಧಿಕಾರ ಪೀಠಕ್ಕೆ ಅಂಟಿಕೊಳ್ಳುವ ಜಾಯಮಾನ ನಮ್ಮ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳದ್ದಾಗಿದೆ.

ಸಾರ್ವಜನಿಕಾಭಿಪ್ರಾಯದ ತೀವ್ರತೆಯನ್ನು ಕುಗ್ಗಿಸಲು, ನ್ಯಾಯಾಂಗದ ತೀರ್ಮಾನದ ಮೇಲೆ ಮುಸುಕೆಳೆಯಲು ಭಟ್ಟಂಗಿಗಳ ಕೂಟ ಕಟ್ಟಿಕೊಂಡು ಹೊಗಳಿಕೆಯ ಹೊಳೆಯನ್ನೇ ಹರಿಸಿದ ನಿದರ್ಶನಗಳಿವೆ. ಲಾರಿಗಳಲ್ಲೂ ಬಸ್ಸುಗಳಲ್ಲೂ ಜನತಂದು ಮನೆ ಮುಂದೆ ಸೇರಿಸಿ ನಾಯಕನ ಅನಿವಾರ್ಯತೆಯ ಭ್ರಮೆಯನ್ನು ಮುಸುಕುವ ವಿದ್ಯಮಾನ ನಡೆದದ್ದಿದೆ.

ಜನ ಸಮೂಹದ ಕಣ್ಣಿನಿಂದ ಸತ್ಯವನ್ನು ಅಥವ ಕನಿಷ್ಠ ನ್ಯಾಯಾಂಗಕ್ಕೆ ಸತ್ಯವೆನಿಸಿದ್ದನ್ನು ಮುಚ್ಚಿಹಾಕಬಹುದೆಂಬ, ಸುಳ್ಳಾಗಿ ಮಾಡಬಹುದೆಂಬ ದಾರ್ಷ್ಟ್ಯವನ್ನು ಇಂದು ರಾಜೀನಾಮೆ ಕೊಟ್ಟಿರುವ ವಿರೋಧಪಕ್ಷ ನಾಯಕನ ಪಕ್ಷದವರೇ ಮಾಡಿದ್ದಿದೆ. ಬೇರೆ ಪಕ್ಷದವರೂ ಇದಕ್ಕೆ ಹೊರತಲ್ಲ. ಹಲವು ಕಡೆ ಇದು ನಡೆದಿದೆ.

ಅದುವೇ ಭಾರತೀಯ ರಾಜಕಾರಣದ ಪರಂಪರೆ ಎಂಬಷ್ಟರ ಮಟ್ಟಿಗೆ ಅಧಿಕಾರ ಲಾಲಸೆ ಬೆಳೆದಿದೆ. ಈ ನಾಡಿನಲ್ಲಿ ಮೌಲ್ಯಗಳ ಬಗ್ಗೆ ರಾಜಕಾರಣಿಗಳ ತಿರಸ್ಕಾರವು ಬದುಕಿನ ಬಗೆಯೇ ಆಗಿದೆ. ಈ ಸ್ವಾರ್ಥ, ಈ ಸಿನಿಕತನ, ಸಾರ್ವಜನಿಕ ಹಿತದ ಕುರಿತಾದ ಈ ನಿರ್ಲಕ್ಷ್ಯ ರಾಜಕಾರಣದಲ್ಲಿ ಹುಟ್ಟಿತೋ, ಸಾಮಾಜಿಕ ಬದುಕಿನ ಕ್ಷೇತ್ರಗಳಲ್ಲಿ ಹುಟ್ಟಿತೋ-ಇದು ಅಧ್ಯಯನ ಯೋಗ್ಯ ವಿಚಾರ. ಆದರೆ ಭಾರತೀಯ ಬದುಕೇ ಇಂತಹ ಭ್ರಷ್ಟತೆಯ ಜಾಲದಲ್ಲಿ ಸಿಲುಕಿ ಬಿದ್ದಿರುವುದಂತೂ ನಿಜವೆ.

ಇಂದು ಇಂತಹ ವಿದ್ಯಮಾನಗಳಿಗೆ ಅವಕಾಶ ಕೊಡದಿರುವಂತಹ ಕಾಂಗ್ರೆಸ್ (ಐ) ಪಕ್ಷದ ವರಿಷ್ಠರ ನಡವಳಿಕೆಯು ಸ್ವಾಗತಾರ್ಹವಾದ ವಿಷಯ. ನ್ಯಾಯಾಂಗ ಆಯೋಗದ ವರದಿಗಳನ್ನು ತಿಪ್ಪೆಗೆಸೆದು ತಾವು ಮಾಡಿದ್ದೇ ಸರಿ ಎಂದು ಕೂತ ತಮ್ಮ ಪಕ್ಷದವರ ಪರಂಪರೆಯನ್ನು ಅವರು ಬದಲಿಸಹೊರಟಿರುವುದು ಕಾಣಿಸುತ್ತಿದೆ. ಮಹಾರಾಷ್ಟ್ರದ ನಿಲಂಗೇಕರ್ ಪ್ರಕರಣದಲ್ಲಿ ಈ ನಿಲುವಿನ ಸೂಚನೆಗಳು ಕಂಡು ಬಂದವು ಈ ಪ್ರವೃತ್ತಿಯನ್ನು ಪ್ರೋತ್ಸಾಹಿಸಬೇಕಾದ ಅಗತ್ಯವುಂಟು. ಆ ಪಕ್ಷದಲ್ಲಿ ಸೇರಿಕೊಂಡಿರುವ ಅಧಿಕಾರದ ದಲ್ಲಾಳಿಗಳಿಗೂ, ಹಣ ಮಾಡಲು ಹೊರಟಿರುವವರಿಗೂ, ಹಣತೆತ್ತು ಅಧಿಕಾರ ಕೊಳ್ಳಬಯಸಿರುವ ನವ ಶ್ರೀಮಂತರಿಗೂ ಈ ಹೊಸ ಒಲವಿನಿಂದ ಆತಂಕವಾಗಬಹುದಾದರೂ ಪಕ್ಷದಲ್ಲಿಯೂ ಆ ಮೂಲಕ ಈ ಸಮಾಜದಲ್ಲಿಯೂ ಮೌಲ್ಯಗಳನ್ನು ಗೌರವಿಸುವ ಹೊಸ ನೀತಿಯನ್ನೂ ಶೀಲವನ್ನೂ ಬೆಳೆಸುವ ನಿಟ್ಟಿನಿಂದ ಇದು ಸ್ವಾಗತಾರ್ಹ.

ಮುಂಗಾರು, ಜೂನ್ 17, 1986 ಪುಟ ನಾಲ್ಕು

ಮುಂಗಾರು

ನಾರಾಯಣ ಕುಮಾರ್ ಹೊತ್ತ ಭಾರ

ಮುಂಬಯಿ ಕನ್ನಡಿಗರಿಗೆ ಶಿವಸೇನೆಯ ಕಿರುಕುಳ ನಿಲ್ಲದಿದ್ದರೆ ಕರ್ನಾಟಕದಲ್ಲಿ ವಾಸಿಸುತ್ತಿರುವ ಮರಾಠಿಗರಿಗೂ ಪ್ರತಿ ಕಿರುಕುಳ ಕೊಡಬೇಕಾಗುತ್ತದೆ ಎಂದು ಕನ್ನಡ ಚಳವಳಿಕಾರನೂ ಆಗಿರುವ ಶಾಸಕ ಜಿ. ನಾರಾಯಣ ಕುಮಾರ್ ಎಚ್ಚರಿಕೆ ನೀಡಿರುವುದು ವರದಿಯಾಗಿದೆ.

ಮುಂಬಯಿಯಲ್ಲಿರುವ ಕನ್ನಡಿಗರಿಗೆ ಹೀಗೆ ರಕ್ಷಣೆ ಒದಗಿಸುವುದಲ್ಲದೆ ಬೆಳಗಾವಿಯಲ್ಲಿರುವ ಕನ್ನಡಿಗರ ಹಿತರಕ್ಷಣೆಗೆ ಆಸುಪಾಸಿನ ನಾಲ್ಕು ಜಿಲ್ಲೆಗಳ ಶಾಸಕರ ಸಭೆ ಕರೆಯುವುದಾಗಿಯೂ ಅವರು ಹೇಳಿದ್ದಾರೆ. ಈ ಸಭೆಯಲ್ಲಿ ಮರಾಠಿಗರ ದೌರ್ಜನ್ಯದ ಬಗ್ಗೆ ಠರಾವುಗಳಾಗಲಿವೆಯಂತೆ. ಮರಾಠಿಗರ ಅತಿರೇಕವನ್ನು ಸಹಿಸುವುದಕ್ಕೆ ಅಸಾಧ್ಯವಾಗಿದೆಯೆಂದು ಅವರು ಸಾರಿದ್ದಾರೆ.

ಕನ್ನಡದ ಕಲಿಕೆಯ ವಿಚಾರವಾಗಿ ಬೆಳಗಾವಿಯಲ್ಲಿ ಆಂದೋಲನ ನಡೆದದ್ದೇನೋ ನಿಜವೆ. ಇದಕ್ಕೆ ಹೊರಗಿನ ಜನರ ಕುಮ್ಮಕ್ಕು ಇರುವುದೂ ಸತ್ಯ.

ನೂರಾರು ಮಂದಿಯನ್ನು ಮಹಾರಾಷ್ಟ್ರದ ಬೇರೆ ಊರುಗಳಿಂದ ಕರೆತಂದು ಶರದ್ ಪವಾರ್ ಅವರಂತಹ ರಾಜಕಾರಣಿಗಳು ಈ ಆಂದೋಲನವನ್ನು ತಟ್ಟಿ ಎಬ್ಬಿಸಿರಬಹುದು. ಆ ಮೂಲಕ ಸ್ವಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲು ಮಹಾರಾಷ್ಟ್ರ ರಾಜಕಾರಣದಲ್ಲಿ ತಮ್ಮ ತೂಕವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿರಬಹುದು.

ಬೆಳಗಾವಿಯಲ್ಲಿ ಬಹಳಷ್ಟು ಆಗಿ ಹೋಗಿದೆ. ಹಿಂಸೆ ನಡೆದಿದೆ. ಸಾಕಷ್ಟು ಜನ ಈ ಭೂಮಿ-ಭಾಷೆಯೆಂಬ ಭಾವನೆಗಳ ಯಜ್ಞಕುಂಡದಲ್ಲಿ ಬಲಿಪಶುಗಳಾಗಿದ್ದಾರೆ. ಬೆಳಗಾವಿಯಲ್ಲಿ ವಾಸಿಸುವ ನಾಲ್ಕಾರು ಲಕ್ಷ ಮಂದಿಗೆ ಬದುಕು ಅಸಹನೀಯವಾಗಿದೆ. ಅಲ್ಲಿನ ಕನ್ನಡಿಗರ ಮರಾಠಿಗರ ಮನಸ್ಸು ಪರಸ್ಪರ ಮುರಿದು ಹೋಗಿದೆ.

ಈ ಪರಿಸ್ಥಿತಿಯ ಪರಿಣಾಮ ಮುಂಬಯಿಯಲ್ಲಿ ಆಗಿಲ್ಲವೆಂದಲ್ಲ. ಆದರೆ ಅಲ್ಲಿನ ಕನ್ನಡಿಗರೆಲ್ಲರೂ ಭೀತಿಯಿಂದ ಓಡಿ ಬರಬೇಕಾದಂತಹ ಪರಿಸ್ಥಿತಿ ಅಲ್ಲಿ ಉಂಟಾಗಿಲ್ಲ.

ಅದಕ್ಕೆ ಹಿನ್ನೆಲೆಯಿದೆ. ಮುಂಬಯಿಯಲ್ಲಿ ಸುಮಾರು 10 ಲಕ್ಷದಷ್ಟು ಮಂದಿ ಕನ್ನಡಿಗರಿದ್ದಾರೆ. ಅವರೆಲ್ಲ ಸ್ವಂತ ಪರಿಶ್ರಮದಿಂದ ವಾಣಿಜ್ಯೋದ್ಯಮಗಳನ್ನು ಕಟ್ಟಿಕೊಂಡು ಬದುಕನ್ನು ಬೆಳೆಸಿದವರು. ಮುಂಬಯಿ ಮಹಾನಗರದ ಬೆಳವಣಿಗೆಗೂ ಉತ್ಕರ್ಷಕ್ಕೂ ಅವರ ಕೊಡುಗೆ ಗಣನೀಯವಾದದ್ದು. ಈ ದೇಶದ ಅತಿ ದೊಡ್ಡ ವಾಣಿಜ್ಯ ನಗರಿಯಾಗಿ ಬೆಳೆದು ಬಂದ ಮುಂಬಯಿಯ ಕತೆಯಲ್ಲಿ ಕನ್ನಡಿಗರ ಪಾತ್ರ ಮಹತ್ವದ್ದು.

ಮುಂಬಯಿ ಕನ್ನಡಿಗರು ಗುಜರಾತಿಗಳು ಹಾಗೂ ಪಾರ್ಸಿಗಳಂತೆಯೇ ಬುದ್ಧಿಜೀವಿಗಳು, ಸಾಹಸಿಗಳು. ಅದೆಲ್ಲಕ್ಕೂ ಹೆಚ್ಚಾಗಿ ವ್ಯವಹಾರದಲ್ಲಿ ನಿಯತ್ತುಳ್ಳವರು ಎಂದೆಲ್ಲ ಆ ನಗರದಲ್ಲಿ ಹೆಸರುಪಡೆದವರು. ಎಲ್ಲಕ್ಕೂ ಮೇಲಾಗಿ ಆ ನಗರದ ಜನ ಸಮುದಾಯದಲ್ಲಿ ಮಿಳಿತವಾಗಿ ಬದುಕಿದವರು. ಸೌಹಾರ್ದಮಯ ನಡವಳಿಕೆಗೆ ಹೆಸರು ಪಡೆದವರು.

ಕನ್ನಡಿಗರು ಮುಂಬಯಿಗೆ ವಲಸೆ ಹೋಗಿ ನೆಲೆಸಲು ಪ್ರಾರಂಭಿಸಿದ್ದು ಈ ಶತಮಾನದ ಆದಿಯಲ್ಲಿ. ಈಗ ಅಲ್ಲಿ ಸಾಕಷ್ಟು ಮಂದಿ ಕನ್ನಡಿಗರಿದ್ದಾರೆ. ಈ ತನಕ ವೂರವರು ಮರಾಠಿಗರ ಜತೆಯೂ ಇತರ ಸಮುದಾಯಗಳವರೊಡನೆಯೂ ಸ್ನೇಹದಿಂದಲೇ ಬಾಳಿದ್ದಾರೆ. ಕಳೆದ ದಶಕದಲ್ಲಿ ನಡೆದ ದಕ್ಷಿಣದವರ ವಿರುದ್ಧದ ಹಿಂಸಾಚರಣೆಯೊಂದನ್ನು ಬಿಟ್ಟರೆ ಇಷ್ಟು ಸುದೀರ್ಘ ಕಾಲವೂ ಕನ್ನಡಿಗರ ಮೇಲೆ ಅಲ್ಲಿ ಕತ್ತಿ ಕಟ್ಟಿದವರಿಲ್ಲ. ನಡೆದ ಒಂದು ಹಿಂಸಾಚರಣೆಗೆ ತಮಿಳ್ನಾಡಿನಿಂದಲೂ ಕೇರಳದಿಂದಲೂ ಬಂದು ಕೂತು ಯಾವುದಾದರೊಂದು ಉಪಾಯದಿಂದ ಜೀವನೋಪಾಯವನ್ನು ಹುಡುಕಲು ಹೊರಟದ್ದು ಕಾರಣವಲ್ಲದೆ ಕನ್ನಡಿಗರು ಕಾರಣಲ್ಲ.

ನಾರಾಯಣ ಕುಮಾರರಂತಹ ಹೋರಾಟಗಾರರು ಈ ಹಿನ್ನೆಲೆಯನ್ನು ಪರಿಗಣಿಸಬೇಕು. ಅವರಂತಹ ಮಂದಿಗೆ ಹೋರಾಟಕ್ಕೆ ಕೈತುರಿಕೆಯಿರಬಹುದು. ಅದಕ್ಕೆ ಪೂರ್ವಾಪರ ವಿವೇಚನೆಯಿಂದ ಇಳಿಯಬೇಕು. ಶರದ್ ಪವಾರ್‌ರಂತೆಯೇ ನಾರಾಯಣ ಕುಮಾರರಂತಹ ಮಂದಿಗೂ ರಾಜಕೀಯ ತೂಕವನ್ನು ಏರಿಸಿಕೊಳ್ಳುವ ಖಯಾಲಿ ಇಲ್ಲವೆನ್ನುವುದಕ್ಕಾಗದು. ಬೆಳಗಾವಿಯಲ್ಲಿ ಹಿಂಸೆ ಹಿಂದಕ್ಕೊತ್ತಿದೆ. ಅಲ್ಲಿನ ಮಂದಿ ಮತ್ತೆ ದೈನಂದಿನ ಬದುಕಿಗೆ ಅಣಿಯಾಗುತ್ತಿದ್ದಾರೆ. ಈ ವಿದ್ಯಮಾನವನ್ನು ಅಲ್ಲಿಗೆ ಬಿಡುವುದು ಲೇಸು. ನಾರಾಯಣ ಕುಮಾರರಂತಹ ಹೋರಾಟಗಾರರು ಮತ್ತೆ ಕಣಜದ ಗೂಡಿಗೆ ಕಲ್ಲೆಸೆಯುತ್ತಿದ್ದಾರೆ. ಹಾಗೆ ಮಾಡುವುದು ಅವಿವೇಕವಾಗುತ್ತದೆ. ಅವರಿಗೆ ಕನ್ನಡಿಗರ ಮೇಲೆ ಪ್ರೀತಿ ಇದ್ದರೆ, ಕನ್ನಡದ ಮೇಲೆ ಅಭಿಮಾನವಿದ್ದರೆ ಮುಂಬಯಿ ಕನ್ನಡಿಗರನ್ನು ಅವರಷ್ಟಕ್ಕೆ ಬಾಳಲು ಬಿಡಬೇಕು. ಅವರೇನೂ ರಾಜ್ಯ ಬಿಟ್ಟು ದೂರ ಹೋಗಿ ಭಾಷೆಯ ಬಗೆಗಿನ ಅಭಿಮಾನವನ್ನು ಬಿಟ್ಟವರಲ್ಲ. ಭಾಷೆ, ಕಲೆ, ಸಂಸ್ಕೃತಿಯ ಬಗ್ಗೆ ಸಂಬಂಧ ಸಂಪರ್ಕವನ್ನು ಇರಿಸಿಕೊಂಡವರೇ. ಈ ಹೋರಾಟಗಾರರಂತೆಯೇ ಅವರೂ ಕನ್ನಡಕ್ಕಾಗಿ ಕೆಲಸಮಾಡಿದವರು.

ಆದ್ದರಿಂದಲೇ ಅವರನ್ನು ಅವರಷ್ಟಕ್ಕೆ ಬಿಡಿ. ಅವರ ರಕ್ಷಣೆಯ ಭಾರವನ್ನು ಅವರು ಯಾರ ಮೇಲೆಯೂ ಹೊರಿಸಿಲ್ಲ.

ಮುಂಗಾರು

ಬುಧವಾರ, ಜೂನ್ 25, 1986

ನಿಂದಕರನ್ನು ಗುಡಿಸಿ ಹಾಕದಿರಿ

...ವೀಧರರು ಮತ್ತು ಅಧ್ಯಾಪಕರ ನಾಲ್ಕು ಮತ[illegible]ಗಳಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ಭಾ[illegible] ನಡೆದ ಚುನಾವಣೆಯಲ್ಲಿ ಆಳುವ ಜನತಾ ಪಕ್ಷ ಎಲ್ಲ ಸ್ಥಾನಗಳನ್ನೂ ಗೆದ್ದಿದೆ. ಗೆದ್ದ ನಾಲ್ವರಲ್ಲಿ ಇಬ್ಬರು ಜನತಾ ಪಕ್ಷದ ಅಧಿಕೃತ ಅಭ್ಯರ್ಥಿಗಳಾಗಿದ್ದು ಉಳಿದಿಬ್ಬರು ಸ್ವತಂತ್ರ ಅಭ್ಯರ್ಥಿಗಳಿಗೆ ಜನತಾ ಪಕ್ಷ ಬೆಂಬಲ ನೀಡಿದೆ.

ಈ ದೃಷ್ಟಿಯಿಂದ ವಿಧಾನ ಪರಿಷತ್ತಿನ ಚುನಾವಣಾ ಗೆಲುವು ಜನತಾ ಪಕ್ಷದ ಗೆಲುವೆಂದೇ ಗಣಿಸಬೇಕಾಗುತ್ತದೆ. ರಾಜ್ಯದ ಆಳುವ ಪಕ್ಷ ರಾಜಕೀಯವಾಗಿ ಸಮಾಧಾನದ ಉಸಿರೆಳೆಯುವುದಕ್ಕೆ ಬದಲು ಎದೆಯುಬ್ಬಿಸಬಹುದಾದ ಗೆಲುವಿದು. ಪ್ರಜ್ಞಾವಂತ ಪ್ರಜೆಗಳ ರಾಜಕೀಯ ಒಲವಿನ ದಿಕ್ಸೂಚಿ ಇದೆಂದು ಪರಿಗಣಿಸಬಹುದಾಗಿದೆ.

ಕಳೆದ ಆರು ತಿಂಗಳಿಂದ ಆಳುವ ಜನತಾ ಪಕ್ಷದ ವಿರುದ್ಧ ಮಾಡಲಾಗಿರುವ ಭ್ರಷ್ಟಾಚಾರದ ಆರೋಪಗಳು–ಬೆಳಕು ಕಂಡ ಸಾರಾಯಿ ಬಾಟ್ಲಿಂಗ್ ಹಗರಣ-ನ್ಯಾಯಾಂಗ ತನಿಖೆಗೆ ಗುರಿಯಾದ ರೆಕ್ಟಿಫೈಡ್ ಸ್ಪಿರಿಟ್ ಹಗರಣ- ಮತ್ತಿತರ ಆಪಾದನೆಗಳ ಬಹಿರಂಗ ಚರ್ಚೆಯಿಂದ ಎದ್ದಿರುವ ಧೂಳಿನಲ್ಲಿ ಜನತಾ ಪಕ್ಷದ ಪ್ರತಿಷ್ಠೆ ಮಸುಕಾಗಿಲ್ಲವೆಂಬುವನ್ನು ವಿಧಾನ ಪರಿಷತ್ ಚುನಾವಣಾ ಫಲಿತಾಂಶ ತೋರಿಸುತ್ತದೆ.

ಈ ಫಲಿತಾಂಶದಲ್ಲಿ ಎದ್ದು ಕಾಣುವ ಇನ್ನೊಂದು ಅಂಶವೆಂದರೆ ಇನ್ನಷ್ಟು ಕಳೆಗುಂದಿದ ಕಾಂಗ್ರೆಸ್ ಪ್ರತಿಷ್ಠೆ. ಪದವೀಧರರು ಮತ್ತು ಅಧ್ಯಾಪಕರ ಮತಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಗೆದ್ದ ಸಂದರ್ಭಗಳು ತೀರಾ ಕಡಿಮೆ. ವಿದ್ಯಾವಂತ ಜನ ಸಾಮಾನ್ಯವಾಗಿ ಆಳುವ ಪಕ್ಷದ ವಿರೋಧಿಗಳಾಗಿಯೇ ಇರುವುದು ಇದಕ್ಕೆ ಕಾರಣವೆಂಬ ವಿವರಣೆ ಕೊಡಲಾಗುತ್ತಿತ್ತು. ಆದರೆ ಮೊನ್ನೆ ನಡೆದ ಚುನಾವಣೆಯ ಫಲಿತಾಂಶದಲ್ಲಿ ಇಂತಹ ಅಭಿಪ್ರಾಯಕ್ಕೆ ಸಮರ್ಥನೆ ಸಿಕ್ಕಿಲ್ಲ.

ಈ ಫಲಿತಾಂಶದ ಎಳೆಯನ್ನು ಬಿಡಿಸಿ ನೋಡಿದರೆ ವಿದ್ಯಾವಂತ ಜನರು ಜನತಾಪರವಾಗಿ ಇರುವುದಕ್ಕಿಂತ ಹೆಚ್ಚಿಗೆ ಕಾಂಗ್ರೆಸ್ ವಿರೋಧಿಗಳಾಗಿರುವರೆಂಬ ಗೆಳೆಯುವುದರಲ್ಲಿ ಸುಬ್ಬಯ್ಯನವರದು ಮೇಲುಗೈಯಾಗಿತ್ತು. ಟೀಕೆ ಆಪಾದನೆಗಳು ಮನಸ್ಸಿಗೆ ನಾಟದ ದಪ್ಪ ಚರ್ಮದ ಮಾಜಿ ಮುಖ್ಯಮಂತ್ರಿ ಗುಂಡೂರಾವ್ ಕೂಡಾ ಸುಬ್ಬಯ್ಯನವರ ವಾಗ್ಬಾಣಗಳಿಂದ ಅಲುಗಾಡಿದ್ದರು.

ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾದ ಮೇಲೂ ಸುಬ್ಬಯ್ಯ ತಮ್ಮ ಹಳೆಯ ಚಾಡನ್ನೇ ಮುಂದುವರಿಸಿದ್ದರು. ಆದರೆ ಹೆಗಡೆ ವಿರುದ್ಧ ಇವರು ಮಾಡಿದ ಆಪಾದನೆಗಳು ರಾಜಕೀಯವಾಗಿ ತಿರುಗುಬಾಣಗಳಾದವು ಹಿಂದಿನ ಮೂವರು ಮುಖ್ಯಮಂತ್ರಿಗಳ ಹಗರಣಗಳನ್ನು ಹೊರಗೆಳೆದಾಗ "ಸುದ್ದಿ ಮಾಡುವ ಸುಬ್ಬಯ್ಯ"ನಾಗಿ ಮೆರೆದಾಡಿದ ಈ ವ್ಯಕ್ತಿ ಹೆಗಡೆಯವರ ವಿರುದ್ಧ ಆಪಾದನೆಗಳನ್ನು ಮಾಡಿ "ತರಲೆ ಸುಬ್ಬಯ್ಯ" ಎನ್ನುವ ನಿಂದೆಯ ಮಾತಿಗೆ ಗುರಿಯಾದರು.

ಅಧಿಕಾರಕ್ಕೆ ಯಾರು ಬಂದರೂ ತಪ್ಪು ಮಾಡುತ್ತಾರೆ. ಅಂತಹ ತಪ್ಪುಗಳನ್ನು ಎತ್ತಿ ತೋರಿಸುವುದೇ ಶಾಸಕನಾದ ತನ್ನ ಕರ್ತವ್ಯವೆಂದು ಸುಬ್ಬಯ್ಯ ಸಾರಿ ಹೇಳಿರುವರಾದರೂ, "ಸ್ವಚ್ಛ ಸರಕಾರದ" ಭರವಸೆ ಕೊಟ್ಟಿರುವ ಹೆಗಡೆ ವಿರುದ್ಧ ಅವರು ಮಾಡುತ್ತಿರುವ ಆಪಾದನೆಗಳನ್ನು ವಿದ್ಯಾವಂತರೆನ್ನುವ ಜನ ಸಹಿಸಿಲ್ಲವೆನ್ನುವುದು ಈಗ ಸಾಬೀತಾಗಿದೆ. ಚುನಾವಣೆಗೆ ಪೂರ್ವದಲ್ಲಿ ಮುಖ್ಯಮಂತ್ರಿ ಹೆಗಡೆ ತಮ್ಮ ನಿಂದಕ ಸುಬ್ಬಯ್ಯನವರಿಗೆ ಹಾಕಿದ ಸವಾಲಿಗೆ ಈಗ ಪದವೀಧರ ಮತದಾರರು ಉತ್ತರ ಕೊಟ್ಟಿದ್ದಾರೆ. ಸುಬ್ಬಯ್ಯನವರಿಗೆ ಇನ್ನು ಮುಂದೆ ಹಗರಣಗಳನ್ನು ಹೊರಗೆಳೆಯಲು ಒಂದು ವೇದಿಕೆ ಇಲ್ಲದಂತೆ ಮಾಡಿದ್ದಾರೆ. ಒಂದು ದೃಷ್ಟಿಯಲ್ಲಿ ಪದವೀಧರರು ಮತ್ತು ಅಧ್ಯಾಪಕರು ಮೊನ್ನೆಯ ಚುನಾವಣೆಯಲ್ಲಿ ಹೆಗಡೆಯವರ ಧಾಂಧಲೆಗೆ ಎಚ್ಚರಿಕೆಯ ನೋಟಿಸ್ ಕೊಟ್ಟಿದ್ದಾರೆ.

ಒಂದು ಜನತಂತ್ರ ರಾಜಕೀಯ ವ್ಯವಸ್ಥೆಯಲ್ಲಿ ಮತದಾರರ ಇಂತಹ ನಿಲುವು–ಒಲವುಗಳಿಗೆ ಬಹಳ ಬೆಲೆ ಇದೆ. ಅದರಲ್ಲಿಯೂ ಅವಿದ್ಯಾವಂತರೇ ಹೆಚ್ಚಾಗಿರುವ ಭಾರತದಂತಹ ದೇಶದಲ್ಲಿ ವಿದ್ಯಾವಂತ ಜನರ ಒಲವು ರಾಜಕೀಯ ಪರಿವರ್ತನೆಗೆ ಚಾಲನೆ ಕೊಡಬಲ್ಲುದು. ಇಂತಹ ಚಲನೆಯಲ್ಲಿ ರಾಜಕೀಯ ಮೌಲ್ಯಗಳ ಬದಲಾವಣೆಯೂ ಆಗುವುದುಂಟು.

ತೀರ್ಮಾನಕ್ಕೆ ಬರಬೇಕಾಗುತ್ತದೆ. ಇದಕ್ಕೆ ಎ. ಕೆ. ಸುಬ್ಬಯ್ಯನವರಿಗಾದ ಸೋಲು ನಿದರ್ಶನವೆನ್ನಬಹುದು. "ಸುದ್ದಿ ಮಾಡುವ ಸುಬ್ಬಯ್ಯ" ನಾಲ್ಕು ವರ್ಷಗಳ ಹಿಂದೆ ವಿದ್ಯಾವಂತ ಜನರ ಅಭಿಮಾನದ ವ್ಯಕ್ತಿಯಾಗಿದ್ದರು. ಆರು ವರ್ಷಗಳ ಹಿಂದೆ ಸುಬ್ಬಯ್ಯ ಇದೇ ಪದವೀಧರ ಕ್ಷೇತ್ರದಿಂದ ಗೆದ್ದು ಬಂದಿದ್ದರು. ಅಂದಿನ ಅವರ ಗೆಲುವಿಗೆ ಅವರು ಪ್ರತಿನಿಧಿಸಿದ್ದ ಭಾರತೀಯ ಜನತಾ ಪಕ್ಷದ ಪ್ರಭಾವದಷ್ಟೇ ಅವರ ವ್ಯಕ್ತಿತ್ವದ ವರ್ಚಸ್ಸು ಕಾರಣವಾಗಿತ್ತೆನ್ನಬಹುದು. ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಸುಬ್ಬಯ್ಯ ರಾಜಕೀಯ ವೇದಿಕೆಗಳನ್ನು ಬದಲಿಸಿದ ರೀತಿಯಿಂದ ಅವರ ವ್ಯಕ್ತಿತ್ವ [illegible] ಅವರಲ್ಲಿಯೂ [illegible] ಕಾಂಗ್ರೆ [illegible] ವುದು "ಸುದ್ದಿ ಮಾಡುವ ಸುಬ್ಬಯ್ಯ" ಎಂಬ ಹೆಸರಿಗಿದ್ದ [illegible] ಅಳಿಸಿಹಾಕಿತು.

ಹದಿನೆಂಟು ವರ್ಷಗಳ ಕಾಲ ರಾಜ್ಯವಿಧಾನ ಮಂಡಲದ ಮೇಲ್ಮನೆಯ ಸದಸ್ಯರಾಗಿದ್ದ ಸುಬ್ಬಯ್ಯ ಸದನದ ಕಲಾಪಕ್ಕೆ ಹೊಸಕಳೆ ತಂದು ಕೊಟ್ಟಿದ್ದರು. ಅಧಿಕಾರಸ್ಥರ ಅವ್ಯವಹಾರಗಳನ್ನು ಬಯಲಿಗೆಳೆಯುವುದರಲ್ಲಿ ಸುಬ್ಬಯ್ಯನವರಷ್ಟು ನಿಸ್ಸೀಮರಾದವರು ಆ ಸದನದ ಇತ್ತೀಚಿನ ಇತಿಹಾಸದಲ್ಲಿ ಇನ್ನೊಬ್ಬರಿಲ್ಲ. ಅವರ ಹರಿತ ನಾಲಿಗೆಯ ವಾಕ್ ಪ್ರಹಾರಕ್ಕೆ ಒಟ್ಟು ಆರು ಮಂದಿ ಸಚಿವರುಗಳು ಬಲಿಯಾಗಿದ್ದರು. 1969-70ರ ವರ್ಷಗಳಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದಾಗ 'ಎಕ್ಸ್‌ಪೊ-70' ಹಗರಣದಲ್ಲಿ ಅವರ "ಮಡಿವಂತ ರಾಜಕೀಯದ" ಪೋಷಾಕನ್ನು ಕಿತ್ತೆಸೆದವರು. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಗರಣಗಳನ್ನು ಹೊರ

1969ರಲ್ಲಿ ಇಂದಿರಾಗಾಂಧಿಯವರು ಹಿರಿಯ ಕಾಂಗ್ರೆಸ್ ನಾಯಕರ ವಿರುದ್ಧ ಬಂಡೆದ್ದು ಅವರನ್ನೆಲ್ಲ ಇತಿಹಾಸದ ಕಸದ ಬುಟ್ಟಿಗೆ ಎಸೆಯಲು ಹೂಡಿದ್ದ "ನೀತಿಯುಕ್ತವಲ್ಲದ" ತಂತ್ರಗಳನ್ನು ಈ ದೇಶದ ವಿದ್ಯಾವಂತ ಜನ "ರಾಜಕೀಯ ಚಾಣಾಕ್ಷತನ"ವೆಂದು ಕೊಂಡಾಡಿ ಇಂದಿರಾ ಗಾಂಧಿಯವರನ್ನು ಹೊಗಳಿಕೆಯ ಅಟ್ಟಕ್ಕೇರಿಸಿದ್ದರು. ಆರು ವರ್ಷಗಳ ನಂತರ ಅದೇ ವಿದ್ಯಾವಂತ ಜನರಿಗೆ ಇಂದಿರಾ ಗಾಂಧಿ ಜನತಂತ್ರದ ಶತ್ರುವಾಗಿ ಕಂಡಿದ್ದರು. ಇದು ನಮಗೆ ಇತಿಹಾಸದಲ್ಲಿ ಸಿಗುವ ಪಾಠ.

ಆದ್ದರಿಂದ ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ವಿಜಯಿಯಾದ ಹೆಗಡೆಯವರು, ವಿದ್ಯಾವಂತರ ಒಲವಿನ ಬಲದಲ್ಲಿ ಮೈಮರೆತು ನಿಂದಕರನ್ನು ಗುಡಿಸಿ ಹಾಕುವ ಕೆಲಸ ಮಾಡಿದರೆ ಇತಿಹಾಸದ ಪುನರಾವರ್ತನೆಯಾಗುವ ಅಪಾಯವಿದೆ. ಅಧಿಕಾರಸ್ಥರಿಗೆ ಟೀಕಾಕಾರರ ಅಂಕುಶ ಇರಲೇ ಬೇಕು. ಅದಿಲ್ಲವಾದರೆ ಜನತಂತ್ರದ ತಿರುಳು ಕೆಟ್ಟೀತು!

ಈ ಕಾಂಗ್ರೆಸ್ ಜನರಿಗೆ ತನ್ನನ್ನು ನಿಂದಿಸುವ ನೈತಿಕ ಹಕ್ಕಿಲ್ಲವೆಂಬುದನ್ನು ಮುಖ್ಯಮಂತ್ರಿ ಹೆಗಡೆ ಪದೇ-ಪದೇ ಹೇಳಿದ್ದಾರೆ, ಅವರೀ ಮಾತು ಸತ್ಯವೆಂಬುದರ ಅರಿವು ಎಲ್ಲರಿಗೂ ಇದೆ. ಇಂದಿಗೆ ಇದೇ ಹೆಗಡೆಯವರ ರಾಜಕೀಯ ಬಲದ ನೆಲೆಯಾಗಿದೆ. ಇಂತಹ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷ ತನ್ನ ನೈತಿಕ ನೆಲೆ ಎಲ್ಲಿ ಕುಸಿದಿದೆ? ಹೇಗೆ ಕುಸಿದಿದೆ? ಮತ್ತು ಎಷ್ಟು ಕುಸಿದಿದೆಯೆಂಬುದರ ಬಗ್ಗೆ ಆತ್ಮ ಶೋಧನೆ ಮಾಡಿಕೊಳ್ಳಬೇಕಾಗಿದೆ. ಬದಲಾಗುತ್ತಿರುವ ರಾಜಕೀಯ ವಿದ್ಯಮಾನಗಳ ಸೂಕ್ಷ್ಮ ಸಂದೇಶಗಳನ್ನು ಗ್ರಹಿಸುವ ಬುದ್ಧಿಯನ್ನು ಬೆಳೆಸಿಕೊಳ್ಳಬೇಕಾಗಿದೆ.

It is always assumed that only very high budget productions with 20-30 cameramen can get into these categories.

A film done in our Indian forest conditions competing with something filmed in areas like African savannas - just being there in any of these open categories - was always unthinkable. But it was always my dream to be there...

I was not very keen on spreading the word about the nomination. as I need to explain all these minor details to make people understand why I was so happy and what it really means to me. No need to really win, just being there is very very good.

Read the full list of finalist films at

ಮುಂಗಾರು
ಮಂಗಳವಾರ, ಜುಲೈ 1, 1986

ಸುಗಮವಾಗಿ ಕಾಣದ ಹಾದಿ

ಕಳೆದ ಆರೇಳು ತಿಂಗಳುಗಳಿಂದ ರಾಜಕೀಯ ವಲಯಗಳಲ್ಲಿ ಹಲವಾರು ನಿರೀಕ್ಷೆಗಳ ಬುಗ್ಗೆಯನ್ನೆಬ್ಬಿಸಿದ ಸಂಪುಟ ಪುನರ್ರಚನೆಯ ಮೊದಲ ಹೆಜ್ಜೆಯನ್ನೀಗ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಇಟ್ಟಿದ್ದಾರೆ. ಅವರಿಟ್ಟ ಹೆಜ್ಜೆ ಬಹುಮಂದಿಗೆ ಅಚ್ಚರಿಯನ್ನುಂಟುಮಾಡಿದೆ, ಕೆಲವರನ್ನು ಚಕಿತಗೊಳಿಸಿದೆ.

ಸಂಪುಟ ಪುನರ್ರಚನೆಗೆ ಪೂರ್ವಸಿದ್ಧತೆಯಾಗಿ ತಮ್ಮೆಲ್ಲ ಸಚಿವ ಸಹೋದ್ಯೋಗಿಗಳಿಂದ ರಾಜೀನಾಮೆ ಪಡೆದ ಹೆಗಡೆಯವರು ಮೂವರು ಸಂಪುಟ ದರ್ಜೆಯ ಸಚಿವರು ಮತ್ತು ಹದಿನಾಲ್ಕು ಮಂದಿ ರಾಜ್ಯ ಸಚಿವರ ಕೈಬಿಟ್ಟಿದ್ದಾರೆ. ಒಮ್ಮೆಗೇ ಇಷ್ಟು ಮಂದಿ ಸಚಿವರ ಕೈಬಿಟ್ಟು ಕೇವಲ ಮೂರು ಮಂದಿ ಹೊಸಬರನ್ನು ತೆಗೆದುಕೊಂಡಿರುವುದರಲ್ಲಿ ಅಚ್ಚರಿಯ ಅಂಶಗಳಿವೆ.

ಸಂಪುಟ ಪುನರ್ರಚನೆಗೆ ಹಿನ್ನೆಲೆಯಾದ ರಾಜಕೀಯ ವಿದ್ಯಮಾನಗಳು ಹಾಗೂ ಪ್ರಾದೇಶಿಕ ಪ್ರಾತಿನಿಧ್ಯದ ಬೇಡಿಕೆಗಳನ್ನು ಗಮನಿಸಿದರೆ ಹೆಗಡೆಯವರೀಗ ಇಟ್ಟಿರುವ ಹೆಜ್ಜೆಯಿಂದ ಹಲವಾರು ನಿರೀಕ್ಷೆಗಳು ಹುಸಿಯಾಗಿವೆ. ಸಂಪುಟದಲ್ಲಿ ಇದುವರೆಗೆ ಪ್ರಾತಿನಿಧ್ಯ ಇರದಿದ್ದ ರಾಜ್ಯದ ಅತ್ಯಂತ ಪ್ರಭಾವಿ ಜಿಲ್ಲೆಗಳಾದ ಗುಲ್ಬರ್ಗ ಹಾಗೂ ದಕ್ಷಿಣ ಕನ್ನಡ ಈಗಲೂ ಪ್ರಾತಿನಿಧ್ಯಕ್ಕೆ ಎರವಾಗಿವೆ. ಆಳುವ ಪಕ್ಷದ 93 ಮಂದಿ ಶಾಸಕರು ಸಂಪುಟದಿಂದ ತೆಗೆದುಹಾಕಬೇಕೆಂದು ಒತ್ತಾಯಿಸಿರುವ ಸಂಪುಟ ದರ್ಜೆಯ ಸಚಿವರುಗಳಾದ ಜೆ. ಎಸ್. ದೇಶಮುಖ್ ಮತ್ತು ಎ.ಎಲ್. ಪಾಟೀಲರನ್ನು ಉಳಿಸಿಕೊಂಡಿರುವುದು ಅಚ್ಚರಿಯ ಸಂಗತಿ. ಹೆಗಡೆಯವರಾಡುತ್ತಿರುವ ದಕ್ಷ ಆಡಳಿತದ ಮಾತುಗಳಿಗೆ ಸಂಪುಟದಲ್ಲಿ ಇವರಿಬ್ಬರ ಇರುವಿಕೆ ಯಾವ ಸಮರ್ಥನೆಯನ್ನೂ ಕೊಡಲಾರದು.

"ಸುದ್ದಿಯ ಗದ್ದಲದಲ್ಲೇ ಹೆಗಲು ಹಾರಿಸಿಕೊಂಡು ಯಾರಿಗೂ ಬೇಡವಾದ" ಶಿಕ್ಷಣ ಸಚಿವ ಎಂ. ರಘುಪತಿಯವರ ಕೈಬಿಟ್ಟುದರಲ್ಲಿ ಮಾತ್ರ ಎಲ್ಲರ ನಿರೀಕ್ಷೆ ನಿಜವಾಗಿದೆ. ಮಂತ್ರಿ ಪದವಿಗೇ ಭಾರದ ವ್ಯಕ್ತಿಗಳಾದ ಎ. ಎಲ್. ಪಾಟೀಲ್ ಮತ್ತು ಜೆ. ಎಸ್. ದೇಶಮುಖ್ ಅವರನ್ನು ಅಲ್ಲೇ ಕೂರಿಸಿ, ಪ್ರಾಮಾಣಿಕತೆ ಮತ್ತು ಕಾರ್ಯನಿಷ್ಠೆಗೆ ಹೆಸರಾದ ಡಾ॥ ಎಚ್. ಎಲ್. ತಿಮ್ಮೇಗೌಡ ಹಾಗೂ 'ಸಕ್ರಿಯ ಸಚಿವ' ಸಿ. ಬೈರೇಗೌಡರನ್ನು ಕೈಬಿಟ್ಟಿರುವ ಹೆಗಡೆ ಕ್ರಮದಲ್ಲಿ ಮಾತ್ರ ಜಿಲ್ಲೆ ರಾಜಕೀಯ ಗಣನೆಯ ಅಂಶವೇ ಹೆಚ್ಚೆನ್ನಬಹುದು.

ರಾಜಕೀಯವಾಗಿ ಎಲ್ಲರನ್ನೂ ಚಕಿತಗೊಳಿಸಿದ ವಿಚಾರವೆಂದರೆ 15 ಮಂದಿ ರಾಜ್ಯ ಸಚಿವರುಗಳ ಪೈಕಿ ಒಬ್ಬರನ್ನು ಮಾತ್ರ ಉಳಿಸಿಕೊಂಡು ಉಳಿದವರ ಕೈಬಿಟ್ಟಿರುವುದು. ಇದೊಂದು ಅಸಾಮಾನ್ಯವಾದ ಹೆಜ್ಜೆ. ಕೈಬಿಟ್ಟಿರುವ ರಾಜ್ಯ ಸಚಿವರಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲಾ ನಿರೀಕ್ಷೆಗೆ ಮೀರಿದ ಕಾರ್ಯದಕ್ಷತೆಯನ್ನು ತೋರಿಸಿದವರು. ತಮ್ಮ ಸ್ಥಾನಕ್ಕೆ ಮಿಗಿಲಾದ ರಾಜಕೀಯ ಪ್ರತಿಷ್ಠೆಯನ್ನು ಬೆಳೆಸಿಕೊಂಡವರು. ಹೆಗಡೆಯವರ [illegible]ನ್ನು ತಲೆಯ ಮೇಲೆ ಹೊತ್ತು ತಿರುಗಿದವರು. ಮುಖ್ಯಮಂತ್ರಿಗೆ ಅಪ್ಪ[illegible] [illegible] ಮರೆತರು.

ರಾಜಕೀಯವಾಗಿ ಅಪ್ರ[illegible]ವರ[illegible] ಎತ್ತಿ

ಕಟ್ಟಲು ಇರುವ ಒಂದು ಅವಕಾಶವಾದ ಸಂಪುಟ ಪುನರ್ರಚನೆಯಲ್ಲಿ ಹೆಗಡೆಯವರು "ಅಪ್ಪರ ಕೂಟ" ಎನ್ನಿಸಿಕೊಂಡಿದ್ದ ರಾಜ್ಯ ಸಚಿವರುಗಳ ಕೈ ಬಿಟ್ಟದ್ದಾಕೆ? ಎಂಬುದು ಬಿಡಿಸಲಾಗದ ಒಗಟಾಗಿ ಕಾಣುತ್ತಿದೆ. ಕೈ ಬಿಟ್ಟ ರಾಜ್ಯ ಸಚಿವರುಗಳ ಪೈಕಿ ಏಳೆಂಟು ಮಂದಿ 1983 ರಿಂದಲೇ ಹೆಗಡೆ ಸಂಪುಟದಲ್ಲಿದ್ದವರು. ದಕ್ಷತೆಯಿಂದ ಕಾರ್ಯ ನಿರ್ವಹಿಸಿದವರು. ಹೆಗಡೆಯವರ ಕೈಬಲಪಡಿಸುವ ಕಾಯಕದಲ್ಲಿ ಆಳುವ ಪಕ್ಷದೊಳಗೆ ಕೆಲವರ ಕೆಂಗಣ್ಣಿಗೀಡಾದವರು. ಸಂಪುಟ ಪುನರ್ರಚನೆಯ ಸಂದರ್ಭದಲ್ಲಿ ಬಡ್ತಿಯನ್ನು ಬಯಸಿದವರು.

ಯಾವುದೇ ಸಂಪುಟದ ಪುನರ್ರಚನೆಯಲ್ಲಾದರೂ ಇಳಿಸುವ ಅಥವಾ ಏರಿಸುವ ನಿರ್ಧಾರಕ್ಕೆ ರಾಜಕೀಯ ಗಣನೆಯ ಒತ್ತು ಸಿಗಬೇಕಾಗುತ್ತದೆ. ಆದರೆ ಹೆಗಡೆಯವರೀಗ ಇಟ್ಟಿರುವ ಹೆಜ್ಜೆಯಲ್ಲಿ ಅದು ಕಾಣುತ್ತಿಲ್ಲ. ಅಂದ ಮಾತ್ರಕ್ಕೆ ಹೆಗಡೆಯವರು ತಮ್ಮ ಆಪ್ತರಾದ ಈ ರಾಜ್ಯ ಸಚಿವರುಗಳನ್ನೆಲ್ಲಾ ಪೂರ್ಣವಾಗಿ ಕೈ ಬಿಟ್ಟರೆನ್ನುವ ತೀರ್ಮಾನಕ್ಕೆ ಬರಲಾಗದು. ಮುಂದೆ ಕಂತುಗಳಲ್ಲಿ ಇವರನ್ನು ಸೇರಿಸಿಕೊಳ್ಳಬಹುದು. ಇವರನ್ನೆಲ್ಲ ಮರಳಿ ರಾಜ್ಯ ಸಚಿವರಾಗಿ ಸೇರಿಸಿಕೊಳ್ಳುವರೇ ? ಅಥವಾ ಅವರು ಬಯಸಿದ ಬಡ್ತಿ ಕೊಡುವರೇ?–ಎಂಬುದು ಪ್ರಶ್ನೆ.

ಡಾ॥ ಜೀವರಾಜ ಆಳ್ವ, ಎಂ. ಪಿ. ಪ್ರಕಾಶ್, ಪಿ. ಜಿ. ಆರ್. ಸಿಂಧ್ಯಾ, ಎಚ್. ಜಿ. ಗೋವಿಂದೇಗೌಡ, ವೈ. ಕೆ. ರಾಮಯ್ಯ, ಬಿ. ಎ. ಜೀವಿಜಯ, ಸಿದ್ದರಾಮಯ್ಯ, ಆರ್. ವಿ. ದೇಶಪಾಂಡೆ ಮೊದಲಾದ ರಾಜ್ಯ ಸಚಿವರುಗಳು ಜನತಾ ರಾಜಕೀಯ ನೆಲೆಯಲ್ಲಿ ಬಡ್ತಿಯನ್ನು ಬಯಸಬಲ್ಲವರು. ಇವರೆಲ್ಲ ಜನತಾ ರಾಜಕೀಯದ ಹಿನ್ನೆಲೆ ಸಾಕಷ್ಟು ಇರುವವರು, ಆದ್ದರಿಂದ ಇವರಲ್ಲಿ ಹೆಚ್ಚಿನವರು ಮರಳಿ ರಾಜ್ಯ ಸಚಿವರಾಗಿ ಬರಲಾರರೆಂದೇ ಊಹಿಸಬಹುದು.

ಜನತಾ ರಾಜಕೀಯಕ್ಕೆ ತೀರಾ ಹೊಸಬರೂ 1983ರವರೆಗೆ "ಕಾಂಗ್ರೆಸ್ ನಿಷ್ಠರೂ" ಆಗಿದ್ದ ಯುವ ಶಾಸಕ ಕೆ. ಎಂ. ಕೃಷ್ಣ ರೆಡ್ಡಿಯವರನ್ನು ಹೆಗಡೆಯವರೀಗ ಒಮ್ಮೆಲೇ ಸಂಪುಟ ದರ್ಜೆಯ ಸಚಿವ ಸ್ಥಾನಕ್ಕೇರಿಸಿರುವುದರಿಂದ ಈಗ ಮಾಜಿಗಳಾಗಿರುವ ರಾಜ್ಯ ಸಚಿವರುಗಳು ಹೋದ ಹಾದಿಯಲ್ಲೇ ಹಿಂದೆ ಬರುವುದು ಬಹಳ ಕಷ್ಟವಾಗಬಹುದು.

ಇತ್ತೀಚಿನವರೆಗೆ "ಕಾಂಗ್ರೆಸ್ ನಿಷ್ಠೆಯನ್ನು ಹೊತ್ತು ತಿರುಗಿದ" ನಾಗಮಂಗಲದ ಶಾಸಕ ಎಚ್.ಟಿ. ಕೃಷ್ಣಪ್ಪನವರನ್ನು ಸಂಪುಟಕ್ಕೆ ಸೇರಿಸಿಕೊಂಡಿರುವುದರಿಂದ ಹೆಗಡೆಯವರಿಗೆ ರಾಜಕೀಯವಾಗಿ ಲಾಭಕ್ಕಿಂತ ನಷ್ಟವೇ ಹೆಚ್ಚಾಗಬಹುದು.

ಆರು ವರ್ಷಗಳ ಹಿಂದೆ ರಾಜಕೀಯವಾಗಿ ನೆಲೆ ಕಳಕೊಂಡ ಜನತಾ ಪಕ್ಷದ ಮುದ್ದೆಯಾದ ಧ್ವಜವನ್ನು ಎತ್ತಿ ಹಿಡಿದು ಅದರ ಉಳಿವು–ಬೆಳವಣಿಗೆಗೆ ಶ್ರಮಿಸಿದ ಅನೇಕ ಮಂದಿ ಜನತಾ ಶಾಸಕರಿಗೆ ಈ ಇಬ್ಬರು ಸಚಿವರುಗಳ ಸೇರ್ಪಡೆಯಿಂದ ಹೊಟ್ಟೆ ಉರಿಯುವುದರಲ್ಲಿ ಸಂದೇಹವಿಲ್ಲ. ನಿಷ್ಠಾವಂತ ಜನತಾ ಶಾಸಕರ ಇಂತಹ ಹೊಟ್ಟೆ ಉರಿ ಹೆಗಡೆಯವರ ಹಾದಿಯನ್ನು ಸುಗಮಗೊಳಿಸಲಾರದು.

ಮುಂಗಾರು

ಗುರುವಾರ, ಜುಲೈ 10, 1986

ಸನ್ನಿವೇಶ ಸೃಷ್ಟಿಮಾಡಿ

ಗಡಿ ರಾಜ್ಯ ಪಂಜಾಬಿನಲ್ಲಿ ಎದ್ದಿರುವ ಕ್ಷೋಭೆಗೆ ಹೊಸ ಆಯಾಮಗಳು ಹುಟ್ಟಿಕೊಳ್ಳುತ್ತಿವೆ. ಪ್ರತ್ಯೇಕ ರಾಜಕೀಯ ಅಸ್ತಿತ್ವವೇ ಅಂತಿಮ ಗುರಿಯಾಗಿರುವ ಸಿಕ್ಖರ ಹೋರಾಟವು ಹೊಸ ಹೊಸ ರೂಪಗಳನ್ನು ಪಡೆದುಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಗಡಿ ರಾಜ್ಯಗಳಾದ ಪಂಜಾಬು ಹಾಗೂ ಜಮ್ಮು ಮತ್ತು ಕಾಶ್ಮೀರಗಳು ಈ ದೇಶದ ಭದ್ರತೆಗೇ ಅಪಾಯಕಾರಿ ಭೂಮಿಕೆಗಳಾಗುವ ಸಾಧ್ಯತೆ ನಿಚ್ಚಳವಾಗಿದೆ.

ಇದಕ್ಕೆ ಈ ದೇಶದ ಬಗ್ಗೆ ಪರಂಪರೆಯಿಂದಲೇ ವೈರ ಸಾಧಿಸುತ್ತ ಬಂದ ಪಾಕಿಸ್ತಾನ ಗಡಿಯಲ್ಲಿರುವುದೇ ಕಾರಣವಾಗಿದೆ. ಆ ದೇಶದಲ್ಲಿ ರಾಜಕೀಯ ಕ್ಷೋಭೆಯಿದೆ. ಅಲ್ಲಿ ಪ್ರಜೆಗಳಿಗೆ ತಮ್ಮನ್ನಾಳಿಕೊಳ್ಳುವ ಹಕ್ಕು ಸಿಕ್ಕಿಲ್ಲ. ಅವರ ಆಶೋತ್ತರಗಳನ್ನು ಪೂರೈಸುವವರಿಲ್ಲ. ಅವರ ಅಭಿಪ್ರಾಯಗಳನ್ನು ಕೇಳುವವರಿಲ್ಲ. ಭಾರತದ ಬಗ್ಗೆ ಪಾಕಿಸ್ತಾನದ ಜನ ಸಮೂಹದ ಹಾಗೂ ಅವರನ್ನು ಪ್ರತಿನಿಧಿಸಬೇಕಾದ ಸರಕಾರದ ನಿಲುವು ಹೀಗಿರಬೇಕು ಎಂದು ನೀತಿ-ನಿಯಮಗಳನ್ನು ನೀಡಲು ಜನರಿಗೆ ಹಕ್ಕಿಲ್ಲವಾಗಿದೆ. ಮಿಲಿಟರಿ ನಾಯಕತ್ವದ್ದೇ ಅಲ್ಲಿ ಕಾರುಭಾರು.

ಇದರ ಪರಿಣಾಮ ಸ್ಪಷ್ಟ. ಆಂತರಿಕವಾಗಿ ಪ್ರಭುತ್ವಕ್ಕೆ ಅಪಾಯ ಬಂದಾಗಲೆಲ್ಲ ಪಾಕಿಸ್ತಾನದ ನಾಯಕರು ಭಾರತದ ಮೇಲೆ ಉರಿದು ಬೀಳುವ ಜಾಯಮಾನ ನಡೆದು ಬಂದಿದೆ. ಈ ಮೂಲಕ ದೇಶದ ಜನಸಮುದಾಯದ ಗಮನವನ್ನು ಆಂತರಿಕ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸುವ ಪ್ರಯತ್ನ ಅವರದ್ದಾಗಿದೆ. ಸದ್ಯಕ್ಕಂತೂ ಪಾಕಿಸ್ತಾನದ ಜಿಯಾ ಸರಕಾರಕ್ಕೆ ಗಾದಿಯು ಕುದಿವ ಎಣ್ಣೆಯ ಕಡಾಯಿಯಾಗಿದೆ. ಪಾಕಿಸ್ತಾನ ಪ್ರಜಾ ಪಕ್ಷದ ನಾಯಕಿಯಾಗಿ ಮೂಡಿ ಬಂದಿರುವ ಬೆನಜೀರ್ ಭುಟ್ಟೋ ಜಿಯಾಗೆ ಬದುಕೇ ಅಸಹನೀಯವಾಗಿ ಮಾಡುವ ಸಂಭಾವ್ಯತೆಯಿದೆ. ಬೆನಜೀರ್‌ಗೆ ಪಾಕಿಸ್ತಾನದ ಜನ ಅದ್ಭುತವೆನ್ನಬಹುದಾದ ಸ್ವಾಗತ, ಬೆಂಬಲ ನೀಡುತ್ತಿದ್ದಾರೆ. ಆಕೆ ಜನ ಸಮುದಾಯದ ಆಶೋತ್ತರಗಳ ಪ್ರತೀಕವಾಗಿದ್ದಾರೆ. ನಾಡಿನ ಅಭಿವೃದ್ಧಿಗೆ, ಪ್ರಜೆಗಳ ಕ್ಷೇಮ ಸಮಾಧಾನಗಳಿಗೆ ಪೂರಕವಾಗುವ, ಸಾಂಪತ್ತಿಕ ಅಸಮಾನತೆಯನ್ನೂ ಶೋಷಣೆಯನ್ನೂ ತಗ್ಗಿಸುವ ರಾಜಕೀಯ ಕಾರ್ಯಕ್ರಮದ ಸೈದ್ಧಾಂತಿಕ ಒಲವು ಆ ಪಕ್ಷದ್ದಾಗಿದೆ. ಆದ್ದರಿಂದಲೇ ಬೆನಜೀರ್ ಜನಮನವನ್ನು ಆಕರ್ಷಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಜನರ ಮನಸ್ಸನ್ನು ಮತ್ತೊಂದೆಡೆಗೆ ತಿರುಗಿಸಲು ಜಿಯಾ ಪ್ರಭುತ್ವಕ್ಕೆ ಭಾರತದ ಪಂಜಾಬಿನ ಕ್ಷೋಭೆ ಅನುಕೂಲಕ್ಕೊದಗಿದೆ. ಇದರ ಪ್ರಯೋಜನವನ್ನು ಪಾಕಿಸ್ತಾನ ಪಡೆದುಕೊಳ್ಳುತ್ತಿರುವ ಸೂಚನೆಗಳು ಸ್ಪಷ್ಟವಾಗಿವೆ. ಸಿಕ್ಖ್ ಭಯೋತ್ಪಾದಕರಿಗೆ ಪಾಕಿಸ್ತಾನದ ಎರಡು ಕಡೆ ಗೆರಿಲ್ಲಾ ಯುದ್ಧ ತಂತ್ರವನ್ನು ಕಲಿಸಿಕೊಡಲಾಗುತ್ತಿದೆ. ಪಂಜಾಬಿನಲ್ಲಿ ಪ್ರತಿದಿನವೂ ನಡೆಯುತ್ತಿರುವ ಮುಗ್ಧ ನಾಗ [illegible] ಗಳಿಗೆ? ಕಾರಣವೆಂಬುದರಲ್ಲಿ [illegible]

ಕ್ಷೋಭೆಯ ಬೆಂಕಿಗೆ ಗಾಳಿ ಹಾಕಿ ಉರಿಸುವುದರಿಂದ ಆ ದೇಶದ ಭದ್ರತೆಗೆ ಉಂಟಾಗುವ ಅಪಾಯದ ಲಾಭವನ್ನು ಪಡೆದುಕೊಳ್ಳುವ ಕಾರ್ಯವನ್ನು ಪಾಕಿಸ್ತಾನ ಬಲು ಹಿಂದಿನಿಂದಲೇ ನಡೆಸುತ್ತ ಬಂದಿದೆ. ಪಂಜಾಬಿನ ಕ್ಷೋಭೆ ಹುಟ್ಟಿದಂದಿನಿಂದಲೇ ಅದಕ್ಕೆ ಪಾಕಿಸ್ತಾನದ ಕುಮ್ಮಕ್ಕು ಕೂಡ ಪ್ರಾರಂಭವಾಗಿದೆ.

ಇದೀಗ ಭಾರತ ಸರಕಾರ ಈ ಅಪಾಯದ ಅರಿವು ಪಡೆದಿದೆ. ಗಡಿಯಲ್ಲಿ ಕಾವಲು ಬಿಗಿಗೊಳಿಸಲಾಗಿದೆ. ಪಂಜಾಬು ಹಾಗೂ ಜಮ್ಮು-ಕಾಶ್ಮೀರದ ಗಡಿಯನ್ನು ವಸ್ತುಶ: ಬಂದ್ ಮಾಡಲಾಗಿದೆ. ದೇಶದ ಭದ್ರತೆಯನ್ನು ಕಾಯುವ ಕರ್ತವ್ಯವನ್ನು ಪಾಲಿಸುವ ಕಾರ್ಯದಲ್ಲಿ ಸರಕಾರಕ್ಕೆ ಎಚ್ಚರ ಇದೆ ಎಂಬುದನ್ನಿದು ಸೂಚಿಸುತ್ತದೆ.

ಸರಕಾರ ತನ್ನ ಕೆಲಸ ಮಾಡುತ್ತದೆ ಎಂದು ಪ್ರಜೆಗಳು ಸುಮ್ಮನೆ ಕುಳಿತರಾಗದು. ಸರಕಾರ ದೇಶ ರಕ್ಷಣೆ ಮಾಡುವುದೆಂದು ಪ್ರಜೆಗಳು ನಿದ್ದೆ ಹೊಡೆದರೆ ಅವಾಂತರವಾದೀತು. ಬರೇ ಗಡಿಯೊಳಗಿನ ಭೂಮಿಯೇ ದೇಶವಲ್ಲ. ಬರೇ ಸೈನ್ಯವೂ ದೇಶವನ್ನು ಕಾಯಲಾರದು. ಪ್ರಜೆಗಳ ಒಮ್ಮನಸ್ಸೇ ದೇಶ. ಅಂತಹ ಐಕ್ಯವೇ ದೇಶವನ್ನು ಕಾಯುತ್ತದೆ. ದೇಶದ ಹಿತ ಅಹಿತ ಯಾವುವು ಎಂಬ ಪ್ರಜ್ಞೆಯೇ ದೇಶವನ್ನಾಳಿಸುತ್ತದೆ. ಜನರ ವಿಚಾರವಂತಿಕೆಯೆ ದೇಶ ರಕ್ಷಣೆಗೂ ಬೆಳವಣಿಗೆಗೂ ಕಾರಣವಾಗುತ್ತದೆ. ಪ್ರಜೆಗಳ ಪಾಲಿಗೆ ಅಂತಹ ವಿಚಾರವಂತಿಕೆಯ ಎಚ್ಚರವೂ ಈಗ ಅಗತ್ಯವುಂಟು. ಪಂಜಾಬಿನ ಕ್ಷೋಭೆ ಈ ದೇಶವನ್ನು ಹರಿಹಂಚಾಗಿಸಬಹುದು. ಈ ದೇಶದ ಐಕ್ಯವನ್ನೂ ಸಮಗ್ರತೆಯನ್ನೂ ನುಂಗಿ ನೀರು ಕುಡಿಯಬಹುದು. ಅದಕ್ಕಾಗಿ ಕಾಯುವ ಬಾಹ್ಯ ಶಕ್ತಿಗಳಿವೆ. ಭಯೋತ್ಪಾದಕ ಗೆರಿಲ್ಲಾ ದಂಡಿನ ಬೆನ್ನಿಗೆ ಅಂತಹ ಶಕ್ತಿಗಳ ದಂಡು ನುಗ್ಗಿ ಬಂದರೆ ಪಂಜಾಬು ಅಲ್ಲೋಲ ಕಲ್ಲೋಲವಾದೀತು. ಮನಸ್ಸು ಮುರಿದು ಕೂತಿರುವ ಸಿಕ್ಖ ಸಮುದಾಯ ಹೊರಗಿಂದ ಬರುವ ಇಂತಹ ಸಹಾಯವನ್ನು ಬಾಚಿ ತಬ್ಬಿಕೊಳ್ಳಲಾರದು ಎಂಬುದಕ್ಕೆ ಭರವಸೆಯೇನೂ ಇಲ್ಲ.

ಅಂತಹ ಸಂಭಾವ್ಯತೆಯನ್ನು ದೂರ ಮಾಡಬೇಕಾದ ಅಗತ್ಯವುಂಟು. ಸರಕಾರದಂತೆ ಜನರದ್ದೂ ಕೂಡ ಕರ್ತವ್ಯ ಇದಾಗಿದೆ. ಸೇನೆಯನ್ನು ಗಡಿಯಲ್ಲಿ ಸ್ಥಾಪಿಸಿ ಕೂತರೆ ಕೆಲಸ ಆಗದು. ಪಂಜಾಬಿನ ಕ್ಷೋಭೆಗೆ ರಾಜಕೀಯ ಪರಿಹಾರ ಕೂಡ ಆಗಬೇಕು. ಇಂದು ನಮ್ಮ ರಾಜಕೀಯ ಪಕ್ಷ-ಸಂಘಟನೆಗಳೆಲ್ಲವೂ ಸಿಕ್ಖರ ಪ್ರತ್ಯೇಕತಾವಾದಿ ಆಸೆ-ಆಕಾಂಕ್ಷೆ ಹೋರಾಟಗಳನ್ನು ಖಂಡಿಸುವ ಮಾತಾಡುತ್ತಿವೆಯೇ ಹೊರತು ಇದಕ್ಕೊಂದು ಪರಿಹಾರದ ದಾರಿ ಯಾವುದೆಂಬ ಬಗ್ಗೆ ವಾಸ್ತವಿಕ ನೆಲೆಯ ಚರ್ಚೆ-ಸಮಾಲೋಚನೆಯಲ್ಲಿ ತೊಡಗಿದ್ದಿಲ್ಲ. ರಚನಾತ್ಮಕವಾದ ಭೂಮಿಕೆಯೊಂದನ್ನು ತಯಾರಿಸುವ ಗೋಜಿಗೆ ಹೋದದ್ದಿಲ್ಲ. ಇಂದು ಆಗಬೇಕಾದ್ದು ಅದು. ಪಂಜಾಬಿನ ಕ್ಷೋಭೆಗೆ ಪರಿಹಾರ ಉಂಟು. ಅದನ್ನು ಸಾಧಿಸುವ ದಾ[illegible] ಸರಕಾರ ಮುಂದಡಿಯಿಡುವಂತೆ ಜನ ಸಮು[illegible] ಸಮೂಹ ಚಿಂತನೆಯ ಮೂಲಕ ಭೂ[illegible] ಪಡಿಸಬೇಕು; ಅನುಕೂಲ ಸನ್ನಿವೇಶವ[illegible] ಮಾಡಬೇಕು.

ಮುಂಗಾರು
ಭಾನುವಾರ, ಜುಲೈ 13, 1986

ಉಂಡಾಡಿ ಸಂಸ್ಕೃತಿ ಬೆಳೆಸಬೇಡಿ

ರಾಜ್ಯ ಸರಕಾರವು ಸಿನೆಮಕ್ಕೆ ನೀಡಲಾಗುವ ಸಹಾಯಧನದ ಮೊತ್ತವನ್ನು ಹೆಚ್ಚಿಸಿದೆ. ಕಪ್ಪು-ಬಿಳುಪು ಚಲಚಿತ್ರಗಳಿಗೆ ಇನ್ನುಮುಂದೆ ಒಂದೂವರೆ ಲಕ್ಷ ರೂಪಾಯಿಗಳನ್ನೂ, ಬಣ್ಣದ ಚಿತ್ರಗಳಿಗೆ ಎರಡೂವರೆ ಲಕ್ಷ ರೂಪಾಯಿಗಳನ್ನೂ ನೀಡಲಾಗುವುದೆಂದು ಪ್ರಕಟಿಸಲಾಗಿದೆ. ಇದಲ್ಲದೆ ಕಲಾತ್ಮಕ ಚಿತ್ರ ಎಂಬೊಂದು ವಿಶೇಷ ವಿಭಾಗ ಮಾಡಿ ಅಂತಹವುಗಳಿಗೆ ಮೂರು ಲಕ್ಷ ರೂಪಾಯಿ ಕೊಡುವ ನಿರ್ಧಾರವನ್ನೂ ಮಾಡಲಾಗಿದೆ.

ಭಾರತೀಯ ಸಿನೆಮ, ಅದು ಯಾವ ಭಾಷೆಯದ್ದೇ ಇರಲಿ, ಇಂದು ಈ ಸಮಾಜಕ್ಕೆ ಕಳಪೆ ಮನರಂಜನೆ ಒದಗಿಸುವ ಮಾಧ್ಯಮವಾಗಿದೆಯೇ ಹೊರತು ಸಂಸ್ಕೃತಿ ಸಂಪನ್ನತೆಯನ್ನು ಬೆಳೆಸುವ ಕಾರ್ಯವನ್ನು ಖಂಡಿತಾ ಮಾಡುವುದಿಲ್ಲ. ಸಮಾಜದ ಪ್ರಗತಿಗೆ ಯಾವ ದೃಷ್ಟಿಯಿಂದಲೂ ಈ ಕ್ಷೇತ್ರವು ಪೂರಕವಾಗಿಲ್ಲ. ಕಳ್ಳಹಣದ ಮೂಟೆಯುಳ್ಳವರಿಗೆ ಅದನ್ನು ಚೆಲ್ಲಿ ಇನ್ನಷ್ಟು ಹಣದ ಮೂಟೆಕಟ್ಟುವ ಸುಲಭದ ದಂಧೆಯಾಗಿ ಈ ಕ್ಷೇತ್ರ ಮಾರ್ಪಟ್ಟಿದೆ. ಕೋಟಿಗಟ್ಟಲೆ ರೂಪಾಯಿಗಳ ಹೂಡಿಕೆ ಹಾಗೂ ಕೊಯ್ಲು ನಡೆಯುವ ಇಲ್ಲಿ ಅಂತಹ ತಾಕತ್ತುಳ್ಳವರೂ ಶೋಕಿ ಜನಗಳೂ ಮುಗಿಬಿದ್ದು ಠೇರಾಯಿಸಿದ್ದಾರೆ. ಪರಿಣಾಮ ನಿರೀಕ್ಷೆಯಂತೆಯೇ ಆಗಿದೆ. ಹಣಮಾಡುವುದಕ್ಕೆ ಯಾವ ವಿಧಾನವಾದರೂ ಸರಿ-ಅದನ್ನು ಮಾಡಬೇಕು ಎಂಬ ಧೋರಣೆಯೇ ಸಿದ್ಧಾಂತವಾಗಿದೆ. ಬುದ್ಧಿಯ ತಿಜೋರಿ ಖಾಲಿಯಾದ ವಿದ್ಯಮಾನವು ಈ ಹಣದ ದಾಹದೊಂದಿಗೆ ಮೇಳವಿಸಿ ಚಲಚಿತ್ರರಂಗವು ಅರ್ಥಹೀನವಾದ ಹಾಡು-ಕುಣಿತಗಳ ಸರ್ಕಸ್ಸಾಗಿದೆ. ಮೂರನೇ ದರ್ಜೆ ಕಲೆಯ ಚಿತ್ರಣದ ವೇದಿಕೆಯಾಗಿದೆ. ಈ ಕಲೆಗೂ ಸಾಮಾಜಿಕ ವಸ್ತುಸ್ಥಿತಿಗೂ ಸಂಬಂಧವೇ ತಪ್ಪಿಹೋಗಿ ಒಂದು ಭ್ರಮಾಲೋಕವೆನಿಸಿದೆ.

ಇಂಥ ಒಂದು ಕನಸಿನ ಲೋಕವು ನಮ್ಮ ಯುವ ಸಮುದಾಯವನ್ನು ಅಡ್ಡದಾರಿಗೊಯ್ಯುತ್ತಿರುವುದರಲ್ಲಿ ಯಾವ ಸಂಶಯವೂ ಇಲ್ಲ. ಸಾಮಾಜಿಕ ಆರ್ಥಿಕ ಪುರೋಭಿವೃದ್ಧಿಯ ಕಾರ್ಯಕರ್ತರಾಗಿ ವಿಧಾಯಕ ಚಟುವಟಿಕೆಗಳಲ್ಲಿ ನಿರತವಾಗಬೇಕಾದ ಯುವಜನಾಂಗ ಇಂತಹ ಕಳಪೆ ಕಲೆಯ ಕೂಪಕ್ಕೆ ಬಿದ್ದು ಹಾಳಾಗಿ ಹೋಗುತ್ತಿದೆ. ಹಿಂಸೆ, ಕಾಮ, ಶೋಕಿ ಬದುಕಿನ ಖಯಾಲಿ ಹಚ್ಚಿಕೊಂಡು ಒದ್ದಾಡುವಂತಾಗಿದೆ. ಸಾಮಾಜಿಕ ಸ್ಥಿತಿಗತಿಗೂ ಬದುಕಿನ ವಾಸ್ತವಿಕತೆಗೂ ಮನಸ್ಸನ್ನು ತೆರೆದು ವ್ಯಕ್ತಿತ್ವವನ್ನು ರೂಪಿಸಬೇಕಾದ ಯುವಕ ಯುವತಿಯರನ್ನು ಹೀಗೆ ದೂರಕ್ಕೆ ಸೆಳೆದು ಕನಸಿನಲೋಕದ ಕಳ್ಳು ಕುಡಿಸುವ ಮಹಾಪರಾಧವನ್ನು ಇಂದಿನ ಸಿನೆಮಾ ಜಗತ್ತು ಮಾಡುತ್ತಿದೆ.

ಅಂಥ ಒಂದು ನಿರರ್ಥಕ ಕ್ಷೇತ್ರಕ್ಕೆ, ಅನುತ್ಪಾದಕ ಖಯಾಲಿಗಳನ್ನು ಬೆಳೆಸುವ ಶೋಕಿ ರಂಗಕ್ಕೆ, ಕಪ್ಪು ಹಣ ಪ್ರವರ್ತಿಸುವ ಕ್ಷೇತ್ರಕ್ಕೆ ಸಹಾಯಧನದ ನೀರೆರೆದು ಸರಕಾರ ಪೋಷಿಸುವಂತಹದ್ದು ದೊಡ್ಡ ಅಪರಾಧ. ಸಾರ್ವಜನಿಕರು ಸರಕಾರಕ್ಕೆ ತೆರಿಗೆ ಕೊಡುವುದು ಹೀಗೆ ಉಂಡಾಡಿಗಳ ಜೇಬು ತುಂಬಿಸಿ ಪೋಲುಮಾಡಲಿಕ್ಕಲ್ಲ. ತಮಟೆ ಬಾರಿಸುವವರ ಬಳಗ ಬೆಳೆಸುವ ಕೆಲಸ ಮಾಡಲಿಕ್ಕಲ್ಲ.

ಸರಕಾರದ ಬಳಿ ಬೊಕ್ಕಸ ಬಿರಿಯುವಷ್ಟು ಹಣ ಇದ್ದರೆ ಅದನ್ನು ಹಳ್ಳಿಗಳಲ್ಲಿ ಕುಡಿಯುವ ನೀರು ಒದಗಿಸಲು ಕೊಡಿ. ಗ್ರಾಮೀಣ ಆಸ್ಪತ್ರೆಯಲ್ಲಿ ಔಷಧಿಯ ವ್ಯವಸ್ಥೆ ಮಾಡಿ. ಹಳ್ಳಿಗರ ಮಕ್ಕಳಿಗೆ ವಿದ್ಯೆ ಕೊಡಲು ಶಾಲೆ ತೆರೆಯಿರಿ. ನೀರಿಲ್ಲದೆ ಒಣಗಿ ಬಾಯ್ಬಿಡುತ್ತಿರುವ ಬಂಜರು ಭೂಮಿಗೆ ನೀರಿನ ಕಾಲುವೆ ತೋಡಿ. ರೈತಾಪಿಜನ ಬೆಳೆದದ್ದಕ್ಕೆ ಒಳ್ಳೆಯ ಬೆಲೆ ಕೊಡಲು ಉಪಯೋಗ ಮಾಡಿ.

ಸಿನೆಮಾದವರಿಗೇನೂ ಸರಕಾರದ ಕೃಪಾಶ್ರಯ ಬೇಕಾಗಿಲ್ಲ. ಜನಾಶ್ರಯ ಅದಕ್ಕಿದೆ, ಅದು ಬೆಳೆಯುತ್ತಿದೆ. ಅದನ್ನು ನಿಯಂತ್ರಣ ಮಾಡಲಿಕ್ಕಾಗಲೀ ಕಲೆಯನ್ನು ಬೆಳೆಸುವುದಕ್ಕಾಗಲಿ ಸರಕಾರದ ಸಹಾಯಧನ ಬೇಕಾಗಿಲ್ಲ. ಕಲೆಯ ಮಟ್ಟವನ್ನು ನಿಯಂತ್ರಿಸಲು ಸೆನ್ಸಾರ್ ಮಂಡಳಿ ಉಂಟು. ಜನಸಾಮಾನ್ಯರು ಬೆವರಿಳಿಸಿ ದುಡಿದು ಸರಕಾರಕ್ಕೆ ತೆತ್ತ ತೆರಿಗೆಯ ಹಣದಿಂದ ಹೀಗೆ ಉಂಡಾಡಿ ಸಂಸ್ಕೃತಿಯನ್ನು ಬೆಳೆಸುವುದು ಬೇಡ. ಈ ಕಳಪೆ ಕಲೆಯ ಕ್ಷೇತ್ರಕ್ಕೆ ಹೀಗೆ ಲಕ್ಷಾಂತರ ರೂಪಾಯಿ ಸುರಿಯುವುದು ದೊಡ್ಡ ಸಾಮಾಜಿಕ ಅಪರಾಧ.

ಮುಂಗಾರು

ಮಂಗಳವಾರ, ಜುಲೈ 15, 1986

ವಿವೇಕ ಇರಲಿ

ಹಿಂಸಾಚರಣೆಯೆಂಬುದು ಅಹ್ಮದಾಬಾದಿನಲ್ಲಿ ವಾರ್ಷಿಕ ಜಾತ್ರೆಯೇ ಆಗಿದೆ. ಈಗೀಗಂತೂ ಅಲ್ಲಿ ಗಲಭೆಯೆಂಬುದು ವರ್ಷಕ್ಕೆ ಎರಡೋ ಮೂರೋ ಬಾರಿ ನಡೆಯತೊಡಗಿದೆ. ಕಳೆದ ಜನವರಿ ತಿಂಗಳಲ್ಲಿ ಅಲ್ಲಿ ದೊಡ್ಡ ಹಿಂಸಾಕಾಂಡ ನಡೆದಿತ್ತು. ಗಾಳಿಪಟ ಹಾರಿಸುವ ವಿಚಾರವಾಗಿ ಎರಡು ಕೋಮುಗಳೊಳಗೆ ಘರ್ಷಣೆ ನಡೆದು ಪೊಲೀಸರು ಗೋಲೀಬಾರು ಮಾಡಿ ಆರು ಮಂದಿ ಸಾವನ್ನಪ್ಪಿದ್ದರು. ಕಳೆದ ವರ್ಷ ಇದೇ ಕಾಲಕ್ಕೆ ರಥೋತ್ಸವದ ವೇಳೆ ಅಲ್ಲಿ ಕೋಮು ಗಲಭೆ ನಡೆದಿತ್ತು. ಮೀಸಲಾತಿ ವಿಚಾರವಾಗಿ ನಡೆದ ಆಂದೋಲನ ಕೋಮು ಬಣ್ಣವನ್ನು ಪಡೆದುಕೊಂಡು ಅನೇಕ ಜನರ ಜೀವ ಬಲಿಯಾದದ್ದೂ ಅಪಾರ ಸೊತ್ತು ನಷ್ಟವಾದದ್ದೂ ಎಲ್ಲರಿಗೂ ನೆನಪಿರುವ ವಿಚಾರ.

ಈ ಬಾರಿ ದೊಡ್ಡ ಕೋಲಾಹಲವೇ ಆಗಿದೆ. ಗಲಭೆ ಶುರುವಾಗಿ ಒಂದು ವಾರವಾಗುತ್ತ ಬಂತು; ಇನ್ನೂ ನಿಯಂತ್ರಣಕ್ಕೆ ಬಂದಿಲ್ಲ. ಗುಂಪು ಘರ್ಷಣೆ ಎಲ್ಲೆಂದರಲ್ಲಿ ನಡೆಯುತ್ತಿದೆ. ಅಂಗಡಿ-ಮನೆಗಳಿಗೆ ಕಿಚ್ಚಿಡಲಾಗುತ್ತಿದೆ; ಜನರನ್ನು ಸಜೀವ ಸುಡಲಾಗುತ್ತಿದೆ. ಇರಿದು ಕೊಲ್ಲಲಾಗುತ್ತಿದೆ. ಹಳೆ ಅಹ್ಮದಾಬಾದಿನ ಕೋಟೆಯೊಳಗಣ ನಗರದ ಸಪೂರವಾದ ಗಲ್ಲಿಗಳಲ್ಲಿ ಮನೆ ಮನೆಯೂ ಆಯುಧ ಭಂಡಾರವಾಗಿದೆ. ಕತ್ತಿ, ಕಠಾರಿ, ಪೆಟ್ರೋಲಿನ ಕ್ಯಾನುಗಳ ಸಂಗ್ರಹ ನಡೆದಿದೆ. ಕಲ್ಲು-ಲಾಠಿಗಳ ಪ್ರಯೋಗದ ಭೂಮಿಕೆಯಾಗಿದೆ.

ಇಷ್ಟು ಸಿದ್ಧತೆ ಅಲ್ಲಿ ನಡೆಯುವುದಕ್ಕೆ ಆ ನಗರದ ಕೋಮು ವಿದ್ವೇಷದ ಚರಿತ್ರೆಯೇ ಕಾರಣ. ಜಾತ್ರೆಗಳು ನಡೆದರೆ ಅಲ್ಲಿ ಕೋಮು ಹಿಂಸೆ ಸ್ಫೋಟಗೊಳ್ಳುತ್ತದೆ. ಇದೆಲ್ಲ ತಿಳಿದಿದ್ದೂ ಸರಕಾರದ ಮುಖಂಡರು ಅಂತಹ ಕೋಮು ಗಲಭೆ ಸ್ಫೋಟಗೊಳ್ಳದಂತೆ ನೋಡಿಕೊಳ್ಳುವ ರಾಜಕೀಯ ಮುತುವರ್ಜಿ ವಹಿಸಲಿಲ್ಲ. ಪೊಲೀಸ್ ಇಲಾಖೆಯೂ ಮುನ್ನೆಚ್ಚರಿಕೆಯಿಂದ ವ್ಯವಹರಿಸಲಿಲ್ಲ. ಸಾಕಷ್ಟು ಪೊಲೀಸ್ ಸಿಬ್ಬಂದಿಗಳನ್ನೂ, ಕೇಂದ್ರ ಮೀಸಲು ಪೊಲೀಸರನ್ನೂ ಮೊದಲೇ ವ್ಯವಸ್ಥೆ ಮಾಡಿಕೊಳ್ಳಬಹುದಿತ್ತು.

ಅಹ್ಮದಾಬಾದಿನ ರಥೋತ್ಸವವೆಂದರೆ ಜನಜಾತ್ರೆ. ನಗರದ ಹಲವು ರಸ್ತೆಗಳನ್ನೂ ಗಲ್ಲಿಗಳನ್ನೂ ಸುತ್ತಿ ಬರಲು ಅದು 14 ಗಂಟೆಗಳ ಕಾಲ ತೆಗೆದುಕೊಳ್ಳುತ್ತದೆ. ಹೀಗೆ ಅದು 15 ಕಿಲೋ ಮೀಟರಿಗಿಂತಲೂ ಹೆಚ್ಚಿನ ಮಾರ್ಗವನ್ನು ಕ್ರಮಿಸುತ್ತದೆ. ಈ ದಾರಿಯುದ್ದಕ್ಕೂ ಎಲ್ಲಾದರೊಂದು ಕಡೆ ಹಿಂಸೆಯ ಕಿಡಿ ಹಾರಿದರೂ ಸಾಕು. ಅದು ಇಡಿಯ ಅಹ್ಮದಾಬಾದನ್ನು ಸುಡುತ್ತದೆ. ಈ ಬಾರಿ ಆದದ್ದೂ ಹಾಗೆಯೆ. ಇತ್ತೀಚೆಗಂತೂ ಈ ರಥೋತ್ಸವಕ್ಕೆ ಸೇರುವ ಜನರ ಸಂಖ್ಯೆ ಹೆಚ್ಚುತ್ತಿವೆ. ಈ ಬಾರಿ ಲಕ್ಷಕ್ಕೂ ಮಿಕ್ಕಿ ಜನ ಸೇರಿದ್ದರು. ರಥ ಎಳೆಯುವ ಹಿಂಬಾಲಿಸುವ ಜನರ ಒಂದು ಗುಂಪು ಮುಸ್ಲಿಮರೇ ಹೆಚ್ಚಿರುವ ಗಲ್ಲಿಯೊಂದರಲ್ಲಿ ಅವರನ್ನು ಅವಹೇಳನ ಮಾಡುವ ಘೋಷಣೆ ಹಾಕಿತು. ಆ ಕಡೆಯಿಂದ ಕಲ್ಲು ತೂರಿ ಬಂದವು. ಹಿಂಸೆ ಸ್ಫೋಟಗೊಂಡಿತು.

ಗುಜರಾತ್ ಕೂಡಾ ಗಡಿ ರಾಜ್ಯ. ಇನ್ನೊಂದು ಗಡಿ ರಾಜ್ಯವಾದ ಪಂಜಾಬಿನಲ್ಲಿ ಕ್ಷೋಭೆ ಉಲ್ಬಣಾವಸ್ಥೆಯಲ್ಲಿದೆ. ಅಲ್ಲಿ ಕೂಡ ಅದು ಕೋಮು ಸ್ವರೂಪವನ್ನು ಪಡೆದುಕೊಳ್ಳುವ ಎಲ್ಲಾ ಸೂಚನೆಗಳಿವೆ. ಹೀಗೆ ನಡೆಯುವ ಗಲಭೆ ಹಾಗೂ ಇನ್ನೊಂದು ರಾಜ್ಯಕ್ಕೆ ಅದರ ವಿಸ್ತರಣೆ ದೇಶದ ಭದ್ರತೆಯ ದೃಷ್ಟಿಯಿಂದ ಹಿತಕರವಲ್ಲ. ಇಂತಹ ಪರಿಸ್ಥಿತಿಯ ಲಾಭ ಪಡೆದುಕೊಳ್ಳಲು ಹಾತೊರೆಯುತ್ತಿರುವ ಶಕ್ತಿಗಳು ದೇಶದ ಒತ್ತಿನಲ್ಲಿವೆ. ಕ್ಷೋಭೆಯ, ಕೋಮು ಘರ್ಷಣೆಯ ದುರ್ಲಾಭ ಪಡೆದು ಗಡಿಯನ್ನು ಒತ್ತಿ ಬರುವ ಸಾಧ್ಯತೆಯನ್ನು ಇಲ್ಲವೆನ್ನಲಾಗುವುದಿಲ್ಲ.

ವಿಚಾರ ಶೂನ್ಯರಾಗಿ, ವಿವೇಕ ಹೀನರಾಗಿ ಪರಸ್ಪರರ ಕತ್ತು ಹಿಡಿದು ಹಿಸುಕುತ್ತಿರುವ ಈ ದೇಶದ ಎರಡು ದೊಡ್ಡ ಸಮುದಾಯಗಳವರು ಇದರ ಪರಿಣಾಮದ ಬಗ್ಗೆ ಆಲೋಚಿಸಬೇಕಾಗಿದೆ. ಧರ್ಮಾಚರಣೆಯನ್ನು ಖಾಸಗಿ ಬದುಕಿನ ವಿಚಾರವನ್ನಾಗಿ ಮಾಡಬೇಕು. ಸದ್ಯಕ್ಕೆ ಆ ನಿಟ್ಟಿನಲ್ಲಿ ಹೆಜ್ಜೆಯಿಡುವ ಪ್ರಯತ್ನವನ್ನಾದರೂ ಮಾಡಬೇಕು. ಈ ಹಿನ್ನೆಲೆಯಲ್ಲಿ ಅಹ್ಮದಾಬಾದಿನ ಬಹು ಸಂಖ್ಯಾತ ಸಮುದಾಯದವರು ರಥೋತ್ಸವದ ಮಟ್ಟವನ್ನು ಕಡಿತಗೊಳಿಸುವುದು ವಿಹಿತ. ಉತ್ಸವವೆಂಬುದು ಆಡಂಬರದ, ಗರ್ವದ, ಜಂಬದ ವಿಚಾರವಾಗದಿರಲಿ. ಅದು ಸದ್ದಿಲ್ಲದೆ, ಶಾಂತಿಯಿಂದ ನಡೆದರೆ ಆಗುವ ನಷ್ಟವೇನು? ಧರ್ಮಾಚರಣೆಯ ಹಲವಾರು ವಿಧಿಗಳು ಅನುಕೂಲಕ್ಕೆ ತಕ್ಕಂತೆ ಶಾಸ್ತ್ರಕ್ಕಾಗಿ ಮಾತ್ರ ನಡೆಯುವ ವಿದ್ಯಮಾನ ಇಲ್ಲವೆ? ರಥೋತ್ಸವವೂ ಹೀಗೆ ಮೊಟಕಾದರೆ ಸಮಾಜಕ್ಕೆ ಶಾಂತಿಯೇ ದೊರೆಯುವುದಾದರೆ ಹಾಗೆ ಮಾಡುವುದೇ ಒಳಿತು. ರಥವನ್ನು 15 ಕಿಲೋ ಮೀಟರು ಸುತ್ತಿಸುವ ಬದಲು ಆಲಯದ ಪ್ರಾಂಗಣದೊಳಗೇ ಸುತ್ತಿಸಿದರೆ ಸಾಲದೇ? ಧಾರ್ಮಿಕ ದುರಭಿಮಾನ ಬಿಟ್ಟರೆ, ಮನುಷ್ಯರೆಲ್ಲರ ಹಿತವೇ ಮುಖ್ಯವಾದರೆ ಇಂತಹದೊಂದು ಪರಿಹಾರದ ದಾರಿ ಕಾಣಿಸೀತು.

ಮುಂಗಾರು

ಗುರುವಾರ, ಜುಲೈ 17, 1986

ಕಾಂಗ್ರೈ ಭಿನ್ನಮತೀಯರು

ಆಳುವ ಕಾಂಗ್ರೆಸ್ (ಐ) ಪಕ್ಷದಲ್ಲಿ ಭಿನ್ನಮತ ಉಂಟಾಗಿದೆ. ಪಕ್ಷದ ಸರಕಾರವು ದೇಶದ ಹಣಕಾಸು ಧೋರಣೆಯನ್ನು ರೂಪಿಸುತ್ತಿರುವ ವಿಚಾರದಲ್ಲಿ ರಾಜ್ಯ ಸಭೆಯ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವೇಳೆ ಪರಿಶಿಷ್ಟ ಜಾತಿ-ಪಂಗಡಗಳನ್ನು ಅವಗಣಿಸಿದ ಪ್ರಶ್ನೆಯಲ್ಲಿ, ಪಕ್ಷದ ಆಂತರಿಕ ಪ್ರಜಾತಂತ್ರ ವ್ಯವಸ್ಥೆಯ ವಿಚಾರದಲ್ಲಿ ಪಕ್ಷದ ಕೆಲವು ಹಿರಿಯ ನಾಯಕರೂ ಸೇರಿದಂತೆ ಒಂದು ವಿಭಾಗದವರು ಧ್ವನಿಯೆಬ್ಬಿಸಿದ್ದಾರೆ.

ಈ ಬಂಡಾಯದ ಪತಾಕೆಯನ್ನು ಪಕ್ಷದ ಕಾರ್ಯಾಧ್ಯಕ್ಷ ಕಮಲಾಪತಿ ತ್ರಿಪಾಠಿಯವರೇ ಹಿಡಿದಿದ್ದಾರೆ. ಅವರ ಬೆನ್ನ ಹಿಂದೆ ಪ್ರಣವ ಮುಖರ್ಜಿ, ರಾಮಚಂದ್ರನ್, ಗುಂಡೂರಾವ್, ಎ. ಪಿ. ಶರ್ಮ, ಜಗನ್ನಾಥ ಮಿಶ್ರ ಇವರೆಲ್ಲ ಇದ್ದಾರೆ. ಕೆಲವರು ಬಹಿರಂಗವಾಗಿ ಧ್ವಜ ಹಿಡಿದಿದ್ದರೆ ಕೆಲವರು ನೇಪಥ್ಯದಲ್ಲಿರಬಹುದು.

ಹೀಗೆ ಬಂಡಾಯದ ಪತಾಕೆ ಹಿಡಿದಿರುವ ವ್ಯಕ್ತಿಗಳನ್ನೂ, ಅವರು ಎತ್ತಿರುವ ಪ್ರಶ್ನೆಗಳನ್ನೂ ವಿವೇಚಿಸಬೇಕಾಗಿದೆ. ಭಿನ್ನ ಮತದ ಧೂಳಿ ಎಬ್ಬಿಸಿರುವ ಈ ಮಂದಿಯೆಲ್ಲ ಕಾಲಾನುಕಾಲಕ್ಕೆ ಸಮಯ ಸಾಧಕತನದ ರಾಜಕೀಯ ಕುತಂತ್ರಗಳನ್ನು ಆಡುತ್ತಲೇ ಬಂದವರಾಗಿದ್ದಾರೆ. ತತ್ವದ ಬಗ್ಗೆಯಾಗಲಿ, ಸಿದ್ಧಾಂತದ ಬಗ್ಗೆಯಾಗಲಿ ಈ ಮಂದಿಗಿರುವ ಕಾಳಜಿಯ ಅಳವೇನು ಎಂಬುದು ಈ ದೇಶದ ರಾಜಕೀಯ ವೀಕ್ಷಕರಿಗೂ ಸಾಮಾನ್ಯ ಜನರಿಗೂ ಸ್ಪಷ್ಟವಾಗಿ ಗೊತ್ತಿರುವ ವಿಚಾರ. ತ್ರಿಪಾಠಿಯವರಾಗಲಿ, ಗುಂಡೂರಾಯರಾಗಲಿ, ಜಗನ್ನಾಥ ಮಿಶ್ರರಾಗಲಿ ನಡೆಸಿರುವ ಈ ಬಂಡಾಯ ನರಿಗೆ ದ್ರಾಕ್ಷೆ ಹುಳಿಯಾದ ಹಳೆ ಕತೆಯನ್ನೇ ಹೇಳುತ್ತದೆ. ದಾಸರು ಹಾಡುವ ಅಭಾವ ವೈರಾಗ್ಯವನ್ನು ತೋರಿಸುತ್ತದೆ. ಈ ಮಂದಿಯೆಲ್ಲ ಕಾಂಗ್ರೆ ಪಕ್ಷದೊಳಗೆ ಇದ್ದಾಗ ಅದರಲ್ಲಿ ಎಷ್ಟರ ಮಟ್ಟಿಗೆ ಆಂತರಿಕ ಪ್ರಜಾಪ್ರಭುತ್ವ ಇತ್ತು. ಹಿಂದೆ ಸಾಂಸ್ಥಿಕ ಚುನಾವಣೆ ನಡೆದದ್ದು ಯಾವಾಗ, ಮುಂದೆ ಆಗಬೇಕಾದ್ದು ಎಂದು ಎಂಬುದನ್ನು ಎಳ್ಳಷ್ಟೂ ಚಿಂತಿಸಿದವರಲ್ಲ. ಹಾಗೆ ಚಿಂತಿಸುವ ಅಗತ್ಯವೂ ಅವರಿಗಾರಿಗೂ ಇರಲಿಲ್ಲ. ಯಾಕೆಂದರೆ ಅಧಿಕಾರದ ಸುಕ್ರುಂಡೆ ಮೆಲ್ಲುವ ಕೆಲಸಕ್ಕೇ ಅವರಿಗಾರಿಗೂ ಪುರುಸೊತ್ತು ಸಾಕಾಗುತ್ತಿರಲಿಲ್ಲ. ಅವರ ಮೇಲಿದ್ದ ನಾಯಕಿಯ ಕೃಪಾಕಟಾಕ್ಷವೇ ಅಂತಹುದಾಗಿತ್ತು.

ಇಂದು ಇವರಲ್ಲಿ ಹೆಚ್ಚಿನವರೂ ಅಧಿಕಾರ ಕಳೆದುಕೊಂಡವರಾಗಿದ್ದಾರೆ. ಕಮಲಾಪತಿ ತ್ರಿಪಾಠಿಯವರೇನೋ ಪಕ್ಷದ ಕಾರ್ಯಾಧ್ಯಕ್ಷತೆಯೆಂಬ ಪೀಠದಲ್ಲಿ ವಿರಾಜಮಾನರಾಗಿದ್ದರೂ ಅವರಿಗದು ಮುಳ್ಳಿನ ಪೀಠವಾಗಿದೆ. ಅವರ ಮಾತಿಗೆ ಆ ಪಕ್ಷದಲ್ಲಿ ಕವಡೆಯ ಬೆಲೆಯೂ ಇಲ್ಲವಾಗಿದೆ. ಅಧಿಕಾರದ ಪ್ರಕ್ರಿಯೆಗಳಲ್ಲಿ ಅವರಿಗೆ ಯಾವ ಪಾತ್ರವೂ ಇಲ್ಲವಾ [illegible] ಯವರ ಕಣ್ಣಿಗೆ [illegible] ಸುವ [illegible] ಗಿದೆ [illegible] [illegible] ರಾಯರಾದರೂ ಅಷ್ಟೆ. ಈ [illegible] ವಲ್ಲಿ [illegible] ಅಪಮಾನ ಹೊತ್ತು ತಿರುಗುತ್ತಿರುವ ಅಂತರ್ ಪಿಶಾಚಿಯ ಕತೆ ಅವರದಾಗಿದೆ. ಬಿಹಾರದ ಜಗನ್ನಾಥ ಮಿಶ್ರರ ಅವಸ್ಥೆಯೂ ಇದಕ್ಕಿಂತ ಬೇರೆಯಲ್ಲ.

ಆದ್ದರಿಂದಲೇ ಈಗ ಎದ್ದಿರುವ ಈ ಭಿನ್ನಾಭಿಪ್ರಾಯದ ಅಲೆ ಕಾಂಗ್ರೆ ಸರೋವರದಲ್ಲಿ ಯಾವ ಅಲ್ಲೋಲ ಕಲ್ಲೋಲವನ್ನೂ ಉಂಟು ಮಾಡದು. ಇಂತಹ ಭಿನ್ನಮತೀಯರನ್ನು ನಿಭಾಯಿಸಿಕೊಳ್ಳುವುದು ಆ ಪಕ್ಷಕ್ಕೇನೂ ಸಮಸ್ಯೆಯಾಗದು. ಇವರನ್ನೆಲ್ಲ ತೆಗೆದು ಒಗೆದರೆ ಕೇಳುವವರು ಯಾರೂ ಇರಲಾರರು. ಇವರೆಲ್ಲ ಸೇರಿ ಹೊಸ ಪಾರ್ಟಿ ಕಟ್ಟಿದರೆ ಅದು ಹತ್ತರಲ್ಲಿ ಹನ್ನೊಂದಾದೀತು. ಅಂತಹ ಪಕ್ಷಕ್ಕೆ ಈ ನಾಯಕರು ಹೊರತು ಹಿಂಬಾಲಕರು ಯಾರೂ ಇರಲಾರರು. ಅಧಿಕಾರಕ್ಕೆ ಎರವಾದ ಈ ಮಂದಿಗಳ ಭಿನ್ನಾಭಿಪ್ರಾಯವೆಂಬ ಬಡಬಡಿಕೆ ಜ್ವರವೇರಿದವನ ಪ್ರಲಾಪಗಳಾಗಿ ಮುಕ್ತಾಯಗೊಳ್ಳುವುದೆಂಬುದು ಯಾರ ನಿರೀಕ್ಷೆಗೂ ನಿಲುಕುವಂತಹದು.

ಆದರೆ ಅಧಿಕಾರದಲ್ಲಿರುವ ಈ ಪಕ್ಷ, 1984ರ ಡಿಸೆಂಬರ್‌ನಲ್ಲಿ ರಾಜೀವಗಾಂಧಿ ನಾಯಕತ್ವದಲ್ಲಿ ಈ ದೇಶದ ಜನ ಸಮುದಾಯದ ಆಶೀರ್ವಾದ ಪಡೆದು ಅಧಿಕಾರ ಗಟ್ಟಿ ಮಾಡಿಕೊಂಡ ಈ ಸಂಸ್ಥೆ ಇಂತಹ ಭಿನ್ನಮತದೊಂದಿಗೆ ವ್ಯವಹರಿಸುತ್ತಿರುವ ವಿಧಾನ ಮಾತ್ರ ಸರಿಯಲ್ಲ. ಭಿನ್ನಮತ ಬಂದೊಡನೆಯೆ ಹಾಗೆ ಧ್ವನಿಯೆತ್ತಿದ್ದ ಗುಂಪಿನ ನಾಯಕರನ್ನು ಅವಮಾನಪಡಿಸುವ, ಹೊರಕ್ಕೆಸೆಯುವ ಸಸ್ಪೆಂಡ್ ಮಾಡುವ ಕಾರ್ಯಗಳಿಂದ ಪಕ್ಷದ ಬಲ ಹೆಚ್ಚುವುದೆ? ಭಿನ್ನಮತೀಯರು ಯಾರೇ ಆಗಿರಲಿ ಅವರ ಸ್ಥಾನಮಾನಗಳು-ಗುಣಾವಗುಣಗಳು ಏನೇ ಇರಲಿ, ಅವರ ಧ್ವನಿಯನ್ನು ಅಡಗಿಸುವುದರಿಂದ ಎತ್ತಿರುವಂತಹ ತಾತ್ವಿಕ ಹಾಗೂ ಸೈದ್ಧಾಂತಿಕ ಪ್ರಶ್ನೆಗಳು ಸತ್ತು ಬಿಡುವವೆ?

ತನ್ನ ಧೋರಣೆಗಳು ಜನಹಿತಕ್ಕೆ ಪೂರಕವಾಗಿವೆಯೆ, ಭಿನ್ನಮತೀಯರು ಎತ್ತಿರುವ ವಿಚಾರಗಳಲ್ಲಿ ಹುರುಳುಂಟೆ ಎಂದು ಅಧಿಕಾರ ಹಿಡಿದು ಕೂತ ಈ ಪಕ್ಷವು ಆಲೋಚಿಸಬೇಕಾಗಿದೆ. ಭಿನ್ನಮತೀಯರು ಇಂದು ಜನರ ಮುಂದೆ ಮಂಡಿಸಿರುವ ಅನೇಕ ವಿಷಯಗಳಲ್ಲಿ ತಥ್ಯವಿವೆ. ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಅಧಿಕಾರ ನಡೆಸಬೇಕಾದ ಪಕ್ಷದ ಒಳಗೆ ಕೂಡ ಪ್ರಜಾತಂತ್ರ ಇರಬೇಕಾಗುತ್ತದೆ. ಇಲ್ಲವಾದರೆ ಅದರ ನೀತಿ-ನಡತೆಗಳು, ರೀತಿ ರಿವಾಜುಗಳು ದಾರಿ ತಪ್ಪಿ ಹೋಗುವ ಸಂಭವವುಂಟು. ಆರ್ಥಿಕ ಸಾಮಾಜಿಕ ಧೋರಣೆಗಳು ಜನಾಭಿಪ್ರಾಯವನ್ನು ಪ್ರತಿಫಲಿಸದೆ ನಾಲ್ಕು ಜನರು ಕೊಠಡಿಯೊಳಗೆ ಕುಳಿತು ಸಿದ್ಧಪಡಿಸಿದ ಆಲೋಚನೆಗಳ ದಾರಿಯಲ್ಲಿ ಸಾಗುವುದುಂಟು. ಇದು ಸಂಸ್ಥೆಗಿಂತ ವ್ಯಕ್ತಿಗೆ ಹೆಚ್ಚು ಮಹತ್ವವನ್ನು ತಂದು ಕೊಟ್ಟು ವ್ಯಕ್ತಿ ಪೂಜೆಗೆ ದಾರಿ ಮಾಡುವ ಅಪಾಯವುಂಟು.

ಇಂದು ಆಗಿರುವುದು ಅದೇ ಎಂಬುದು ಭಿನ್ನಮತೀಯರ ಟೀಕೆ-ಟಿಪ್ಪಣಿಗಳನ್ನು ಮನನ ಮಾಡಿದವರಿಗೂ, ಈ ಪಕ್ಷ ನಡೆದಿರುವ ದಾರಿಯನ್ನು ಗಮನಿಸಿದವರಿಗೂ ಸ್ಪಷ್ಟವಾಗುತ್ತದೆ. ಇಂದು ಈ ಪಕ್ಷದ ಆರ್ಥಿಕ ಧೋರಣೆಗಳು ನಡೆದಿರುವ ದಿಕ್ಕು ನಾವು ಅಂಗೀಕರಿಸಿದ ತಾರತಮ್ಯವಿಲ್ಲದ ಸಮಾಜವಾದಿ ಸಮಾಜ ನಿರ್ಮಾಣಕ್ಕೆ ಪೂರಕವೆಂದು ಹೇಳುವುದಕ್ಕಾಗುವುದಿಲ್ಲ. ಇಂದು ಈ ಪಕ್ಷದ ಸರಕಾರದ ನಿರ್ಧಾರಗಳು, ನೀತಿಗಳು ಹಾಗೂ ಕಾರ್ಯಕ್ರಮಗಳು ಪಕ್ಷದ ವೇದಿಕೆಗಳಲ್ಲಿ ಚರ್ಚೆಗೆ ಬರುವುದಿಲ್ಲ. ಈ ಪಕ್ಷಕ್ಕೆ ಕಳೆದ ಒಂದೂವರೆ ದಶಕದಲ್ಲಿ ಒಮ್ಮೆಯೂ ಸಾಂಸ್ಥಿಕ ಚುನಾವಣೆ ನಡೆದಿಲ್ಲ. ಹೊಸ ನೀತಿ ಹೇಳುವ ಹೊಸ ದಾರಿ ಪ್ರತಿಪಾದಿಸುವ, ಹೊಸ ನಾಯಕ ಬಂದ ಮೇಲೆ ಕೂಡ ಎರಡು ವರ್ಷ ಆಗುತ್ತ ಬಂದರೂ ಸಾಂಸ್ಥಿಕ ಚುನಾವಣೆಯನ್ನು ಪದೇ ಪದೇ ಮುಂದಕ್ಕೆ ಹಾಕಲಾಗುತ್ತಿದೆ.

ಭಿನ್ನಮತೀಯರನ್ನು ಹೊರಗೆ ಹಾಕುವುದರಿಂದ ಭಿನ್ನಮತ ಸಾಯದು. ಅವರು ಎತ್ತಿರುವ ವಿಚಾರಗಳೂ ಸಾಯವು. ಪಕ್ಷದಲ್ಲಿ ಎದ್ದಿರುವ [illegible] ಸಣ್ಣ ಕ್ಷೋಭೆ ಆ ಪಕ್ಷದ ಒಳಗಿರುವ ದೊ[illegible] ರೋಗದ ಒಂದು ಸಣ್ಣ ಚಿಹ್ನೆ. ಆ ರೋಗ[illegible] ಮೂಲಕ್ಕೇ ಮದ್ದು ಆಗಬೇಕು.

ಮುಂಗಾರು

ಶುಕ್ರವಾರ, ಜುಲೈ 18, 1986

ಸರಕಾರದ ಸೋಲಿನ ಸಂಕೇತ

ಸಾರ್ವಜನಿಕ ರಂಗದಲ್ಲಿ ನೂತನ ಉದ್ಯಮ ಘಟಕಗಳ ಸ್ಥಾಪನೆಗೆ ಈಗಿನ ಉದ್ಯಮ ಘಟಕಗಳ ವಿಸ್ತರಣೆ ಹಾಗೂ ನವೀಕರಣ ಮೊದಲಾದ ಅವಶ್ಯಕತೆಗಳಿಗೆ ಸಂಪನ್ಮೂಲ ಸಂಗ್ರಹ ಮಾಡಲು ಕೇಂದ್ರ ಸರಕಾರವು ತೆರಿಗೆ ರಹಿತ ಬಾಂಡುಗಳನ್ನು ಹೊರಡಿಸುವ ತೀರ್ಮಾನ ಮಾಡಿದೆ.

ದೇಶದಲ್ಲಿ ಕಪ್ಪು ಹಣ ತನ್ನ ನಿಯಂತ್ರಣವನ್ನು ಮೀರಿ ಬೆಳೆದಿದೆ ಎಂಬುದನ್ನು ಕೇಂದ್ರ ಸರಕಾರ ಈ ಮೂಲಕ ಒಪ್ಪಿಕೊಂಡಂತಾಗಿದೆ. ಯಾಕೆಂದರೆ ಸಾರ್ವಜನಿಕರಂಗದ ಉದ್ಯಮಗಳಿಗೆ ಬಂಡವಾಳವಾಗಿ ಬಾಂಡುಗಳನ್ನು ಮಾರಾಟ ಮಾಡುವುದು ಹಾಗೂ ಆ ಹಣಕ್ಕೆ ನೀಡಲಾಗುವ ಬಡ್ಡಿ ವರಮಾನವನ್ನು ತೆರಿಗೆಯಿಂದ ವಿಮುಕ್ತಗೊಳಿಸುವುದು ಈ ಹಿಂದೆ ಕಪ್ಪು ಹಣವನ್ನು ಸೆಳೆಯಲು ಹೊರಡಿಸಿದ ಬಾಂಡುಗಳಂತಹದೇ ವ್ಯವಸ್ಥೆಯಾಗಿದೆ. ಈಗ ನಿರ್ಧರಿಸಲಾಗಿರುವ ಈ ಹೊಸ ಸಮೂನೆಯ ಬಾಂಡುಗಳಲ್ಲಿ ಕೂಡಾ ಕಪ್ಪು ಹಣದ ಕುಳಗಳು ಬಂಡವಾಳ ತೊಡಗಿಸಬಹುದು ಎಂದು ಸರಕಾರವು ನಿರೀಕ್ಷಿಸಿರುವಂತೆ ಕಂಡು ಬರುತ್ತದೆ.

ಹಿಂದೆ ಬಾಂಡು ಹೊರಡಿಸಿ ಕಪ್ಪು ಹಣವನ್ನು ಬಿಳಿಯಾಗಿ ಮಾಡುವ ಅವಕಾಶವನ್ನು ಘೋಷಿಸಿದಾಗ ಬಂದದ್ದು ಸುಮಾರು ಒಂದು ಸಾವಿರ ಕೋಟಿ ರೂಪಾಯಿ. ಆದರೆ ಈಗ ದೇಶದಲ್ಲಿ ಚಲಾವಣೆಯಲ್ಲಿರುವ ಕಪ್ಪು ಹಣದ ಮೊತ್ತ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಗಳು ಎಂದು ಅಂದಾಜು. ಇದು ಭಾರತದ ಒಟ್ಟು ರಾಷ್ಟ್ರೀಯ ಉತ್ಪನ್ನದ ಅರ್ಧಾಂಶದಷ್ಟಾಗುತ್ತದೆ. ಇದು ಬೆಳೆಯುತ್ತಲೇ ಹೋಗುತ್ತದೆಯೇ ಹೊರತು ಕಮ್ಮಿಯಾಗುವ ಸೂಚನೆಗಳಿಲ್ಲ. ಹೀಗೆ ಕಪ್ಪು ಹಣವು ಬೆಳೆದರೆ ಆರ್ಥಿಕತೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತದೆ. ಸರಕಾರದ ನಿಯಂತ್ರಣವು ಸಡಿಲಾಗುತ್ತದೆ. ಅತಿ ಪ್ರಸರಣವು ಏರಿ ಹಣವು ಸಾಮಗ್ರಿಗಳನ್ನು ಬೆನ್ನಟ್ಟುವ ಪ್ರಸಂಗ ಉಂಟಾಗುತ್ತದೆ. ಸಾಮಗ್ರಿಗಳ ಏರುತ್ತಿರುವ ಬೆಲೆಯ ವಿದ್ಯಮಾನದಲ್ಲಿ ಇದು ಈ ದೇಶದಲ್ಲಿ ಸಾಕಾರಗೊಂಡಿದೆ.

ಕಪ್ಪು ಹಣ ಹೀಗೆ ಬೆಳೆಯಲು ಭ್ರಷ್ಟಾಚಾರವೇ ಕಾರಣವೆಂಬುದರಲ್ಲಿ ಎರಡು ಮಾತಿಲ್ಲ. ವರಮಾನವನ್ನು ಸರಕಾರಕ್ಕೆ ತಿಳಿಸದೆ ಅಡಗಿಸಿಟ್ಟು ತೆರಿಗೆ ವಂಚಿಸುವ ಮೂಲಕ ಖಾಸಗಿ ಕೈಗಾರಿಕೆ, ವಾಣಿಜ್ಯ ವ್ಯವಹಾರ, ವೈದ್ಯಕೀಯ, ವಕೀಲಿ, ನಿರ್ಮಾಣವೇ ಮೊದಲಾದ ವೃತ್ತಿ ರಂಗಗಳಲ್ಲಿ ಹುಟ್ಟಿಕೊಳ್ಳುವ ಕಪ್ಪು ಹಣ ಒಂದು ವಿಧದ್ದು. ಸರಕಾರದ ಇಲಾಖೆಗಳಲ್ಲಿ ಲಂಚ-ರುಷುವತ್ತುಗಳ ಮೂಲಕ ಹುಟ್ಟಿಕೊಳ್ಳುವ ಕಪ್ಪು ಹಣವೂ ಇದರ ಜತೆ ಸೇರಿಕೊಳ್ಳುತ್ತದೆ. ವಿದೇಶಗಳಿಂದ ಸುಂಕ ಕೊಡದೆ ಬರುವ ಬೆಲೆ ಬಾಳುವ ಚಿನ್ನ ಹಾಗೂ ಸಾಮಗ್ರಿಗಳು ಈ ಮೊತ್ತವನ್ನು ಏರಿಸುವುದಕ್ಕೆ ಸಹಾಯ ಮಾಡುತ್ತವೆ.

ಸರಕಾರದ ಇಲಾಖೆಗಳಾದ ಕಸ್ಟಮ್ಸ್, ವರಮಾನ ತೆರಿಗೆ, ಕೈಗಾರಿಕೆ ಇವುಗಳೆಲ್ಲವೂ ಅದರಲ್ಲಿ ಕೆಲಸ ಮಾಡುವವರಿಗೆ ಚಿನ್ನದ ಗಣಿಯೇ ಆಗಿವೆ. ಕಸ್ಟಮ್ಸ್ ಮೊದಲಾದ ಇಲಾಖೆಗಳಲ್ಲಿನ ಗುಮಾಸ್ತರೂ, ಪೇದೆಗಳೂ ಕೂಡ ಹಲವಾರು ಲಕ್ಷ ರೂಪಾಯಿ ಬೆಲೆಯ ಸೊತ್ತುಗಳನ್ನು ಕೊಳ್ಳುವಂತಹ ಸಾಮರ್ಥ್ಯವನ್ನು ಗಳಿಸಿಕೊಂಡಿದ್ದಾರೆ. ಅಪ್ರಾಮಾಣಿಕರಿಗೆ ಮಾತ್ರವೇ ಈ ದೇಶದಲ್ಲಿ ಬದುಕಿ ಬಾಳಲು ಸಾಧ್ಯ. ಪ್ರಾಮಾಣಿಕರಿಗಿದು ಕಾಲವಲ್ಲ ಎಂಬ ಪರಿಸ್ಥಿತಿ ಉಂಟಾಗಿದೆ.

ಸರಕಾರ ಈಗ ಮಾಡಬೇಕಾದ್ದು ಇಂತಹ ಕಪ್ಪುಹಣವನ್ನು, ಅಪ್ರಾಮಾಣಿಕವಿಧಾನಗಳಿಂದಸಂಗ್ರಹಿಸಿದಂತಹ ಅಕ್ರಮ ಸೊತ್ತನ್ನು ಬಯಲಿಗೆ ತರುವ ಕೆಲಸ. ಅಲ್ಲೊಂದು-ಇಲ್ಲೊಂದು ದಾಳಿ ನಡೆಸಿ ಕೆಲವು ಲಕ್ಷವೋ ಒಂದೆರಡು ಕೋಟಿಯೋ ರೂಪಾಯಿ ಕಪ್ಪು ಹಣವನ್ನು ಬಯಲಿಗೆ ತರುವುದರಿಂದ ಯಾವ ಫಲವೂ ಆಗದು. ಅದಕ್ಕೆ ನಿರಂತರವಾದ ಹೋರಾಟವೇ ಬೇಕು. ಅಪ್ರಾಮಾಣಿಕತೆಯೆಂಬುದು ಈ ಸಮಾಜದಲ್ಲಿ ಸರ್ವಥಾ ಅಸಾಧ್ಯವೆಂಬ ಪರಿಸ್ಥಿತಿಯನ್ನು ಹುಟ್ಟಿಸಬೇಕು.

ಸಾರ್ವಜನಿಕ ರಂಗದ ಉದ್ಯಮ ವಿಸ್ತರಣೆಗಾಗಿ ಕಪ್ಪು ಹಣವನ್ನು ಆಕರ್ಷಿಸುವ ವಿಧಾನವೇ ತಪ್ಪು. ಸರಕಾರದ ಸೋಲನ್ನು ಇದು ಸೂಚಿಸುತ್ತದೆ. ಉದ್ಯಮಕ್ಕೆ ಬಂಡವಾಳಬೇಕಿದ್ದರೆ ಆಯಾ ಕಂಪೆನಿಗಳು ಶೇರು ಮಾರಾಟದಿಂದ ಹಣ ಸಂಗ್ರಹಿಸಲಿ. ಲಾಭದಾಯಕವಾಗಿ ಉದ್ಯಮವನ್ನು ನಡೆಸಿದರೆ ಸಾರ್ವಜನಿಕರಿಂದ ಪಾಲು ಬಂಡವಾಳ ಬಂದೀತು.

ಮುಂಗಾರು
ಭಾನುವಾರ, ಜುಲೈ 20, 1986

ಕ್ರೀಡಾಕೂಟಕ್ಕೆ ಬಹಿಷ್ಕಾರ: ಸ್ವಾಗತಾರ್ಹ

ಎಡಿನ್‌ಬರೋದಲ್ಲಿ ಈ ತಿಂಗಳ 24ನೇ ದಿನಾಂಕದಿಂದ ಆಗಸ್ಟ್ ಎರಡನೇ ದಿನಾಂಕದ ತನಕ ನಡೆಯುವ ಕಾಮನ್ವೆಲ್ತ್ ಕ್ರೀಡಾಕೂಟಕ್ಕೆ ಭಾರತ ಸರಕಾರ ಬಹಿಷ್ಕಾರ ಹಾಕುವುದು ನಿಚ್ಚಳವಾಗಿದೆ. ಈ ಸಂಬಂಧವಾಗಿ ಭಾರತ ಸರಕಾರ ಈ ಒಂದೆಯೇ ತನ್ನ ನಿಲುವು ಸ್ಪಷ್ಟಪಡಿಸಿದೆ. "ನಮ್ಮ ಬೆಂಬಲ ಆಫ್ರಿಕದ ಮುಂಚೂಣಿಯ ರಾಷ್ಟ್ರಗಳಿಗೆ" ಎಂಬುದನ್ನು ಅದು ಈಗಾಗಲೇ ಸಾರಿದೆ.

ವರ್ಣಭೇದ ನೀತಿ ಅನುಸರಿಸುತ್ತಿರುವ ದಕ್ಷಿಣ ಆಫ್ರಿಕದ ಮೇಲೆ ಸಂಪೂರ್ಣವಾಗಿ ವಾಣಿಜ್ಯ ದಿಗ್ಬಂಧನ ಹೇರುವ ವಿಚಾರದ ಸಂಬಂಧವಾಗಿ ಈ ಪ್ರಶ್ನೆ ಎದ್ದಿದೆ. 13ನೆಯದಾದ ಈ ಬಾರಿಯ ಕಾಮನ್ವೆಲ್ತ್ ಕ್ರೀಡಾಕೂಟ ಇಂಗ್ಲಂಡಿನ ನೆಲದಲ್ಲಿ ನಡೆಯುತ್ತಿರುವುದರಿಂದಲೇ ದಕ್ಷಿಣ ಆಫ್ರಿಕದ ಪ್ರಶ್ನೆಗೆ ಇಷ್ಟು ಮಹತ್ವ ಉಂಟಾಗಿದೆ. ಇಂಗ್ಲೆಂಡ್ ದಕ್ಷಿಣ ಆಫ್ರಿಕದ ಆಳ್ವಿಕೆಯನ್ನು ಸದಾಕಾಲವೂ ಬೆಂಬಲಿಸಿಕೊಂಡು ಬಂದ ರಾಷ್ಟ್ರವಾಗಿರುತ್ತದೆ. ದಕ್ಷಿಣ ಆಫ್ರಿಕದ ವರ್ಣಭೇದ ನೀತಿಯೆಂಬುದು ಅಮಾನುಷವಾದದ್ದು ಎಂಬುದರಲ್ಲಿ ವಿಚಾರವಂತರು ಎಂದುಕೊಳ್ಳುವವರಾರಿಗೂ ಸಂಶಯವಿಲ್ಲ. ಬಹುಮತೀಯರಾದ ನೀಗ್ರೋಗಳು ಹಾಗೂ ಏಷ್ಯಾದವರೇ ಮೊದಲಾದ ಇತರ ವರ್ಣೀಯರನ್ನು ದಕ್ಷಿಣ ಆಫ್ರಿಕದ ಅಲ್ಪ ಸಂಖ್ಯಾತ ಬಿಳಿಯರ ಸರಕಾರ ನಡೆಸಿಕೊಂಡು ಬರುತ್ತಿರುವ ವಿಧಾನವನ್ನೂ ಆ ವ್ಯವಸ್ಥೆಯ ವಿವರಗಳನ್ನು ಅರಿತವರಿಗೆ ಹೇಸಿಗೆ ಉಂಟಾಗುವುದು ಸಹಜವಾಗಿದೆ. ಅಲ್ಲಿನ ಕರಿಯರು ಬಿಳಿಯರೊಂದಿಗೆ ಬೆರೆಯುವಂತಿಲ್ಲ. ಅವರು ಸೊತ್ತುಗಳನ್ನು ಹೊಂದುವಂತಿಲ್ಲ. ಉದ್ದಿಮೆಗಳ ಮಾಲೀಕರಾಗುವಂತಿಲ್ಲ. ನಗರಗಳ ಹಾಗೂ ಪೇಟೆ ಪಟ್ಟಣಗಳ ಹೆಚ್ಚಿನ ಪ್ರದೇಶವು ಬಿಳಿಯರ ಬಳಕೆಗಾಗಿ ಮೀಸಲಿಟ್ಟದ್ದು. ಅಲ್ಲಿ ಕರಿಯರು ನಿರ್ದಿಷ್ಟ ಕೂಲಿ ಕೆಲಸಗಳನ್ನಲ್ಲದೆ ವ್ಯಾಪಾರ ವಹಿವಾಟುಗಳನ್ನು ಮಾಡತಕ್ಕದ್ದಲ್ಲ. ನಗರ ಪ್ರದೇಶಗಳಲ್ಲಿ ವರ್ಣೀಯರ ವಾಸಕ್ಕೆಂದು ಪ್ರತ್ಯೇಕ ಕೊಂಪೆಗಳೇ ಇವೆ. ಅದರ ಹೊರಗಡೆ ಕರಿಯರಾರೂ ವಾಸಿಸತಕ್ಕದ್ದಲ್ಲ. ಕರಿ ಲೈಂಗಿಕ ಸಂಪರ್ಕವನ್ನೇ ದಂಡನಾರ್ಹವನ್ನಾಗಿ ಮಾಡಲಾಗಿದೆ.

ಈ ವ್ಯವಸ್ಥೆಯನ್ನು ಅಡಿ ಮೇಲು ಮಾಡುವ ಸಾಧ್ಯತೆಯನ್ನು ಕಲ್ಪಿಸುವ ಪ್ರಜಾತಂತ್ರ ವ್ಯವಸ್ಥೆ ದಕ್ಷಿಣ ಆಫ್ರಿಕದಲ್ಲಿಲ್ಲ. ಅಲ್ಲಿ ಕರಿಯರಿಗೆ ಮತದಾನದ ಹಕ್ಕೇ ಇಲ್ಲ. ಇರುವ ಸಂಸತ್ತಿನಲ್ಲಿ ಬಿಳಿಯರದೇ ಕಾರುಬಾರು. ಇದೀಗ ಕೆಲವು ತಿಂಗಳುಗಳ ಹಿಂದೆ ಅಸ್ತಿತ್ವಕ್ಕೆ ಬಂದ ಪೀಟರ್ ಬೋಥಾ ಅವರ ಸುಧಾರಣಾ ಸೂತ್ರದನ್ವಯ ಕರಿಯರಿಗೆ ಸಂಸತ್ ಸದಸ್ಯರ ಆಯ್ಕೆ ಹಕ್ಕು ಬಂದರೂ ಕರಿಯ ಪ್ರತಿನಿಧಿಗಳಿಗಾಗಿ ಪ್ರತ್ಯೇಕ ಸದನವನ್ನೇ ರೂಪಿಸಲಾಗಿದೆ. ಆ ಸದನಕ್ಕೆ ಶಾಸನ ರಚಿಸುವ ಅಧಿಕಾರವಿಲ್ಲ. ಅಧಿಕಾರವೆಲ್ಲವೂ ಬಿಳಿಯರ ಕೈಯಲ್ಲಿ.

ದಕ್ಷಿಣ ಆಫ್ರಿಕ ಸರಕಾರವನ್ನು ರಾಜಕೀಯವಾಗಿಯೂ ಸಾಮಾಜಿಕವಾಗಿಯೂ ಬಹಿಷ್ಕರಿಸುವುದು ಮತ್ತು ಸಂಪೂರ್ಣವಾದ ಆರ್ಥಿಕ ದಿಗ್ಬಂಧನ ಹೇರುವುದು ಆ ದೇಶದ ಸರಕಾರ ಮಣಿದು ಬಹುಮತೀಯರಿಗೆ ಅಧಿಕಾರ ಹಸ್ತಾಂತರಿಸುವಂತೆ ಮಾಡುವ ಒಂದು ಪರಿಣಾಮಕಾರಿ ಕ್ರಮವಾಗಿದೆ. ಇಂತಹ ದಿಗ್ಬಂಧನ ಹೇರುವುದಕ್ಕೆ ಅಡ್ಡಿಯಾಗಿ ನಿಂತಿರುವುದು ಇಂಗ್ಲೆಂಡ್ ಮತ್ತು ಅಮೆರಿಕ. ಅವುಗಳೆರಡರ ವಾಣಿಜ್ಯ, ರಾಜಕೀಯ ಹಾಗೂ ನೈತಿಕ ಬೆಂಬಲದಿಂದಲೇ ದಕ್ಷಿಣ ಆಫ್ರಿಕ ಸರಕಾರಕ್ಕೆ ಪ್ರಪಂಚದ ಅಭಿಪ್ರಾಯವನ್ನು ಧಿಕ್ಕರಿಸಿ ನಿಲ್ಲುವ ದಾರ್ಷ್ಟ್ಯ ಬಂದಿದೆ.

ಈ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕದ ಗಡಿಯಲ್ಲಿರುವ ಪ್ರಜಾಸತ್ತಾತ್ಮಕ ದೇಶಗಳು ಕಾಮನ್ವೆಲ್ತ್ ಕ್ರೀಡಾಕೂಟಕ್ಕೆ ಬಹಿಷ್ಕಾರ ಹಾಕಿರುವುದು ಹಾಗೂ ಅದಕ್ಕೆ ತೃತೀಯ ಜಗತ್ತಿನ ಬಲಿಷ್ಠ ರಾಷ್ಟ್ರವಾದ ಭಾರತ ಬೆಂಬಲ ನೀಡಿರುವುದು ಸ್ವಾಗತಾರ್ಹವಾದ ಹೆಜ್ಜೆ. ಜಗತ್ತಿನ ಅಭಿಪ್ರಾಯ ರೂಪಿಸುವುದರಲ್ಲಿ ಪೌರ್ವಾತ್ಯ ದೈತ್ಯನೆನಿಸಿದ ಭಾರತದ ಕೃತ್ಯಕ್ಕೆ ಮಹತ್ವವಿದೆ. ಸಾಮ್ರಾಜ್ಯಶಾಹಿ ನೀತಿಯನ್ನೇ ಮಾನಗೆಟ್ಟು ಪಾಲಿಸುತ್ತಿರುವ ಮಾರ್ಗರೆಟ್ ಥ್ಯಾಚರ್‌ಗೆ ಮೋರೆಗೆ ಮಂಗಳಾರತಿಯಾದಂತಹ ಅನುಭವವಾಗುವುದು ಇದರಿಂದ ಖಚಿತ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಪತ್ರಿಕಾ ಪ್ರಕಟಣೆ ದಿನಾಂಕ 14:1:2010

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 13:1:2010ರ ರಾತ್ರಿಯಲ್ಲಿ ಸುಮಾರು 350 ಕೋಟಿ ರೂಪಾಯಿಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯಿಯನ್ನು ಅಂತಿಮಗೊಳಿಸಿ ಕಾರ್ಯದೇಶ ನೀಡಿದೆ ಎಂದು ಕೆಲವು ಮಾಧ್ಯಮಗಳಲ್ಲಿ ಆಗಿರುವ ವರದಿ ಸಂಪೂರ್ಣ ನಿರಾಧರವಾಗಿದೆ.

ಹಾಗೆಯೇ ಈ ಟೆಂಡರ್ ಪ್ರಕ್ರಿಯೆಯಲ್ಲಿ ಸಿಬ್ಬಂದಿಗಳು ರಾತ್ರಿ ಪೂರ್ತಿ ಕಾರ್ಯನಿರತರಾಗಿದ್ದಾರೆಂಬುದು ಸಹ ಸಂಪೂರ್ಣ ಸುಳ್ಳಾಗಿರುತ್ತದೆ.

ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಳ್ಳುವ ಕೆಲವು ಕಾಮಗಾರಿಗಳಗೆ ಕಾನೂನು ರೀತ್ಯ ಇ-ಪ್ರೆಕ್ಯೂರ್ ಮೆಂಟ್ ಮೂಲಕ ಟೆಂಡರ್‌ಗಳನ್ನು ಮಾತ್ರ ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳ ಪ್ರಕ್ರಿಯೆ ಇನ್ನೂ ಎರಡು ತಿಂಗಳ ನಂತರ ಅಂತಿಮಗೊಳ್ಳಲಿದೆ. ಸದರಿ ಕಾಮಗಾರಿಗಳು 2009-2010ರ ಅನುಮೋದಿತ ಆಯವ್ಯಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯು ದಿನ ನಿತ್ಯದ ಕಾರ್ಯವಾಗಿದ್ದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಟೆಂಡರ್ ಕರೆಯುವ, ಕಾರ್ಯದೇಶ ನೀಡುವ, ಕಾಮಗಾರಿ ಚಾಲನೆ ನೀಡುವ ಪ್ರಕ್ರಿಯೆಯು ನಿರಂತರವಾಗಿ ಕಾನೂನು ರೀತ್ಯ ನಡೆಯುತ್ತಿರುತ್ತದೆ.

ದಿನಾಂಕ 13:1:2010 ರಂದು ಹನ್ನೊಂದು ವಿವಿಧ ಕಾಮಗಾರಿಗಳಗೆ ಟೆಂಡರ್ ಕರೆದಿದ್ದು ಇದರ ಮೊತ್ತ ಸುಮಾರು 95 ಕೋಟಿಯಾಗಿರುತ್ತದೆ. ಇದು ಪತ್ರಿಕಾ ಪ್ರಕಟಣೆಯೇ ಹೊರತು ಗುತ್ತಿಗೆದಾರರಿಗೆ ನೀಡಿರುವ ಕಾರ್ಯದೇಶವಲ್ಲ. ಈ ಟೆಂಡರ್‌ಗಳು ಅಂತಿಮಗೊಳ್ಳಿಸಲು ಇನ್ನೂ ಎರಡು ತಿಂಗಳ ಕಾಲಾವಕಾಶವಿರುತ್ತದೆ.

ಮುಂದುವರೆದು, ಈಗಾಗಲೇ ಸುಮಾರು ಎರಡು ತಿಂಗಳ ಹಿಂದೆ ಟೆಂಡರ್ ಕರೆದಿದ್ದ ಮೂರು ವಿದ್ಯುತ್ ಕಾಮಗಾರಿಗಳ ಆರ್ಥಿಕ ಬಿಡ್ ತೆರೆಯಲಾಗಿದೆ. ಇದರ ಮೊತ್ತ 7.62 ಕೋಟಿ ರೂ.ಗಳು ಕಾರ್ಯದೇಶ ನೀಡಿರುವುದಿಲ್ಲ.

ಧಾರ ಮಕ್ಕಳು ಬಿಳಿಯರ ಮಕ್ಕಳ ಶಾಲೆಗೆ ಹೋಗತಕ್ಕದ್ದಲ್ಲ. ಕರಿಯರಿಗಾಗಿಯೇ ಪ್ರತ್ಯೇಕ ಶಾಲೆಗಳ ವ್ಯವಸ್ಥೆ ಉಂಟು; ಆದರದು ಹೆಸರಿಗೆ ಮಾತ್ರ. ಕರಿಯರ ಮಕ್ಕಳು ಅವಿದ್ಯಾವಂತರಾಗಿಯೇ ಬಿಳಿಯರ ಬಳಿ ಕೂಲಿ-ನಾಲಿ ಮಾಡಿಕೊಂಡು ಗುಲಾಮರಾಗಿಯೇ ಬದುಕಬೇಕೆಂಬ ನೀತಿ ಬಿಳಿಯ ಸರಕಾರದ್ದು. ಗ್ರಾಮಾಂತರದಲ್ಲಿಯೂ ಅಷ್ಟೆ. ಜಮೀನಿನ ಒಡೆತನವೆಲ್ಲ ಬಿಳಿಯ ದೊರೆಗಳ ಕೈಯಲ್ಲಿ. ಆದಿವಾಸಿ ನೀಗ್ರೋಗಳಿಗೆ ನಾಮಕಾವಾಸ್ತೆಯಾಗಿ ಮೂಲದ ಹಕ್ಕಿನ ಸಾಮೂಹಿಕ ಒಡೆತನದ ಜಮೀನು ಒದಗಿಸಲಾಗಿದೆಯಾದರೂ ಆದರ ವಿಸ್ತೀರ್ಣ ಬಲು ಕಮ್ಮಿ.

ಹೀಗೆ ಅಧಿಕಾರ ಹಾಗೂ ಸಂಪತ್ತಿನ ಬಲವೆಲ್ಲವೂ ಬಿಳಿಯರ ಕೈಯಲ್ಲೇ ಇರುವಂತೆ, ಅನು ತಪ್ಪಿಯಾದರೂ ಕರಿಯರ ಕೈಗೆ ಹೋಗದಂತಹ ವ್ಯವಸ್ಥೆಯನ್ನು ಅಲ್ಲಿನ ಸರಕಾರ ಮಾಡಿದೆ. ವರ್ಣ ಸಂಕರ ನಡೆದು, ಬಿಳಿಯರ ಮಧ್ಯೆಯೇ ಕುಲ ಸಂಬಂಧಿ ಕ್ಷೋಭೆ ನಡೆಯದಂತೆಯೂ ಸರಕಾರ ವ್ಯವಸ್ಥೆ ಮಾಡಿದೆ. ಬಿಳಿಯ ಹಾಗೂ ಕರಿಯರ ನಡುವೆ

ದಕ್ಷಿಣ ಆಫ್ರಿಕದ ಅಲ್ಪ ಸಂಖ್ಯಾತವಾದ ಅವಿವೇಕಿ ಬಿಳಿಯ ಸರಕಾರವನ್ನು ಮಣಿಸಲು ಬೊಬ್ಬೆ-ಬಹಿಷ್ಕಾರ, ಬಡಬಡಿಕೆಗಳಿಗಿಂತ ಭಿನ್ನವಾದ ಕ್ರಾಂತಿಕಾರಕ ಕಾರ್ಯಕ್ರಮ ಅಗತ್ಯ ಎನ್ನುವುದನ್ನು ಈ ಜಗತ್ತಿನ ದುರ್ಬಲರ ಪಕ್ಷಪಾತಿಗಳಾದ ಎಲ್ಲರೂ ಅರ್ಥ ಮಾಡಿಕೊಳ್ಳಬೇಕಾಗಿದೆ. ದಕ್ಷಿಣ ಆಫ್ರಿಕದ ವರ್ಣೀಯರು ಈಗಾಗಲೇ ಹೋರಾಟ ನಡೆಸುತ್ತಿದ್ದಾರೆ. ಆ ದೇಶದಲ್ಲಿ ರಾಜಕೀಯ-ಸಾಮಾಜಿಕ ಕ್ಷೋಭೆ ಎದ್ದಿದೆ. ಕರಿಯ ಜನಾಂಗ ಅಕ್ರಮವಾದ ಬಿಳಿಯ ಪ್ರಭುತ್ವಕ್ಕೆ ಸಡ್ಡು ಹೊಡೆದು ನಿಂತಿದೆ. ಒಂದಲ್ಲ ಒಂದು ದಿನ ಸದ್ಯೋಭವಿಷ್ಯದಲ್ಲೇ ಈ ಅನೀತಿಯುತವಾದ ವ್ಯವಸ್ಥೆ ಪತನಗೊಳ್ಳುವುದರಲ್ಲಿ ಸಂದೇಹವಿಲ್ಲ. ಆದರೆ ಈ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ಪ್ರಪಂಚದ ಪ್ರಗತಿಶೀಲರು ಯತ್ನಿಸಬೇಕು. ಅಲ್ಲಿನ ಹೋರಾಟಗಾರರಿಗೆ ಸರಕು ಸರಂಜಾಮುಗಳ ನೆರವೀಯಬೇಕು. ಮುಂಚೂಣಿಯ ರಾಷ್ಟ್ರಗಳನ್ನು ರಾಜನೈತಿಕವಾಗಿಯೂ ಸಾಂಪತ್ತಿಕವಾಗಿಯೂ ಎತ್ತಿ ಕಟ್ಟಿ ಬೆಂಬಲಿಸಬೇಕು.

ಮುಂಗಾರು

ಬುಧವಾರ, ಜುಲೈ, 23, 1986

ಗಡಿ ಮಾತುಕತೆ

ಭಾರತ-ಚೀನಾ ಗಡಿ ವಿವಾದದ ಬಗ್ಗೆ ಚೀನ ರಾಜಧಾನಿ ಬೀಜಿಂಗ್‌ನಲ್ಲಿ ಮಾತುಕತೆ ಇದೀಗ ನಡೆಯುತ್ತಿದೆ. ಇದು ಈ ಸರಣಿಯಲ್ಲಿ ಏಳನೇ ಸುತ್ತಿನ ಮಾತುಕತೆಯಾಗಿದೆ. ಕಳೆದೈದು ವರ್ಷಗಳಿಂದ ಗಡಿ ಮಾತುಕತೆಯ ಹೊಸ ಉಪಕ್ರಮ ನಡೆಯುತ್ತಿದೆ. ಅದಕ್ಕೆ ಹಿಂದೆ 1962ರಗಡಿ ಯುದ್ಧದ ಬಳಿಕ ಸುಮಾರು ಎರಡು ದಶಕಗಳ ಕಾಲವೂ ನಮ್ಮೆರಡು ದೇಶಗಳೊಳಗೆ ಬಾಂಧವ್ಯವೆಂಬುದು ವಸ್ತುಶಃ ಸ್ಥಗಿತಗೊಂಡಿತ್ತು. ಗಡಿಯಲ್ಲಿ ಉದ್ರಿಕ್ತ ಸ್ಥಿತಿ ಇಲ್ಲದಿದ್ದರೂ ಅನಿಶ್ಚಯ ಇತ್ತು. ಲಢಾಕಿನಲ್ಲಿ ಸುಮಾರು ನಾಲ್ಕು ಸಾವಿರಚದರ ಮೈಲು ಪ್ರದೇಶವನ್ನು ಚೀನ ಆಕ್ರಮಿಸಿ ಕುಳಿತಿದೆ. ಇದರಲ್ಲಿ ಅಕ್ಸಾಯಿಚಿನ್ ಪ್ರದೇಶವೂ ಸೇರಿದೆ.

ಚೀನ ಹಿಮಾಲಯದ ಅನೇಕ ಪ್ರದೇಶಗಳು ತನ್ನದು ಎಂದು ಹೇಳತೊಡಗಿದ್ದು 1959 ರಲ್ಲಿ. ಆ ಕುರಿತು ಎರಡೂ ದೇಶಗಳ ಅಧಿಕಾರಿಗಳೊಳಗೆ ಮಾತುಕತೆಯೂ ಆಗಲೇ ಪ್ರಾರಂಭವಾಗಿತ್ತು. ಭಾರತದ ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಚೀನೀ ಪ್ರಧಾನಿ ಚೌಎನ್‌ಲೈ ಅವರ ಜತೆ ಈ ವಿಷಯದಲ್ಲಿ ಮಾತುಕತೆ ನಡೆಸಿದ್ದರು. ಚೀನಾ 1962ರಲ್ಲಿ ಪೂರ್ವ ಗಡಿಯ "ನೇಫಾ" ದಲ್ಲಿಯೂ ಪಶ್ಚಿಮದ ಲಢಾಕಿನಲ್ಲಿಯೂ ಆಕ್ರಮಣ ನಡೆಸಿದ್ದು ಮಾತುಕತೆಯ ಈ ಪ್ರಕ್ರಿಯೆ ನಡೆಯುತ್ತಿರುವಾಗಲೇ.

ಪರಸ್ಪರ ಬಾಂಧವ್ಯ ಹೆಚ್ಚಬೇಕು. ಹಾಗಾಗಬೇಕಿದ್ದರೆ ಪರಸ್ಪರರೊಳಗೆ ವಿವಾದವಿರುವ ಗಡಿ ಪ್ರಶ್ನೆಯೂ ಇತ್ಯರ್ಥವಾಗಬೇಕು ಎಂಬ ತಿಳುವಳಿಕೆ ಎರಡೂ ದೇಶಗಳ ಜನರಲ್ಲಿ ಹಾಗೂ ನಾಯಕರಲ್ಲಿ ಉಂಟಾದದ್ದು ಈಗಿನ ಮಾತುಕತೆಗೆ ಹಿನ್ನೆಲೆ ಎನ್ನಲಡ್ಡಿಯಿಲ್ಲ. ಗಡಿ ವಿಚಾರದಲ್ಲಿ ಎಷ್ಟೇ ಭಾವುಕತೆಯಿದ್ದರೂ ಇಂತಹ ಒಂದು ವಿಚಾರವನ್ನು ವರ್ಷಾನುಗಟ್ಟಲೆ ಕೊಳೆಯಲು ಬಿಡುವುದರಿಂದ ಜನ ಸಮುದಾಯಗಳ ಮೈತ್ರಿ-ಪ್ರಗತಿಗೆ ಹಾನಿಯಿದೆ ಎಂಬುದನ್ನು ಎರಡು ದೇಶಗಳವರು ಅರ್ಥಮಾಡಿಕೊಂಡಿದ್ದಾರೆ ಎಂಬುದು ಈ ಮಾತುಕತೆಗಳು ನಡೆದು ಬಂದ ದಾರಿಯನ್ನು ಪರಿಶೀಲಿಸಿದರೆ ಗೋಚರವಾಗುತ್ತದೆ.

ಗಡಿ ಪ್ರಶ್ನೆಯಲ್ಲದೆ ಚೀನ ಬಾಂಧವ್ಯದಲ್ಲಿ ಹಲವಾರು ಇತರ ಕಿರಿಕಿರಿಗಳೂ ಇದ್ದವು. ಭಾರತ-ಪಾಕಿಸ್ತಾನ ಬಾಂಧವ್ಯದ ವಿಚಾರದಲ್ಲಿ ಚೀನ ವಹಿಸಿದ ನಿಲುಮೆ ಇವುಗಳಲ್ಲಿ ಒಂದು. ಚೀನದ ಈ ನಿಲುಮೆ ಇತ್ತೀಚೆಗೆ ಸೌಮ್ಯವಾಗಿದೆ. ಕಾಶ್ಮೀರದ ವಿಚಾರ ತೆಗೆದುಕೊಂಡು ಭಾರತವನ್ನು ಟೀಕಿಸುವ ಪ್ರವೃತ್ತಿಯನ್ನು ಚೀನ ಇತ್ತೀಚೆಗೆ ನಿಲ್ಲಿಸಿಬಿಟ್ಟಿದೆ. ಬದಲಾಗಿ ಸಿಮ್ಲಾ ಒಡಂಬಡಿಕೆಯನ್ವಯ ಬಗೆಹರಿಸಿಕೊಳ್ಳಿ ಎಂದು ಚೀನದವರು ಹೇಳತೊಡಗಿದ್ದಾರೆ. ಇದು ಭಾರತ-ಚೀನಾ ಬಾಂಧವ್ಯದ ನಡುವೆ ಪಾಕಿಸ್ತಾನದ ವಿಚಾರವನ್ನು ನುಸುಳಲು ಬಿಡದೇ ಇರುವ ಚೀನೀಯರ ರಾಜನೈತಿಕ ಬುದ್ಧಿವಂತ್ರೆಯನ್ನು ತೋರಿಸುತ್ತದೆ. ಹಾಗೆಯೇ ಸಿಕ್ಕಿಂನ ಪ್ರಶ್ನೆ. ಸಿಕ್ಕಿಂ ಭಾರತದಲ್ಲಿ ವಿಲಯನಗೊಂಡ ವಿಚಾರವನ್ನು ಚೀನ ಇನ್ನೂ ಮಾನ್ಯ ಮಾಡಿಲ್ಲ. ಆದರೂ ಅದನ್ನೊಂದು ಪ್ರಮುಖ ಪ್ರಶ್ನೆಯನ್ನಾಗಿ ಅದು ಮಾಡಿಲ್ಲ.

ಗಡಿ ವಿವಾದದಲ್ಲಿಯೂ ಕೂಡ ಚೀನ ವಾಸ್ತವಿಕತೆಯನ್ನು ಅರ್ಥಮಾಡಿಕೊಂಡು ಹೊಂದಾಣಿಕೆಯ ದಾರಿಯನ್ನು ಹಿಡಿಯುವ ಸೂಚನೆಗಳಿವೆ. ಗಡಿ ಪ್ರಶ್ನೆ ಮಹತ್ವದಲ್ಲ. ಮೊದಲು ವ್ಯಾಪಾರ, ಸಂಸ್ಕೃತಿ ಶೈಕ್ಷಣಿಕವೇ ಮೊದಲಾದ ಕ್ಷೇತ್ರಗಳಲ್ಲಿ ಮೈತ್ರಿ ಬೆಳೆಸೋಣ. ಇದರಿಂದ ಗಡಿ ಪ್ರಶ್ನೆ ತೀರ್ಮಾನ ಸುಲಭವಾಗುತ್ತದೆ ಎಂಬ ನಿಲುಮೆ ಚೀನಾದ್ದಾಗಿತ್ತು. ಇದಕ್ಕೆ ಭಾರತಒಪ್ಪಲಿಲ್ಲ. ಗಡಿಪ್ರಶ್ನೆಯೇ ಮೊದಲು ಚರ್ಚೆಗೆ ಬರಲಿ ಎಂದು ಪಟ್ಟು ಹಿಡಿಯಿತು. ಅದಕ್ಕೆ ಚೀನಾ ಒಪ್ಪಿದೆ.

ಗಡಿ ಬಗ್ಗೆ ಸಮಗ್ರ ಒಪ್ಪಂದವಾಗಲಿ ಎಂಬುದು ಚೀನದ ಈ ಮೊದಲಿನ ನಿಲುವು. ಅದರ ಹಿನ್ನೆಲೆ ಇಷ್ಟೆ. ಚೀನ ಈಗ ಲಢಾಕಿನ ಬಹುಭಾಗ ಆಕ್ರಮಿಸಿ ಕೂತಿದೆ. ಅಕ್ಸಾಯಿ ಚೀನ್ ತನ್ನದೆಂದು ಹೇಳುತ್ತಿದೆ. ಪೂರ್ವದಲ್ಲಿ ಅರುಣಾಚಲ ಪ್ರದೇಶದ ಬಹುದೊಡ್ಡ ಭಾಗ ತನ್ನದೆಂದು ಹಕ್ಕುಸ್ಥಾಪಿಸಿದೆ. ಸಮಗ್ರ ಒಪ್ಪಂದದಲ್ಲಿ ಅರುಣಾಚಲದ ಹಕ್ಕನ್ನು ಭಾರತಕ್ಕೆ ಬಿಟ್ಟು ಪಶ್ಚಿಮದಲ್ಲಿ ಅಕ್ಸಾಯಿ ಚಿನ್ ಭೂ ಪ್ರದೇಶವನ್ನು ತಾನೇ ಉಳಿಸಿಕೊಳ್ಳುವ-ಅಂದರೆ ಈಗ ನಡೆಸಿರುವ ಆಕ್ರಮಣಕ್ಕೆ ಅಧಿಕೃತ ಮುದ್ರೆಯೊತ್ತುವ ತಂತ್ರಗಾರಿಕೆ-ಅಷ್ಟೆ

ಇದಕ್ಕಾಗಿಯೆ ಚೀನ ಮಾತುಕತೆ ರಾಜಕೀಯ ಮಟ್ಟದಲ್ಲಿ ನಡೆಯಬೇಕು ಎನ್ನುತ್ತಿದೆ. ಕೊನೆಗೂ. ಅದು ಸಮಗ್ರ ಒಡಂಬಡಿಕೆಯ ಪಟ್ಟನ್ನು ಸಡಿಲಿಸಿದೆ. ಪ್ರತಿ ವಿಭಾಗವನ್ನು ಬಿಡಿಯಾಗಿ ಪರಿಗಣಿಸಿ ಚರ್ಚಿಸಲು ಒಪ್ಪಿದೆ. ಈಗ ಹಾಗೆಯೇ ಮಾತುಕತೆ ನಡೆಯುತ್ತಿದೆ.

ನೀರು ಬಿದ್ದರೆ ಯಾವ ಕಡೆಗೆ ಹರಿಯುತ್ತದೆ ಎಂಬ ತತ್ವದ ನೆಲೆಯಲ್ಲಿ ಗಡಿವಿಂಗಡಿಸಬೇಕು ಎಂಬುದು ಭಾರತದ ನಿಲುವು. ಬ್ರಿಟಿಷ್ ಆಳ್ವಿಕೆ ವೇಳೆ ಮ್ಯಾಕ್ ಮಹೋನ್ ಎಂಬ ಸರ್ವೇಯರ್ ಹಿಮಾಲಯುದ್ದಕ್ಕೂ ಗುರುತಿಸಿದ ಬ್ರಿಟಿಷ್ ಭಾರತದ ಗಡಿಯು ಹೆಚ್ಚು ಕಡಿಮೆ ಈತತ್ವಕ್ಕೆ ಅನುಗುಣವಾಗಿಯೇ ಉಂಟು. ಈ ತತ್ವದನ್ವಯ ಅಕ್ಸಾಯಿ ಚಿನ್ ಭಾರತದ್ದು. ಚೀನಆಕ್ರಮಿಸಿದ ಲಢಾಕಿನ ಭಾಗವೂ ಭಾರತದ್ದು.

ಕೊನೆಗೂ ಮಾತುಕತೆಗಳು ಪ್ರಾರಂಭಗೊಂಡಿವೆ. ಪರಿಹಾರ ಕಂಡು ಬಂದಿಲ್ಲವಾದರೂ ಈ ಪ್ರಕ್ರಿಯೆಯಲ್ಲಿ ಪ್ರಗತಿ ಇಲ್ಲ ಎನ್ನುವಂತಿಲ್ಲ. ಪರಸ್ಪರ ನಿಲುಮೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವುದು ಇದರಿಂದ ಸಾಧ್ಯವಾಗಿದೆ. ಗಡಿ ಹೊರತು ಬೇರೆ ಕೆಲವು ಕ್ಷೇತ್ರಗಳಲ್ಲಿಯೂ ಮೈತ್ರಿ ಸಾಧ್ಯವಾಗಿದೆ. ಈ ಎಲ್ಲ ಬೆಳವಣಿಗೆಗಳೂ ಸ್ವಾಗತಾರ್ಹ ನೆರೆಹೊರೆಯ ಎರಡು ರಾಷ್ಟ್ರಗಳೊಳಗೆ ಸುಮಧುರ ಬಾಂಧವ್ಯ ಇಲ್ಲವೆಂದಾದರೆ ಜನಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಆತಂಕ ಇರುತ್ತದೆ. ಅಭಿವೃದ್ಧಿಯಾಗದೆ ಕುಂಟುತ್ತದೆ. ಶಕ್ತಿ – ಸಂಪನ್ಮೂಲವೆಲ್ಲ ಸಮರ ಸಿದ್ಧತೆಗಾಗಿ ವೆಚ್ಚವಾಗುತ್ತದೆ.

ಕೊಡು-ಕೊಳ್ಳುವ, ಹೊಂದಾಣಿಕೆಯ ನೀತಿಯಿಂದ ಗಡಿ ಪ್ರಶ್ನೆ ಬಗೆಹರಿಸಿಕೊಳ್ಳುವುದು ವಿಹಿತ. ಅಂಥ ಹೊಂದಾಣಿಕೆಗೆ ದೊಡ್ಡ ರಾಷ್ಟ್ರೀಯ ತ್ಯಾಗವೇನೂ ಬೇಕಾಗಲಾರದು.

ಮುಂಗಾರು
ಗುರುವಾರ, ಜುಲೈ, 24, 1986

ಭಾಷೆಗೇಕೆ ವಿರೋಧ?

ಅಸ್ಸಾಮಿನ ಕಾಚಾರ್ ಜಿಲ್ಲೆಯಲ್ಲಿ ಕ್ಷೋಭೆ ಎದ್ದಿದೆ. ಕರೀಂಗಂಜ್ ಪಟ್ಟಣದಲ್ಲಿಯೂ ಸಿಲ್ಚಾರ್‌ನಲ್ಲಿಯೂ ಗಲಭೆಗಳಾಗಿವೆ. ಕರೀಂಗಂಜ್‌ನಲ್ಲಿ ಬಂದ್ ನಡೆದ ವೇಳೆ ಪರಿಸ್ಥಿತಿ ಪರಿಶೀಲನೆಗಾಗಿ ಬಂದ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ ಮಹಂತ ಅವರ ಮುಂದೆ ಕರಿ ಪತಾಕೆ ಪ್ರದರ್ಶನ ನಡೆಯಿತು. ಆ ವೇಳೆ ಹಿಂಸೆ ಸ್ಫೋಟಗೊಂಡು ಪೊಲೀಸರಿಂದ ಗೋಲೀಬಾರ್ ಆಯಿತು. ಈ ಹಿಂಸೆಯಲ್ಲಿ ಆರು ಮಂದಿ ಸತ್ತರು ಐವತ್ತರಷ್ಟು ಜನ ಗಾಯಗೊಂಡರು.

ಈ ಕ್ಷೋಭೆಗೆ ಕಾರಣ ಮಹಂತ ಸರಕಾರದ ಭಾಷಾ ನೀತಿ. ಅಸ್ಸಾಮ್ ರಾಜ್ಯದ ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲಿ ಎಂಟನೇ ತರಗತಿಯಿಂದ ತೊಡಗಿ ಅಸ್ಸಾಮಿ ಭಾಷೆಯನ್ನು ಮೂರನೆ ಭಾಷೆಯಾಗಿ ಕಡ್ಡಾಯವಾಗಿ ಕಲಿಯಬೇಕು ಎಂಬ ಮಾಧ್ಯಮಿಕ ಶಿಕ್ಷಣ ಮಂಡಳಿಯ ಸುತ್ತೋಲೆಯೊಂದು ಈ ಅನಾಹುತವನ್ನು ಮಾಡಿದೆ.

ಈ ಸುತ್ತೋಲೆ ಚಳವಳಿ ಸ್ಫೋಟಗೊಳ್ಳಲು ತುರ್ತಿನ ಕಾರಣವನ್ನು ಒದಗಿಸಿತು. ಅಸ್ಸಾಮಿನ ಬಗ್ಗೆ ಆ ಪ್ರದೇಶದ ಮಂದಿಯ ಪ್ರತಿರೋಧ ಬಹಳ ಹಿಂದಿನಿಂದಲೂ ಉಂಟು. ಐವತ್ತನೇ ದಶಕದ ಆದಿಯವರೆಗೂ ಕಾಚಾರ್ ಜಿಲ್ಲೆಯಲ್ಲಿ ಅಸ್ಸಾಮಿ ಭಾಷೆಯ ಜತೆಗೆ ಬಂಗಾಳಿ ಕೂಡ ಅಧಿಕೃತ ಭಾಷೆಯಾಗಿತ್ತು. ಭಾಷಾವಾರು ಪ್ರಾಂತ್ಯ ರಚನೆ ಆದ ಬಳಿಕ ಆಡಳಿತೆಯಲ್ಲಿ ಬಂಗಾಳಿಯ ಸ್ಥಾನಮಾನ ಹೋಯಿತು. ಕಾಚಾರ್ ಜಿಲ್ಲೆಯಲ್ಲಿ ಬಂಗಾಳಿಗಳೇ ಬಹುಸಂಖ್ಯೆಯಲ್ಲಿದ್ದಾರೆ. ಅಲ್ಲಿನ ಹಿಂದುಗಳೂ ಮುಸ್ಲಿಮರೂ ಹೆಚ್ಚಿನವರೂ ಬಂಗಾಳಿಯನ್ನೇ ಮಾತನಾಡುವವರು. ಇವರೆಲ್ಲ ಪಶ್ಚಿಮ ಬಂಗಾಳದಿಂದಲೂ ಬಾಂಗ್ಲಾ ದೇಶದಿಂದಲೂ ವಲಸೆ ಬಂದು ಉದ್ಯೋಗ ಹುಡುಕಿಕೊಂಡು ನೆಲೆ ನಿಂತವರು. ಇವರು ಹಿಂದೆಯೂ ಅಸ್ಸಾಮಿ ಆಧಿಪತ್ಯದ ವಿರುದ್ಧ ಬಂಡೆದ್ದವರು. ಇತ್ತೀಚೆಗಷ್ಟೇ ಕಾಚಾರ್‌ನ ಪಟ್ಟಣಗಳಲ್ಲಿ ಹಲವಾರು ಬಂಗಾಳಿಗಳ ಕಟ್ಟಡಗಳನ್ನು ನೆಲಸಮಮಾಡಿ ಅತಂತ್ರರನ್ನಾಗಿ ಮಾಡಲಾಗಿತ್ತು.

ಕಳೆದ ವಾರಹಾದಿಯಲ್ಲಿ ಹಿಂಸೆಯ ಕಿಚ್ಚು ಹೊತ್ತಿ ಉರಿಯಲು ಈ ಹಿನ್ನೆಲೆಯೇ ಕಾರಣ. ಆದರೆ ಇದು ಎಷ್ಟರ ಮಟ್ಟಿಗೆ ಸಮರ್ಥನೀಯ ಎಂಬುದನ್ನು ಅವರ ಪೈಕಿ ವಿವೇಕ ಹೊಂದಿದವರು ವಿವೇಚನೆ ಮಾಡಬೇಕಾಗಿತ್ತು. ಈ ಮಂದಿ ಬೇರೊಂದು ಪ್ರದೇಶದಿಂದ ಬಂದು ಅಸ್ಸಾಮಿನಲ್ಲಿ ನೆಲೆ ನಿಂತವರು. ಆ ರಾಜ್ಯದ ಜನಸಮುದಾಯದೊಡನೆ, ಅವರ ಭಾಷೆ, ಸಂಸ್ಕೃತಿ, ಕಲೆಗಳೊಡನೆ ಮಿಳಿತರಾಗಿ ಬಾಳಬೇಕಾದ ಕರ್ತವ್ಯ ಅವರದ್ದು. ಅಸ್ಸಾಮಿನಲ್ಲಿದ್ದುಕೊಂಡೂ ತಮ್ಮದೊಂದು ಬೇರೆ ಬಿಡಾರವನ್ನು ಅವರು ಕಟ್ಟಿಕೊಳ್ಳುವುದಾಗುವುದಿಲ್ಲ. ಸಾಮರಸ್ಯದ ಬದುಕಿನ ಅಭಿಲಾಷೆ ಅವರದ್ದಾಗಿದ್ದರೆ ಈ ಮಂದಿ ಅಲ್ಲಿನ ಅಧಿಕೃತ ಭಾಷೆಯನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ. ಅಸ್ಸಾಂ ಸರಕಾರ ಅಲ್ಲಿನ ಜನಗಳ ಆಶೋತ್ತರಗಳನ್ನು ಪ್ರತಿನಿಧಿಸುವಂತಹದ್ದು. ಅದು ಹೊರಡಿಸಿದ ಸುತ್ತೋಲೆ ಅಸ್ಸಾಮೀಯರ ಆಶಯವನ್ನು ಹೇಳುತ್ತದೆ. ಅವರಲ್ಲಿ ಅಸಂಬದ್ಧವಾದುದೇನೂ ಇಲ್ಲ. ಎಂಟನೇ ತರಗತಿಯಿಂದ ಮುಂದೆ ಅಸ್ಸಾಮೇತರರು ಅಸ್ಸಾಮಿ ಭಾಷೆಯನ್ನು ಮೂರನೇ ಭಾಷೆಯಾಗಿ ಕಲಿಯತಕ್ಕದ್ದು ಎಂದು ಮಾತ್ರ ಅದು ಹೇಳುತ್ತದೆ. ಅಲ್ಪಸಂಖ್ಯಾತರ ಮಾತೃಭಾಷೆಯ ಕಲಿಕೆಗೆ ಅಡ್ಡಿಯನ್ನೇನೂ ಅದು ಹೇರಿಲ್ಲ. ಅಸ್ಸಾಮಿಯನ್ನು ಮೊದಲ ಭಾಷೆಯಾಗಿ ಹೇರಿಲ್ಲ. ವಿವಿಧ ಭಾಷಾ ರಾಜ್ಯಗಳು ಈ ದೇಶದ ವಾಸ್ತವಿಕತೆ. ಅದನ್ನು ಒಪ್ಪಿಕೊಳ್ಳುವುದರಲ್ಲೇ ವಿವೇಕ ಇದೆ.

ಅದೇನೇ ಇದ್ದರೂ ಅಸ್ಸಾಮ್ ಸರಕಾರ ಈ ಚಳವಳಿಯನ್ನು ಚಾಕಚಕ್ಯತೆಯಿಂದ ನಿರ್ವಹಿಸಿದ್ದರೆ ಪರಿಸ್ಥಿತಿಯು ಹಿಂಸೆಯತ್ತ ತಿರುಗುವುದನ್ನು ತಪ್ಪಿಸಬಹುದಾಗಿತ್ತು. ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಪೊಲೀಸರು ಸಜ್ಜಾಗಿರಲಿಲ್ಲ ಎಂಬೊಂದು ಆರೋಪವಿದೆ. ಅಲ್ಲದೆ ಅತ್ಯಂತ ಸೂಕ್ಷ್ಮವಾದ ಭಾವುಕತೆಯನ್ನು ಪ್ರಚೋದಿಸುವ ಭಾಷೆಯ ವಿಷಯ ಇದಾದ್ದರಿಂದ ಸರಕಾರದ ಮುಖಂಡರು ಸಂಬಂಧಪಟ್ಟ ಸಮುದಾಯಗಳ ಪ್ರತಿನಿಧಿಗಳನ್ನು ಮೊದಲೇ ಕರೆದು ಚರ್ಚಿಸಿ ಮಧ್ಯ ಮಾರ್ಗವೊಂದನ್ನು ಅನುಸರಿಸಬಹುದಾಗಿತ್ತು.

ಆಡಳಿತ ಅನುಭವದ ಅಭಾವದಿಂದ ಹೀಗಾಗಿರಬಹುದು. ಆ ರಾಜ್ಯದ ನೌಕರಶಾಹಿಯೂ ಅಸ್ಸಾಂ ಆಂದೋಲನದ ಅಲೆಯಲ್ಲಿ ಏರಿಬಂದ ಈ ಸರಕಾರವನ್ನು ಹಣ್ಣು ಮಾಡುವುದಕ್ಕೆ ಸಮಯ ಕಾಯುತ್ತಿದೆ ಎನ್ನುವುದೂ ನಿಜವೆ. ನೌಕರ ಶಾಹಿಯ ಅಸಹಕಾರವೂ ಈ ಕ್ಷೋಭೆಯ ಬೆಂಕಿಗೆ ಇಂಧನ ಸುರಿದಿರಬಹುದು. ಈ ಎಲ್ಲ ಹಿನ್ನಲೆಯಲ್ಲಿ ಆಂದೋಲನ ನಾಯಕರು ಎಚ್ಚರದಿಂದಿರಬೇಕಾದ ಅಗತ್ಯವುಂಟು. ಭಾಷೆಯ ಪ್ರಶ್ನೆಯೇ ಕಾರಣವಾಗಿ ಪ್ರಾದೇಶಿಕ ಆಶೋತ್ತರಗಳನ್ನು ಸಾಕಾರಗೊಳಿಸುವ ಅಸ್ಸಾಂ ಆಂದೋಲನದ ವ್ಯಾಪಕ ಧ್ಯೇಯೋದ್ದೇಶಗಳು ಕರಗಿ ಹೋಗಬಾರದು.

ಮುಂಗಾರು

ಭಾನುವಾರ, ಜುಲೈ 27, 1986

ಬಿಚ್ಚು ಮನಸ್ಸು ಬೇಕು

[illegible] ಸಿಖ್ ಭಯೋತ್ಪಾದಕರು ಮುಕ್ತಸರದಲ್ಲಿ ಹದಿನೈದು ಮಂದಿ ಬಸ್ ಪ್ರಯಾಣಿಕರನ್ನು ಕಗ್ಗೊಲೆ ಮಾಡಿರುವ ಘಟನೆ ಈ ದೇಶದ ವಿಚಾರವಂತರೆಲ್ಲರೂ [illegible]ಶ್ಚರ್ಯಗಳಿಂದ ನಡುಗುವಂತೆ ಮಾಡಿದೆ. ಮಾನವೀಯತೆಯೇ ಮರುಗುವಂತಾಗಿದೆ. ಪಂಜಾಬು ಎತ್ತ ಸಾಗುತ್ತಿದೆ. ಈ ದೇಶ ಅದನ್ನು ಎತ್ತ ನೂಕುತ್ತಿದೆ ಎಂದು ಚಿಂತಿಸುವಂತಾಗಿದೆ.

ಮುಕ್ತಸರದಲ್ಲಿ ನಡೆದಿರುವ ನರಮೇಧ ಎಲ್ಲರ ಎದೆಯನ್ನು ತಲ್ಲಣಗೊಳಿಸುವಂತಹದ್ದು ಎಂಬುದರಲ್ಲಿ ಎರಡು ಮಾತಿಲ್ಲ. ಸುಮಾರು ಒಂದು ದಶಕದಿಂದ ಬೆಳೆದು ಬಂದಿರುವ ಪಂಜಾಬು ಕ್ಷೋಭೆಯ ವೃತ್ತಾವಳಿಗಳ ಸಿಂಹಾವಲೋಕನ ಮಾಡಿದರೆ ಮುಕ್ತಸರದಲ್ಲಿ ನಡೆದಂತಹ ಕೀಳು ಮಟ್ಟದ [illegible] ಘಟನೆಗಳು ಕಣ್ಮುಂದೆ ನಿಲ್ಲು[illegible] ಅಮೃತಸರದ ಸ್ವರ್ಣ ದೇವಾಲಯದಲ್ಲಿ [illegible] ಕಾರ್ಯಾಚರಣೆಯನ್ನು ಈ ದೇಶದ [illegible] ನ್ನು ಸಿಖ್ಖರ ವಿರುದ್ಧ ನಡೆದ ಪ್ರಹಾರವೆಂದೇ, ಕೊಲೆಯಾದುದನ್ನೂ ಅದರ ಪರಿಣಾಮವಾಗಿ ರಾಜಧಾನಿಯಲ್ಲಿ ಸುಮಾರು [illegible] ಸಾವಿರದಷ್ಟು ಮಂದಿ ಸಿಕ್ಖರು ಗುಂಪಿನ ಹಿಂಸೆಗೆ ಸಿಕ್ಕಿ ಸಾಯುವಂತೆ ಸತ್ತದ್ದನ್ನೂ ಅನಿವಾರ್ಯವಾ[illegible] ಈ ಪಟ್ಟಿಗೆ ಸೇರಿಸಲೇ ಬೇಕಾಗುತ್ತದೆ. ಇವೆಲ್ಲ ಘಟನೆಗಳೂ ಮಾನವೀಯತೆಯು ಮರುಗುವಂತೆ ಮಾಡುವ ವಿದ್ಯಮಾನಗಳೇ ಆಗಿವೆ.

ಪಂಜಾಬಿನ ಜನಗಳ 'ಮುಚ್ಚು ಮನಸ್ಸಿ'ನ [illegible] ಹಿಂಸಾಕೃತ್ಯಗಳನ್ನು ಇಲ್ಲಿಗೇ ನಿಲ್ಲಿಸಿ ಶಾಂತಿಯನ್ನು ತರಲು ಈ ದೇಶದ ರಾಜಕಾರಣಿಗಳು ಸೇನಾಪಡೆಯೂ ಪೊಲೀಸ್ ಇಲಾಖೆಯೂ ಸಾಕಷ್ಟು ಕೆಲಸ ಮಾಡಿವೆ. ಅವುಗಳೇನೂ ಮಾಡಿಲ್ಲ ಎನ್ನಲುಬಾರದು. ರಾಜಕಾರಣಿಗಳು ಪಂಜಾಬಿನ ಕ್ಷೋಭೆಯ ಬಗ್ಗೆ ಸಮಾಲೋಚನೆ-ಸಂಧಾನಗಳನ್ನು ನಡೆಸಿದ್ದಾರೆ. ಒಡಂಬಡಿಕೆಯೊಂದನ್ನೂ ಮಾಡಿಕೊಳ್ಳಲಾಗಿದೆ. ಅದರ ಪರಿಣಾಮವಾಗಿಯೇ ಆ ರಾಜ್ಯದಲ್ಲಿ ಚುನಾವಣೆ ನಡೆದು ಸಿಕ್ಖರ ಪ್ರಾತಿನಿಧ್ಯ ವಹಿಸುವ ಅಕಾಲಿದಳವೇ ಅಧಿಕಾರವನ್ನು ವಹಿಸಿಕೊಂಡಿದೆ. ಇತ್ತ ಪೊಲೀಸ್ ಇಲಾಖೆಯೂ [illegible] ಭಯೋತ್ಪಾದಕರ ಮೂಲೋತ್ಪಾಟನೆಗೆ ಕಾರ್ಯಕ್ರಮಗಳನ್ನು ರಚಿಸಿ ಅನುಷ್ಠಾನಕ್ಕೆ ತರುತ್ತಿದೆ.

ಪೊಲೀಸ್ ಕಾರ್ಯಾಚರಣೆಯೂ. ಅದು [illegible] ರಂಗಕ್ಕೆ ಬಂದು ಕ್ರಮ[illegible] ಪಂಜಾಬಿನ ಸಮಸ್ಯೆ ನಿವಾರಣೆಯಾದೀತು [illegible] ದೊಡ್ಡ ತಪ್ಪು [illegible] ಹೇಳಲೇಬೇಕಾಗಿದೆ. ಪೊಲೀಸ್ ಇಲಾಖೆ ಪಂಜಾಬಿನಲ್ಲಿ ವೃತ್ತಿಗೆಟ್ಟ [illegible] ಸಮರ್ಥರಾದ ರಿಬೈರೋ ಅವರನ್ನು [illegible] ಅವರು ಕಾರ್ಯಾಚರಣೆಗಳ ಹೊಣೆ ಹಾಕಿದರು. ಬಂಧನ ಸತ್ರ ನಡೆಸಿದರು. ಪೊಲೀಸರೊಡನೆ ಘರ್ಷಣೆಗಳಲ್ಲಿ ಅನೇಕ ಭಯೋತ್ಪಾದಕರು ಮೃತರಾದರು. ಭಯೋತ್ಪಾದಕರ ಹುಟ್ಟೀ ಅಡಗಿ ಹೋಯಿತೆಂದು ಹೊಸ್ಸೆ ಹೊಸ್ಸೆ ವರದಿ ಬಂತು. ಆದರೆ ಅದಷ್ಟೇ [illegible] ಅಲ್ಲಿ ಭಯೋತ್ಪಾದಕತೆ ನಿಂತಿಲ್ಲ. ಹಿಂದೂಗಳ ಮೇಲೆ ದೌರ್ಜನ್ಯ ನಡೆದಿದೆ. ಸಾಮಾನ್ಯ ಸಿಕ್ಖರೂ ಕೂಡಾ ತಾವು [illegible] ಹೇಳಿಕೊಳ್ಳ[illegible] ಪರಿಸ್ಥಿತಿ [illegible] ಹಿಂದೂಗಳಿಗೆ ಪಂಜಾಬಿನಲ್ಲಿ ನೆಲೆ ಇಲ್ಲ[illegible] ಕಡಿಮೆಯಾಗಿಲ್ಲ.

ಇದು ಹೀಗೇಕೆ ಹೀಗಾಗಿದೆ ಎಂಬ ಬಗ್ಗೆ ಮೂಲವನ್ನು ಶೋಧಿಸುವ ಮುಕ್ತ ಮನಸ್ಸು ನಮ್ಮ ರಾಜಕೀಯ ಮುಖಂಡರಿಗೆ ಇಲ್ಲವಾದುದೇ ಈ ದುರಂತಕ್ಕೆ ಕಾರಣ. ರಾಷ್ಟ್ರೀಯ ಏಕತೆ-ಸಮಗ್ರತೆ, ಸಾರ್ವಭೌಮತೆ, ಭಾವೈಕ್ಯ ಎಂಬ ಮಂತ್ರಗಳನ್ನು ಜಪಿಸುತ್ತ, ಈ ದೇಶದ ವಾಸ್ತವಿಕತೆಯನ್ನು ಕಾಣಲು ನಿರಾಕರಿಸಿದ್ದರಲ್ಲಿಯೇ ಪಂಜಾಬಿನ ಕ್ಷೋಭೆಯ ಹುಟ್ಟಿನ ಕಾರಣಗಳಿವೆ. ಇಂದು ಈ ದೇಶದ ಏಕತೆಯೂ ಸಮಗ್ರತೆಯೂ ರಾಜಕಾರಣಿಗಳೆಂಬ ಸಂದೋಹದ ಕಲ್ಪನಾವಿಲಾಸದಲ್ಲಷ್ಟೇ ಉಳಿದಿದೆಯೆಂದು ಹೇಳದೆ ವಿಧಿಯಿಲ್ಲ. ವಾಸ್ತವಿಕತೆಗೆ ಸ್ಪಂದಿಸದಿರುವ ಜಿಗುಟುತನವೇ ಬುದ್ಧಿ ಜಡತನವೇ ಈ ಪರಿಸ್ಥಿತಿಯನ್ನು ತಂದಿದೆಯಲ್ಲದೆ ಬೇರೆಯಲ್ಲ.

ಇಂದು ಈ ರಾಷ್ಟ್ರೀಯ ಏಕತೆಯ ಸವಾಲನ್ನು ಈ ದೇಶದ ಎಲ್ಲ ರಾಜಕಾರಣಿಗಳು, ಎಲ್ಲ ಪ್ರಜ್ಞಾವಂತರು, ವಿಚಾರಶೀಲರು, ಅಂಗೀಕರಿಸಬೇಕಾಗಿದೆ. ಇದು ಕೆಲವೇ ಮಂದಿ ರಾಜಕಾರಣಿಗಳ ಕೈಯಲ್ಲಿ ಬಿಡಬೇಕಾದ ಸಂಗತಿಯಾಗಿ ಉಳಿದಿಲ್ಲ. ಮೊದಲು ಈ ಸಮಸ್ಯೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕು. ಒಂದನೆಯದಾಗಿ ಇದು ರಾಜಕೀಯವಾದದ್ದು. ಅದರ ಜತೆಗೆ ಸಿಕ್ಖರ ಧಾರ್ಮಿಕ ಆಶೋತ್ತರಗಳೂ ಬೆಸೆದುಕೊಂಡಿವೆ. ಎರಡನೆಯದಾಗಿ ಈ ಸಮಸ್ಯೆ ಆರ್ಥಿಕವೂ ಸಾಮಾಜಿಕವೂ ಆದದ್ದು. ಪ್ರತ್ಯೇಕ ಆಡಳಿತ ಅಸ್ತಿತ್ವ ಸಿಕ್ಖರ ರಾಜಕೀಯ ಆಶೋತ್ತರ. ಆಳವನ್ನು ಕೆದಕಿ ನೋಡಿದರೆ ಅದು ಈ ದೇಶದ ಪ್ರಾದೇಶಿಕ-ಭಾಷಾ ಸ್ವಂತ ಅಸ್ತಿತ್ವವನ್ನು ಬೆಳೆಸಿಕೊಂಡ ಎಲ್ಲ ಸಮುದಾಯಗಳವರದ್ದೂ ಆಗಿದೆ.

ಪಂಜಾಬಿನಲ್ಲಿ ಸಿಕ್ಖರು ಆರ್ಥಿಕವಾಗಿ ಶೋಷಣೆಗೆ ಸಿಕ್ಕಿದವರು ಎಂಬುದು ನಿಸ್ಸಂದೇಹ. ಅನೇಕ ವರ್ಷಗಳಿಂದ ಪಂಜಾಬಿನ ಸಿಕ್ಖರನ್ನು ಕಡೆಗಣಿಸಲಾಗಿದೆ. ಆ ರಾಜ್ಯದ ಕೈಗಾರಿಕೆ ಹಾಗೂ ವಾಣಿಜ್ಯದ ನೂರಕ್ಕೆ ತೊಂಭತ್ತು ಪಾಲು ಹಿಂದೂ ಸಮುದಾಯದ ಮೇಲ್ವರ್ಗದವರ ಹಿಡಿತದಲ್ಲಿರುವುದು ಸುಳ್ಳಲ್ಲ.

ಇಂದು ನಡೆಯುತ್ತಿರುವ ಹಿಂದೂಗಳ ಕೊಲೆ ಈ ಮೇಲ್ವರ್ಗಕ್ಕೆ ಸೇರಿದ ಲಾಲ್-ಪಾಲ್‌ಗಳಿಗೆ ಸೀಮಿತವಾಗಿದೆ. ಸಿಕ್ಖರು ಶೂದ್ರ ಸಮುದಾಯದ ಒಬ್ಬನೇ ಒಬ್ಬ ಹಿಂದೂವನ್ನು ಕೊಂದ ನಿದರ್ಶನ ಪಂಜಾಬಿನಲ್ಲಿ ಸಿಗಲಾರದು. ಉದ್ಯಮಿಗಳಾಗಿ, ವ್ಯಾಪಾರಿಗಳಾಗಿ, ದಲ್ಲಾಳಿಗಳಾಗಿ ಅಧಿಕಾರಿ ವರ್ಗದವರಾಗಿ ಜನಸಾಮಾನ್ಯರಾದ ಸಿಕ್ಖರನ್ನು ಶೋಷಿಸಿದ ಚಾರಿತ್ರಿಕ ಸತ್ಯವನ್ನು ಅರಿತು ಅದಕ್ಕೆ ಪರಿಹಾರ ದೊರಕಿಸುವುದು ಹಾಗೂ ಅಲ್ಲಿನ ಜನರ ರಾಜಕೀಯ ಆಶೋತ್ತರಗಳನ್ನರಿತು ಹೊಸ ವ್ಯವಸ್ಥೆಯನ್ನು ರೂಪಿಸುವುದು. ಇದೇ ಪಂಜಾಬಿನ ಕ್ಷೋಭೆಗೆ ಮುಖ್ಯ[illegible]ಹೊರತು ಪೊಲೀಸ್ ಬಂದೋಬಸ್ತಲ್ಲ. ಮಿಲಿಟರಿ ಕಾರ್ಯಾಚರಣೆಯೂ ಅಲ್ಲ. ಕೊಲ್ಲುವುದರಿಂದ, ಸೆರೆಹಿಡಿದು ಜೈಲಿಗೆ ನೂಕುವುದರಿಂದ ಹೆದರಿಕೆ-ಬೆದರಿಕೆಗಳಿಂದ ಜನರ ಆಶೋತ್ತರಗಳನ್ನು ದಮನಿಸುವುದಕ್ಕಾಗದು. ಸರಿಯೋ ತಪ್ಪೋ ಪಂಜಾಬಿನ ಮುಕ್ಕಾಲಂಶ ಜನರೂ ಇಂದು ಸಿಡಿದು ನಿಂತಿದ್ದಾರೆ. ನರಮೇಧದಂತಹ ಹೇಯಕೃತ್ಯವನ್ನು ಬೆಂಬಲಿಸುತ್ತಿದ್ದಾರೆ. ಇದನ್ನು ತಿಳಿದುಕೊಳ್ಳದಿರುವುದರಿಂದ, ಭಾವುಕರಾಗಿ ಎದೆಬಡಿದುಕೊಳ್ಳುವುದರಿಂದ ಸಮಸ್ಯೆ ದೂರಾಗದು. ಸಮಸ್ಯೆಯನ್ನು ಜಿಜ್ಞಾಸೆಗೊಳಪಡಿಸಬೇಕು. ಅದರ ಮೂಲ ಅರಿಯಬೇಕು. ಬಿಚ್ಚು [illegible] ಅದಕ್ಕೆ ಬೇಕು. ಆಗ ಮಾತ್ರ ಪರಿಹಾ[illegible]

ಮುಂಗಾರು

ಗುರುವಾರ, ಜುಲೈ 31, 1986

ಸರಿ ದಾರಿಯಲ್ಲ

ಪಂಜಾಬಿನಲ್ಲಿ ಪಾಕಿಸ್ತಾನಕ್ಕೆ ಒತ್ತಾಗಿರುವ ಜಿಲ್ಲೆಗಳಲ್ಲಿ ಗಡಿಯನ್ನು ಬಂದ್ ಮಾಡಿ "ಭದ್ರತಾ ವಲಯ"ವೊಂದನ್ನು ನಿರ್ಮಿಸಲು ಕೇಂದ್ರ ಸರಕಾರ ತೀರ್ಮಾನಿಸಿದೆ. ಹೀಗೆ ಭದ್ರತಾ ವಲಯ ನಿರ್ಮಿಸುವ ಕಾರ್ಯವನ್ನು ಸಂಸತ್ತಿನಲ್ಲಿ ಶಾಸನವೊಂದನ್ನು ರಚಿಸುವ ಮೂಲಕ ಮಾಡಬೇಕೆಂದು ಆಳುವ ಪಕ್ಷವೂ ವಿರೋಧ ಪಕ್ಷಗಳೂ ಜತೆ ಸೇರಿ ತೀರ್ಮಾನಿಸಿವೆ. ಸರಕಾರವು ತರಲು ಉದ್ದೇಶಿಸಿದ್ದ ಸಂವಿಧಾನ ತಿದ್ದುಪಡಿ ವಿಧೇಯಕವೊಂದನ್ನು ಈ ಒಡಂಬಡಿಕೆ ಆದ ಪರಿಣಾಮವಾಗಿ ಹಿಂದೆಗೆದುಕೊಳ್ಳಲು ನಿರ್ಧರಿಸಲಾಗಿದೆ.

ಗಡಿ ರಾಜ್ಯವೊಂದರ ಯಾವುದೇ ಭಾಗವನ್ನು "ರಕ್ಷಿತ ಪ್ರದೇಶ"ವೆಂದು ನಮೂದಿಸಿ ಕಾನೂನು ಪಾಲನೆ ಹಾಗೂ ಭದ್ರತೆಗೆ ಸಂಬಂಧಿಸಿದಂತೆ ಯಾವುದೇ ನಿಯಮವನ್ನು ಅನುಷ್ಠಾನಕ್ಕೆ ತರುವ ವಿಶೇಷಾಧಿಕಾರವನ್ನು ಕೇಂದ್ರ ಸರಕಾರ ತರ ಬಯಸಿದ ರಾಜ್ಯಾಂಗ ತಿದ್ದುಪಡಿ ವಿಧೇಯಕವು ಸರಕಾರಕ್ಕೆ ನೀಡುತ್ತದೆ. ರಾಜ್ಯ ಸರಕಾರದ ಯಾವ ಕಾನೂನು ಕೂಡ ಸಂಬಂಧ ಪಟ್ಟ "ರಕ್ಷಿತ ಪ್ರದೇಶ"ಕ್ಕೆ ಅನ್ವಯವಲ್ಲವೆಂದು ವಿಧಿಸುವ ಅಧಿಕಾರ ಕೂಡ ಈ ತಿದ್ದುಪಡಿ ಮೂಲಕ ಕೇಂದ್ರ ಸರಕಾರಕ್ಕೆ ದೊರೆಯುತ್ತದೆ.

ರಾಜ್ಯಗಳ ಯಾದಿಗೆ ಸೇರಿದ ವಿಚಾರಗಳ ಬಗ್ಗೆ ಕೂಡಾ ಕಾನೂನು ಮಾಡುವ ಅಧಿಕಾರವೊಂದು ರಾಜ್ಯಾಂಗದ 249ನೇ ವಿಧಿಯ ಮುಖಾಂತರ ಸಂಸತ್ತಿಗೆ ಉಂಟು ಎಂಬ ವಿಚಾರವನ್ನು ವಿರೋಧ ಪಕ್ಷ ನಾಯಕರು ಸರಕಾರದ ವರಿಷ್ಠರ ಗಮನಕ್ಕೆ ತಂದಿದ್ದಾರೆ. ಈ ವಿಧಿಯು ಸಂಸತ್ತಿಗೆ ಬಲು ಮಹತ್ವದ ಅಧಿಕಾರವನ್ನು ನೀಡಿದೆ. ಭಾರತದ ಯಾವುದೇ ನಿರ್ದಿಷ್ಟ ಪ್ರದೇಶವೊಂದಕ್ಕೆ ಸಂಬಂಧಿಸಿ ರಾಜ್ಯದ ಪಟ್ಟಿಗೇ ಸೇರಿದ ವಿಷಯಗಳ ಕುರಿತೇ ಆದರೂ, ಯಾವುದೇ ವಿಚಾರದಲ್ಲಿ ಕಾನೂನು ನಿರ್ಮಿಸಲು ಸಂಸತ್ತಿಗೆ 249ನೇ ವಿಧಿಯು ಅಧಿಕಾರ ನೀಡುತ್ತದೆ. ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಇದನ್ನು ಮಾಡಬಹುದೆಂದು ಕಲಮು ಹೇಳುತ್ತದೆ. ಇಂತಹ ವಿಷಯದ ಬಗ್ಗೆ ಸಂಸತ್ತು ಕಾನೂನು ನಿರ್ಮಿಸಬೇಕು ಎಂದು 249ನೇ ವಿಧಿಯನ್ನುದ್ದೇಶಿಸಿ ರಾಜ್ಯಸಭೆಯು ಮೂರನೇ ಎರಡಂಶ ಬಹುಮತದೊಡನೆ ನಿರ್ಣಯವೊಂದನ್ನು ಅಂಗೀಕರಿಸಿದರೆ ಹೀಗೆ ಕಾನೂನು ಮಾಡುವ ಅಧಿಕಾರ ಸಂಸತ್ತಿಗೆ ದೊರೆಯುತ್ತದೆ. ಇಂತಹ ಅಧಿಕಾರವು ಗರಿಷ್ಠ ಎರಡು ವರ್ಷಗಳ ಕಾಲ ಊರ್ಜಿತದಲ್ಲಿರುವುದು ಸಾಧ್ಯ.

ಇಂತಹ ಬಲು ಮಹತ್ವವಾದ ಸರ್ವ ವ್ಯಾಪಿಯಾದ ಅಧಿಕಾರದ ಅವಕಾಶವನ್ನು ರಾಜ್ಯಾಂಗದಲ್ಲಿ ಇಟ್ಟುಕೊಂಡೇ ಮತ್ತೆ ಹೊಸ ಅಧಿಕಾರವನ್ನು ಕೈಗೆ ತೆಗೆದುಕೊಳ್ಳಲು ರಾಜ್ಯಾಂಗವನ್ನು ತಿದ್ದಲು ಮನಮಾಡಿದ ಕೇಂದ್ರ ಸರಕಾರದ ನಾಯಕರ ನಡವಳಿಕೆ [illegible]ವಂತಿಕೆಯನ್ನು ಸೂಚಿಸುವುದಿಲ್ಲ. ಕೂಲಂಕಷ [illegible] ಪರಿಶೀಲಿಸಿದರೆ ಸರಕಾರ ತರಬಯಸಿದ ರಾಜ್ಯಾಂಗದ 370ನೇ ವಿಧಿಯನ್ನು ತಿದ್ದುವ ವಿಧೇಯಕದ ಕರಡಿಗೂ 249ನೇ ವಿಧಿಯಲ್ಲಿರುವ ಪಾಠಕ್ಕೂ ಯಾವ ದೊಡ್ಡ ವ್ಯತ್ಯಾಸವೂ ಇಲ್ಲ. ಈಗ ಇರುವ ಕಾನೂನುಗಳು ಏನು ಹೇಳುತ್ತವೆ ಎಂಬುದನ್ನು ತಿಳಿದುಕೊಳ್ಳದೆ, ಪರಿಸ್ಥಿತಿಯ ಅಧ್ಯಯನ ಮಾಡದೆ, ಪರಿಸ್ಥಿತಿಯನ್ನು ಎದುರಿಸಲು ಮಾಡಬೇಕಾದ್ದೇನು ಎಂಬ ಬಗ್ಗೆ ಚಿಂತೆ ಮಾಡದೆ ಅವಸರದಿಂದ ಹೊಸ ಸರ್ವವ್ಯಾಪಿ ಶಾಸನವೊಂದನ್ನು ಕೈಗೆತ್ತಿಕೊಳ್ಳಲು ಸರಕಾರ ಹೊರಟದ್ದು ಈ ಸರಕಾರ ಪಂಜಾಬಿನ ವಿದ್ಯಮಾನದಿಂದ ಬೆಚ್ಚಿದೆ, ಕಂಗಾಲಾಗಿದೆ ಎಂಬುದನ್ನು ಸೂಚಿಸುತ್ತದೆ.

ಪಂಜಾಬಿನ ರೋಗಕ್ಕೆ ಏನು ಮದ್ದು ಎಂಬುದನ್ನು ಸರಕಾರದ ವರಿಷ್ಠರು ಸರಿಯಾಗಿ ಚಿಂತಿಸುತ್ತಿಲ್ಲವೆಂಬುದಕ್ಕೆ ಅವರು ಉಗ್ರ ಶಾಸನದ ಆಯುಧವನ್ನು ಕೈಗೆ ತೆಗೆದುಕೊಳ್ಳಲು ಹೊರಟದ್ದೇ ನಿದರ್ಶನ. ಈ ದಾರಿ ಅಧಿಕಾರ ಕೇಂದ್ರೀಕರಣದ ದಾರಿ. ನಿಭಾಯಿಸಲು ಸಾಧ್ಯವಾಗದಷ್ಟು ಅಧಿಕಾರ ಇಂದು ಕೇಂದ್ರ ಸರಕಾರದ ಕೈಯಲ್ಲಿದೆ. ದೇಶದ ಯಾವ ಮೂಲೆಯಲ್ಲಿ ಹುಲ್ಲು ಅಲುಗಾಡಬೇಕಿದ್ದರೂ ದೆಹಲಿಯ ದೊರೆಗಳ ಅನುಮತಿ ಪಡೆದೇ ಆಗಬೇಕೆಂಬ ಪರಿಸ್ಥಿತಿ ಉಂಟು. ಇಂತಹದ್ದರಲ್ಲಿ ಭಯೋತ್ಪಾದಕತೆ ನಿವಾರಣೆ ಮಾಡಲು, ಗಡಿಯನ್ನು ಭದ್ರಗೊಳಿಸಲು ರಾಜ್ಯವೊಂದರಲ್ಲಿ ಕಾನೂನು ಶಾಂತಿ ಪಾಲನೆ ಮಾಡಲು ಹೊಸ ಶಾಸನ ಮಾಡಲು ಹೊರಟದ್ದು, ಹಾಗೆ ಶಾಸನ ಮಾಡಿ, ಸೈನ್ಯವನ್ನು ಪೋಲೀಸರನ್ನು ನೇಮಿಸಿ ದಂಡ ಪ್ರಯೋಗ ಮಾಡುವುದು ಹಳೆಯ ದಾರಿಯನ್ನೇ ಸೂಚಿಸುತ್ತದೆ.

ಪಂಜಾಬಿನ ರೋಗಕ್ಕೆ ಆಗಬೇಕಾಗಿರುವುದು ಅಧಿಕಾರ ವಿಕೇಂದ್ರೀಕರಣದ ಮದ್ದು. ಅಧಿಕಾರದ ಕೇಂದ್ರೀಕರಣವೇ ಈ ರೋಗದ ಮೂಲ. ಅದಕ್ಕೆ ಮದ್ದು ಹುಡುಕುವ ಬದಲು ಸರಕಾರ ವಿರುದ್ಧವಾದ ದಿಕ್ಕಿನಲ್ಲಿ ನಡೆಯಲು ತೊಡಗಿದೆ. ಇದರಿಂದ ಪಂಜಾಬು ಸಮಸ್ಯೆ ಪರಿಹಾರ ಆಗುವುದಿಲ್ಲ. ಭಯೋತ್ಪಾದಕತೆಯೆಂದರೆ ದೇಶದ್ರೋಹವೆಂಬ ಭಾವುಕ ಉದ್ಗಾರಗಳಿಂದ ಭಯೋತ್ಪಾದಕತೆ ದೂರಾಗುವುದಿಲ್ಲ.

ಇಂದು ಕಾನೂನು ರಚನೆ ವಿಚಾರದಲ್ಲಿ ಹಲವು ತಲೆಗಳು ಒಟ್ಟು ಸೇರಿ ಚಿಂತಿಸಿ ಸುಲಭದ ದಾರಿಯೊಂದನ್ನು ಹುಡುಕಿದ ಹಾಗೆ ದೇಶದ ಹಿತದ ಬಗ್ಗೆ ಕಳಕಳಿಯುಳ್ಳ ಎಲ್ಲರೂ ಸೇರಿ ಚರ್ಚಿಸಿದರೆ ಪರಿಹಾರ ಕಂಡೀತು. ರಕ್ಷಿತ ಪ್ರದೇಶ ಎಂದು ಘೋಷಿಸುವುದು, ಗಡಿಯನ್ನು ಬಂದ್ ಮಾಡುವುದು, ಸೇನೆಯನ್ನು ನಿಯಮಿಸುವುದು, ವಿಚಾರಣೆಯಿಲ್ಲದೆ ಸೆರೆಯಲ್ಲಿಡುವುದು ಇದೆಲ್ಲವೂ ಮಾಮೂಲಿ ದಾರಿ. ಈ ಮಾಮೂಲಿ ವಿಧಾನಗಳಿಂದ ರಾಜಕೀಯ ಸಮಸ್ಯೆಯೊಂದನ್ನು ಬಗೆಹರಿಸುವುದಕ್ಕಾಗದು. ಅದಕ್ಕೆ ರಾಜಕೀಯ ಪರಿಹಾರವೇ ಬೇಕು. ಪಂಜಾಬಿನ ವಿಷಯದಲ್ಲಿ ಸೂಕ್ತ ರಾಜಕೀಯ ಪರಿಹಾರ ಈ ತನಕವೂ ಆಗಿಲ್ಲ.

ಮುಂಗಾರು
ಶುಕ್ರವಾರ, ಆಗಸ್ಟ್ 1, 1986

ಎಲ್ಲರನ್ನೂ ಸೇರಿಸಿಕೊಳ್ಳಿ

1-8-1986

ಕರ್ನಾಟಕ ರೈತ ಸಂಘದ ರಾಜ್ಯ ಸಮಿತಿಯ ಸಭೆ ನಡೆದು ಸಂಸ್ಥೆಯ ಪದಾಧಿಕಾರದಲ್ಲಿ ಬದಲಾವಣೆ ಆಗಿದೆ. ಸಂಘದ ಅಧ್ಯಕ್ಷರಾಗಿ ಹಿರಿಯ ರೈತ ಮುಂದಾಳು ಎಚ್. ಎಸ್. ರುದ್ರಪ್ಪ ಅವರನ್ನು ಪುನರಾಯ್ಕೆ ಮಾಡಲಾಗಿದ್ದು ಹೊಸ ಪ್ರಧಾನ ಕಾರ್ಯದರ್ಶಿಯಾಗಿ ಧಾರವಾಡ ಜಿಲ್ಲೆಯ ಬಾಬಾ ಗೌಡ ಪಾಟೀಲರ ಆಯ್ಕೆ ಆಗಿದೆ. ಈ ತನಕ ಸಂಘದ ಸಂಚಾಲಕರಾಗಿದ್ದ ಪ್ರೊ| ನಂಜುಂಡ ಸ್ವಾಮಿ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ.

ರೈತ ಸಂಘವೆಂಬುದು ಒಂದು ಜನಪರ ಸಂಸ್ಥೆ. ಅದಕ್ಕೆ ಚುನಾವಣೆ ನಡೆದು ಹೊಸ ಪದಾಧಿಕಾರದ ಆಯ್ಕೆ ಆಗುವುದು ಸ್ವಾಗತಾರ್ಹವೇ. ಕರ್ನಾಟಕ ರಾಜ್ಯ ರೈತ ಸಂಘದಲ್ಲಂತೂ ಆ ಸಂಸ್ಥೆ ಹುಟ್ಟಿದ 1980 ರಿಂದಲೂ ಚುನಾವಣೆಯೇ ನಡೆದಿರಲಿಲ್ಲ. ಸ್ಥಾಪಕ ಸಮಿತಿಯ ಪದಾಧಿಕಾರಿಗಳೇ ಈ ಚಳುವಳಿಯನ್ನು ನಡೆಸುತ್ತ ಬಂದಿದ್ದಾರೆ.

ರೈತ ಚಳುವಳಿ ಕರ್ನಾಟಕದಲ್ಲಿ ಪ್ರಾರಂಭದ ಹಂತದಲ್ಲಿ ರೈತಾಪಿ ಜನಸಮುದಾಯವನ್ನು ಸಾಕಷ್ಟು ಆಕರ್ಷಿಸಿತೆಂದೇ ಹೇಳಬೇಕು. ರೈತ ಸಮುದಾಯದ ಸಮಸ್ಯೆಗಳನ್ನೆತ್ತಿಕೊಂಡು ಅದು ಹೋರಾಟಗಳನ್ನು ನಡೆಸಿದ್ದಿದೆ. ಈ ಸಂಸ್ಥೆ ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಜನಮನದ ಆಸೆಯ ಗರಿ ಕೆದರಿಸಿದ್ದಿದೆ. ರೈತರು ಗುಂಪು ಗುಂಪಾಗಿ ಈ ಸಂಘವನ್ನು ಸೇರಿದ್ದಾರೆ. ಶಕ್ತಿಶಾಲಿಯಾದಂತಹ ಆಂದೋಲನವೊಂದರ ಕೇಂದ್ರ ಹೀಗೆ ಶಿವಮೊಗ್ಗ ಹಾಗೂ ಆಸುಪಾಸಿನ ಜಿಲ್ಲೆಗಳಲ್ಲಿ ವ್ಯೈದಳೆದಿದೆ.

ಆದರೆ ಇತ್ತೀಚಿಗಿನ ಒಂದೆರಡು ವರ್ಷಗಳಲ್ಲಿ ಈ ಚಳುವಳಿ ತಾನು ಹಿಡಿಯಬೇಕಾದ ದಾರಿಯನ್ನು ಕಂಡುಕೊಳ್ಳಲಾರದೆ ಜಡಪಡಿಸಿದ್ದುಂಟು. ಅದು ತೆಗೆದುಕೊಂಡ ನಿರ್ಣಯಗಳು, ಈ ಆಂದೋಲನದ ಸದಸ್ಯರೆಲ್ಲರಿಗೂ ಸ್ವೀಕಾರಾರ್ಹವೆಂದೆನಿಸದೆ ಹೋರಾಟ ಮುರುಟಿ ಹೋದದ್ದುಂಟು. ಅದರ ಬೆಂಬಲಿಗರು ಚದುರಿ ಹೋದ ವಿದ್ಯಮಾನ ನಡೆದದ್ದುಂಟು. ಎರಡು ವರ್ಷಗಳ ಹಿಂದೆ ರೈತ ಸಂಘ ನಡೆಸಿದ ರಾಸ್ತಾರೋಕೋ ಚಳುವಳಿ ಯಾವಫಲವನ್ನೂ ತಾರದೆ ಬಾಲ

ಸಂಸ್ಥೆಯ ನಿಲುಮೆಯಲ್ಲಿ ಕಾಣಿಸಿಕೊಳ್ಳಲು ಕಾರಣ. ಈ ಸಂಸ್ಥೆಯಲ್ಲಿ ವ್ಯಕ್ತಿಗಳು ತಮ್ಮ ಖಯಾಲಿಗೆ ತಕ್ಕಂತೆ ವ್ಯವಹರಿಸಿದ ನಿದರ್ಶನವಿದೆ. ಆದ್ದರಿಂದಲೇ ಹೀಗಾಗಿದೆ. ಜನಪರ ನೆಲೆಯಲ್ಲಿ ಸಂಸ್ಥೆ ಕಾರ್ಯವೆಸಗಿದ್ದರೆ, ರೈತರ ಸಮಸ್ಯೆಗಳನ್ನು ಆದ್ಯತೆಯ ನೆಲೆಯಲ್ಲಿ ಎತ್ತಿಕೊಂಡು ಹೋರಾಟಕ್ಕೆ ಅವರನ್ನು ಅಣಿಗೊಳಿಸಿದ್ದರೆ, ಹೋರಾಟದಲ್ಲಿ ಹೊಂದಾಣಿಕೆಯ ಮನೋವೃತ್ತಿಯನ್ನು ಅಳವಡಿಸಿಕೊಂಡಿದ್ದರೆ ಸಂಸ್ಥೆಯು ದುರ್ಬಲವಾಗುತ್ತಿರಲಿಲ್ಲ. ಬೆಳೆಯುತ್ತಿತ್ತು.

ರೈತರ ಆಂದೋಲನ ಬೆಳೆಯದೆ ದುರ್ಬಲವಾಗುತ್ತ ನಡೆದದ್ದಕ್ಕೆ ಅದರೊಳಗಿನ ವ್ಯಕ್ತಿಗಳ ತಾಕಲಾಟ ಒಂದು ಕಾರಣವೆನಿಸಿದರೆ ಗುಂಪುಗಾರಿಕೆ ಇನ್ನೊಂದು ಕಾರಣ. ಈ ಸಂಸ್ಥೆ ದೊಡ್ಡ ರೈತರ ಹಿತಾಸಕ್ತಿ ರಕ್ಷಣೆ ಕೋರುವಂತಹದ್ದು ಎಂಬ ಪ್ರಚಾರವೂ ನಡೆದಿತ್ತು. ಸಣ್ಣ ರೈತರು ಹಾಗೂ ಕೃಷಿ ಕೂಲಿಕಾರರು ಈ ಚಳುವಳಿಯನ್ನು ಸಂಶಯದಿಂದಲೇ ನೋಡಿದ್ದುಂಟು. ಚಳುವಳಿ ಜನಪರ ನೆಲೆಯಲ್ಲಿ ಸಂಘಟಿತವಾಗುತ್ತಿದ್ದರೆ, ಎರಡು ವರ್ಷಗಳ ಹಿಂದೆಯೇ ಅಧಿವೇಶನ ನಡೆದು, ಚುನಾವಣೆ ಜರಗಿ ಹೊಸ ನಾಯಕತ್ವವು ಕಾರ್ಯಕ್ರಮಗಳನ್ನು ಕೈಗೆ ತೆಗೆದುಕೊಳ್ಳುತ್ತಿದ್ದರೆ ವಿಕೃತಿಗಳು ಕಡಿಮೆಯಾಗಿ ಆಂದೋಲನವು ಬಲಯುತವಾಗಿ ಬೆಳೆಯುತ್ತಿತ್ತು. ಹಾಗಾಗದೆ ನಾಯಕತ್ವವು ಮನಸೋ ಇಚ್ಛೆ ವ್ಯವಹರಿಸಿದ್ದರ ಪರಿಣಾಮವಾಗಿ ಈ ಚಳುವಳಿಯೇ ಸಾರ್ವಜನಿಕರ ನಿಂದೆಗೆ ಗುರಿಯಾದದ್ದೂ ಉಂಟು. ಹೊಸ ನಾಯಕತ್ವ ಬಂದಿದೆ. ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾದ ರುದ್ರಪ್ಪನವರ ಅನುಭವಿ ನಾಯಕತ್ವ ಅದಕ್ಕಿದೆ. ಅವರು ಪ್ರಶ್ನಾತೀತರೂ ವಿವಾದಾತೀತರೂ ಆದ ಮುಖಂಡರೆನಿಸಿ ಸಂಘವನ್ನು ನಡೆಸಿಕೊಂಡು ಬಂದಿದ್ದಾರೆ. ಇದೀಗ ಯುವಕರ ತಂಡ ಕೆಲಸ ಕಾರ್ಯಗಳನ್ನು ನೋಡಿಕೊಂಡು ರೈತರ ಸಂಘಟನೆಗಾಗಿ ಮುಂದೆ ಬಂದಿದೆ. ಈ ಬದಲಾವಣೆ ಸ್ವಾಗತಾರ್ಹ. ಸಂಸ್ಥೆಯನ್ನು ಕಟ್ಟಿ ಬೆಳೆಸಲು, ರೈತರನ್ನು ಸಂಘಟಿಸಲು ಈಗಲೂ ಅವಕಾಶವಿದೆ. ಆಗಬೇಕಾದ ಕೆಲಸ ಬಹಳವಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಪತ್ರಿಕಾ ಪ್ರಕಟಣೆ

ದಿನಾಂಕ 14:1:2010

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ 13:1:2010ರ ರಾತ್ರಿಯಲ್ಲಿ ಸುಮಾರು 350 ಕೋಟಿ ರೂಪಾಯಿಗಳ ಕಾಮಗಾರಿಗಳ ಟೆಂಡರ್ ಪ್ರಕ್ರಿಯಿಯನ್ನು ಅಂತಿಮಗೊಳಸಿ ಕಾರ್ಯದೇಶ ನೀಡಿದೆ ಎಂದು ಕೆಲವು ಮಾಧ್ಯಮಗಳಲ್ಲಿ ಆಗಿರುವ ವರದಿ ಸಂಪೂರ್ಣ ನಿರಾಧರವಾಗಿದೆ.

ಹಾಗೆಯೇ ಈ ಟೆಂಡರ್ ಪ್ರಕ್ರಿಯೆಯಲ್ಲಿ ಸಿಬ್ಬಂದಿಗಳು ರಾತ್ರಿ ಪೂರ್ತಿ ಕಾರ್ಯನಿರತರಾಗಿದ್ದಾರೆಂಬುದು ಸಹ ಸಂಪೂರ್ಣ ಸುಳ್ಳಾಗಿರುತ್ತದೆ.

ಪ್ರಾಧಿಕಾರದ ವತಿಯಿಂದ ಕೈಗೆತ್ತಿಕೊಳ್ಳುವ ಕೆಲವು ಕಾಮಗಾರಿಗಳಗೆ ಕಾನೂನು ರೀತ್ಯ ಇ-ಪ್ರೆಕ್ಯೂರ್ ಮೆಂಟ್ ಮೂಲಕ ಟೆಂಡರ್‌ಗಳನ್ನು ಮಾತ್ರ ಆಹ್ವಾನಿಸಲಾಗಿದೆ. ಈ ಟೆಂಡರ್‌ಗಳ ಪ್ರಕ್ರಿಯೆ ಇನ್ನೂ ಎರಡು ತಿಂಗಳ ನಂತರ ಅಂತಿಮಗೊಳ್ಳಲಿದೆ. ಸದರಿ ಕಾಮಗಾರಿಗಳು 2009-2010ರ ಅನುಮೋದಿತ ಆಯವ್ಯಯ ಪಟ್ಟಿಯಲ್ಲಿ ಸೇರಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯು ದಿನ ನಿತ್ಯದ ಕಾರ್ಯವಾಗಿದ್ದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ಟೆಂಡರ್ ಕರೆಯುವ, ಕಾರ್ಯದೇಶ ನೀಡುವ, ಕಾಮಗಾರಿ ಚಾಲನೆ ನೀಡುವ ಪ್ರಕ್ರಿಯೆಯು ನಿರಂತರವಾಗಿ ಕಾನೂನು ರೀತ್ಯ ನಡೆಯುತ್ತಿರುತ್ತದೆ.

ದಿನಾಂಕ 13:1:2010 ರಂದು ಹನ್ನೊಂದು ವಿವಿಧ ಕಾಮಗಾರಿಗಳಗೆ ಟೆಂಡರ್ ಕರೆದಿದ್ದು ಇದರ ಮೊತ್ತ ಸುಮಾರು 95 ಕೋಟಿಯಾಗಿರುತ್ತದೆ. ಇದು ಪತ್ರಿಕಾ ಪ್ರಕಟಣೆಯೇ ಹೊರತು ಗುತ್ತಿಗೆದಾರರಿಗೆ ನೀಡಿರುವ ಕಾರ್ಯದೇಶವಲ್ಲ. ಈ ಟೆಂಡರ್‌ಗಳು ಅಂತಿಮಗೊಳ್ಳಸಲು ಇನ್ನೂ ಎರಡು ತಿಂಗಳ ಕಾಲಾವಕಾಶವಿರುತ್ತದೆ.

ಮುಂದುವರೆದು, ಈಗಾಗಲೇ ಸುಮಾರು ಎರಡು ತಿಂಗಳ ಹಿಂದೆ ಟೆಂಡರ್ ಕರೆದಿದ್ದ ಮೂರು ವಿದ್ಯುತ್ ಕಾಮಗಾರಿಗಳ ಆರ್ಥಿಕ ಬಿಡ್ ತೆರೆಯಲಾಗಿದೆ. ಇದರ ಮೊತ್ತ 7.62 ಕೋಟಿ ರೂ.ಗಳು ಕಾರ್ಯದೇಶ ನೀಡಿರುವುದಿಲ್ಲ.

ಕಾರಿ

ಕಾರ

ಮುಡಚಿದ ಘಟನೆ ಎಲ್ಲರ ನೆನಪಿನಲ್ಲಿ ಉಳಿಯುವಂತಹುದು. ಆನಂತರ ರೈತ ಸಂಘ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಣಯಿಸಿದ್ದು, ಈ ಸಾಹಸದಲ್ಲಿ ಮುಖಭಂಗ ಹೊಂದಿದ್ದು ಇವೆಲ್ಲವೂ ಇತ್ತೀಚಿನ ಇತಿಹಾಸ.

ಈ ಸಂಸ್ಥೆ ಹೀಗೆ ಒಂದಾದ ಮೇಲೊಂದರಂತೆ ತೆಗೆದುಕೊಂಡ ನಿರ್ಣಯಗಳು, ನಡೆಸಿದಂತಹ ಕಾರ್ಯಕ್ರಮಗಳು ವಿಫಲಗೊಳ್ಳುತ್ತ, ಸರಕಾರವನ್ನು ಎದುರು ಹಾಕಿಕೊಂಡು, ಸದಸ್ಯರನ್ನು ದೂರಮಾಡಿಕೊಂಡು ದುರ್ಬಲವಾಗುತ್ತ ನಡೆದಿದೆ. ಹೀಗಾದುದಕ್ಕೆ ಅದು ಜನಪರ ನೆಲೆಯಲ್ಲಿ ಕೆಲಸ ಮಾಡದಿರುವುದೇ ಕಾರಣ. ರೈತಸಂಘ ತನ್ನ ಬೇಡಿಕೆಗಳಿಗೆ ಅಸಾಧುವಾದುದನ್ನೂ ಅಸಾಧ್ಯವಾದುದನ್ನೂ ಸೇರಿಸುತ್ತ ಹೋಯಿತು. ಹೊಂದಾಣಿಕೆ ಸಾಧ್ಯವೇ ಆಗದ ನಿಲುವೆಯನ್ನು [illegible]ಮ ವಹಿಸಿದ್ದುಂಟು. ಸಹಕಾರಿ ಸಂಸ್ಥೆಗಳಿಂದ ರೈತರು ಪಡೆದ ಎಲ್ಲ ಸಾಲವನ್ನು ಮನ್ನಾ ಮಾಡಬೇಕು ಎಂಬಂತಹ ಬೇಡಿಕೆ ಇಂತಹವುಗಳಲ್ಲೊಂದು. ರೈತ ಸಂಘದ ಪದಾಧಿಕಾರಿಗಳಲ್ಲಿ ಕೆಲವರಿಗೆ ಹುದ್ದೆಯು ಮೂಲಗೇಣಿ ಹಕ್ಕಿನಂತಾದುದೇ ಇಂತಹ ವಿಕೃತಿಗಳು

ಈ ಚಳುವಳಿಯ ಗುರಿ ಒಂದೇ ಇರಬೇಕು. ಅದುವೇ ರೈತರು ಬೆಳೆದದ್ದಕ್ಕೆ ಲಾಭದಾಯಕವಾದ ಬೆಲೆಯನ್ನು ಒದಗಿಸುವುದು. ಮಧ್ಯವರ್ತಿಗಳಿಂದ ನಡೆಯುತ್ತಿರುವ ಅವರ ಶೋಷಣೆಯನ್ನು ನಿಲ್ಲಿಸುವುದು. ಇದು ಸಾಧಿತವಾದರೆ ಹೋರಾಟಕ್ಕೆ ಗೆಲುವು ದೊರೆತಂತೆ. ಸಾಲ ಮನ್ನಾ ಮುಂತಾದವುಗಳೆಲ್ಲ ತಾತ್ಕಾಲಿಕ ವಿಚಾರಗಳು ಇವುಗಳಲ್ಲಿ ಸಂಘ ಹೊಂದಾಣಿಕೆಗೆ ತಯಾರಿರಬೇಕು. ಆದರೆ ಮೂಲ ಉದ್ದೇಶವಾದ ಬೆಳೆಗೆ ಒಳ್ಳೆಯ ಬೆಲೆ ದೊರಕಿಸುವಂತಹದ್ದರಲ್ಲಿ ಹೊಂದಾಣಿಕೆ ಕೂಡದು.

ಹೊಸ ನಾಯಕತ್ವ ತಕ್ಷಣ ಸಂಘಟನೆಗಿಳಿಯಬೇಕು. ಊರೂರುಗಳಲ್ಲಿ ಸಮಿತಿಗಳನ್ನು ರಚಿಸಬೇಕು, ರೈತರ ಸಮಸ್ಯೆಗಳನ್ನೆತ್ತಿಕೊಂಡು ಹೋರಾಟಕ್ಕಿಳಿಯಬೇಕು. ಪರಿಸ್ಥಿತಿಗೆ ಸ್ಪಂದಿಸುವ ಪುರೋಗಾಮಿ ಶಕ್ತಿಯಾಗಿ ಅದು ತಲೆ ಎತ್ತಬೇಕಿದ್ದರೆ ಭೂರಹಿತ ಕೃಷಿ ಕೂಲಿಕಾರರನ್ನು ಜತೆಗೆ ಸೇರಿಸಿಕೊಂಡು ಮುಂದಡಿಯಿಡಬೇಕು. ಈ ನಿಟ್ಟಿನಲ್ಲಿ ಹೊಸ ನಾಯಕತ್ವ ಯೋಚನೆ ಮಾಡಬೇಕು.

ಮುಂಗಾರು
ಗುರುವಾರ, ಆಗಸ್ಟ್ 7, 1986

ಬ್ರಿಟನಿನ ಸಣ್ಣತನ

ಬ್ರಿಟನೊಂದನ್ನು ಹೊರತುಪಡಿಸಿ ಕಾಮನ್ವೆಲ್ತಿನ ಕಿರು ಶೃಂಗಸಭೆಯು ದಕ್ಷಿಣ ಆಫ್ರಿಕದ ಮೇಲೆ ಕೆಲವಾರು ಉಗ್ರರೂಪದ ಆರ್ಥಿಕ ದಿಗ್ಬಂಧನಗಳನ್ನು ಹೇರಲು ತೀರ್ಮಾನಿಸಿದೆ. ಬ್ರಿಟನ್ ಈ ತೀರ್ಮಾನದಲ್ಲಿ ಒಳಗೊಂಡಿರುವ ಎಲ್ಲಾ ಕ್ರಮಗಳಿಗೆ ತನ್ನ ಒಪ್ಪಿಗೆ ನೀಡಿಲ್ಲ. ದಕ್ಷಿಣ ಆಫ್ರಿಕಕ್ಕೆ ಪ್ರವಾಸವನ್ನು ನಿಷೇಧಿಸುವಂತಹ ಒಂದೆರಡು ಹೆಜ್ಜೆಗಳಿಗೆ ಮಾತ್ರವೇ ಒಪ್ಪಿಗೆ ಸೂಚಿಸಿ ದಕ್ಷಿಣ ಆಫ್ರಿಕವನ್ನು ಆರ್ಥಿಕವಾಗಿ ಸಂಕಷ್ಟಕ್ಕೀಡುಮಾಡುವ ಇತರ ಹಲವಾರು ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಕಡಿದುಕೊಳ್ಳಲು ನಿರಾಕರಿಸಿದೆ.

ಏನೇ ಇದ್ದರೂ ಕಾಮನ್ವೆಲ್ತಿನ ಕಿರು ಶೃಂಗಸಭೆ ದಕ್ಷಿಣ ಆಫ್ರಿಕದ ಮೇಲೆ ಒತ್ತಡ ತರುವ ಈ ಕಾರ್ಯಕ್ರಮದಲ್ಲಿ ಸಾಧಿಸಿದ ಈ ಸೀಮಿತ ಯಶಸ್ಸು ಕೂಡ ಮಹತ್ವವಾದದ್ದು. ದಕ್ಷಿಣ ಆಫ್ರಿಕದ ಮೇಲೆ ಆರ್ಥಿಕ ದಿಗ್ಬಂಧನ ಹೇರುವ ವಿಚಾರದಲ್ಲಿ ಕಾಮನ್ವೆಲ್ತ್ ಸಂಸ್ಥೆ ಒಡೆದುಹೋಗದ ಹಾಗೆ ನೋಡಿಕೊಂಡ ಸಾಧನೆ ಮುತ್ಸದ್ದಿತನದಿಂದ ಕೆಲಸಮಾಡಿದ ಭಾರತದ ಪ್ರಧಾನ ಮಂತ್ರಿ ರಾಜೀವ ಗಾಂಧಿಯವರದ್ದಾಗಿದೆ. ದಕ್ಷಿಣ ಆಫ್ರಿಕದ ಮೇಲೆ ಸಂಪೂರ್ಣವಾದ, ಉಗ್ರವಾದ ಆರ್ಥಿಕ ದಿಗ್ಬಂಧನ ಹೇರಬೇಕೆಂದು ಆಫ್ರಿಕದ ದೇಶಗಳು ಪಟ್ಟುಹಿಡಿದಿದ್ದವು. ಇಂಥ ಕ್ರಮಕ್ಕೆ ಬ್ರಿಟನ್ ಒಪ್ಪದೆ ಹೋದರೆ ಅದನ್ನು ಕಾಮನ್‌ವೆಲ್ತಿನಿಂದಲೇ ಹೊರದೂಡಬೇಕೆಂಬಷ್ಟರ ಮಟ್ಟಿಗೆ ಈ ದೇಶಗಳ ಮನಸ್ಸು ಕಠೋರವಾಗಿದ್ದವು. ಇದೀಗ ಈ ವಿಚಾರದಲ್ಲಿ ಹೊಂದಾಣಿಕೆಯೊಂದು ಸಾಧ್ಯವಾಗಿದೆ. ದಕ್ಷಿಣ ಆಫ್ರಿಕದ ಬಿಳಿಯ ಸರಕಾರವು ತನ್ನ ಬಹುಮತೀಯ ಪ್ರಜೆಗಳ ಮೇಲೆ ನಡೆಸುತ್ತಿರುವ ಅನಾಚಾರಗಳನ್ನು ಜಗತ್ತಿನ ಸಾರ್ವಜನಿಕಾಭಿಪ್ರಾಯದ ಬೆಳಕಿಗೆ ಒಡ್ಡುವುದಕ್ಕೆ ಜಾಗತಿಕ ಮಟ್ಟದ ಸಂಸ್ಥೆಯಾದ ಕಾಮನ್ವೆಲ್ತ್‌ಗೆ ಸೀಮಿತಪ್ರಮಾಣದಲ್ಲಿಯಾದರೂ ಸಾಧ್ಯವಾಗಿದೆ.

ಆದರೆ ಈ ಪ್ರಸಂಗದಲ್ಲಿ ಬ್ರಿಟನಿನ ಪ್ರಧಾನ ಮಂತ್ರಿ ಮಾರ್ಗರೆಟ್ ಥ್ಯಾಚರ್ ವಹಿಸಿದ ನಿಲುವು ಮಾತ್ರ ಅಸಹ್ಯ ಹುಟ್ಟಿಸುವಂತಹದ್ದು. ಇಂದು ಜಗತ್ತಿನಲ್ಲಿ ಬೇರಾವ ದೇಶವೂ ದಕ್ಷಿಣ ಆಫ್ರಿಕದ ಅಲ್ಪಸಂಖ್ಯಾತ ಬಿಳಿಯ ಸರಕಾರವನ್ನು ಬೆಂಬಲಿಸುತ್ತಿಲ್ಲ. ಅಮೆರಿಕದ ಅಧ್ಯಕ್ಷ ರೊನಾಲ್ಡ್ ರೇಗನ್ ಕೂಡ ಕೆಲವು ಆರ್ಥಿಕ ದಿಗ್ಬಂಧನಗಳಿಗೆ ಒಪ್ಪಿದ್ದಾರೆ. ಅಮೆರಿಕದ ಸೆನೆಟ್ 13-2 ಬಹುಮತದಿಂದ ದಕ್ಷಿಣ ಆಫ್ರಿಕಕ್ಕೆ ಆರ್ಥಿಕ ದಿಗ್ಬಂಧನ ಹೇರಲು ತೀರ್ಮಾನಿಸಿದೆ. ಅಮೆರಿಕದ ಬೆಂಬಲ ದಕ್ಷಿಣ ಆಫ್ರಿಕಕ್ಕಿದ್ದರೆ ಅದು ಬಹಿರಂಗವಾಗಿ ಅಲ್ಲ, ಗುಟ್ಟಾಗಿ ಇರಬಹುದು. ಜಗತ್ತಿನ ಸಾರ್ವಜನಿಕ ಅಭಿಪ್ರಾಯ ಬೆಳೆದಂತೆ ಇಂಥ ಗುಟ್ಟಿನ ಚಕ್ಕಂದವೂ ನಿಂತು ಹೋದೀತು.

ಆದರೆ ಬ್ರಿಟನಿನ ಥ್ಯಾಚರ್ ನಿಲುವು ಮಾತ್ರ ಅಕ್ಷಮ್ಯ. ಬ್ರಿಟನ್ ಪ್ರಜಾತಂತ್ರದ ಮೌಲ್ಯಗಳ ಆಡುಂಬೊಲ. ಜನಾಧಿಪತ್ಯ ವಿಕಾಸವಾಗುತ್ತ ಬಂದ ಕ್ಷೇತ್ರ ಅದು. ನಿಷ್ಪಕ್ಷಪಾತಿಗಳ, ವಿಚಾರವಂತರ, ವಿವೇಕಿಗಳ ನಾಡು ಎಂದು ಖ್ಯಾತವಾದದ್ದು ಇಂಗ್ಲೆಂಡ್. ಅದರ ಚರಿತ್ರೆಯೇ ಮಾನವ ಕುಲಕ್ಕೆ ಹಿತಮಾಡುವ ತತ್ವಗಳಿಗೂ ಸಿದ್ಧಾಂತಗಳಿಗೂ ಆದರ್ಶಗಳಿಗೂ ನೀರೆರೆದು ಪೋಷಿಸಿದೆ. ಬಯಸಿ ಬಂದವರಿಗೆಲ್ಲ ಅರಿವು ಮೂಡಿಸುವ ಬರವಣಿಗೆಯ ಭಂಡಾರವಿರುವ ಇಂಗ್ಲಿಷ್ ಭಾಷೆಯ ಜನ್ಮಭೂಮಿ ಅದು.

ಇಂಥ ಒಂದು ದೇಶ ದಕ್ಷಿಣ ಆಫ್ರಿಕದಂತಹ ನಿರ್ಲಜ್ಜ, ಪಕ್ಷಪಾತಿ ಆಳ್ವಿಕೆಯ ಬೆನ್ನೆಲುಬಾಗಿ ನಿಂತಿರುವುದು ಅದು ಪೋಷಿಸಿಕೊಂಡು ಬಂದಿರುವ ಮುಕ್ತ ಚಿಂತನೆಗೆ ಹಾನಿಕಾರಕ. ದಕ್ಷಿಣ ಆಫ್ರಿಕದಲ್ಲಿ ವಿಶಾಲ ಜನಸಮುದಾಯಕ್ಕೆ ತಮ್ಮನ್ನು ತಾವು ಆಳಿಕೊಳ್ಳುವಂತಹ ಮೂಲಭೂತ ಹಕ್ಕುಗಳನ್ನು ನಿರಾಕರಿಸಲಾಗಿದೆ. ಇಡೀ ಮನುಕುಲವೇ ನಾಚಿಕೆಯಿಂದ ತಲೆತಗ್ಗಿಸಬೇಕಾದ ವರ್ಣಭೇದವೆಂಬ ಅಸಹ್ಯ ವ್ಯವಸ್ಥೆ ಅಲ್ಲಿದೆ. ಈ ಮೂಲಕ ಮನುಷ್ಯನ ಘನತೆಗೇ ಅಪಮಾನವನ್ನು ಅಲ್ಲಿನ ಬಿಳಿಯರ ಪ್ರಭುತ್ವ ಮಾಡುತ್ತಿದೆ.

ಇಂತಹ ಒಂದು ಮಾನವ ಕುಲ ವಿರೋಧಿಯಾದ ಸರಕಾರವನ್ನು ಹಿಡಿದೆತ್ತಿ ನಿಲ್ಲಿಸುವ ಕೆಲಸವನ್ನು ಥ್ಯಾಚರ್ ಸರಕಾರ ಬಿಡುವುದು ಕ್ಷೇಮ. ಇಂಥ ಕೃತ್ಯಗಳಿಂದ ಜಗತ್ತಿನ ರಾಷ್ಟ್ರಗಳ ಕೂಟದಲ್ಲಿ ಬ್ರಿಟನಿಗೆ ಮಾನ-ಮರ್ಯಾದೆಗಳು ನಷ್ಟವಾಗುತ್ತವೆ. ರಾಜೀವ ಗಾಂಧಿಯವರು ಹೇಳುವಂತೆ ಬ್ರಿಟನ್ ಈಗ ಮೊದಲಿನಂತೆ ಕಾಮನ್ವೆಲ್ತಿನ ನಾಯಕ ರಾಷ್ಟ್ರವಾಗಿ ಉಳಿದಿಲ್ಲ. ಮೌಲ್ಯಗಳನ್ನು ಗೌರವಿಸುವ ರಾಷ್ಟ್ರವೆಂಬ ಬ್ರಿಟನಿನ ಹೆಸರು ಕೂಡ ಬೇಗನೇ ಕರಗಿ ಹೋಗಲಿದೆ. ಇಂದು ಥ್ಯಾಚರ್ ತಳೆದಿರುವ ನಿಲುವು ಆತ್ಮಘಾತಕವಾದದ್ದು. ಅದು ಈಗ ಮಾರ್ಗರೆಟ್ ಥ್ಯಾಚರ್‌ಗೆ ಮನವರಿಕೆ ಆಗದೆ ಇರಬಹುದು, ಮನವರಿಕೆ ಆಗಿಲ್ಲ ಎನ್ನುವುದು ಆಕೆಯ ನಿಲುವಿನಿಂದ ವ್ಯಕ್ತವಾಗುತ್ತದೆ. ಆಕೆ ದೊಡ್ಡ ನಾಯಕಿ ಅಲ್ಲ, ತುಂಬ ಸಣ್ಣವರು ಎಂಬುದನ್ನಿದು ಸ್ಪಷ್ಟಪಡಿಸುತ್ತದೆ. ಬ್ರಿಟನ್ ಗಾತ್ರದಲ್ಲಿ ಮಾತ್ರವಲ್ಲ ವ್ಯಕ್ತಿತ್ವದಲ್ಲಿಯೂ ಈಗ ಸಣ್ಣದಾಗಿದೆ ಎಂಬುದಕ್ಕೂ ಈ ನಿಲುವೇ ನಿದರ್ಶನ.

ಮುಂಗಾರು, ಆಗಸ್ಟ್ 8, 1986. ಪುಟ ನಾಲ್ಕು

ಮುಂಗಾರು

ಶುಕ್ರವಾರ, ಆಗಸ್ಟ್ 8 1986

ರಾಜೀವರ ನಿಲುಮೆ

ಬೆಳಗಾವಿ ಗಡಿ ಪ್ರಶ್ನೆಯನ್ನು ಮತ್ತೆ ತೆರೆಯುವ ಪ್ರಶ್ನೆಯೇ ಇಲ್ಲವೆಂದು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ಬೆಂಗಳೂರಿನ ಪುಟ್ಟ ಬಾಲಕಿಯೊಬ್ಬಳಿಗೆ ಬರೆವ ಮಾರೋಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಈ ಪತ್ರದಲ್ಲಿ ಪ್ರಧಾನಮಂತ್ರಿ ಉಲ್ಲೇಖಿಸಿರುವ ವಿಚಾರಗಳು ಇಡಿಯ ಪ್ರಶ್ನೆಯನ್ನು ಅವರು ಕೂಲಂಕಷವಾಗಿ ಪರಿಶೀಲಿಸಿರುವುದನ್ನೂ ಆಮೂಲಾಗ್ರವಾಗಿ ಅರ್ಥ ಮಾಡಿಕೊಂಡಿರುವುದನ್ನು ಸಾಬೀತು ಪಡಿಸುತ್ತದೆ.

ಈ ಸಂಕ್ಷಿಪ್ತ ಪತ್ರದಲ್ಲಿ ಪ್ರಧಾನಮಂತ್ರಿ ಬೆಳಗಾವಿ ವಿವಾದಕ್ಕೆ ಸಂಬಂಧಪಟ್ಟಂತೆ ಬಹಳಷ್ಟು ವಿಷಯಗಳನ್ನು ಹೇಳಿದಂತಾಗಿದೆ. ಬೆಳಗಾವಿ ನಗರ ಮತ್ತಿತರ ಪ್ರದೇಶಗಳ ಗಡಿವಿವಾದವನ್ನು ಬಗೆಹರಿಸಲು ನ್ಯಾಯಾಂಗ ಆಯೋಗಕ್ಕೆ ಮಹಾರಾಷ್ಟ್ರ ಸರಕಾರವೇ ಕೇಳಿತ್ತು ಎಂದಿರುವ ಪ್ರಧಾನ ಮಂತ್ರಿ ಆಯೋಗದ ವರದಿ ಬಂದ ಮೇಲೆ ಅದು ತಮಗನುಕೂಲವಿಲ್ಲ ಎಂಬುದಕ್ಕಾಗಿ ಅದನ್ನು ತಿರಸ್ಕರಿಸಿದ್ದಾರೆ. ಹೀಗೆ ತಾವೇ ಕೇಳಿದ ಆಯೋಗದ ವರದಿಯೊಂದನ್ನು ತಿರಸ್ಕರಿಸುವುದು ನೈತಿಕವಲ್ಲವೆಂದೂ ಅವರು ಈ ಪತ್ರದಲ್ಲಿ ಧ್ವನಿಸಿದಂತಾಗಿದೆ. ಹೀಗೆ ನಿಲುಮೆಗಳಲ್ಲಿ ಅಂತರ್ಗಗ ಹಾಕುವುದು ಸಮಯ ಸಾಧಕತನವೆಂಬುದನ್ನು ರಾಜೀವ ಗಾಂಧಿ ಸೂಚಿಸಿದಂತಾಗಿದೆ. ಇದೆಲ್ಲದರ ಪರಿಣಾಮವಾಗಿ ಇತ್ತೀಚೆಗೆ ಬೆಳಗಾವಿಯಲ್ಲಿ ಮಹಾರಾಷ್ಟ್ರದ ರಾಜಕೀಯ ಶಕ್ತಿಗಳು ನಡೆಸಿರುವ ಹಿಂಸಾತ್ಮಕ ಆಂದೋಲನವನ್ನು ರಾಜೀವ ಗಾಂಧಿ ಟೀಕಿಸಿ ಛೇಡಿಸಿದಂತಾಗಿದೆ.

ಬೆಳಗಾವಿಯ ಪ್ರಶ್ನೆಯನ್ನು ಮತ್ತೆ ತೆರೆಯದಿರುವುದು ಕನ್ನಡಿಗರ ಹಾಗೂ ಮರಾಠಿಗರ – ಇವರಿಬ್ಬರ ಹಿತದೃಷ್ಟಿಯಿಂದಲೂ ಅಗತ್ಯ ಎಂದೂ ರಾಜೀವ ಗಾಂಧಿ ಹೇಳಿ ಈ ಪ್ರಶ್ನೆ ಇಲ್ಲಿಗೆ ಮುಗಿದಿದೆ ಎಂಬ ಕೊನೆಯ ಮಾತನ್ನು ಹೇಳಿದ್ದಾರೆ. ಇದರರ್ಥ ಇಷ್ಟೆ: ಮರಾಠಿಗರಿಗೆ ಬೇಕಿದ್ದರೆ ಅವರು ಮಹಾಜನ ವರದಿಯನ್ನೇ ಒಪ್ಪಿಕೊಳ್ಳಬೇಕು. ಅವರು ಈಗ ಬಯಸುತ್ತಿರುವಂತೆ ಬೆಳಗಾವಿ ಯಾರದ್ದೆಂದು ತೀರ್ಮಾನಿಸುವುದಕ್ಕೆ ಹೊಸ ಆಯೋಗವನ್ನು ನೇಮಿಸುವ ಪ್ರಶ್ನೆಯೇ ಇಲ್ಲ ಎಂದು ಕೂಡ ಸ್ಪಷ್ಟಪಡಿಸಿದಂತಾಗಿದೆ.

ಭಾಷೆಯ ಕಲಿಕೆಗೆ ಹಾಗೂ ಕಲಿಕೆಯ ಮಾಧ್ಯಮಕ್ಕೆ ಸಂಬಂಧಪಟ್ಟಂತೆ ಈಗ ಎರಡೂ ಸರಕಾರಗಳು ಸೇರಿ ಮಾಡಿಕೊಂಡಿರುವಾಗ ಅಧಿಕಾರಿಗಳ ಸಮಿತಿಯ ವ್ಯವಸ್ಥೆ ಸಮರ್ಪಕವಾದುದೆಂಬುದನ್ನೂ ಪ್ರಧಾನ ಮಂತ್ರಿ ಉಲ್ಲೇಖಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಭಾಷೆ ಹಾಗೂ ಗಡಿ ವಿಚಾರಗಳಲ್ಲಿ ಕಾಲು ಕೆರೆದು ಜಗಳಕ್ಕೆ ನಿಲ್ಲುವ ಹಾಗೂ ಭಾಷೆಯ ಹೆಸರಿನಲ್ಲಿ ಬೇರಾವುದೋ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವ ಮಹಾರಾಷ್ಟ್ರ ನಾಯಕರ ತೆವಲು ಕಮ್ಮಿಯಾದೀತೆಂದು ಹಾರೈಸಬೇಕಾಗಿದೆ. ಭಾಷೆ ಮತ್ತು ಸಂಸ್ಕೃತಿಗಳನ್ನು ರಕ್ಷಿಸಿಕೊಳ್ಳಬೇಕಾದದ್ದು, ಅದಕ್ಕಾಗಿ ಸೂಕ್ತ ವ್ಯವಸ್ಥೆಗಳನ್ನು ರೂಪಿಸಬೇಕಾದದ್ದು, ಇವೆರಡಕ್ಕೆ ಅಪಾಯ ಬಂದಾಗ ರಕ್ಷಣೆಗೆ ಬೇಕಾದ ಹೋರಾಟ ಮಾಡಬೇಕಾದದ್ದು ಅಗತ್ಯ. ಆದರೆ ಅಂಥ ಹೋರಾಟವು ಎಲ್ಲಾ ಸಂದರ್ಭಗಳಲ್ಲೂ ಹರತಾಳ, ಬಂದ್, ಹಿಂಸೆ ಲೂಟಿಯ ರೂಪವನ್ನು ಪಡೆದುಕೊಳ್ಳಬೇಕಾದ ಅಗತ್ಯವೇನೂ ಇಲ್ಲ. ಬೆಳಗಾವಿಯಲ್ಲಿ ಕನ್ನಡ ಕಲಿಕೆಯನ್ನು ಎಲ್ಲಾ ಹಂತಗಳಲ್ಲಿಯೂ ಕಡ್ಡಾಯ ಮಾಡಿದ್ದರೆ, ಮರಾಠಿಯ ಕಲಿಕೆಗೇ ಅವಕಾಶವಿಲ್ಲ ಎಂದಾಗಿದ್ದರೆ ಆ ಬಗ್ಗೆ ಸಂಬಂಧಪಟ್ಟವರೊಡನೆ ಕುಳಿತು ಚರ್ಚಿಸುವ ದಾರಿ ಮರಾಠಿ ನಾಯಕರಿಗಿದ್ದಿತು. ಅದನ್ನು ಯಾರೂ ಮುಚ್ಚಿರಲಿಲ್ಲ. ಅದು ನೇರವಾದ ದಾರಿ ಪ್ರಜಾತಂತ್ರದಲ್ಲಿ ಅಂಗೀಕರಿಸಲಾದ ವಿವಾದ ತೀರ್ಮಾನದವಿಧಾನ.

ಈ ವಿಧಾನವನ್ನು ಮರಾಠಿ ನಾಯಕರು ಅನುಸರಿಸಲಿಲ್ಲವೆಂದೇ ಬೆಳಗಾವಿಯಲ್ಲಿ ಕಳೆದ ತಿಂಗಳು ಹಿಂಸಾತ್ಮಕ ಆಂದೋಲನಕ್ಕೆ ಚಾಲನೆಯಾಯಿತು. ಹತ್ತಾರು ಜೀವಬಲಿ ಆಯಿತು. ಬೆಳಗಾವಿ ನಾಗರಿಕರು ಸಂಕಟಪಟ್ಟರು. ಎಲ್ಲಕ್ಕಿಂತ ಮುಖ್ಯವಾಗಿ ಪರಸ್ಪರ ಭಾಷಾ ಪ್ರೇಮಿಗಳ ಮನಸ್ಸು ಮುರಿದುಹೋಯಿತು.

ಭಾರತದಲ್ಲಿ ಹಲವು ಭಾಷೆಗಳಿವೆ. ಈ ವಾಸ್ತವಿಕತೆಯನ್ನು ಒಪ್ಪಿಕೊಂಡರೆ ಸೌಹಾರ್ದದಿಂದ ಸೌಮನಸ್ಯದಿಂದ ಬಾಳುವ ದಾರಿ ಗೋಚರಿಸೀತು. ಎಲ್ಲಾ ರಾಜ್ಯಗಳಲ್ಲಿಯೂ ಗಡಿ ಪ್ರದೇಶಗಳಲ್ಲಿ ಭಾಷಾ ಅಲ್ಪಸಂಖ್ಯಾತರಿರುತ್ತಾರೆ. ಅವರ ಭಾವನೆಗಳಿಗೆ ನೋವಾಗದಂತೆ, ಕೊಂಚ ಅಡಚಣೆಯಾದರೂ ಸ್ವಲ್ಪ ವೆಚ್ಚವಾದರೂ ಸೂಕ್ತ ವ್ಯವಸ್ಥೆಗಳನ್ನು ಮಾಡಬೇಕಾದದ್ದು ಆಯಾ ರಾಜ್ಯ ಸರಕಾರಗಳ ಹೊಣೆ. ಭಾಷಾ ಅಲ್ಪಸಂಖ್ಯಾತರಿಗೆ ಉದ್ಯೋಗ ನೀಡಿಕೆಯಲ್ಲಿ ಹಾನಿಯಾಗದಂತೆಯೂ ನೋಡಿಕೊಳ್ಳಬೇಕು. ಭಾಷಾ ಅಲ್ಪಸಂಖ್ಯಾತರೂ ರಾಜ್ಯದ ಅಧಿಕೃತ ಭಾಷೆಯೊಡನೆ ಶತ್ರುತ್ವ ಬೆಳೆಸಿಕೊಂಡರೆ ವಿರಸ ಬೆಳೆದು ಅನಾಹುತವಾದೀತೇ ಹೊರತು ಶಾಂತಿಯುತ ಬಾಳ್ವೆಗೆ ಸಹಕಾರಿಯಾಗದು.

ರಾಜೀವಗಾಂಧಿ ಅವರು ತಳೆದಿರುವ ನಿಲುಮೆ ಇದನ್ನೇ ಹೇಳುತ್ತದೆ. ಆದ್ದರಿಂದ ಅದು ಸ್ವಾಗತಾರ್ಹ.

ಮುಂಗಾರು
ಶನಿವಾರ, ಆಗಸ್ಟ್ 9, 1986

ಪ್ರಾಮಾಣಿಕತೆಯ ಅಭಾವ ಎಲ್ಲಿ?

ಶಿಕ್ಷಕರು ಪ್ರಾಮಾಣಿಕರಾಗಬೇಕು ಎಂಬುದು ಉಪಾಧ್ಯಾಯ ವೃತ್ತಿಯಲ್ಲಿರುವವರಿಗೆ ರಾಜಕಾರಣಿಯಾದ ಶಿಕ್ಷಣ ಮಂತ್ರಿ ಡಿ. ಮಂಜುನಾಥ್ ಅವರ ಉಪದೇಶ. ಹೀಗೆ ಹಿತವಚನ ನೀಡುವುದಕ್ಕೆ ತಾವು ಹಿಂದೆ ಮಾಧ್ಯಮಿಕ ಶಾಲೆಯ ಅಧ್ಯಾಪಕನಾಗಿದ್ದ ಸ್ಥಾನಬಲವನ್ನು ಅವರು ಉಪಯೋಗಿಸಿಕೊಂಡಿದ್ದಾರೆ. ಶಿಕ್ಷಕರು ಸರಿಯಾಗಿ ಕೆಲಸ ಮಾಡದಿದ್ದರೆ ಸಮಾಜಕ್ಕೆ ಅನಾಹುತವಾದೀತು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಶಿಕ್ಷಕರು ಪ್ರಾಮಾಣಿಕರಾಗಿರಬೇಕು ಎಂದು ಹಾರೈಸುವುದೇನೂ ತಪ್ಪಲ್ಲ. ಸಮಾಜದ ಎಲ್ಲಾ ವ್ಯಕ್ತಿಗಳವರೂ ಪ್ರಾಮಾಣಿಕರಾಗಿರಬೇಕು. ಯಾರು ಅಪ್ರಾಮಾಣಿಕರಾದರೂ ಆ ಸಮಾಜಕ್ಕೆ ರೋಗ ತಗಲುತ್ತದೆ. ವರ್ತಕರೂ, ವಾಣಿಜ್ಯೋದ್ಯಮಿಗಳೂ ಅಪ್ರಾಮಾಣಿಕರಾದರೆ ಅಕ್ರಮ ಸಂಪತ್ತು ಕೆಲವೇ ಜೇಬುಗಳಲ್ಲಿ ಕೂಡಿಬಿದ್ದು ಆರ್ಥಿಕವೂ ಸಾಮಾಜಿಕವೂ ಆದ ಕ್ಷೋಭೆಗೆ ದಾರಿ ಮಾಡುತ್ತದೆ. ಅಂಥ ಸಂದರ್ಭದಲ್ಲಿ ಬೆಳೆಯುವ ವರ್ಗಗಳೂ ದುಡಿಯುವ ವರ್ಗಗಳೂ ಬಂಡೇಳಬೇಕಾಗುತ್ತದೆ. ವೈದ್ಯರು ಅಪ್ರಾಮಾಣಿಕರಾದರೆ ಸಮಾಜದಲ್ಲಿ ಆಗುವಂತಹ ಅನಾಹುತಕ್ಕೆ ನಮ್ಮಲ್ಲಿ ದಿನದಿನವೂ ಎಂಬಂತೆ ನಿದರ್ಶನಗಳು ಸಿಗುತ್ತವೆ. ಶಿಕ್ಷಣ ಕ್ಷೇತ್ರದಲ್ಲಿಯೂ ಅಪ್ರಾಮಾಣಿಕರು ಇರಬಾರದು.

ಅದೃಷ್ಟವಶದಿಂದ ಶಿಕ್ಷಣ ಕ್ಷೇತ್ರವು ಇಂದು ಇತರ ಕ್ಷೇತ್ರಗಳು ಕುಲಗೆಟ್ಟು ಹೋದಷ್ಟರ ಮಟ್ಟಿಗೆ ಹಾಳಾಗಿಲ್ಲ. ಪ್ರಾಮಾಣಿಕತೆಯನ್ನು ಆ ಕ್ಷೇತ್ರದಲ್ಲಿ ಭೂತಗನ್ನಡಿ ಹಿಡಿದು ಹುಡುಕಬೇಕಾದಂತಹ ಪರಿಸ್ಥಿತಿಯೇನೂ ಇಲ್ಲ. ಅಂತಹ ಪರಿಸ್ಥಿತಿ ಇದ್ದರೆ ಅದು ರಾಜಕಾರಣದ ಸಹಿತ ಉಳಿದೆಲ್ಲಾ ಸಾಮಾಜಿಕ ಕ್ಷೇತ್ರಗಳಲ್ಲಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಪ್ರಾಮಾಣಿಕರಿಲ್ಲ ಎಂದೇನೂ ನಾವು ವಾದಿಸಲಿಕ್ಕೆ ಹೊರಟಿಲ್ಲ. ಶಿಕ್ಷಣ ವೃತ್ತಿಯಲ್ಲಿರುವ ಅಪ್ರಾಮಾಣಿಕತೆ ಕೇವಲ ಅಪವಾದಗಳು ಅಷ್ಟೆ. ಅಲ್ಲೊಬ್ಬರು ಇಲ್ಲೊಬ್ಬರು ಸಿಗಬಹುದು.

ಶಿಕ್ಷಕರ ಪ್ರಾಮಾಣಿಕತೆಗೆ ಕರೆ ಕೊಡುವ ಮೊದಲು ಮಾನ್ಯ ಸಚಿವರು ನಮ್ಮ ವಿದ್ಯಾಭ್ಯಾಸ ಕ್ಷೇತ್ರದ ಸಮಗ್ರ ಸಮೀಕ್ಷೆಯನ್ನು ನಡೆಸಿದ್ದರೆ ಚೆನ್ನಾಗಿತ್ತು. ಶಿಕ್ಷಕರು ಪ್ರಾಮಾಣಿಕವಾಗಿ ಕೆಲಸ ಮಾಡಲು, ಅವರು ತಮ್ಮ ವೃತ್ತಿ ನೈಪುಣ್ಯವನ್ನು ಹೆಚ್ಚಿಸಿಕೊಳ್ಳಲು ಮುಂದಿನ ಜನಾಂಗವಾದ ಇಂದಿನ ಎಳೆಯ ಪೀಳಿಗೆಯನ್ನು ತಕ್ಕಂತೆ ರೂಪಿಸಲು ತಕ್ಕುದಾದಂತಹ ವಾತಾವರಣ, ಸವಲತ್ತು ಹಾಗೂ ಸಂಭಾವನೆ ಈ ವೃತ್ತಿಯಲ್ಲಿ ಶಿಕ್ಷಕರಿಗೆ ಉಂಟೇ ಎಂಬುದನ್ನವರು ಪರಿಶೀಲಿಸಬೇಕಾಗಿತ್ತು. ಇಂದು ನಮ್ಮಲ್ಲಿ ಶಿಕ್ಷಕರಿಗೆ ಸಂಭಾವನೆ ಎಷ್ಟಿದೆ? ಶಿಕ್ಷಕನಾಗಲು ಬೇಕಾದ ಅರ್ಹತೆಯನ್ನು ಪಡೆದುಕೊಳ್ಳಲು ಮಾಡಬೇಕಾದ ಅಧ್ಯಯನವೆಷ್ಟು, ವೃತ್ತಿ ಪರಿಣತಿಯನ್ನು ಪಡೆದುಕೊಳ್ಳಬೇಕಾದ ವೆಚ್ಚವೆಷ್ಟು. ಶಿಕ್ಷಕನಾಗಲು ಬೇಕಾದ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಲು ಖರ್ಚೆಷ್ಟು ಎಂಬುದನ್ನು ಪರಿಗಣಿಸಿದರೆ ಅವರಿಗೆ ದೊರೆಯುತ್ತಿರುವ ಸಂಭಾವನೆ ಮೂರು ಕಾಸಿನದ್ದು ಎನ್ನದೆ ವಿಧಿಯಿಲ್ಲ. ಕಲಿಕೆಯಲ್ಲಿ ಬಂದ ಕಾಳವಷ್ಟೇ ಹೊಡದೆ ಕಳ್ಳಪಣವೇ ಬಾಡವಾಗುಳ್ಳ ಮೇರು ಮಾಡುವ ಹಣದ ಕೊಬ್ಬಿನೊಂದಿಗೆ ಶಿಕ್ಷಕರು ತಮ್ಮ ಸಂಪಾದನೆಯನ್ನು ತುಲನೆ ಮಾಡಲು ಹೊರಟರೆ ಶಿಕ್ಷಕ ವೃತ್ತಿಯಲ್ಲಿ ಆಮೇಲೆ ಯಾವ ಪ್ರಾಮಾಣಿಕತೆಯೂ ಉಳಿಯಲಾರದು. ಸಚಿವ ಮಂಜುನಾಥ್ ಅವರು ಈ ಮುಖದ ಬಗ್ಗೆಯೂ ತಮ್ಮ ಚಿಂತನೆ ಹರಿಸಬೇಕಾಗಿತ್ತು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳವರು ವಿದ್ಯಾಪ್ರಸಾರ ಕಾರ್ಯದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆಂದು ಸಚಿವ ಮಂಜುನಾಥ್ ಅವರು ಹೊಗಳಿಕೆಯ ಮಾತನ್ನಾಡಿದ್ದಾರೆ. ಇದನ್ನು ಅಂಶಿಕವಾಗಿ ನಾವು ಒಪ್ಪುತ್ತೇವೆ. ಕಳೆದ ಶತಮಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೈಸ್ತ ಮಿಶನರಿಗಳು ಬಂದು ನೆಲೆಸಿ ವಿದ್ಯಾಪ್ರಸಾರ ಕಾರ್ಯವನ್ನು ಕೈಗೊಂಡಿದ್ದಾರೆ. ಈ ಜಿಲ್ಲೆಯನ್ನು ಸಾಕ್ಷರತೆಯಲ್ಲಿಯೂ ವಿದ್ಯಾವಂತಿಕೆಯಲ್ಲಿಯೂ ವಿವಿಧ ವೃತ್ತಿ ಜೀವನದ ಮುಂಚೂಣಿಯಲ್ಲಿ ನಿಲ್ಲಿಸಿದ ಸಾಧನೆ–ಶ್ರೇಯಸ್ಸು ಅವರಿಗಲ್ಲದೆ ಬೇರಾರಿಗೂ ಸಲ್ಲತಕ್ಕದ್ದಲ್ಲ. ಬೇರಾರಿಗಾದರೂ ಏನಾದರೂ ಕೀರ್ತಿ ಸಲ್ಲಬೇಕಿದ್ದರೆ ಅದು ವಿದ್ಯಾಕ್ಷೇತ್ರವನ್ನು ವ್ಯಾಪಾರವಾಗಿ ಮಾಡಿ ಕುಲಗೆಡಿಸಿದ ದುಷ್ಟತನದ್ದು. ಮನುಕುಲದ ನೋವನ್ನು ನಿವಾರಣೆ ಮಾಡುವ ಪರಮ ಪವಿತ್ರವಾದ ವೈದ್ಯಕೀಯ ವೃತ್ತಿಯನ್ನು ಹೊಡೆ, ಶರಾಬು ಮಾರಾಟದಂತಹ ಗಡಂಗಾಗಿ ಮಾಡಿದ್ದು: ವ್ಯಾಪಾರಾಟದಂತಹ 'ಶಸ್ತ್ರಕ್ರೀಡೆ'ಯ ಶಯ್ಯಾಗಾರವನ್ನಾಗಿ ಮಾಡಿದ್ದು.

ಶಿಕ್ಷಕರಲ್ಲಿ ಪ್ರಾಮಾಣಿಕತೆ ಬೇಕೆಂದೂ ಖಾಸಗಿ ಶಿಕ್ಷಣ ಸಂಸ್ಥೆಗಳು ಒಳ್ಳೆಯ ಸಮಾಜ ಸೇವೆ ಮಾಡುತ್ತಿದ್ದಾರೆಂದೂ ಒಂದೇ ಉಸಿರಿಗೆ ಹೇಳುತ್ತಿರುವ ಸಚಿವ ಮಂಜುನಾಥ್ ಅವರು ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಹುದ್ದೆಗಳಿಗೆ ಅನುಸಾರವಾಗಿ ಶಿಕ್ಷಕ ಅಭ್ಯರ್ಥಿಗಳಿಂದ ಹತ್ತರಿಂದ ಮೂವತ್ತು ಸಾವಿರ ರೂಪಾಯಿ ತನಕ ಲಂಚ ತೆಗೆದುಕೊಳ್ಳುತ್ತಿರುವ ಸತ್ಯಾಂಶಗಳನ್ನು ಅರಿತಿದ್ದರೆ ಒಳಿತಾಗುತ್ತಿತ್ತು. ಹೀಗೆ ಲಂಚಕೊಟ್ಟು ಕೆಲಸಕ್ಕೆ ಸೇರಿದ ಮಂದಿ ಆ ಹುದ್ದೆಯನ್ನೊಂದು ವ್ಯಾಪಾರವಾಗಿ ಮಾಡದೆ ಬಿಡುವರೆ?

ಶಿಕ್ಷಕರಲ್ಲಿ ಪ್ರಾಮಾಣಿಕತೆಯನ್ನೂ ವೃತ್ತಿ ನೈಪುಣ್ಯವನ್ನೂ ಬಯಸುವ ಸಚಿವರು, ಸರಕಾರ ಒಳ್ಳೆಯ ಪ್ರತಿಭೆಗಳನ್ನು ಆ ಕ್ಷೇತ್ರಕ್ಕೆ ಸೆಳೆಯಲು ಸಾಧ್ಯವಾಗುವಂತಹ ವಾತಾವರಣವನ್ನು ಉಂಟು ಮಾಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ಮುಂದಿನ ಜನಾಂಗವನ್ನು ತಯಾರು ಮಾಡುವುದಕ್ಕೆ ತಕ್ಕುದಾದ ಸರಕು-ಸರಂಜಾಮುಗಳನ್ನು ಪೂರೈಸಬೇಕು.

ಆ ಬಗ್ಗೆ ಆಲೋಚನೆಯನ್ನು ಮಾಡದೆ, ಇಂದು ಶಿಕ್ಷಕರ ಸ್ಥಿತಿಗತಿಯೇನು ಎಂದು ಚಿಂತಿಸದೆ, ಈ ಕ್ಷೇತ್ರದಲ್ಲಿರುವ ಪ್ರಾಮಾಣಿಕತೆ ಎಷ್ಟು ಎಂಬುದನ್ನು ಮನನ ಮಾಡಿಕೊಳ್ಳದೆ, ಶಿಕ್ಷಕರಿಗೆ ಪ್ರಾಮಾಣಿಕತೆಯ ಪಾಠ ಹೇಳುವುದು ಇಡಿಯ ಶಿಕ್ಷಕ ಸಮುದಾಯಕ್ಕೆ ಅಪಚಾರ ಮಾಡಿದಂತೆ. ಈ ಮಾತನ್ನು ಸಚಿವರು ಆಡಬಾರದಾಗಿತ್ತು. ಪ್ರಾಮಾಣಿಕತೆಯ ಅಭಾವ ಏನಾದರೂ ಇದ್ದರೆ ಅದು ಮಾನ್ಯ ಮಂಜುನಾಥರು ಈಗ ಆರಿಸಿಕೊಂಡಿರುವ ರಾಜಕಾರಣದಲ್ಲಿ. ಹೊರತು ಶಿಕ್ಷಣದಲ್ಲಿ ಅಲ್ಲ.

ಮುಂಗಾರು

ಭಾನುವಾರ, ಆಗಸ್ಟ್ 10, 1986

ನೀರಿಗೆ ನಿಯಂತ್ರಣ ಹಾಕಿ

[illegible] ಮಳೆಗಾಲ ಮತ್ತು ಬೇಸಿಗೆಕಾಲ – ಇವೆರಡೇ ಹೊರತು ಬೇರೆ ಋತುವೇ ಇಲ್ಲ ಎಂಬ ಕೀರ್ತಿ ಕರಾವಳಿ ಕರ್ನಾಟಕದ್ದು. ಕರಾವಳಿಯಲ್ಲಿ ಮಳೆ ತೊಡಗಿದರೆ ದಿನಗಟ್ಟಲೆ ಜನರ ಬದುಕು ಅಸ್ತವ್ಯಸ್ತ ವಾಗುತ್ತದೆ. ಜೂನ್‌ನಿಂದ [illegible] ನಾಲ್ಕು ತಿಂಗಳ ಕಾಲ ಕರಾವಳಿಯಲ್ಲಿ ಹೆಚ್ಚು ಕಡಿಮೆ ಸತತ ಮಳೆ ಇರುತ್ತದೆ. [illegible] ಉದಾರಿ ಯಾದ ಕಾಲದಲ್ಲಿ ದಿನಗಟ್ಟಲೆ ಧೋ ಎಂದು ಮಳೆ ಸುರಿಯುತ್ತದೆ. [illegible] ತುಂಬಿ, ನೆರೆ [illegible] ಜನ ಜೀವನಕ್ಕೆ ಸಂಕಟ ತರುತ್ತದೆ.

ಇದೀಗ ಅದೇ ವಿದ್ಯಮಾನ ಕರಾವಳಿಯಲ್ಲಿ ನಡೆದಿದೆ. ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೊಳೆಗಳು [illegible]. ಸಾಮಾನ್ಯವಾಗಿ ಜೂನ್ ತಿಂಗಳ ಕೊನೆಯಲ್ಲಿ ತೊಡಗುವ [illegible] ಮಳೆ ಈ ಬಾರಿ [illegible] ಪ್ರಾರಂಭವಾದದ್ದು ಆಗಸ್ಟ್ ಆದಿಯಲ್ಲಿ. [illegible] ತಿಂಗಳು ಅಪರೂಪದ ಬರದ ಭೀತಿಯನ್ನೊಡ್ಡಿ ಮತ್ತೆ ಬಂದ ಮಳೆ ನೆರೆ ತಂದು ಹಲವು [illegible] ಕಡಿದುಹಾಕಿತು. ಸಾರಿಗೆ ಸಂಪರ್ಕ ಅಸ್ತವ್ಯಸ್ತವಾಯಿತು. ಅನೇಕ ಗುಡಿಸಲು–ಮನೆಗಳು [illegible] ನೀರಲ್ಲಿ ನಿಂತವು. ಈ ಬಾರಿ ಮಾತ್ರ ನೆರೆ ಕೊಂಚ ಕಡಿಮೆ ಪ್ರಮಾಣದ್ದಾಗಿತ್ತು. 1973ರಲ್ಲಿ ಬಂದ ನೆರೆ ದಕ್ಷಿಣ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಸಾವಿರಾರು ಗುಡಿಸಲು–ಮನೆಗಳನ್ನು ಕೊಚ್ಚಿಕೊಂಡು ಹೋಗಿತ್ತು. ಹತ್ತಾರು ಜೀವ ಬಲಿ ಆ ನೆರೆಗೆ ಸಂದಿತ್ತು, ಲಕ್ಷಾಂತರ ರೂಪಾಯಿ ಮೌಲ್ಯದ ಸೊತ್ತು ನಾಶವಾಗಿತ್ತು. ಸಾವಿರಾರು ಕುಟುಂಬಗಳು ನಿರ್ಗತಿಕವಾಗಿದ್ದವು. ಇಪ್ಪತ್ತನೆ ಶತಮಾನದಲ್ಲಿ ಬಂದ [illegible] ಆಗಿತ್ತು. ಈ [illegible] ನೆನಪಿಸಿಕೊಂಡರೆ ಕರಾವಳಿಯ ಜನ ಈಗಲೂ ನಡುಗುತ್ತಾರೆ.

ಹವಾಮಾನ ತರುವ ಈ ವೈಪರೀತ್ಯಗಳನ್ನು ನಾಡಿನ [illegible]. ಕರಾವಳಿಯಲ್ಲಿ ಸಾಮಾನ್ಯವಾಗಿ ಮಳೆ ಬರುವುದು ಮಳೆಗಾಲದಲ್ಲಿ ಮಾತ್ರ. ಉಳಿದಂತೆ [illegible] ತಿಂಗಳು ಈ ಪ್ರದೇಶ [illegible] ಬಾಯ್ಬಿಡುತ್ತದೆ.

ಪ್ರಕೃತಿಯನ್ನು [illegible] ಸಾಧ್ಯ. ಹಲವು ದೇಶಗಳಲ್ಲಿ ಇದರ ಪ್ರಯೋಗ ನಡೆದಿದೆ. ಹಲವೆಡೆ ಯಶಸ್ಸು ಬಂದಿದೆ. ಭಾರತದಲ್ಲಿಯೂ ಹಲವು ನದಿಗಳಿಗೆ ಕಟ್ಟೆ ಗಳನ್ನು ಹಾಕಿ [illegible] ವನ್ನಾಗಿಸುವ ಯೋಜನೆ ಸಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಅಂತಹ ಯೋಜನೆಗಳಿವೆ.

ವಿಷಾದದ ವಿಚಾರವೆಂದರೆ ಭಾಷಾವಾರು ಪ್ರಾಂತಗಳ ರಚನೆಯಾಗಿ ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದು ಉತ್ತರ ಕನ್ನಡ ಮುಂಬಯಿ ಪ್ರಾಂತದಿಂದಲೂ ದಕ್ಷಿಣಕನ್ನಡ ಮದರಾಸುಪ್ರಾಂತದಿಂದಲೂ ಈರಾಜ್ಯಕ್ಕೆ ಸೇರಿ ಮೂರು ದಶಕಗಳೇ ಪೂರ್ತಿಯಾಗುತ್ತ ಬಂದರೂ ಈ ಪ್ರದೇಶಗಳ ನೆಲ–ಜಲ ಅಭಿವೃದ್ಧಿಯ ಬಗ್ಗೆ ಆಡಳಿತ ಸೂತ್ರ ವಹಿಸಿಕೊಂಡವರು ಆಸಕ್ತಿ ವಹಿಸದೆ ಇರುವುದು. ಕರಾವಳಿ ಜಿಲ್ಲೆಯ ಭೂಪ್ರದೇಶದ ಪರಿಸ್ಥಿತಿಯೇ ಬೇರೆ. ಇಲ್ಲಿನ ಹವಾಮಾನವೇ ಬೇರೆ. ಇಲ್ಲಿನ ಜನಜೀವನದ ರೀತಿ ನೀತಿಗಳೇ ಬೇರೆ. ಸರಕಾರದ ಸೂತ್ರ ಹಿಡಿದವರು ರಾಜ್ಯದ ವಿವಿಧ ಭಾಗಗಳ ಈ ಭಿನ್ನತೆಗಳನ್ನು ಅರ್ಥಮಾಡಿಕೊಳ್ಳಬೇಕು. ಅಂಗೀಕರಿಸಬೇಕು. ಒಪ್ಪಿಕೊಳ್ಳಬೇಕು. ಹಾಗಿದ್ದರೆ ಮಾತ್ರವೇ ಆಡಳಿತವು ಜನಜೀವನದ ವಾಸ್ತವತೆಗೆ ಹತ್ತಿರ ಬರುತ್ತದೆ. ವಾಸ್ತವಿಕತೆಯೇ ಆಳುವವರಿಗೆ ಅರ್ಥವಾಗಿಲ್ಲವೆಂದರೆ ಅನಾಹುತವಾಗುತ್ತದೆ. ಜನಜೀವನಕ್ಕೆ ಸಂಕಟಬರುತ್ತದೆ. ಹೀಗೆ ಆದುದಕ್ಕೆ ನಿದರ್ಶನ ಉಂಟು. ಕರಾವಳಿಯ ಭೂಪರಿಸ್ಥಿತಿ, ಹಿಡುವಳಿ ಮಾಲೀಕತನ ಇವಾವುದರ ಕಲ್ಪನೆಯೂ ಇಲ್ಲದೆ ತಂದ ಕನ್ವರ್ಷನ್ ರದ್ದತಿ ಕಾಯಿದೆ ಹಾಗೂ ಛಿದ್ರೀಕರಣ ತಡೆ ಕಾಯಿದೆಗಳು ಅನಾಹುತ ಮಾಡಿದ್ದುಂಟು. ಸರಕಾರದ ನೇತಾರರು ನಿರಂತರವಾಗಿ ಸತ್ಯವನ್ನು ಅರಿಯಲು, ಜನರ ಸಮಸ್ಯೆ ನಿವಾರಣೆ ಮಾಡಲು ನಿರಾಕರಿಸಿದ್ದುಂಟು.

ನೆರೆಹಾವಳಿಯೂ ಅಷ್ಟೆ. ಕರಾವಳಿಯ ಹತ್ತಾರು ಹೊಳೆಗಳಿಗೆ ಪಶ್ಚಿಮ ಘಟ್ಟದ ನೆರಗಿನಲ್ಲಿ ಒಡ್ಡು ನಿರ್ಮಿಸಿದರೆ ನೆರೆಯ ಭೀತಿಯೂ ಕಮ್ಮಿಯಾಗುತ್ತದೆ. ಬೇಸಿಗೆಯಲ್ಲಿ ಕರಾವಳಿಯ ಎಲ್ಲೆಡೆ ಹುಲುಸಾದ ಬೆಳೆಯೂ ಬಂದೀತು. ಜಲಾಶಯಗಳ ಬುಡದಲ್ಲಿ ಕಿರು ವಿದ್ಯುತ್ ಸ್ಥಾವರಗಳನ್ನೂ ನಡೆಸಬಹುದು. ಈ ಸಾಧ್ಯತೆ ಪಶ್ಚಿಮ ಘಟ್ಟದ ಉದ್ದಕ್ಕೂ ಉಂಟು. ಅದನ್ನು ಆಮೂಲಾಗ್ರ ಶೋಧಿಸುವ ಕಾರ್ಯಕ್ಕೆ ಸರಕಾರ ಕೈ ಹಾಕಿಲ್ಲ. ನೇರಿಯ ಮತ್ತು ಸರಪಾಡಿಗಳಲ್ಲಿ ನೇತ್ರಾವತಿ ನದಿಗೆ ಅಣೆಕಟ್ಟು ಕಟ್ಟುವ ಯೋಜನೆ ನೀಲಿನಕ್ಷೆ ಹಂತದಿಂದ ಮೇಲೆದ್ದಿಲ್ಲ. ವಾರಾಹಿ ಯೋಜನೆ ಕುಂಟುತ್ತಿದೆ. ಇಷ್ಟೇ ಅಲ್ಲ, ಸಣ್ಣ ಪುಟ್ಟ ನೂರಾರು ಯೋಜನೆಗಳು ಯಾರ ಗಮನವನ್ನೂ ಸೆಳೆದಿಲ್ಲ.

ನಮ್ಮ ಜನಪ್ರತಿನಿಧಿಗಳೂ ಈ ಬಗ್ಗೆ ಮುತುವರ್ಜಿವಹಿಸಿಲ್ಲ. ನಾಡಿನ ಅಭಿವೃದ್ಧಿಯ ಬಗ್ಗೆ ಅಂಥ ಕಲ್ಪನೆಯಾಗಲಿ ಅಧ್ಯಯನ ಶೀಲತೆಯಾಗಲಿ ಅವರಾರಿಗೂ ಇದ್ದಂತಿಲ್ಲ.

ಮುಂಗಾರು

ಮಂಗಳವಾರ, ಆಗಸ್ಟ್ 12, 1986

ಆಳುವವರಿಗೆ ಕೇಳಿಸದ ಕೂಗು

ನಿವೃತ್ತ ಭೂಸೇನಾ ದಂಡನಾಯಕ ಜನರಲ್ ಎ. ಎಸ್. ವೈದ್ಯ ಅವರನ್ನು ಪುಣೆಯಲ್ಲಿ ಭಾನುವಾರ ಪೂರ್ವಾಹ್ನ ಉಗ್ರಗಾಮಿಗಳು ಗುಂಡಿಟ್ಟು ಕೊಲೆ ಮಾಡಿದ್ದಾರೆ. ಇದು ಖಾಲಿಸ್ತಾನವಾದಿ ಸಿಖ್ಖ ಭಯೋತ್ಪಾದಕರ ಕೃತ್ಯವೆನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಜ। ವೈದ್ಯ ಅವರು ಭೂಸೇನೆಯ ದಂಡನಾಯಕರಾಗಿದ್ದಾಗಲೇ ಅಮೃತಸರದ ಸ್ವರ್ಣದೇವಾಲಯದಿಂದ ಭಿಂದ್ರನ್‌ವಾಲೆ ಹಾಗೂ ಸಂಗಡಿಗರನ್ನು ನಿರ್ಮೂಲನ ಮಾಡುವ ಸಶಸ್ತ್ರ ಕಾರ್ಯಾಚರಣೆಯನ್ನು ಭಾರತದ ಸೈನ್ಯವು ನಡೆಸಿತ್ತು.

ಜ। ವೈದ್ಯ ಪಂಜಾಬಿನ ಸಂಬಂಧವಾಗಿ ನಡೆಯುತ್ತಿರುವ ಮಾರಣ ಹೋಮಕ್ಕೆ ಮೂರನೆ ದೊಡ್ಡ ಬಲಿ. ಮೊದಲನೆಯದ್ದು ಈ ದೇಶದ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರದ್ದು. ಎರಡನೆಯದ್ದು ರಾಜೀವ ಗಾಂಧಿಯವರ ಜತೆ ಒಡಂಬಡಿಕೆ ಮಾಡಿಕೊಂಡ ಅಕಾಲಿದಳದ ನಾಯಕ ಹರಚಂದಸಿಂಗ್ ಲೋಂಗೋವಾಲ್ ಅವರದ್ದು. ಈ ನಡುವೆ ಒಂದಿಬ್ಬರು ಸಂಸತ್ ಸದಸ್ಯರ, ಪಕ್ಷ ನಾಯಕರ, ಪತ್ರಿಕಾ ಸಂಪಾದಕರ, ಪೊಲೀಸ್ ಅಧಿಕಾರಿಗಳ ಜೀವ ಬಲಿಯೂ ಸಂದಿದೆ. ನೂರಾರು ಅಮಾಯಕ ಪ್ರಯಾಣಿಕರ ವಧೆಯೂ ಆಗಿದೆ. ಅಸಂಖ್ಯಾತ ಸಿಖ್ಖ ಭಯೋತ್ಪಾದಕರು ಸೈನ್ಯದ ಹಾಗೂ ಪೊಲೀಸ್ ಬಲದ ಗುಂಡಿಗೆ ಆಹುತಿಯಾಗಿದ್ದಾರೆ.

ಪಂಜಾಬು ಸಮಸ್ಯೆ ನಮ್ಮ ರಾಜಕಾರಣಿಗಳ ಕೈಮೀರಿದೆ ಎಂಬುದನ್ನು ಇತ್ತೀಚೆಗಿನ ವಿದ್ಯಮಾನಗಳು ಸೂಚಿಸುತ್ತವೆ. ಪಂಜಾಬಿನ ಸಿಕ್ಖರು ಸಿಡಿದು ನಿಂತಿದ್ದಾರೆ ಎಂಬುದರಿಂದ ಭಾರತೀಯತ್ವವನ್ನು ಮೈಗೂಡಿಸಿಕೊಂಡಿರುವ ನಮಗೆ ನೋವಾಗುತ್ತದೆ. ಸ್ವಾತಂತ್ರ್ಯ ಹೋರಾಟವು ಪ್ರಾರಂಭಗೊಂಡ ಈ ಶತಮಾನದ ಆದಿಯಿಂದ ಒಂದೇ ಭಾರತದ ಕಲ್ಪನೆಯನ್ನು ಮೂಡಿಸಿಕೊಂಡು 1947ರಲ್ಲಿ ಅದು ಸಾಕಾರವಾದ ಬಳಿಕ ಮಾನಸಿಕವಾಗಿ ಅದನ್ನೇ ಪೋಷಿಸಿಕೊಂಡು ಬಂದೆವು. ಈ ಏಕತೆಯ ಕಲ್ಪನೆ ವಾಸ್ತವಿಕವಾಗಿ ಎಷ್ಟು ಹುಸಿ, ಎಷ್ಟು ಗಟ್ಟಿ ಎಂಬುದರ ಬಗ್ಗೆ ಚಿಂತನೆ-ವಿಮರ್ಶೆ ಒಮ್ಮೆಯೂ ಈ ನಾಡಿನಲ್ಲಿ ನಡೆಯಲಿಲ್ಲ. ಈ ದೇಶದ ಜನಸಮುದಾಯಗಳಲ್ಲಿ ಎಷ್ಟು ವೈವಿಧ್ಯತೆಯಿದೆ ಭಾಷಾ ಸಂಬಂಧಿಯಾಗಿ, ಸಾಂಸ್ಕೃತಿಕವಾಗಿ, ಭೌಗೋಲಿಕವಾಗಿ ನಾವೆಲ್ಲ ಎಷ್ಟರ ಮಟ್ಟಿಗೆ ಒಂದು ಎಂಬ ಬಗ್ಗೆ ವಿಚಾರ ವಿಮರ್ಶೆ ಮಾಡಲಿಲ್ಲ. ಈ ವಿಚಾರದಲ್ಲಿ ರಾಜಕಾರಣಿಗಳು ಮೂಗುದಾರ ಹಾಕಿ ನಮ್ಮನ್ನು ನಡೆಸಿದರು. ಅವರು ಒಯ್ದಲ್ಲಿಗೆ ನಾವು ನಡೆದೆವು.

ಇದರ ಪರಿಣಾಮವಾಗಿಯೇ ಪಂಜಾಬಿನ ಕ್ಷೋಭೆಗೆ ಪರಿಹಾರ ಕಷ್ಟವಾಗಿದೆ. ಪಂಜಾಬಿನಲ್ಲಿ ಸಿಕ್ಖರು ಸಿಡಿದು ನಿಂತಾಗ ನಮಗೆ ಆತಂಕವಾಗುತ್ತದೆ. ಪಂಜಾಬಿನಲ್ಲಿ ಹಿಂದುಗಳ ನರಮೇಧ ನಡೆದಾಗ ನಾವು ಗಾಬರಿಗೊಳ್ಳುತ್ತೇವೆ. ದೆಹಲಿಯಲ್ಲಿ ಈ ದೇಶದ ಪ್ರಧಾನಮಂತ್ರಿಯನ್ನು ಅವರ ಮನೆಯ ಮುಂದೆಯೇ ಗುಂಡಿಟ್ಟು ಕೊಂದಾಗ ನಾವು ಕ್ರೋಧೋದ್ದೀಪಿತರಾಗುತ್ತೇವೆ. ಪ್ರತೀಕಾರವಾಗಿ ದೆಹಲಿಯಲ್ಲಿ ಕೈಗೆ ಸಿಕ್ಕ ಸಿಕ್ಖರನ್ನು ಕೊಂದು ಪಂಜಾಬಿನ ಸಮಸ್ಯೆಗೆ ಪರಿಹಾರ ಹುಡುಕಲು ಯತ್ನಿಸುತ್ತೇವೆ. ಪುಣೆಯಲ್ಲಿ ನಿವೃತ್ತ ದಂಡನಾಯಕ ಜನರಲ್ ವೈದ್ಯರನ್ನು ಭಯೋತ್ಪಾದಕರು ಕೊಚ್ಚಿ ಹಾಕಿದಾಗ ನಮಗೆ ದುಃಖವಾಗುತ್ತದೆ.

ಭಯೋತ್ಪಾದಕರ ಒಂದು ಗುಂಡಿಗೆ ನಾಲ್ಕು ಗುಂಡುಗಳ ಪ್ರತ್ಯುತ್ತರ ಕೊಡಲು ಯತ್ನಿಸುತ್ತೇವೆ. ಅವರು ತೆಗೆದ ಒಂದು ಜೀವಕ್ಕೆ ನಾಲ್ಕು ಜೀವ ತೆಗೆದು ಪರಿಹಾರ ಕಂಡುಕೊಳ್ಳಲು ಯತ್ನಿಸುತ್ತೇವೆ.

ನಾವು ಹೊರಟ ದಾರಿ ಸರಿಯೇ ಎಂದು ಕೊಂಚ ನಿಂತು ಯೋಚಿಸುವ ವ್ಯವಧಾನ ಈ ಸಮಾಜದಲ್ಲಿ ಯಾರಿಗೂ ಇಲ್ಲವಾಗಿದೆ. ಅಂಥ ಮುತ್ಸದ್ದಿತನ ನಮ್ಮ ರಾಜಕಾರಣಿಗಳಿಗೂ ಇಲ್ಲವಾಗಿದೆ. ಯಾರಿಗೆಲ್ಲ ಹೊಡೆಯಬೇಕು ಎಂದು ಭಯೋತ್ಪಾದಕರು ಪಟ್ಟಿ ತಯಾರಿಸಿ ಹೊರಟರೆ ಅಂಥವರನ್ನೆಲ್ಲ ಭದ್ರ ಕೊಠಡಿಯೊಳಗಡೆ ಕೂಡಿ ಹಾಕಿ ಕಾಪಾಡುವುದು ಸಾಧ್ಯವೇ ಎಂಬ ಬಗ್ಗೆ ನಮ್ಮೆಲ್ಲಾರೂ ಆಲೋಚಿಸಿದ್ದಿಲ್ಲ. ಸಾವಿರಾರು ಮಂದಿಗೆ ಹೀಗೆ ಸಶಸ್ತ್ರ ಕಾವಲುಗಾರರನ್ನು ಪೂರೈಸುವ ಸಾಧ್ಯತೆ ಬಗ್ಗೆ ಚಿಂತಿಸಿದ್ದಿಲ್ಲ. ರಸ್ತೆಯಲ್ಲಿ ಸಂಚರಿಸುವ ಸಾವಿರಾರು ಬಸ್ಸು, ಕಾರು, ಲಾರಿ, ರೈಲುಗಳ, ನೂರಾರು ವಿಮಾನಗಳ ಪ್ರಯಾಣಿಕರಿಗೆ ಜೀವ ರಕ್ಷಣೆಯ ಗ್ಯಾರಂಟಿ ಕೊಡುವುದು ಶಕ್ಯವೇ ಎಂಬ ಬಗ್ಗೆ ತಲೆ ಕೆಡಿಸಿಕೊಂಡದ್ದಿಲ್ಲ. ಸರೋವರದ ಮಧ್ಯೆ ಕ್ರಿಮಿಯೂ ಬೆಳಕೂ ಸೋಂಕದ ಭದ್ರ ಭವನದೊಳಗೆ ಕೂತ ಪರೀಕ್ಷಿತನನ್ನು ತಕ್ಷಕ ಕೊಂದ ಪುರಾಣದ ಪಾಠ ನಮಗಿನ್ನೂ ಅರ್ಥವಾಗಿಲ್ಲ.

ಈ ಆತಂಕ ಈ ಭಯ, ಈ ಕ್ರೋಧ ನಿವಾರಣೆ ಆಗಬೇಕಿದ್ದರೆ ಶಾಂತಿಯ ಗ್ಯಾರಂಟಿ ಬೇಕು. ಅದು ಪ್ರತಿ ಹಿಂಸೆಯಿಂದ ಖಂಡಿತಾ ಹುಟ್ಟುವುದಿಲ್ಲ. ಇದರರ್ಥ ಭಯೋತ್ಪಾದಕರ ಹಿಂಸೆ ಸರಿಯೆಂದಲ್ಲ. ಅದನ್ನಾರೂ ಸಮರ್ಥಿಸುವುದಿಲ್ಲ. ನಮ್ಮ ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗರು ವಿಷಾದದಿಂದ ಹೇಳುವಂತೆ ಭಯೋತ್ಪಾದಕತೆಯ ಮೂಲವೇನು ಎಂಬುದರ ಶೋಧಕ್ಕೆ ಯಾರೂ ಮನ ಮಾಡಿಲ್ಲ.

ಹೀಗೆ ಮೂಲವನ್ನು ಹುಡುಕುವುದಕ್ಕೆ, ಪಂಜಾಬಿನ ಕ್ಷೋಭೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ನಾವು ರಾಷ್ಟ್ರೀಯ ಸಮಗ್ರತೆ ಹಾಗೂ ಏಕತೆಗಳ ಬಗ್ಗೆ ಕಟ್ಟಿಕೊಂಡ ಕಣ್ಪಟ್ಟಿ ಅಡ್ಡಿ ಮಾಡುತ್ತದೆ. ನಾವು ಚಿತ್ರಿಸಿಕೊಂಡ ರಾಷ್ಟ್ರೀಯ ಏಕತೆಯ ಕನಸಿನ ರಾಜ್ಯದಲ್ಲಿ ಪಂಜಾಬಿನವರ ಆಶೋತ್ತರಗಳಿಗೆ, ಅಂತಹ ಬೇರೆ ಇತರ ಬೇಡಿಕೆಗಳಿಗೆ ಜಾಗವಿಲ್ಲ.

ಆದ್ದರಿಂದಲೇ ಈ ಸಮಸ್ಯೆ ಬೆಳೆದು ಭೂತಾಕಾರವಾಗಿದೆ. ಪಂಜಾಬಿನ ಸಮಸ್ಯೆ ಅಧಿಕಾರ ಕೇಂದ್ರೀಕರಣದಿಂದ ಹುಟ್ಟಿದೆ. ಇದನ್ನು ನಾವು ಹತ್ತಾರು ಬಾರಿ ಹೇಳಿದ್ದೇವೆ. ಇಂದು ಪಂಜಾಬಿನಲ್ಲಿ ಆದದ್ದು ನಾಳೆ ಇನ್ನೊಂದೆಡೆ ಆದೀತು. ಅಧಿಕಾರವನ್ನು ದಿಲ್ಲಿಯ ದೊರೆಗಳು ತಮ್ಮ ಕೈಯೊಳಗೇ ಜತನದಿಂದ ಕಾಪಾಡಿದ್ದು, ಜನರಿಗೆ ಹಂಚಿ ಕೊಡಲು ನಿರಾಕರಿಸಿದ್ದು ಈ ನೆಲದಲ್ಲಿ ಜನತಂತ್ರವು ತಂತ್ರಗಾರಿಕೆಯವರಿಗೆ ಒಲಿದು ತನ್ನ ಅರ್ಥವನ್ನೆಲ್ಲ ಕಳೆದುಕೊಂಡದ್ದು ಪಂಜಾಬು ಸಮಸ್ಯೆಯ ಮೂಲ. ಹೊರಗಿನ-ಮೇಲಿನ ಉಸ್ತುವಾರಿಯನ್ನು ಮಾತ್ರವೇ ಕೇಂದ್ರ ಸರಕಾರ ಮಾಡತಕ್ಕದ್ದು. ಉಳಿದೆಲ್ಲ, ಜನಜೀವನವನ್ನು ತಟ್ಟುವ ಆಡಳಿತೆಯನ್ನು ಸ್ಥಳೀಯ ಆಡಳಿತಕ್ಕೇ ಬಿಟ್ಟು ಕೊಡತಕ್ಕದ್ದು. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಕಾನೂನು ರಚನೆ ಅಧಿಕಾರವೆಲ್ಲ ಸ್ಥಳೀಯವಾಗಿ ಇರತಕ್ಕದ್ದು. ಅದನ್ನೆಲ್ಲ ಜನಮನದ ಸ್ಪಂದನ ಅರಿತ, ಜನರ ಸಮಸ್ಯೆಯನ್ನು ಹತ್ತಿರದಿಂದ ತಿಳಿದ ಅವರ ಪ್ರತಿನಿಧಿಗಳೇ ಮಾಡಬೇಕು. ರಾಜ್ಯಾಡಳಿತದಲ್ಲಿ ಇಂಥ ಆಮೂಲಾಗ್ರ ಬದಲಾವಣೆ ಆಗದ ಹೊರತು ಜನತಂತ್ರಕ್ಕೆ ತಿರುಳು ಸಿಗದು. ಪಂಜಾಬಿನ ಕ್ಷೋಭೆ ಅದನ್ನೇ ಕೂಗಿ ಹೇಳುತ್ತದೆ. ಈ ಕೂಗೂ ನಮ್ಮನ್ನಾಳುವವರಿಗೆ ಇನ್ನೂ ಕೇಳಿಸದೆ ಇರುವುದೇ ಈ ದೇಶದ ದುರ್ದೈವ.

ಮುಂಗಾರು

ಬುಧವಾರ, ಆಗಸ್ಟ್ 13, 1986

ಬೇಕು - ಕಡಲಿಗೊಂದು ತಡೆ

ಮಳೆಗಾಲ ಬರುತ್ತಲೇ ಕಡಲ ತಡಿಯ ನಿವಾಸಿಗಳ ಬದುಕು ಭಯದಿಂದ ತಲ್ಲಣಿಸುತ್ತದೆ. ಅನುದಿನವೂ ಅನ್ನ ಕೊಡುವ ಕಡಲ ಕೃಪೆ ಮಳೆಗಾಲದಲ್ಲಿ ಕಣ್ಮರೆಯಾಗಿ ಅದು ಕೋಪದಿಂದ ಗರ್ಜಿಸುತ್ತದೆ. ನಿಯಂತ್ರಣ ಮೀರಿ ಭೂಮಿಯ ಮೇಲೆ ಲಗ್ಗೆ ಹಾಕುತ್ತದೆ. ಕರ್ನಾಟಕ ಕರಾವಳಿಯಲ್ಲಿ ಇಂತಹ ವಿದ್ಯಮಾನ ಹತ್ತಾರು ವರ್ಷಗಳಿಂದ ನಡೆದುಬಂದಿದೆ. ಮುಂಬಯಿ ಆಸುಪಾಸಿನಲ್ಲಿ ಮನುಷ್ಯರು ಸಾವಿರಾರು ಎಕ್ರೆ ನೆಲವನ್ನು ಸಮುದ್ರದ ಮಡಿಲಿನಿಂದ ಕಸಿದುಕೊಂಡದ್ದರ ಪ್ರತೀಕಾರವೇ ಇರಬೇಕು-ಕೇರಳದಲ್ಲಿ ಕಡಲಾಕ್ರಮಣ ನಡೆಯಿತು. ಅಲ್ಲಿನ ಮಂದಿ ತಮ್ಮ ನೆಲನ ಕೋಟೆಯನ್ನು ಬಿಡಲಿಲ್ಲ. ಭದ್ರವಾಗಿ ಹಿಡಿದರು. ಇದೀಗ ಕರ್ನಾಟಕದ ಕರಾವಳಿಯನ್ನು ಕಬಳಿಸಲು ಅರಬೀ ಸಮುದ್ರ ಲಗ್ಗೆ ಹಾಕಿದೆ.

ದಕ್ಷಿಣ ಕನ್ನಡದ ಉಳ್ಳಾಲದ ಕೋಟೆ ಪುರದಿಂದ ತೊಡಗಿ ಉತ್ತರದ ಮರವಂತೆ, ಗಂಗೊಳ್ಳಿ ತನಕ, ಮಧ್ಯೆ ಮುಕ್ಕ-ಸಸಿಹಿತ್ಲು, ಸಡಿಕುದ್ರು, ಹೆಜಮಾಡಿ ಕೋಡಿ, ಕಾಪು, ಮೂಳೂರು, ಉಳಿಯಾರಗೋಳಿ, ಕೋಡಿಬೆಂಗ್ರೆ, ಪಡುಕೆರೆ, ಕುಂದಾಪುರಕೋಡಿ ಇಲ್ಲೆಲ್ಲ ನೂರಾರು ಎಕ್ರೆ ಭೂಮಿ ಈಗಾಗಲೇ ಸಮುದ್ರದ ವಶವಾಗಿದೆ. ಉತ್ತರ ಕನ್ನಡದಲ್ಲಿ ಭಟ್ಕಳ, ಹೊನ್ನಾವರದ ಪಾವಿನಕುರ್ವೆ ಹಾಗೂ ಕರ್ಕಿಗಳಲ್ಲಿ ಕಡಲು ನೆಲವನ್ನು ಕಬಳಿಸಿದೆ.

ಮನುಷ್ಯನ ಮೇಲೆ ಪ್ರಕೃತಿ ನಡೆಸುತ್ತಿರುವ ಈ ಸಮರದಲ್ಲಿ ಈ ತನಕವೂ ಮನುಷ್ಯ ಅಸಹಾಯಕನಾಗಿದ್ದಾನೆ. ನೂರಾರು ಮನೆಗಳು ಈಗಾಗಲೇ ಕಡಲಿನಲ್ಲಿ ಕರಗಿ ಹೋಗಿವೆ, ಮಣ್ಣಿನ ಮಕ್ಕಳು ನೆಟ್ಟು ಬೆಳೆಸಿದ ಸಾವಿರಾರು ತೆಂಗಿನ ಮರಗಳು ಸಮುದ್ರಕ್ಕೆ ಬಿದ್ದಿವೆ. ಕಡಲಿನಲ್ಲಿ ಕಾರ್ಯ ನಡೆಸುವ ಸಾವಿರಾರು ಜನರು ನಿಂತ ನೆಲವೇ ಕರಗಿ ಹೋಗಿದೆ.

ಇದು ಇಂದು ನಿನ್ನೆಯ ವಿದ್ಯಮಾನವಲ್ಲ. ಸುಮಾರು ಎರಡು ದಶಕಗಳಿಂದ ಕರ್ನಾಟಕದ ಕರಾವಳಿಯಲ್ಲಿ ಕಡಲಿನಬ್ಬರಕ್ಕೆ ನೆಲ ಕರಗುವ ಅವಘಡಗಳು ನಡೆಯುತ್ತಿವೆ. ಜನರು ರಕ್ಷಣೆಗಾಗಿ ಸರಕಾರಕ್ಕೆ ಮೊರೆಯಿಡುತ್ತ ಬಂದಿದ್ದಾರೆ. ಅವರ ಪ್ರತಿನಿಧಿಗಳೂ ಕಡಲು ಕೊರೆತದ ಸುದ್ದಿ ಬಂದಾಗೆಲ್ಲ ಸ್ಥಳಕ್ಕೆ ಭೇಟಿ ಕೊಟ್ಟು ಬಾಯುಪಚಾರದ ಸಮಾಧಾನಮಾಡಿ ಹಿಂದಿರುಗಿದ್ದಾರೆ. ಅಧಿಕಾರಿಗಳೂ ಬಂದು ನೋಡಿ ಪರಿಹಾರ ಕೊಡಿಸುವ ಆಶ್ವಾಸನೆ ಕೊಟ್ಟಿದ್ದಾರೆ. ಕಡಲ ಕೊರೆತದ ಬಗ್ಗೆ ಕಡತಗಳ ಸೃಷ್ಟಿ ಆಗಿದೆ. ಅವೆಲ್ಲವೂ ಬೆಚ್ಚಗೆ ಮಲಗಿವೆ.

ಕಡಲ ಕೊರೆತವನ್ನು ತಡೆಯುವುದಕ್ಕೆ ಶಾಶ್ವತ ಕ್ರಮ ಅಗತ್ಯ. ಈಗ ರಾಜ್ಯ ಸರಕಾರ ಕಡಲು ಕೊರೆತ ಕಂಡು ಬಂದಲ್ಲೆಲ್ಲ ಪ್ರಾಯೋಗಿಕವಾಗಿ ತಡೆಯುವ ಪ್ರಯತ್ನ ನಡೆಸುತ್ತಿದೆ. ಕೆಲವೆಡೆ ಗಾಳಿ ಮರಗಳ ತೋಪುಗಳನ್ನು ಬೆಳೆಸಿ ಸಮುದ್ರದ ದಾಳಿಯನ್ನು ತಡೆಯುವ ಪ್ರಯೋಗ ನಡೆದಿದೆ. ಕೆಲವೆಡೆ ಡ್ರಮ್‌ಗಳಿಗೆ ಮರಳು ತುಂಬಿಸಿ ದಂಡೆಗೆ ಆನಿಸಲಾಗಿದೆ. ಇನ್ನು ಕೆಲವೆಡೆ ಕಗ್ಗಲ್ಲುಗಳನ್ನಿಟ್ಟು ತೆರೆಯನ್ನು ತಡೆದು ನಿಲ್ಲಿಸುವ ಪ್ರಯೋಗ ನಡೆದಿದೆ.

ಈ ಪ್ರಯೋಗಕ್ಕೇ ಲಕ್ಷಾಂತರ ರೂಪಾಯಿ ವೆಚ್ಚವಾಗುತ್ತಿದೆ. ಯಾವ ಗಾತ್ರದ ಕಲ್ಲು ಹಾಕಿದರೆ ತೆರೆಯನ್ನು ತಡೆದೀತು ಎಂಬ ಪ್ರಯೋಗ ನಡೆಯುತ್ತಿದೆ. ತಾಂತ್ರಿಕವಾಗಿ ಪ್ರಯೋದಾರ್ಥ ಕಾಮಗಾರಿಯಾದ್ದರಿಂದ ಗುತ್ತಿಗೆ ವಹಿಸಿಕೊಂಡವರು ಕೆಲಸದ ಬಗ್ಗೆ ಸರಕಾರಕ್ಕೆ ಯಾವ ಗ್ಯಾರಂಟಿಯನ್ನೂ ಕೊಡಬೇಕಾಗಿಲ್ಲ. ಇದರ ಪರಿಣಾಮವಾಗಿಯೇ ಗುತ್ತಿಗೆದಾರರು ಕಡಲಿಗೆ ಕಲ್ಲು ಹಾಕಿದ್ದೇವೆಂದು ಸರಕಾರಕ್ಕೆ ಹೇಳಿ ಕಡಲ ಮಕ್ಕಳ ಒಡಲಿಗೆ ಕಲ್ಲು ಹಾಕುತ್ತಿದ್ದಾರೆ.

ಕಡಲಾಕ್ರಮಣ ತಡೆಯಲು ದೊಡ್ಡ ಕಗ್ಗಲ್ಲುಗಳ ಗೋಡೆ ಕಟ್ಟಬೇಕು. ಇದಕ್ಕೆ ಕರ್ನಾಟಕದಲ್ಲಿ ಹೊಸದಾಗಿ ಪ್ರಯೋಗ ನಡೆಯಬೇಕಾದ್ದು ಏನೂ ಇಲ್ಲ. ಕೇರಳದಲ್ಲಿ ಇಂತಹ ಗೋಡೆಯ ಉಪಯುಕ್ತತೆ ಸಾಬೀತಾಗಿದೆ. ಅಲ್ಲಿ ದಕ್ಷಿಣದಿಂದ ಉತ್ತರದ ತನಕ ಕಡಲು ನೆಲವನ್ನು ಕೊರೆದಲ್ಲೆಲ್ಲ ಕಗ್ಗಲ್ಲಿನ ದಂಡೆ ಕಟ್ಟಲಾಗಿದೆ. ಆದ್ದರಿಂದಲೇ ಕಡಲ ಕೊರೆತ ನಿಂತಿದೆ.

ಇಂಥ ಬಲವಾದ ದಂಡೆಯನ್ನು ಕರ್ನಾಟಕ ಕರಾವಳಿಯಲ್ಲಿಯೂ ಕಟ್ಟಬೇಕು. ಸಮುದ್ರ ಕೊರೆತಕ್ಕೆ ಈಡಾಗುವ ಸಾಧ್ಯತೆಯಿರುವ ಜಾಗಗಳಲ್ಲೆಲ್ಲ ಇದನ್ನು ಮಾಡಬೇಕು. ಇದಕ್ಕಾಗಿ ಸುಸಜ್ಜಿತವಾದ ಯೋಜನೆ ಸಿದ್ಧಪಡಿಸಬೇಕು. ಅದಕ್ಕೆ ಕೇಂದ್ರ ಸರಕಾರವೂ ನೆರವಾಗಬೇಕು. ನದಿಗಳಲ್ಲಿ ಬರುವ ನೆರೆಯಂತೆಯೇ ಕಡಲ ಕೊರೆತವೂ ಪ್ರಾಕೃತಿಕ ಪ್ರಕೋಪ. ಇದನ್ನು ನಿವಾರಿಸಬೇಕಾದ ಕರ್ತವ್ಯ ಕೇಂದ್ರ ಸರಕಾರಕ್ಕುಂಟು. ಕರ್ನಾಟಕ ಕರಾವಳಿಯಲ್ಲಿ ಕಡಲ ಕೊರೆತ ನಡೆಯುತ್ತಿರುವ ಬಗ್ಗೆ ರಾಜ್ಯ ಸರಕಾರ ಕೇಂದ್ರಕ್ಕೆ ತಿಳಿಸಿದೆ. ಆದರೂ ಕೇಂದ್ರ ಈ ಬಗ್ಗೆ ಗಮನಿಸಿದಂತಿಲ್ಲ, ರಾಜ್ಯ ಕಳಿಸಿದ ಯೋಜನೆ ಮಂಜೂರಾಗಿಲ್ಲ. ಇದೇಕೆ ಹೀಗೆ? ಸಂಬಂಧಪಟ್ಟ ಸ್ಥಳೀಯ ನಾಯಕರು ಏಕೆ ಮುತುವರ್ಜಿ ವಹಿಸಿಲ್ಲ.

ಕಡಲ ಕೊರೆತದ ವಿಚಾರವಾಗಿ ಕ್ಷುಲ್ಲಕ ರಾಜಕೀಯ ಬೇಡ. ತಡೆಗೋಡೆ ಕಟ್ಟುವ ಹೊಣೆಗಾರಿಕೆ ರಾಜ್ಯ ಸರಕಾರದಂತೆ ಕೇಂದ್ರಕ್ಕೂ ಉಂಟು. ಈ ದೊಡ್ಡ ದುರಂತವನ್ನು ತಡೆಯುವುದಕ್ಕೆ ಸಣ್ಣಪುಟ್ಟ ಪ್ರಯೋಗದ ನಾಟಕವನ್ನೆಲ್ಲ ಬದಿಗಿಟ್ಟು ಸಮಗ್ರ ಯೋಜನೆ ಅನುಷ್ಠಾನಿಸುವ ಕೆಲಸವಾಗಬೇಕು.

ಮುಂಗಾರು
ಗುರುವಾರ, ಆಗಸ್ಟ್ 14, 1986

ಕಾನೂನೇ ಪರಮಧ್ಯೇಯವಲ್ಲ

ಈ ವಾರದಾದಿಯಲ್ಲಿ ಒಂದು ಸಣ್ಣ ವಾರ್ತೆ [illegible] ವಾರ್ತೆ ಸಣ್ಣದಾದರೂ ಅದರ ಮಹತ್ವ ಸಣ್ಣದಾಗಿರಲಿಲ್ಲ. ಜನಜೀವನವನ್ನು ನೇರವಾಗಿ ತಟ್ಟುವ ವಿಚಾರಕ್ಕೆ ಸಂಬಂಧಪಟ್ಟ ವಿಚಾರ ಅದಾಗಿತ್ತು. ಪ್ಯಾಕ್ ಮಾಡಲಾದ ಸಾಮಗ್ರಿಗಳಲ್ಲಿ ಅವುಗಳ ಗರಿಷ್ಠ ಬಿಡಿ ಮಾರಾಟ ಬೆಲೆಯಲ್ಲದೆ ಸ್ಥಳೀಯ ತೆರಿಗೆಗಳು ಎಷ್ಟು ಎಂಬುದನ್ನು ನಮೂದಿಸಬೇಕು ಎಂದೂ ಕಡ್ಡಾಯವಾಗಿ ವಿಧಿಸುವ ಶಾಸನ ಮಾಡಲಾಗುವುದು ಎಂಬುದೇ ಈ ಸುದ್ದಿ.

ಈಗ ಪೊಟ್ಟಣಗಳಲ್ಲಿ ಅಥವಾ ಜಾಡಿಗಳಲ್ಲಿ ಮಾರಾಟ ಮಾಡುವ ಎಲ್ಲಾ ಸಾಮಗ್ರಿಗಳ ಹಾಗೂ ಔಷಧಿಗಳ ಮೇಲೆ ಅವುಗಳ ಬೆಲೆಯನ್ನು ನಮೂದಿಸಬೇಕು ಎಂಬ ನಿಯಮವಿದೆ. ಸುಮಾರು ಒಂದು ದಶಕದ ಹಿಂದೆ ತುರ್ತುಸ್ಥಿತಿ ಕಾಲದಲ್ಲಿ ಈ ಕಾನೂನು ಬಂತು. ಇದರಿಂದ ಗ್ರಾಹಕರಿಗೆ ತುಂಬಾ ಅನುಕೂಲವಾಗಿದೆ. ತಾನು ಕೊಂಡುಕೊಳ್ಳುವ ಸಾಮಗ್ರಿಯ ಬೆಲೆಯ ಬಗ್ಗೆ ಏನೂ ಅಂದಾಜೇ ಇಲ್ಲದ ಗ್ರಾಹಕನು ಕೂಡಾ ವ್ಯಾಪಾರಿಯಿಂದ ದೊಡ್ಡ ಮೋಸಕ್ಕೆ ಒಳಗಾಗದೆ ಪಾರಾಗಿ ಬರಬಲ್ಲ ಒಂದು ವ್ಯವಸ್ಥೆ ಇದಾಗಿದೆ. ಆದರೆ ಈ ನಿಯಮ ಬಂದ ಮೇಲೆ ಕೂಡ ವ್ಯಾಪಾರಿ ಸಮುದಾಯದಲ್ಲಿ ಸೇರಿಕೊಂಡ ತತ್ವಭ್ರಷ್ಟರು ಸ್ಥಳೀಯ ತೆರಿಗೆಗಳ ಹೆಸರಿನಲ್ಲಿ ದುಪ್ಪಟ್ಟು ಬೆಲೆ ಹೇಳಿ ಗ್ರಾಹಕರನ್ನು ಮೋಸ ಮಾಡುವ ವಿದ್ಯಮಾನ ನಡೆದು ಬಂದಿದೆ. ಸಾಮಾನ್ಯವಾಗಿ ಯಾವ ಸಾಮಗ್ರಿಗೆ ಎಷ್ಟು ಸ್ಥಳೀಯ ತೆರಿಗೆ ಎಂಬುದು ಗ್ರಾಹಕನಿಗೆ ಅರಿವಿರುವುದಿಲ್ಲ. ಆದ್ದರಿಂದಲೇ ಮೋಸ ಮಾಡುವವರಿಗೆ ಸ್ಥಳೀಯ ತೆರಿಗೆ ಎಂಬ ಸಂಗತಿ ಅನುಕೂಲಕರವಾಗಿದೆ. ಇದೀಗ ಸ್ಥಳೀಯ ತೆರಿಗೆಯ ಮೊತ್ತ ಎಷ್ಟು ಎಂಬುದನ್ನು ಪೊಟ್ಟಣಗಳಲ್ಲಿ ಚಿಲ್ಲರೆ ವ್ಯಾಪಾರಿಯು ನಮೂದಿಸಬೇಕು ಎಂಬ ಕಾನೂನನ್ನು ಕೇಂದ್ರ ಸರಕಾರ ತರಲಿದೆ. ಇದು ಸ್ವಾಗತಾರ್ಹ.

ಕಾನೂನು ಬೇಕು. ಆದರೆ ಎಲ್ಲವೂ ಕಾನೂನಿನಿಂದಲೇ ಆಗದು. ಪೊಟ್ಟಣಗಳಲ್ಲಿ ಬೆಲೆ ನಮೂದಿಸಬೇಕು ಎಂಬ ನಿಯಮ ಕೂಡ ಹಲವು ಸಂದರ್ಭಗಳಲ್ಲಿ ಅನುಷ್ಠಾನಕ್ಕೆ ಬಂದಿರುವುದಿಲ್ಲ. ತೂಕ ಹಾಗೂ ಅಳತೆಯಲ್ಲಿ ಮೋಸ ಮಾಡಬಾರದು ಎಂದೊಂದು ನಿಯಮವಿದೆ. ಅದನ್ನು ಉಲ್ಲಂಘಿಸುವವರಿಗೆ ದಂಡನೆ ವಿಧಿಸುವ ಅಧಿಕಾರ ನ್ಯಾಯಾಲಯಗಳಿಗಿವೆ. ಆದರೂ ಈ ದೇಶದಲ್ಲಿ ವ್ಯಾಪಾರಿಗಳು ಪ್ರತಿವರ್ಷ ಸುಮಾರು 1600 ಕೋಟಿ ರೂಪಾಯಿಗಳ ಮೌಲ್ಯಕ್ಕೆ ಸಮಾನವಾದ ಸಾಮಗ್ರಿಗಳನ್ನು ತೂಕ ಅಳತೆ ಮೋಸದ ಮೂಲಕ ಗ್ರಾಹಕರಿಗೆ ವಂಚಿಸುತ್ತಾರೆ.

ಗ್ರಾಹಕರ ಅಜ್ಞಾನದಿಂದಲೂ ಸಂಘಟನೆಯ ಕೊರತೆಯಿಂದಲೂ ಹೀಗಾಗುತ್ತದೆ. ತಮ್ಮ ಹಕ್ಕುಗಳ ಬಗ್ಗೆ ಗ್ರಾಹಕರಿಗೆ ಜ್ಞಾನವಾಗಲಿ, ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೆ ಸೂಕ್ತವಾದ ಸಂಘಟನೆಯಾಗಲಿ ಇಲ್ಲವಾದಾಗ ನಾಲ್ಕೂ ಕಡೆಯಿಂದಲೂ ಗ್ರಾಹಕರ ಶೋಷಣೆ ನಡೆಯುತ್ತದೆ. ಖಾಸಗಿ ವ್ಯಾಪಾರಿಗಳು ಮಾತ್ರವಲ್ಲದೆ ಉದ್ಯಮ ಸಂಸ್ಥೆಗಳೂ ಸಂಘಟಿತವಾಗಿ ಜನ ಸಾಮಾನ್ಯರನ್ನು ಹೀರುತ್ತವೆ. ಇನ್ನೊಂದೆಡೆಯಿಂದ ಸರಕಾರದ ಇಲಾಖೆಗಳು ತಾವು ಜನತೆಗೆ ಒದಗಿಸಬೇಕಾದ ಸೇವೆಯನ್ನು ಸಮರ್ಪಕವಾಗಿ ಒದಗಿಸದೆ ಹಣ ದೋಚುವ ಕೆಲಸವನ್ನಷ್ಟೇ ಮಾಡುತ್ತವೆ.

ಗ್ರಾಹಕರ ರಕ್ಷಣೆಗಾಗಿ ಕಾನೂನನ್ನು ಮಾತ್ರವೇ ರಚಿಸುತ್ತ, ಅವುಗಳ ಅನುಷ್ಠಾನದ ಬಗ್ಗೆ ಯೋಚಿಸದಿದ್ದರೆ, ಅವುಗಳ ಬಗ್ಗೆ ಜ್ಞಾನವನ್ನು ಸಾರ್ವಜನಿಕರಲ್ಲಿ ಮೂಡಿಸದೆ ಇದ್ದರೆ ಕಾನೂನೂ ಜನಗಳೂ ಎಲ್ಲರೂ ಕತ್ತೆಗಳೇ ಆಗುತ್ತಾರೆ. ಈ ದೇಶದಲ್ಲಿ ಬಹು ಕಾಲದಿಂದ ಹೀಗಾಗಿದೆ.

ಇದನ್ನು ನಿವಾರಿಸುವುದಕ್ಕಿರುವ ಒಂದೇ ದಾರಿ ಗ್ರಾಹಕರ ಚಳವಳಿ. ಇದನ್ನು ಕಟ್ಟಿ ಬೆಳೆಸಬೇಕು. ಅದು ಒಂದು ಆಂದೋಲನವೇ ಆಗಿ ಬೆಳೆಯಬೇಕು. ಗ್ರಾಹಕನ ಶೋಷಣೆ, ಅನ್ಯಾಯ ಅಕ್ರಮಗಳನ್ನು ಮತ್ತೆ ಮತ್ತೆ ಬಯಲಿಗೆ ತರಬೇಕು. ಪರೀಕ್ಷಾರ್ಥ ಪ್ರಕರಣಗಳನ್ನು ತೆಗೆದುಕೊಂಡು ಸಾರ್ವಜನಿಕ ಹಿತದ ನೆಲೆಯಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಬೇಕು. ಇಂಥ ದಾವೆಗಳಿಗೆ ಸದ್ಯಕ್ಕಂತೂ ನ್ಯಾಯಾಂಗದ ಬಾಗಿಲು ತೆರೆದೇ ಇದೆ. ಈ ಚಳವಳಿಗೆ ಸರಕಾರವೂ ಉದಾರವಾಗಿ ಸಹಾಯ ಮಾಡಬೇಕು; ಸಾಂಸ್ಥಿಕ ಹಾಗೂ ಕಾನೂನು ಥರ ನೆರವನ್ನು ಒದಗಿಸಬೇಕು. ಗ್ರಾಹಕರ ಹಿತ ರಕ್ಷಣೆಗೆ ಗ್ರಾಹಕ ಚಳವಳಿ ಹೊರತು ಬೇರೆ ದಾರಿಯಿಲ್ಲ. ಕಾನೂನೆಲ್ಲ ಅದಕ್ಕೆ ಪೂರಕ-ಅಷ್ಟೆ.

ಮುಂಗಾರು

ಶುಕ್ರವಾರ, ಆಗಸ್ಟ್ 15, 1986

ರಾಜ್ಯಗಳ ಒಕ್ಕೂಟ ರಚಿಸಿ

ಸ್ವಾತಂತ್ರ್ಯ ಸಿಕ್ಕಿ ನಲುವತ್ತು ವರ್ಷ ಪೂರ್ತಿ ಗೊಳ್ಳಲು ಇನ್ನೊಂದು ವರ್ಷ ಮಾತ್ರ ಬಾಕಿ. ನಾಲ್ಕು ದಶಕಗಳ ಕಾಲ ಸಣ್ಣ ಅವಧಿಯೇನೂ ಅಲ್ಲ. ಒಂದು ಜನಾಂಗವು ಒಂದು ದೇಶವು ತನ್ನ ಕಾಲ ಮೇಲೆ ನಿಲ್ಲಲು ಸಮರ್ಥವಾಗಬೇಕಾದಂತಹ ಅವಧಿ ಇದು. ಇಷ್ಟು ಸುದೀರ್ಘ ಅವಧಿಯಲ್ಲಿ ಪ್ರಜೆಗಳಿಗೆಲ್ಲ ಸುಖ ಜೀವನವನ್ನು ತಂದು ಕೊಡುವುದು ಯಾವ ರಾಜ್ಯದ ಆಳ್ವಿಕೆಗಾದರೂ ಸಾಧ್ಯವಾಗಬೇಕಾಗಿತ್ತು. ನಮ ಗಿಂತ ಬಳಿಕ ಬಿಡುಗಡೆ ಪಡೆದ ಜನತಾ ಚೀನದಲ್ಲಿ ಇದು ಸಾಧ್ಯವಾಗಿದೆ. ನಮಗಿಂತ ಕಡಿಮೆ ಜನಶಕ್ತಿಯಿದ್ದ ರಶ್ಯದ ಸಮಾಜವಾದಿ ಗಣ ರಾಜ್ಯವು ನಾಲ್ಕು ದಶಕಗಳ ಅವಧಿಯಲ್ಲಿ ಜಗತ್ತಿನಲ್ಲೊಂದು ಮಹಾ ಶಕ್ತಿಯಾಗಿ ಎದ್ದು ನಿಂತಿತ್ತು. ಎರಡನೇ ಮಹಾ ಯುದ್ಧ ಕಾಲದಲ್ಲಿ ಧ್ವಂಸವಾಗಿ ಹೋಗಿದ್ದ ಜಪಾನು ಇಂದು ಜಗತ್ತಿನ ದೊಡ್ಡ ಕೈಗಾರಿಕಾ ಶಕ್ತಿಯೆನಿಸಿದೆ. ಅದೇ ಯುದ್ಧದಲ್ಲಿ ಸಹಿಸಲಾರದ ಹೊಡೆತ ತಿಂದಿದ್ದ ಯುರೋಪಿನ ದೇಶಗಳೆಲ್ಲ ಮತ್ತೆ ತಲೆಯೆತ್ತಿ ತಮ್ಮ ಕೃಷಿ-ಕೈಗಾರಿಕೆಗಳನ್ನು ಪುನರುಜ್ಜೀವನ ಮಾಡಿಕೊಂಡು ಇಂದು ಸಂಪನ್ನ ರಾಷ್ಟ್ರಗಳೆನಿಸಿವೆ.

ಇದನ್ನೆಲ್ಲ ಹೋಲಿಸಿ ನೋಡಿದರೆ ಭಾರತದ ಪ್ರಗತಿ ಅಂಬೆಗಾಲಿನದ್ದಾಗಿದೆ. ನಮ್ಮ ಆರ್ಥಿಕತೆ ಗಮನಾರ್ಹವಾದ ಸಾಧನೆಯೇನನ್ನೂ ಮಾಡಿಲ್ಲ. ಆರ್ಥಿಕತೆಯ ಮೇಲೆ ಹಿಡಿತವನ್ನೇ ಪಡೆಯುವುದಕ್ಕೆ ಸರಕಾರಕ್ಕೆ ಸಾಧ್ಯವಾಗಿಲ್ಲ. ನಮ್ಮ ಯೋಜನೆಗಳಲ್ಲಿ ವೆಚ್ಚವಾದ ಹಣವೆಲ್ಲ ಯೋಜನೆಯ ಫಲದ ರೂಪದಲ್ಲಿ ಜನರಿಗೆ ಪ್ರಯೋಜನ ಕೊಡುವ ಬದಲು ನೌಕರ ಶಾಹಿ ಹಾಗೂ ಖಾಸಗಿ ರಂಗದ ಕೆಲವೇ ಕೈಗಾರಿಕೆ ಹಾಗೂ ವಾಣಿಜ್ಯ ಸದನಗಳ ಹೊಟ್ಟೆ ತುಂಬಿಸಿವೆ. ನಮ್ಮ ಕೈಗಾರಿಕಾ ರಂಗವು ನಗರಗಳನ್ನು ಬೆಳೆಸಿದೆ. ನಮ್ಮ ಕೃಷಿ ರಂಗವು ಬೆಳೆದದ್ದಕ್ಕೆ ತಕ್ಕ ಪ್ರತಿಫಲವಿಲ್ಲದೆ ಶೋಷಣೆಗೆ ಸಿಕ್ಕಿ ಕಂಗಾಲು ಸ್ಥಿತಿಯಲ್ಲಿದೆ. ನಮ್ಮ ನ್ಯಾಯಾಂಗವು ವಿವಾದಗಳನ್ನು ನಿಭಾಯಿಸಲಾಗದೆ ಕ್ಷಿಪ್ರ ನ್ಯಾಯದಾನಕ್ಕೆ ವ್ಯವಸ್ಥೆಯನ್ನು ರೂಪಿಸಲಾಗದ ಹತಾಶೆಯ ಅಂಚಿನಲ್ಲಿದ್ದು ರೋಗಗ್ರಸ್ತವಾಗಿದೆ. ಇಂದೋ ನಾಳೆಯೋ ಕುಸಿಯುವ ಸ್ಥಿತಿಯಲ್ಲಿದೆ. ನಮ್ಮ ವಿದ್ಯಾ ಕ್ಷೇತ್ರವು ಜನರ ಅಗತ್ಯಗಳಿಗೆ ಸ್ಪಂದಿಸದೆ ಜಡ್ಡುಗಟ್ಟಿದು ಕೂತಿದೆ. ಇನ್ನೂ ಉಳ್ಳವರ ಸೊತ್ತಾಗಿ, ಹಣವುಳ್ಳವರು ಇನ್ನಷ್ಟು ಹಣ ಮಾಡಿಕೊಳ್ಳಲು ಬಳಸುವ ಬಂಡವಾಳ ಸಾಮಗ್ರಿಯಾಗಿದೆ. ನಮ್ಮ ವೃತ್ತಿಪರ ಕ್ಷೇತ್ರಗಳು ಸ್ವಾರ್ಥಿಗಳ ಕೈಗೆ ಸಿಕ್ಕಿ ಕುಲಗೆಟ್ಟು

ದೋಷಗಳ ತೂತಿನ ಮೂಲಕ ನುಣಚಿಕೊಂಡು ಸ್ವಂತ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳುತ್ತಿದ್ದಾರೆ.

ಇದರಿಂದೆಲ್ಲ ಆಗಿರುವುದಿಷ್ಟೆ - ನಮ್ಮ ರಾಷ್ಟ್ರವನ್ನು ಸಮಾಜವಾದಿ ಸಮಾಜದ ನೆಲೆಯಲ್ಲಿ ನಿರ್ಮಿಸಬೇಕೆಂದು ಸಂವಿಧಾನವನ್ನು ರಚಿಸಿಕೊಟ್ಟವರ ಆಶೋತ್ತರಗಳೆಲ್ಲ ಮಣ್ಣುಗೂಡಿವೆ. ಉಳ್ಳವರ ಹಾಗೂ ಇಲ್ಲದವರ ಅಂತರ ಇಲ್ಲಿ ಬೆಳೆಯುತ್ತಲೇ ಇದೆ. ನಗರ-ಗ್ರಾಮೀಣ ಭಿನ್ನತೆಯು ಹೆಚ್ಚುತ್ತಲೇ ಹೋಗಿದೆ.

ಅಧಿಕಾರ ಕೇಂದ್ರೀಕರಣವಾದ ಪರಿಣಾಮವಾಗಿ ಆಡಳಿತೆಯ ಮೇಲೆ ಯಾರಿಗೂ ನಿಯಂತ್ರಣ ಇಲ್ಲದಾಗಿ ಬೇಜವಾಬ್ದಾರಿಯೆನಿಸಿದ ಜನರಿಗೆ ಉತ್ತರ ಹೇಳಬೇಕಾದ ಹೊಣೆಗಾರಿಕೆಯಿಲ್ಲದ ನೌಕರ ಶಾಹಿಯ ಕೈಯಲ್ಲಿ ದೇಶದ ಭವಿಷ್ಯ ಸಿಕ್ಕಿರುವುದೇ ಈ ಎಲ್ಲ ರೋಗಕ್ಕೆ ಮೂಲ. ಇಲ್ಲಿ ಹಳ್ಳಿಗಳ ನ್ಯಾಯದ ಕೂಗನ್ನು ನಗರವಾಸಿ ದಲ್ಲಾಳಿಗಳು ನೌಕರ ಶಾಹಿಯ ನೆರವಿನಿಂದ ಕಮರಿಸುತ್ತಾರೆ. ಪ್ರಾದೇಶಿಕ ಆಶೋತ್ತರಗಳನ್ನು ಐಎಎಸ್ ದೊರೆಗಳ ಹಿಂಡು ಹೊಸಕಿ ಹಾಕುತ್ತದೆ.

ಈ ದೇಶದ ಆಡಳಿತೆಗೇ ರೋಗ ಬಡಿದಿದೆ. ಇಲ್ಲಿನ ವ್ಯವಸ್ಥೆಯೇ ವಿಕೃತವಾಗಿದೆ. ಈ ವಿಕೃತಿಯ ಪರಿಣಾಮವೇ ಅಸ್ಸಾಮಿನಲ್ಲಿ ಭುಗಿಲೆದ್ದ "ಅನ್ಯ"ರ ವಿರೋಧಿಯಾದ ಚಳವಳಿ. ಪಂಜಾಬಿನಲ್ಲಿ ಕುದಿಯುತ್ತಿರುವ ಖಾಲಿಸ್ತಾನ ಪರವಾದ ಕ್ಷೋಭೆ. ತಮಿಳ್ನಾಡಿನಲ್ಲಿ ಪ್ರಾದೇಶಿಕ ಆಶೋತ್ತರ ಸ್ವಾತಂತ್ರ್ಯಗಳಿಕೆಯ ಜತೆಗೇನೆ ಹುಟ್ಟಿಕೊಂಡಿತ್ತು. ಆಂಧ್ರ ಪ್ರದೇಶದ ಅದು ತಲೆಯೆತ್ತಲು ಮತ್ತೆ ಮೂರು ದಶಕವೇ ಕಳೆಯಬೇಕಾಯಿತು.

ಇದೆಲ್ಲವೂ ಒಂದೇ ಕಡೆಗೆ ಬೆಟ್ಟು ಮಾಡುತ್ತಿವೆ. ನಮ್ಮ ರಾಜ್ಯಾಡಳಿತ ವ್ಯವಸ್ಥೆಯಲ್ಲಿ ಉಂಟಾಗಿರುವ ವಿಕೃತಿಯ ಕಡೆಗೆ. ನಮ್ಮ ಜನತಂತ್ರವು ತನ್ನ ಅರ್ಥವೆಲ್ಲವನ್ನೂ ಕಳೆದು ಕೊಂಡದ್ದರ ಬಗೆಗೆ. ರಾಜಕೀಯ ಅಧಿಕಾರವು ಜನರ ಕೈಯಿಂದ ಜಾರಿ ಹೋಗಿ ದೇರೆಲ್ಲೋ ಕೇಂದ್ರೀಕೃತವಾದದ್ದರ ಕಡೆಗೆ. ಈ ದೇಶದ ಜನ ನಿಂತ ನೆಲದಲ್ಲೇ ಪರಕೀಯರಾಗುತ್ತಿರುವ ಕಡೆಗೆ.

ಈ ವಿಕೃತಿಯನ್ನು ಸರಿಮಾಡುವ ನಿಟ್ಟಿನಲ್ಲಿ ಕೆಲಸ ಆಗಬೇಕು. ಆಳುವ ಹಕ್ಕನ್ನು ನಮ್ಮ ಜನರಿಗೆ ಮತ್ತೆ ತಂದುಕೊಡಬೇಕು. ಜನ ತಮ್ಮ ಭವಿಷ್ಯವನ್ನು, ಆಶೋತ್ತರವನ್ನು ತಮಗೆ ಸರಿ ಕಂಡಂತೆ ರೂಪಿಸುವ ಅವಕಾಶ ತಂದು ಕೊಡಬೇಕು. ಅಧಿಕಾರ

ತಿ. ಈ ದೇಶದ ರಾಜಕಾರಣಿಗಳು ರೂಪಿಸಿದ ಆಡಳಿತ ವ್ಯವಸ್ಥೆ ಇದಾವುದನ್ನೂ ಸಮರ್ಪಕವಾಗಿ ನಿಭಾಯಿಸುವ, ಸುಧಾರಿಸುವ ಸಾಮರ್ಥ್ಯವನ್ನು ಹೊಂದಿಲ್ಲ ಬುದ್ಧಿ ಬಲವಿಲ್ಲದ ಈ ಮಂದಿ ಅಧಿಕಾರವನ್ನು ಕೆಲವೇ ಕೈಗಳಲ್ಲಿ ಕೊಟ್ಟು ತಾವು ಸುಖದ ಸುಪ್ಪತ್ತಿಗೆಯನ್ನು ಆತುಕೊಂಡು ಅಲೆಯುತ್ತಿದ್ದಾರೆ. ಅಧಿಕಾರವು ದೇಶದ ಪ್ರಗತಿಯ ಪ್ರಕ್ರಿಯೆ ನಡೆಯುವ ಕಾರ್ಯಾಗಾರವಾಗುವ ಬದಲು ಸುಖ ಸಂಪತ್ತಿನ ರಸಾಯನವನ್ನು ಸೂರೆ ಹೊಡೆಯುವ ತಾಣಗಳಾಗಿವೆ. ರಾಜಕಾರಣಿಗಳ ಗೈರು ಹಾಜರಿಯಲ್ಲೇ ಆಡಳಿತ ನಡೆಯುತ್ತಿದೆ. ಅಧಿಕಾರಿಗಳ ಸಮುದಾಯ ಆಳ್ವಿಕೆಯ ಸೂತ್ರ ಹಿಡಿದಿದೆ.

ಇದರ ಪರಿಣಾಮ ಎಲ್ಲರೂ ಊಹಿಸುವಂತದ್ದು. ಜನ ತಂತ್ರವು ಈ ದೇಶದಲ್ಲಿ ನಿದ್ದೆ ಹೊಡೆಯುತ್ತಿದೆ. ನೌಕರಶಾಹಿಯು ಪ್ರಜಾ ವರ್ಗವನ್ನು ತೆಕ್ಕೆ ಸೆರೆ ಹಿಡಿದಿದೆ. ಪ್ರಜಾಪ್ರಭುತ್ವವು ಇದರ ಪರಿಣಾಮವಾಗಿಯೇ ಬರೇ ಬೂಟಾಟಿಕೆಯೆನಿಸಿದೆ. ಸಂಸತ್ತು ಹಾಗೂ ಶಾಸನ ಸಭೆಗಳು ರಚಿಸಿದ ಕಾನೂನುಗಳು ಅನುಷ್ಠಾನಕ್ಕೆ ಬಾರದೆ ಕಡತಗಳಲ್ಲಿ ನಿದ್ರಿಸುತ್ತಿವೆ. ಬಲಾಢ್ಯರು ಈ ಕಾನೂನುಗಳ ಲೋಪ

ವಿಕೇಂದ್ರೀಕರಣದ ಮೂಲಕ ಇದನ್ನು ಮಾಡಬೇಕು. ಆಡಳಿತ ಘಟಕಗಳನ್ನು ಅಗತ್ಯವಿದ್ದರೆ ಇನ್ನಷ್ಟು ಸಣ್ಣದು ಮಾಡಬೇಕು. ಜನರ ದೈನಂದಿನ ಜೀವನವನ್ನು ಬಾಧಿಸುವ ವಿಚಾರಗಳಆಳ್ವಿಕೆಯನ್ನೆಲ್ಲ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೆ ಬಿಟ್ಟು ಕೊಡಬೇಕು. ಒಟ್ಟಂದದ ಉಸ್ತುವಾರಿ ಮಾತ್ರ ಅದರ ಕೈಯಲ್ಲಿದ್ದರೆ ಸಾಕು. ರಾಜ್ಯಾಂಗವನ್ನು ಪುನರ್ರೂಪಿಸಬೇಕು. ಈ ದೇಶವನ್ನು ರಾಜ್ಯಗಳ ಒಂದು ಸಡಿಲವಾದ ಒಕ್ಕೂಟವಾಗಿ ಮಾಡಬೇಕು. ಜನರ ಆರ್ಥಿಕ-ಸಾಮಾಜಿಕ ಶೈಕ್ಷಣಿಕ ಬದುಕನ್ನು ರೂಪಿಸುವ ಎಲ್ಲ ಅಧಿಕಾರ ಈ ರಾಜ್ಯಗಳಿಗೇ ಇರಬೇಕು.

ಹೀಗೆ ಜನರ ಕೈಗೆ ನೈಜ ರಾಜ್ಯಾಧಿಕಾರ ಬಂದರೆ ಈ ಸಮಾಜವನ್ನು ಬಾಧಿಸುವ ಹತ್ತು ಹಲವು ಸಮಸ್ಯೆಗಳಿಗೆ ಸುಲಭದ ಪರಿಹಾರ ಕಂಡೀತು. ಯಾಕೆಂದರೆ ಸಮಸ್ಯೆಗಳನ್ನು ನಿವಾರಿಸಬೇಕಾದವರಿಗೆ ಅದರ ಸ್ವರೂಪ ಅರ್ಥವಾಗುವುದರಿಂದ ಪರಿಹಾರದ ದಾರಿಯೂ ಕಾಣ ಸಿಗುತ್ತದೆ. ನಮಗೆ ಬೇಕಾಗಿರುವ ಜನತಂತ್ರ ಇಂದಿನದಲ್ಲವೆಂದುಸಾಬೀತಾಗಿರುವುದರಿಂದ ಅರ್ಥಪೂರ್ಣ ಜನತಂತ್ರ ವ್ಯವಸ್ಥೆ ತರಬೇಕು. ಅದು ರಾಜ್ಯಗಳ ಒಕ್ಕೂಟವಲ್ಲದೆ ಬೇರೆಯಲ್ಲ.

[illegible], [illegible] 17, 1986, [illegible]

ಮುಂಗಾರು
ಶನಿವಾರ, ಆಗಸ್ಟ್ 16, 1986

ಐ ಆರ್ ಡಿ ಪಿಯ ಸೋಲು-ಗೆಲುವು

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಯಶಸ್ಸು ಹಾಗೂ ಅದು ಗ್ರಾಮೀಣ ಪ್ರದೇಶದಲ್ಲಿ ಮಾಡಿರುವ ಸಾಧನೆಯ ಬಗ್ಗೆ ಗ್ರಾಮೀಣ ಅಭಿವೃದ್ಧಿ ಇಲಾಖೆಯು ಮಾದರಿ ಸಮೀಕ್ಷೆಯೊಂದನ್ನು ನಡೆಸಿದೆ. ಈ ಸಮೀಕ್ಷೆಯಲ್ಲಿ ಎಂಟು ಸಾವಿರ ಮಂದಿ ಫಲಾನುಭವಿಗಳ ಅಭಿಪ್ರಾಯವನ್ನು ಪಡೆದಿದ್ದು ಸೀಮಿತ ಸ್ವರೂಪದ್ದಾದರೂ ಈ ಸಮೀಕ್ಷೆಯು ತಿಳಿಸುವ ವಿಚಾರಗಳು ಅತ್ಯಂತ ಮಹತ್ವದ್ದು. ನಮ್ಮ ಆಡಳಿತಾಧಿಕಾರಿಗಳು ಗಮನಿಸಬೇಕಾದ ವಿಚಾರಗಳು ಇದರಲ್ಲಿವೆ. ಸರಿಪಡಿಸಬೇಕಾದ ಅನೇಕ ಲೋಪದೋಷಗಳು ಕಾರ್ಯಕ್ರಮದ ಅನುಷ್ಠಾನದಲ್ಲಿರುವುದು ಸಮೀಕ್ಷೆಯಿಂದ ಗೊತ್ತಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕ್ರಾಂತಿ ಮಾಡುವುದೆಂದೂ ಲಕ್ಷಾಂತರ ಕುಟುಂಬಗಳನ್ನು ಬಡತನದ ರೇಖೆಯಿಂದ ಮೇಲಕ್ಕೆ ತರುವುದೆಂದೂ ನಿರೀಕ್ಷಿಸಲಾಗಿರುವ ಈ ಮಹತ್ವಾಕಾಂಕ್ಷಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಅಧಿಕೃತ ಸಿಂಹಾವಲೋಕನವೊಂದು ನಡೆದಿರುವುದು ಇದೇ ಮೊದಲು. ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಸಮೀಕ್ಷೆಯಿಂದ ಗೊತ್ತಾಗಿದೆ. ಅನುಷ್ಠಾನದ ವಿವಿಧ ಹಂತಗಳಲ್ಲಿ ಸಂಪನ್ಮೂಲ ಸೋರಿ ಹೋಗಿದೆ. ಸರಕಾರದ ಸಬ್ಸಿಡಿಯನ್ನು ಕಬಳಿಸಲು ಅಪಾತ್ರರು ಈ ಯೋಜನೆಯ ದುರುಪಯೋಗ ಮಾಡಿದ್ದಾರೆ ಎಂಬುದೂ ಸಮೀಕ್ಷೆಯಲ್ಲಿ ಗೊತ್ತಾಗಿದೆ.

ಆರನೆ ಯೋಜನೆ ಅವಧಿಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಒಟ್ಟು 4,763 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಯಿತು. ಇಲಾಖೆಯು ನಡೆಸಿರುವ ಮಾದರಿ ಸಮೀಕ್ಷೆಯನ್ನು ಅಖಿಲ ಭಾರತ ಮಟ್ಟಕ್ಕೆ ಅನ್ವಯಿಸಿದರೆ ಮಾಡಲಾದ ಒಟ್ಟು ವೆಚ್ಚದಲ್ಲಿ ಸುಮಾರು 250 ಕೋಟಿ ರೂಪಾಯಿಗಳು ಹೀಗೆ ಸೋರಿ ಹೋಗಿರಬಹುದೆಂದು ಅಂದಾಜಿಸಬಹುದಾಗಿದೆ. ಈ ಯೋಜನೆಯ ಫಲಾನುಭವಿಗಳಲ್ಲಿ ಶೇಕಡಾ 11ರಷ್ಟು ಮಾತ್ರವೇ ಬಡತನದ ರೇಖೆಯ ಸರಕಾರದ ಪರಿಷ್ಕೃತ ಸೀಮೆಯಾದ ವಾರ್ಷಿಕ 6,400 ರೂಪಾಯಿಗಳ ವರಮಾನವನ್ನು ಗಳಿಸಲು ಶಕ್ತರಾಗಿದ್ದಾರೆ.

ಈ ಯೋಜನೆಯು ನಿರ್ಮಿಸಿದ ಸೊತ್ತಿನಲ್ಲಿ ಶೇಕಡಾ 30ರಷ್ಟು ಈಗ ಉಳಿದಿಲ್ಲವೆಂದು ಗೊತ್ತಾಗಿದೆ. ಅಲ್ಲದೆ ಶೇಕಡಾ 45ರಷ್ಟು ಸೊತ್ತು ಫಲಾನುಭವಿಗಳಿಗೆ ಯಾವ ವರಮಾನವನ್ನೂ ತಂದುಕೊಡದೆ ಹಣಹೂಡಿಕೆಯು ಅನುತ್ಪಾದಕವೆನಿಸಿದೆ. ಹೀಗೆ ಸಮೀಕ್ಷೆಯನ್ನು ಸಮಗ್ರವಾಗಿ ಅನ್ವಯಿಸಿದರೆ ಆರನೆ ಯೋಜನೆಯಲ್ಲಿ ಖರ್ಚು ಮಾಡಿದ 4763 ಕೋಟಿ ರೂಪಾಯಿಗಳಲ್ಲಿ 500 ಕೋಟಿ ರೂಪಾಯಿಗಳು ಮಾತ್ರವೇ ಉದ್ದೇಶವನ್ನು ಪೂರೈಸಿ ಫಲಾನುಭವಿಗಳಿಗೆ ಪ್ರಯೋಜನಕಾರಿಯಾಗಿದೆ. ಸುಮಾರು 2000 ಕೋಟಿ ರೂಪಾಯಿಯ ಮೊತ್ತವು ಈ ಕಾರ್ಯಕ್ರಮದಡಿಯಲ್ಲಿ ಕೊಂಚವೂ ಉತ್ಪಾದನೆಯನ್ನು ಹುಟ್ಟಿಸದೆ, ಸ್ಥಗಿತಗೊಂಡಿದೆಯೆಂದೇ ತಿಳಿಯಬೇಕಾಗಿದೆ.

ಸಮೀಕ್ಷೆ ಸೀಮಿತ ವ್ಯಾಪ್ತಿಯದ್ದಾದರೂ ಅದರ ಫಲಿತಾಂಶವು ನೀಡುವ ಸಂದೇಶ ತುಂಬ ಮಹತ್ವವೂ ಗಂಭೀರವೂ ಆಗಿದೆ. ಗ್ರಾಮಾಂತರದಲ್ಲಿ ಬಡ ಕುಟುಂಬಗಳ ಉದ್ಧಾರದ ಮಹತ್ವಾಕಾಂಕ್ಷೆಯನ್ನು ಹೊಂದಿದ ಈ ಕಾರ್ಯಕ್ರಮದ ಅನುಷ್ಠಾನ ಯಂತ್ರವನ್ನು ದುರಸ್ತಿ ಮಾಡಬೇಕಾದ ಅಗತ್ಯವನ್ನು ಇದು ಸೂಚಿಸುತ್ತದೆ. ಕಾರ್ಯಕ್ರಮ ಅನುಷ್ಠಾನದ ಗುರಿ ತಲುಪಬೇಕೆಂಬ ತರಾತುರಿಯಲ್ಲಿ ಸಿಕ್ಕಿದವರನ್ನೆಲ್ಲ ಫಲಾನುಭವಿಗಳನ್ನಾಗಿ ಮಾಡಿದ್ದು ರಾಜಕೀಯ ದಲ್ಲಾಳಿಗಳ ಖಯಾಲಿಗನುಗುಣವಾಗಿ ಜನರನ್ನು ಆಯ್ಕೆ ಮಾಡಿದ್ದು ನೆರವು ಸೋರಿ ಹೋಗಲು ಮುಖ್ಯ ಕಾರಣ. ಯೋಜನೆಯ ಮೊತ್ತವನ್ನು ಮಾತ್ರ ಏರಿಸುವುದರಿಂದ ಅಭಿವೃದ್ಧಿ ಆಗುವುದಿಲ್ಲ ಎಂಬುದಕ್ಕೆ ಐಆರ್‌ಡಿಪಿ ಒಂದು ನಿದರ್ಶನ. ಈ ಕಾರ್ಯಕ್ರಮದಲ್ಲಿ ವೈಫಲ್ಯ ಬಂದಿದ್ದರೆ ಅದಕ್ಕೆ ಫಲಾನುಭವಿಗಳು ಖಂಡಿತ ಕಾರಣರಲ್ಲ. ನೌಕರ ಶಾಹಿಯೇ ಕಾರಣ. ಅದರ ದುರುಪಯೋಗಕ್ಕೆ ಅವಕಾಶ ಕೊಟ್ಟ ಅಧಿಕಾರಿಗಳ ಸಮೂಹ ಕಾರಣ.

ಮುಂಗಾರು
ಮಂಗಳವಾರ, ಆಗಸ್ಟ್ 19, 1986

ವಸತಿ ಕಾಯಿದೆ ಬೇಗ ಬರಲಿ

ವಸತಿ ಎಂಬುದು ಈ ದೇಶದಲ್ಲಿ ಒಂದು ದೊಡ್ಡ ಸಮಸ್ಯೆ. ಈ ದೇಶದ ನಗರಗಳಲ್ಲಿ ಲಕ್ಷಾಂತರ ಜನ ಕೊಂಪೆಗಳಲ್ಲಿ ವಾಸಿಸುತ್ತಾರೆ. ಫುಟ್‌ಪಾತಿನಲ್ಲಿ ಮಲಗುತ್ತಾರೆ. ಸಣ್ಣ ಪುಟ್ಟ ಉದ್ಯೋಗ ದೊರಕಿಸಿಕೊಂಡ ಮಂದಿ ಮಹಾನಗರಗಳಲ್ಲಿ ತಮ್ಮ ಸಂಪಾದನೆಯ ಬಹುದೊಡ್ಡ ಪಾಲನ್ನು ತಲೆಯ ಮೇಲೊಂದು ಸೂರು ದೊರಕಿಸಿಕೊಳ್ಳಲು ಬಾಡಿಗೆಯಾಗಿ ತೆರಬೇಕಾಗಿದೆ. ಸಾಮಾಜಿಕವೂ ಆರ್ಥಿಕವೂ ಮಾನವೀಯವೂ ಆದ ದೊಡ್ಡ ಸಮಸ್ಯೆಯಾಗಿ ಇದು ಬೆಳೆದಿದೆ. ಈ ದೇಶದಲ್ಲಿ ಇದೀಗ ಅಗತ್ಯವಿರುವ ಮನೆಗಳ ಸಂಖ್ಯೆಯನ್ನು ವಿವಿಧ ಆರ್ಥಿಕ, ಸಾಮಾಜಿಕ ವಿಶ್ಲೇಷಣಕಾರರು ಎರಡೂವರೆ ಕೋಟಿಯಿಂದ ಹತ್ತು ಕೋಟಿಯ ತನಕ ಲೆಕ್ಕ ಹಾಕಿದ್ದಾರೆ. ಪ್ರತಿ ವರ್ಷ ಸೇರ್ಪಡೆಯಾಗುತ್ತಿರುವ ಹೊಸ ಮನೆಗಳ ಸಂಖ್ಯೆಯ ಅಂದಾಜು ಮೂರು ಲಕ್ಷದಿಂದ 18 ಲಕ್ಷದ ತನಕ. ಹೀಗೆ ಈ ಸಮಸ್ಯೆಯ ಅಗಾಧತೆ ಸಮಾಜ ವಿಜ್ಞಾನಿಗಳ ಅಳವಿಗೇ ಸಿಗದೆ ಇರುವುದನ್ನು ಅಂಕಿ ಸಂಖ್ಯೆಗಳಲ್ಲಿನ ವೈವಿಧ್ಯವೇ ಸೂಚಿಸುತ್ತದೆ.

ಆದರೂ ಇದೊಂದು ಪ್ರಚಂಡ ಸಮಸ್ಯೆ ಎಂಬುದರಲ್ಲಿ ಎರಡು ಮಾತಿಲ್ಲ. ಹಳ್ಳಿಗಳಲ್ಲಾದರೂ ಎಂಥ ಬಡವರಿಗಾದರೂ ಒಂದು ಜೋಪಡಿಯಾದರೂ ಇರುತ್ತದೆ. ಅಲ್ಲಿ ಈ ಸಮಸ್ಯೆ ಅಷ್ಟು ಭೀಕರವಲ್ಲ. ಅದು ರಾಕ್ಷಸಾಕಾರ ತಾಳಿ ಮನುಷ್ಯರ ರಕ್ತವನ್ನೇ ಹೀರುವಂತಹ ಶೋಷಕನಾಗುವುದು ನಗರಗಳಲ್ಲಿ. ಈ ಕ್ಷೇತ್ರದಲ್ಲಿ ಯಾರೂ ಹಣ ಹೂಡಲು ಬಯಸುವುದಿಲ್ಲ. ಕಟ್ಟಿದ ಮನೆಯನ್ನು ಯಾರೂ ಬಾಡಿಗೆಗೆ ಕೊಡಲು ಇಷ್ಟಪಡುವುದಿಲ್ಲ. ಜೀವಮಾನದ ಗಳಿಕೆಯಿಂದ ಇಟ್ಟಿಗೆಗೆ ಇಟ್ಟಿಗೆ ಸೇರಿಸಿ ಕಟ್ಟಿದ ಮನೆಯನ್ನು ಬೇರೆಯವರಿಗೆ ಬಳುವಳಿ ಕೊಡಲು ಜನ ತಯಾರಾಗಬೇಕು ಎಂದು ನಿರೀಕ್ಷಿಸುವುದು ಕೂಡ ತುಂಬ ಅನ್ಯಾಯವೇ ಆಗುತ್ತದೆ.

ಆದ್ದರಿಂದಲೇ ನಗರಗಳಲ್ಲಿ ಮನೆಗಳೂ ಫ್ಲ್ಯಾಟುಗಳೂ ಖಾಲಿಯಿದ್ದರೂ ಬೀಗ ಧರಿಸಿ ನಿಂತ ವಿದ್ಯಮಾನವಿದೆ. ದುಡಿದು ಸಂಪಾದಿಸಿದ ಹಣವುಳ್ಳವರು ಬಾಡಿಗೆಗೆ ಕೊಡಲು ಮನೆ ಕಟ್ಟುವುದಿಲ್ಲ. ವಾಸಕ್ಕೆ ಮನೆ ಕಟ್ಟಬೇಕೆಂಬ ಇರಾದೆಯುಳ್ಳವರಿಗೆ, ಸಂಪಾದನೆಯ ಸಾಮರ್ಥ್ಯವುಳ್ಳವರಿಗೆ ಕೂಡ ಹಣಕಾಸು ಸಂಸ್ಥೆಗಳು ಸಹಾಯ ಮಾಡುವುದಿಲ್ಲ.

ಗಳು ನೀಡಿದ ಸಾಲಕ್ಕೆ ಮಾತ್ರವೇ ಅನ್ವಯ. ಸರಕಾರಿ ಕ್ಷೇತ್ರದ ಆರೋಗ್ಯದ ಬಗೆಗಿನ ಸರಕಾರದ ಈ ಕಾಳಜಿ ವಸತಿ ಕ್ಷೇತ್ರಕ್ಕೆ ಸಂಬಂಧಿಸಿ ಇಲ್ಲವಾಗಿದೆ. ಕೆಲವೊಮ್ಮೆ ಸರಕಾರದ ಮೂರ್ಖ ನಿಯಮಗಳು ಮಾಡುವ ಅನಾಹುತಕ್ಕೆ ಫ್ಲ್ಯಾಟುಗಳ ಮಾಲೀಕತ್ವದ ಕುರಿತಾದ ನಿಯಮವೇ ನಿದರ್ಶನ. ಸ್ಥಳದ ಮಾಲೀಕ ಹಾಗೂ ಫ್ಲ್ಯಾಟು ಕಟ್ಟಿದವ ಆದಾಯ ತೆರಿಗೆ ಬಾಕಿ ಇರಿಸಿಕೊಂಡರೆ ಫ್ಲ್ಯಾಟುಗಳನ್ನು ಕೊಂಡವರಿಗೆ ಮಾಲೀಕತ್ವ ಬರುವುದೇ ಇಲ್ಲ.

ಹೊಸ ಕಾಯಿದೆಯಲ್ಲಿ ಹೊಸ ನೀತಿಯನ್ನು ನಿರೂಪಿಸಲಾಗುವುದೆಂಬ ಸೂಚನೆಗಳಿವೆ. ಸಾಲ ಮರುಪಾವತಿ ಮಾಡಲು ತಪ್ಪಿದವರ ಮನೆ-ನಿವೇಶನಗಳನ್ನು ಸಾಲ ಕೊಟ್ಟ ಸಂಸ್ಥೆಗಳು ನಿರ್ದಿಷ್ಟ ಅವಧಿಯನ್ನು ನೀಡಿ ಆಮೇಲೆ ತಾವೇ ಸ್ವತಃ ಹರಾಜು ಹಾಕುವಂತಹ ಸೌಲಭ್ಯವನ್ನು ಕಾಯಿದೆ ಹೊಂದಲಿದೆ. ಇದರಿಂದ ಸಾಲ ಮರುಪಾವತಿಯ ಖಚಿತ ಭರವಸೆ ಹಣಕಾಸು ಸಂಸ್ಥೆಗಳಿಗೆ ದೊರೆಯುವುದರಿಂದ ವಸತಿ ಹಣಕಾಸಿನ ಕ್ಷೇತ್ರದಲ್ಲಿ ಕ್ರಾಂತಿ ಆಗುವುದು ಸಂಭವನೀಯ. ಅಲ್ಲದೆ ವಸತಿ ನಿರ್ಮಾಣದ ಖರ್ಚಿನ ಶೇಕಡಾ 90 ಅಥವ ಶೇಕಡ 100ರಷ್ಟು ಕೂಡ ಹಣವನ್ನು ಒದಗಿಸಲು ಅವುಗಳು ಮುಂದೆ ಬರಬಹುದು. ಈ ಕ್ಷೇತ್ರದಲ್ಲಿ ಹಣಕಾಸು ಸಂಸ್ಥೆಗಳೊಳಗೆ ಆರೋಗ್ಯಕರ ಸ್ಪರ್ಧೆ ಉಂಟಾಗಿ ವಸತಿ ಹೊಂದಬಯಸುವವರಿಗೆ ಅನುಕೂಲವಾದೀತು. ಈಗ ವಸತಿಗೆ ನೆರವು ಒದಗಿಸುವ ಕೆಲವೇ ಕೆಲವು ಸಂಸ್ಥೆಗಳು ತಾವು ಕೊಡುವ ಸಾಲದ ಮೊತ್ತಕ್ಕೆ ಸಮಾನವಾದ ಸೊತ್ತಿನ ಭದ್ರತೆ ಕೇಳುತ್ತವೆ. ಮರುಪಾವತಿಯ ಭರವಸೆ ಭದ್ರವಾದಾಗ ಇಂತಹ ಶರತ್ತುಗಳನ್ನು ಅವುಗಳು ಕೈಬಿಡುವ ಸಾಧ್ಯತೆಗಳೂ ಇವೆ. ಇದರಿಂದಲೂ ವಸತಿ ನಿರ್ಮಾಣ ಚಟುವಟಿಕೆಗೆ ಉತ್ತೇಜನ ಸಿಗಲಿದೆ.

ಬಾಡಿಗೆಗೆ ಸಂಬಂಧಿಸಿದ ಕಾಯಿದೆಯನ್ನು ಈ ಪ್ರಸ್ತಾಪಿತ ಕಾಯಿದೆ ಮೂಲಕ ತಿದ್ದುವ ಆಶಯವೂ ಸರಕಾರಕ್ಕಿದೆ. ಹಣವುಳ್ಳ ಮಂದಿ ವಸತಿ ಕ್ಷೇತ್ರದಲ್ಲಿ ಹಣ ಹೂಡುವುದಕ್ಕೆ ಪ್ರೋತ್ಸಾಹ ನೀಡುವಂತಹ ರಚನಾತ್ಮಕ ಸ್ವರೂಪವನ್ನು ಬಾಡಿಗೆ ನಿಯಂತ್ರಣ ಕಾನೂನಿಗೆ ಅಳವಡಿಸುವುದೇ ಇದರ ಉದ್ದೇಶವೆನ್ನಲಾಗಿದೆ. ಬಾಡಿಗೆಯು ವಿಚಾರಶೀಲವೆನಿಸುವ ಮಟ್ಟದಲ್ಲಿರಬೇಕು ಎಂಬುದು ಸರಿ. ಆದರೆ ಜುಜುಬಿ ಬಾಡಿಗೆಗೆ

ಹೀಗೆ ವ್ಯವಸ್ಥೆಯ ಕ್ರೌರ್ಯವು ಜನ ಸಾಮಾನ್ಯರಿಗೆ ಸಂಕಟವನ್ನು ತಂದಿದೆ. ಇದರ ನಿವಾರಣೆಯ ನಿಟ್ಟಿನಲ್ಲಿ ಇದೀಗ ಕೇಂದ್ರ ಸರಕಾರ ಹೆಜ್ಜೆ ಇರಿಸಲಿದೆ. ಅದೊಂದು ಹೊಸ ಕಾನೂನು ತರಲಿದೆ. ಅದುವೇ ರಾಷ್ಟ್ರೀಯ ವಸತಿ ಶಾಸನ. ವಸತಿ ನಿರ್ಮಾಣಕ್ಕೊದಗುವ ಹಣಕಾಸಿಗೆ ಸಂಬಂಧಿಸಿ ಈ ಕಾನೂನು ಹೊಸ ನೀತಿಯೊಂದನ್ನು ಜಾರಿಗೆ ತರಲಿದ್ದು ಮನೆ ಕಟ್ಟಲು ನೀಡಿದ ಸಾಲದ ಮರು ಪಾವತಿಯ ವಿವಾದವನ್ನು ಕೋರ್ಟುಗಳ ವ್ಯಾಪ್ತಿಯಿಂದ ಹೊರಗಿಟ್ಟು ಬೇರೆಯೇ ವ್ಯವಸ್ಥೆ ಮಾಡಲಿದೆ.

ವಸತಿಗೆ ಹಣಕಾಸು ನೀಡಿಕೆ ಇತರ ವಾಣಿಜ್ಯ ಬಾಬ್ತುಗಳಂತಲ್ಲ. ಅದು ದೀರ್ಘಾವಧಿಯದ್ದು. ಇತರ ವಾಣಿಜ್ಯ ಚಟುವಟಿಕೆಗಳಿಗೆ ಹಣಕಾಸು ಸಂಸ್ಥೆಗಳು ನೀಡುವ ಸಾಲದ ಅವಧಿ ಸಣ್ಣದು. ಆದ್ದರಿಂದ ಮರು ಪಾವತಿಯ ವಿಚಾರದಲ್ಲಿ ಅನಿಶ್ಚಿತತೆ ಕಡಿಮೆ. ಕಂತು ಪಾವತಿ ನಿಂತು ಹೋದರೆ ಹಣವನ್ನು ಹಿಂದೆ ಪಡೆದು ಕೊಳ್ಳುವುದಕ್ಕೆ ಹಣಕಾಸು ಸಂಸ್ಥೆಗಳು ಇಂದಿನ ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಐದರಿಂದ ಹತ್ತು ವರ್ಷದ ತನಕ ಕೋರ್ಟಿಗೆ ಅಲೆದಾಡಬೇಕು. ಆದ್ದರಿಂದಲೇ ಯಾವ ಹಣಕಾಸು ಸಂಸ್ಥೆಯೂ ಮನೆಕಟ್ಟಲು ಸಾಲ ಕೊಡುವ ಸ್ಕೀಮುಗಳನ್ನು ಹಾಕಿಕೊಳ್ಳುವುದೇ ಇಲ್ಲ. ಮರುಪಾವತಿಯನ್ನು ಸಂಬಳದಿಂದ ಕಡ್ಡಾಯವಾಗಿ ಪಡೆದುಕೊಳ್ಳಬಹುದೆಂಬ ನಿಯಮ ವಸತಿ ಸಾಲಕ್ಕೆ ಅನ್ವಯಿಸುವುದಿಲ್ಲ. ಈ ನಿಯಮ ಸಹಕಾರಿ ಸಂಸ್ಥೆ

ಮನೆ ಗಿಟ್ಟಿಸಿಕೊಂಡವರು ಬಾಡಿಗೆ ಹೆಚ್ಚಿಸುವ ಎಲ್ಲ ಬೇಡಿಕೆಗಳನ್ನು ಪ್ರತಿರೋಧಿಸುತ್ತ ಕಟ್ಟಡವನ್ನು ದುಬಾರಿ ಲಾಭಕ್ಕೆ ಒಳ ಬಾಡಿಗೆಗೆ ಕೊಡುವ ಪ್ರವೃತ್ತಿಯೂ ಈ ಕ್ಷೇತ್ರದಲ್ಲಿ ವಿಕೃತಿಯನ್ನುಂಟು ಮಾಡಿ ಸಮಗ್ರವಾಗಿ ಬಾಡಿಗೆದಾರ ಸಮುದಾಯಕ್ಕೆ ಸಂಕಷ್ಟವನ್ನೇ ತರುತ್ತದೆ ಎನ್ನದೆ ನಿರ್ವಾಹವಿಲ್ಲ. ಇಂತಹ ಪ್ರವೃತ್ತಿಯನ್ನು ಹೊಸ ಕಾಯಿದೆ ನಿವಾರಣೆ ಮಾಡಿದರೆ ಅದು ಸ್ವಾಗತಾರ್ಹವೆ. ಇದರಿಂದ ವಸತಿ ನಿರ್ಮಾಣ ಚಟುವಟಿಕೆಗೆ ದೊಡ್ಡ ಚಾಲನೆ ದೊರೆತರೆ ಅದರಿಂದ ಜನ ಸಾಮಾನ್ಯರಿಗೆ ಅನುಕೂಲವೇ ಆದೀತು. ದೊಡ್ಡ ಸಂಖ್ಯೆಯಲ್ಲಿ ಮನೆಗಳ ನಿರ್ಮಾಣ ನಡೆದರೆ ನೀಡಿಕೆಯೂ ಬೇಡಿಕೆಯಂತೆಯೇ ಬೆಳೆದು ಮನೆ ಬಾಡಿಗೆ ವ್ಯವಹಾರ ಕ್ಷೇತ್ರದಲ್ಲಿ ಆರೋಗ್ಯ ಕಾಣಿಸಿಕೊಂಡೀತು.

ಮನೆ ಕಟ್ಟುವ ಏಜನ್ಸಿಗಳಿಗೆ ಪರವಾನಿಗೆ ನೀಡುವ ವ್ಯವಸ್ಥೆಯನ್ನೂ ಹೊಸ ಕಾಯಿದೆ ತರಲಿದ್ದು ಇದರಿಂದ ಕಳಪೆ ಗುಣಮಟ್ಟದ ಕಟ್ಟಡಗಳ ನಿರ್ಮಾಣಕ್ಕೆ ತಡೆ ಬೀಳಬಹುದಾಗಿದೆ.

ಇಂತಹ ಒಂದು ಸಮಗ್ರ ವಸತಿ ಕಾಯಿದೆ ಬಹಳ ಹಿಂದೆಯೆ ಬರಬೇಕಾಗಿತ್ತು. ವಸತಿ ನಿರ್ಮಾಣಕ್ಕೆ ಸಾಕಷ್ಟು ಹಣಕಾಸನ್ನು ಹಣಕಾಸು ಸಂಸ್ಥೆಗಳು ಹೆದರದೆ ಒದಗಿಸುವ ವಾತಾವರಣವನ್ನು ತರುವುದು ಸಮಾಜದ ಆರೋಗ್ಯಕ್ಕೆ ತುಂಬ ಒಳ್ಳೆಯದು. ಈಗಾಗಲೇ ತಡವಾಗಿದೆ. ಇನ್ನಷ್ಟು ತಡ ಮಾಡುವುದು ಬೇಡ. ಈ ಕಾಯಿದೆ ಬೇಗ ಬರಲಿ.

ಮುಂಗಾರು

ಜನತಂತ್ರದ ದನಿಗೆ ಬೇನೆ

ಪಾಕಿಸ್ತಾನದಲ್ಲಿ ಜನತಂತ್ರದ ದನಿಗೆ [illegible] ಶುರುವಾಗಿ ಸೂಚನೆಗಳಿವೆ. ಈ ಸೋಂಕು [illegible] ಹಬ್ಬುತ್ತಿದ್ದು, ಆ ದೇಶದ ಅಂಗಾಂಗಗಳಲ್ಲೂ [illegible] ನೋವನ್ನು ಉಂಟು ಮಾಡುತ್ತಿದೆ. ಕರಾಚಿಯಲ್ಲಿಯೂ ಸಿಂಧ್ ಪ್ರಾಂತದ ಇತರ ಅನೇಕ ಕಡೆಗಳಲ್ಲಿಯೂ [illegible] ಸಮುದಾಯವು ದಮನಕಾರಿ ಜಿಯಾ ಪ್ರಭುತ್ವದ ವಿರುದ್ಧ ದಂಗೆಯೆದ್ದಿದೆ. ಜನ ಸಮೂಹವು ಪೊಲೀಸರೊಡನೆ ನಡೆಸಿದ ಘರ್ಷಣೆಯಲ್ಲಿ [illegible] 25 ಮಂದಿ ಸಾವನ್ನಪ್ಪಿದ್ದಾರೆ. 400ಕ್ಕೂ ಹೆಚ್ಚು ರಾಜಕೀಯ ನಾಯಕರನ್ನು ಬಂಧಿಸಲಾಗಿದೆ. ಸಾವಿರಾರು ಕಾರ್ಯಕರ್ತರನ್ನು ಸೆರೆ ಮನೆಗೆ ದೂಡಲಾಗಿದೆ. ಜಿಯಾ ಸರಕಾರ ರಾಜಕೀಯ ಪ್ರತಿಭಟನಾ ಪ್ರದರ್ಶನಗಳನ್ನು ನಿಷೇಧಿಸಿದೆ. ಈ ಆಂದೋಲನದ ನಾಯಕಿಯಾಗಿರುವ ಪಾಕಿಸ್ತಾನ ಪ್ರಜಾ ಪಕ್ಷದ ನಾಯಕಿ ಬೆನಜೀರ್ ಭುಟ್ಟೋರನ್ನು ಸೆರೆಮನೆಯಲ್ಲಿ ಏಕಾಂತದಲ್ಲಿಡಲಾಗಿದೆ.

ಜಿಯಾ ಸರಕಾರ ಕ್ರಮಬದ್ಧವಲ್ಲದ್ದು [illegible] ಪ್ರಜಾ ಪ್ರಭುತ್ವದ ಮರು ಸ್ಥಾಪನೆಗಾಗಿರುವ ಆಂದೋಲನವು ಸಾರಿದೆ. ಪ್ರಜಾ ಪಕ್ಷದ ನಾಯಕಿ ಬೆನಜೀರ್ ಭುಟ್ಟೋ ಅವರು ಈ [illegible] ಮುಖ್ಯಸ್ಥೆ. ಪಾಕಿಸ್ತಾನದ ಅಧಿಕೃತ ಮುಸ್ಲಿಂ [illegible] ಸಹಿತ 11 ರಾಜಕೀಯ ಪಕ್ಷಗಳು ಈ [illegible] ಸದಸ್ಯರಾಗಿವೆ. ಜಿಯಾ ಸರಕಾರಕ್ಕೆ ಜನರ [illegible] ರವ [illegible] ಬೆನಜೀರ್ ಸಾರಿದ್ದಾರೆ. ಜಿಯಾ ಅಧಿಕಾರ ಬಿಟ್ಟು ಕೊಡಬೇಕು ಎಂಬ ಒಂದೇ ಬೇಡಿಕೆಯನ್ನು ಈ ನಾಯಕಿ ದೇಶದ ಮುಂದೆ [illegible]. ಸೆಪ್ಟಂಬರ್ 20ರ ಒಳಗಾಗಿ ಜಿಯಾ ತನ್ನ [illegible] ವನ್ನು [illegible] ಬೇಕು. ಮುಂಬರುವ ಡಿಸೆಂಬರ್ ಒಳಗೆ ಚುನಾವಣೆ ನಡೆಯಬೇಕು. ಅವರ ಘೋಷಣೆ ಸೆಪ್ಟಂಬರ್ 20 ರೊಳಗೆ ಆಗಬೇಕು ಎಂಬ [illegible] ನಡೆಯುತ್ತಿರುವ ಹೋರಾಟದ ಕೇಂದ್ರ [illegible] ಗಿದೆ.

[illegible] ಫರ್ಗನಿಂದ [illegible] ತರಿಸಿದ [illegible] ಹುಡುಗಿ [illegible]. [illegible] ಪಾಕಿಸ್ತಾನದಲ್ಲಿ [illegible] ಹುತಾತ್ಮ ಕುಟುಂಬದ ಕುಡಿಯಾದ ಈ ನಾಯಕಿಯ ಹಿಂದೆ ಪಾಕಿಸ್ತಾನದ ಜನ ಸಾಗರವೇ ನೆರೆಯುತ್ತಿದೆ. ಪಾಕಿಸ್ತಾನದ [illegible] ಅಭೂತ [illegible] ದೊರೆಯುತ್ತಿದೆ. [illegible] ಈಗ [illegible] ಹೋರಾಟದ [illegible] ಪ್ರಕಟವಾಗ [illegible] ಜನ [illegible]

[illegible] ಈ ಜನ ಬೆಂಬಲ ಆಕೆಯ ಸ್ವಂತದ್ದಾಗಿದ್ದ [illegible] ಮಾತ್ರವಾಗಿಲ್ಲ. [illegible], ಪಾಯದ [illegible] ಹಾಗೂ [illegible] ಈ [illegible] ನಾಯಕಿಯೊಂದೇ [illegible] ಆಗಿಸಿದೆ; ಆಕೆಯ [illegible] ತಮ್ಮ ಆಶೋತ್ತರಗಳ ನಿಧಿಯನ್ನು ನಿಕ್ಷೇಪಿಸಿದೆ.

[illegible] ಸರಕಾರ ಹಾಗೂ ಅವರು ದೇಶದ ಮೇಲೆ ಹೇರಿಸಿದ ಮೊಹಮ್ಮದ್ ಖಾನ್ ಜುನೇಜೊ ಅವರ ಪ್ರಧಾನಿತ್ವದ ನಾಮಕೇವಾಸ್ತೆ ನಾಗರಿಕ ಸರಕಾರ ಬೆನಜೀರ್ ಕೇಳುತ್ತಿರುವ ಸಾರ್ವತ್ರಿಕ ಚುನಾವಣೆಯನ್ನು ವಿರೋಧಿಸುತ್ತಲೇ ಬಂದಿವೆ. ಚುನಾವಣೆ ಆಗಿದೆ, ಈಗ ಇರುವುದು ಜನತಂತ್ರದ್ದೇ ಸರಕಾರ ವೆಂದು ಈ ಮಂದಿ ಹೇಳಿಕೊಳ್ಳುತ್ತಿದ್ದಾರೆ. [illegible] ಗಳನ್ನು ನಿಷೇಧಿಸಲಾಗಿದೆ. ರಾಜಕೀಯ ಚಟುವಟಿಕೆಗಳಿಗೆ ಅವಕಾಶ ನೀಡಲಾಗುವುದು ಎಂಬ ಜಿಯಾ ಸರಕಾರದ ಬೂಟಾಟಿಕೆ ಈಗ ಬಯಲಾಗಿದೆ. ಅಸ್ಥಿರತೆ ಆಪಾಯ ತರುವ ಪರಿಸ್ಥಿತಿ ಎದುರಾದಾಗ [illegible] ಹುಳುಕು [illegible] ಗುತ್ತದೆ. ತೋರಿಕೆಯ [illegible] ಕರಗಿ ಹೋಗುತ್ತದೆ. ನಿಜ [illegible] ಗೋಚರವಾಗುತ್ತದೆ.

[illegible] ಪಾಕಿಸ್ತಾನದಲ್ಲಿ ಅದೇ ಆಗಿದೆ. ದಮನ [illegible] ಪ್ರಭುತ್ವದ ನಿಜ ಬಣ್ಣ ಜನರಿಗೆ ಕಂಡಿದೆ. ಜಿಯಾ ಸರಕಾರ ಜನರ ಸಮ್ಮತಿ ಉಳ್ಳದ್ದಲ್ಲವೆಂಬ [illegible] ಸಾಬೀತಾಗಿದೆ. ಜಿಯಾ [illegible] ಅವಶೇಷ ತೆಗೆದದ್ದು ನಾಗರಿಕ ಸರಕಾರ ನೆಲೆಗೊಳಿಸಿದ್ದು ಇವೆಲ್ಲವೂ ಜನರನ್ನೂ ಬಾಹ್ಯ ಜಗತ್ತನ್ನೂ ಮೋಸ ಮಾಡುವ ತಂತ್ರವೆಂದು ಜನ ಅರ್ಥಮಾಡಿಕೊಂಡಿದ್ದಾರೆ.

ಅದ್ದರಿಂದಲೇ ಬೆನಜೀರ್ ಭುಟ್ಟೋ ನಾಯಕತ್ವದ ರಾಜಕೀಯ ಸಂಸ್ಥೆಗೆ ಜನ ಬೆಂಬಲ ಕೂಡಿ ಬಂದಿದೆ. ಅದು ತೊರೆಯಾಗಿ, ಹೊಳೆಯಾಗಿ, [illegible] ಸಾಗರವಾಗಿ ಮೊರೆಯುವ ಸಕಲ ಲಕ್ಷಣಗಳೂ [illegible]. ನಮ್ಮ [illegible] ಕೊನೆಗೂ ಪ್ರಜಾಪ್ರಭುತ್ವದ ಹೊಸ ಬೇಡಿಕೆ ಕಾಣಿಸಿಕೊಂಡಿದೆ. ಜನರ ಆಶೋತ್ತರಗಳನ್ನು [illegible] ಕೆಲಸವನ್ನು [illegible] ಅಧಿಕಾರ ಹಸ್ತಾಂತರ ಮಾಡಬೇಕೆಂದು [illegible] ಅಧಿಕಾರ [illegible] ಯುಗ [illegible]. [illegible] ಪಾಕಿಸ್ತಾನ [illegible] ಈ [illegible] ಮಾಡಲಿ.

ಮುಂಗಾರು
ಬುಧವಾರ, ಆಗಸ್ಟ್ 20, 1986

ನಂಬಿಕೆಗೆ ನೆಲೆಯುಂಟೆ?

ಕರ್ನಾಟಕ ಕರಾವಳಿಯಲ್ಲಿ, ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರ ಸಮುದಾಯದೊಳಗೆ ಕ್ಷೋಭೆ ಎದ್ದಿದೆ. ಮಳೆಗಾಲದಲ್ಲಿ ಮೀನು ಹಿಡಿಯಬಹುದೆ–ಬಾರದೆ ಎಂಬ ವಿಚಾರದಲ್ಲಿ ವಿವಾದ ಎದ್ದು ಮೀನುಗಾರರಲ್ಲಿ ಎರಡು ಪಂಗಡಗಳಾಗಿವೆ. ಪರ್ಸೀನ್ ಹಾಗೂ ಇತರ ಯಾಂತ್ರೀಕೃತ ದೋಣಿಗಳವರು ಆಗಸ್ಟ್ ಮಧ್ಯಾವಧಿಯಿಂದಲೇ ಮೀನುಗಾರಿಕೆಗೆ ಇಳಿಯುವ ಹಕ್ಕನ್ನು ಸ್ಥಾಪಿಸುತ್ತಿದ್ದಾರೆ. ನಾಡದೋಣಿಗಳವರು ಇದನ್ನು ವಿರೋಧಿಸುತ್ತಿದ್ದಾರೆ.

ಈ ವಿವಾದ ಇದೀಗ ಹೊಸದಾಗಿ ಹುಟ್ಟಿಕೊಂಡಿದೆ. ಪ್ರಾರಂಭದಲ್ಲೇ ಅದು ಹಿಂಸೆಯ ಆಯಾಮವನ್ನೂ ಪಡೆದುಕೊಂಡಿದೆ. ಹೆಜಮಾಡಿ ಸಮೀಪ ಸಮುದ್ರದಲ್ಲಿ ಪರ್ಸೀನ್ ದೋಣಿಯವರ ಮೇಲೆ ನಾಡದೋಣಿಗಳವರು ಎನ್ನಲಾದವರು ದಾಳಿಯಿಟ್ಟರು. ಹಲವರಿಗೆ ಗಾಯಗಳಾದವು. ನಾಲ್ಕು ದೋಣಿಗಳನ್ನು ಬೆಂಕಿಹಚ್ಚಿ ನಾಶಮಾಡಲಾಯಿತು.

ಉದ್ಯಮವೊಂದು ವಾಣಿಜ್ಯ ಮಟ್ಟದಲ್ಲಿ ಬೆಳೆದು ವಿಕಸನಗೊಳ್ಳುತ್ತಿರುವಾಗ ಹಿತಾಸಕ್ತಿಗಳ ನಡುವೆ ಇಂತಹ ಘರ್ಷಣೆಗಳು ಉಂಟಾಗುವುದು ಸಹಜ. ಮೀನುಗಾರಿಕೆಯ ವಿಚಾರದಲ್ಲಿ ಇದು ಈ ತನಕ ಅನೇಕ ಸಾಂಪ್ರದಾಯಿಕ ಕಟ್ಟು ಕಟ್ಟಲೆಗಳನ್ನು ಅನುಸರಿಸಿಕೊಂಡು ಬಂದಿರುವ, ಆಧುನಿಕತೆಯನ್ನು ಮೈಗೂಡಿಸಿಕೊಳ್ಳಲು ಹಾತೊರೆಯುತ್ತಿರುವ ಸಮುದಾಯದೊಳಗೇ ಉಂಟಾಗಿರುವುದರಿಂದ ಹೆಚ್ಚು ಯಾತನೆಯನ್ನು ಕೊಡುವಂತಹದ್ದು.

ಈಗ ಉಂಟಾಗಿರುವ ಈ ಘರ್ಷಣೆಗೆ ಕಾರಣವಾದದ್ದು ಕೆಲವು ಸಾಂಪ್ರದಾಯಿಕ ನಂಬಿಕೆಗಳು. ಇಂಥ ನಂಬಿಕೆಗಳಿಗೆ ವೈಜ್ಞಾನಿಕ ತಳಹದಿ ಉಂಟೇ ಎಂದು ಯಾರೂ ತಿಳಿಯಲು ಪ್ರಯತ್ನಿಸದೆ ಇರುವುದೇ ಈ ಎಲ್ಲ ಅನಾಹುತಕ್ಕೆ ಕಾರಣವಾದಂತೆ ಕಾಣುತ್ತಿದೆ. ಮಳೆಗಾಲದಲ್ಲಿ ಬಂಗುಡೆ, ಬೂತಾಯಿ ತೆಪ್ಪಗಳು ಬಂದು ಕಡಲ ತೀರದಲ್ಲಿ ಮೊಟ್ಟೆಯಿಡುತ್ತವೆ ಎಂಬುದೇ ಈ ನಂಬಿಕೆ. ಈ ನಂಬಿಕೆಗೆ ವೈಜ್ಞಾನಿಕವಾಗಿ ಯಾವ ತಳಹದಿಯೂ ಇದ್ದಂತಿಲ್ಲ. ಪರಂಪರೆಯಿಂದ ಇದನ್ನು ಹೇಳಲಾಗುತ್ತಿದೆ. ಕನ್ನಡ ಕರಾವಳಿಯ ಮೀನುಗಾರರು ನಂಬಿದ್ದಾರೆ. ಈ ದೇಶದ ಬೇರಾವ ಕಡಲ ತೀರದ ರಾಜ್ಯದಲ್ಲಿಯೂ ಇಂತಹ ನಂಬಿಕೆ ಇಲ್ಲ. ಅಲ್ಲಿನ ಮೀನುಗಾರರು ಮಳೆಗಾಲದಲ್ಲಿಯೂ ಮಳೆ ಕುಗ್ಗಿದಾಗ, ತುಫಾನು ತಗ್ಗಿದಾಗ ಕಡಲನ್ನು ಹೊಕ್ಕು ತಮ್ಮ ಕಾರ್ಯ ನಡೆಸುತ್ತಾರೆ.

ನಮ್ಮ ಮೀನುಗಾರರು ತಿಳಿಯಲು ಪ್ರಯತ್ನಿಸಲಿಲ್ಲ. ಅವರಿಗೆ ತಿಳಿಸಿ ಹೇಳಲು ಅಧಿಕಾರಿಗಳೂ ಮುತುವರ್ಜಿ ವಹಿಸಲಿಲ್ಲ. ಮಳೆಗಾಲದಲ್ಲಿ ಮೀನು ಹಿಡಿದರೆ ನಾಡದೋಣಿಗಳವರಿಗೆ ನಷ್ಟವೆಂಬ ಮಿಥ್ಯೆಯ ಹೋಗಲಾಡಿಸಲು ಪ್ರಾಮಾಣಿಕವಾದ ಯಾವ ಪ್ರಯತ್ನವೂ ನಡೆಯಲಿಲ್ಲ.

ಮೀನು ಮೊಟ್ಟೆ ಇಡುವುದೆಂದು ಕರ್ನಾಟಕದ ಮೀನುಗಾರರು ಸುಮ್ಮನೆ ಕುಳಿತರೆ ಗೋವಾದವರು, ಕೇರಳದವರು, ಮಹಾರಾಷ್ಟ್ರದವರು ಸುಮ್ಮನೆ ಕುಳಿತಿರುವುದಿಲ್ಲ. ಕರ್ನಾಟಕದ ತೀರದಲ್ಲಿಯೂ ಅವರೆಲ್ಲ ಬಂದು ಮೀನು ಹಿಡಿದುಕೊಂಡು ಹೋಗುತ್ತಾರೆ. ಮೀನು ತೆಪ್ಪವೂ ಬೇಸಿಗೆ ಬರಲಿ ಎಂದು ರಾಜ್ಯದ ಕರಾವಳಿಯಲ್ಲಿ ಬೀಡು ಬಿಡುವುದಿಲ್ಲ. ಅವು ಚಲಿಸುತ್ತಲೇ ಇರುತ್ತವೆ. ನಷ್ಟ ನಮ್ಮ ಮೀನುಗಾರರಿಗೇ.

ಮಳೆಗಾಲದಲ್ಲಿ ಮೀನುಹಿಡಿಯುವುದಕ್ಕೆ ಹವಾಮಾನದ ಅಡ್ಡಿ ಇದೆ ಎಂಬುದು ನಿಜ. ಸಾಗರದಲ್ಲಿ ತುಫಾನು ಎದ್ದಾಗ ಯಾರೂ ಮೀನು ಹಿಡಿಯಲು ಹೋಗುವುದಿಲ್ಲ. ಇತರ ರಾಜ್ಯಗಳಲ್ಲಿ ಮಳೆಗಾಲದಲ್ಲಿ ಮೀನುಗಾರಿಕೆ ಇಲಾಖೆಗಳ ಕಾರ್ಯ ಮೀನುಗಾರರಿಗೆ ಹವಾಮಾನದ ಪರಿಸ್ಥಿತಿ ಬಗ್ಗೆ ಮಾಹಿತಿ ಕೊಡುವುದಕ್ಕೆ ಸೀಮಿತವಾಗಿರುತ್ತದೆ.

ಮಳೆಗಾಲದ ಮೂರು ತಿಂಗಳ ಕಾಲದಲ್ಲಿ ಸಮುದ್ರ ಶಾಂತವಾಗಿದ್ದ ಅವಧಿಯಲ್ಲಿಯೂ ಮೀನು ಹಿಡಿಯದೆ ಬಿಟ್ಟರೆ ನಷ್ಟ ಮೀನುಗಾರ ಸಮುದಾಯಕ್ಕೆ ಎಂಬುದನ್ನು ಇಡಿಯ ಸಮುದಾಯ ಮನನಮಾಡಬೇಕು. ಪರ್ಸೀನ್ ದೋಣಿಗಳಲ್ಲಿ ದುಡಿಯುವವರು ಮೀನುಗಾರ ಸಮುದಾಯದವರೇ. ಆದರೆ ಈ ವಿಚಾರಗಳನ್ನೆಲ್ಲ ಶಾಂತಿ, ಸಮಾಧಾನದಿಂದ ಯಾರೂ ಚರ್ಚಿಸಿದಂತಿಲ್ಲ. ಎರಡೂ ಪಂಗಡಗಳಲ್ಲಿ ಹಟವೂ ಜಿದ್ದೂ ಪರಸ್ಪರ ಸಂಶಯವೂ ತಲೆಹಾಕಿ ವಿಷಯವು ಪ್ರತಿಷ್ಠೆಯ ಪ್ರಶ್ನೆಯಾಯಿತು.

ಮಳೆಗಾಲದಲ್ಲಿ ಮೀನು ಹಿಡಿಯಬಾರದು ಎಂಬ ನಿಯಮವನ್ನು ಕರ್ನಾಟಕದವರು ಮಾತ್ರ ಪಾಲಿಸುವುದರಿಂದ ಯಾರ ಹಿತರಕ್ಷಣೆಯೂ ಆಗುವುದಿಲ್ಲ. ಮಳೆಗಾಲದಲ್ಲಿ ಸಮುದ್ರಕ್ಕಿಳಿಯಲೇಬಾರದು ಎಂದಾದರೆ ಅದಕ್ಕೊಂದು ರಾಷ್ಟ್ರೀಯ ನೀತಿಯ ರಚನೆ ಆಗಲಿ. ಎಲ್ಲ ರಾಜ್ಯಗಳೂ ಅದನ್ನು ಪಾಲಿಸಲಿ. ಆದರೆ ಇಂಥ ಒಂದು ನಿಷೇಧ ಪಾಲನೆಯಿಂದ ಮೀನುಗಾರಿಕೆ ಉದ್ಯಮಕ್ಕೆ ಹಿತವಾದೀತೆಂದು ಮನಗಾಣಿಸುವುದಿಲ್ಲ. ಮೀನನ್ನು ಮೂರು ತಿಂಗಳು ನಾವು ಹಿಡಿ...

ಸಂಬಂಧಪಟ್ಟವರು ಒಂದೆಡೆ ಸೇರಿ ಈ ಸತ್ಯಾಂಶವನ್ನು ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವ ಪ್ರಯತ್ನ ನಡೆಯುದಿರುವುದೇ ಈಪತ್ತಿನ ಕ್ಷೋಭೆಗೆ ಕಾರಣವಾಗಿದೆ. ರಾಜ್ಯ ಸರಕಾರದ ಸಂಬಂಧಪಟ್ಟ ಇಲಾಖೆಯ ಆಸಕ್ತ ಮಂದಿಯೂ ಈ ವಿಚಾರದಲ್ಲಿ ವೈಜ್ಞಾನಿಕ ನೆಲೆ ಏನು ಎಂಬುದನ್ನು ಮೀನುಗಾರ ಸಮುದಾಯಕ್ಕೆ ಮುಂದಿಟ್ಟು ಮಾತಲು ಪ್ರಯತ್ನಿಸಿದ್ದೇ ಇಲ್ಲ. ಈ ಸರಕಾರ ಯಾವ ಕಾರಣಕ್ಕೋ ಕ್ಷೋಭೆಯ ಬೆಂಕಿಗೆ ಗಾಳಿಯನ್ನೇ ಹಾಕುತ್ತ ಕರಾವಳಿಯ ಮೀನುಗಾರ ಸಮುದಾಯ ಒಡೆಯುವುದನ್ನು ಕಾದು ಕುಳಿತಿರುವಂತಿದೆ.

ಮೀನಿನ ತೆಪ್ಪ ಮಳೆಗಾಲದಲ್ಲಿ ಮಾತ್ರವೇ ಮೊಟ್ಟೆ ಇಡುತ್ತದೆ. ಮರಿ ಮಾಡುತ್ತದೆ ಬೇರೆ ಕಾಲಗಳಲ್ಲಿ ಮೀನಿನ ಸಂತಾನೋತ್ಪತ್ತಿ ಇಲ್ಲ ಎಂಬುದಕ್ಕೆ ವೈಜ್ಞಾನಿಕ ಆಧಾರವೇನೂ ಇಲ್ಲ. ಮೀನಿನ ಸಂತಾನೋತ್ಪತ್ತಿಯ ಕ್ಷೇತ್ರ ಯಾವುದು, ಅದು ಆಳ ಸಮುದ್ರದಲ್ಲಿ ಮೊಟ್ಟೆ ಇಡುವುದಿಲ್ಲವೇ ಎಂಬ ಬಗ್ಗೆಯೂ

ದಿದ್ದರೆ ತೈವಾನಿನವರೋ ಶ್ರೀಲಂಕೆಯವರೋ ಬಂದು ಬಾಚಿಕೊಂಡು ಹೋದಾರು.

ಈ ವಾಸ್ತವಾಂಶಗಳನ್ನು ರಾಜ್ಯ ಸರಕಾರ ಮೀನುಗಾರರಿಗೆ ತಿಳಿಸಿ ಮೇಳಿ ಸೌಹಾರ್ದಮಯ ವಾತಾವರಣ ಮೂಡಿಸಬೇಕಿತ್ತು. ಅದು ತನ್ನ ಕರ್ತವ್ಯದಲ್ಲಿ ವಿಫಲವಾಗಿದೆ. ಆದ್ದರಿಂದಲೇ ಸಮುದ್ರರುಗದಲ್ಲಿ ಉದ್ವಿಕ್ತತೆ ಉಂಟಾಗಿದೆ. ಹಿಂಸೆಯ ಬೆಂಕಿ ಹೊತ್ತಿಕೊಂಡಿದೆ. ನಾಡದೋಣಿಗಳವರ ಹಿತರಕ್ಷಣೆಗೆ ಬೇರೆ ದಾರಿಗಳಿವೆ. ನಿರ್ದಿಷ್ಟ ವರ್ಗದ ಅಥವ ಸಂಖ್ಯೆಯ ದೋಣಿಗಳನ್ನು ಅವರಿಗಾಗಿ ಮೀಸಲಿರಿಸಬಹುದು. ಕರಾವಳಿ ಸಮುದ್ರದ ನಿರ್ದಿಷ್ಟ ಪ್ರದೇಶವನ್ನು ನಾಡದೋಣಿ ಮೀನುಗಾರಿಕೆಗೆ ಪ್ರತ್ಯೇಕಿಸಿಡಬಹುದು. ಈ ನಿಯಮದ ಪಾಲನೆಯೂ ಕಷ್ಟವೇನಲ್ಲ.

ತಮ್ಮ ಹಿತಕ್ಕೆ ಪೂರಕ ಯಾವುದು ಎಂಬುದರ ಬಗ್ಗೆ ಮೀನುಗಾರ ಸಮುದಾಯದವರೂ ಆಲೋಚಿಸಬೇಕು. ಯಾದವೀ ಕಲಹ ಖಂಡಿತ ಅವರಿಗೆ ಹಿತ ಮಾಡುವುದಿಲ್ಲ.

OUTER RING ROAD PRESENTED TO THE NATION
BANGALORE DEVELOPMENT AUTHORITY
BANGALORE

ಮುಂಗಾರು

ಶುಕ್ರವಾರ, ಆಗಸ್ಟ್ 22, 1986

ಈ ಕಾನೂನು ಕಿತ್ತುಹಾಕಿ

ರಾಷ್ಟ್ರೀಯ ಸುರಕ್ಷಾ ದಳವೆಂಬ ಹೊಸ ಪಡೆಯೊಂದನ್ನು ಸ್ಥಾಪಿಸುವ ವಿಧೇಯಕವನ್ನು ಲೋಕ ಸಭೆ ಬುಧವಾರ ಅಂಗೀಕರಿಸಿದೆ. ಭಯೋತ್ಪಾದಕ ಚಟುವಟಿಕೆಗಳನ್ನು ನಿರ್ಮೂಲನ ಮಾಡುವುದಕ್ಕೆ ಹಾಗೂ ರಾಜ್ಯಗಳನ್ನು "ಆಂತರಿಕ ಕ್ಷೋಭೆ" ಯಿಂದ ರಕ್ಷಿಸುವುದಕ್ಕೆ ಈ ದಳವನ್ನು ಬಳಸಿಕೊಳ್ಳಲಾಗುವುದು ಎಂದು ಆಂತರಿಕ ಭದ್ರತೆಯ ರಾಜ್ಯ ಸಚಿವ ಅರುಣ್ ನೆಹರೂ ಹಾಗೂ ಗೃಹ ಖಾತೆಯ ರಾಜ್ಯ ಸಚಿವ ಗುಲಾಂ ನಬಿ ಆಜಾದ್ ಸ್ಪಷ್ಟಪಡಿಸಿದ್ದಾರೆ.

ಸೈನ್ಯ, ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸರು, ಹಾಗೂ ರಾಜ್ಯಗಳ ಪೊಲೀಸ್ ದಳಗಳಿಂದ ಸಮರ್ಥರನ್ನು ಈ ದಳಕ್ಕೆ ಭರತಿ ಮಾಡಿಕೊಳ್ಳಲಾಗುವುದು. ಹೊಸ ಪೊಲೀಸ್ ದಳವೊಂದನ್ನು ಸ್ಥಾಪಿಸುವ ಈ ವಿಧೇಯಕಕ್ಕೆ ಲೋಕ ಸಭೆಯು ಸರ್ವಾನುಮತಿಯ ಬೆಂಬಲವನ್ನು ಕೊಟ್ಟಿದೆ. ಕೆಲವು ಸದಸ್ಯರು ಕೆಲವಾರು ತಿದ್ದುಪಡಿಗಳನ್ನು ಸೂಚಿಸಿದರಾದರೂ ಅವುಗಳ ಅಳವಡಿಕೆಗಾಗಿ ಪಟ್ಟು ಹಿಡಿದದ್ದಿಲ್ಲ.

ಹೊಸ ಪೊಲೀಸ್ ದಳವೊಂದನ್ನು ರೂಪಿಸುವ ಈ ಶಾಸನದ ಗಹನತೆಯನ್ನೂ ಗಂಭೀರತೆಯನ್ನೂ ಜನ ಪ್ರತಿನಿಧಿಗಳು ಮನನ ಮಾಡಿರುವಂತೆ ಕಾಣಿಸುತ್ತಿಲ್ಲ. ಪಂಜಾಬಿನಲ್ಲಿ ಎದ್ದಿರುವ ಕ್ಷೋಭೆಯ, ಭಯೋತ್ಪಾದಕತೆಯ ಬೆಂಕಿಯ ಬಿಸಿಯಲ್ಲಿ ಈ ಬಗ್ಗೆ ಚಿಂತನೆ ಅಗತ್ಯವೆಂಬ ವಿಚಾರವೇ ಅವರ ಮನಸ್ಸಿಗೆ ಬಾರದಿರಬಹುದು. ಆದರೆ ಸರಕಾರ ಸಿಕ್ಖ್ ಭಯೋತ್ಪಾದಕತೆಯೆಂಬ ಸಬೂಬಿನ ಮರೆಯಲ್ಲಿ ಜನತಂತ್ರ ವ್ಯವಸ್ಥೆಗೆ ಬಲು ಅಪಾಯಕಾರಿ ವ್ಯವಸ್ಥೆಯೊಂದನ್ನು ಈ ಮೂಲಕ ರೂಪಿಸಿದೆ ಎಂದು ಹೇಳಲಡ್ಡಿಯಿಲ್ಲ. ಈ ಹೊಸ ಪೊಲೀಸ್ ಬಲಕ್ಕೆ ನಿಗದಿ ಮಾಡಲಾಗಿರುವುದು ಎರಡೇ ಕೆಲಸಗಳು. ಒಂದನೆಯದ್ದು-ಭಯೋತ್ಪಾದಕತೆಯನ್ನು ನಿಗ್ರಹಿಸುವುದು; ಎರಡನೆಯದ್ದು ರಾಜ್ಯಗಳಲ್ಲಿ ಉಂಟಾಗುವ "ಆಂತರಿಕ ಕ್ಷೋಭೆ" ಯನ್ನು ನಿವಾರಿಸುವುದು. ಭಯೋತ್ಪಾದಕತೆ ಅಂದರೆ ಏನು. ಈ ನಿಟ್ಟಿನಲ್ಲಿ ದಳದ ಕೆಲಸ ಕಾರ್ಯಗಳೇನು. ಅಧಿಕಾರ ವ್ಯಾಪ್ತಿ ಎಷ್ಟು ಎಂಬುದನ್ನು ಸ್ಪಷ್ಟಪಡಿಸಲಾಗಿಲ್ಲ. ಆಂತರಿಕ ಕ್ಷೋಭೆ ಎಂದರೇನು, ಜನ ಸಮುದಾಯದ ಯಾವೆಲ್ಲ ಚಟುವಟಿಕೆಗಳಿಂದ ಈ ಕ್ಷೋಭೆ ಉಂಟಾಗುತ್ತದೆ ಎಂಬುದನ್ನೇನೂ ಖಚಿತವಾಗಿ ವಿವರಿಸಲಾಗಿಲ್ಲ. ಈ ಪಡೆಗೆ ಸಂಬಂಧಪಟ್ಟ ನಿಯಮಗಳನ್ನು ರೂಪಿಸುವ ವೇಳೆ ಸದಸ್ಯರ ಸಲಹೆಗಳನ್ನು ನೆನಪಿನಲ್ಲಿಡಲಾಗುವುದು ಎಂದಷ್ಟೇ ಸರಕಾರದ ಕಡೆಯಿಂದ ತಿಳಿಸಲಾಗಿದೆ.

ಈ ದಳವನ್ನು ಯಾವಾಗ ಎಲ್ಲಿ "ಕ್ಷೋಭೆ ನಿವಾರಣೆಗೆ" ನೇಮಿಸಬೇಕು ಎಂಬುದರ ಬಗ್ಗೆ ವಿಧೇಯಕವು ಮೌನವಾಗಿದೆ. ರಾಜ್ಯ ಸರಕಾರ ಕೇಳಿಕೆ ಮುಂದಿಸಿದಾಗ ಕಳಿಸಬೇಕೆ ಅಥವಾ ಕೇಂದ್ರ ಸರಕಾರವೇ ತನ್ನ ತೀರ್ಮಾನದಿಂದಲೇ ಕಳಿಸುವುದೇ ಎಂಬುದು ಸ್ಪಷ್ಟವಿಲ್ಲ. ಗಡಿ ಭದ್ರತಾ ಪಡೆ ಹಾಗೂ ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸರನ್ನು ಈ ತನಕ ಉಪಯೋಗಿಸಿಕೊಂಡ ವಿಧಾನ ನೋಡಿದವರಿಗೆ ಕೇಂದ್ರ ಸರಕಾರದ ಉದ್ದೇಶದ ಬಗೆಗಾಗಲಿ ಈಗ ರಚಿತವಾಗಿರುವ ಹೊಸ ರಕ್ಷಣಾ ದಳದ ಉಪಯೋಗದ ಬಗೆಗಾಗಲಿ ಸಂಶಯ ಉಳಿಯುವುದು ಸಾಧ್ಯವಿಲ್ಲ. ಈ ವಿಚಾರಗಳಲ್ಲಿ ಹಿಂದೆ ಹಲವೊಮ್ಮೆ ಅದು ರಾಜ್ಯಗಳನ್ನು ಕೇಳದೆ ವ್ಯವಹರಿಸಿದ್ದಿದೆ.

ಈ ದಳದ ಮನೋಭೂಮಿಕೆ, ಶೀಲ ಹಾಗೂ ಸಂಸ್ಕೃತಿಯೇ ಬೇರೆಯಾಗಿರುವುದು. ಇದನ್ನು ಸಾಮಾನ್ಯ ಪೊಲೀಸ್ ದಳದಂತೆ ಉಪಯೋಗಿಸುವುದಿಲ್ಲ ಎಂದು ಕೇಂದ್ರ ಸಚಿವರು ಸ್ಪಷ್ಟಪಡಿಸಿದ್ದಾರೆ. ನೇರವಾಗಿ ಹೇಳಬೇಕಿದ್ದರೆ ಇದು "ರಾಜಕೀಯ ಪೊಲೀಸ್ ದಳ" ಆಗಿರುತ್ತದೆ. ಇಂತಹ ಪೊಲೀಸ್ ದಳಗಳು ಹಿಂದೆ ಹಿಟ್ಲರನ ಜರ್ಮನಿಯಲ್ಲೂ ಇರಾನಿನ ಷಾ ಪ್ರಭುತ್ವದಲ್ಲಿಯೂ ಇದ್ದವು. ನಾಜಿ ರಾಜಕೀಯ ಪೊಲೀಸ್ ದಳ ಗೆಸ್ಟಾಪೋ ಎಂದು ಕುಖ್ಯಾತವಾಗಿತ್ತು. ಇರಾನಿನ ಷಾ ದೊರೆತನದಲ್ಲಿ "ಸಾವಕ್" ಪೊಲೀಸರಿದ್ದರು. ಈ ಪೊಲೀಸರ ಕೆಲಸ ಕಾರ್ಯಗಳೇನು ಎಂಬುದು ಇತಿಹಾಸ ತಿಳಿದವರೆಲ್ಲರಿಗೂ ಗೊತ್ತಿರುವ ವಿಚಾರ. ಪ್ರಭುತ್ವದ ಆಲೋಚನೆಯೊಂದಿಗೆ ಸರಿಗೂಡದ ತತ್ವಾದರ್ಶಗಳುಳ್ಳ; ನೀತಿ ನಿಲುವುಗಳುಳ್ಳ ಮಂದಿಯನ್ನು ಬೆನ್ನಟ್ಟಿ, ಬೇಟೆಯಾಡಿ ನಿರ್ನಾಮಗೊಳಿಸುವುದೇ ಇವುಗಳ ಕಾರ್ಯವಾಗಿತ್ತು.

ಈ ಸರಕಾರ ಅದನ್ನು ಮಾಡಲು ಹೊರಟಿದೆ ಎಂದೇನೂ ನಾವು ಹೇಳುವುದಿಲ್ಲ. ಆದರೆ ಹೊರಟಿರುವ ಈ ದಾರಿ ಮಾತ್ರ ಅಪಾಯಕಾರಿಯಾದದ್ದು. ಈಗ ಪಂಜಾಬಿನಲ್ಲಿರುವ ಭಯೋತ್ಪಾದಕತೆಯ ನಿರ್ಮೂಲನ ಅಗತ್ಯ ಎಂಬ ಕಾರಣಕ್ಕೆ "ರಾಜಕೀಯ ಪೊಲೀಸ್" ಪಡೆಯೊಂದನ್ನು ಕಟ್ಟಿ ನಿಲ್ಲಿಸುವ ಅಗತ್ಯ ಇತ್ತೆ ? ಈಗ ಇರುವ ಸಾಮಾನ್ಯ ಪೊಲೀಸ್ ದಳದಿಂದ ಕೆಲಸ ಆಗುತ್ತಿರಲಿಲ್ಲವೆ ? ಈ ಬಗ್ಗೆ ನಮ್ಮ ಜನಪ್ರತಿನಿಧಿಗಳು ಚಿಂತಿಸಿದ ಹಾಗೆ ಕಾಣಿಸುತ್ತಿಲ್ಲ. ರಾಜಕೀಯ ಭಿನ್ನಮತವನ್ನು ನಿವಾರಿಸುವುದಕ್ಕೆ ಈ ರಾಜಕೀಯ ಪೊಲೀಸರನ್ನು ಬಳಸುವುದಿಲ್ಲ ಎಂಬುದಕ್ಕೆ ಗ್ಯಾರಂಟಿ ಏನು ? ಈ ದಳವನ್ನು ಭಯೋತ್ಪಾದಕತೆ ನಿರ್ಮೂಲನಕ್ಕೆ ಮಾತ್ರ ಉಪಯೋಗಿಸಲಾಗುವುದೆಂಬ ಕೇಂದ್ರ ಸಚಿವರ ಮೌಖಿಕ ಭರವಸೆಯನ್ನು ಎಷ್ಟರ ಮಟ್ಟಿಗೆ ನಂಬಬಹುದು ?

ರಾಜ್ಯಾಂಗದ 249ನೇ ವಿಧಿಯನ್ವಯ ರಾಜ್ಯಗಳ ವ್ಯಾಪ್ತಿಗೆ ಸೇರಿದ ಯಾವುದೇ ವಿಚಾರವನ್ನು ಕೈಗೆತ್ತಿಕೊಳ್ಳುವ ಅಧಿಕಾರವನ್ನು ಇದೀಗ ರಾಜ್ಯ ಸಭೆಯ ನಿರ್ಣಯದ ಮೂಲಕ ಕೇಂದ್ರ ಸರಕಾರ ವಹಿಸಿಕೊಂಡಿದೆ. ಇದರನ್ವಯ ಗಡಿ ರಾಜ್ಯಗಳಲ್ಲಿ ಪ್ರತ್ಯೇಕ ಭದ್ರತಾ ವಲಯ ಸೃಷ್ಟಿ ಮಾಡುವ ಬಗ್ಗೆಯೂ ಆಲೋಚಿಸಲಾಗುತ್ತಿದೆ. ಇದೀಗ ಹೊಸ ಸುಸಜ್ಜಿತ ಪೊಲೀಸ್ ದಳ ರಚಿಸಲಾಗಿದೆ.

ಇಂತಹ ರಾಜಕೀಯ ಪೊಲೀಸ್ ದಳ ಯಾವುದೇ ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ. ಜನಹಿತದ ಬಗ್ಗೆ; ಸರಕಾರ ತುಳಿಯುವ ದಾರಿಯ ಬಗ್ಗೆ, ಸಮಾಜ ಸಾಗಬೇಕಾದ ದಿಕ್ಕಿನ ಬಗ್ಗೆ ಮುಕ್ತಚಿಂತನೆಗೆ ಸೂಕ್ತ ವಾತಾವರಣವನ್ನು ಇಂತಹ ದಮನಕಾರಿ ಸಂಸ್ಥೆಗಳು ನಿವಾರಿಸಿ ಬಿಡುವ ಅಪಾಯವಿದೆ. ಭಯೋತ್ಪಾದಕತೆ ಕ್ಷೋಭೆನಿವಾರಣೆ ಎಂಬನೆಪದಲ್ಲಿ ರಾಜಕೀಯ ವಿರೋಧಿಗಳನ್ನು, ಪ್ರಗತಿಪರ ಚಿಂತಕರನ್ನು ಸೆರೆಹಿಡಿದು, ಚಿತ್ರಹಿಂಸೆ ಕೊಟ್ಟು ವಿಚಾರಣೆಯಿಲ್ಲದೆ ಸೆರೆಮನೆಗೆ ದೂಡಿ ಜನತಂತ್ರವನ್ನು ನಿರರ್ಥಕವನ್ನಾಗಿ ಮಾಡುವ ಭೀತಿಯಿದೆ. ಇಂಥ ವಿದ್ಯಮಾನಗಳು ಸಂಭವಿಸುವುದಕ್ಕೆ ವ್ಯವಸ್ಥೆಯನ್ನು ಕಟ್ಟಿ ನಿಲ್ಲಿಸುವ ಕೆಲಸವೇ ತಪ್ಪು. ಆದ್ದರಿಂದ ಈ ಕಾನೂನನ್ನು ಕಡತದಿಂದ ಕಿತ್ತುಹಾಕಬೇಕು. ಈ ರಾಜಕೀಯ ಪೊಲೀಸ್‌ದಳವನ್ನು ವಿಸರ್ಜಿಸಬೇಕು.

ಮುಂಗಾರು
ಶನಿವಾರ, ಆಗಸ್ಟ್ 23, 1986

ಗೊತ್ತು ಗುರಿಯಿಲ್ಲದ ಇಪ್ಪತ್ತಂಶ

ಇಪ್ಪತ್ತಂಶ ಕಾರ್ಯಕ್ರಮದ ಪರಿಷ್ಕೃತ ರೂಪವು ಪ್ರಕಟಗೊಂಡಿದೆ.

ಗ್ರಾಮೀಣ ಜನರ ಅಭಿವೃದ್ಧಿಯನ್ನೇ ದೃಷ್ಟಿಯಲ್ಲಿರಿಸಿಕೊಂಡು ರೂಪಿತವಾದ ಕಾರ್ಯಕ್ರಮ ಇದಾಗಿದೆ. 70ರ ದಶಕದ ಪ್ರಾರಂಭದಲ್ಲಿ ಜನಸಮುದಾಯದ ನಾಡಿಮಿಡಿತವನ್ನರಿತ ರಾಜಕೀಯ ನಾಯಕರು ಹಾಕಿದ ಗರೀಬಿ ಹಟಾವೊ ಘೋಷಣೆಯ ಅನುಷ್ಠಾನಕ್ಕೆಂಬಂತೆ ರೂಪಿಸಿದ ಕಾರ್ಯಕ್ರಮ ಸಂಹಿತೆ ಇದು. ಆದರೂ ಇದು ಪ್ರಕಟಗೊಂಡದ್ದು 1975ರ ಜೂನ್‌ನಲ್ಲಿ ಇಂದಿರಾ ಗಾಂಧಿಯವರು ಗಂಭೀರವಾದ ರಾಜಕೀಯ ಬಿಕ್ಕಟ್ಟನ್ನು ಎದುರಿಸಿದಾಗ. ಈ ಕಾರ್ಯಕ್ರಮ ಗ್ರಾಮೀಣ ಬಡವರಿಗೆ ವಿಶೇಷ ಪ್ರಯೋಜನವೇನನ್ನೂ ಮಾಡದೆ ನೌಕರ ಶಾಹಿಯ ಅಪ್ರಾಮಾಣಿಕತೆ, ಅಸಾಮರ್ಥ್ಯದಿಂದಾಗಿ ಎಲ್ಲವೂ ಕಡತಗಳಲ್ಲೇ ಹುಟ್ಟಿ ಕಡತಗಳಲ್ಲೇ ಮುಕ್ತಾಯವಾದದ್ದು ಇತಿಹಾಸಕ್ಕೆ ಸಂದ ವಿಚಾರ. "ಕೆಲಸ ಮಾಡುವ ಸರಕಾರ" ಎಂಬ ಭರವಸೆಯ ಬೆನ್ನೇರಿ ಇಂದಿರಾ ಗಾಂಧಿಯವರು 1980ರಲ್ಲಿ ರಾಜಕೀಯ ಮರುಹುಟ್ಟು ಪಡೆದ ಬಳಿಕವೂ ಆಶ್ವಾಸನೆಯನ್ನು ಪೂರೈಸಲಾಗದೆ ಪ್ರತಿಷ್ಠೆಯನ್ನು ಮತ್ತೆ ಪಡೆಯಲು ಮೂಲ ಇಪ್ಪತ್ತಂಶಕ್ಕೆ ಪರಿಷ್ಕರಣೆ, ಸೇರ್ಪಡೆ ನಡೆಸಲಾಯಿತು.

ಈ ಹಿಂದಿನ ಇಪ್ಪತ್ತಂಶ ಕಾರ್ಯಕ್ರಮದಲ್ಲಾದರೋ, ಅನುಷ್ಠಾನಕ್ಕೆ ಅಧಿಕಾರಿಗಳಿಗೆ ನಿರ್ದಿಷ್ಟ ಗುರಿಗಳನ್ನು ನಿಗದಿ ಮಾಡಲಾಗಿತ್ತು. ಪರಿಶಿಷ್ಟರಿಗೆ ಒದಗಿಸಬೇಕಾದ ಮನೆಗಳು, ಭೂಸುಧಾರಣಾ ಶಾಸನದನ್ವಯ ವಿತರಿಸಬೇಕಾದ ಮಿಗತೆ ಭೂಮಿ, ನೀರಾವರಿ ಒದಗಿಸಬೇಕಾದ ಎಕರೆಗಳ ಸಂಖ್ಯೆ, ಕುಡಿಯುವ ನೀರು ಒದಗಿಸಬೇಕಾದ ಹಳ್ಳಿಗಳು, ಜೀತ ವಿಮುಕ್ತಿ ಪಡೆಯಬೇಕಾದವರು, ಆಗಬೇಕಾದ ಸಂತಾನ ಶಕ್ತಿಹರಣ ಶಸ್ತ್ರಕ್ರಿಯೆಗಳು, ಹೊಸದಾಗಿ ತೆರೆಯಬೇಕಾದ ಪ್ರಾಥಮಿಕ ಶಾಲೆಗಳು ಇತ್ಯಾದಿ. ಇವುಗಳಲ್ಲಿ ಎಷ್ಟು ಅನುಷ್ಠಾನಕ್ಕೆ ಬಂದಿದೆ. ಅನುಷ್ಠಾನ ಆಗದಿರುವುದಕ್ಕೆ ಕಾರಣಗಳೇನು ಎಂಬ ವಿಚಾರ ಬೇರೆ. ಕನಿಷ್ಠ ನಿರ್ದಿಷ್ಟ ಗುರಿಗಳಿದ್ದುವು.

ಇದೀಗ ಪರಿಷ್ಕೃತವಾದ ಇಪ್ಪತ್ತಂಶ ಕಾರ್ಯಕ್ರಮ ಇಪ್ಪತ್ತಂಶವಾಗಿ ಉಳಿದಿಲ್ಲ. ಅದು ತನ್ನ ವ್ಯಾಪ್ತಿಯಲ್ಲಿ ನೂರಾರು ಅಂಶಗಳನ್ನು ಒಳಗೊಂಡಿದೆ. ಆಗಬೇಕಾದ ಸಾಮಾಜಿಕ ಆರ್ಥಿಕ ಸುಧಾರಣೆಯ ಸಕಲ ವಿಚಾರಗಳನ್ನು ಈ ಹೊಸ ಕಾರ್ಯಕ್ರಮ ಹೇಳುತ್ತದೆ. ಸೂರ್ಯನ ಬೆಳಕು ಬೀಳುವ, ಬೀಳದೆ ಇರುವ ಯಾವುದನ್ನೂ ಹೊಸ ಆಡಳಿತಗಾರರು ಸಿದ್ಧಪಡಿಸಿದ ಹೊಸ ಇಪ್ಪತ್ತಂಶವು ಬಿಟ್ಟಿಲ್ಲ.

ಹೀಗಾದರೆ ಇದರ ಅನುಷ್ಠಾನ ಸಾಧ್ಯವೇ? ಯಾರು ಯಾವುದನ್ನು, ಎಷ್ಟನ್ನು ಮಾಡಬೇಕು? ಹೊಣೆಗಾರಿಕೆಯನ್ನು ವಹಿಸಿ ಕೊಡುವ ವಿಧಾನ ಹೇಗೆ? ನಮ್ಮ ಈ ವ್ಯವಸ್ಥೆಯಲ್ಲಿ ಕಾರ್ಯಕ್ರಮಗಳ ಅನುಷ್ಠಾನ ಕಷ್ಟವಿದೆ ಎಂದು ತಿಳಿದೂ ತಿಳಿದೂ ಗುರಿಗಳನ್ನು ನಿಗದಿ ಮಾಡದೆ, ಅನುಷ್ಠಾನದ ಏಜನ್ಸಿಗಳನ್ನು ನಿಯುಕ್ತಿಗೊಳಿಸದೆ, ವೆಚ್ಚ ಮಾಡಬೇಕಾದ ಹಣವನ್ನು ನಮೂದಿಸದೆ ಉದ್ದೇಶಗಳ ಘೋಷಣೆ ಮಾತ್ರದಿಂದ ಕೆಲಸ ಆದೀತೇ? ಇವೆಲ್ಲ ಪ್ರಚಾರ ಸಾಧನಗಳು ಮಾತ್ರವೆಂಬ ತೀರ್ಮಾನಕ್ಕೆ ಸಾಮಾನ್ಯ ಜನರು ಬರುವ ಸಂಭವ ಇಲ್ಲವೆ?

ರಾಜೀವ ಗಾಂಧಿ ಸರಕಾರ ತನ್ನ ಆರ್ಥಿಕ, ವಾಣಿಜ್ಯ ಹಾಗೂ ಕೈಗಾರಿಕಾ ನೀತಿಯಲ್ಲಿ ಈ ರಂಗಗಳ ಸೂತ್ರವನ್ನು ಶ್ರೀಮಂತ ಹಾಗೂ ಮಧ್ಯಮ ವರ್ಗಗಳ ಕೈಯಲ್ಲಿ ಕೊಡಲು ತೀರ್ಮಾನಿಸಿರುವುದು ಈಗಾಗಲೇ ಸ್ಪಷ್ಟವಾದ ವಿಚಾರ. ಈ ವರ್ಗಗಳ ಆಡಳಿತ ಹಾಗೂ ವ್ಯವಹಾರ ಸಾಮರ್ಥ್ಯದ ಮೇಲೆ ನಂಬಿಕೆಯಿಟ್ಟು ಈ ದೇಶವನ್ನು ಇಪ್ಪತ್ತೊಂದನೇ ಶತಮಾನಕ್ಕೆ ಕೊಂಡೊಯ್ಯುವ ಇರಾದೆ ರಾಜೀವ ಸರಕಾರದ್ದಾಗಿರುವುದೂ ಸ್ಪಷ್ಟವೇ ಆಗಿದೆ. ಇಂತಹ ನೀತಿಯಿಂದ ಉಂಟಾಗುತ್ತಿರುವ ಸಾಮಾನ್ಯ ಜನರ ಭ್ರಮನಿರಸನವನ್ನೂ ಅಸಮಾಧಾನವನ್ನು ಹೋಗಲಾಡಿಸುವ, ತುಷ್ಟೀಕರಿಸುವ ಒಂದು ಪ್ರಯತ್ನವಾಗಿ ಪರಿಷ್ಕೃತ ಇಪ್ಪತ್ತಂಶವನ್ನು ನೋಡಬಹುದಾಗಿದೆ.

ಅದೇನೇ ಇದ್ದರೂ ದೇಶವನ್ನು ಅಭಿವೃದ್ಧಿಯತ್ತ ಸಾಗಿಸುವ, ಜನರಿಗೆ ಸುಖ ಜೀವನವನ್ನು ತಂದು ಕೊಡಬೇಕೆಂಬ, ದಾರಿದ್ರ್ಯವನ್ನು ಹೋಗಲಾಡಿಸಬೇಕೆಂಬ ಸರಕಾರದ ಕಾಳಜಿಯನ್ನು, ಪ್ರಾಮಾಣಿಕತೆಯನ್ನು ಪ್ರಶ್ನಿಸಬೇಕಾದ ಪ್ರಸಂಗವೇನೂ ಬಂದಿಲ್ಲ. ಎಪ್ಪತ್ತು ಕೋಟಿ ಜನಸಂಖ್ಯೆಯ ಒಂದು ದೊಡ್ಡ ದೇಶದ ಅಭಿವೃದ್ಧಿಯನ್ನು ಮಾಡುವುದಾಗಲಿ, ಅದರಲ್ಲಿ ಸುಮಾರು ಅರ್ಧದಷ್ಟಿರುವ ಬಡವರಿಗೆ ಸುಖ-ಸಮೃದ್ಧಿ ತಂದು ಕೊಡುವಂಥ ಆರ್ಥಿಕ ವಾತಾವರಣ ಸೃಷ್ಟಿಸುವುದಾಗಲಿ ಸುಲಭದ ಕೆಲಸವೇನೂ ಅಲ್ಲ. ಯಕ್ಷಿಣಿಯಿಂದ ಆಗುವ ಕೆಲಸ ಅದಲ್ಲ. ದಿನ ಬೆಳಗಾಗುವುದರೊಳಗೆ ಇದೆಲ್ಲ ಆಗಲಾರದು.

ಆದರೆ ಉದ್ದೇಶದಲ್ಲಿರುವ ಪ್ರಾಮಾಣಿಕತೆ ಕೃತಿಯಲ್ಲಿ ಕಾಣಿಸಬೇಕು. ಬಡತನ ನಿವಾರಣೆಯ ಕಾರ್ಯಕ್ರಮದ ಅನುಷ್ಠಾನದ ವಿಧಿ ವಿಧಾನಗಳನ್ನು, ವ್ಯವಸ್ಥೆಯನ್ನೂ ರೂಪಿಸಬೇಕು. ಅನುಷ್ಠಾನದ ಈಗಿನ ವ್ಯವಸ್ಥೆಯಲ್ಲಿ ದೋಷವಿದೆ. ಅದು ಎಲ್ಲರಿಗೂ ಗೊತ್ತು. ಐ ಆರ್ ಡಿ ಪಿ ಯಂತಹ ಮಹತ್ವಾಕಾಂಕ್ಷಿ ಕಾರ್ಯಕ್ರಮದ ವಸ್ತುಶಃ ಸೋಲು ಇದನ್ನು ಹೇಳುತ್ತದೆ. ಇದಕ್ಕೆಲ್ಲ ಕಾರಣ ನಮ್ಮ ನೌಕರ ಶಾಹಿ. ಈ ವ್ಯವಸ್ಥೆಯಲ್ಲಿ ನೌಕರ ಶಾಹಿಯು ಹಲವರಿಗೆ ಪಿತ್ರಾರ್ಜಿತ ಸೊತ್ತಿನಂತಾಗಿದೆ. ಸೇವೆ ಸವಲತ್ತುಗಳೂ ಅಭಿವೃದ್ಧಿಯ ಸೂತ್ರಗಳೂ ಜನರಿಗೆ ಸಲ್ಲತಕ್ಕ ಹಕ್ಕು ಎಂಬುದರ ಬದಲು ಅಧಿಕಾರಿಗಳು ಕೃಪೆಯಿಟ್ಟು ವಿತರಿಸುವ ಪಂಚಕಜ್ಜಾಯವಾಗಿದೆ. ಇಂಥ ವ್ಯವಸ್ಥೆಯಲ್ಲಿ ಅಭಿವೃದ್ಧಿಯ ಪರಿಕರಗಳ ದುರುಪಯೋಗವಾಗುತ್ತದೆ. ಅಗತ್ಯವುಳ್ಳವನಿಗೆ ನೆರವು ಸಿಗದೆ ಹೋಗುತ್ತದೆ. ಭ್ರಷ್ಟಾಚಾರದ ಬಾಯಿಗಳು ದೊಡ್ಡದಾಗುತ್ತವೆ. ಬಿನ್ನಹಕ್ಕೆ ಬಾಯಿಲ್ಲದಾಗುತ್ತದೆ.

ಬಡತನ ನಿವಾರಣೆಯ ಕಾಳಜಿ ಸರಕಾರಕ್ಕಿದ್ದರೆ ಅದು ಮೊದಲು ಮಾಡಬೇಕಾದ ಕೆಲಸ ಆಡಳಿತ ವ್ಯವಸ್ಥೆಯನ್ನು ಬದಲಾಯಿಸುವುದು. ಮೇಲಧಿಕಾರಿಗಳನ್ನು ತುಷ್ಟಿಪಡಿಸಬೇಕಾದ ಅಧಿಕಾರಿಗಳ ಅಗತ್ಯವನ್ನು ನಿವಾರಿಸಿ ಜನರ ಬೇಕು-ಬೇಡಗಳಿಗೆ ನೌಕರ ಶಾಹಿಯು ಸ್ಪಂದಿಸುವಂತೆ ಮಾಡುವುದು; ಫಲಿತಾಂಶವನ್ನು ಒದಗಿಸಿಕೊಡಬೇಕಾದ ಹೊಣೆಗಾರಿಕೆಯನ್ನು ಅಧಿಕಾರಿಗಳಿಗೆ ಹೇರುವುದು. ಇಲಾಖಾಮುಖ್ಯಸ್ಥರು ತಮ್ಮ ಸೇವಾವಧಿ ಪಿತ್ರಾರ್ಜಿತವೆಂದು ತಿಳಿಯುವಂತಾಗದೆ ಅವರ ಕೆಲಸಕ್ಕೆ ಸಾಧನೆಯ ಶರತ್ತನ್ನು ಹೇರುವುದು.

ಇದಕ್ಕಾಗಿ ಇಲಾಖಾ ಮುಖ್ಯಸ್ಥರ ನೇಮಕವನ್ನು ಕರಾರು ನೆಲೆಯಲ್ಲಿ ಮಾಡಬೇಕು. ಅಮೆರಿಕದಂತಹ ದೇಶಗಳಲ್ಲಿ ಈ ವ್ಯವಸ್ಥೆ ಉಂಟು. ಕೆಲಸ ಆಗಲಿಲ್ಲವಾದರೆ ತಮ್ಮ ಕೆಲಸ ಹೋದೀತೆಂಬ ಭಯವನ್ನು ನೌಕರ ಶಾಹಿಯಲ್ಲಿ ಬಿತ್ತಬೇಕು. ಇದನ್ನು ಮಾಡದೆ ಇದ್ದರೆ ಯಾವ ಕಾರ್ಯಕ್ರಮವೂ ನಮ್ಮಲ್ಲಿ ಫಲ ಕೊಡಲಾರದು. ಎಲ್ಲವೂ ಕಡತಗಳಲ್ಲಿ ಕೊಳೆತೀತು. ಸುಳ್ಳಿನ ಅಂಕಿ-ಅಂಶಗಳ ವಂಶ ಬೆಳೆದೀತು.

ಮುಂಗಾರು
ಭಾನುವಾರ, ಆಗಸ್ಟ್ 24, 1986

ಸಂಸ್ಥೆಗಳೆಂಬ ಶಸ್ತ್ರ ಬೇಕು

ಕೃಷ್ಯುತ್ಪನ್ನ ನಿಯಂತ್ರಿತ ಮಾರುಕಟ್ಟೆ ಕಾನೂನಿಗೆ ಕರ್ನಾಟಕ ವಿಧಾನ ಸಭೆ ತಿದ್ದುಪಡಿಯನ್ನು ಅಂಗೀಕರಿಸಿದೆ. ಈ ಮಾರುಕಟ್ಟೆಗಳಲ್ಲಿ ಪ್ರವರ್ತಿಸುವ ಕಮಿಷನ್ ಏಜಂಟರುಗಳು ಅಂದರೆ ರೈತರು ಬೆಳೆದು ತಂದ ಕೃಷ್ಯುತ್ಪನ್ನಗಳಿಗೆ ಮಾರುಕಟ್ಟೆ ದೊರಕಿಸಿಕೊಡುವ ಮಧ್ಯವರ್ತಿ ವ್ಯಾಪಾರಿಗಳು ತಮ್ಮ ಕಮಿಶನನ್ನು ಈ ಸಾಮಗ್ರಿಗಳನ್ನು ಕೊಳ್ಳುವ ವ್ಯಾಪಾರಿಗಳು ಹಾಗೂ ವ್ಯಾಪಾರಿ ಸಂಸ್ಥೆಗಳಿಂದ ಪಡೆದುಕೊಳ್ಳಬೇಕು ಎಂದು ಹೊಸ ಶಾಸನವು ವಿಧಿಸುತ್ತದೆ. ಈ ತನಕ ಕಮಿಶನ್ ಏಜಂಟರುಗಳು ತಮ್ಮ ಕಮಿಶನನ್ನು ರೈತರಿಂದಲೇ ಸಂಗ್ರಹಿಸುತ್ತಿದ್ದರು. ಈ ನಿಯಮ ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಯನ್ನು ಸರಕಾರ ತಂದದ್ದು, ಅದಕ್ಕೆ ಕಮಿಶನ್ ಏಜಂಟರೂ ವ್ಯಾಪಾರಿಗಳೂ ಜತೆ ಸೇರಿ ವಿರೋಧ ಪ್ರಕಟಿಸಿ ಸತ್ಯಾಗ್ರಹ ನಡೆಸಿದ್ದು, ಇವೆಲ್ಲವೂ ಜನರ ನೆನಪಿನಲ್ಲಿರುವ ವಿಚಾರಗಳೇ ಆಗಿರುತ್ತವೆ.

ಎಪಿಎಂಸಿ ಕಾನೂನಿನ ಈ ತಿದ್ದುಪಡಿ ವಿಧೇಯಕ ಚರ್ಚೆಗೆ ಬಂದಾಗ ವಿಧಾನ ಸಭೆಯಲ್ಲಿ ಕಂಡುಬಂದ ಸ್ವಾಗತ ಚೇತೋಹಾರಿಯಾದದ್ದು. ಮಣ್ಣಿನ ಜೊತೆ ಗುದ್ದಾಡಿ ಹೊನ್ನು ಬೆಳೆದು ಜನಕ್ಕೆ ಅನ್ನ ನೀಡುವ ರೈತಾಪಿ ಜನರ ಹಿತರಕ್ಷಣೆಗೆ ಸಣ್ಣದಾದರೂ ಮಹತ್ವದ ಹೆಜ್ಜೆಯಿಟ್ಟ ರಾಜ್ಯ ಸರಕಾರ ಅಭಿನಂದನೀಯ. ಈ ಪ್ರಗತಿಪರ ಶಾಸನದ ಬೆಂಬಲಕ್ಕೆ ನಿಂತು ತಾವು ಯಾವ ಕಡೆಗಿದ್ದೇವೆ ಎಂದು ಖಚಿತವಾಗಿ ಸಾರಿದ ವಿರೋಧ ಪಕ್ಷದ ಸದಸ್ಯರ ತೂಕವೂ ಜನ ಸಮುದಾಯದ ದೃಷ್ಟಿಯಲ್ಲಿ ಏರಿದೆ. ಸಮಾಜದ ಶೋಷಕ ಶಕ್ತಿಗಳ ಬಲ ಎಷ್ಟೇ ಬಲವಾಗಿದ್ದರೂ ಒಳ್ಳೆಯ ಶಕ್ತಿಗಳೂ ವಿಚಾರಗಳೂ ಇನ್ನೂ ಈ ನಾಡಿನಲ್ಲಿ ಜೀವಂತವಾಗಿವೆಯೆಂಬುದಕ್ಕೆ ಇದೊಂದು ನಿದರ್ಶನ. ಅಪರೂಪಕ್ಕಾದರೂ ರೈತಾಪಿ ಜನರ ಬೆಂಬಲಕ್ಕೊಂದು ಶಾಸನ ಮಾಡಿ ಶಾಸನಸದನದಲ್ಲಿ ಅಪೂರ್ವ ಒಗ್ಗಟ್ಟು ಪ್ರದರ್ಶಿಸಿದ ರಾಜಕಾರಣಿಗಳು ಅಭಿನಂದನೀಯರು.

ಶಾಸನವೊಂದೇ ಸಾಲದು; ಅದರ ಅನುಷ್ಠಾನವೂ ಬೇಕು. ಈ ಹಿಂದೆ ಕಮಿಶನ್ ಏಜಂಟರುಗಳು ರೈತರಿಂದ ಗರಿಷ್ಠ ಶೇಕಡಾ ನಾಲ್ಕು ಕಮಿಶನ್ ಪಡೆಯಬಹುದೆಂಬ ನಿಯಮವಿದ್ದಾಗಲೂ ಅವರು ಅಕ್ರಮವಾಗಿ ಶೇಕಡಾ ಎಂಟರಷ್ಟೂ ಹದಿನೈದರಷ್ಟೂ ಕಮಿಶನ್ ಕಬಳಿಸುತ್ತಿದ್ದರು ಎಂಬ ಆಪಾದನೆಯಿದೆ. ಇದೀಗ ಈ ಕಮಿಶನನ್ನು ಸಾಮಗ್ರಿ ಕೊಳ್ಳುವ ವ್ಯಾಪಾರಿಗಳಿಂದ ಪಡೆಯಬೇಕು ಎಂದು ವಿಧಿಸಲಾಗಿದ್ದರೂ ವ್ಯಾಪಾರಿಗಳು ತಮ್ಮ ಕಮಿಶನಿನ ಅಂಶವನ್ನು ರೈತರಿಗೆ ಕೊಡುವ ಬೆಲೆಯಿಂದಲೇ ಮುರಿದುಕೊಳ್ಳುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಇಂಥ ವಿಪರ್ಯಾಸಗಳು ಇಂದಿನ ನಮ್ಮ ವಾಣಿಜ್ಯ ಮಾರುಕಟ್ಟೆಯಲ್ಲಿ ಎಲ್ಲೆಲ್ಲೂ ಇವೆ. ಯಾವ ವ್ಯಾಪಾರಿಯೂ ತನಗೆ ಬರುವ ವೆಚ್ಚವನ್ನು ಸ್ವಂತ ಜೇಬಿನಿಂದ ಭರಿಸುವುದಿಲ್ಲ. ಅದು ಸರಕಾರಕ್ಕೆ ಕೊಡುವ ತೆರಿಗೆಯಾಗಲಿ, ಸಾಮಗ್ರಿ ಸಾಗಣೆಯ ವೆಚ್ಚವಾಗಿರಲಿ, ಅಂಗಡಿಯ ಬಾಡಿಗೆಯಿರಲಿ, ಅದಕ್ಕೆ ಜೋಡಿಸಿರುವ ಫ್ಯಾನ್ ಆಗಲಿ, ತಿಂಗಳಿಗೆ ಬರುವ ವಿದ್ಯುತ್ ಬಿಲ್ ಆಗಲಿ, ಸಾಮಗ್ರಿ ಕಟ್ಟಿಕೊಡಲು ಉಪಯೋಗಿಸುವ ರಬ್ಬರ್ ಬ್ಯಾಂಡ್ ಆಗಲಿ, ಸ್ಟ್ಯಾಪ್ಲರ್ ಪಿನ್ ಆಗಲಿ, ವ್ಯಾಪಾರಿಯ ಜೇಬಿನಿಂದ ವೆಚ್ಚವಾಗುವುದಿಲ್ಲ. ಎಲ್ಲವನ್ನೂ ಗಿರಾಕಿಯೇ ತೆರಬೇಕು. ಅದನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವ ವಿದ್ಯೆಯು ವ್ಯಾಪಾರಿ ವರ್ಗಕ್ಕೆ ಕರತಲಾಮಲಕ. ಮಾರಾಟ ತೆರಿಗೆ, ಸ್ಥಳೀಯ ತೆರಿಗೆ ಮುಂತಾದವುಗಳಲ್ಲಿ ವೆಚ್ಚ ಸೇರಿಸಿಕೊಳ್ಳುವುದಿಲ್ಲವಾದರೆ ಅದಕ್ಕೆ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್ ಎಂಬ ಪ್ರತ್ಯೇಕ ವಿಲೇವಾರಿಯೇ ಉಂಟು.

ಇಂಥ ವಿದ್ಯಮಾನ ನಮ್ಮ ನಗರಗಳ ಮಾರುಕಟ್ಟೆಯಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿರುವುದರಿಂದ ಪೇಟೆಯಲ್ಲಿ ಕೃಷ್ಯುತ್ಪನ್ನ ಮಾರುವ ರೈತರೂ ಅಲ್ಲಿ ಸಾಮಗ್ರಿ ಕೊಳ್ಳುವ ಗ್ರಾಹಕರೂ ತಮ್ಮ ಹಿತಾಸಕ್ತಿ ರಕ್ಷಿಸಿಕೊಳ್ಳುವುದು ತ್ರಾಸದ ವಿಚಾರವೇ ಆಗಿದೆ. ಇದಕ್ಕೆ ಇವರಿಬ್ಬರ ಸಂಘಟನೆ ಬೇಕು. ಕಾನೂನುಗಳು ಬೇಕು ನಿಜ. ಆದರೆ ಅವುಗಳ ಬಗ್ಗೆ ಜನರಿಗೆ ತಿಳುವಳಿಕೆ ಇರಬೇಕು. ಕಾನೂನುಗಳನ್ನು ಜಾರಿಗೆ ತರಲು ಸಂಘ ಶಕ್ತಿಯೂ ಇರಬೇಕು. ಕಾನೂನಿನ ಲೋಪದೋಷಗಳ ನಡುವೆ ತೂರಿಕೊಂಡು ರೈತನನ್ನು ಮೋಸ ಮಾಡಲು ಕಮಿಷನ್ ಏಜಂಟರೂ ವ್ಯಾಪಾರಿಗಳೂ ಕೂಟ ಕಟ್ಟುವ ಸಾಧ್ಯತೆ ನಿಚ್ಚಳವಾಗಿದೆ. ಕಮಿಷನಿನ ಅಂಶವನ್ನು ರೈತರಿಗೆ ನೀಡುವ ಬೆಲೆಯಲ್ಲಿಯೇ ಅನಧಿಕೃತವಾಗಿ ಕಡಿತ ಮಾಡಿಕೊಳ್ಳುವುದು ಹಾಗೂ ಇದಕ್ಕಾಗಿ ತಮ್ಮೊಳಗೆ ಒಳಒಪ್ಪಂದ ಮಾಡಿಕೊಳ್ಳುವುದು ಖಚಿತ.

ಇಂಥ ಒಂದು ಷಡ್ಯಂತ್ರವನ್ನು ಸೋಲಿಸಲು ರೈತರು ದಾರಿ ಹುಡುಕಬೇಕು. ಅದುವೇ ಅವರ ಸಂಘಶಕ್ತಿ. ಅವರು ತಾವು ಬೆಳೆದುದರ ವಿಲೇವಾರಿಗೆ ಸಹಕಾರಿ ಮಾರುಕಟ್ಟೆ ನಿರ್ಮಿಸಿಕೊಳ್ಳಬೇಕು. ಇಂಥ ವ್ಯವಸ್ಥೆ ಚೆನ್ನಾಗಿ ನಡೆಯುತ್ತದೆ ಎಂಬುದಕ್ಕೆ ಈ ನಾಡಿನಲ್ಲಿಯೇ ಹಲವಾರು ನಿದರ್ಶನಗಳಿವೆ. ಕ್ಯಾಂಪ್ಕೋ ಅವುಗಳಲ್ಲೊಂದು. ಪಟ್ಟಭದ್ರರ ಮೋಸ-ವಂಚನೆಯ ಜಾಲದಿಂದ ವಿಮುಕ್ತರಾಗಲು ಗ್ರಾಮಾಂತರದ ಜನರಿಗೆ ಸಹಕಾರ ಚಳವಳಿಯೇ ದಾರಿ.

ನಮ್ಮ ರಾಜಕಾರಣಿಗಳು ತಮ್ಮ ಉದ್ದೇಶದ ಪ್ರಾಮಾಣಿಕತೆಯನ್ನು ಶಾಸನ ರಚನೆಯ ಮೂಲಕ ವಿಧಾನ ಸಭೆಯಲ್ಲಿ ಪ್ರದರ್ಶಿಸಿದರೆ ಮಾತ್ರವೇ ಸಾಲದು. ಅವರು ಕ್ಷೇತ್ರಕ್ಕಿಳಿದು ಬರಬೇಕು. ಕಾರ್ಯಕರ್ತರನ್ನು ಹುರಿಗೊಳಿಸಿ ಮಾರ್ಗದರ್ಶನ ಮಾಡಿ ರೈತರನ್ನು ಸಂಘಟಿಸಬೇಕು. ಶೋಷಕ ವರ್ಗದಿಂದ ವಿಮುಕ್ತರಾಗುವ ಬಗೆಯನ್ನು ವಿಶದೀಕರಿಸಬೇಕು. ಕಾರ್ಯತಃ ಕೈಗೂಡುವ ಇಂತಹ ಸಂಸ್ಥೆಗಳ ರೂಪದ ಶಸ್ತ್ರಗಳು ಹಾಗೂ ಪರಿಕರಗಳ ಮೂಲಕ ಮಾತ್ರವೇ ರೈತರ ಹಿತಾಸಕ್ತಿ ರಕ್ಷಣೆ ಸಾಧ್ಯ: ದಲ್ಲಾಳಿಗಳಿಂದ ವಿಮೋಚನೆ ಸಾಧ್ಯ.

ಮುಂಗಾರು
ಮಂಗಳವಾರ, ಆಗಸ್ಟ್ 26, 1986

ಶೋಷಣೆಯ ನಗ್ನರೂಪ

ವಿವಿಧ ವೃತ್ತಿ ಹಾಗೂ ಕೈಗಾರಿಕೆಗಳಲ್ಲಿ ಬಾಲ ಕಾರ್ಮಿಕರನ್ನು ದುಡಿಸುವ ಪ್ರವೃತ್ತಿಗೆ ಕಡಿವಾಣ ಹಾಕುವಉದ್ದೇಶದ ಶಾಸನವೊಂದನ್ನು ಸಂಸತ್ತು ಅಂಗೀಕರಿಸಿದೆ. ವಿವಿಧ ಉದ್ದಿಮೆಗಳಲ್ಲಿ 14 ವಯಸ್ಸಿಗಿಂತ ಕೆಳಗಿನ ಬಾಲಕ-ಬಾಲಕಿಯರನ್ನು ದುಡಿಮೆಗೆ ಹಚ್ಚುವುದನ್ನು ಈ ಶಾಸನವು ನಿಷೇಧಿಸುತ್ತದೆ. ಈ ಶಾಸನವನ್ನು ಉಲ್ಲಂಘಿಸುವವರಿಗೆ ಮೂರು ತಿಂಗಳಿನಿಂದ ಒಂದು ವರ್ಷದ ತನಕ ಜೈಲುವಾಸವನ್ನೂ, ಹತ್ತು ಸಾವಿರ ರೂಪಾಯಿ ತನಕ ಜುಲ್ಮಾನೆಯನ್ನೂ ವಿಧಿಸುವ ಅವಕಾಶವನ್ನು ಅದು ನೀಡುತ್ತದೆ.

ಈ ಕಾನೂನನ್ನು ವ್ಯಾಪಕವಾಗಿ ಅನ್ವಯಿಸಲಾಗಿದೆ. ಮೋಟಾರು ಸಾರಿಗೆ, ಮುದ್ರಣ, ಬೀಡಿ, ಸುಡುಮದ್ದು ತಯಾರಿಕೆ, ಬೆಂಕಿ ಪೊಟ್ಟಣ, ರೈಲ್ವೆಯಲ್ಲಿ ಆಹಾರ ಪೂರೈಕೆ, ಕಾರ್ಪೆಟ್ ನೇಯುವಿಕೆ, ಸಿಮೆಂಟು, ಬಟ್ಟೆ ನೇಯ್ಗೆ ಮತ್ತು ಬಣ್ಣ ಹಾಕುವಿಕೆ, ಸಾಬೂನು ಉತ್ಪಾದನೆ, ಚರ್ಮ ಹದ ಮಾಡುವಿಕೆ, ನಿರ್ಮಾಣಕ್ಷೇತ್ರ ಇವುಗಳನ್ನೆಲ್ಲ ಬಾಲ ಕಾರ್ಮಿಕ ನಿಷೇಧದ ವ್ಯಾಪ್ತಿಗೆ ಸೇರಿಸಲಾಗಿದೆ.

ಐದರಿಂದ 15 ವರ್ಷದೊಳಗಣ ಮಕ್ಕಳು ಸುಮಾರು 30 ಕೋಟಿಯಷ್ಟಿರುವ ನಮ್ಮ ದೇಶದಲ್ಲಿ ಕನಿಷ್ಠ 11 ಕೋಟಿ ಮಕ್ಕಳು ಹೊಗೆಯ ಕೂಪಗಳಲ್ಲಿಯೂ ದೂಳಿನ ಹೊಂಡಗಳಲ್ಲಿಯೂ ಸುಡುಮದ್ದು ಸುತ್ತುವ ರೋಗಜನಕ ಗುಡಿಸಲುಗಳಲ್ಲಿಯೂ ಬೀಡಿ ಸುತ್ತುವ ಚಿಮಿಣಿ ಬುಡ್ಡಿಯ ಹೊಗೆ ತುಂಬಿದ ಕೋಣೆಗಳಲ್ಲಿಯೂ ದುಡಿಯುತ್ತಿದ್ದಾರೆ.

ಶಿವಕಾಶಿಯ ಆಫ್‌ಸೆಟ್ ಮುದ್ರಣಾಲಯಗಳಲ್ಲಿಯೂ, ಸುಡುಮದ್ದು, ಬೆಂಕಿಪೊಟ್ಟಣ ಉದ್ಯಮಗಳಲ್ಲಿಯೂ ಲಕ್ಷಾವಧಿ ಎಳೆಯ ಮಕ್ಕಳ ಭವಿಷ್ಯವು ಬಿರಿದು, ಸ್ಫೋಟಗೊಂಡು ನಾಶವಾಗುತ್ತಿದೆ. ಶಿವಕಾಶಿಯ ಗಲ್ಲಿಗಳಲ್ಲೂ, ಕಲ್ಕತ್ತದ ಕೋಣೆಗಳಲ್ಲೂ ಭಯಭೀತ ಕಣ್ಣುಗಳ ಈ ಮಕ್ಕಳು ದಿನದ ಎರಡು ಹೊತ್ತಿನ ಊಟ ಸಂಪಾದಿಸಲು 16ರಿಂದ 18 ಗಂಟೆಗಳ ತನಕ ಕೆಲಸ ಮಾಡುತ್ತಿವೆ. ಬಾಲಕಾರ್ಮಿಕರ ಅವಸ್ಥೆಯು ಈ ದೇಶದಲ್ಲಿ ಶೋಷಣೆಯ ಅತ್ಯಂತ ಕರಾಳವೂ ನಗ್ನವೂ ಆದ ಮುಖವನ್ನು ತೋರಿಸುತ್ತದೆ. ಸ್ವಂತಕ್ಕೆ ನಾಲ್ಕು ಕಾಸು ಮಾಡಿಕೊಳ್ಳುವುದಕ್ಕಾಗಿ ಸ್ವಾರ್ಥಿ ಕೈಗಾರಿಕೋದ್ಯಮಿಗಳು ಬೆಳೆಯುವ ಮಕ್ಕಳನ್ನು, ಈ ದೇಶವನ್ನು ಕಟ್ಟಿ ಬೆಳೆಸಬೇಕಾದ ಪ್ರತಿಭೆಯ, ಚೈತನ್ಯದ ಕುಡಿಗಳನ್ನು ಹೊಸಕಿ ನಾಶ ಮಾಡುತ್ತಿದ್ದಾರೆ. ಶಾಲೆಗಳಲ್ಲಿ ವಿದ್ಯೆ ಕಲಿತು ಭವಿಷ್ಯವನ್ನು ರೂಪಿಸುವ ಜ್ಞಾನ ಸಂಪಾದಿಸಬೇಕಾದ ಮಕ್ಕಳನ್ನು ಹಿಡಿದು ತಂದು ಧನ ಸಂಪಾದನೆಯ ಕುಂಡದಲ್ಲಿ ಬಲಿಗೊಡುವ ಈ ಪ್ರವೃತ್ತಿ ಹಾಡುಹಗಲೇ ನಡೆಸುವ ಕಗ್ಗೊಲೆಗಿಂತ ಬೇರೆಯಲ್ಲ.

ಇಂದು ಕೇಂದ್ರ ಸರಕಾರ ಬಾಲಕರ ಸಾಮೂಹಿಕ ಶೋಷಣೆಯನ್ನು ನಿಷೇಧಿಸಿ ಶಾಸನಮಾಡಿದೆ ನಿಜ. ಆದರೆ ಹಿಂದೊಮ್ಮೆ (1983-84) ಕೇಂದ್ರ ಕಾರ್ಮಿಕ ಖಾತೆಯು ತನ್ನ ವರದಿಯಲ್ಲಿ ಬಾಲ ದುಡಿಮೆಯನ್ನು "ಕ್ರೂರ ವಾಸ್ತವಿಕತೆ" ಎಂದು ಕರೆದಿತ್ತು.

ಕಾನೂನು ಹಿಂದೆಯೂ ಇತ್ತು. ಈಗ ಅದನ್ನು ಮತ್ತಷ್ಟು ಬಲಗೊಳಿಸಲಾಗಿದೆ. ಶಿಕ್ಷೆಯನ್ನು ಹೆಚ್ಚಿಸಲಾಗಿದೆ. ಕಾನೂನು ರಚನೆಯಿಂದ ಉಪಯೋಗವಿದೆ–ಇಲ್ಲವೆಂದಲ್ಲ. ಜನರಲ್ಲಿ ಪ್ರಜ್ಞಾವಂತಿಕೆಯನ್ನು ಅದು ಬೆಳೆಸುತ್ತದೆ. ಹೀಗೆ ಪ್ರಜ್ಞಾವಂತಿಕೆ ಬೆಳೆದರೆ ಕಾನೂನಿನ ಅನುಷ್ಠಾನ ಸುಲಭವಾಗುತ್ತದೆ. ಈಗ ಕಾನೂನಿನ ಅನುಷ್ಠಾನ ನೋಡಿಕೊಳ್ಳಬೇಕಾದ ಅಧಿಕಾರಿಗಳ ಸಮೂಹ ಕೈಗಾರಿಕಾ ಘಟಕಗಳ ಮಾಲೀಕರೊಡನೆ ಶಾಮೀಲಾಗುತ್ತಿರುವುದರಿಂದಲೇ ಕೋಟ್ಯಂತರ ಬಾಲ ಕಾರ್ಮಿಕರ ಜುಜುಬಿ ಸಂಬಳದ ದುಡಿಮೆಯ ಫಲವನ್ನು ಉದ್ಯೋಗಪತಿಗಳು ಉಣ್ಣುತ್ತಿದ್ದಾರೆ. ಈ ಬಾಲಕರಲ್ಲಿ ಸಂಘಟನೆಯನ್ನು ನಿರೀಕ್ಷಿಸುವುದು ತಪ್ಪಾದೀತು. ಇಂಥ ಒಂದು ಅನಿಷ್ಟವನ್ನು ನಿವಾರಿಸಲು ಇತರರೆಲ್ಲರೂ ಸಜ್ಜಾಗಬೇಕು. ಸಂಘಟಿತರಾಗಬೇಕು. ಕಾರ್ಮಿಕ ಸಂಘಗಳು ಕೂಡ ಈ ನಿಟ್ಟಿನಲ್ಲಿ ಪ್ರವರ್ತಿಸಬೇಕು.

ಮುಂಗಾರು
ಬುಧವಾರ, ಆಗಸ್ಟ್ 27, 1986

ನ್ಯಾಯ ಬಾಹಿರ ನೀತಿ

ರಾಜ್ಯದ ಸಾವಿರಾರು ಪ್ರಾಥಮಿಕ ಶಾಲೆಗಳಲ್ಲಿ ಕಂಟ್ರಾಕ್ಟ್ ನೆಲೆಯಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರನ್ನು ಕೆಲಸದಿಂದ ವಜಾ ಮಾಡುವ ಉದ್ದೇಶ ಸರಕಾರಕ್ಕಿಲ್ಲವೆಂದು ಶಿಕ್ಷಣ ಸಚಿವ ಡಿ. ಮಂಜುನಾಥ್ ಸೋಮವಾರ ವಿಧಾನ ಸಭೆಯಲ್ಲಿ ಭರವಸೆ ನೀಡಿದ್ದಾರೆ.

ಸುಮಾರು ಹತ್ತು ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ಕಂಟ್ರಾಕ್ಟ್ ಅಧ್ಯಾಪಕರು ಸದ್ಯದಲ್ಲಿ ಬೀದಿ ಪಾಲಾಗುವ ಅಪಾಯ ಶಿಕ್ಷಣ ಸಚಿವರ ಭರವಸೆಯಿಂದ ದೂರವಾಗಿದೆ. ಆದರೆ ಇದರಿಂದ ಕಂಟ್ರಾಕ್ಟ್ ಅಧ್ಯಾಪಕರ ಅತಂತ್ರ ಸ್ಥಿತಿಯು ನಿವಾರಣೆಯಾಗಿಲ್ಲವೆಂಬುದನ್ನು ನಾವು ವಿಷಾದದಿಂದ ಗಮನಿಸಬೇಕಾಗಿದೆ.

ಎರಡು ವರ್ಷಗಳ ಹಿಂದೆ ರಾಜ್ಯದ ಶಾಲೆಗಳಲ್ಲಿ ಖಾಲಿ ಇದ್ದ ಹುದ್ದೆಗಳಿಗೆ ಕಂಟ್ರಾಕ್ಟ್ ನೆಲೆಯಲ್ಲಿ ನೇಮಕಗೊಂಡ ಈ ಅಧ್ಯಾಪಕರೆಲ್ಲ ಶಿಕ್ಷಕ ವೃತ್ತಿಯಲ್ಲಿ ಅರ್ಹ ತರಬೇತಿ ಪಡೆದವರು. ತಾವು ಆಯ್ಕೆಮಾಡಿದ ವೃತ್ತಿಯನ್ನನುಸರಿಸಿ ತಮ್ಮ ಬದುಕಿಗೊಂದು ಭದ್ರ ನೆಲೆ ಕಂಡುಕೊಳ್ಳುವ ಹಕ್ಕುಳ್ಳವರು. ತರಬೇತಾದ ಇಂತಹ ಯುವ ಅಧ್ಯಾಪಕರನ್ನು ಅತಂತ್ರ ಸ್ಥಿತಿಯಲ್ಲಿಡುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ಇದು ನಾಗರಿಕ ಸಮಾಜದ ಸಭ್ಯ ನಡವಳಿಕೆಯೂ ಅಲ್ಲ.

ಸರಕಾರ ಎರಡು ವರ್ಷಗಳ ಹಿಂದೆ ಅಧ್ಯಾಪಕರ ನೇಮಕಕ್ಕೆ ಕಂಟ್ರಾಕ್ಟ್ ಕ್ರಮವನ್ನು ಜಾರಿಗೆ ತಂದಾಗ ನಾವದನ್ನು ವಿರೋಧಿಸಿದ್ದೆವು. ಇದು ಯಾರಿಗೂ ಒಳಿತು ಮಾಡಲಾರದ ಒಂದು "ಅಪ್ರೇಪಾರಿ" ಪದ್ಧತಿ. ಇದರಲ್ಲಿ ಅಧ್ಯಾಪಕರಾಗಿ ಸೇರುವವರಿಂದ ವೃತ್ತಿ ನಿಷ್ಠೆಯ ನಿರೀಕ್ಷೆ ಮಾಡುವುದು ಸಾಧ್ಯವಿಲ್ಲ. ಅವರು ಮಾಡುವುದೆಲ್ಲ ಕಾಲ ತಳ್ಳುವ ಕೆಲಸವೆನಿಸುತ್ತದೆ.

ಕಂಟ್ರಾಕ್ಟ್ ಅಧ್ಯಾಪಕರು ಹೆಚ್ಚಾಗಿ ಇರುವುದು ಹಳ್ಳಿ ಶಾಲೆಗಳಲ್ಲಿ: ಪರಿಣಾಮವಾಗಿ ಮೊದಲೇ ವಿದ್ಯೆಯ ವಾತಾವರಣದಿಂದ ವಂಚಿತರಾದ ಹಳ್ಳಿಯ ಮಕ್ಕಳು ಯೋಗ್ಯ ಶಿಕ್ಷಣಕ್ಕೂ ಹೊರತಾಗಿ ಉಳಿಯುತ್ತಾರೆ. ಹಳ್ಳಿಯ ಮಕ್ಕಳ ಬುದ್ಧಿ ಬೆಳವಣಿಗೆಗೆ ಇದೂ ಒಂದು ಕುತ್ತಾಗಿ ಪರಿಣಮಿಸಲಿದೆ.

ಈ ಕಂಟ್ರಾಕ್ಟ್ ಅಧ್ಯಾಪಕರ ನೇಮಕವೆಂಬುದು ಸರಕಾರಿ ಇಲಾಖೆಗಳಿಗೆ ಹಂಗಾಮಿ ನೌಕರರು ಮತ್ತು ಸ್ಟೈಪೆಂಡಿಯರಿಗಳ ನೇಮಕ ಮಾಡುವ ಕ್ರಮಕ್ಕಿಂತ ಹೆಚ್ಚು ಅಪಾಯಕಾರಿಯಾದುದು. ಇವೆಲ್ಲ ಖಾಲಿ ಇರುವ ಹುದ್ದೆಗಳಿಗಾದ ನೇಮಕಗಳು. ಸ್ಥಾನಗಳು ತೆರವಿವೆ. ಅವುಗಳನ್ನು ಭರ್ತಿಮಾಡಲು ಅರ್ಹ ಅಭ್ಯರ್ಥಿಗಳು ಬೇಕಾದುದಕ್ಕಿಂತ ಹೆಚ್ಚು ಸಂಖ್ಯೆಯಲ್ಲಿದ್ದಾರೆ.

ಇಷ್ಟಿದ್ದೂ ಸರಕಾರ ಇವರನ್ನೆಲ್ಲ ವರ್ಷಗಟ್ಟಲೆ ಅತಂತ್ರ ಸ್ಥಿತಿಯಲ್ಲಿಟ್ಟು ಈ ಯುವ ಸಮೂಹದ ಜೀವನಾಸಕ್ತಿಯ ಕುಡಿಗಳನ್ನಾಕೆ ಕಮರಿಸುತ್ತಿದೆ?- ಎಂದು ಕೇಳಲೇ ಬೇಕಾಗುತ್ತದೆ. ಸಮೂಹಹಿತದ ಇಂತಹ ಪ್ರಶ್ನೆಗಳ ಮೇಲೆ ಸಾರ್ವಜನಿಕ ಕಳಕಳಿ ವ್ಯಕ್ತವಾಗುವ ಯಾವುದೇಪ್ರಜ್ಞಾವಂತಸಮಾಜದಲ್ಲಾದರೂ ಸರಕಾರವೊಂದು ಇಂತಹ ನ್ಯಾಯಬಾಹಿರನೀತಿಯನ್ನು ಅನುಸರಿಸಲು ಸಾಧ್ಯವಾಗುತ್ತಿರಲಿಲ್ಲ. ನಮ್ಮ ಜನ ನಿತ್ಯ ಬದುಕಿನ ಬವಣೆಯಿಂದ ಪ್ರಚೋದಿತರಾಗುವವರಲ್ಲ. ಬದುಕಿಗೆ ನೇರ ಸಂಬಂಧವಿಲ್ಲದ ಭಾವನೆಗಳ ಬೆನ್ನು ಹತ್ತಿ ಹೋಗುವವರೆಂದು ಸರಕಾರಕ್ಕೆ ಚೆನ್ನಾಗಿ ಗೊತ್ತಿದೆ. ಆದ್ದರಿಂದಲೇ ಸರಕಾರ ಇಂತಹ ಆಟಗಳನ್ನಾಡಿಕೊಂಡೇ ಹೋಗುತ್ತಿದೆ. ಮುಗ್ಧ ಜನರಿಗೆ ಮೋಸ ಮಾಡುತ್ತಲೇ ಹೋಗುತ್ತಿದೆ.

ಈ ಮೋಸ ಈಗಿನ ಸರಕಾರದ ಹೊಸತನವೇನಲ್ಲ. ಹಿಂದಿನಿಂದಲೂ ಎಲ್ಲ ಸರಕಾರಗಳೂ ಇದನ್ನು ಮಾಡಿಕೊಂಡೇ ಬಂದಿವೆ.ಲಕ್ಷಾಂತರ ಮಂದಿ ಉದ್ಯೋಗಾಕಾಂಕ್ಷಿ ಯುವಕರ ಒಡಲುರಿಸಿವೆ. ಅವರಬದುಕಿನಾಸೆಯನ್ನೆಲ್ಲ ಭಗ್ನಗೊಳಿಸಿವೆ.

ಅಧ್ಯಾಪಕರ ನೇಮಕಕ್ಕೆ ಕಂಟ್ರಾಕ್ಟ್ ಪದ್ಧತಿಯನ್ನು ಜಾರಿಗೆ ತಂದಿರುವುದು ಈಗಿನ ಸರಕಾರದ ಹೊಸತೊಂದು ಉಪಕ್ರಮ. ಇದರ ಸೂತ್ರವನ್ನು ಬಿಡಿಸಿ ನೋಡಿದರೆ ಇದೊಂದು ಮೋಸದ ಜಾಲವಾಗಿ ಕಾಣುತ್ತಿದೆ.

ಸರಕಾರ ಕಂಟ್ರಾಕ್ಟ್ ಪದ್ಧತಿಯನ್ನು ಜಾರಿಗೆ ತಂದಾಗ ರಾಜ್ಯದಲ್ಲಿರುವ ಸರಕಾರಿ ಶಾಲೆಗಳಲ್ಲಿಸುಮಾರು ಹದಿನೈದು ಸಾವಿರಕ್ಕೂ ಹೆಚ್ಚು ಅಧ್ಯಾಪಕರ ಹುದ್ದೆಗಳು ಖಾಲಿ ಇದ್ದವು.ಇವುಗಳನ್ನು ವಿಧಿವತ್ತಾಗಿ ಭರ್ತಿ ಮಾಡಬೇಕಾದರೆ ಮೀಸಲಾತಿ ನಿಯಮ ಹಾಗೂ ರೋಸ್ಟರ್ ಪದ್ಧತಿಯ ಅನುಸರಣೆ ಮಾಡಲೇಬೇಕಾಗುತ್ತದೆ. ಇದು ಸರಕಾರಿ ದೊರೆಗಳಿಗೆ ಇಷ್ಟವಿಲ್ಲದ ವಿಚಾರ. ಜಾತಿ ಆಧಾರಿತವಾದ ಮೀಸಲಾತಿ ನಿಯಮ ಹಾಗೂ ರೋಸ್ಟರ್ ಪದ್ಧತಿಯನ್ನು ಪೂರ್ಣವಾಗಿ ತಿರುಚಿ ಹಾಕುವ ಸಂಚಿನಲ್ಲಿರುವ ಈ ಸರಕಾರ ಕಾಲ ತಳ್ಳಲು ಕಂಟ್ರಾಕ್ಟ್ ಪದ್ಧತಿಯನ್ನು ಜಾರಿಗೆ ತಂದಿದೆಯೆಂದೇ ಹೇಳಬೇಕಾಗುತ್ತದೆ.

ಇದರಿಂದ ಸಾವಿರಾರು ಮಂದಿ ಯುವಕರ ಬದುಕಿನ ಅಂದಗೆಡುತ್ತಿದೆಯೆಂಬುದರ ಪರಿವೆಯೇ ಸರಕಾರಕ್ಕಿಲ್ಲವೆನ್ನಬೇಕಾಗಿದೆ. ನಮ್ಮಂತಹ ಒಂದು ದುರ್ಬಲ ಸಮಾಜದಲ್ಲಿ ಸರಕಾರ ಸರ್ವಶಕ್ತವಾಗಿ ಬೆಳೆಯುವುದು ಅನಿವಾರ್ಯ. ಆದರೆ ಅದಕ್ಕೆ ಸಾರ್ವಜನಿಕ ಅಭಿಪ್ರಾಯದ ಅಂಕುಶವಿಲ್ಲದಾಗ ಆಗುವುದೆಲ್ಲಾ ಅನಾಹುತವೇ- ಎಂಬುದಕ್ಕೆ ಕಂಟ್ರಾಕ್ಟ್ ಅಧ್ಯಾಪಕರ ಗೋಳು ಒಂದು ಸಣ್ಣ ನಿದರ್ಶನ.

ಮುಂಗಾರು
ಗುರುವಾರ, ಆಗಸ್ಟ್ 28, 1986

ಜನಹಿತದ ಕಲ್ಪನೆ ಬಿಂಬಿಸಿ

ಹೋಬಳಿಗೊಂದು ನಾಡ ಕಚೇರಿ ತೆರೆಯುವ ತೀರ್ಮಾನವನ್ನು ರಾಜ್ಯ ಸರಕಾರದ ಕಂದಾಯ ಸಚಿವ ಎಸ್. ಆರ್. ಬೊಮ್ಮಾಯಿ ಅವರು ಪ್ರಕಟಿಸಿದ್ದಾರೆ. ರಾಜ್ಯದಲ್ಲಿ ಸುಮಾರು 850 ಕಂದಾಯ ಹೋಬಳಿಗಳಿದ್ದು ಈ ತನಕ ತೆರೆಯಲಾದ ನಾಡ ಕಚೇರಿಗಳ ಸಂಖ್ಯೆ ಇನ್ನೂರಕ್ಕಿಂತಲೂ ಕಡಿಮೆ.

ರಾಜ್ಯ ಸರಕಾರ ರಾಜಕೀಯ ಅಧಿಕಾರವನ್ನೂ ಆಡಳಿತೆಯನ್ನೂ ವಿಕೇಂದ್ರೀಕರಿಸುವ ಕಾರ್ಯವನ್ನು ಕೈಗೊಳ್ಳುತ್ತಿದೆ. ಜನತಾ ಪಕ್ಷವು ಮೂರು ವರ್ಷಗಳಷ್ಟು ಹಿಂದೆ ಅಧಿಕಾರ ಪಡೆಯುವ ವೇಳೆ ಜನತೆಗೆ ಕೊಟ್ಟ ಪ್ರಮುಖ ಆಶ್ವಾಸನೆಗಳ ಪೈಕಿ ಅಧಿಕಾರ ವಿಕೇಂದ್ರೀಕರಣ ಒಂದು. ಇದರ ಅನುಷ್ಠಾನವು ವಿಳಂಬವಾಗಿದೆ. ಅದಕ್ಕೆ ಕೇಂದ್ರ ಸರಕಾರದ ವಿಳಂಬ ನೀತಿಯ ಸಹಿತ ಹಲವಾರು ಕಾರಣಗಳಿವೆ. ಆದರೆ ಕೊನೆಗೂ ರಾಜಕೀಯ ಅಧಿಕಾರವನ್ನು ಸ್ಥಳೀಯ ಮಟ್ಟಕ್ಕೆ ತಂದು ಯೋಜನೆಯ ಪ್ರಕ್ರಿಯೆಯನ್ನು ವಿಕೇಂದ್ರೀಕರಿಸುವ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಕಾನೂನು ಬಂದಿದೆ. ಇದೀಗ ನವೆಂಬರ್ ತಿಂಗಳಲ್ಲಿ ಈ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಚುನಾವಣೆಯೂ ನಡೆಯಲಿದೆ.

ಅದರ ಜತೆ ಜತೆಗೇನೇ ಆಡಳಿತದ ಕಾರ್ಯವನ್ನೂ ವಿಕೇಂದ್ರೀಕರಿಸುವ ನಿಟ್ಟಿನಲ್ಲಿ ನಾಡ ಕಚೇರಿಗಳ ರಚನೆ ಒಂದು ಗಮನಾರ್ಹವಾದ ಹೆಜ್ಜೆ ಎನ್ನಲಡ್ಡಿಯಿಲ್ಲ. ಈಗ ತಾಲೂಕು ಕಚೇರಿಯಲ್ಲಿ ಕೇಂದ್ರೀಕೃತವಾದ ಅನೇಕಾನೇಕ ಆಡಳಿತ ವಿಷಯಗಳ ಪೈಕಿ ಕೆಲವನ್ನು ಹೋಬಳಿ ಮಟ್ಟದಲ್ಲಿ ಸ್ಥಾಪಿಸಲಾಗುವ ನಾಡ ಕಚೇರಿಗೆ ವರ್ಗಾಯಿಸಲಾಗುತ್ತಿದೆ. ತೆರಿಗೆ ಬಾಕಿ ವಸೂಲಿ, ಸರಕಾರಿ ಜಮೀನು ರಕ್ಷಣೆ, ವೃದ್ಧಾಪ್ಯವೇ ಇತ್ಯಾದಿ ವೇತನಗಳ ವಿತರಣೆ, ಪಟ್ಟಾ ತಬ್ದೀಲಿ, ಆರ್. ಟಿ. ಸಿ. ನಕಲು ನೀಡಿಕೆ, ನೀರಾವರಿ ತೆರಿಗೆ ಸಂಗ್ರಹ ಮುಂತಾದ ಹಲವಾರು ವಿಚಾರಗಳನ್ನು ನಾಡ ಕಚೇರಿಗೆ ವರ್ಗಾಯಿಸಲಾಗುವುದು.

ಆಡಳಿತವು ಹೋಬಳಿ ಮಟ್ಟಕ್ಕೆ ಹೋಗಬೇಕು ಎಂಬ ಆಲೋಚನೆ ಹಾಗೂ ಈಗ ನಾಡ ಕಚೇರಿಗೆ ಕೆಲವಾರು ವಿಚಾರಗಳನ್ನು ವಹಿಸಿಕೊಟ್ಟಿರುವುದು ಮತ್ತು ರಾಜ್ಯದ ಎಲ್ಲಾ ಹೋಬಳಿಗಳಲ್ಲಿಯೂ ಇಂತಹ ಕಚೇರಿಗಳನ್ನು ತೆರೆಯುವ ತೀರ್ಮಾನ ಇವೆಲ್ಲವೂ ಅತ್ಯಂತ ಸ್ವಾಗತಾರ್ಹ. ಜನಮನಕ್ಕೆ ಸ್ಪಂದಿಸಬೇಕು ಎಂಬ ಇರಾದೆಯುಳ್ಳ, ಜನಪ್ರಾತಿನಿಧ್ಯವನ್ನು [illegible] ಹೊಂದಿರುವ ಯಾವುದೇ ಸರಕಾರವೂ ಅನಿವಾರ್ಯವಾಗಿ ಮಾಡಲೇಬೇಕಾದ ಕರ್ತವ್ಯ ಇದಾಗಿದೆ. ಆಡಳಿತೆಯು ಜನರ ಬಳಿಗೆ ಹೋಗಬೇಕು ಎಂದಾದರೆ ಈಗ ತಾಲೂಕು ಕಚೇರಿಗಳು ನಿರ್ವಹಿಸುವ ಎಲ್ಲಾ ಕೆಲಸ ಕಾರ್ಯಗಳನ್ನು ಹೋಬಳಿ ಮಟ್ಟದ ನಾಡ ಕಚೇರಿಗಳಿಗೆ ವಹಿಸಿಕೊಡಬೇಕು. ಈಗ ತಾಲೂಕು ಕಚೇರಿಗಳಿಗಿರುವ ಕರ್ತವ್ಯ ಹಾಗೂ ಅಧಿಕಾರಗಳು ಹೆಚ್ಚೇನೂ ಇಲ್ಲ. ಅದು ಕೇವಲ ಕಡತಗಳ ಸಂಗ್ರಹಣಾ ಕಚೇರಿಯಾಗಿ ಪರಿವರ್ತಿತವಾಗಿದೆ. ಆಡಳಿತಾತ್ಮಕವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಯಾವ ಮಹತ್ವದ ಅಧಿಕಾರವೂ ತಹಶೀಲ್ದಾರರಿಗಿಲ್ಲ. ಅದು ಇರುವುದು ಕಂದಾಯ ಉಪ ವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಯ ಕೈಯಲ್ಲಿ. ತಹಶೀಲ್ದಾರರು ಎಲ್ಲವನ್ನೂ ಮೇಲಧಿಕಾರಿಗಳಿಗೆ ಷರಾ ಬರೆದು ರವಾನಿಸಬೇಕು. ಮೇಲಿನಿಂದ ಬಂದದ್ದನ್ನು ಪ್ರಸಾದವೆಂಬಂತೆ ಸಂಬಂಧಪಟ್ಟವರಿಗೆ ವಿತರಿಸಬೇಕು. ಹೀಗಾಗಿ ತಾಲೂಕು ಕಚೇರಿಯು ವಸ್ತುಶಃ ಅಂಚೆ ಬಟವಾಡೆ ಕಚೇರಿಯೆನಿಸಿದೆ.

ಈ ಕೆಲಸವನ್ನು ನಾಡ ಕಚೇರಿಗಳೇ ನಿರ್ವಹಿಸಬಹುದು. ಜನರಿಗೂ ಈ ಕಚೇರಿಗೂ ನೇರ ಸಂಪರ್ಕವಿರುತ್ತದೆ. ಕಚೇರಿಗೆ ಕೆಲಸದ ಹೊರೆಯೂ ಕಡಿಮೆಯಿರುತ್ತದೆ. ಈ ಕಚೇರಿಯು ನೇರವಾಗಿ ಉಪ ವಿಭಾಗಾಧಿಕಾರಿಯೊಡನೆ ಸಂಪರ್ಕ ಹೊಂದಬಹುದಾಗಿದೆ. ಈ ವ್ಯವಸ್ಥೆಯಲ್ಲಿ ನಾಡ ಕಚೇರಿಯೂ ತಾಲೂಕು ಕಚೇರಿಯೂ ಒಂದೇ ಕೆಲಸವನ್ನು ಎರಡು ಬಾರಿ ಮಾಡುವ ಪ್ರಸಂಗ ಬರುವುದರಿಂದ ತಾಲೂಕು ಕಚೇರಿಯನ್ನೇ ರದ್ದು ಮಾಡಿಬಿಡಬಹುದಾಗಿದೆ. ಅಂದರೆ ವಾಸ್ತವಿಕವಾಗಿ ತಾಲೂಕು ಕಚೇರಿಯೇ ನಾಡ ಕಚೇರಿಯೆಂಬ ರೂಪದಲ್ಲಿ ಹೋಬಳಿ ಮಟ್ಟಕ್ಕೆ ಇಳಿದು ಬಂದಂತಾಗುತ್ತದೆ.

ಬರೇ ಕಚೇರಿಗಳನ್ನು ಹೆಚ್ಚಿಸುವುದರಿಂದ ಅಧಿಕಾರಗಳನ್ನು ಕೆಳಮಟ್ಟದ ಅಧಿಕಾರಿಗಳ ಕೈಯಲ್ಲಿ ಕೊಡುವುದರಿಂದ ಸರಕಾರವು ನಿರೀಕ್ಷಿಸಿದಂತಹ ಅಧಿಕಾರ ವಿಕೇಂದ್ರೀಕರಣ ಆಗಲಾರದು ಎಂಬುದು ಖಂಡಿತ. ಆಡಳಿತವು ಜನರ ಬಳಿಗೆ ಹೋಗಬೇಕಿದ್ದರೆ ಆಡಳಿತವು ಜನರಿಗಾಗಿ ಇದೆ ಎಂಬ ಜನಹಿತದ ಕಲ್ಪನೆಯನ್ನು ಮೈಗೂಡಿಸಿಕೊಂಡ ಅಧಿಕಾರಿಗಳು ಆಡಳಿತೆಯ ಸೂತ್ರ ಹಿಡಿದಿರಬೇಕು. ಇಂದು ಅಂತಹ ಅಧಿಕಾರಿಗಳ ಸಂಖ್ಯೆ ತುಂಬ ಕಮ್ಮಿ. ಅಂತಹವರನ್ನು ದುರ್ಬೀನು ಹಿಡಿದು ಹುಡುಕಬೇಕಾಗಿದೆ. ಇಂದು ಇರುವಂಥವರು ದರ್ಪ ದಬ್ಬಾಳಿಕೆಗಳ ಸಾಕಾರ ಮೂರ್ತಿಗಳಾಗಿದ್ದಾರೆ. ಓದಲು ಬಾರದ, ಬರೆಯಲು ತಿಳಿಯದ ಕಾನೂನಿನ ಗಂಧವರಿಯದ ಜನಸಾಮಾನ್ಯರಿಗೆ ಯಾವ ಅನ್ಯಾಯ ಮಾಡಿದರೂ ದಕ್ಕಿಹೋದೀತು ಎಂಬ ದಾರ್ಷ್ಟ್ಯವನ್ನು ಬೆಳೆಸಿಕೊಂಡವರೇ ಇಂದು ಎಲ್ಲೆಲ್ಲೂ ತುಂಬಿಹೋಗಿದ್ದಾರೆ. ಅಧಿಕಾರಿಗಳು ಬಗ್ಗಿ ಸಲಾಮು ಹೊಡೆಯುವುದು ಹಣಕ್ಕೆ ಮಾತ್ರ. ಇಂದು ನಮ್ಮಲ್ಲಿ ಈ ಪ್ರವೃತ್ತಿಯಿಂದಾಗಿ ಆಡಳಿತ ಯಂತ್ರವೆಂಬುದು ಶ್ರೀಮಂತರಿಗಾಗಿ 24 ಗಂಟೆಯೂ ಓಡುತ್ತದೆ. ಹಣವುಳ್ಳವರ ಜೋಳಿಯೆಲ್ಲವನ್ನೂ ಈ ಯಂತ್ರ ಬೀಸಿಕೊಡುತ್ತದೆ.

ಈ ಆಡಳಿತವನ್ನು ಜನರ ಬಳಿಗೆ ತರುವ ಕಲ್ಪನೆ ಹೊಂದಿದ ಈ ಸರಕಾರ ಆಡಳಿತೆಯಲ್ಲಿ ಅಂಥ ಕಲ್ಪನೆ ಉಳ್ಳವರನ್ನು ತುಂಬಿಸಲು, ಈಗ ದರ್ಪವಿರುವ ಜಾಗದಲ್ಲಿ ವಿನಯವನ್ನು ಹಾಗೂ ಕರ್ತವ್ಯ ಶೀಲತೆಯನ್ನು ತುಂಬಿಸಲು ಯತ್ನಿಸಬೇಕು. ಅದನ್ನು ಮಾಡದೆ ಸಾವಿರ ನಾಡಕಚೇರಿಯಿಂದಲೂ ಏನೂ ಆಗದು.

ಮುಂಗಾರು

ಶುಕ್ರವಾರ, ಆಗಸ್ಟ್ 29, 1986

ನಿಯಮ ತಿದ್ದಲು ಏನಾಗಬೇಕು?

ಕರ್ನಾಟಕ ಸರಕಾರ ನೇಮಿಸಿ ಕೊಂಡಿರುವ ಸ್ಟೈಪೆಂಡಿಯರಿ ಪದವೀಧರರ ಸೇವೆಯನ್ನು ಕಾಯಂಗೊಳಿಸಲು ಕೆಲವು ಕಾನೂನಿನ ತೊಡಕುಗಳಿವೆ ಎಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ವಿಧಾನ ಪರಿಷತ್ತಿನಲ್ಲಿ ಹೇಳಿದ್ದಾರೆ. ಅವರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲು ಸರಕಾರ ತಯಾರಿದೆಯೆಂದೂ ಅವರನ್ನುತ್ತಾರೆ. ಈ ಮಂದಿ ಸರಕಾರಿ ಹುದ್ದೆಗಳಿಗೆ ಅರ್ಜಿ ಮಾಡಿಕೊಳ್ಳಲು ಸಾಧ್ಯವಾಗುವಂತೆ ವಯೋಮಿತಿಯನ್ನು ಏರಿಸಲೂ ಅವರು ಒಪ್ಪಿಕೊಂಡಿದ್ದಾರೆ.

ಸ್ಟೈಪೆಂಡಿಯರಿ ಪದವೀಧರರ ಈ ಸಮಸ್ಯೆಯ ಬಗ್ಗೆ ಸರಕಾರ ವಹಿಸಿರುವ ಅಮಾನವೀಯ ನಿಲುವನ್ನು ಇದು ಸ್ಪಷ್ಟವಾಗಿ ಪ್ರದರ್ಶಿಸುತ್ತದೆ. ಈ ವರ್ಗಕ್ಕೆ ಸೇರಿದ ಸುಮಾರು 15 ಸಾವಿರ ಮಂದಿ ಪದವೀಧರರು ಈಗ ವಾಸ್ತವಿಕವಾಗಿ ರಾಜ್ಯ ಸರಕಾರದ ಸಿಬ್ಬಂದಿಗಳೇ ಆಗಿ ಕೆಲಸ ಮಾಡುತ್ತಿದ್ದಾರೆ. ಈ ಹಿಂದೆ ಅವರಿಗೆಲ್ಲ ಜುಜುಬಿ ಸಂಬಳ ಇತ್ತು. ಅದನ್ನು ಇತ್ತೀಚೆಗೆ ಮಾಸಿಕ 490 ರೂಪಾಯಿಗಳಿಗೆ ಏರಿಸಲಾಗಿದೆ. ಎಂಟು ಹತ್ತು ವರ್ಷಗಳ ಹಿಂದೆ ಇವರ ನೇಮಕ ಆಗಿದೆ. ಪದವೀಧರ ನಿರುದ್ಯೋಗ ನಿವಾರಣೆಯ ಒಂದು ಕಾರ್ಯಕ್ರಮವಾಗಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಇದು ಅಸ್ತಿತ್ವಕ್ಕೆ ಬಂದಿತ್ತು. ಈ ಪೈಕಿ ನಾಲ್ಕೈದು ಸಾವಿರ ಮಂದಿಯನ್ನು ಮೊನ್ನೆ ಮೊನ್ನೆ ಸರಕಾರಿ ಸೇವೆಯಲ್ಲಿ ಕಾಯಂಗೊಳಿಸಿ ಸಂಬಳ-ಸಾರಿಗೆ ಹಾಗೂ ಇತರ ಸೌಲಭ್ಯಗಳ ವಿಚಾರದಲ್ಲಿ ಪೂರ್ಣ ಪ್ರಮಾಣದ ನೌಕರರೆಂದು ಒಪ್ಪಿಕೊಳ್ಳಲಾಗಿದೆ. ಉಳಿದ ಸುಮಾರು 12 ಸಾವಿರ ಮಂದಿ ಮಾತ್ರ ಇನ್ನೂ ತ್ರಿಶಂಕು ಸ್ಥಿತಿಯಲ್ಲೇ ಇದ್ದಾರೆ. ಇವರ ಜತೆಗೆ ಸುಮಾರು 10ರಿಂದ 15ಸಾವಿರ ಮಂದಿ ಸ್ಥಳೀಯ ಅಭ್ಯರ್ಥಿಗಳೆಂದು ಹೆಸರು ಹೊತ್ತವರೂ ಎಲ್ಲಿಯೂ ಸಲ್ಲದವರಾಗಿದ್ದಾರೆ.

ಹೀಗೆ ಅವರನ್ನು ಅತಂತ್ರರನ್ನಾಗಿ ಮಾಡಿದ್ದಕ್ಕೆ ಮುಖ್ಯಮಂತ್ರಿಗಳು ಕೊಡುವ ಕಾರಣ: ಅವರನ್ನು ಸೇವೆಗೆ ಕಾಯಂ ಆಗಿ ಸೇರಿಸಿ ಕೊಳ್ಳಲು ಕಾನೂನಿನ ತೊಡಕುಗಳಿವೆ ಎಂಬುದು. ಕಾನೂನುಗಳನ್ನು ಮಾಡಿದವರು ನಾವೇ ಅಲ್ಲವೇ? ಕಾನೂನುಗಳು ಹಾಗೂ ನಿಯಮಗಳು ಇರುವುದು ಜನರ ಅನುಕೂಲಕ್ಕಾಗಿ. ಕಾನೂನಿಗಾಗಿ ಮನುಷ್ಯರಲ್ಲ. ಸುಮಾರು 12 ಸಾವಿರ ಯುವಕ ಯುವತಿಯರ ಬದುಕಿಗೆ ಬನ್ನ ಉಂಟು ಮಾಡುವ ಕಾನೂನು ಇದ್ದರೆ ಅದನ್ನು ತಿದ್ದಬೇಕು. ತಿದ್ದುವುದಕ್ಕೆ ಅಡ್ಡಿಯೇನುಂಟು? ಅದಕ್ಕೆ ರಾಜ್ಯಾಂಗ ತಿದ್ದುಪಡಿಯಾಗಬೇಕೇ? ಕೇವಲ ಭರ್ತಿ ನಿಯಮಗಳಲ್ಲಿ ತಿದ್ದುಪಡಿಮಾಡಿದರೆ ಸಾಕಲ್ಲವೇ?

ಈ ಮಂದಿ ಸುಮಾರು ಒಂದು ದಶಕದಿಂದ ಅತಂತ್ರರಾಗಿ ಕೊಳೆಯುತ್ತಿದ್ದಾರೆ. ವಿದ್ಯೆ ಮುಗಿಸಿ ವೃತ್ತಿಯನ್ನು ಹಿಡಿದು ಬದುಕಿಗೆ ನೆಲೆ ತಂದುಕೊಳ್ಳುವ ಅವಧಿ ಅದು. ಜೀವನವನ್ನು ರೂಪಿಸುವ ಕಾಲ ಅದು. ಹೀಗೆ ಬದುಕನ್ನು ಕಟ್ಟುವ ಕಾಲವನ್ನೇ ಸರಕಾರ ನೀರ ಮೇಲೆ ಹೋಮ ಇಟ್ಟಂತೆ ಮಾಡಿ "ನಿಮ್ಮನ್ನು ಬೇಕಿದ್ದರೆ ಗುತ್ತಿಗೆ ನೆಲೆಯಲ್ಲಿ ತೆಗೆದುಕೊಳ್ಳುತ್ತೇವೆ. ನೀವು ಸರಕಾರಿ ಹುದ್ದೆಗೆ ಅರ್ಜಿ ಮಾಡಲು ಅವಕಾಶ ಕೊಟ್ಟಿದ್ದೇವೆ" ಎಂದೆಲ್ಲ ಹೇಳುವುದು ಅಮಾನವೀಯತೆಯ ಪರಮಾವಧಿಯಾಗಿದೆ. ಹತ್ತು ವರ್ಷಗಳ ಆಡಳಿತ ಅನುಭವ ಅವರಿಗಿದೆ. ಇನ್ನು ಬದುಕಿನಲ್ಲಿ ಬೇರೇನೂ ಕೆಲಸ ಮಾಡುವುದಕ್ಕೆ ಅವರಿಂದಾಗದು. ಬೇರೆಲ್ಲೂ ಅವರಿಗೆ ಪ್ರವೇಶ ಸಿಗದು. ಈಗಾಗಲೇ ಮದುವೆ ಮಾಡಿಕೊಂಡು ಗೃಹಸ್ಥ ಜೀವನ ಪ್ರವೇಶ ಮಾಡಬೇಕಾಗಿದ್ದ ಯುವ ಪೀಳಿಗೆ ಅದು. ಬದುಕಿನ ಭದ್ರತೆ ಅವರಿಗೆ ಈಗಾಗಲೇ ಬರಬೇಕಾಗಿತ್ತು. ಅವರನ್ನು ನೇರವಾಗಿ ಸರಕಾರಿ ಉದ್ಯೋಗಕ್ಕೆ ಸೇರಿಸಿಕೊಳ್ಳುವುದಕ್ಕೆ ಯಾವ ಕಾನೂನೂ ಅಡ್ಡಿ ಬರಬಾರದಾಗಿತ್ತು. ಯಾವ ಮೀನ ಮೇಷವನ್ನೂ ಸರಕಾರ ಎಣಿಸಬಾರದಾಗಿತ್ತು. ನಿಯಮಗಳಲ್ಲಿ ಅವಕಾಶವಿಲ್ಲ ಎಂದು ಹೇಳಿ ರಾಜ್ಯದ ಒಂದು ದೊಡ್ಡ ಜನ ಸಮೂಹಕ್ಕೆ ಅನ್ಯಾಯವಾಗುವಂತಹ ನಿರ್ಧಾರ ತೆಗೆದುಕೊಳ್ಳುವ ಈ ಕೆಲಸ ಗುಮಾಸ್ತರು ಕಡತಕ್ಕೆ ಕೊಕ್ಕೆ ಹಾಕುವ ವಿದ್ಯಮಾನವನ್ನು ನೆನಪಿಗೆ ತರುತ್ತದೆ. ರಾಜ್ಯಾಡಳಿತೆಯನ್ನು ವಹಿಸಿಕೊಂಡ ಜವಾಬ್ದಾರಿಯುತ ರಾಜನೀತಿಜ್ಞರು ಯಾರೂ ಇಂಥ ಕೆಲಸ ಮಾಡಬಾರದು.

ರಾಜ್ಯ ಸರಕಾರದಲ್ಲಿ ಇಲಾಖೆಗಳ 40 ಸಾವಿರ ಹುದ್ದೆಗಳು ಖಾಲಿ ಇವೆ. ಇದರಲ್ಲಿ 15 ಸಾವಿರದಷ್ಟು ಶಿಕ್ಷಕರ ಸ್ಥಾನವೇ ಖಾಲಿ ಇದೆ. ಅದಕ್ಕೆ ಭರ್ತಿಮಾಡಿಕೊಳ್ಳಲು ಯಾರ ಅಡ್ಡಿಯೂ ಇಲ್ಲ. ಸ್ಟೈಪೆಂಡಿಯರಿ ಪದವೀಧರರಿಂದಲೇ ಈ ನೇಮಕ ಮಾಡಿಕೊಳ್ಳಬೇಕು. ಅವರಿಂದ ಯಾವ ಅರ್ಜಿಯನ್ನೂ ಕೇಳದೆ ನೇರವಾಗಿ ಸರಕಾರಿ ಸೇವೆಗೆ ಸೇರಿಸಿಕೊಳ್ಳಬೇಕು. ಅವರ ಸೇವೆಗೆ ಸಂಬಂಧಪಟ್ಟ ವಿವರ ಸರಕಾರದ ಬಳಿಯೇ ಉಂಟು. ಅದರ ಆಧಾರದಲ್ಲಿ ಸೂಕ್ತ ಸ್ಥಾನ ನೀಡಬಹುದಾಗಿದೆ.

ಜನಹಿತದ ಮಾತನಾಡುವ ಎಲ್ಲ ರಾಜಕಾರಣಿಗಳೂ ಈ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕು. ಸುಮಾರು 12ಸಾವಿರ ಮಂದಿ ತರುಣರ ಬದುಕಿನ ಬೇರು ಅಲುಗಿಸುವ, ನಿಯಮದಲ್ಲಿ ಅವಕಾಶವಿಲ್ಲ ಎಂಬ ಮೋಸದ ಮಾತನಾಡುವ ಸರಕಾರದ ಸಂವೇದನೆಯೇ ಸತ್ತುಹೋದುದನ್ನು ಈ ನಾಡಿನ ವಿಚಾರಶೀಲರೆಲ್ಲ ಗಮನಕ್ಕೆ ತರಬೇಕು. ಆದರೆ ನಮ್ಮ ಜನಪ್ರತಿನಿಧಿ ಸಭೆಗಳಲ್ಲಿ ಈ ಬಗ್ಗೆ ಮಾತನಾಡಿದವರಿಲ್ಲ. ನಮ್ಮ ಶಾಸಕರಿಗೆ ಜನರ ಸಮಸ್ಯೆಗಳ ಪರಿಚಯವೇ ಇಲ್ಲದಿರುವುದನ್ನು ಇದು ತೋರಿಸಿಕೊಡುತ್ತದೆ.

ಮುಂಗಾರು
ಶನಿವಾರ, ಆಗಸ್ಟ್ 30, 1986

ಕ್ಷೇತ್ರ ವಿಂಗಡನೆ

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತುಗಳ ಚುನಾವಣಾ ಕ್ಷೇತ್ರಗಳ ವಿಂಗಡನೆಗೆ ಸಂಬಂಧಿಸಿ ಆಳುವ ಪಕ್ಷವು ರಾಜಕೀಯ ಮಾಡಿದೆ ಎಂದು ವಿರೋಧ ಪಕ್ಷದವರು ಆಪಾದಿಸಿದ್ದಾರೆ. ಈ ಬಗ್ಗೆ ಕಳೆದ ಕೆಲವು ದಿನಗಳಿಂದ ರಾಜ್ಯ ಶಾಸನಸಭೆಯಲ್ಲಿ ಆಕ್ಷೇಪ–ಗೊಂದಲಗಳು ನಡೆದಿವೆ. ನವೆಂಬರ್ ಕೊನೆಯ ವೇಳೆಗೆ ಈ ಚುನಾವಣೆ ನಡೆಯಲಿದ್ದು ಅದನ್ನು ಮುಂದಕ್ಕೆ ಹಾಕುವ ಪ್ರಶ್ನೆಯೇ ಇಲ್ಲವೆಂದು ಗ್ರಾಮಾಭಿವೃದ್ಧಿ ಹಾಗೂ ಪಂಚಾಯತು ಸಚಿವ ಅಬ್ದುಲ್ ನಜೀರ್ ಸಾಬ್ ಖಂಡತುಂಡವಾಗಿ ಸಾರಿದ್ದಾರೆ.

ಕ್ಷೇತ್ರಗಳ ವಿಂಗಡನೆ ಆಗಿರುವುದು ಈಗೇನಲ್ಲ. ಕ್ಷೇತ್ರ ವಿಂಗಡನೆ ಕರಡು ಪ್ರತಿಯನ್ನು ಈ ಮೊದಲೇ ಬಹಿರಂಗಪಡಿಸಲಾಗಿತ್ತು. ಸಾರ್ವಜನಿಕರ ಹಾಗೂ ಆಸಕ್ತರ ಆಕ್ಷೇಪಗಳನ್ನು ಆಹ್ವಾನಿಸಲಾಗಿತ್ತು. ಕ್ಷೇತ್ರ ವಿಂಗಡನೆಯ ಕರಡು ಮೊತ್ತ ಮೊದಲ ಬಾರಿಗೆ ಪ್ರಕಟಗೊಂಡಾಗಲೇ ಅದರ ಅಧ್ಯಯನವನ್ನು ರಾಜಕೀಯ ಪಕ್ಷಗಳು ನಡೆಸಬೇಕಾಗಿತ್ತು. ರಾಜಕೀಯವಾಗಿ ಪ್ರಜ್ಞಾವಂತಿಕೆಯಿರುವ ನಾಡುಗಳಲ್ಲಿ ಹೀಗೆ ನಡೆಯುತ್ತದೆ. ಸರಕಾರದ ಹಾಗೂ ಆಳುವ ಪಕ್ಷದ ಚಲನವಲನಗಳನ್ನು ಅವರ ರಾಜಕೀಯ ವಿರೋಧಿಗಳು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾರೆ. ಒಂದು ತಪ್ಪು ಹೆಜ್ಜೆಯಿಟ್ಟರೆ ಅವರು ತಕ್ಷಣ ಜಾಗೃತಗೊಳ್ಳುತ್ತಾರೆ. ಆಳುವವರು ಜನಹಿತಕ್ಕೆ ವಿರೋಧವಾದ ಯಾವುದೇ ತೀರ್ಮಾನ ತೆಗೆದುಕೊಂಡರೂ ವಿರೋಧ ಪಕ್ಷಗಳು ಜನರನ್ನು ಎಚ್ಚರಿಸುತ್ತವೆ. ರಾಜ್ಯ ಸರಕಾರವು ಜನರ ಮುಂದಿಟ್ಟ ಕ್ಷೇತ್ರ ವಿಂಗಡನೆಯ ಸಾಧಕ–ಬಾಧಕಗಳಾವುವು. ಯಾವ ಊರಿನ ಜನರಿಗೆ ಅದರಿಂದ ಬರುವ ಲಾಭ–ನಷ್ಟಗಳೇನು ಎಂಬುದನ್ನು ರಾಜಕೀಯ ಪಕ್ಷಗಳು ಆಮೂಲಾಗ್ರ ಅಧ್ಯಯನ ಮಾಡಲು ಸಾಕಷ್ಟು ಅವಕಾಶವಿತ್ತು.

ಈಗ ಕ್ಷೇತ್ರ ವಿಂಗಡನೆ ವಿಚಾರ ಅಂತಿಮ ಹಂತಕ್ಕೆ ಬಂದಿದೆ. ನವೆಂಬರ್ ತಿಂಗಳ ಕೊನೆಯಲ್ಲಿ ಚುನಾವಣೆ ನಡೆಯಲಿದೆ. ಈಗ ಮತ್ತೆ ಕ್ಷೇತ್ರ ವಿಂಗಡನೆ ವಿಚಾರವನ್ನು ತೆರೆದರೆ ತುಂಬಾ ಗೊಂದಲವಾಗುತ್ತದೆ. ಚುನಾವಣೆಯಂತೂ ಮುಂದಕ್ಕೆ ಹೋಗುವುದು ಖಂಡಿತ. ಇದಕ್ಕೆ ಅವಕಾಶ ಕೊಡಬೇಕೇ? ಈ ಬಗ್ಗೆ ವಿಚಾರವಂತರೆಲ್ಲ ಆಲೋಚಿಸಬೇಕು.

ವಿರೋಧಪಕ್ಷವು ವಿಂಗಡನೆಯನ್ನು ವಿರೋಧಿಸುತ್ತಿರುವುದಕ್ಕೆ ಕೊಡುವ ಕಾರಣವೆಂದರೆ ಆಳುವ ಪಕ್ಷವು ತನ್ನ ಅನುಕೂಲಕ್ಕೆ ತಕ್ಕಂತೆ ಕ್ಷೇತ್ರಗಳ ಹೊಂದಾಣಿಕೆ ಮಾಡಿಕೊಂಡಿದೆ ಎಂಬುದು. ಈ ಆರೋಪದಲ್ಲಿ ಕೆಲವು ಮಟ್ಟಿಗೆ ಸತ್ಯವಿರಬಹುದು. ಎಲ್ಲಾ ಆಳುವ ಪಕ್ಷಗಳೂ ಇಂಥ ವಿದ್ಯೆಯ ಪ್ರಯೋಗವನ್ನು ಮಾಡಿಕೊಂಡೇ ಬಂದಿವೆ. ಸ್ವಂತಕ್ಕೆ ಹಿತವಾಗುವ ತೀರ್ಮಾನಗಳ ಅವಕಾಶವಿದ್ದೆಡೆಯಲ್ಲೆಲ್ಲಾ ಅದನ್ನು ಪ್ರಯೋಗಿಸದೆ ಯಾವ ಸರಕಾರವೂ ಬಿಟ್ಟದ್ದಿಲ್ಲ. ಯಾವ ಪಕ್ಷವೂ ರಾಜಕೀಯ ಲಾಭವನ್ನು ತಟ್ಟೆಯಲ್ಲಿಟ್ಟು ವಿರೋಧಿಗಳಿಗೆ ಕಾಣಿಕೆ ಒಪ್ಪಿಸುವುದಿಲ್ಲ.

ಜನರಿಗೆ ತೊಂದರೆಯಾಗುವ ಸರಕಾರದ ಯಾವ ರಾಜಕೀಯ ನಿರ್ಧಾರವನ್ನೂ ವಿರೋಧಪಕ್ಷಗಳು ವಿರೋಧಿಸಿ ಆಂದೋಲನ ಹೂಡಬಹುದು. ಆಳುವ ಪಕ್ಷದ ಸ್ವಾರ್ಥವನ್ನು ಆ ಮೂಲಕ ಜಾಲಾಡಬಹುದು. ಆದರೆ ಇದೆಲ್ಲಕ್ಕೂ ಸಮಯ ಸಂದರ್ಭಗಳಿವೆ. ಈಗ ಮಂಡಲ ಪಂಚಾಯತ್ ಜಿಲ್ಲಾ, ಪರಿಷತ್ ಚುನಾವಣೆಗೆ ಕಾಲ ಪಕ್ವವಾಗಿದೆ. ಇದೊಂದು ನವೀನ ಪ್ರಯೋಗ ಕರ್ನಾಟಕದಲ್ಲಿ ನಡೆಯುತ್ತಿದೆ. ಆಡಳಿತೆಯೂ ಅಭಿವೃದ್ಧಿಯ ಪ್ರಕ್ರಿಯೆಯ ನಿರ್ಧಾರದ ಅವಕಾಶವೂ ಜನರ ಮನೆಬಾಗಿಲಿಗೆ ಹರಿದು ಬರುವಂತಹ ಅಪೂರ್ವ ಕ್ಷಣ ಇದಾಗಿದೆ.

ಈ ಅವಕಾಶಕ್ಕಾಗಿ ಜನ ಕಾಯುತ್ತಿದ್ದಾರೆ. ಈ ಪ್ರಯೋಗಕ್ಕೆ ಯಶಸ್ಸು ತಂದುಕೊಡುವ ಹುಮ್ಮಸ್ಸು ಜನರಿಗಿದೆ. ಅದನ್ನು ಎಲ್ಲರೂ ಹಾರೈಸಬೇಕಾಗಿದೆ. ಇಂಥ ಸಂದರ್ಭದಲ್ಲಿ ಕ್ಷೇತ್ರವಿಂಗಡನೆಯ ಬಗ್ಗೆ ಆಕ್ಷೇಪವನ್ನು–ಅದುಎಷ್ಟೇ ಸಮರ್ಥನೀಯವಾಗಿದ್ದರೂ–ಎತ್ತುವುದು ಚುನಾವಣೆ ಎದುರಿಸಲು ತಯಾರಿಲ್ಲದವರು ನಡೆಸುವ ತಂತ್ರಗಾರಿಕೆ ಎಂಬ ಆಪಾದನೆಗೆ ಗುರಿಯಾಗುವ ಸಾಧ್ಯತೆಯಿದೆ. ವಿರೋಧ ಪಕ್ಷಕ್ಕೆ ಜನರ ಮುಂದೆ ಹೋಗಿ ಅವರ ಪ್ರಾತಿನಿಧ್ಯವನ್ನು ಕೇಳುವ ಆತ್ಮಬಲವಿದ್ದರೆ ಸರಕಾರದ ಇಂತಹ ಜುಜುಬಿತಂತ್ರಗಾರಿಕೆ–ಮೋಸಗಾರಿಕೆಗೆ ಮನಸ್ಸು ಕೆಡಿಸಿಕೊಳ್ಳಬೇಕಾದ ಅಗತ್ಯವೇನೂ ಇಲ್ಲ. ಸಾರ್ವತ್ರಿಕ ಬೆಂಬಲ ಉಂಟು ಎಂದಾದರೆ ಯಾವ ಊರು ಯಾವ ಕ್ಷೇತ್ರಕ್ಕೆ ಸೇರಿದರೂ ಯಾರಿಗೂ ಅಂಥ ಹಾನಿಯೇನೂ ಆಗಲಾರದು.

ಚುನಾವಣೆಯ ಫಲಿತಾಂಶದಲ್ಲಿ ಅಷ್ಟೇನೂ ನಿರ್ಣಾಯಕವಲ್ಲದ ಈ ಒಂದು ವಿಚಾರವನ್ನು ಬೆಳೆಸುವ ಬದಲು ಇಲ್ಲಿಗೇ ಬಿಟ್ಟು ಜನರು ಅಪೇಕ್ಷೆಪಟ್ಟಂತಹ ಈ ಹೊಸ ಪ್ರಯೋಗವನ್ನು ಅನುಷ್ಠಾನಕ್ಕೆ ತರಲು, ಅದಕ್ಕೆ ಯಶಸ್ಸು ತಂದು ಕೊಡಲು ಸಂಬಂಧಪಟ್ಟವರೆಲ್ಲ ಶ್ರಮಿಸಬೇಕು. ತಮ್ಮ ಧ್ಯೇಯೋದ್ದೇಶಗಳನ್ನು, ಅಭಿವೃದ್ಧಿಯ ದಿಕ್ಕು–ದೆಸೆಗಳನ್ನು ಮತದಾರರ ಮುಂದಿಟ್ಟು ಅವರ ವಿಶ್ವಾಸಕ್ಕೆ ಪಾತ್ರರಾಗುವ ಕಾರ್ಯವನ್ನು ರಾಜಕೀಯ ಪಕ್ಷಗಳು ಮಾಡಬೇಕು. ಬದಲಾಗಿ ಸಣ್ಣ ವಿಚಾರಗಳನ್ನೆತ್ತಿ ಹುಯಿಲೆಬ್ಬಿಸುವುದು ಆತ್ಮ ಬಲವಿಲ್ಲದವರ ತಂತ್ರಗಾರಿಕೆ ಎನಿಸುತ್ತದೆ.

ಮುಂಗಾರು

ಭಾನುವಾರ, ಆಗಸ್ಟ್ 31, 1986

ಶೇಕಡಾವಾರು ಹಂಚಿ ಕೊಡಿ

ಟಿ. ವೆಂಕಟಸ್ವಾಮಿ ಅವರ ಅಧ್ಯಕ್ಷತೆಯ ಆಯೋಗವು ತನ್ನ ವರದಿ ಸಲ್ಲಿಸಿದೆ. ಅದನ್ನು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗಿದೆ. ಈಗ ಕರ್ನಾಟಕದಲ್ಲಿ ಕಾನೂನಿನ ರೂಪದಲ್ಲಿ ಜಾರಿಯಲ್ಲಿರುವ ಹಾವನೂರು ಆಯೋಗದ ಶಿಫಾರಸುಗಳಿಗೆ ಸಂಬಂಧಿಸಿ ವೆಂಕಟಸ್ವಾಮಿ ಆಯೋಗ ಮಹತ್ವದ ಬದಲಾವಣೆಗಳನ್ನು ಮಾಡಿದೆ. ಹಿಂದುಳಿದವರ ಮೀಸಲಾತಿ ಮತ್ತಿತರ ಸೌಲಭ್ಯ ಪಡೆಯುವ ಜಾತಿಗಳ ಸಂಖ್ಯೆಯನ್ನು ಅದು 35ಕ್ಕೆ ಮಿತಿಗೊಳಿಸಿದೆ. ರಾಜ್ಯದ ದೊಡ್ಡ ಹಿಂದುಳಿದ ಜಾತಿಯಾದ ಒಕ್ಕಲಿಗರನ್ನು ಈ ಪಟ್ಟಿಯಿಂದ ಹೊರಗಿಟ್ಟಿದೆ. ಹಾವನೂರು ಆಯೋಗ ಲಿಂಗಾಯತರ ಪೈಕಿ ಕೆಲವಾರು ಉಪ ಕೋಮುಗಳವರನ್ನು ಹಿಂದುಳಿದವರ ಪಟ್ಟಿಯಲ್ಲಿ ಅಳವಡಿಸಿತ್ತು. ಈಗ ಅವರೆಲ್ಲರನ್ನೂ ಆ ಪಟ್ಟಿಯಿಂದ ಕಿತ್ತುಹಾಕಲು ಶಿಫಾರಸು ಮಾಡಲಾಗಿದೆ.

ಈಗ ಮಾಡಲಾಗಿರುವ ಈ ಶಿಫಾರಸುಗಳನ್ನು ಅದನ್ನು ನೇಮಿಸಲಾದ ರಾಜಕೀಯ ನಿರ್ಧಾರದ ಉದ್ದೇಶದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ಈ ಆಯೋಗದ ನೇಮಕದ ಅಗತ್ಯ ಏನಿತ್ತು ಎಂಬ ಪ್ರಶ್ನೆ ಏಳುತ್ತದೆ. ಎಲ್.ಜಿ ಹಾವನೂರ್ ಅವರ ನೇತೃತ್ವದ ಆಯೋಗದ ವರದಿಯನ್ನು ರಾಜ್ಯ ಸರಕಾರ 1976ರಲ್ಲಿ ಅಂಗೀಕರಿಸಿತು. ಅದರ ಅನುಷ್ಠಾನ 1977ರಲ್ಲಿ ಪ್ರಾರಂಭವಾಯಿತು. ಅದಕ್ಕಾಗಿ ಆ ವರ್ಷ ಸಂಬಂಧಪಟ್ಟ ಭರತಿನಿಯಮಗಳನ್ನೂ ಇತರ ವಿಧಿ ವಿಧಾನಗಳನ್ನೂ ಪೂರೈಸಲಾಯಿತು. ರೋಸ್ಟರ್ ಪದ್ಧತಿಯನ್ನು ಆಚರಣೆಗೆ ತರಲಾಯಿತು.

ಹಾವನೂರು ಆಯೋಗದ ಶಿಫಾರಸುಗಳ ಮೇಲೆ ಆಧಾರಿತವಾದ ಸರಕಾರಿ ಪ್ರಕಟಣೆಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ. ಅಲ್ಲಿ ಅದು ತೀರ್ಮಾನವೂ ಆಗಿದೆ. ಈ ನೀತಿಯ ಸಿಂಧುತ್ವವನ್ನೂ ನ್ಯಾಯಬದ್ಧತೆಯನ್ನೂ ರಾಜ್ಯದ ಹೈಕೋರ್ಟು ಹಾಗೂ ಸುಪ್ರೀಂಕೋರ್ಟು ಎತ್ತಿ ಹಿಡಿದಿವೆ. 1977ರಲ್ಲಿ ಈ ಪ್ರಶ್ನೆ ಸುಪ್ರೀಂಕೋರ್ಟಿನ ಕಟ್ಟೆ ಹತ್ತಿತು. ಸೆಪ್ಟೆಂಬರದಲ್ಲಿ ತಡೆಯಾಜ್ಞೆ ಬಂತು. ಆದರೆ ಆಮೇಲೆ ತಡೆಯಾಜ್ಞೆಯನ್ನು ತೆಗೆದುಹಾಕಲಾಯಿತು. ಆದರೆ 1978ರ ರಾಜಕೀಯ ತುಮುಲದ ಭರಾಟೆಯಲ್ಲಿ ಹಿಂದುಳಿದ ವರ್ಗಗಳಿಗೆ ಹಿತ ಮಾಡುವ ಈ ನಿಯಮದ ಅನುಷ್ಠಾನ ಹಿಂದಕ್ಕೆ ಬಿತ್ತು. ಮತ್ತೆ 1979ರಲ್ಲಿ ದೇವರಾಜ ಅರಸು ಇದರ ಅನುಷ್ಠಾನಕ್ಕೆ ಹೊಸತೇ ಆದ ಸೂತ್ರವನ್ನು ರೂಪಿಸಿದರು. ಆದರೆ ಮುಂದೆ ಕೆಲವೇ ಕಾಲದಲ್ಲಿ ಮತ್ತೆ ರಾಜಕೀಯ ತುಮುಲ ಉಲ್ಬಣಗೊಂಡು ಅರಸು ಯುಗ ಮುಕ್ತಾಯಗೊಳ್ಳುವುದರೊಂದಿಗೆ ಈ ವಿಚಾರದ ಬಗ್ಗೆ ರಾಜಕೀಯ ಸಂವಾದ, ಸಮಾಜ ಚಿಂತನೆ ನಡೆದದ್ದಿಲ್ಲ.

ವಿಷಯ ಇಷ್ಟೆ. ಈ ದೇಶದಲ್ಲಿ ಪೀಠ ಹಿಡಿದು ಕೂತವರು ಸಾಮಾಜಿಕ ಕ್ರಾಂತಿಯ ಎಲ್ಲ ಪ್ರಯತ್ನಗಳನ್ನೂ ಹುಸಿ ಮಾಡಿಕೊಂಡು ಬಂದಿದ್ದಾರೆ. ಹಿಂದುಳಿದವರ 'ಭಗವದ್ಗೀತೆ'ಯೆಂದು ಕರೆಯಲಾದ ಹಾವನೂರು ಶಿಫಾರಸಿಗೂ ಆದದ್ದು ಇದೇ ಗತಿ. ಅರಸು ಅವರ ಮುತುವರ್ಜಿಯಿಂದ ಕಾನೂನಿನ ಕಡತದಲ್ಲಿ ಸೇರಿ ಹೋಗಿರುವ ಹಾವನೂರು ಶಿಫಾರಸುಗಳನ್ನು ಕಿತ್ತೊಗೆದು ಬಿಡಲು ಈ ಸರಕಾರಕ್ಕೆ ನೆಪಬೇಕಾಗಿತ್ತು. ಅದಕ್ಕಾಗಿಯೇ ಅದು ಹೊಸ ಆಯೋಗ ರಚಿಸುವ ಇರಾದೆಯನ್ನು ಯಾರ ಪ್ರಚೋದನೆಯೂ ಇಲ್ಲದೆ ಕೋರ್ಟಿನ ಮುಂದೆ ಮಂಡಿಸಿತು.

ಅದರ ಫಲ ಈಗ ಗೊತ್ತಾಗಿದೆ. ಸಾಮಾಜಿಕವಾಗಿ ಇನ್ನೂ ಬಹಳಷ್ಟು ಹಿಂದುಳಿದವರೇ ಆಗಿರುವ ಒಕ್ಕಲಿಗರು ಸೌಲಭ್ಯವನ್ನು ಕಳೆದುಕೊಳ್ಳಲಿದ್ದಾರೆ. ಸಾಮಾಜಿಕವಾಗಿಯೂ ಬೌದ್ಧಿಕವಾಗಿಯೂ-ಆ ಕಾರಣದಿಂದ ಆರ್ಥಿಕವಾಗಿಯೂ ಮುಂದುವರಿದ ಜಾತಿಗಳವರ ಜತೆ ಉದ್ಯೋಗದ ಮಾರುಕಟ್ಟೆಯಲ್ಲಿ ಸ್ಪರ್ಧೆ ನಡೆಸುವ ಸಾಮರ್ಥ್ಯ ಒಕ್ಕಲಿಗರಿಗೆ ಬಂದಿದೆ ಎಂದು ತಿಳಿದರೆ ವಾಸ್ತವಿಕತೆಯನ್ನು ಅಲ್ಲಗಳೆದಂತಾದೀತು.

ಮೂಲತ: ವೆಂಕಟಸ್ವಾಮಿ ಆಯೋಗದ ನೇಮಕವೇ ಅನಗತ್ಯವೂ ಅಕಾಲಿಕವೂ ಆಗಿತ್ತು. ಹಾವನೂರು ಆಯೋಗದ ಶಿಫಾರಸು ಅನುಷ್ಠಾನವೇ ನಮ್ಮಲ್ಲಿ ಆಗಿಲ್ಲ. ಅನುಷ್ಠಾನಕ್ಕೆ ಪ್ರಾಮಾಣಿಕವಾದ ಪ್ರಯತ್ನವೇ ನಡೆದಿಲ್ಲ. ಅನುಷ್ಠಾನ ನಡೆದಿದ್ದರೆ, ಹಿಂದುಳಿದವರಿಗೆ ಮೀಸಲಾತಿಯ ಪ್ರಯೋಜನ ದೊರೆತು ಹತ್ತಾರು ವರ್ಷ ಉರುಳಿದ್ದರೆ, ಈ ಜಾತಿಗಳವರು ತಮ್ಮ ಸಂಖ್ಯಾ ಬಲಕ್ಕನುಗುಣವಾಗಿ ಸಾಮಾಜಿಕವೂ ಆರ್ಥಿಕವೂ ಬೌದ್ಧಿಕವೂ ಆದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆಂಬ ಪರಿಸ್ಥಿತಿ ಉಂಟಾಗಿದ್ದರೆ ಮೀಸಲಾತಿಯ ಮರು ಪರಿಶೀಲನೆ ಮಾಡಬಹುದಾಗಿತ್ತು. ಆದರೆ ಅಂಥ ಪರಿಸ್ಥಿತಿ ಕರ್ನಾಟಕದಲ್ಲಿ ಇಂದು ಖಂಡಿತ ಉಂಟಾಗಿಲ್ಲ.

ಜಾತಿ ಪದ್ಧತಿ ಹಾಗೂ ಜಾತಿಯ ನೆಲೆಯಲ್ಲಿ ತಾರತಮ್ಯ ಭಾರತದ ವಾಸ್ತವಿಕತೆಯಾಗಿದೆ. ಈ ವ್ಯವಸ್ಥೆ ಬೇರೂರಿ ಬಂದಿದೆ. ಜಾತಿಯು ಮನುಷ್ಯನ ಎಲ್ಲ ಚಟುವಟಿಕೆಗಳ ನೆಲೆಗಟ್ಟಾಗಿದೆ. ಜಾತಿ ವಿರೋಧಿಗಳಾಗಲಿ, ಜಾತಿ ವಿನಾಶ ಆಗಬೇಕೆಂಬವರಾಗಲಿ ಈ ಕ್ರೂರ ವಾಸ್ತವಿಕತೆಯನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ: ಜಾತಿ ವಿನಾಶವೇ ಈ ದೇಶದ ಪ್ರಗತಿ

ಹಾವನೂರು ಶಿಫಾರಸುಗಳೂ ಪುಸ್ತಕ ಮೂಲೆಗೆ ಬಿದ್ದವು. ಗುಂಡೂರಾಯರ ಆಡಳಿತಾವಧಿಯಲ್ಲಿ ಹಿಂದುಳಿದವರಿಗೆ ಸರಕಾರಿ ಇಲಾಖೆಗಳಲ್ಲಿ ಮೀಸಲಾತಿ ಹಾಗೂ ಬಡ್ತಿಯಲ್ಲಿ ರೋಸ್ಟರ್ ಪದ್ಧತಿಯ ಅನುಷ್ಠಾನ ಮಾಡಲು ಪ್ರಾಮಾಣಿಕವಾದ ಪ್ರಯತ್ನ ನಡೆಯಲೇ ಇಲ್ಲ. ಎಲ್ಲೋ ಶಿಕ್ಷಣ ಸಂಸ್ಥೆಗಳಲ್ಲಿ ಹಿಂದುಳಿದ ಜಾತಿಗಳ ವಿದ್ಯಾರ್ಥಿಗಳಿಗೆ ಕೆಲಮಟ್ಟಿಗೆ ಪ್ರವೇಶ ಸಿಕ್ಕಿರಬಹುದಾದರೂ ಉದ್ಯೋಗಾವಕಾಶದ ಕ್ಷೇತ್ರದಲ್ಲಿ ಅವರ ಪಾಲಿಗೆ ಬಾಗಿಲು ತೆರೆಯಲೇ ಇಲ್ಲ. ಹಿಂದುಳಿದವರ ಆರ್ಥಿಕ ಉನ್ನತಿಗಾಗಿ ಹಣಕಾಸಿನ ನಿಗಮ ಸ್ಥಾಪಿಸಬೇಕು ಇತ್ಯಾದಿಯಾದ ಶಿಫಾರಸುಗಳೆಲ್ಲ ಕಡತಗಳಲ್ಲೇ ಮಲಗಿದವು.

1983ರಲ್ಲಿ ಹಾವನೂರು ಶಿಫಾರಸು ಆಧಾರಿತ ನಿಯಮಗಳಿಗೆ ಸುಪ್ರೀಂಕೋರ್ಟಿನಲ್ಲಿ ರಿಟ್ ಅರ್ಜಿಯ ಮೂಲಕ ತಗಾದೆ ತೆಗೆಯಲಾಯಿತು. ಈ ಸಂಬಂಧ ರಾಜ್ಯ ಸರಕಾರ ಸುಪ್ರೀಂಕೋರ್ಟಿನಲ್ಲಿ ಸಲ್ಲಿಸಿದ ಅಫಿಡವಿತ್‌ನಲ್ಲಿ ಹಿಂದುಳಿದವರ ಮೀಸಲಾತಿ ನಿಯಮದ ಮರು ಪರಿಶೀಲನೆಗೆ ಹೊಸ ಆಯೋಗವೊಂದನ್ನು ರಚಿಸುವುದಾಗಿ ತಿಳಿಸಲಾಯಿತು. ವೆಂಕಟಸ್ವಾಮಿ ಆಯೋಗದ ರಚನೆಯಾದದ್ದು ಹೀಗೆ. ಹೀಗೆ ಮೀಸಲಾತಿಯ ಮರು ಪರಿಶೀಲನೆಗೆ ಉಂಟಾದ ಅಗತ್ಯದ ವಾತಾವರಣ ಯಾವುದು? ಮತ್ತೊಂದು ಆಯೋಗದ ನೇಮಕದ ವಿಚಾರವನ್ನು ಸರಕಾರ ಜನತೆಯ ಮುಂದಾಗಲಿ ಜನಪ್ರತಿನಿಧಿಗಳ ಮುಂದಾಗಲಿ ಮಂಡಿಸಲಿಲ್ಲ.

[illegible] ಧ್ಯೇಯಧೋರಣೆ ಆಗಿದ್ದರೂ ಅವರ ಸಾಕಾರದ ಸಾಧ್ಯತೆ ಬಿಸಿಲುಗುದುರೆಯಾಗಿರುವುದು ಇನ್ನೂ ಅವರ ಕಣ್ಣಿಗೆ ಕಾಣಿಸುತ್ತಿಲ್ಲ. ಇದನ್ನು ಒಪ್ಪಿಕೊಳ್ಳದಿರುವುದು ಆತ್ಮವಂಚನೆ ಮಾಡಿಕೊಂಡಂತೆ.

ಈ ನಾಡಿನಲ್ಲಿ ಜಾತಿ ಕಟ್ಟಳೆಯೆಂಬುದು ಇನ್ನು ಹಲವಾರು ದಶಕಗಳ ಕಾಲವೂ ಇರುವಂತಹದು. ಜಾತಿಯ ಕಟ್ಟು ಸಡಿಲವಾಗಲು ಶತಮಾನವೇ ಬೇಕಾದೀತು. ಅಷ್ಟರ ತನಕವೂ ಜಾತಿಯ ನೆಲೆಯಲ್ಲಿ ತಾರತಮ್ಯ ನಡೆದೇ ನಡೆದೀತು. ಸಾಮರ್ಥ್ಯವುಳ್ಳವರು ದುರ್ಬಲರನ್ನು ಮೂಲೆಗೆತಳ್ಳಿಯಾರು. ಸೊತ್ತಿನಲ್ಲಿಯೂ ವಿದ್ಯಾ-ಬುದ್ಧಿಗಳಲ್ಲೂ ಬಡವರಾದ ಮಂದಿ ಬಡವರಾಗಿಯೇ ಉಳಿದಾರು. ಇದನು ಒಪ್ಪಿಕೊಂಡರೆ ಈ ಅಸಮಾನತೆಯ ಪರಿಹಾರಕ್ಕೊಂದು ದಾರಿ ಕಾಣಿಸೀತು. ಹಿಂದುಳಿದವರಿಗೆ ಮೀಸಲಾತಿಯನ್ನು ಕಾಲ ಕಾಲಕ್ಕೆ ಮರುಪರಿಶೀಲಿಸುವ ಬದಲು ಜಾತಿಗಳ ಜನ ಸಂಖ್ಯೆಯ ಆಧಾರದಲ್ಲಿ ಉದ್ಯೋಗಾವಕಾಶಗಳನ್ನು ಹಂಚಿಕೊಡಬೇಕು. ಅವರವರ ಶತಾಂಶಕ್ಕನುಗುಣವಾಗಿ ಹುದ್ದೆಗಳ ಮೀಸಲಾತಿ ಇರಲಿ. ಅದಕ್ಕಾಗಿ ಮುಂದಿನ ಜನಗಣತಿ ಜಾತಿಯ ನೆಲೆಯಲ್ಲೇ ನಡೆಯಲಿ. ಯಾರೂ ಆಗ ಅನ್ಯಾಯವಾಗಿದೆ ಎಂದು ಗೊಣಗುವ ಪ್ರಮೇಯವಿಲ್ಲ. ಬುದ್ಧಿ ಬಲವೂ ವಶೀಲಿಯೂ ಉಳ್ಳ ಮಂದಿ ಎಲ್ಲ ಅವಕಾಶಗಳನ್ನೂ ಬಾಚಿಕೊಳ್ಳುವ ವಿಕೃತಿಯೂ ಉಂಟಾಗುವುದಿಲ್ಲ.

ಮುಂಗಾರು

ಮಂಗಳವಾರ, ಸೆಪ್ಟೆಂಬರ್ 2, 1986

ಕ್ಯಾಂಪ್ಕೋ ಕೊಟ್ಟ ಮೇಲ್ಪಂಕ್ತಿ

ಅಸ್ಸಾಮ್‌ನಲ್ಲಿ ಒಂದು ವರ್ಷ ಬಂಪರ್ ಅಡಿಕೆ ಬೆಳೆ ಬಂತೆಂದೋ ಉತ್ತರ ಭಾರತದಲ್ಲಿ ಬರಗಾಲ ಬಂದು ಜನರು ಅನ್ನ ನೀರಿಲ್ಲದೆ ಸೊರಗುವಂತಹ ಪರಿಸ್ಥಿತಿಯಲ್ಲಿ ಮೆಲ್ಲುವ ಅಡಿಕೆಗೆ ಬೇಡಿಕೆ ಕುಸಿಯಿತೆಂದೋ ಕರ್ನಾಟಕದಲ್ಲಿಯೂ ಕೇರಳದಲ್ಲಿಯೂ ಅಡಿಕೆಯ ಬೆಲೆ ಕುಸಿದು ಪಾತಾಳಕ್ಕಿಳಿಯಬೇಕಾದ ಅಗತ್ಯವಿರಲಿಲ್ಲ. ಆದರೆ ಕಳೆದ ದಶಕದ ಆದಿಯಲ್ಲಿ ನಡೆದಿದ್ದು ಇದೇ ವಿದ್ಯಮಾನ. 1972ರಲ್ಲಿ ಅಡಿಕೆ ಬೆಲೆಯು ಅರ್ಧಕ್ಕಿಳಿಯಿತು. ಬೆಳೆಗಾರರಲ್ಲಿ ಹಾಹಾಕಾರ ಉಂಟಾಯಿತು.

ಆ ಕಾಲದಲ್ಲಿ ಬೆಳೆಗಾರರ ರಕ್ಷಣೆಗೆ ಸಹಕಾರಿ ಕ್ಷೇತ್ರದಲ್ಲಿ ಬೆಳೆಗಾರರದೇ ಆದ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು. ಅದುವೇ ಕ್ಯಾಂಪ್ಕೋ. ಇಂದು ಈ ಸಂಸ್ಥೆ ದೊಡ್ಡದಾಗಿ ಬೆಳೆದಿದೆ. ಮೊದಲ ವರ್ಷ ಕೇವಲ 3600ರಷ್ಟಿದ್ದ ಸದಸ್ಯರ ಸಂಖ್ಯೆ ಈಗ 27 ಸಾವಿರವಾಗಿ ಬೆಳೆದಿದೆ. ಶೇರು ಬಂಡವಾಳ 94 ಲಕ್ಷ ರೂಪಾಯಿಯಿಂದ 7.6 ಕೋಟಿ ರೂಪಾಯಿಗಳಾಗಿದೆ. ಪ್ರಸ್ತುತ ಸಂಸ್ಥೆ 85ಕೋಟಿ ರೂ.ಗಳಷ್ಟು ವ್ಯವಹಾರ ನಡೆಸುತ್ತಿದ್ದು ಒಂದು ಕೋಟಿ ರೂಪಾಯಿ ಲಾಭವನ್ನೂ ಮಾಡಿದೆ.

ಬೆಳೆಗಾರರು ಒಂದಾದರೆ, ಅವರಿಗೆ ಯೋಗ್ಯ ನಾಯಕತ್ವ ಸಿಕ್ಕವರೆ ಏನೆಲ್ಲ ಸಾಧಿಸಬಹುದೆಂಬುದಕ್ಕೆ ಕ್ಯಾಂಪ್ಕೋ ಈ ದೇಶದಲ್ಲಿ ಒಂದು ಅತ್ಯುತ್ತಮ ಉದಾಹರಣೆ. ರೈತರಲ್ಲಿ ಸಂಘಟನೆ ಇಲ್ಲದಿದ್ದರೆ ಏನೆಲ್ಲ ಅನಾಹುತವಾದೀತೆಂಬುದಕ್ಕೂ ಈ ಸಂಸ್ಥೆಯ ಅನುಪಸ್ಥಿತಿಯಲ್ಲಿ ಅಡಿಕೆ ಹಾಗೂ ಕೊಕ್ಕೋ ಬೆಳೆಗಾರರು ಅನುಭವಿಸಿದ ಸಂಕಟ ಸ್ಥಿತಿಯೇ ನಿದರ್ಶನ. ಕೊಕ್ಕೋ ಬೆಳೆಗಾರರಿಗೆ ಅಂಥ ನರಕಯಾತನೆ ಬಂದದ್ದು 1980-81ರಲ್ಲಿ. ಅಂದು ಈ ದೇಶದಲ್ಲಿ ಕೊಕ್ಕೋ ಉತ್ಪನ್ನಗಳನ್ನು ತಯಾರಿಸುತ್ತಿದ್ದ ಒಂದೇ ಒಂದು ಖಾಸಗಿ ಸಂಸ್ಥೆ ದೇಶೀಯ ಬೆಳೆಗಾರರನ್ನು ಕಡೆಗಣಿಸಿ ವಿದೇಶಿ ಕೊಕ್ಕೋ ತರಿಸಿಕೊಳ್ಳಲು ತೊಡಗಿದಾಗ ಕ್ಯಾಂಪ್ಕೋ ಹಸ್ತಕ್ಷೇಪ ನಡೆಸಿತು. ಕೊಕ್ಕೋ ಮಾರುಕಟ್ಟೆಗೆ ಧುಮುಕಿತು. ಕೊಕ್ಕೋ ಬೆಳೆಗಾರರಿಗೆ ಸಂಸ್ಥೆ ನೀಡಿದ ಈ ಸಾಂತ್ವನ ತಾತ್ಕಾಲಿಕವಾಗಬಾರದು. ಕಾಯಂನದ್ದಾಗಿರಬೇಕು ಎಂಬ ದೂರ ದೃಷ್ಟಿಯಿಂದ ಜನ್ಮ ತಾಳಿದ್ದು ಪುತ್ತೂರಿನ ಚಾಕೊಲೇಟ್ ಕಾರ್ಖಾನೆ.

ಕೊಕ್ಕೋ ಬೆಳೆಗೆ ಹಾಗೂ ಅದರ ಉತ್ಪನ್ನಗಳಿಗೆ ಭದ್ರ ಮಾರುಕಟ್ಟೆ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. ಅದನ್ನು ಉಪಯೋಗಿಸಿಕೊಂಡು ಕರ್ನಾಟಕ ಹಾಗೂ ಕೇರಳಗಳ ಕೊಕ್ಕೋ ಬೆಳೆಗಾರರ ಬದುಕಿಗೆ ಬಲ ಕೊಡಲು ಕ್ಯಾಂಪ್ಕೋ ಸಂಸ್ಥೆ ಸಜ್ಜಾಗಿದೆ. ಪುತ್ತೂರಿನ ಚಾಕಲೇಟ್ ಕಾರ್ಖಾನೆಯಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಅದು ಸ್ಥಾಪಿಸಿದೆ. ಹೊಚ್ಚ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ವಿವಿಧ ಬಗೆಯ ಉತ್ಪನ್ನಗಳನ್ನು ತಯಾರಿಸಲು ಹೊರಟಿದೆ, ಕೆಲವನ್ನು ರಫ್ತು ಮಾಡಲಿದೆ.

ಈ ಕಾರ್ಯಗಳನ್ನೆಲ್ಲ ಯಶಸ್ವಿಯಾಗಿ ನಿರ್ವಹಿಸಲು ಕ್ಯಾಂಪ್ಕೋ ಸಮರ್ಥವಾದೀತು ಎಂಬುದರಲ್ಲಿ ಸಂಶಯವೇನೂ ಬೇಡ. ಈ ಸಂಸ್ಥೆಯ ಕಾರ್ಯ ನಿರ್ವಹಣೆಯ ಚರಿತ್ರೆಯನ್ನು ಅಧ್ಯಯನ ಮಾಡಿದವರಿಗೆ ಇದು ಸ್ಪಷ್ಟವಾಗುತ್ತದೆ. ಈ ಸಂಸ್ಥೆ ವರ್ಷ ವರ್ಷವೂ ಬಲವನ್ನು ಹೆಚ್ಚಿಸಿಕೊಳ್ಳುತ್ತ ಬೆಳೆದಿದೆ. ಆ ಮೂಲಕ ಬೆಳೆಗಾರರಿಗೆ ಬಲವನ್ನು ಕೊಟ್ಟಿದೆ. ಆದ್ದರಿಂದಲೇ ಚಾಕೊಲೇಟ್ ಕಾರ್ಖಾನೆಯಂತಹ ಆಧುನಿಕ ಸಂಸ್ಥೆಯೊಂದನ್ನು, ಅದರ ಆಧುನಿಕ ಮಾರುಕಟ್ಟೆಯ ಜಾಲವನ್ನು ಕಟ್ಟಿ ಬೆಳೆಸಿ ನಿರ್ವಹಿಸುವ ಸಾಮರ್ಥ್ಯ ಹಾಗೂ ಪರಿಣತಿ ಈ ಸಂಸ್ಥೆಗೆ ಬಂದೀತೆನ್ನುವುದಕ್ಕೆ ಯಾವ ಸಂಶಯವೂ ಇಲ್ಲ. ಅದು ಬರಬೇಕು ಎನ್ನುವುದು ಈ ನಾಡಿನ ಎಲ್ಲ ಮಣ್ಣಿನ ಮಕ್ಕಳ ಆಶಯವೂ ಆಗಿದೆ.

ಇಂಥ ಒಂದು ಜನಪರವಾದ ಸಂಸ್ಥೆಯನ್ನು ಕಟ್ಟಿ ಬೆಳೆಸಿದವರು, ಅದಕ್ಕೆ ನೆರವಾದವರು ಅನೇಕ ಮಂದಿ. ಆದರೆ ಈ ಸಂಸ್ಥೆಯ ಚಾಲಕ ಶಕ್ತಿ ಒಬ್ಬ ವ್ಯಕ್ತಿ ಎಂಬುದನ್ನು ಮರೆಯುವಂತಿಲ್ಲ. ವಾರಣಾಸಿ ಸುಬ್ರಾಯ ಭಟ್ಟರಂತಹ ಸಹಕಾರಿ ಧುರೀಣ, ಸಮಾಜವಾದಿ, ಮಣ್ಣಿನ ಮಕ್ಕಳ ಬಗ್ಗೆ ಪ್ರಾಮಾಣಿಕ ಕಳಕಳಿಯುಳ್ಳ ವಿಚಾರವಂತನ ನಾಯಕತ್ವವೇ ಕ್ಯಾಂಪ್ಕೋ ಎಂಬ ಚೈತನ್ಯಶಾಲಿ ಸಂಸ್ಥೆಯೊಂದರ ಜನನಕ್ಕೂ ಅದರ ಬೆಳವಣಿಗೆಗೂ ಕಾರಣವಾಯಿತೆಂಬುದನ್ನು ಹೇಳಲೇಬೇಕಾಗಿದೆ.

ಇಂತಹ ವ್ಯಕ್ತಿಗಳೂ ಇಂತಹ ಸಂಸ್ಥೆಗಳೂ ರೈತ ಸಮುದಾಯಕ್ಕೆ ಮೇಲ್ಪಂಕ್ತಿಯಾಗಬೇಕು. ಕ್ಯಾಂಪ್ಕೋ ಎಂಬುದು ಈ ನಾಡಿನ ರೈತರ ಬದುಕಿನಲ್ಲಿ ಸಂಭವಿಸಿದ ಒಂದು ಅಪೂರ್ವ ಘಟನೆ. ಅದೊಂದು ಮಾರ್ಗದರ್ಶನ. ಶೋಷಕ ಶಕ್ತಿಗಳ ಮುಷ್ಟಿಯಿಂದ ಬಿಡುಗಡೆಗೆ ಅದೊಂದು ದೊಡ್ಡ ದಾರಿ. ಇಂತಹ ದಾರಿ ಸಂಕಟದ ಸುಳಿಯಲ್ಲಿರುವ ಎಲ್ಲ ಬೆಳೆಗಾರರಿಗೆ ಹೊಳೆಯಬೇಕು. ಇಂದು ಕರ್ನಾಟಕದ ಹಾಗೂ ಕೇರಳದ ತೆಂಗು ಬೆಳೆಗಾರರು ಅಂತಹ ಶೋಚನೀಯ ಸಂದರ್ಭದಲ್ಲಿ ಸಿಲುಕಿ ಬಿದ್ದಿದ್ದಾರೆ. ತೆಂಗಿನಕಾಯಿಗೂ ಎಣ್ಣೆಗೂ ಬೆಲೆ ಕುಸಿದಿದೆ. ಜನರಲ್ಲಿ ಹಾಹಾಕಾರ ಎದ್ದಿದೆ. ಕೇಂದ್ರ ಸರಕಾರ ತೆಂಗಿನೆಣ್ಣೆಯನ್ನು ಆಮದುಮಾಡಿಕೊಳ್ಳುತ್ತಿರುವುದೇ ಇಂತಹ ವಿದ್ಯಮಾನಕ್ಕೆ ಒಂದು ಕಾರಣ. ಕಪ್ಪು ತಲೆ ಹುಳ ಸಾವಿರಾರು ಎಕ್ರೆ ತೆಂಗಿನ ತೋಟಕ್ಕೆ ಬೆಂಕಿಯಿಟ್ಟು ಬೆಳೆ ಕುಸಿದರೂ ತೆಂಗಿನ ಉತ್ಪನ್ನಗಳಿಗೆ ಬೆಲೆ ಬಂದಿಲ್ಲವೆಂದರೆ ಈ ನಾಡಿನಲ್ಲಿ ಬೆಳೆಗಾರ ಸಂಘಟಿತನಾಗಲಿಲ್ಲವೆಂದಾದರೆ ಆತನನ್ನು ಕೇಳುವವರು ಯಾರೂ ಇಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ. ಕೃಷ್ಯುತ್ಪನ್ನಗಳನ್ನು ಮೆಲ್ಲುವ ನಗರವಾಸಿ ಮಂದಿಯ ಹಿತವನ್ನು ಸರಕಾರ ಸಂರಕ್ಷಿಸುವುದೇ ಹೊರತು ಬೆಳೆಗಾರನನ್ನಲ್ಲ. ತೆಂಗು ಮಂಡಳಿಯ ಸ್ಥಾಪನೆ ಆಗಿದ್ದರೂ ಅದು ಬೆಳೆಗಾರರಿಗಾಗಿ ಏನೂ ಮಾಡಿಲ್ಲ.

ಈ ಶೂನ್ಯವನ್ನು ತುಂಬಿಸಲು ರೈತರೇ ಮುಂದೆ ಬರಬೇಕು. ಅವರಲ್ಲೇ ನಾಯಕತ್ವ ಉದಿಸಿ ಬರಬೇಕು. ಕ್ಯಾಂಪ್ಕೋದಂತಹ ಸಂಸ್ಥೆಯೇ ಅವರಿಗೆ ಮೇಲ್ಪಂಕ್ತಿಯಾಗಬೇಕು.

ಮುಂಗಾರು

ಬುಧವಾರ, ಸೆಪ್ಟೆಂಬರ್ 3, 1986

ಹೋರಾಟಗಾರ ಮುಗಾಬೆ

ಅಲಿಪ್ತ ರಾಷ್ಟ್ರಗಳ ಕೂಟದ ಹೊಸ ಅಧ್ಯಕ್ಷನಾಗಿ ಆಯ್ಕೆಗೊಂಡಿರುವ ರಾಬರ್ಟ್ ಗೇಬ್ರಿಯಲ್ ಮುಗಾಬೆ ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟದ ಮುಂಚೂಣಿಯಲ್ಲಿದ್ದವರು. ಆದ್ದರಿಂದಲೇ ರಾಜಕೀಯದ ಗೊತ್ತು ಗುರಿಗಳ ಬಗ್ಗೆ ತಿಳಿದುಕೊಂಡವರು.

ದಕ್ಷಿಣ ಆಫ್ರಿಕದ ವಿಶ್ವವಿದ್ಯಾನಿಲಯವೊಂದರಲ್ಲಿ ಸಾಂಪ್ರದಾಯಿಕ ವಿಧಾನದಲ್ಲಿ ಅಧ್ಯಯನ ನಡೆಸಿ ಪದವಿಯನ್ನು ಅವರು ಪಡೆದಿದ್ದಾರೆ. ಆ ಬಳಿಕ ಅನೇಕ ವರ್ಷ ಶಿಕ್ಷಕನಾಗಿ ಕೆಲಸ ಮಾಡಿದ್ದಾರೆ. ಮತ್ತೆ 1960 ರಿಂದ ಸಂಪೂರ್ಣವಾಗಿ ರಾಜಕೀಯದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ದೇಶ ಸ್ವತಂತ್ರವಾದದ್ದು 1980ರಲ್ಲಿ. ಅದೇ ವರ್ಷ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಅವರ ನಾಯಕತ್ವದ "ಜಾನು" ಪಕ್ಷ ಗೆದ್ದು ಮುಗಾಬೆ ದೇಶದ ಮೊತ್ತ ಮೊದಲ ಚುನಾಯಿತ ಪ್ರಧಾನ ಮಂತ್ರಿಯಾದರು. ಈ ಮಧ್ಯಂತರದಲ್ಲಿ ಅವರು ಹೋರಾಟದ ಮೂಸೆಯಲ್ಲಿ ಕುದಿದರು. ತಮ್ಮ ನಾಡಿನ ಜನಸಮೂಹದ ಆಶೋತ್ತರಗಳ ಬಗ್ಗೆ ಅಧ್ಯಯನ ನಡೆಸುವ ಅವಧಿ ಅದಾಗಿತ್ತು. ಈ ಕಾಲದಲ್ಲಿ ಅವರು ರಾಜಕೀಯ ಪಕ್ಷವನ್ನು ಕಟ್ಟಿ ಹೋರಾಟವನ್ನು ಸಂಘಟಿಸಿದರು. ಅವರ ತಾಯ್ನಾಡಾದ ಜಿಂಬಾಬ್ವೆ ಅಂದು ರೊಡೇಶ್ಯ ಆಗಿ ಅಲ್ಪಸಂಖ್ಯಾತ ಬಿಳಿಯರ ಆಧಿಪತ್ಯಕ್ಕೊಳಗಾಗಿತ್ತು. ಇಯಾನ್ ಸ್ಮಿತ್‌ರ ನೇತೃತ್ವದಲ್ಲಿ ದಮನಕಾರಿ ಸರಕಾರ ಅಲ್ಲಿ ಕಾರ್ಯಾಚರಿಸುತ್ತಿತ್ತು.

ಬಹುಸಂಖ್ಯಾತರಾದ ಕರಿಯರಿಗೆ ದೇಶವನ್ನಾಳುವ ಹಕ್ಕನ್ನು ತಂದು ಕೊಡುವ ಈ ಹೋರಾಟದಲ್ಲಿ ವೈಯಕ್ತಿಕ ಕಷ್ಟ ನಷ್ಟಗಳಿಗೆ ಮುಗಾಬೆಯವರೂ ಅವರಂತೆ ಇತರ ನಾಯಕರೂ ಒಳಗಾಗಿದ್ದಾರೆ. ಸ್ವಾತಂತ್ರ್ಯ ಹೋರಾಟದ ನಾಯಕರಾದ ಇವರನ್ನು ಸ್ಮಿತ್ ಸರಕಾರ ಹತ್ತು ವರ್ಷಕಾಲ ಸೆರೆಮನೆಯಲ್ಲಿ ಹಾಕಿತ್ತು. ಈ ಸೆರೆವಾಸ ಮುಗಾಬೆಯ ಶಕ್ತಿಯನ್ನು ಕುಂದಿಸುವ ಬದಲು ಹೆಚ್ಚಿಸಿತು. ಸೆರೆಯಲ್ಲಿದ್ದೇ ಅವರು ಅಂಚೆ ಮೂಲಕ ಕಾನೂನು ಅಭ್ಯಾಸ ಮಾಡಿ ಲಂಡನ್ ವಿಶ್ವವಿದ್ಯಾನಿಲಯದ ಪದವಿ ಪಡೆದುಕೊಂಡರು.

ಈ ರಾಜಕೀಯ ನಾಯಕ ಸೆರೆಮನೆಯಿಂದ ಬಿಡುಗಡೆಯಾಗುತ್ತಲೇ ಆ ವೇಳೆಗಾಗಲೇ ಒತ್ತಿನ ಮೊಜಾಂಬಿಕ್‌ನಲ್ಲಿ ನೆಲೆಯನ್ನು ಹೊಂದಿದ್ದ "ಜಾನು" ಪಕ್ಷದ ಗೆರಿಲ್ಲಾ ಪಡೆಯನ್ನು ಸೇರಿ ದಕ್ಷಿಣ ರೊಡೇಶ್ಯದ ಸ್ಮಿತ್ ಸರಕಾರದ ವಿರುದ್ಧ ಸಶಸ್ತ್ರ ಹೋರಾಟದ ನೇತೃತ್ವ ವಹಿಸಿದರು.

ಹೀಗೆ ಮುಗಾಬೆ ಜನಪರ ಹೋರಾಟದ ಮೂಸೆಯಲ್ಲಿ ಬೆಂದವರು. ಅಪಾರ ಅನುಭವಶಾಲಿ. ದೇಶವೊಂದರ ಮುನ್ನಡೆಗೆ ಆಗಬೇಕಾದ ಕಾರ್ಯಗಳೇನೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡವರು. ಸಮಾಜದ ಆರ್ಥಿಕವೇ ಮೊದಲಾದ ವ್ಯವಸ್ಥೆ ಹೇಗಿದ್ದರೆ ಹಿತವೆಂಬ ಬಗ್ಗೆ ರಾಜಕೀಯ ಸಿದ್ಧಾಂತಗಳನ್ನು ಅಭ್ಯಾಸ ಮಾಡಿ ಆಚರಣೆಗೆ ತರುತ್ತಿರುವವರು. ಹಿಂದುಳಿದಿರುವ ಹಾಗೂ ಪ್ರಗತಿಗಾಗಿ ತುಡಿಯುತ್ತಿರುವ ಜನಾಂಗಗಳ ಆಶೋತ್ತರಗಳನ್ನು ಮುರುಟಿಸಲು ಪ್ರಯತ್ನಿಸುತ್ತಿರುವ ಜಾಗತಿಕ ಶಕ್ತಿಗಳ ಕುತಂತ್ರಗಳ ಬಗ್ಗೆ ತಿಳುವಳಿಕೆಯುಳ್ಳವರು.

ಆಫ್ರಿಕದ ನಾಡೊಂದರ ನಾಯಕರಾದ ಅವರಿಗೆ ಅಲಿಪ್ತ ಆಂದೋಲನದ ನಾಯಕರಾಗಿ ಮೊದಲ ಆದ್ಯತೆ ದಕ್ಷಿಣ ಆಫ್ರಿಕವನ್ನು ಅಲ್ಪ ಸಂಖ್ಯಾತ ಬಿಳಿಯ ಪ್ರಭುತ್ವದಿಂದ ವಿಮೋಚನೆಗೊಳಿಸುವುದೇ ಆಗಿದೆ. ಹೀಗೆ ಅವರಿಗೆ ಅನಿಸಿದ್ದರಲ್ಲಿ ತಪ್ಪೇನೂ ಇಲ್ಲ. ನ್ಯಾಯಪಕ್ಷಪಾತಿಯಾದ, ಶೋಷಣೆ ಹಾಗೂ ದಮನವನ್ನು ನಿವಾರಿಸಬೇಕೆಂದು ಬಯಸುವ, ಅದಕ್ಕಾಗಿ ಕೆಲಸ ಮಾಡುವ ಯಾವ ಸಂಸ್ಥೆಯಾಗಲಿ, ಆಂದೋಲನವಾಗಲಿ ದಕ್ಷಿಣ ಆಫ್ರಿಕದಲ್ಲಿ ಮನುಷ್ಯನು ಮನುಷ್ಯನ ಮೇಲೆ ಸವಾರಿ ಮಾಡುತ್ತಿರುವ ಬರ್ಬರತೆಯನ್ನು ಅನಾಗರಿಕ ಆಚಾರವನ್ನೂ ಕಂಡು ಸಹಿಸಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ದಕ್ಷಿಣ ಆಫ್ರಿಕದ ವಿಮೋಚನೆಯೇ ಅಲಿಪ್ತ ಚಳವಳಿಯ ನಾಯಕನಾಗಿ ರಾಬರ್ಟ್ ಮುಗಾಬೆಯವರ ಆದ್ಯ ಕರ್ತವ್ಯವಾಗಬೇಕು. ಅದಕ್ಕಾಗಿ ಅವರು ಹೋರಾಡಬೇಕು. ಜಾಗತಿಕ ಅಭಿಪ್ರಾಯವನ್ನು ಸಂಘಟಿಸಬೇಕು, ರೂಪಿಸಬೇಕು. ದಕ್ಷಿಣ ಆಫ್ರಿಕದ ಅಲ್ಪ ಸಂಖ್ಯಾತ ಬಿಳಿಯ ಪ್ರಭುತ್ವದ ಮೇಲೆ ಆರ್ಥಿಕ ದಿಗ್ಬಂಧನಕ್ಕಾಗಿ ಶ್ರೀಮಂತ ಪಾಶ್ಚಾತ್ಯ ದೇಶಗಳ ಮನವೊಲಿಸಬೇಕು. ರಾಜತಾಂತ್ರಿಕ ಮುತ್ಸದ್ದಿತನದಿಂದಲೇ ಬಹಳಷ್ಟನ್ನು ಸಾಧಿಸುವುದು ಸಾಧ್ಯ. ಸ್ವದೇಶದ ಸ್ವಾತಂತ್ರ್ಯ ಸಮರದಲ್ಲಿ ತನ್ನ ದೇಶಬಾಂಧವರನ್ನು ಮುನ್ನಡೆಸಿ ಗೆದ್ದ ಮುಗಾಬೆ ದಕ್ಷಿಣ ಆಫ್ರಿಕದ ಬಹುಸಂಖ್ಯಾತರ ರಾಜಕೀಯ ವಿಮೋಚನೆಯಲ್ಲಿ ಯಶಸ್ಸು ಸಾಧಿಸುವರೆಂಬ ಹಾರೈಕೆ ಈ ಜಗತ್ತಿನ ಎಲ್ಲ ಶಾಂತಿಪ್ರಿಯ, ನ್ಯಾಯಪ್ರಿಯ ಪ್ರಜಾತಂತ್ರ ಪ್ರೇಮಿ ಜನರದ್ದಾಗಿದೆ.

ಮುಂಗಾರು
ಗುರುವಾರ, ಸಪ್ಟೆಂಬರ್ 4, 1986

ವಿರೋಧಾಭಾಸ

ಗ್ರಾಮೀಣ ಪ್ರದೇಶದ ಜನರಿಗೆ ಒಳ್ಳೆಯ ಹಾಗೂ ಆಧುನಿಕ ವೈದ್ಯಕೀಯ ಸೇವೆ ದೊರೆಯಬೇಕೆಂದು ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗ್ ಅವರು ಮಣಿಪಾಲದ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಹೇಳಿದ್ದಾರೆ. ವೈದ್ಯಕೀಯ ವೃತ್ತಿ ಪವಿತ್ರವಾದುದೆಂದು ರಾಷ್ಟ್ರಪತಿಯವರು ಹೇಳಿದ್ದಾರೆ. ಮಾನವ ಸೇವೆಯ ಮೂಲಕ ಭಗವಂತನ ಸೇವೆ ಮಾಡುವಂತೆಯೂ ವೈದ್ಯ ಸಮುದಾಯಕ್ಕೆ ಕರೆ ನೀಡಿದ ಅವರು, ಜಗತ್ತಿನ ಸುಖಶಾಂತಿಯನ್ನು ಹೆಚ್ಚಿಸುವಂತಹ ಒಂದು ವೃತ್ತಿ ಇದಾಗಿದೆಯೆಂದು ಕೂಡ ಶ್ಲಾಘಿಸಿದ್ದಾರೆ.

ವೈದ್ಯಕೀಯ ವೃತ್ತಿ ಮಾನವ ಸೇವೆಗೆ ಅತ್ಯುತ್ತಮ ಮಾಧ್ಯಮ ಎಂಬುದರಲ್ಲಿ ಎರಡು ಮಾತಿಲ್ಲ. ಮನುಷ್ಯರ ನೋವನ್ನು ಶಮನ ಮಾಡುವಂತಹ ಉದ್ಯೋಗ ಅದು. ಹಿಂದೆ ವೈದ್ಯಕೀಯವು ಬರೇ ಉದ್ಯೋಗ ಮಾತ್ರ ಆಗಿರಲಿಲ್ಲ. ಅದೊಂದು ತಪಸ್ಸೇ ಆಗಿತ್ತು.

ಆದರೆ ಇಂದು ಆಗಿಲ್ಲ. ಅದು ರಾಷ್ಟ್ರಾಧ್ಯಕ್ಷರಿಗೆ ತಿಳಿದದ್ದರಿಂದಲೇ ಅವರು ಮಣಿಪಾಲದಲ್ಲಿ ಈ ಮಾತನ್ನು ಆಡಿದ್ದಾರೆ. ವೈದ್ಯಕೀಯ ಸೇವೆ ಜನಸಾಮಾನ್ಯರನ್ನು ಎಟುಕುತ್ತಿಲ್ಲವೆಂಬ ವಾಸ್ತವಿಕತೆ ಅವರಿಗೆ ಅರಿವಾಗಿರಬೇಕು; ಆದ್ದರಿಂದಲೇ ಅವರ ಎದೆಯಾಳದಿಂದ ಈ ನೋವಿನ ಧ್ವನಿ ಹೊಮ್ಮಿಬಂದಿದೆ.

ಯಾಕೆ ಹೀಗಾಗಿದೆ ಎಂದು ರಾಷ್ಟ್ರಾಧ್ಯಕ್ಷರು ಮನನ ಮಾಡಬೇಕು. ವಿಶೇಷ ತಜ್ಞರ ಸೇವೆ ನಗರಗಳಿಗೆ ಮಾತ್ರವೇ ಸೀಮಿತವಾಗಿರುವುದಲ್ಲದೆ ದುಬಾರಿಯೂ ಕೂಡ ಆಗಿರುವುದಕ್ಕೆ ಮೂಲ ಕಾರಣವೇನು ಎಂದು ತಿಳಿದುಕೊಳ್ಳಲು ಅವರು ಬಯಸಿದರೆ ಅವರಿಗೆ ಕಾರಣವು ಗೋಚರಿಸೀತು. ಈ ದೇಶದಲ್ಲಿ ವೈದ್ಯಕೀಯ ವೃತ್ತಿಯ ವಾಣಿಜ್ಯಕರಣವೇ ಇದಕ್ಕೆ ಕಾರಣ. ಹೀಗೆ ಸೇವೆಯ ಸಾಧನವಾಗಿರತಕ್ಕ ಒಂದು ಪವಿತ್ರ ವೃತ್ತಿಯನ್ನು ವ್ಯಾಪಾರದ ಸರಕನ್ನಾಗಿ ಮಾಡಿದ್ದು ಕ್ಯಾಪಿಟೇಶನ್ ಶುಲ್ಕವೆಂಬ ಒಂದು ಮಹಾಪಿಡುಗು. ಬಹುಶ: ವೈದ್ಯಕೀಯ ವೃತ್ತಿಯ ಪಾವಿತ್ರ್ಯದ ಬಗ್ಗೆ ಮಾತನಾಡಿದ ವೇಳೆ ನಮ್ಮ ರಾಷ್ಟ್ರಪತಿಗಳಿಗೆ ತಾವು ವೈದ್ಯಕೀಯ ವೃತ್ತಿಯನ್ನು ವ್ಯಾಪಾರವಾಗಿ ಪರಿವರ್ತಿಸಿದ ವಿದ್ಯೆಯ ವ್ಯವಹಾರದ ಅಂಗಡಿಯಲ್ಲೇ ನಿಂತು ಮಾತನಾಡುತ್ತಿದ್ದೇನೆಂಬುವದ ಅರಿವು ಇದ್ದಿರಲಿಕ್ಕಿಲ್ಲ: ಕ್ಯಾಪಿಟೇಶನ್ ರೋಗವನ್ನು ದೇಶಕ್ಕೆ ಹಬ್ಬಿಸಿದ ಮೂಲಸ್ಥಾನದಲ್ಲಿ ನಿಂತುಕೊಂಡಿದ್ದೇನೆಂಬ ತಿಳುವಳಿಕೆ ಇದ್ದಿರಲಿಕ್ಕಿಲ್ಲ. ಇದರಲ್ಲಿ ವಿರೋಧಾಭಾಸವಿದೆಯೆಂದು ನಾವು ಹಾಗೆ ಹೇಳಬೇಕಾಗಿದೆ.

ವೈದ್ಯಕೀಯ ವೃತ್ತಿಯನ್ನು ಕುಲಗೆಡಿಸಿದ ಈ ಕ್ಯಾಪಿಟೇಶನ್ ರೋಗ ಇಂದು ದೇಶದ ನಾನಾ ದಿಕ್ಕುಗಳಿಗೆ ಹಬ್ಬಿದೆ. ಮೂಲೆಮೂಲೆಗೂ ಹಬ್ಬಿ ಸಮಾಜವನ್ನು ಅರ್ಬುದದಂತೆ ಬಾಧಿಸುತ್ತಿದೆ. ವೈದ್ಯರು ವ್ಯಾಪಾರಿಗಳಾಗಿದ್ದಾರೆ. ಮೂಲತ ಅವರೆಲ್ಲ ಮಾನವರು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ವೈದ್ಯಕೀಯ ವೃತ್ತಿಯಲ್ಲಿ ತರಬೇತಿಗಾಗಿ ಎರಡರಿಂದ ನಾಲ್ಕು ಲಕ್ಷ ರೂಪಾಯಿ ತನಕ ಕ್ಯಾಪಿಟೇಶನ್ ಶುಲ್ಕ ತೆತ್ತ ಈ ಮಂದಿ ಸಹಜವಾಗಿಯೇ ಆದಷ್ಟು ಬೇಗದಲ್ಲಿ ಅದನ್ನು ಮರಳಿ ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಒಮ್ಮೆ ಹಿಡಿದ ಹಣದ ರುಚಿ ಆ ಮೇಲೆ ಬಿಡಲಾರದು. ಜನರ ಸುಲಿಗೆಯ ಈ ವಿಷವರ್ತುಲ ಹಾಗೆಯೇ ಮುಂದುವರಿಯುತ್ತದೆ. ಪರಿಣಾಮವಾಗಿ ಜನಸಾಮಾನ್ಯರು ಸಂಕಟಪಡುವಂತಾಗಿದೆ. ಹಣ ಸೂರೆ ಹೊಡೆಯುವ ದೊಡ್ಡ ದಂಧೆಯಾಗಿ ವೈದ್ಯಕೀಯವು ಪರಿವರ್ತಿತವಾಗಿದೆ. ಉಳ್ಳವರೇ ಬಂಡವಾಳ ಹೂಡಿ ಸಂಪತ್ತಿನ ಕೊಯ್ಲು ತೆಗೆಯುವ ವಾಣಿಜ್ಯವೆನಿಸಿದೆ. ಆದ್ದರಿಂದಲೇ ಸಾಮಾಜಿಕ ಅಸಮಾನತೆಯ ವಿಕೃತಿಯನ್ನಿದು ಇನ್ನಷ್ಟು ಬೆಳೆಸುತ್ತದೆ.

ಕ್ಯಾಪಿಟೇಶನ್ ಎಂಬ ರೋಗ ಬಡಿಯದೇ ಇರುತ್ತಿದ್ದರೆ ವೈದ್ಯಕೀಯ ವೃತ್ತಿಯೂ ವೈದ್ಯರೂ ಆರೋಗ್ಯಶಾಲಿಗಳಾಗಿ ಸಮಾಜಕ್ಕೆ ಪ್ರಯೋಜನಕಾರಿಗಳಾಗುತ್ತಿದ್ದರು. ಉತ್ತಮ ಮಾನವರಾಗುತ್ತಿದ್ದರು. ವೈದ್ಯರೆಲ್ಲರೂ ಕೆಟ್ಟವರಲ್ಲ, ಬಹಳಷ್ಟು ಒಳ್ಳೆಯವರು ಇನ್ನೂ ಇದ್ದಾರೆ. ಆದರೆ ಪರಿಸ್ಥಿತಿ ಹಲವರನ್ನು ಕೆಟ್ಟವರನ್ನಾಗಿ ಮಾಡಿದೆ. ಈ ಕೆಡುಕುತನ ಇತ್ತೀಚೆಗೆ ನಮ್ಮ ಮಾತ್ರಸಮಾಜದಲ್ಲಿ ಬೆಳೆದಿದೆ ಎಂಬ ಸತ್ಯ ಎಲ್ಲರಿಗೂ ನಿಚ್ಚಳವಾಗಿ ಕಾಣಿಸುವಂತಹದ್ದು.

ಈ ಕೆಡುಕುತನಕ್ಕೆ ಸರಕಾರಗಳು ಪ್ರೋತ್ಸಾಹದ ನೀರೆರೆದು ಪೋಷಿಸಿವೆ, ವಿದ್ಯೆಯ ವ್ಯಾಪಾರದ ಅಂಗಡಿಗಳಿಗೆ ಅವುಗಳೇ ಪರವಾನಿಗೆ ಕೊಟ್ಟಿವೆ, ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಈ ಅವ್ಯವಹಾರದಲ್ಲಿ ಶಾಮೀಲಾಗಿವೆ. ವೈದ್ಯಕೀಯ ಸೇವೆ ಜನರಿಗೆ ಸುಲಭದಲ್ಲಿ, ಅಗ್ಗದಲ್ಲಿ ದೊರೆಯಬೇಕಿದ್ದರೆ, ವೈದ್ಯರು ಹಳ್ಳಿಗಳಿಗೆ ಹೋಗಿ ಅಲ್ಲಿ ಸೇವೆ ಮಾಡಬೇಕಿದ್ದರೆ ಕ್ಯಾಪಿಟೇಶನ್ ಎಂಬ ದೊಡ್ಡ ದುರ್ಮಾಂಸವನ್ನು ಕತ್ತರಿಸಿ ತೆಗೆಯುವ ಶಸ್ತ್ರ ಕ್ರಿಯೆಯನ್ನು ಸರಕಾರ ಮಾಡಬೇಕು. ವೈದ್ಯಕೀಯ ವೃತ್ತಿಯಲ್ಲಿ ತರಬೇತಿಯು ನ್ಯಾಯಸಮ್ಮತವಾದ ವೆಚ್ಚದಲ್ಲಿಯೇ ನಮ್ಮ ಯುವ ಪೀಳಿಗೆಗೆ ದೊರೆಯುವಂತೆ ಮಾಡಬೇಕು. ಈ ಕೆಲಸವನ್ನು ಮಾನ್ಯ ರಾಷ್ಟ್ರಪತಿ ಜೈಲ್‌ಸಿಂಗರ ಸರಕಾರ ತಕ್ಷಣ ಮಾಡಬೇಕು. ಕ್ಯಾಪಿಟೇಶನ್ ಶುಲ್ಕದ ಅವಕಾಶವನ್ನೇ ಕಿತ್ತುಹಾಕಬೇಕು. ವೈದ್ಯಕೀಯ "ಸೇ[illegible] ಗ್ರಾಮಾಂತರಕ್ಕೆ ಹೋಗಬೇಕು, ವೈದ್ಯಕೀಯ ಸ[illegible] ಅಗ್ಗವಾಗಬೇಕು, ವೈದ್ಯರು ಜನಸೇವೆ ಮಾಡ[illegible] ಎಂಬ ಮಾತುಗಳಿಗೆಲ್ಲ ಆಗ ಅರ್ಥ ಬಂದೀತು.

ಮುಂಗಾರು
ಶುಕ್ರವಾರ, ಸೆಪ್ಟೆಂಬರ್ 5, 1986

ಶೋಷಣೆಗೆ ದಾರಿ—ಏಕಸ್ವಾಮ್ಯ

ಜೀವವಿಮಾ ನಿಗಮವು ತನ್ನ 30ನೆಯ ವಾರ್ಷಿಕೋತ್ಸವವನ್ನು ಮೊನ್ನೆ ಆಚರಿಸಿತು. ದೇಶದಲ್ಲಿ ಪ್ರವರ್ತಿಸುತ್ತಿದ್ದ ಎಲ್ಲ ಖಾಸಗಿ ಜೀವವಿಮಾ ಸಂಸ್ಥೆಗಳನ್ನು 1957ರಲ್ಲಿ, ಸಿ. ಡಿ. ದೇಶಮುಖ್ ಹಣಕಾಸು ಸಚಿವರಾಗಿದ್ದ ವೇಳೆ 'ರಾಷ್ಟ್ರೀಕರಿಸಿ ಒಂದೇ ಸಂಸ್ಥೆಯಾಗಿ ನೆಲೆಗೊಳಿಸಿದ ವೇಳೆ ವೈಯಕ್ತಿಕ ವಿಮೆಯ ಮೊತ್ತ 1374 ಕೋಟಿ ರೂಪಾಯಿ ಇದ್ದುದು 1985ರ ವೇಳೆಗೆ 33,950 ಕೋಟಿ ರೂಪಾಯಿ ಆಗಿ ಬೆಳೆದಿದೆ. 1984–85ನೇ ಸಾಲಿನಲ್ಲಿ ವೈಯಕ್ತಿಕ ಜೀವವಿಮೆ ಕ್ಷೇತ್ರದಲ್ಲಿ ಹೊಸದಾಗಿ ಮಾಡಲಾದ ವ್ಯವಹಾರದ ಮೊತ್ತ 5398.57 ಕೋಟಿ ರೂಪಾಯಿಗಳು. 83–84ನೇ ಸಾಲಿನಲ್ಲಿ ಹೊಸ ವ್ಯವಹಾರದ ಮೊತ್ತ 4415.28 ಕೋಟಿ ರೂಪಾಯಿ ಆಗಿತ್ತು. ಗುಂಪು ವಿಮೆ ರಂಗದಲ್ಲಿಯೂ ನಿಗಮವು ವರ್ಷವುರುಳಿದಂತೆ ಹೆಚ್ಚೆಚ್ಚು ಹೊಸ ವ್ಯವಹಾರ ನಡೆಸುತ್ತಿದೆ ಎಂಬುವ [illegible]. 1984–85ರಲ್ಲಿ ಸಮಗ್ರ ವ್ಯವಹಾರದಲ್ಲಿ ಹೆಚ್ಚಳವು ಶೇಕಡಾ 15.07 ಆಗಿತ್ತು.

ಸರಕಾರಿ ಕ್ಷೇತ್ರದ ಸಂಸ್ಥೆಯೊಂದು ಇಂತಹ ಸಾಧನೆಯನ್ನು ನಡೆಸಿದರೆ ಭಾರತದ ಸಂದರ್ಭದಲ್ಲಿ ಒಂದು ದೊಡ್ಡ ಸುದ್ದಿಯೇ ಆಗುತ್ತದೆ. ಆದರೆ ಜೀವ ವಿಮೆಯ ವಿಚಾರದಲ್ಲಿ ಮಾತ್ರ ಅದು ಮಾಡಿದ ಸಾಧನೆಯು ಮಾಡಬೇಕಾದ ಕೆಲಸಕ್ಕೆ ಹೋಲಿಸಿದರೆ ತುಂಬಾ ಜುಜುಬಿ. ಈ ಸಂಸ್ಥೆಯ ನೀತಿ–ನಿಯಮಗಳಲ್ಲಿ ಇರುವ ದೋಷಗಳೇ ಇದಕ್ಕೆ ಕಾರಣವೆಂದು ಹೇಳಬೇಕಾಗಿದೆ.

ಭಾರತದ ಜನಸಮುದಾಯ ಇಂದು ಮೂವತ್ತು ವರ್ಷಗಳ ಕೆಳಗೆ ಇದ್ದಂತಿಲ್ಲ. ಭಾರತೀಯರ ಸರಾಸರಿ ಆಯುಸ್ಸು ಹೆಚ್ಚಿದೆ; ಸಾವಿನ ದರವು ಕಡಿಮೆಯಾಗಿದೆ. ಜನರ ಆರೋಗ್ಯದಲ್ಲಿ ಆಗಿರುವ ಸುಧಾರಣೆಯೇ ಇದಕ್ಕೆ ಕಾರಣ. ಈ ಬೆಳವಣಿಗೆ ಮುಖ್ಯವಾಗಿ ನಗರ ಪ್ರದೇಶದಲ್ಲಿ ಆಗಿದೆ. ಜನರ ಬದುಕಿಗೊಂದು ಭದ್ರತೆಯೊದಗಿಸುವುದು, ಅನಿರೀಕ್ಷಿತವಾಗಿ ಬರುವ ಅಪಾಯವನ್ನೆದುರಿಸಲು ಅನುಕೂಲ ಮಾಡಿಕೊಡುವುದು ಜೀವವಿಮೆಯ ಮೊದಲ ಉದ್ದೇಶವಾದರೂ ಈ ಒಂದೇ ಉದ್ದೇಶಕ್ಕಾಗಿ ಜನರು ತಮ್ಮ ದುಡಿಮೆಯ ಒಂದು ಗಮನಾರ್ಹ ಪಾಲನ್ನು ಅವರ ಪಾಲಿಗೆ ವಸ್ತುಶಃ ಅನುತ್ಪಾದಕವಾದಂತಹ, ಹೇಳಿಕೊಳ್ಳುವಂತಹ ಬೆಳವಣಿಗೆಯೇ ಇಲ್ಲದ ಜಡವಸ್ತುವಾಗಿ ಇರಿಸಬೇಕೆಂದು ನಿರೀಕ್ಷಿಸುವುದು ಅನ್ಯಾಯವೆನಿಸುತ್ತದೆ. ಇದೊಂದು ಸರಕಾರವೇ ನಡೆಸುವ ಸಾಮಾಜಿಕವೂ ಆರ್ಥಿಕವೂ ಆದ ಶೋಷಣೆಯೇ ಆಗಿದೆ.

ಹಣ ಹೂಡಬೇಕು ಎನ್ನುವವರಿಗೆ ಇಂದು ಹಲವಾರು ದಾರಿಗಳಿವೆ. ಸರಕಾರದ ಭದ್ರತೆಯೇ ಇರುವಂತಹ ರಾಷ್ಟ್ರೀಕೃತ ಬ್ಯಾಂಕುಗಳೂ, ಸಾರ್ವಜನಿಕ ರಂಗದ ಸಂಸ್ಥೆಗಳೂ, ಯುನಿಟ್ ಟ್ರಸ್ಟಿನಂತಹ ಹಣಕಾಸು ಸಂಸ್ಥೆಗಳೂ ಲಾಭಕರವಾದಂತಹ ಇಳುವರಿಯನ್ನು ಠೇವಣಿಯ ಮೇಲೆ ಕೊಡುತ್ತವೆ. ಸರಕಾರದ ಉಳಿತಾಯ ಸರ್ಟಿಫಿಕೇಟುಗಳೂ ಅನುಕೂಲಕರವಾಗಿವೆ. ಖಾಸಗಿ ರಂಗದ ಅಭಿವೃದ್ಧಿ ಪರ ಕಂಪೆನಿಗಳ ಶೇರುಗಳಲ್ಲಿ ತೊಡಗಿಸಿದವರಿಗೆ ಹಣದ ಕೊಯ್ಲು ಸಿಗುತ್ತವೆ.

ಜೀವ ವಿಮಾ ನಿಗಮವು ಈಗಿನದಕ್ಕಿಂತ ಕೊಂಚ ಹೆಚ್ಚು ಕಲ್ಪನಾಶೀಲವಾಗುತ್ತಿದ್ದರೆ ಹೀಗೆ ಬೇರೆ ವಿಧಾನಗಳಲ್ಲಿ ಹೂಡಿಕೆಯಾಗುವ ಇನ್ನೂ ಸಾವಿರಾರು ಕೋಟಿ ರೂಪಾಯಿಗಳನ್ನು ತನ್ನಲ್ಲಿಗೆ ಸೆಳೆಯಬಹುದಾಗಿತ್ತು. ಆ ಮೂಲಕ ಹಣ ಹೂಡಿದವರ ಬದುಕಿಗೆ ಭದ್ರತೆಯನ್ನು ನೀಡಬಹುದಾಗಿತ್ತು.

ಆದರೆ ಅದು ಜೀವ ವಿಮಾ ನಿಗಮದಿಂದ ಸಾಧ್ಯವಾಗಿಲ್ಲ. ಈ ದೇಶದಲ್ಲಿ ನಿಯಮಿತವಾಗಿ ಮಾಸಿಕ ವೇತನ ಪಡೆಯುವವರ ಪೈಕಿ ಶೇಕಡಾ 40ರಷ್ಟನ್ನೂ ಕೂಡ ಜೀವವಿಮೆಯು ತಲುಪಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಜೀವವಿಮೆಯ ಹೇಳ ಹೆಸರೇ ಇಲ್ಲ. ಮೂರು ದಶಕಗಳ, ಸ್ಪರ್ಧೆಯೇ ಇಲ್ಲದಂತಹ, ಊರಿಗೆಲ್ಲ ತಾನೇ ಸಾರ್ವಭೌಮನಾದಂತಹ ಪರಿಸ್ಥಿತಿಯಲ್ಲಿಯೂ ನಿಗಮದ ಸಾಧನೆ ಹೀಗಾದುದಕ್ಕೆ ಅದರಲ್ಲಿ ಹಣ ಹೂಡಿಕೆಯು ಸಾರ್ವಜನಿಕರಿಗೆ ಏನೇನೂ ಆಕರ್ಷಕವೆನಿಸದಿರುವುದೇ ಕಾರಣ. ಗ್ರಾಹಕರ ಬಗ್ಗೆ ಪಾಲಿಸಿದಾರರ ಬಗ್ಗೆ ನಿಗಮ ಗಮನ ಹರಿಸಬೇಕು. ಈ ಸಂಸ್ಥೆ ತನ್ನ ನೌಕರರನ್ನು ಬಲು ಚೆನ್ನಾಗಿ ನೋಡಿಕೊಳ್ಳುತ್ತಿರುವುದು ನಿಜ. ಅವರಿಗೆ ಅನೇಕ ಸೌಲಭ್ಯಗಳಿವೆ. ಅವೆಲ್ಲ ಇರಲೇ ಬೇಕು. ಅಂತೆಯೇ ಪಾಲಿಸಿದಾರರ ಹಿತದ ಬಗ್ಗೆಯೂ ಸಂಸ್ಥೆ ನಿಗಾವಹಿಸಬೇಕು. ಪಾಲಿಸಿಯೊಂದು ಫಲಪ್ರಾಪ್ತವಾದ ಕಾಲದಲ್ಲಿ ಕೈಗೆ ಬರುವ ಮೊತ್ತ ಅಂದಿನ ರೂಪಾಯಿ ಬೆಲೆಗೆ ಹೋಲಿಸಿದರೆ ಜುಜುಬಿ ಎಂದೆನಿಸಬಾರದು.

ಈಗೇನೋ 30ನೇ ವಾರ್ಷಿಕದ ಸಂದರ್ಭದಲ್ಲಿ ಸಂಸ್ಥೆಯು ಪ್ರೀಮಿಯಂ ಮೇಲಿನ ಬೋನಸ್ಸನ್ನು ಏರಿಸಿದೆ. ಇದು ಪ್ರೀಮಿಯಂ ಕಡಿಮೆ ಮಾಡಬೇಕು ಎಂಬ ಸಾರ್ವತ್ರಿಕ ಆಗ್ರಹಕ್ಕೊಂದು ಉತ್ತರ ಅಷ್ಟೆ. ಆದರದು ಉತ್ತರವಾಗಲಾರದು. ಪ್ರೀಮಿಯಂ ಮೊತ್ತವೇ ಕಡಿಮೆಯಾಗಬೇಕು. ಆಗ ಮಾತ್ರ ಜೀವವಿಮೆಯು ಆಕರ್ಷಕವಾದೀತು.

ಜನೋಪಯೋಗಿ ಯೋಜನೆಗಳಿಗೆ ನಿಗಮವು ಹಣ ಸಹಾಯ ಮಾಡುತ್ತದೆ. ಅದು ಸ್ವಾಗತಾರ್ಹವೇ. ಈ ನೆರವು ಪಾಲಿಸಿದಾರರಿಗೂ ಸೂಕ್ತ ಅಗತ್ಯಗಳಿಗೆ ದೊರೆಯಬೇಕು. ವಸತಿ ನಿರ್ಮಾಣದಂತಹ ಸಂಪತ್ತು ಹುಟ್ಟಿಸುವ ಕಾರ್ಯಕ್ಕೆ ಇದು ಸುಲಭ ಶರತ್ತಿನಲ್ಲಿ ದೊರೆಯುವಂತಾಗಬೇಕು. ವಸತಿ ನಿರ್ಮಾಣಕ್ಕೆ ಈಗೇನೋ ಒಂದು ಯೋಜನೆ ನಿಗಮದಲ್ಲಿ ಅಸ್ತಿತ್ವದಲ್ಲಿದೆ. ಆದರೆ ಇದರ ಶರತ್ತುಗಳು ಖಾಸಗಿ ಬಡ್ಡಿ ಸಾಹುಕಾರರನ್ನು ಮೀರಿಸುವಂತಹದ್ದೆಂದು ಪಾಲಿಸಿದಾರರು ದೂರುತ್ತಿದ್ದಾರೆ. ಸರಕಾರಿ ಸ್ವಾಮ್ಯದ ಒಂದು ಸಂಸ್ಥೆಯಲ್ಲಿ ಇಂತಹ ದೂರುಗಳಿಗೆ ಅವಕಾಶವಿರಬಾರದು.

ಮುಂಗಾರು

ಶನಿವಾರ, ಸೆಪ್ಟೆಂಬರ್ 6, 1986

ಕ್ಷೋಭೆಯ ಕುಂಡಕ್ಕೆ ನೂಕಬೇಡಿ

ಹಿಂದುಳಿದ ವರ್ಗಗಳು ಯಾರೆಲ್ಲ, ಅವರಿಗೆಲ್ಲ ಸರಕಾರಿ ಸೌಲಭ್ಯಗಳಲ್ಲಿ ಏನೆಲ್ಲ ಮೀಸಲಾತಿ ಅಗತ್ಯ ಎಂದು ಮರು ಪರಿಶೀಲನೆ ಮಾಡಲು ರಾಜ್ಯ ಸರಕಾರ ನೇಮಿಸಿದ್ದ ಟಿ.ವೆಂಕಟಸ್ವಾಮಿ ನೇತೃತ್ವದ ಸಮಿತಿಯು ಸಲ್ಲಿಸಿದ ವರದಿಯು ಈಗಾಗಲೇ ರಾಜಕೀಯ ಕ್ಷೋಭೆಗೆ ಕಾರಣವಾಗಿದೆ.

ಇಂತಹ ರಾಜಕೀಯ ಸಾಮಾಜಿಕ ಕ್ಷೋಭೆ ಉಂಟಾದೀತು ಎಂಬುದು ವರದಿಯ ಶಿಫಾರಸುಗಳನ್ನು ನೋಡಿದವರಿಗೆ ಮೊದಲ ನೋಟಕ್ಕೇ ಅನಿಸಿತ್ತು. ಇದೀಗ ಈ ಭಯ ಸಾಕಾರಗೊಂಡಿದೆ. ಮಂಡ್ಯದಲ್ಲಿ ಬಂದ್ ನಡೆದಿದೆ. ಹಿಂಸೆಯೂ ಕಾಣಿಸಿಕೊಂಡಿದೆ. ಹಲವೆಡೆ ವಿದ್ಯಾರ್ಥಿಗಳು ಚಳವಳಕ್ಕೆ ಇಳಿದಿದ್ದಾರೆ. ಬೆಂಗಳೂರಲ್ಲಿ ವಿದ್ಯಾರ್ಥಿ ಅಶಾಂತಿ ಕಾಣಿಸಿಕೊಳ್ಳುವ ಸೂಚನೆಗಳಿವೆ. ಈ ಅಶಾಂತಿಯು ಬೇಗ ರಾಜ್ಯದ ಇತರೆಡೆಗಳಿಗೂ ಹಬ್ಬಲು ಹೆಚ್ಚು ಕಾಲ ಬೇಕಾಗಲಾರದು.

ಈ ಸಾಮಾಜಿಕ, ರಾಜಕೀಯ ಕ್ಷೋಭೆ ತಾನಾಗಿ ಬಂದುದಲ್ಲ: ಆಳುವವರು ಬುದ್ಧಿಪೂರ್ವಕ ಆಹ್ವಾನಿಸಿಕೊಂಡದ್ದು. ಈ ವಿದ್ಯಮಾನಕ್ಕೆ ಅವರು ಬೀಜಾರೋಪಣ ಮಾಡಿದಾಗ ಬಲು ಬುದ್ಧಿವಂತಿಕೆಯ, ಜಾಣತನದ, ದೊಡ್ಡದಾದ ರಾಜಕೀಯ ಪಟ್ಟು ಹಾಕುತ್ತಿದ್ದೇವೆ ಎಂದು ಎಣಿಕೆ ಹಾಕಿರಬಹುದು. ರಾಜ್ಯದ ರಾಜಕೀಯದಲ್ಲಿ ವರ್ಚಸ್ವಿಯೂ ಪ್ರಭಾವಿಯೂ ಆಗಿ ಕಾರ್ಯವೆಸಗಿದ ಹಿಂದುಳಿದ ಒಕ್ಕಲಿಗ ಜನಾಂಗದ ರಾಜಕೀಯ ವರ್ಚಸ್ಸನ್ನು ಕುಗ್ಗಿಸುವ ತಂತ್ರಗಾರಿಕೆ ಇದಾಗಿತ್ತು. ವಿವಿಧ ಜಾತಿಗಳವರ ಹಿಂದುಳಿದಿರುವಿಕೆಯ ಮರು ಪರಿಶೀಲನೆ ಮಾಡಿದ ವೆಂಕಟಸ್ವಾಮಿ ಆಯೋಗವೂ ಆಳುವವರು ಬಯಸಿದಂತೆಯೇ ಒಕ್ಕಲಿಗರನ್ನು ಹಿಂದುಳಿದವರ ಪಟ್ಟಿಯಿಂದ ಕಿತ್ತು ಹಾಕಲು ಶಿಫಾರಸು ಮಾಡಿತು. ಜತೆಗೆ ಇನ್ನೂ ಕೆಲವಾರು ಜಾತಿಗಳವರನ್ನು ಈ ಯಾದಿಯಿಂದ ತೆಗೆಯಬೇಕೆಂದು ಶಿಫಾರಸು ಸಲ್ಲಿಸಿತು. ಪರಿಣಾಮವಾಗಿ ಕರ್ನಾಟಕದಲ್ಲಿ ಎಲ್ಲ ವರ್ಗಗಳೂ ಸೇರಿದಂತೆ ಶೇಕಡಾ ಅರುವತ್ತೆಂಟರಷ್ಟಿದ್ದ ಮೀಸಲಾತಿಯು ಶೇಕಡಾ 45ಕ್ಕೆ ಇಳಿದಿದೆ. ಇದರರ್ಥ ಉಳಿದ ಶೇಕಡಾ 55ರಷ್ಟು ಸರಕಾರಿ ಹುದ್ದೆಗಳಿಗೂ ಶೈಕ್ಷಣಿಕ ಸೀಟುಗಳಿಗೂ ಹಿಂದುಳಿದ ಸಾಮಾಜಿಕರೆಲ್ಲ ಸಾಮಾಜಿಕವಾಗಿಯೂ ಬೌದ್ಧಿಕವಾಗಿಯೂ ಮುಂದುವರಿದ ಜನಾಂಗಗಳೊಡನೆ ಸ್ಪರ್ಧಿಸಬೇಕಾಗುವುದು.

ಇಂಥ ವಾತಾವರಣ ಕರ್ನಾಟಕದಲ್ಲಿ ಈಗ ಉಂಟೇ ಎಂದು ವಿಚಾರವಂತರು ಪರಿಶೀಲಿಸಬೇಕು. ವಿವೇಕಿಯಾದ ಯಾರೊಬ್ಬನಿಗೂ ಈ ರಾಜ್ಯದ ಒಕ್ಕಲಿಗರೂ ಸೇರಿ ಹಿಂದುಳಿದ ಜಾತಿಗಳವರು ಮುಂದುವರಿದಿರುವುದು ಕಾಣಸಿಗಲಾರದು.

ಅಧಿಕಾರಕ್ಕಾಗಿ ನಡೆಯುವ ರಾಜಕಾರಣಗಳ ಒಳರಾಜಕೀಯಕ್ಕೆ, ತಂತ್ರಗಾರಿಕೆಗೆ ಹಿಂದುಳಿದವರು ಬಲಿ ತೆರಬೇಕಾಗಿ ಬಂದ ವಿದ್ಯಮಾನ ಇದಾಗಿದೆ. ಹಿಂದುಳಿದ ಒಕ್ಕಲಿಗರು ಮೀಸಲಾತಿ ಅವಕಾಶವನ್ನು ಕಳೆದುಕೊಳ್ಳುವ ಭೀತಿ ಇಂದು ಬಂದಿದೆ. ಅದರ ಪರಿಣಾಮವೇ ಈಗ ನಡೆಯುತ್ತಿರುವ ಹಾಗೂ ಮುಂದೆ ಬಲಗೊಳ್ಳಬಹುದಾದ ಆಂದೋಲನ. ಇದರ ಪರಿಣಾಮ ಖಂಡಿತಾ ಜನಜೀವನದ ಮೇಲೆ ಆಗುತ್ತದೆ. ಅನ್ನ ಅರಿವೆಗಳಿಗಾಗಿ ದಿನವೂ ದುಡಿಯಬೇಕಾದ ಸಾಮಾನ್ಯ ಜನರು ಈ ಕ್ಷೋಭೆಯಿಂದ ಸಂಕಟಪಡುವಂತಾಗುತ್ತದೆ.

ಯಾರದೋ ಸ್ವಾರ್ಥಕ್ಕಾಗಿ ಈ ರಾಜ್ಯವನ್ನು ಗುಜರಾತಿನಲ್ಲಿ ನಡೆಯುತ್ತಿರುವಂತಹ ಕ್ಷೋಭೆಯ ಕುಂಡಕ್ಕೆ ನೂಕುವುದು ಬೇಡ. ವೆಂಕಟಸ್ವಾಮಿ ಆಯೋಗದ ವರದಿಯನ್ನು ಕಸದ ಬುಟ್ಟಿಗೆ ಎಸೆದು ಬಿಡಿ. ಹಾವನೂರು ಆಯೋಗದ ಶಿಫಾರಸುಗಳನ್ನು ಪ್ರಾಮಾಣಿಕವಾಗಿ ಕನಿಷ್ಠ ಹತ್ತು ವರ್ಷಗಳ ಕಾಲಕ್ಕಾದರೂ ಅನುಷ್ಠಾನಕ್ಕೆ ತನ್ನಿ. ಹಿಂದುಳಿದವರ, ಮುಂದುವರಿದವರ ಪರಿಸ್ಥಿತಿಯ ಸಮೀಕ್ಷೆಯನ್ನು ಆಮೇಲೆ ಮಾಡಿ.

ಇದಾವುದೂ ಬೇಡವೆಂದಿದ್ದರೆ ಮೀಸಲಾತಿಯನ್ನು ಜಾತಿ-ಜಾತಿಗಳ ಸಂಖ್ಯಾ ಬಲದ ನೆಲೆಯಲ್ಲಿ ಮಾಡಿ. ಅದಕ್ಕಾಗಿ ಜಾತಿನೆಲೆಯಲ್ಲಿ ಜನಗಣತಿ ನಡೆಸಿ.

ಮುಂಗಾರು
ಭಾನುವಾರ, ಸೆಪ್ಟೆಂಬರ್ 7, 1986

ಹಿಂಸೆ ಸಲ್ಲದು

ಪಾಕಿಸ್ತಾನದ ಕರಾಚಿ ವಿಮಾನ ನಿಲ್ದಾಣದಲ್ಲಿ ಸುಮಾರು 400ಕ್ಕೂ ಹೆಚ್ಚು ಪ್ರಯಾಣಿಕರಿದ್ದ ಅಮೆರಿಕದ ಪ್ರಯಾಣಿಕ ವಿಮಾನವೊಂದನ್ನು ನಾಲ್ಕು ಮಂದಿ ಭಯೋತ್ಪಾದಕರು ವಶಕ್ಕೆ ತೆಗೆದುಕೊಂಡು ಅನೇಕ ಮಂದಿ ಪ್ರಯಾಣಿಕರ ಸಾವು ನೋವಿಗೆ ಕಾರಣರಾಗಿದ್ದಾರೆ.

ನಿಜವಾಗಿ ವಿಮಾನದೊಳಗೆ ಏನು ನಡೆದಿದೆ ಎಂಬ ಚಿತ್ರ ಇನ್ನೂ ಸ್ಪಷ್ಟವಿಲ್ಲ. ನಾಲ್ಕು ಮಂದಿ ಗೆರಿಲ್ಲಾಗಳು ವಿಮಾನವು ನಿಲ್ದಾಣದಲ್ಲಿ ನಿಂತಿರುವಂತೆಯೇ ಅದರ ಒಳಹೊಕ್ಕು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಪ್ರಯಾಣಿಕರನ್ನು ಒಬ್ಬೊಬ್ಬರನ್ನಾಗಿ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದಾರೆ. ಅವರು ಹೀಗೆ ತಮ್ಮ ಬೆದರಿಕೆಯನ್ನು ಸಾಕಾರಗೊಳಿಸಲು ತೊಡಗಿದ ನಂತರ ಪಾಕಿಸ್ತಾನೀ ಕಮಾಂಡೋಗಳು ವಿಮಾನಕ್ಕೆ ನುಗ್ಗಿ ಕಾರ್ಯಾಚರಣೆ ನಡೆಸಿದರೇ ಅಥವ ಕಮಾಂಡೋ ಕಾರ್ಯಾಚರಣೆಯ ಪರಿಣಾಮವಾಗಿ ಭಯೋತ್ಪಾದಕರು ಗುಂಡೆಸೆದರೇ ಎಂಬುದು ಇನ್ನೂ ಖಚಿತವಾಗಿಲ್ಲ. ಅಂತೂ ಪ್ರಯಾಣಿಕರ ಪೈಕಿ ಹದಿನೈದಕ್ಕೂ ಹೆಚ್ಚು ಮಂದಿ ಸತ್ತಿರುವುದಂತೂ ನಿಜ. ಅದರಲ್ಲಿ 15 ಮಂದಿ ಭಾರತೀಯರು ಎನ್ನಲಾಗಿದೆ. ರಾಷ್ಟ್ರೀಯತೆ ಯಾವುದೇ ಇರಲಿ, ಜನರು ಯಾರೇ ಆಗಿರಲಿ ಜೀವಹಾನಿ ಖಂಡನೀಯ.

ಉದ್ದೇಶ ಎಷ್ಟು ಮಹತ್ವವೋ ಅದನ್ನು ಸಾಧಿಸುವ ದಾರಿಯೂ ಅಷ್ಟೇ ಮಹತ್ವದ್ದು. ಹಿಂಸೆ ಸರ್ವಥಾ ಸಲ್ಲದು. ಇದು ಜಗತ್ತಿಗೆ ಮಹಾತ್ಮಾ ಗಾಂಧೀಜಿ ಕಲಿಸಿದ ಪಾಠ. ಇಂದು ಪ್ರಪಂಚದ ಬಹುಮಂದಿ ಈ ದಾರಿಯಲ್ಲಿ ನಡೆಯಲು ಪ್ರಯತ್ನಿಸುತ್ತಿರುವಂತೆಯೇ ಹಿಂಸೆಯ ದಾರಿಯನ್ನು ಹಿಡಿದವರೂ ಇದ್ದಾರೆ. ಹಿಂಸೆಯ ದಾರಿ ಯಾರಿಗೂ ಎಂದೂ ಒಳಿತನ್ನು ಮಾಡದು.

ಇಂಥ ಆಂದೋಲನಗಳ ಉದ್ದೇಶ ತಪ್ಪೆಂದಲ್ಲ. ಹೋರಾಟಗಳು ಜನ ಸಮುದಾಯಗಳ ನೋವಿನ ಬಸಿರಿನಿಂದ ಹುಟ್ಟಿರಬಹುದು. ದಮನ, ದಬ್ಬಾಳಿಕೆ ಶೋಷಣೆ ಹಾಗೂ ಅನ್ಯಾಯಗಳ ವಿರುದ್ಧದ ದಂಗೆಯೇ ಇವಾಗಿರಬಹುದು. ಆದರೆ ಅನ್ಯಾಯಕ್ಕೆ ಅನ್ಯಾಯ ಎಂದಿಗೂ ಸಮರ್ಥನೀಯವಲ್ಲ. ಅನ್ಯಾಯವನ್ನು ಸರಿಪಡಿಸಲು ನ್ಯಾಯದ ದಾರಿ ಹುಡುಕಬೇಕು. ಅದೇ ಸುಗಮ.

ಈ ಜಗತ್ತಿನಲ್ಲಿ ಹಿಂಸೆಯಿದೆ. ಹೋರಾಟಕ್ಕೆ ಅನೇಕ ಮಂದಿ ಅದನ್ನು ಉಪಯೋಗಿಸುತ್ತಿದ್ದಾರೆ ಎಂದು ತಿಳಿದೂ ಮೈಮೇಲೆ ಎಚ್ಚರವಿಲ್ಲದವರಂತೆ. ಬೇಜವಾಬ್ದಾರಿಯಿಂದ ವ್ಯವಹರಿಸುವವರು ಇರುವುದು ಶೋಚನೀಯ. ಕರಾಚಿಯಲ್ಲಿ ಆಗಿರುವುದು ಇದೇ ವಿದ್ಯಮಾನ. ಅಲ್ಲಿನ ವಿಮಾನ ನಿಲ್ದಾಣದಲ್ಲಿ ಯಾರು ಯಾವಾಗ ಬೇಕಿದ್ದರೂ ಯಾವುದೇ ವಿಮಾನದ ಬಳಿಸಾರಲು ಸಾಧ್ಯವಿತ್ತೆಂಬುದನ್ನು ನಿನ್ನೆಯ ಘಟನೆ ಸೂಚಿಸುತ್ತದೆ. ದುಷ್ಕರ್ಮಿಗಳಿಗೆ ಅಧಿಕಾರಿಗಳ ಕುಮ್ಮಕ್ಕು ಇತ್ತೆಂಬ ಸೂಚನೆಯೂ ಉಂಟು. ಪ್ರಧಾನಮಂತ್ರಿ ರಾಜೀವ ಗಾಂಧಿಯವರೂ ಇಂಥ ಮಾತನ್ನು ಹೇಳಿದ್ದಾರೆ. ಹಿಂದೊಮ್ಮೆ ದುಷ್ಕರ್ಮಿಗಳು ಭಾರತೀಯ ವಿಮಾನವೊಂದನ್ನು ಅಪಹರಿಸಿದ ವೇಳೆ ಪಾಕ್ ಭದ್ರತಾ ಸಿಬ್ಬಂದಿಗಳು ಅವರಿಗೆ ಆಯುಧಗಳನ್ನು ಕೊಟ್ಟದ್ದನ್ನು ರಾಜೀವ್ ಉಲ್ಲೇಖಿಸಿದ್ದಾರೆ.

ಬೇಜವಾಬ್ದಾರಿಯು ಪಾಕಿಸ್ತಾನಕ್ಕೆ ಮಾತ್ರ ಸೀಮಿತವಾದುದಲ್ಲ. ಭಾರತೀಯರಾದ ನಾವೂ ಅದರಲ್ಲಿ ಹಿಂದಿಲ್ಲ. ನಮ್ಮ ವಿಮಾನ ನಿಲ್ದಾಣಗಳಲ್ಲಿಯೂ ಯಾರು ಬೇಕಿದ್ದರೂ ವಿಮಾನ ಏರುವುದು ಸಾಧ್ಯ. ಭದ್ರತಾ ವ್ಯವಸ್ಥೆ ಅಂಥ ದುಃಸ್ಥಿತಿಯಲ್ಲಿದೆ. ಈ ವ್ಯವಸ್ಥೆಯನ್ನು ಸುಧಾರಿಸಬೇಕು. ಸಾಮಾನ್ಯ ಜನರ ಜೀವಕ್ಕೆ ಬೆಲೆಯಿದೆ. ಜನರಬದುಕಿನ ಭದ್ರತೆಯ ಹೊಣೆಗಾರಿಕೆ ವಹಿಸಿಕೊಂಡವರು ತಮ್ಮ ಕರ್ತವ್ಯ ನಿರ್ವಹಿಸಬೇಕು. ಅವರು ಕರ್ತವ್ಯಚ್ಯುತರಾದರೆ ಕರಾಚಿಯಲ್ಲಿ ಆದಂತೆ ಅಮಾಯಕರು. ನಿರಪರಾಧಿಗಳು ಜೀವಬಲಿ ನೀಡಬೇಕಾಗುತ್ತದೆ.

ಮುಂಗಾರು

ಗುರುವಾರ, ಸೆಪ್ಟೆಂಬರ್ 11, 1986

ಕ್ಷುಲ್ಲಕ ರಾಜಕೀಯ ಬೇಡ

ಅಭಿವೃದ್ಧಿ ಕಾಮಗಾರಿಗಳು ಶೀಘ್ರ ಗತಿಯಲ್ಲಿ ನಡೆಯದಂತೆ ಸರಕಾರಿ ಇಲಾಖೆಯ ಕಾನೂನು ಹಾಗೂ ನಿಯಮಗಳು ಅಡ್ಡಿಪಡಿಸುತ್ತವೆ ಎಂದು ಕರ್ನಾಟಕದ ಲೋಕೋಪಯೋಗಿ ಸಚಿವ ಎಚ್. ಡಿ. ದೇವೇಗೌಡ ಅವರು ಹೇಳಿದ್ದಾರೆ.

ಟೆಂಡರು ಕಾಮಗಾರಿ ಪ್ರಕಟಣೆ ನಿರ್ಮಾಣ,ಮಂಜೂರು ಮಾಡಿ ಕೊಳ್ಳುವ ಖಾಸಗಿ ಗುತ್ತಿಗೆದಾರರ ಕೆಲಸ, ಪರಿಶೀಲನೆ ಇತ್ಯಾದಿ ಕಾರ್ಯಕ್ಕೆ ಕಾಲಾವಕಾಶ ತಗಲುವುದರಿಂದ ಅಭಿವೃದ್ಧಿ ಕಾಮಗಾರಿಗಳಲ್ಲಿ ವಿಳಂಬ ಉಂಟಾಗುತ್ತದೆ ಎಂದು ದೇವೇಗೌಡರು ಹೇಳುತ್ತಾರೆ. ಕಾಮಗಾರಿಗಳನ್ನು ಖಾಸಗಿ ಗುತ್ತಿಗೆದಾರರಿಗೆ ಕೊಡದೆ ಇಲಾಖೆಯೇ ನಿರ್ವಹಿಸುವುದರಿಂದ ವಿಳಂಬವನ್ನು ನಿವಾರಿಸುವುದು ಸಾಧ್ಯವಾದರೂ ದೊಡ್ಡ ಕಾಮಗಾರಿಗಳನ್ನು ಇಲಾಖೆಯೇ ನೇರವಾಗಿ ನಡೆಸುವುದಕ್ಕೆ ಕಾನೂನು ಅಡ್ಡ ಬರುತ್ತದೆಂದೂ ಅವರು ಹೇಳಿದ್ದಾರೆ.

ಅಭಿವೃದ್ಧಿ ಕಾರ್ಯಗಳು ತ್ವರಿತವಾಗಿ ಅನುಷ್ಠಾನಕ್ಕೆ ಬರುವುದಕ್ಕೆ ಸರಕಾರಿ ನಿಯಮಗಳು ಅಡ್ಡಿಯಾಗಿವೆ ಎಂಬುದು ಕೊಂಚ ಮಟ್ಟಿಗೆ ಸರಿ. ತಮ್ಮ ಇಲಾಖೆ ಭ್ರಷ್ಟಾಚಾರದ ಇಲಾಖೆಯೆಂದೇ ಕುಖ್ಯಾತವಾಗಿದೆ ಎಂದು ದೇವೇಗೌಡರು ಹೇಳಿದ್ದಾರೆ. ವಿಳಂಬಕ್ಕೆ ಭ್ರಷ್ಟಾಚಾರವೂ ಕಾರಣ ಎಂಬುದೂ ಅವರ ಈ ಮಾತಿನಿಂದ ಖಚಿತವಾಗುತ್ತದೆ. ಕಾನೂನು ಹಾಗೂ ನಿಯಮಗಳು ಇರುವುದು ನಮ್ಮ ಆಡಳಿತೆಯು ನಿಯಮವನ್ನು ಮೀರಿ ಹೋಗಬಾರದು ಎಂಬುದಕ್ಕಾಗಿ. ಸ್ವಾರ್ಥ ಸಾಧಕ ಶಕ್ತಿಗಳು ನ್ಯಾಯವನ್ನು ಮುರಿದು ಅನ್ಯಾಯವನ್ನು ಮೆರೆಯುವುದಕ್ಕೆ ಅವಕಾಶಬಾರದು ಎಂಬುದಕ್ಕಾಗಿ. ದೇಶದಲ್ಲಿ ಕಾನೂನಿನಾಳ್ವಿಕೆಯ ಪರಂಪರೆಯನ್ನು ಬೆಳೆಸುವುದಕ್ಕಾಗಿ. ಈ ಪರಂಪರೆ ಬೆಳೆದರೆ, ಹಾಗೂ ಅದರ ಜತೆಗೆ ಕಾನೂನು ಹಾಗೂ ನಿಯಮಗಳ ಮುಂದೆ ಎಲ್ಲರೂ ಸಮಾನರೆಂಬ ತತ್ವವು ಆಚರಣೆಗೆ ಬಂದರೆ ಅನ್ಯಾಯಕ್ಕೆ ಅವಕಾಶಗಳು ಕಡಿಮೆಯಾಗುತ್ತವೆ. ಭ್ರಷ್ಟಾಚಾರವೂ ಕಡಿಮೆಯಾಗುತ್ತದೆ.

ಆದ್ದರಿಂದ ಇಲಾಖೆಯ ಕಾರ್ಯ ನಿರ್ವಹಣೆಯನ್ನು ಚುರುಕುಗೊಳಿಸುವುದಕ್ಕೆ ಆ ಮೂಲಕ ಅಭಿವೃದ್ಧಿ ಕಾರ್ಯವನ್ನು ತ್ವರಿತವಾಗಿ ಅನುಷ್ಠಾನಕ್ಕೆ ತರುವುದಕ್ಕೆ ಕಾನೂನನ್ನೂ ನಿಯಮಗಳನ್ನೂ ಬದಿಗೆ ತಳ್ಳಿ ಒಳದಾರಿಗಳನ್ನು ಹುಡುಕುವ ಪ್ರಯತ್ನ ಹಿತಕರವಲ್ಲ. ಕಾನೂನು ಹಾಗೂ ನಿಯಮಗಳ ಚೌಕಟ್ಟಿನಲ್ಲಿಯೇ ಕೆಲಸವನ್ನು ಚುರುಕುಗೊಳಿಸುವ ಚಿಕಿತ್ಸೆಯನ್ನು ಆಡಳಿತಕ್ಕೆ ನೀಡಬೇಕು. ಜನಪರ ದೃಷ್ಟಿಕೋನವನ್ನು ಆಡಳಿತಕ್ಕೆ ತಂದುಕೊಡಬೇಕು. ಆಡಳಿತಾಧಿಕಾರಿಗಳು ಜನರ ಅಭಿವೃದ್ಧಿಯ ಅಗತ್ಯಗಳಿಗೆ ಸ್ಪಂದಿಸುವಂತಾಗಬೇಕು.

ಅದರ ಜತೆಗೆ ಅಭಿವೃದ್ಧಿ ಕಾರ್ಯಗಳಿಗೆ ಹಣಕಾಸಿನ ಕೊರತೆ ಇಲ್ಲದಂತೆ ನೋಡಿಕೊಳ್ಳಬೇಕು. ಇಂದು ಕರ್ನಾಟಕದಲ್ಲಿ ಆಗಿರುವುದು ಇದೇ ತೊಂದರೆ. ಸರಕಾರದೊಳಗಿನ ಸಣ್ಣತನದ ರಾಜಕೀಯದಿಂದಾಗಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಬೇಕಾದ ಇಲಾಖೆಗಳಿಗೆ ಹಣಕಾಸಿನ ಸೆಲೆ ಬತ್ತಿಹೋಗುವಂತೆ ಆಡಳಿತದ ಆಯಕಟ್ಟಿನ ತಾಣಗಳಲ್ಲಿ ಕೂತ ಮಂದಿ ನೋಡಿಕೊಳ್ಳುತ್ತಿದ್ದಾರೆಂಬ ಆಪಾದನೆಯಿದೆ. 'ದೇವೇಗೌಡರು ಇದೀಗ ಅಭಿವೃದ್ಧಿ ಕಾರ್ಯಕ್ಕೆ ತೊಂದರೆಯಾಗಿದೆ ಎಂದು ದೂರುತ್ತಿರುವುದು ಇದನ್ನೇ ಸೂಚಿಸುತ್ತದೆ. ಕಾಮಗಾರಿಗಳಿಗೆ ತೊಂದರೆಯಾಗಿದೆ ಎಂಬ ಅವರ ಮಾತು ನಿಜ. ಆದರೆ ಅದು ಅವರು ಹೇಳುವಂತೆ ನಿಯಮಗಳ ಅಡ್ಡಿಯಿಂದಾಗಿ ಅಲ್ಲ, ಬದಲಾಗಿ ಹಣದ ಕೊರತೆಯಿಂದಾಗಿ. ಇಂದು ರಾಜ್ಯ ಸರಕಾರದಲ್ಲಿ ಸೇವಾ ಇಲಾಖೆಗಳಿಗೆ ಹರಿಯುವಷ್ಟು ಹಣವೂ ಅಭಿವೃದ್ಧಿ ಕಾರ್ಯಗಳಿಗೆ ಹರಿಯುತ್ತಿಲ್ಲ.

ಜನಹಿತಕ್ಕೆ ಪೂರಕವಾದ, ಭವಿಷ್ಯತ್ ಅಭಿವೃದ್ಧಿಯ ಮೇಲೆ ಕಣ್ಣಿಟ್ಟ ಯಾವ ಆಡಳಿತೆಯಲ್ಲಿಯೂ ಹೀಗಾಗಬಾರದು. ಅಭಿವೃದ್ಧಿಯಲ್ಲಿ ಇಂಥ ರಾಜಕೀಯ ನಡೆಯುತ್ತಿದೆ ಎಂದಾದರೆ ಅದು ಒಳ್ಳೆಯ ಆಡಳಿತೆಯ ಲಕ್ಷಣವಲ್ಲ. ನಾಡಿನ ಅಭಿವೃದ್ಧಿ ವಿಚಾರದಲ್ಲಿ ಕ್ಷುಲ್ಲಕ ರಾಜಕೀಯ ಬೇಡ.

ಮುಂಗಾರು
ಶುಕ್ರವಾರ, ಸೆಪ್ಟೆಂಬರ್ 12, 7036

ಬೆಳೆ ಉಳಿಸಿ

ಕರ್ನಾಟಕ ಮತ್ತೆ ಬರದ ಬೇಗೆಯಲ್ಲಿ ಸಂಕಟ ಪಡಬೇಕಾದ ಸೂಚನೆಗಳೆಲ್ಲವೂ ಈಗ ಕಾಣಿಸುತ್ತಿವೆ. ರಾಜ್ಯದ ಬಯಲು ಸೀಮೆಯಲ್ಲಿಯೂ ಉತ್ತರ ಕರ್ನಾಟಕದಲ್ಲಿಯೂ ಬಿತ್ತನೆಗೆ ಬೇಕಾದಷ್ಟು ಮಳೆ ಬಂದಿದೆ. ಆದರೆ ಆಮೇಲೆ ಮಳೆಯ ಸೂಚನೆಯಿಲ್ಲ. ಅನೇಕ ಕಡೆಗಳಲ್ಲಿ ಬೀಜವೇ ಮೊಳಕೆಯೊಡೆದಿಲ್ಲ. ಹೆಚ್ಚಿನ ಕಡೆಗಳಲ್ಲಿಯೂ ಪೈರು ತೆನೆಗಟ್ಟದೆ ಒಣಗಿ ಹೋಗುತ್ತಿದೆ. ಬಿತ್ತನೆಯಾದ ಸುಮಾರು ಶೇಕಡ 70ರಷ್ಟು ಪೈರು ಹೀಗೆ ನಿಷ್ಪ್ರಯೋಜಕವಾಗಬಹುದೆಂಬ ಸೂಚನೆಗಳಿವೆ. 86–87ರಲ್ಲಿ ರಾಜ್ಯದ ಧಾನ್ಯ ಇಳುವರಿಯ ನಿಗದಿತ ಗುರಿ ಅರ್ಧಾಂಶವೂ ಪೂರೈಸಲಾರದು ಎಂದು ಸರಕಾರದ ಅಧಿಕಾರಿಗಳೇ ಲೆಕ್ಕಹಾಕಿದ್ದಾರೆ.

ಆದರೆ ಈ ಬಾರಿಯ ವಿಚಿತ್ರ ವಿದ್ಯಮಾನವೆಂದರೆ ಕರ್ನಾಟಕದ ಕರಾವಳಿಯಲ್ಲಿ ಮಳೆ ಕೈಕೊಟ್ಟಿರುವುದು. ಬಹುಶಃ ಈ ಬಾರಿ ನಡೆದಂತಹ ವಿದ್ಯಮಾನ ಇಲ್ಲಿ ಶತಮಾನಕ್ಕೊಮ್ಮೆ ನಡೆಯುವುದೂ ಅಪರೂಪದ ವಿಚಾರವಿರಬಹುದು. ಕರಾವಳಿಯಲ್ಲಿ ಮಳೆಗಾಲದ ನಾಲ್ಕು ತಿಂಗಳು ಮಳೆ ಅಷ್ಟೇ ಮಾತ್ರ. ಜೂನ್–ಜುಲೈ ತಿಂಗಳುಗಳಲ್ಲಿ ನೆಲ ಹಸನು ಮಾಡಿ ಗೊಬ್ಬರ ಸೇರಿಸಿ ನಾಟಿ ಮಾಡಿಬಿಟ್ಟರೆ ಮುಗಿಯಿತು. ರೈತ ಆಮೇಲೆ ಕೊಯ್ಲಿಗೆ ತಯಾರಾಗಿ ನಿಂತರೆ ಸಾಕು. ಕರಾವಳಿಯ ಪ್ರತಿವರ್ಷವೂ ಇದೇ ವಿದ್ಯಮಾನ.

ಆದರೆ ಈ ಬಾರಿ ಮಳೆಗಾಲದ ಆರಂಭದಲ್ಲೇ ಮಳೆ ಸಾಕಷ್ಟು ಇರಲಿಲ್ಲ. ಬೆಟ್ಟುಗದ್ದೆಗಳೆಲ್ಲ ಖಾಲಿಯೇ ಉಳಿದಿದ್ದವು. ಅಂತೂ ಆಗಸ್ಟ್ ತಿಂಗಳ ಪೂರ್ವಾರ್ಧದಲ್ಲಿ ಸಾಕಷ್ಟು ಮಳೆ ಬಂತು. ಬೆಟ್ಟು ಗದ್ದೆಗಳ ಶೇಕಡಾ 90ರಷ್ಟು ನಾಟಿಯೂ ನಡೆದದ್ದು ಇದೇ ಅವಧಿಯಲ್ಲಿ. ಮೋಟರ್, ಪಂಪ್‌ಸೆಟ್‌ಗಳ ಸೌಲಭ್ಯವಿರುವ ಮಧ್ಯಮ ಹಾಗೂ ದೊಡ್ಡ ರೈತರು ಮಾತ್ರ ಹೊಳೆಯಿಂದಲೋ ಕೆರೆಯಿಂದಲೋ ನೀರು ಹಾಯಿಸಿ ಮೊದಲೇ ನಾಟಿ ಮಾಡಿರಬಹುದು. ನಾಟಿ ಮುಗಿದು ಪೈರು ಬೆಳೆಯುತ್ತಿರಬೇಕಾದರೆ ನಿರಂತರವಾಗಿ ಇಪ್ಪತ್ತು ದಿನಗಳ ಕಾಲ ಮಳೆಯ ಸೂಚನೆಯೇ ಇಲ್ಲ. ಇದು ಬಲು ಅಪರೂಪದ ವಿದ್ಯಮಾನ. ಕರಾವಳಿ ನೆಲದಲ್ಲಿ ಹಿಂದೆಂದೂ ಹೀಗೆ ಆದದ್ದಿಲ್ಲ ಎಂಬುದು ಹಿರಿಯರ ಅನುಭವ. ಬೆಟ್ಟು ಗದ್ದೆಗಳ ಪೈರೆಲ್ಲ ಒಣಗಿ ಸಾಯುತ್ತಿದೆ. ಹೆಚ್ಚಿನ ಕಡೆಯೂ ತೆನೆಯ ಮೊಗ್ಗು ಅರಳಿಯೇ ಇಲ್ಲ. ಹಲವೆಡೆ ಮೊಡೆಯೇ ಬಂದಿಲ್ಲ.

ಪರಿಣಾಮ ಹೇಳಲಸಾಧ್ಯ. ಕರಾವಳಿಯ ರೈತರಲ್ಲಿ ಹಾಹಾಕಾರ ಎದ್ದಿದೆ. ಇನ್ನಾದರೂ ಮಳೆ ಬಂದೀತು ಎಂಬುವರಲ್ಲಿ ರೈತರಿಗೆ ವಿಶ್ವಾಸ ಇಲ್ಲ. ಯಾಕೆಂದರೆ ಈಗಾಗಲೇ ಮುಂಜಾವ ಮಂಜು ಮುಸುಕುತ್ತಿದೆ. ಸಣ್ಣಗೆ ಚಳಿ ಶುರುವಾಗಿದೆ. ಇದರರ್ಥ ಮಳೆ ದೂರಾಯಿತೆಂದೇ. ಈ ಚಳಿ ರೈತನ ಒಡಲಲ್ಲೂ ಚಳಿ ಉಂಟುಮಾಡಿದೆ. ಕರಾವಳಿಯ ಲಕ್ಷಾಂತರ ರೈತರು ವ್ಯಾಪಾರಕ್ಕಲ್ಲವಾದರೂ ಸ್ವಂತ ಅನ್ನದ ಬಾಬತ್ತಿಗಾಗಿ ಸಾಗುವಳಿ ಮಾಡುತ್ತಿದ್ದರು. ಈ ಬಾರಿ ಅನ್ನಕ್ಕೂ ಸಂಚಕಾರ.

ಬೆಟ್ಟು ಬೇಸಾಯದ ಶೇಕಡಾ 90 ಕೂಡ ಹೀಗೆ ನಾಶವಾಗುತ್ತಿದೆ. ಕರಾವಳಿಯ ಭತ್ತದ ಬೆಳೆ ಮುಕ್ಕಾಲಂಶವೂ ನಾಶವಾಯಿತು. ಎಲ್ಲೋ ಕೊಳಕೆ–ಸುಗ್ಗಿ ಗದ್ದೆಗಳಲ್ಲಿ ಕೊಂಚ ಕಾಳು ಬಂದೀತು. ದಕ್ಷಿಣ–ಉತ್ತರ ಕನ್ನಡ ಜಿಲ್ಲೆಗಳು ಆಹಾರ ಧಾನ್ಯದಲ್ಲಿ ಮೊದಲೇ ಪರಾವಲಂಬಿಗಳು. ಈ ಪರಾವಲಂಬನೆ ಈ ಬಾರಿ ದಯನೀಯ ಸ್ಥಿತಿ ತಲುಪಲಿದೆ. ಮಾರುಕಟ್ಟೆಯಲ್ಲಿ ಅಕ್ಕಿ–ಭತ್ತದ ಧಾರಣೆ ಮುಗಿಲು ಮುಟ್ಟಲಿದೆ.

ಕರಾವಳಿಯಲ್ಲಿ ಇಷ್ಟೆಲ್ಲ ಅನಾಹುತ–ಕೋಲಾಹಲ ನಡೆದಿದ್ದರೂ ಸರಕಾರ ಗಡದ್ದು ನಿದ್ರೆ ಹೊಡೆದಿದೆ ಎಂದೆನ್ನದೆ ವಿಧಿಯಿಲ್ಲ. ರೈತರಿಗೆ ದನಿಯಿಲ್ಲ. ಕ್ಷೀಣವಾದ ದನಿ ಮೊಳಗಿದರೂ ಅದನ್ನು ಅಧಿಕಾರಿಗಳು ಕಿವಿಗೇ ಹಾಕಿಕೊಳ್ಳಲಿಲ್ಲ. ಆಗಸ್ಟ್ ಉತ್ತರಾರ್ಧದಲ್ಲಿ ರೈತ ಬಂಧುವೊಬ್ಬರು ಸೀಮೆಎಣ್ಣೆ ಪರ್ಮಿಟಿಗೆ ತುರ್ತು ವ್ಯವಸ್ಥೆ ಮಾಡಿ ಎಂದು ಜಿಲ್ಲೆಯ ಅಧಿಕಾರಿಗಳಿಗೆ 'ಮುಂಗಾರು' ಮೂಲಕ ಮೊರೆಯಿಟ್ಟರೂ ಯಾವ ಎಲೆಯೂ ಅಲುಗಲಿಲ್ಲ. ಯಾವ ಕಡತವೂ ಕದಲಲಿಲ್ಲ. ಪಂಪ್‌ಸೆಟ್‌ಗಳಿಗೆ ಹಿಂದಿನ ಸೀಮೆಎಣ್ಣೆ ಪರ್ಮಿಟು ಏಪ್ರಿಲ್ ಅಂತ್ಯಕ್ಕೆ ಮುಗಿದುಹೋಗಿದೆ. ಪರ್ಮಿಟು ಚಾಲ್ತಿಯಲ್ಲಿಲ್ಲ. ಹೊಸ ಪರ್ಮಿಟು ನೀಡಿಕೆಗೆ ಕಾಲ ಬಂದಿಲ್ಲ. ಆದರೆ ರೈತರಿಗೆ ಗದ್ದೆಗೆ ನೀರು ಹಾಯಿಸಲು ಪಂಪ್‌ಸೆಟ್ ಚಾಲೂ ಮಾಡಬೇಕಾಗಿದೆ. ಅದಕ್ಕೆ ತುರ್ತಾಗಿ ಎಣ್ಣೆ ಬೇಕು. ಕೊಡುವವರು ಯಾರು?

ಇಂಥ ಸಂಕಟದ ಸಂದರ್ಭದಲ್ಲಿ ಸರಕಾರದ ಆಡಳಿತ ಯಂತ್ರ ಚುರುಕಾಗಿ ಕೆಲಸ ಮಾಡಬೇಕಾಗಿತ್ತು. ಪಂಪ್‌ಸೆಟ್ ಹೊಂದಿರುವವರಿಗೆಲ್ಲ ಕೂಡಲೇ, ಒಂದು ದಿನವೂ ವಿಳಂಬ ಮಾಡದೆ ಸೀಮೆಎಣ್ಣೆ ಪರ್ಮಿಟು ನೀಡಬೇಕಾಗಿತ್ತು. ಕರಾವಳಿಯಲ್ಲಿ ಮಳೆಯನ್ನೇ ಸುರಿಸದೆ ಮುಂದೆ ಸಾಗುತ್ತಿರುವ ಮುಗಿಲ ಸಮೂಹಕ್ಕೆ ರಾಸಾಯನಿಕಗಳನ್ನು ಬಿತ್ತಿ ಮಳೆ ಬರಿಸುವ ಏರ್ಪಾಡು ಮಾಡಬೇಕಾಗಿತ್ತು. ವಿದ್ಯುತ್ ಇಲ್ಲದೆ ಕೈಗಾರಿಕಾರಂಗಕ್ಕೆ ತೊಂದರೆಯಾಗುವ ಪ್ರಸಂಗದಲ್ಲಿ ಲಿಂಗನಮಕ್ಕಿ ಪ್ರದೇಶದಲ್ಲಿ ಮೋಡ ಬಿತ್ತನೆ ಮಾಡಲು ಹೊರಡುವ ಸರಕಾರಕ್ಕೆ ಕರಾವಳಿಯ ಬೆಳೆ ಉಳಿಸಲು ಹಾಗೆ ಮಾಡಬೇಕೆಂದು ತೋಚಲೇ ಇಲ್ಲ. ಇದು ರೈತನಿಗೆ ಇಂದಿನ ಸರಕಾರಿ ವ್ಯವಸ್ಥೆಯಲ್ಲಿ ಎಷ್ಟು ಬೆಲೆ ಇದೆ ಎಂಬುದಕ್ಕೆ ಸಾಕ್ಷಿ.

ಸರಕಾರಿ ಯಂತ್ರ ಇನ್ನಾದರೂ ಚುರುಕಾಗಿ ಕೆಲಸಮಾಡಬೇಕು. ಕರಾವಳಿಯಲ್ಲಿ ಉಳಿದಿರುವ ಬೆಳೆಯನ್ನಾದರೂ ಉಳಿಸುವುದಕ್ಕೆ ಪ್ರಯತ್ನಿಸಬೇಕು. ಸರಕಾರವೇ ಸಾವಿರಾರು ಸಂಚಾರಿ ಪಂಪ್‌ಸೆಟ್‌ಗಳನ್ನು ಚಾಲೂ ಮಾಡಿ ಹೊಳೆಯಿಂದಲೋ ಕೆರೆಗಳಿಂದಲೋ ರೈತರ ಗದ್ದೆಗಳಿಗೆ ನೀರು ಹಾಯಿಸಬೇಕು. ಆ ಮೂಲಕ ಮಣ್ಣಿನ ಮಕ್ಕಳ ಬದುಕು-ಬವಣೆಗಳ ಬಗ್ಗೆ ಸರಕಾರಕ್ಕೆ ಕಾಳಜಿಇದೆ ಎಂಬುದನ್ನು ತೋರಿಸಬೇಕು. ಈಗ ತೆನೆಬಿಡುವ ಕಾಲ. ಈ ಕಾಲದಲ್ಲಿ ಪೈರಿಗೆ ನೀರಿಲ್ಲವಾದರೆ ಎಲ್ಲವೂ ಮುಗಿದಂತೆಯೇ. ಅದನ್ನು ಕರಾವಳಿ ಜಿಲ್ಲೆಗಳ ಉಸ್ತುವಾರಿ ವಹಿಸಿಕೊಂಡಿರುವ ಅಧಿಕಾರಿಗಳು ಅರ್ಥಮಾಡಿಕೊಳ್ಳಬೇಕು. ನೆರೆಬಂದಾಗ ಓಡೋಡಿ ಬರುವಂತೆ ಬರಬಂದಾಗಲೂ ಬರಬೇಕು. ಇದೀಗ ಅಂಥ ಸ್ಥಿತಿ ಬಂದಿದೆ. ಅದಕ್ಕಾಗಿ ಯುದ್ಧೋಪಾದಿಯಲ್ಲಿ ಪರಿಹಾರ ಕಾರ್ಯ ನಡೆಸಬೇಕು.

ಅಷ್ಟಕ್ಕೂ ಬೆಳೆ ಉಳಿಸಲಾಗಲಿಲ್ಲವೆಂದರೆ ಅಂಥ ರೈತರಿಗೆಲ್ಲ ಬೆಳೆ ವಿಮಾಯೋಜನೆಯಲ್ಲಿ ಸಲ್ಲಬೇಕಾದಂತೆ ಪೂರ್ಣಪ್ರಮಾಣದಲ್ಲಿ ಪರಿಹಾರ ಒದಗಿಸಬೇಕು. ಅದಕ್ಕೆ ತಕರಾರು ಬೇಡ. ಅಧಿಕಾರಿಗಳು ಕಡತಕ್ಕೆ ಕೊಕ್ಕೆ ಹಾಕುವುದೂ ಬೇಡ. ರೈತರು ಸಹಕಾರಿ ಸಂಘಗಳ ಮೂಲಕ ಬೆಳೆವಿಮೆಯ ಪ್ರೀಮಿಯಂ ಈಗಾಗಲೇ ಕಟ್ಟಿದ್ದಾರೆ. ಅದರ ಪ್ರಯೋಜನ ಅವರಿಗೆ ಸಿಕ್ಕಬೇಕು.

ಮುಂಗಾರು

ಶನಿವಾರ, ಸೆಪ್ಟೆಂಬರ್ 13, 1986

ನಾಯಕನನ್ನು ನೇಮಿಸಬೇಡಿ

ತಾನು ಉತ್ತರಾಧಿಕಾರಿಯನ್ನು ನೇಮಕ ಮಾಡಬೇಕಾದ ಅಗತ್ಯವಿನ್ನೂ ಬಂದಿಲ್ಲವೆಂದು ಅಣ್ಣಾ ಡಿಎಂಕೆ ಪಕ್ಷದ ಅಧ್ಯಕ್ಷರೂ ತಮಿಳ್ನಾಡಿನ ಮುಖ್ಯಮಂತ್ರಿಯೂ ಆಗಿರುವ ಎಂ. ಜಿ. ರಾಮಚಂದ್ರನ್ ಅವರು ಹೇಳಿರುವುದಾಗಿ ವರದಿಯಾಗಿದೆ. ತನ್ನ ಆರೋಗ್ಯ ಈಗ ಉತ್ತಮವಾಗಿಯೇ ಇದೆಯೆಂಬುದು ಅವರ ಅಭಿಪ್ರಾಯವಂತೆ.

ಎಂ. ಜಿ. ರಾಮಚಂದ್ರನ್ ಜನ ನಾಯಕರು ಎಂಬುದರಲ್ಲಿ ಎರಡು ಮಾತಿಲ್ಲ. ತಮಿಳುನಾಡಿನ ಜನತೆಯನ್ನು ಅವರು ಬಹುಕಾಲದಿಂದ ಮುನ್ನಡೆಸಿಕೊಂಡು ಬಂದಿರುವುದು ನಿಜ. ಆದರೆ ಎಲ್ಲ ಸಂದರ್ಭಗಳಲ್ಲಿಯೂ ನಾಯಕನ ಇಚ್ಛೆಯೇ ಜನರ ಇಚ್ಛೆ ಎಂದೆನಿಸಿಕೊಳ್ಳುತ್ತದೆ ಎಂದು ತಿಳಿದರೆ ತಪ್ಪಾದೀತು. ಒಬ್ಬ ಪ್ರಜಾತಾಂತ್ರಿಕ ನಾಯಕನಿಗೂ ಸರ್ವಾಧಿಕಾರಿಗೂ ಅಂತರವಿದೆ. ಆದರೆ ಜನ ಮೆಚ್ಚಿದ ನಾಯಕರೂ ಕೊನೆಯಲ್ಲಿ ಸರ್ವಾಧಿಕಾರಿಗಳಾಗಿ ಪರಿವರ್ತನೆಯಾಗುವುದುಂಟು. ಜಗತ್ತಿನ ರಾಜ ನೈತಿಕ ಇತಿಹಾಸವಲ್ಲಿ ಇಂತಹ ಹಲವಾರು ಉದಾಹರಣೆಗಳುಂಟು. ಪ್ರಜಾ ಜನರು ತನಗೆ ಅಧಿಕಾರ ಕೊಟ್ಟಿದ್ದಾರೆಂಬ ದಾರ್ಷ್ಟ್ಯ, ಈ ಅಧಿಕಾರಕ್ಕೆ ಅರ್ಹತೆ, ಯೋಗ್ಯತೆಗಳು ತನಗಿವೆಯೆಂಬ ಅಹಂಕಾರ. ಜನರ ಮೌಢ್ಯವನ್ನೂ ಅಜ್ಞಾನವನ್ನೂ ಕಂದಾಚಾರಗಳನ್ನೂ ಕಂಡು ಉಂಟಾಗಿರುವಂತಹ ತಾತ್ಸಾರ–ಇವೆಲ್ಲವೂ ಜನ ನಾಯಕನೊಬ್ಬನು ಇದ್ದುದಕ್ಕಿಂತ ಹೆಚ್ಚಿನ ಆಕಾರವನನ್ನಾಗಿ ಚಿತ್ರಿಸಿಕೊಳ್ಳುವುದಕ್ಕೆ ಕಾರಣವಾಗುತ್ತವೆ.

ಆಡಳಿತೆಯ ಮೇಲೂ ಆಳುವ ಪಕ್ಷದ ಅಂತರಿಕ ವ್ಯವಹಾರಗಳ ಮೇಲೆಯೂ ಪ್ರಜಾತಂತ್ರದ ನಿಯಮಗಳನ್ವಯದ ನಿಯಂತ್ರಣ ಇಲ್ಲದೆ ಹೋದರೆ ಇಂತಹ ವಿದ್ಯಮಾನಗಳು ಉಂಟಾಗುತ್ತವೆ. ಭಾರತದಲ್ಲಿಯೂ ಇಂತಹದ್ದು ಬಹಳ ನಡೆದಿದೆ. ವ್ಯಕ್ತಿಪೂಜೆ ಈ ದೇಶದಲ್ಲಿ ಹಿಂದಿನಿಂದಲೂ ಸಾಗಿಬಂದಿದೆ. ಸ್ವಾತಂತ್ರ್ಯಾನಂತರದಲ್ಲಿ ನೆಹರೂ ಯುಗ ವ್ಯಕ್ತಿ ಪೂಜೆಗೆ ನಾಂದಿಹಾಡಿತು. ಆ ಮೇಲೆ ಇಂದಿರಾಯುಗ ಬಂತು. ವ್ಯಕ್ತಿ ಪೂಜೆಗೆ ಒತ್ತುಕೊಟ್ಟರೆ ಜನತಂತ್ರದ ನಿಯಮಗಳು ಮೂಲೆ ಗುಂಪಾಗಿ ಮೌಲ್ಯಗಳು ಅರ್ಥ ಕಳೆದುಕೊಂಡು ಸರ್ವಾಧಿಕಾರಕ್ಕೆ ಹೇಗೆ ದಾರಿಯಾಗುತ್ತದೆಂಬ ಪ್ರಾಯೋಗಿಕ ಪಾಠವನ್ನು ದೇಶ ಕಲಿಯುವಂತಾಯಿತು.

ವ್ಯಕ್ತಿಪೂಜೆಯ ಈ ರೋಗ ಭಾರತದ ದಕ್ಷಿಣ ದೇಶಗಳಲ್ಲಿ ರಂಗು ರಂಗಾಗಿ ಪ್ರದರ್ಶನಗೊಳ್ಳುತ್ತಿರುವುದನ್ನು ಈಗಲೂ ಕಾಣುತ್ತಿದ್ದೇವೆ. ಇಲ್ಲಿ ವ್ಯಕ್ತಿಗಳ ಮುಂದೆ ತತ್ವಗಳು ಪುಡಿ ದೂಳಾಗಿ ಹಾರಿಹೋಗುತ್ತವೆ. ಮೌಲ್ಯಗಳು ಮರೆಯಾಗುತ್ತವೆ. ರಾಮ, ನಾಮಚಂದ್ರ, ರಾಮಕೃಷ್ಣರ ವ್ಯಕ್ತಿ ವರ್ಚಸ್ಸಿನ ಮುಂದೆ ದಕ್ಷಿಣ ದೇಶವೇ ದುರ್ಬಲವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ವ್ಯಕ್ತಿಗಳು ಶಕ್ತಿಗಳಾಗಿ ಎದ್ದು ನಿಂತು, ಜನ ಸಮೂಹವನ್ನು ಸುಘಟಿಸಿ ಮುನ್ನಡೆಸಬೇಕಾದ ವಿದ್ಯಮಾನದ ಬದಲಿಗೆ ವ್ಯಕ್ತಿಗಳು ದಾರಿತಪ್ಪಿ ಜನ ಸಮೂಹದ ಹಿತಕ್ಕಿಂತ ಸ್ವಂತ ಹಿತವೇ ಮೊದಲಿನದಾದಂತಹ ಪ್ರವೃತ್ತಿಗಳನ್ನು ಕಾಣುತ್ತಿದ್ದೇವೆ.

ನಮಗೆ ಮೌಲ್ಯಗಳಿಗಿಂತ ವ್ಯಕ್ತಿಗಳು ದೊಡ್ಡವರಾದರೆ, ಅವರನ್ನು ದೇವರಂತೆ ಆರಾಧಿಸುವುದಿದ್ದರೆ ಹಿಂದಿನ ರಾಜ ಮಹಾರಾಜರುಗಳ ವ್ಯವಸ್ಥೆಯನ್ನು ಕಿತ್ತು ಹಾಕಿದ್ದೇಕೆ? ಪ್ರಜಾತಂತ್ರದ ಹೆಸರೇಕೆ ಬೇಕು?

ಪ್ರಜಾತಂತ್ರದ ಈ ಚೌಕಟ್ಟಿಗೆ ನಾವು ಅರ್ಥವನ್ನು ತುಂಬಬೇಕು. ವ್ಯಕ್ತಿಗಳಲ್ಲ, ಮೌಲ್ಯಗಳು ಮೊದಲಿನದ್ದಾಗಬೇಕು. ಸಮೂಹ ಹಿತದ ಮುಂದೆ ವ್ಯಕ್ತಿಹಿತ ಗೌಣವಾಗಬೇಕು. ಹಾಗಾಗದಿದ್ದರೆ ಯಾವ ಸಮಾಜವೂ ಕೂಡ ಶಕ್ತಿಶಾಲಿಯಾಗಿ, ಚೈತನ್ಯಶಾಲಿಯಾಗಿ ಬೆಳೆಯಲಾರದು. ವ್ಯಕ್ತಿ ಪೂಜೆಯ ಪ್ರವೃತ್ತಿ ಕಾಣಿಸಿಕೊಂಡ ಸಮಾಜಗಳು ಕ್ಯಾನ್ಸರ್ ತಗುಲಿದಂತೆ ನೋವುಂಡು ನಾಶವಾಗುವುದು ಖಂಡಿತ. ಎಂ.ಜಿ.ಆರ್.ರಂಥವರು ತಮ್ಮ ಉತ್ತರಾಧಿಕಾರಿ ಯಾರು ಎಂದು ಆಲೋಚನೆ ಮಾಡುವಂತಹದೇ ವಿಕೃತವಾದಂತಹ ವಿದ್ಯಮಾನ. ಎಂ. ಜಿ. ಆರ್. ನಂತರ ಏನು ಎಂಬುದು ಅವರ ಸುತ್ತಲಿನವರು ಚಿಂತಿಸುವುದು ಕೂಡ ಈ ಸಮಾಜದ ಷಂಡತನವನ್ನು ತೋರಿಸುತ್ತದೆ.

ಎಂ. ಜಿ. ಆರ್. ರಾಮಚಂದ್ರನ್ ಅವರು ಉತ್ತರಾಧಿಕಾರಿಯನ್ನು ನೇಮಿಸಬೇಕೆಂಬ ಬೇಡಿಕೆ ಜನಸಮುದಾಯದಿಂದಲೇ ಬಂತೆಂದು ತಿಳಿದುಕೊಳ್ಳುವುದು ತಪ್ಪಾದೀತೇನೋ. ಇದೆಲ್ಲ ನಾಯಕನ ಸುತ್ತಲೂ ಸೇರಿಕೊಂಡ ಹೊಗಳು ಭಟ್ಟಂಗಿಗಳ ಹುನ್ನಾರವೆಂದರೆ ಹೆಚ್ಚು ಸರಿಯಾದೀತು. ಇಂಥ ಭೋಪರಾಕಿನ ಭೂಪರು ಎಲ್ಲೆಲ್ಲಿಯೂ ಇದ್ದಾರೆ. ಸ್ವಾರ್ಥಕ್ಕಾಗಿ ನಾಯಕನನ್ನು ಅರಸೊತ್ತಿಗೆಗೆ ಏರಿಸಿ, ಆತನೇ ಶ್ರೇಷ್ಠನೆಂಬ ಪುರಸ್ಕಾರದ ಪತಾಕೆಹಾರಿಸಿ. ನಾಯಕತ್ವದ ಗುಣಗಳನ್ನು ಉಬ್ಬಿಸಲು ಪರಾಕು ಪಂಪು ಹೊಡೆದು ಜನತಂತ್ರದ ಆಶಯಗಳನ್ನೆಲ್ಲ ಮಣ್ಣುಗೂಡಿಸುವ ಪ್ರಯತ್ನಗಳು ಬಹಳ ಕಡೆ ನಡೆದಿವೆ.

ಇಂದಿನ ನಾಯಕರು ಮುಂದಿನ ನಾಯಕರನ್ನು ನೇಮಿಸಿ ಹೋಗಬೇಕಾಗಿಲ್ಲ. ತಮ್ಮ ನಾಯಕರನ್ನು ಜನರೇ ಆರಿಸಿಕೊಳ್ಳುತ್ತಾರೆ. ನಾಯಕತ್ವವು ಸಮಾಜದ ಒಡಲಿನಿಂದ ಮೂಡಿಬರಬೇಕು, ವೈಚಾರಿಕ ಸಂಘರ್ಷದಲ್ಲಿ ಹುಟ್ಟಿಬರಬೇಕು. ಆಯಾ ಸಮಾಜದ ಬುದ್ಧಿಮತ್ತೆ, ವಿಚಾರ ಶಕ್ತಿಗಳ ಸಾರರೂಪವಾಗಿ ನಾಯಕತ್ವ ಒಡಮೂಡುತ್ತದೆ. ಇದೆಲ್ಲ ಸಹಜವಾಗಿ ನಡೆಯುವ ಕ್ರಿಯೆ. ಆದ್ದರಿಂದ ಯಾವ ನಾಯಕನೂ ತನ್ನ ಉತ್ತರಾಧಿಕಾರಿಯನ್ನು ನೇಮಿಸುವ ಕೃಪೆ ಮಾಡಬೇಕೆಂದು ಸಮಾಜ ಅಪೇಕ್ಷಿಸುವುದಿಲ್ಲ. ಅಂಥ ಅಭಿಪ್ರಾಯವನ್ನು ಟೊಳ್ಳು ಒತ್ತಡವನ್ನು ಉಂಟುಮಾಡುವಂಥವರು ನಾಯಕರ ಸುತ್ತ ಸೇರಿಕೊಂಡ ಭಟ್ಟಂಗಿಗಳ ಸಮೂಹ ಅಷ್ಟೆ.

ಮುಂಗಾರು

ಭಾನುವಾರ, ಸೆಪ್ಟೆಂಬರ್ 14, 1986

ಶಿಕ್ಷಣವೇ ಆಯುಧ

ಮತೀಯ ಪುನರುತ್ಥಾನವಾದ ವಿರುದ್ಧ ಹೋರಾಡಬೇಕೆಂದು ಪ್ರಧಾನ ಮಂತ್ರಿ ರಾಜೀವ ಗಾಂಧಿಯವರು ರಾಷ್ಟ್ರೀಯ ಭಾವೈಕ್ಯ ಮಂಡಳಿ ಸಭೆಯಲ್ಲಿ ಕರೆಕೊಟ್ಟಿದ್ದಾರೆ. ದೇಶದಲ್ಲಿ ಜಾತ್ಯತೀತ ಶಿಕ್ಷಣವನ್ನು ಪ್ರಸಾರ ಮಾಡಬೇಕು, ಸಾರ್ವಜನಿಕ ಮಾಧ್ಯಮಗಳನ್ನೂ ಶಿಕ್ಷಣ ಕ್ಷೇತ್ರವನ್ನೂ ಇದಕ್ಕಾಗಿ ಉಪಯೋಗಿಸಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ.

ಮತೀಯ ಪುನರುತ್ಥಾನವಾದವನ್ನು ಅಥವ ಮೂಲಭೂತವಾದವನ್ನು ವಿರೋಧಿಸಬೇಕು. ವಿನಾಶ ಮಾಡಬೇಕು ಎಂಬುದು ಇಂದಿನ ಅಗತ್ಯವೇನೂ ಅಲ್ಲ. ನಮ್ಮ ಇಂದಿನ ನಾಯಕರಿಗೆ ಇದೀಗ ಹೊಸದಾಗಿ ಹೊಳೆದಿದೆ—ಅಷ್ಟೆ. ಈ ವಿಚಾರ ನಮ್ಮ ರಾಜ್ಯಾಂಗದಲ್ಲಿಯೇ ಉಂಟು. ವೈಜ್ಞಾನಿಕ ಮನೋಧರ್ಮವನ್ನು ಪ್ರಜೆಗಳಲ್ಲಿ ಬೆಳೆಸುವ ಕರ್ತವ್ಯವನ್ನು ರಾಜ್ಯಾಂಗವು ಆಡಳಿತಕ್ಕೆ ವಿಧಿಸಿದೆ. ಈ ಕರ್ತವ್ಯವನ್ನು ನಮ್ಮನ್ನಾಳುವವರು, ನಮ್ಮ ಜನಪ್ರತಿನಿಧಿಗಳು, ನಮ್ಮ ಆಡಳಿತಾಧಿಕಾರಿಗಳು ಸೂಕ್ತವಾಗಿ ನಿರ್ವಹಿಸಿದ್ದರೆ ಎಲ್ಲಾ ಮತೀಯ ಮೂಲಭೂತವಾದವೂ, ಧರ್ಮಾಂಧತೆಯೂ, ಅಜ್ಞಾನವೂ ಕಂದಾಚಾರಗಳೂ, ಹೇಳ ಹೆಸರಿಲ್ಲದಂತೆ ನಾಶವಾಗುತ್ತಿದ್ದವು.

ಆದರೆ ಈ ದೇಶದ ಆಡಳಿತೆಯ ಜವಾಬ್ದಾರಿಯ ಅಧಿಕಾರವನ್ನು ಜನರಿಂದ ಪಡೆದುಕೊಂಡವರು ತಮ್ಮ ಕರ್ತವ್ಯದಲ್ಲಿ ಸೋತಿದ್ದಾರೆ. ಮತೀಯ ಮೂಲಭೂತವಾದವನ್ನೂ, ಕಂದಾಚಾರಗಳನ್ನೂ ಬೆಳೆಸುವ ಅನೇಕ ಚಟುವಟಿಕೆಗಳಿಗೆ ಅವರು ಪ್ರೋತ್ಸಾಹವನ್ನೇ ನೀಡುತ್ತ ಬಂದಿದ್ದಾರೆ. ತಾವು ಜನ ಸಮುದಾಯದಿಂದ ದೂರ ಉಳಿದುಬಿಟ್ಟೇವು ಎಂಬ ಭಯದಲ್ಲಿ ನಮ್ಮ ನಾಯಕರು ಕಂದಾಚಾರಗಳನ್ನು ಕಂಡರೂ ಕಾಣದಂತೆ ಮೋರೆ ತಿರುಗಿದ್ದಾರೆ. ಜಾತ್ಯತೀತ ರಾಷ್ಟ್ರವೊಂದರ ನೇತಾರರಾಗಿ ಜನರನ್ನು ಧರ್ಮನಿರಪೇಕ್ಷತೆಯತ್ತ ಮುನ್ನಡೆಸಿ ಅವರಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಬಿತ್ತಬೇಕಾದ ಜನರೇ ದಿನ ಬೆಳಗಾದರೆ ಮಠ–ಮಂದಿರ ಮಸೀದಿಗಳಿಗೆ ಭೇಟಿಕೊಡುತ್ತ ಧಾರ್ಮಿಕ ಪುನರುತ್ಥಾನವಾದಕ್ಕೆ ಕುಮ್ಮಕ್ಕು ಕೊಡುತ್ತಿದ್ದಾರೆ. ಅವಿದ್ಯಾವಂತರೂ ಅನಕ್ಷರಸ್ಥರೂ ತುಂಬಿರುವ ನಮ್ಮಲ್ಲಿ ಜನರು ನಾಯಕರ ನಡೆನುಡಿಗಳನ್ನು, ಚಲನವಲನಗಳನ್ನು ತುಂಬ ಆಸಕ್ತಿ ಕುತೂಹಲಗಳಿಂದ ಗಮನಿಸುತ್ತಾರೆ. ಅವನ್ನು ಆರಾಧಿಸುತ್ತಾರೆ. ಇದರ ಪರಿಣಾಮವಾಗಿ ನಾಯಕರ ಮಾತು ಕೃತಿಗಳಿಗೆ ಶಿಕ್ಷಣದ ಮಹತ್ವ ಉಂಟಾಗುತ್ತದೆ. ಇಲ್ಲಿ ನಾಯಕರು ಕೋಟಿಗಟ್ಟಲೆ ಜನರಿಗೆ ಮೇಲ್ಪಂಕ್ತಿಯಾಗುತ್ತಾರೆ.

ಆದ್ದರಿಂದಲೇ ನಾಯಕರು ತಮ್ಮ ನಡೆನುಡಿಗಳಲ್ಲಿ ಎಚ್ಚರವನ್ನು ಕಾಯ್ದುಕೊಳ್ಳಬೇಕು. ತಮ್ಮ ಮಾತು-ಕೃತಿಗಳು ರಾಜ್ಯಾಂಗದ ಆಶಯಗಳಿಗೆ ಅನುಗುಣವಾಗಿದೆಯೇ ಎಂಬುದರತ್ತ ಸದಾ ಗಮನವಿರಬೇಕು.

ವೈಜ್ಞಾನಿಕ ಮನೋಧರ್ಮವನ್ನು ಜನಮನದಲ್ಲಿ ಬಿತ್ತಿ ಬೆಳೆಸುವುದರಲ್ಲಿ ಸಾರ್ವಜನಿಕ ಮಾಧ್ಯಮಗಳ ಹಾಗೂ ಶಿಕ್ಷಣ ಪದ್ಧತಿಯ ಸಾಧ್ಯತೆ ಅತ್ಯಂತ ದೊಡ್ಡದು. ಇಂದು ನಮ್ಮ ಮಾಧ್ಯಮಗಳು ಅದನ್ನು ಮಾಡುವುದೇ ಇಲ್ಲ. ಶಿಕ್ಷಣವೂ ಅಷ್ಟೆ. ಶಿಕ್ಷಣವು ವೈಜ್ಞಾನಿಕ ಮನೋಧರ್ಮವನ್ನು ಮಕ್ಕಳಲ್ಲಿ ಬಿಂಬಿಸುವಂತೆ ಅದನ್ನು ಪುನರ್ರಚಿಸಬೇಕು. ಜತೆಗೆ ಶಿಕ್ಷಣ ಪ್ರಸಾರ ಕಾರ್ಯವನ್ನು ತ್ವರಿತಗತಿಯಿಂದ ಅಭಿವೃದ್ಧಿಪಡಿಸಬೇಕು. ಈ ದೇಶದ ನೂರಕ್ಕೆ ನೂರು ಮಂದಿಯೂ ವಿದ್ಯೆ ಕಲಿತು ಉದ್ಯೋಗ ದೊರಕಿಸಿಕೊಳ್ಳುವಂತಹ ಪರಿಸ್ಥಿತಿ ಉಂಟಾದಾಗ ಸಮಾಜದ ಸರ್ವತೋಮುಖ ವಿಕಾಸವು ಸಾಧ್ಯವಾಗುತ್ತದೆ. ಹೀಗೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ, ಅದರ ಪರಿಣಾಮವಾಗಿ ಸಾಂಸ್ಕೃತಿಕವಾಗಿಯೂ ಅರಳಿದ ಸಮಾಜವೊಂದರಲ್ಲಿ ಧಾರ್ಮಿಕ ಮೂಲಭೂತವಾದಕ್ಕೆ ಸ್ಥಾನವಿರಲಾರದು. ಅದು ತನ್ನಿಂದ ತಾನಾಗಿ ಹಿಂದಿನ ಸಾಲಿನಲ್ಲಿ ಕೂರುವಂತಾಗುತ್ತದೆ. ಧರ್ಮವೆಂಬುದು ತಾನಾಗಿಯೇ ಖಾಸಗಿ ಬದುಕಿನ ವಿಚಾರವಾಗುತ್ತದೆ. ಮಾಡುವುದಕ್ಕೆ ಬೇರೆ ಕೆಲಸವಿಲ್ಲದಾಗ ಮಾತ್ರವೇ ಜನಗಳು ಧರ್ಮದ ವಿಷಯಗಳನ್ನು ಹಿಡಿದು ಗುದ್ದಾಡುತ್ತಾರೆ.

ನಮ್ಮ ರಾಷ್ಟ್ರ ನಾಯಕರು ಜನರಲ್ಲಿ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಲು ಮೊದಲು ಮಾಡಬೇಕಾದ ಕೆಲಸ ಶಾಲೆಗೆ ಹೋಗುವ ವಯೋಮಾನದ ಎಲ್ಲ ಮಕ್ಕಳನ್ನೂ ಪ್ರಾಥಮಿಕ ಶಾಲೆಗಳಿಗೆ ಸೆಳೆದು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದು. ಧರ್ಮಾಂಧತೆಯನ್ನು ಎದುರಿಸುವ ಹೋರಾಟಕ್ಕೆ ಇದೇ ಸಮರ್ಥ ಆಯುಧ. ಬೇರೆ ಇಲ್ಲ. ಶಿಕ್ಷಣದಿಂದ ವೈಜ್ಞಾನಿಕ ಮನೋಧರ್ಮ ಮೂಡಿಬರುತ್ತದೆ. ಕಂದಾಚಾರಗಳ ಕುರಿತಾದ ವಿಶ್ವಾಸ ಮರೆಯಾಗುತ್ತದೆ. ಧಾರ್ಮಿಕ ಅಂಧ ವಿಶ್ವಾಸಗಳ ನೆಲೆಯೇ ಅಲುಗಾಡುತ್ತದೆ. ವ್ಯಕ್ತಿಯ ಆರ್ಥಿಕ–ಸಾಮಾಜಿಕ ಮಟ್ಟವೂ ಹೆಚ್ಚುತ್ತದೆ. ಪರಿಣಾಮವಾಗಿ ಬದುಕಿನ ಗುಣಮಟ್ಟ ಎತ್ತರಿಸಿ ಸಾಮಾಜಿಕ ಕ್ಷೋಭೆಗಳು ಕಡಿಮೆಯಾಗುತ್ತವೆ.

ಮುಂಗಾರು

ಮಂಗಳವಾರ, ಸೆಪ್ಟೆಂಬರ್ 16, 1986

ಅಪತ್ಕಾರಿ ಅವಿಷ್ಕಾರಗಳಿಗೆ ದಾರಿ

ಮಂಗಳೂರು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿರುವ ಹಲವಾರು ಖಾಸಗಿ ಕಾಲೇಜುಗಳಿಗೆ ಆಡಳಿತ ಹಾಗೂ ಶೈಕ್ಷಣಿಕ ಸ್ವಾಯತ್ತೆಯನ್ನು ಕೊಡುವ ಹವಣಿಕೆಯಲ್ಲಿರುವ ಸುದ್ದಿ ಬಂದಿದೆ. ಇಂತಹ ಒಂದು ಕರಡು ನಿಯಮಾವಳಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಈಗಾಗಲೇ ಅಂಗೀಕರಿಸಿದೆಯಂತೆ. ಅದೀಗ ಅಂತಿಮ ಅಂಗೀಕಾರಕ್ಕಾಗಿ ಸೆ. 18ರಂದು ಅಕೆಡೆಮಿಕ್ ಕೌನ್ಸಿಲ್‌ನ ಮುಂದೆ ಬರಲಿದೆ.

ಈ ವಿಶ್ವವಿದ್ಯಾನಿಲಯದ ರೂಪರೇಷೆ ಹಾಗೂ ಅದರೊಳಗೆ 'ವಿದ್ಯೆಯ ವ್ಯಾಪಾರಿಗಳು' ಕಟ್ಟಿಕೊಂಡಿರುವ ಪ್ರಭಾವ ವಲಯಗಳನ್ನು ಹತ್ತಿರದಿಂದ ಅವಲೋಕಿಸಿವಾಗ ಸ್ವಾಯತ್ತೆಯ ನಿಯಮಾವಳಿಗೆ ಪೂರ್ಣ ಅಂಗೀಕಾರದ ಮುದ್ರೆ ಬೀಳುವುದರಲ್ಲಿ ಸಂದೇಹ ಕಾಣುವುದಿಲ್ಲ.

ವಿಶ್ವವಿದ್ಯಾನಿಲಯಗಳ ಹಣಕಾಸು ಆಯೋಗ ಮಾಡಿದೆಯೆನ್ನಲಾದ ಈ ಸ್ವಾಯತ್ತೆಯ ಸಲಹೆಯ ಸಾಧಕ-ಬಾಧಕಗಳನ್ನು ದೇಶದ ಉಳಿದೆಲ್ಲ ವಿಶ್ವವಿದ್ಯಾನಿಲಯಗಳು ಇನ್ನೂ ಚರ್ಚಿಸುತ್ತಲೇ ಇವೆ. ಯಾವ ವಿಶ್ವವಿದ್ಯಾನಿಲಯವೂ ಇದನ್ನು ಇಷ್ಟೊಂದು ಆತುರದಲ್ಲಿ ಅಂಗೀಕರಿಸಲು ಸಿದ್ಧವಾಗಿಲ್ಲ. ಯು. ಜಿ.ಸಿ.ಯ ಸಲಹೆಯನ್ನು ಬ್ರಹ್ಮ ಬರಹವೆಂದಾಗಲೀ-ವೇದ ವಾಕ್ಯವೆಂದಾಗಲೀ ಯಾರೂ ಅಂಗೀಕರಿಸಿಲ್ಲ.

ವಿದ್ಯೆಯನ್ನು ವ್ಯಾಪಾರದ ವಸ್ತುವಾಗಿ ಮಾಡಿ ಜನಜೀವನದ ಎಲ್ಲ ಕ್ಷೇತ್ರಗಳ ತಿರುಳು ತಿನ್ನುತ್ತಿರುವ ಕರಾವಳಿ ಕರ್ನಾಟಕದಲ್ಲಿ ತಲೆ ಎತ್ತಿದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಯು. ಜಿ. ಸಿ. ಸಲಹೆ ವೇದ ವಾಕ್ಯವಾಗಿ ಬಿಟ್ಟಿದೆ. ಮುಂದಿನ ಪೀಳಿಗೆಯ ಮೇಲೆ ಮಹತ್ವದ ಪರಿಣಾಮ ಬೀರಬಲ್ಲ ಸ್ವಾಯತ್ತೆಯಂತಹ ಗಹನ ವಿಚಾರದ ಮೇಲೆ ಸಾರ್ವಜನಿಕ ಜಿಜ್ಞಾಸೆ ಆಗತ್ಯವೆನ್ನಿಸಿಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಶೇಕಡಾ 80ರಷ್ಟು ಕಾಲೇಜುಗಳನ್ನು ಖಾಸಗಿ "ಅಂಗಡಿ"ಗಳನ್ನಾಗಿ ಮಾಡಿಕೊಂಡಿರುವ ವಿದ್ಯೆಯ ವ್ಯಾಪಾರೀ ಕೂಟಗಳಿಗೆ ಈ ಸ್ವಾಯತ್ತೆ ಬೇಕಾಗಿದೆ. ಆದ್ದರಿಂದಲೇ ಸ್ವಾಯತ್ತೆಯ ನಿಯಮ ತರಾತುರಿಯಲ್ಲಿ ಅಂಗೀಕಾರವಾಗುತ್ತಿರಬಹುದು.

ಕೂಟವನ್ನು ಕಟ್ಟಿಕೊಂಡು ಈ ಖಾಸಗಿ ಕಾಲೇಜುಗಳು ಡಿಗ್ರಿಯನ್ನು ಒಂದು ಮಾರಾಟದ ವಸ್ತುವಾಗಿ ಮಾಡಬಹುದು. ಈ ಆಡಳಿತ ವರ್ಗದವರು ತಮಗೆ ಸರಿಕಾಣದ ವೃತ್ತಿನಿಷ್ಠ ಅಧ್ಯಾಪಕರಿಗೆ ಉಸಿರು ಕಟ್ಟುವ ವಾತಾವರಣವನ್ನು ನಿರ್ಮಿಸಿ ಅವರನ್ನೆಲ್ಲ ಓಡಿಸಬಹುದು.

ಸ್ವಾಯತ್ತೆ ನಿಯಮವು ಒಟ್ಟಿನಲ್ಲಿ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳಿಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಸವಾರಿ ಮಾಡಲು ಮುಕ್ತ ಅವಕಾಶವನ್ನು ಕೊಡುತ್ತದೆ.

ಈ ಸ್ವಾಯತ್ತೆ ನಿಯಮಾವಳಿಯ ಅನಿಷ್ಟಕಾರಕ ಗುಣಗಳು ಇಷ್ಟೇ ಅಲ್ಲ. ಭಾರತೀಯ ಸಮಾಜದ ಮಹಾ ಕ್ಯಾನ್ಸರ್ ಎನ್ನಿಸಿಕೊಂಡಿರುವ ಜಾತೀಯತೆ ಇದರಿಂದಾಗಿ ಉಲ್ಬಣಗೊಳ್ಳುವ ದೊಡ್ಡ ಅಪಾಯವಿದೆ. ಈಗ ವಿಶ್ವವಿದ್ಯಾನಿಲಯದ ಕೇಂದ್ರೀಕೃತ ಆಶ್ರಯದಲ್ಲಿ ನಡೆಯುತ್ತಿರುವ ಪದವಿ ಪರೀಕ್ಷೆಗಳಲ್ಲಿ ಜಾತಿ ವಾತ್ಸಲ್ಯ ಅಥವಾ ಈರ್ಷೆಯ ಅಭಿವ್ಯಕ್ತಿಗೆ ಅಷ್ಟೊಂದು ಅವಕಾಶವಿಲ್ಲ. ಆದರೆ ಸ್ವಾಯತ್ತೆಯ ನಿಯಮ ಜಾರಿಗೆ ಬಂದರೆ ಆಯಾಯ ಕಾಲೇಜಿನ ಶೈಕ್ಷಣಿಕ ವಿಭಾಗಗಳ ಮುಖ್ಯಸ್ಥರೇ ವಿದ್ಯಾರ್ಥಿಗಳ ಭವಿಷ್ಯವನ್ನು ಬರೆಯುವ ಬ್ರಹ್ಮರಾಗುತ್ತಾರೆ. ಅವರೇ ಪರೀಕ್ಷಾ ಮಂಡಳಿಗಳ ಅಧ್ಯಕ್ಷರಾಗುತ್ತಾರೆ. ತಮಗಿಷ್ಟ ಬಂದವರನ್ನು ಪರೀಕ್ಷಕರಾಗಿ ನೇಮಿಸಿಕೊಳ್ಳುತ್ತಾರೆ. ಆಡಳಿತ ವರ್ಗದವರು ಮತ್ತು ವಿಭಾಗದ ಮುಖ್ಯಸ್ಥರು ಸೇರಿ ಏನು ಬೇಕಾದರೂ ಮಾಡಬಹುದು. ವಿಭಾಗದ ಮುಖ್ಯಸ್ಥರ ಜಾತಿಗೆ ಸೇರಿದವರು ಸುದೈವಿಗಳಾಗಬಹುದು. ಅವರು ದ್ವೇಷಿಸುವ ಜಾತಿಗೆ ಸೇರಿದ ವಿದ್ಯಾರ್ಥಿಗಳು ದುರ್ದೈವಿಗಳ ಪಟ್ಟಿಗೆ ಸೇರಬಹುದು.

ವಿದ್ಯೆಯ ವ್ಯಾಪಾರಿಗಳಾದ ಖಾಸಗಿ ಕಾಲೇಜುಗಳವರು ತಮಗಿಷ್ಟ ಬಂದ ಹೊಸ ಕೋರ್ಸ್‌ಗಳನ್ನು ಆರಂಭಿಸಲೂ ಸ್ವಾಯತ್ತೆ ನಿಯಮಾವಳಿಯಲ್ಲಿ ಅವಕಾಶವಿದೆ. ಒಂದೆಡೆಯಲ್ಲಿ ವಿಶ್ವವಿದ್ಯಾನಿಲಯದ ನಿಯಮಗಳು, ಕ್ಯಾಪಿಟೇಶನ್ ಶುಲ್ಕ ರದ್ದತಿ ಶಾಸನ ಮೊದಲಾದ ಹಲವಾರು ನಿರ್ಬಂಧಗಳ ನಡುವೆಯೂ ವೃತ್ತಿ ಶಿಕ್ಷಣ ಕಾಲೇಜುಗಳನ್ನು ವಿದ್ಯೆಯ ಮಾರಾಟದ

ಮುಂಗಾರು
ಮಂಗಳವಾರ, ಸೆಪ್ಟೆಂಬರ್ 16, 1986

ಆಪತ್ಕಾರಿ ಆವಿಷ್ಕಾರಗಳಿಗೆ ದಾರಿ

ಮಂಗಳೂರು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಲ್ಲಿರುವ ಹಲವಾರು ಖಾಸಗಿ ಕಾಲೇಜುಗಳಿಗೆ ಆಡಳಿತ ಹಾಗೂ ಶೈಕ್ಷಣಿಕ ಸ್ವಾಯತ್ತೆಯನ್ನು ಕೊಡುವ ಯೋಜನೆಯಲ್ಲಿರುವ ಸುದ್ದಿ ಬಂದಿದೆ. ಇಂತಹ ಒಂದು ಕರಡು ನಿಯಮಾವಳಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಈಗಾಗಲೇ ಅಂಗೀಕರಿಸಿದೆಯಂತೆ. ಅದೀಗ ಅಂತಿಮ ಅಂಗೀಕಾರಕ್ಕಾಗಿ ಸೆ. 18ರಂದು ಅಕೆಡೆಮಿಕ್ ಕೌನ್ಸಿಲ್‌ನ ಮುಂದೆ ಬರಲಿದೆ.

ಈ ವಿಶ್ವವಿದ್ಯಾನಿಲಯದ ರೂಪರೇಷೆ ಹಾಗೂ ಅದರೊಳಗೆ 'ವಿದ್ಯೆಯ ವ್ಯಾಪಾರಿಗಳು' ಕಟ್ಟಿಕೊಂಡಿರುವ ಪ್ರಭಾವ ವಲಯಗಳನ್ನು ಹತ್ತಿರದಿಂದ ಅವಲೋಕಿಸಿದಾಗ ಸ್ವಾಯತ್ತೆಯ ನಿಯಮಾವಳಿಗೆ ಪೂರ್ಣ ಅಂಗೀಕಾರದ ಮುದ್ರೆ ಬೀಳುವುದರಲ್ಲಿ ಸಂದೇಹ ಕಾಣುವುದಿಲ್ಲ.

ವಿಶ್ವವಿದ್ಯಾನಿಲಯಗಳ ಹಣಕಾಸು ಆಯೋಗ ಮಾಡಿದೆಯೆನ್ನಲಾದ ಈ ಸ್ವಾಯತ್ತೆಯ ಸಲಹೆಯ ಸಾಧಕ-ಬಾಧಕಗಳನ್ನು ದೇಶದ ಉಳಿದೆಲ್ಲ ವಿಶ್ವವಿದ್ಯಾನಿಲಯಗಳು ಇನ್ನೂ ಚರ್ಚಿಸುತ್ತಲೇ ಇವೆ. ಯಾವ ವಿಶ್ವವಿದ್ಯಾನಿಲಯವೂ ಇದನ್ನು ಇಷ್ಟೊಂದು ಆತುರದಲ್ಲಿ ಅಂಗೀಕರಿಸಲು ಸಿದ್ಧವಾಗಿಲ್ಲ. ಯು. ಜಿ.ಸಿ.ಯ ಸಲಹೆಯನ್ನು ಬ್ರಹ್ಮ ಬರಹವೆಂದಾಗಲೀ-ವೇದ ವಾಕ್ಯವೆಂದಾಗಲೀ ಯಾರೂ ಅಂಗೀಕರಿಸಿಲ್ಲ.

ವಿದ್ಯೆಯನ್ನು ವ್ಯಾಪಾರದ ವಸ್ತುವಾಗಿ ಮಾಡಿ ಜನಜೀವನದ ಎಲ್ಲ ಕ್ಷೇತ್ರಗಳ ತಿರುಳು ತಿನ್ನುತ್ತಿರುವ ಕರಾವಳಿ ಕರ್ನಾಟಕದಲ್ಲಿ ತಲೆ ಎತ್ತಿದ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಯು. ಜಿ. ಸಿ. ಸಲಹೆ ವೇದ ವಾಕ್ಯವಾಗಿ ಬಿಟ್ಟಿದೆ. ಮುಂದಿನ ಪೀಳಿಗೆಯ ಮೇಲೆ ಮಹತ್ವದ ಪರಿಣಾಮ ಬೀರಬಲ್ಲ ಸ್ವಾಯತ್ತೆಯಂತಹ ಗಹನ ವಿಚಾರದ ಮೇಲೆ ಸಾರ್ವಜನಿಕ ಜಿಜ್ಞಾಸೆ ಆಗತ್ಯವೆನ್ನಿಸಿಲ್ಲ.

ಮಂಗಳೂರು ವಿಶ್ವವಿದ್ಯಾನಿಲಯದ ಶೇಕಡಾ 80ರಷ್ಟು ಕಾಲೇಜುಗಳನ್ನು ಖಾಸಗಿ "ಅಂಗಡಿ"ಗಳನ್ನಾಗಿ ಮಾಡಿಕೊಂಡಿರುವ ವಿದ್ಯೆಯ ವ್ಯಾಪಾರೀ ಕೂಟಗಳಿಗೆ ಈ ಸ್ವಾಯತ್ತೆ ಬೇಕಾಗಿದೆ. ಆದ್ದರಿಂದಲೇ ಸ್ವಾಯತ್ತೆಯ ನಿಯಮ ತರಾತುರಿಯಲ್ಲಿ ಅಂಗೀಕಾರವಾಗುತ್ತಿರಬಹುದು.

ಆದರೆ ಈ ಸ್ವಾಯತ್ತೆ ನಿಯಮದ ಅಂಗೀಕಾರದಿಂದ ಮುಂದೆ ಆಗಬಹುದಾದ ಅನಾಹುತಗಳ ಬಗ್ಗೆ ಈ ಸಂದರ್ಭದಲ್ಲಿ ನಾವು ಕೆಲವು ಎಚ್ಚರಿಕೆಯ ಮಾತುಗಳನ್ನು ಹೇಳಲೇಬೇಕಾಗಿದೆ.

ನಿಯಮದಂತೆ ನಾಳೆ ಸ್ವಾಯತ್ತೆ ಪಡೆವ ಖಾಸಗಿ ಕಾಲೇಜುಗಳು ಪೂರ್ಣತಂತ್ರ-ಸ್ವತಂತ್ರವಾಗುವವು. ಯಾವ ವಿದ್ಯಾರ್ಥಿಯನ್ನು ಎಲ್ಲಿಡಬೇಕು-ಹೇಗೆ ನೋಡಿಕೊಳ್ಳಬೇಕು-ಯಾರನ್ನು ಫೇಲ್ ಮಾಡಬೇಕು-ಯಾರಿಗೆ ಪದವಿ ಕರುಣಿಸಬೇಕು-ಎಂಬುದನ್ನೆಲ್ಲಾ ಈ ಖಾಸಗಿ ಕಾಲೇಜುಗಳ ಆಡಳಿತ ವರ್ಗದವರೇ ನಿರ್ಧರಿಸುತ್ತಾರೆ. ವಿದ್ಯಾರ್ಥಿಗಳ ನಡವಳಿಕೆ ಕಾಲೇಜಿನ ಆಡಳಿತ ವರ್ಗಕ್ಕೆ ಹಿಡಿಸದಿದ್ದರೆ ಅವರ ಭವಿಷ್ಯದ ಸಮಾಧಿಯಾಗಬಹುದು.

ಆಡಳಿತ ವರ್ಗದವರ ಮರ್ಜಿಗೆ ಮಣಿ ಹಾಕುವ ಅಥವಾ ಅವರ ತಾಳಕ್ಕೆ ಕುಣಿವ ಕಳಪೆ ಅಧ್ಯಾಪಕರ ಕೂಟವನ್ನು ಕಟ್ಟಿಕೊಂಡು ಈ ಖಾಸಗಿ ಕಾಲೇಜುಗಳು ಡಿಗ್ರಿಯನ್ನು ಒಂದು ಮಾರಾಟದ ವಸ್ತುವಾಗಿ ಮಾಡಬಹುದು. ಈ ಆಡಳಿತ ವರ್ಗದವರು ತಮಗೆ ಸರಿ ಕಾಣದ ವೃತ್ತಿನಿಷ್ಠ ಅಧ್ಯಾಪಕರಿಗೆ ಉಸಿರು ಕಟ್ಟುವ ವಾತಾವರಣವನ್ನು ನಿರ್ಮಿಸಿ ಅವರನ್ನೆಲ್ಲ ಓಡಿಸಬಹುದು.

ಸ್ವಾಯತ್ತೆ ನಿಯಮವು ಒಟ್ಟಿನಲ್ಲಿ ಖಾಸಗಿ ಕಾಲೇಜುಗಳ ಆಡಳಿತ ಮಂಡಳಿಗಳಿಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ಸವಾರಿ ಮಾಡಲು ಮುಕ್ತ ಅವಕಾಶವನ್ನು ಕೊಡುತ್ತದೆ.

ಈ ಸ್ವಾಯತ್ತೆ ನಿಯಮಾವಳಿಯ ಅನಿಷ್ಟಕಾರಕ ಗುಣಗಳು ಇಷ್ಟೇ ಅಲ್ಲ. ಭಾರತೀಯ ಸಮಾಜದ ಮಹಾ ಕ್ಯಾನ್ಸರ್ ಎನ್ನಿಸಿಕೊಂಡಿರುವ ಜಾತೀಯತೆ ಇದರಿಂದಾಗಿ ಉಲ್ಬಣಗೊಳ್ಳುವ ದೊಡ್ಡ ಅಪಾಯವಿದೆ. ಈಗ ವಿಶ್ವವಿದ್ಯಾನಿಲಯದ ಕೇಂದ್ರೀಕೃತ ಆಶ್ರಯದಲ್ಲಿ ನಡೆಯುತ್ತಿರುವ ಪದವಿ ಪರೀಕ್ಷೆಗಳಲ್ಲಿ ಜಾತಿ ವಾತ್ಸಲ್ಯ ಅಥವಾ ಈರ್ಷೆಯ ಅಭಿವ್ಯಕ್ತಿಗೆ ಅಷ್ಟೊಂದು ಅವಕಾಶ ವಿಲ್ಲ. ಆದರೆ ಸ್ವಾಯತ್ತೆಯ ನಿಯಮ ಜಾರಿಗೆ ಬಂದರೆ ಆಯಾಯ ಕಾಲೇಜಿನ ಶೈಕ್ಷಣಿಕ ವಿಭಾಗಗಳ ಮುಖ್ಯಸ್ಥರೇ ವಿದ್ಯಾರ್ಥಿಗಳ ಭವಿಷ್ಯವನ್ನು ಬರೆಯುವ ಬ್ರಹ್ಮರಾಗುತ್ತಾರೆ. ಅವರೇ ಪರೀಕ್ಷಾ ಮಂಡಳಿಗಳ ಅಧ್ಯಕ್ಷರಾಗುತ್ತಾರೆ. ತಮಗಿಷ್ಟ ಬಂದವರನ್ನು ಪರೀಕ್ಷಕರಾಗಿ ನೇಮಿಸಿಕೊಳ್ಳುತ್ತಾರೆ. ಆಡಳಿತ ವರ್ಗದವರು ಮತ್ತು ವಿಭಾಗದ ಮುಖ್ಯಸ್ಥರು ಸೇರಿ ಏನು ಬೇಕಾದರೂ ಮಾಡಬಹುದು. ವಿಭಾಗದ ಮುಖ್ಯಸ್ಥರ ಜಾತಿಗೆ ಸೇರಿದವರು ಸುದೈವಿಗಳಾಗಬಹುದು. ಅವರು ದ್ವೇಷಿಸುವ ಜಾತಿಗೆ ಸೇರಿದ ವಿದ್ಯಾರ್ಥಿಗಳು ದುರ್ದೈವಿಗಳ ಪಟ್ಟಿಗೆ ಸೇರಬಹುದು.

ವಿದ್ಯೆಯ ವ್ಯಾಪಾರಿಗಳಾದ ಖಾಸಗಿ ಕಾಲೇಜುಗಳವರು ತಮಗಿಷ್ಟ ಬಂದ ಹೊಸ ಕೋರ್ಸ್‌ಗಳನ್ನು ಆರಂಭಿಸಲೂ ಸ್ವಾಯತ್ತೆ ನಿಯಮಾವಳಿಯಲ್ಲಿ ಅವಕಾಶವಿದೆ. ಒಂದೆಡೆಯಲ್ಲಿ ವಿಶ್ವವಿದ್ಯಾನಿಲಯದ ನಿಯಮಗಳು, ಕ್ಯಾಪಿಟೇಶನ್ ಶುಲ್ಕ ರದ್ದತಿ ಶಾಸನ ಮೊದಲಾದ ಹಲವಾರು ನಿರ್ಬಂಧಗಳ ನಡುವೆಯೂ ವೃತ್ತಿ ಶಿಕ್ಷಣ ಕಾಲೇಜುಗಳನ್ನು ವಿದ್ಯೆಯ ಮಾರಾಟದ ಅಂಗಡಿಗಳಾಗಿ ಪರಿವರ್ತಿಸಿದ ಈ ಖಾಸಗಿ ಕಾಲೇಜುಗಳಿಗೆ ಹೊಸ ಕೋರ್ಸ್‌ಗಳನ್ನಾರಂಭಿಸಲು ಮುಕ್ತ ಅವಕಾಶ ಸಿಕ್ಕಿದರೆ ಏನಾಗಬಹುದೆಂಬುವನ್ನು ಸ್ವಲ್ಪ ಯೋಚಿಸಿ.

ಸಮೂಹ ಹಿತದ ಪ್ರಜ್ಞೆ ಇರುವವರೆಲ್ಲ ಈ ಸ್ವಾಯತ್ತೆ ನಿಯಮಾವಳಿಯ ಆಪತ್ಕಾರಿ ಆವಿಷ್ಕಾರಗಳ ಬಗ್ಗೆ ಯೋಚಿಸಬೇಕಾದ ಕಾಲವಿದು. ಈ ಸಂದರ್ಭದಲ್ಲಿ ಸಾರ್ವಜನಿಕ ಅಭಿಪ್ರಾಯದ ಸಾರ್ವಭೌಮತೆ ರೂಪುಗೊಳ್ಳದಿದ್ದರೆ ಮುಂದೆ ಪರಿತಪಿಸಬೇಕಾದೀತು.

ಹತ್ತಾರು ಮಂದಿ ಜಾಣ ಜನರ ಕೂಟ ಜನಾಂಗ ಜೀವನದ ಮೇಲೆ ಈ ತೆರದ ಹಾವಳಿ ನಡೆಸಲು ಅವಕಾಶ ಕೊಡುವುದು ಆತ್ಮವಂಚನೆ ಎನ್ನಿಸುತ್ತಿದೆ. ಜನಸಾಮಾನ್ಯರ ಜೀವನದ ಸುತ್ತ ಆವರಿಸುತ್ತಿರುವ ಕಪಟಾಚಾರಗಳು-ಮೋಸ-ವಂಚನೆಗಳ ಜಾಲವನ್ನು ಕಿತ್ತೊಗೆಯಬೇಕಾದ ಕಾಲ ಬಂದಿದೆ.

ಮುಂಗಾರು
ಬುಧವಾರ, ಸೆಪ್ಟೆಂಬರ್ 17, 1986

ಮಾತಿನಿಂದ ಭೂತ ಓಡೀತೇ?

ನಾಗರಿಕರ ಸಮಸ್ಯೆಗಳಿಗೆ ಸ್ಪಂದಿಸದೆ ಇರುವ ಹಾಗೂ ನಗರಪಾಲಿಕೆಯ ಕಾರ್ಯನಿರ್ವಹಣೆಯಲ್ಲಿ ಕರ್ತವ್ಯಲೋಪ ಮಾಡುವ ಬೇಜವಾಬ್ದಾರಿ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯವಾದ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಾಗಿ ಬೆಂಗಳೂರು ನಗರದ ಹೊಸ ಮೇಯರ್ ಬಿ. ವಿ. ಪುಟ್ಟೇಗೌಡ ಅವರು ಎಚ್ಚರಿಕೆ ನೀಡಿರುವ ವರದಿ ಬಂದಿದೆ. ಉತ್ತಮ ಕೆಲಸ ಮಾಡಿದವರಿಗೆ ಪ್ರೋತ್ಸಾಹವೂ ತಪ್ಪಿತಸ್ಥರಿಗೆ ದಂಡನೆಯೂ ನಾಗರಿಕರ ಹಿತದೃಷ್ಟಿಯಿಂದ ಅಗತ್ಯ ಎಂದು ಅವರು ಹೇಳಿದ್ದಾರೆ.

ತಪ್ಪಿತಸ್ಥ ಅಧಿಕಾರಿಗಳನ್ನು ಸರಿದಾರಿಗೆ ತರುವ ಉದ್ದೇಶದ, ಭ್ರಷ್ಟರನ್ನು . ಶುದ್ಧೀಕರಿಸುವಂತಹ ಹೇಳಿಕೆಗಳನ್ನು ರಾಜಕೀಯ ಅಧಿಕಾರದ ಮೇಲ್‌ಸ್ತರದಲ್ಲಿ ಕುಳಿತಿರುವವರು ಹೀಗೆ ಆಗಿಂದಾಗ್ಗೆ ಹೇಳಿದ್ದುಂಟು. ಸಚಿವರೂ ಶಾಸಕರೂ ಸಂಸತ್ ಸದಸ್ಯರೂ ಇಂತಹ ಮಾತುಗಳನ್ನಾಡಿದಾಗ ಪ್ರಜೆಗಳ ಕಿವಿನಿಮಿರಿ ಒಳ್ಳೆಯ ದಿನಗಳ ನಿರೀಕ್ಷೆಯ ಗರಿ ಕೆದರುವುದುಂಟು. ಈ ಸಮಾಜದಲ್ಲಿ ಏನೂ ಆಗುವುದಿಲ್ಲವೆಂಬ ಜಡ ಪ್ರವೃತ್ತಿಯನ್ನು ರೂಢಿಸಿ ಕೊಂಡವರಿಗೂ ರೋಮಾಂಚನ ಆಗುವುದುಂಟು.

ಮೇಯರ್ ಪುಟ್ಟೇಗೌಡರು ಹೇಳಿದ್ದೆಲ್ಲ ನಿಜವೇ. ಈ ಸಮಾಜದಲ್ಲಿ ನಮ್ಮ ಅಧಿಕಾರ ವ್ಯವಸ್ಥೆಯಲ್ಲಿ, ನೌಕರಶಾಹಿಯಲ್ಲಿ ಬೇಜವಾಬ್ದಾರಿ ಪ್ರವೃತ್ತಿಯೂ, ಉಡಾಫೆಯೂ, ಕರ್ತವ್ಯ ಭ್ರಷ್ಟತೆಯೂ, ಭ್ರಷ್ಟಾಚಾರ–ಲಂಚ-ರುಷುವತ್ತುಗಳೂ ಸಾರಾ ಸಗಟಾಗಿವೆ. ಅದಕ್ಕೆ ಯಾರ ಬಳಿಯೂ ಕಣಿ ಕೇಳಬೇಕಾಗಿಲ್ಲ.ಕೆಲವು ಇಲಾಖೆಗಳಲ್ಲಿ ಹೆಚ್ಚು, ಕೆಲವದರಲ್ಲಿ ಕಮ್ಮಿ-ಅಷ್ಟೆ. ಹಣಕೊಟ್ಟರೆ ಯಾವ ಕೆಲಸ ಬೇಕಾದರೂ ಆಗುತ್ತದೆ. ಒಂದೇ ಇಲಾಖೆಯ ಒಬ್ಬ ಅಧಿಕಾರಿಯ ಬಳಿ ಕೆಲಸ ಆಗದಿದ್ದರೆ ಅದೇ ಇಲಾಖೆಯ ಇನ್ನೊಬ್ಬ, ಮೊದಲಿನವನ ಮೇಲೆ ಕೂತವ ಕೆಲಸ ಮಾಡಿ ಕೊಡುತ್ತಾನೆ. ಭ್ರಷ್ಟತೆಯ ಈ ಪ್ರವೃತ್ತಿ ನಮ್ಮ ಖಾಸಗಿ ಕ್ಷೇತ್ರದಲ್ಲಿ ಮನೆಮಾತಾಗಿರುವ ಸ್ವಾರ್ಥಸಾಧಕತನದಿಂದಲೇ ಬಂದದ್ದು. ಬುದ್ಧಿಬಲವಿರುವ ಜಾಣನು ಮೂಢನೂ ಅಜ್ಞಾನಿಯೂ ಆದ ಇತರರನ್ನು ಶೋಷಣೆ ಮಾಡಿ ಮಾನವೀಯತೆಯನ್ನು ಮುರಿದು ತಿನ್ನುವ ಕ್ಯಾನ್ಸರ್ ರೋಗವೇ ಆಡಳಿತ ರಂಗವನ್ನು ಹೊಕ್ಕು ಹಾವಳಿ ನಡೆಸುತ್ತಿದೆ.

ಸರಕಾರಿ ಇಲಾಖೆಗಳು ಮಾಡಬೇಕಾದ ಯಾವ ಸಾರ್ವಜನಿಕ ಹಿತದ ಕೆಲಸವೂ ನಮ್ಮಲ್ಲಿ ಕಾಲಕ್ಕೆ ಸರಿಯಾಗಿ ಪೂರ್ತಿಗೊಂಡದ್ದಿಲ್ಲ. ಹಾಗೇನಾದರೂ ಯಾವುದಾದರೂ ಕೆಲಸ ಕ್ಲಪ್ತಕಾಲದಲ್ಲಿ ಪೂರ್ತಿಗೊಂಡದ್ದಿದ್ದರೆ ಅದು ಇಪ್ಪತ್ತನೇ ಶತಮಾನದ ಅದ್ಭುತಗಳಲ್ಲಿ ಒಂದಾಗುತ್ತದೆ. ಖಾಸಗಿಯವರ ಹಿತಕ್ಕಿರುವ ಕೆಲಸಗಳು ಮಾತ್ರ–ಅದರಿಂದ ಇಲಾಖೆಯ ಸಂಬಂಧಪಟ್ಟವರಿಗೂ ಹಿತವಾಗುವುದಿದ್ದರೆ-ಕ್ಲಪ್ತವಾಗಿ ನೆರವೇರುತ್ತವೆ. ಇಲ್ಲಿ ಸಾರ್ವಜನಿಕ ಕೆಲಸಗಳು ನನೆಗುದಿಗೆ ಬೀಳುತ್ತವೆ. ಶತಮಾನಗಳಷ್ಟು ಬಾಳಬೇಕಾದ ಸೇತುವೆಗಳು ಕಟ್ಟಿದ ದಶಕದಲ್ಲೇ ಕುಸಿದು ಬೀಳುತ್ತವೆ. ನಮ್ಮ ಬಸ್ ನಿಲ್ದಾಣಗಳ ನಿರ್ಮಾಣಕ್ಕೆ ಒಂದೆರಡು ದಶಕಗಳೇ ಬೇಕಾಗುತ್ತವೆ. ನಿಲ್ದಾಣಕ್ಕೆ ಬಸ್ಸುಗಳು ಬರತೊಡಗಿ ಮೂರು ವರ್ಷ ಕಳೆದರೂ ನೆಲಕ್ಕೆ ತಾರು ಬರುವುದಿಲ್ಲ. ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರಿಗಳೇ ಇರುವುದಿಲ್ಲ. ಕುಡಿಯುವುದಕ್ಕೆ ನೀರೂ ಸಿಗುವುದಿಲ್ಲ.

ಮೊನ್ನೆ ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲೊಂದು ತಮಾಷೆ ನಡೆಯಿತು. ರಾಷ್ಟ್ರಪತಿ ಜೈಲ್‌ಸಿಂಗರು ಬರುವ ದಾರಿಯುದ್ದಕ್ಕೂ ಕೆ.ಇ.ಬಿ. ಯವರು ಎರಡೇ ವಾರಗಳಲ್ಲಿ ಲೈಟು ಕಂಬಗಳನ್ನು ಕಿತ್ತು ದೂರ ನೆಟ್ಟು ದಾರಿ ಅಗಲ ಮಾಡಲು ಅವಕಾಶ ಮಾಡಿದರು. ಇದೇ ಮುತುವರ್ಜಿ, ಇದೇ ಕಾರ್ಯಕ್ಲಪ್ತತೆ, ಇದೇ ಕರ್ತವ್ಯ ಪರಾಯಣತೆ ಬೇರೆಡೆಯೂ ಬರಬೇಕಿದ್ದರೆ ಎಲ್ಲ ಊರುಗಳಿಗೂ ಜೈಲ್‌ಸಿಂಗರೇ ಬರಬೇಕೇ ಎಂದು ಸಾರ್ವಜನಿಕರು ಕೆಇಬಿಯವರಲ್ಲಿ ಸವಾಲು ಹಾಕಿದರು.

ಈ ಪ್ರಶ್ನೆ ತುಂಬಾ ಪ್ರಸ್ತುತ. ನಮ್ಮಲ್ಲಿ ಸಾಮರ್ಥ್ಯ ಇದೆ. ಕೆಲಸ ಮಾಡಬೇಕೆಂದರೆ ಉತ್ಸಾಹ-ಉಮೇದುಗಳು ಬರುತ್ತವೆ. ಈ ಕರ್ತವ್ಯ ಪರಾಯಣತೆಯು ಮೇಯರ್ ಪುಟ್ಟೇಗೌಡರಂತಹವರ ಮಾತಿನ ಬೆದರಿಕೆಯಿಂದ ಉಂಟಾಗುವುದಿಲ್ಲ. ಅಂಥ ಎಷ್ಟೋ ಹುಸಿ ಬೆದರಿಕೆಗಳನ್ನು ನುಂಗಿ ಅರಗಿಸಿಕೊಂಡವರು ನಮ್ಮ ಅಧಿಕಾರಿಗಳು. ಕರ್ತವ್ಯ ಮಾಡದೆ ಇದ್ದರೆ ಉದ್ಯೋಗಕ್ಕೇ ಸಂಚಕಾರವುಂಟೆಂಬ ಭಯ ಅವರಲ್ಲುಂಟಾಗುವಂತೆ ಮಾಡಬೇಕು.

ಇಂಥ ಭಯವನ್ನು ಬಿತ್ತುವ ಕೆಲಸ ನಮ್ಮ ರಾಜಕಾರಣಿಗಳಿಂದ ಆದೀತು ಎಂದು ನಿರೀಕ್ಷಿಸಿದರೇ ತಪ್ಪೇ ಆದೀತು. ಕಳೆದ ನಾಲ್ಕು ದಶಕಗಳಲ್ಲಿ ಅವರದನ್ನು ಮಾಡಿಲ್ಲ. ಇನ್ನು ಮಾಡಿಯಾರೇ ? ಬದಲಾಗಿ ಅವರೇ ಭ್ರಷ್ಟಾಚಾರದ ಬಲೆಯಲ್ಲಿ ಬಿದ್ದು ಒದ್ದಾಡುತ್ತಿದ್ದಾರೆ. ಬದಲಾಗಿ ನೌಕರಶಾಹಿಯ ಹಾಗೂ ರಾಜಕಾರಣಿಗಳ ಭ್ರಷ್ಟಾಚಾರದ ಭೂತ ಬಿಡಿಸುವ ಕೆಲಸ ಜನರಿಂದಲೇ ಆಗಬೇಕು. ಅದಕ್ಕೆ ಏನೆಲ್ಲ ಏರ್ಪಾಡುಗಳು ಬೇಕೋ ಅವನ್ನೆಲ್ಲ ಮಾಡಿಕೊಳ್ಳುವುದು ಸಮಾಜದ ಪ್ರಜ್ಞಾವಂತರ ಕರ್ತವ್ಯ. ಜೆ. ಪಿ.ಯವರ ನವನಿರ್ಮಾಣ ಕ್ರಾಂತಿ ಈ ನಿಟ್ಟಿನಲ್ಲೊಂದು ನಿದರ್ಶನ.

ಮುಂಗಾರು
ಗುರುವಾರ, ಸೆಪ್ಟೆಂಬರ್ 18, 1986

ನ್ಯಾಯಾಂಗ ನೇಮಕಾತಿಗೆ ಮಂಡಳಿ ಮಾಡಿ

ನ್ಯಾಯಾಧೀಶರ ನೇಮಕಾತಿ ಅಧಿಕಾರ ಸರಕಾರದ ಕೈಯಲ್ಲಿರಕೂಡದು ಎಂದು ಜನತಾ ಪಕ್ಷ ನಾಯಕ ಪ್ರೊ|ಮಧು ದಂಡವತೆ ಅವರು ಹೇಳಿರುವುದು ವರದಿಯಾಗಿದೆ. ನ್ಯಾಯಾಂಗವು ಪ್ರಜಾಪ್ರಭುತ್ವದ ಸವಾಲುಗಳನ್ನು ಎದುರಿಸಬೇಕಾದರೆ, ಜನಸಮುದಾಯದ ನಿರೀಕ್ಷೆಯನ್ನು ಹುಸಿಗೊಳಿಸದೆ ಇರಬೇಕಾದರೆ ಅದು ಸ್ವತಂತ್ರವಾಗಿರಬೇಕು. ಸರಕಾರದಿಂದಲೇ ನೇಮಕಗೊಂಡು ಅದರ ಕೃಪಾಶ್ರಯದಲ್ಲೇ ಇರುವ ನ್ಯಾಯಾಂಗದಿಂದ ಇದು ಸಾಧ್ಯವಾಗಲಾರದು ಎಂಬ ಅಭಿಪ್ರಾಯವನ್ನು ದಂಡವತೆಯವರು ವ್ಯಕ್ತಪಡಿಸಿದ್ದಾರೆ.

ನ್ಯಾಯಾಂಗವನ್ನು ಹದ್ದು ಬಸ್ತಿನಲ್ಲಿಯೂ ಹಂಗಿನಲ್ಲಿಯೂ ಇಟ್ಟುಕೊಳ್ಳುವಂತಹ ಬಹು ಕಾಲದಿಂದ ಬೆಳೆದು ಬಂದಂತಹ ಸರಕಾರದ ನಡವಳಿಕೆಯಲ್ಲದೆ ಪ್ರೊ| ದಂಡವತೆಯವರ ಈ ಅಭಿಪ್ರಾಯಕ್ಕೆ ಕಾರಣ ಮೊನ್ನೆ ಮೊನ್ನೆ ನಡೆದ ದೆಹಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ನೇಮಕಾತಿಯ ಪ್ರಕರಣ. ಸೇವಾ ಹಿರಿತನದ ನೆಲೆಯಲ್ಲಿ ಟಿ. ಪಿ. ಸಿ. ಚಾವ್ಲಾ ಅವರು ಮುಖ್ಯ ನ್ಯಾಯಾಧೀಶರಾಗಲು ಅರ್ಹರು. ಈ ಸಂಬಂಧವಾಗಿ ಈಗಿರುವ ನಿಯಮದಂತೆ ಕಾನೂನು ಸಚಿವರು ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರೊಡನೆ ಸಮಾಲೋಚಿಸಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಹುದ್ದೆಗೆ ಟಿ. ಪಿ. ಸಿ. ಚಾವ್ಲಾರ ಹೆಸರನ್ನು ಶಿಫಾರಸು ಮಾಡಿದ್ದರು. ಈ ಕಡತ ಪ್ರಧಾನಿಯ ಮೂಲಕವಾಗಿ ರಾಷ್ಟ್ರಪತಿಗಳಲ್ಲಿಗೆ ತೆರಳಿ ಅವರ ಔಪಚಾರಿಕ ಸಹಿ ಬೀಳಬೇಕಾದ್ದು ವಾಡಿಕೆ.

ಈ ವಾಡಿಕೆಗೆ, ಈ ನಿಯಮಕ್ಕೆ ಈ ಬಾರಿ ಭಂಗ ಬಂತು. ಕಾನೂನು ಸಚಿವರು ಟಿ. ಪಿ. ಸಿ. ಚಾವ್ಲಾರ ಹೆಸರನ್ನು ಪ್ರಧಾನ ಮಂತ್ರಿಯವರಲ್ಲಿಗೆ ಕಳಿಸಿದ್ದೇನೋ ಹೌದು. ಆದರೆ ಕಡತ ರಾಷ್ಟ್ರಪತಿಗಳಲ್ಲಿಗೆ ಹೋಗಬೇಕಾದರೆ ಚಾವ್ಲಾರ ನೇಮಕಾತಿಯ ಹುದ್ದೆಯ ಹೆಸರು ದೆಹಲಿ ಹೈಕೋರ್ಟಿನ ಹಂಗಾಮಿ ಮುಖ್ಯ ನ್ಯಾಯಾಧೀಶರು ಎಂದು ತಿದ್ದುಪಡಿ ಹೊಂದಿತು. ಇದು ಆದದ್ದು ಪ್ರಧಾನಿಯ ಕಚೇರಿಯಲ್ಲಿ ಎಂಬ ವಾರ್ತೆ ದೆಹಲಿಯ ವಕೀಲ ಸಮುದಾಯದಲ್ಲಿ ಹಬ್ಬಿ ಹೈಕೋರ್ಟಿನ ವಕೀಲರು ಮುಷ್ಕರ ನಡೆಸಿದರು. ನ್ಯಾಯಾಲಯದ ಬಹಿಷ್ಕಾರ 20 ದಿನಗಳ ಕಾಲ ನಡೆದ ಮೇಲೆ ಪ್ರಧಾನಿ ರಾಜೀವ ಗಾಂಧಿ ಹಸ್ತಕ್ಷೇಪ ನಡೆಸಿ ತಮಗೇನೂ ತಿಳಿಯದೆಂದೂ ಈ ಬಗ್ಗೆ ಮರು ಪರಿಶೀಲನೆ ನಡೆಸುವುದಾಗಿಯೂ ಆಶ್ವಾಸನೆ ಕೊಟ್ಟ ಮೇಲೆ ಮುಷ್ಕರ ಮುಕ್ತಾಯಗೊಂಡಿತು.

ನ್ಯಾಯಾಂಗದಲ್ಲಿ ಸರಕಾರದ ಹಸ್ತಕ್ಷೇಪದ ನಿದರ್ಶನ ಇದೊಂದೇ ಅಲ್ಲ. ಈ ಹಿಂದೆ ಹೈಕೋರ್ಟಿನ ನ್ಯಾಯಾಧೀಶರ ವರ್ಗಾವಣೆ ಪರಿಪಾಠ ಇರಲಿಲ್ಲ. ಕಳೆದ ದಶಕದಲ್ಲಿ ಅದು ಶುರುವಾಯಿತು. ಇದು ನ್ಯಾಯಾಧೀಶರನ್ನು ಹದ್ದುಬಸ್ತಿನಲ್ಲಿರಿಸಿ ಹಂಗಿಗೊಳಪಡಿಸುವ ಒಂದು ವಿಧಾನ. ಇತ್ತೀಚೆಗೆ ಸುಪ್ರೀಂ ಕೋರ್ಟು ನೀಡಿದ ಕೆಲವು ಮಹತ್ವದ ತೀರ್ಮಾನಗಳ ಮೇಲೆ ಸಂಸತ್ತಿನೊಳಗೆ ವೈಯಕ್ತಿಕವಾಗಿ ನಿಂದನೆಯ ಸತ್ರವನ್ನೇ ನಡೆಸಲು ಆಳುವ ಪಕ್ಷವು ಅವಕಾಶ ಕೊಟ್ಟಿತು. ಮೊನ್ನೆ ತಾನೇ ರಾಷ್ಟ್ರಗೀತೆಯ ವಿಚಾರದಲ್ಲಿ ಸುಪ್ರೀಂ ಕೋರ್ಟು ನೀಡಿದ ತೀರ್ಪಿನ ಬಗ್ಗೆ ರಾಜೀವ ಗಾಂಧಿಯವರು ನೇರವಾಗಿಯೇ ಅಭಿಪ್ರಾಯ ಕೊಟ್ಟು ತೀರ್ಮಾನವನ್ನು ಕೋರ್ಟು ಸರಿಪಡಿಸದಿದ್ದರೆ ಸರಕಾರವು ಕಾನೂನನ್ನು ತಿದ್ದುವುದು ಎಂಬ ಪರೋಕ್ಷ ಬೆದರಿಕೆಯೊಡ್ಡಿದರು,

ಇದೆಲ್ಲವೂ ನ್ಯಾಯಾಂಗವನ್ನು ಧೃತಿಗೆಡಿಸಿ ಮುಷ್ಟಿಯೊಳಗೆ ಇರಿಸಿಕೊಳ್ಳುವ ತಂತ್ರಗಳು ಎನ್ನದೆ ವಿಧಿಯಿಲ್ಲ. ಪ್ರಜಾಪ್ರಭುತ್ವವೊಂದರಲ್ಲಿ ನ್ಯಾಯಾಂಗವು ನ್ಯಾಯ ಪಕ್ಷಪಾತಿಯಾಗಿ ಶ್ರೀಸಾಮಾನ್ಯನ ಪಕ್ಷಪಾತಿಯಾಗಿ ಕೆಲಸ ಮಾಡಬೇಕಾಗುತ್ತದೆ. ಹಾಗೆ ಮಾಡಬೇಕಿದ್ದರೆ ಅದಕ್ಕೆ ಯಾರಿಂದಲೂ ಯಾವ ರೂಪದಲ್ಲಿಯೂ ಭಯ, ಆತಂಕಗಳು ಬರಬಾರದು. ನ್ಯಾಯಾಧೀಶರಿಗೆ ತಮ್ಮ ಉದ್ಯೋಗ ಹೋದೀತೆಂಬ ಹೆದರಿಕೆ ಹುಟ್ಟಬಾರದು. ಭಾರತೀಯ ನ್ಯಾಯಾಂಗದ ಇತ್ತೀಚಿನ ವರ್ಷಗಳ ಸಾಧನೆಯನ್ನು ಗಮನಿಸಿದವರಿಗೆ ಅದು ಜನಸಾಮಾನ್ಯರ ಹಿತರಕ್ಷಣೆಯ ಕಾವಲುಗಾರನಂತೆ ವ್ಯವಹರಿಸಿದ್ದರ ಅರಿವಿದೆ. ಸಮೂಹ ಹಿತದ ಪ್ರಜ್ಞೆ ನಮ್ಮ ನ್ಯಾಯಾಂಗದಲ್ಲಿ ಸಳಸಳಿಸಿ ಅರಳುತ್ತಿರುವುದು ನಮಗೆಲ್ಲ ಖುಷಿ ಕೊಟ್ಟಂತಹ ವಿಚಾರ.

ಈ ಪ್ರವೃತ್ತಿ ಉಳಿದು ಬೆಳೆಯಬೇಕಾದರೆ ನ್ಯಾಯಾಂಗವು ಭೀತಿಮುಕ್ತವಾಗಬೇಕು. ಹಂಗಿನ ಕೂಳು ಅದರದ್ದಾಗಬಾರದು. ನ್ಯಾಯಾಧೀಶರ ನೇಮಕವು ಸಮಾಜವು ಅಂಗೀಕರಿಸಿದ ಸ್ಥೂಲ ನಿಯಮಗಳನ್ವಯ ನಡೆಯಬೇಕು. ಈ ನೇಮಕದ ವ್ಯವಸ್ಥೆ ಸರಕಾರದ ನಿಯಂತ್ರಣದಿಂದ ಹೊರಗಿರಬೇಕು. ನ್ಯಾಯಾಧೀಶರ ನೇಮಕಾತಿ, ಬಡತಿ, ಸೇವಾ ಸೌಲಭ್ಯಗಳು ವೇತನ ಮಟ್ಟ-ಇವೆಲ್ಲವನ್ನೂ ನೋಡಿಕೊಳ್ಳಲು ಸ್ವಯಂ ಅಧಿಕಾರವುಳ್ಳ ಸ್ಥಾಯೀ ನ್ಯಾಯಾಂಗ ಮಂಡಳಿಯೊಂದನ್ನು ನೇಮಿಸಬೇಕು. ಇಂಥ ಒಂದು ಸ್ವತಂತ್ರ ಮಂಡಳಿಯು ಮಾತ್ರವೇ ನ್ಯಾಯಾಂಗದ ಬಗೆಗೆ ಜನಸಾಮಾನ್ಯರಿಗೂ ವಿಚಾರವಂತರಿಗೂ ಇರುವ ನಿರೀಕ್ಷೆಯನ್ನು ಹುಸಿಗೊಳಿಸದೆ ಕಾಯ್ದುಕೊಳ್ಳುವುದು ಸಾಧ್ಯ.

ಮುಂಗಾರು

ಶುಕ್ರವಾರ, ಸೆಪ್ಟೆಂಬರ್ 19, 1986

ಹೂಳಲ್ಲಿ ಹೂತು ಹೋಗದಿರಲಿ

ಮಂಗಳೂರು ಹಳೆ ಬಂದರು ಮುಖದ ಅಳಿವೆಯಲ್ಲಿ ತುಂಬಿರುವ ಹೂಳು ತೆಗೆಯಲು ಐವತ್ತು ಲಕ್ಷ ರೂಪಾಯಿಗಳನ್ನು ಸರಕಾರ ತೆಗೆದಿರಿಸಿರುವುದಾಗಿ ರಾಜ್ಯದ ರೇಶ್ಮೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವ ಕೆ. ಎಂ. ಕೃಷ್ಣಾ ರೆಡ್ಡಿ ಅವರು ಮಂಗಳೂರಿನಲ್ಲಿ ಹೇಳಿರುವುದು ವರದಿಯಾಗಿದೆ. ಹಿಂದಿನ ಸಚಿವರುಗಳಂತೆ ತಾವು ಮಾತಿನ ಭರವಸೆಗಳನ್ನು ಮಾತ್ರ ನೀಡುವುದರಲ್ಲಿ ಆಸಕ್ತಿ ಹೊಂದಿಲ್ಲ, "ಹೂಳು ಎತ್ತುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ" ಎಂದು ಕೂಡ ಹೇಳಿದ್ದಾರೆ.

ದಯವಿಟ್ಟು ಅವರು ಅದನ್ನು ಮಾಡಬೇಕು. ಕನ್ನಡ ಕರಾವಳಿಯ ಮೀನುಗಾರರು ಸರಕಾರದ, ಸಚಿವರ, ಅಧಿಕಾರಿಗಳ ಯಾವ ಮಾತನ್ನೂ ನಂಬದೇ ಇರುವ ಪರಿಸ್ಥಿತಿ ಈಗ ಇದೆ. ತಮ್ಮ ಸರಕಾರದ ಮೇಲೆ ಬಡ ಮೀನುಗಾರ ಸಮುದಾಯದ ವಿಶ್ವಾಸವನ್ನು ಮತ್ತೆ ನೆಲೆಗೊಳಿಸುವುದಕ್ಕಾಗಿಯಾದರೂ ಕೃಷ್ಣಾ ರೆಡ್ಡಿಯವರು ಮಾತಿಗೆ ತಪ್ಪದೆ ಕೆಲಸ ಮಾಡಬೇಕು.

ಸಚಿವರ ಭರವಸೆಗಳು ಬಹಳಷ್ಟಿವೆ. ಅದರ ಕತೆಗಳೆಲ್ಲ ಇತಿಹಾಸದಲ್ಲಿ ಸೇರಿ ಹೋಗಿವೆ. ಡೀಸೆಲಿಗೆ ಸಹಾಯಧನ ಕೊಡುವ ಒಂದು ವಿಚಾರವೇ ವರ್ಷಗಟ್ಟಲೆ ಡೋಲಾಯಮಾನ ಪರಿಸ್ಥಿತಿಯಲ್ಲಿ ಇತ್ತು. ಮುಖ್ಯಮಂತ್ರಿಯೇ ವಿಧಾನಸಭೆಯಲ್ಲಿಯೇ ಡೀಸೆಲ್ ಸಬ್ಸಿಡಿ ಸ್ಕೀಮನ್ನು ಪ್ರಕಟಿಸಿದರೂ ಆ ಮೇಲೆ ಅಧಿಕಾರಿಗಳು ಅದಕ್ಕೆ ಕೊಕ್ಕೆ ಹಾಕಿ ನಿಲ್ಲಿಸಿದರು.

ಮಂಗಳೂರು ಹಳೆಬಂದರಿನ ಅಳಿವೆ ಬಾಗಿಲಿನಲ್ಲಿ ತುಂಬಿರುವ ಹೂಳು ಎತ್ತುವ ಪ್ರಕರಣ ಮಾತ್ರ ಜನರ ಸಂಕಷ್ಟದ ಬಗ್ಗೆ ಸರಕಾರಿ ಯಂತ್ರಕ್ಕಿರುವ ಹೃದಯಹೀನತೆಗೆ ಉಜ್ವಲ ನಿದರ್ಶನ. ಮಂಗಳೂರಿನ ಹಳೆ ಬಂದರು ಮೀನುಗಾರಿಕೆ ಕೇಂದ್ರ. ಇಲ್ಲಿಂದ ದಿನಾಲೂ ನೂರಾರು ಯಾಂತ್ರೀಕೃತ ದೋಣಿಗಳು ಮೀನುಗಾರಿಕೆ ದಂಧೆ ನಡೆಸುತ್ತವೆ. ಇವು ಸಮುದ್ರ ಪ್ರವೇಶಿಸುವ ಅಳಿವೆಯಲ್ಲಿ ನೇತ್ರಾವತಿ ಹಾಗೂ ಗುರುಪುರ ನದಿಗಳು ಸಮುದ್ರ ಸೇರುತ್ತವೆ. ಇವೆರಡೂ ತಂದು ತುಂಬುವ ಕೆಸರು ಮಣ್ಣು ದೋಣಿಗಳ ಸಂಚಾರಕ್ಕೆ ಅಡ್ಡಿ ಮಾಡುತ್ತದೆ. ಮೀನುಗಾರಿಕೆ ದೋಣಿಯೊಂದು ಸುಗಮವಾಗಿ ಸಂಚರಿಸಿ ಸಮುದ್ರ ಸೇರಲು ಕನಿಷ್ಠ ಹತ್ತಡಿ ಆಳಬೇಕು. ಮಂಗಳೂರು ಅಳಿವೆಯಲ್ಲಿ ಈಗ ಇರುವ ಆಳ ಮೂರು ಅಡಿಯಷ್ಟು ಮಾತ್ರ.

ಆದ್ದರಿಂದಲೇ ಅಲ್ಲಿ ಅಪಘಾತಗಳು ನಡೆಯುತ್ತಲೇ ಇವೆ. ಪ್ರತಿವರ್ಷವೂ ಅಲ್ಲಿ ಹತ್ತಾರು ದೋಣಿಗಳು ಮುಳುಗುತ್ತಿವೆ. ಅನೇಕ ಜೀವ ಬಲಿ ಈಗಾಗಲೇ ಸಂಭವಿಸಿದೆ. ನಾಲ್ಕಾರು ವರ್ಷಗಳಿಂದ ಈ ವಿದ್ಯಮಾನ ಇದೆ. ಅಳಿವೆಯಲ್ಲಿ ಹೂಳು ತುಂಬ ತೊಡಗಿದಾಗಲೇ ಮೀನುಗಾರರು ಸರಕಾರಕ್ಕೆ ಮೊರೆಯಿಟ್ಟಿದ್ದರು. ಅಧಿಕಾರಿಗಳನ್ನು ಕರೆದಿದ್ದರು.

ವಿಚಾರ ಸಚಿವರ ಕಿವಿ ತಲುಪಿದ ವೇಳೆಗಾಗಲೇ ಅನೇಕ ಅಪಘಾತಗಳು ಆಗಿದ್ದವು. ಇದಕ್ಕೆ ತಾತ್ಕಾಲಿಕ ಪರಿಹಾರ ಸಾಲದು, ಕಾಯಂ ಆದ ತಡೆದಂಡೆಯನ್ನೇ ಕಟ್ಟಬೇಕು, ಅದನ್ನೇ ಮಾಡೋಣ ಎಂದು ಸಚಿವರೊಬ್ಬರು ಬಾಯಿ ತುಂಬ ಮಾತನಾಡಿ ಆ ಮೇಲೆ ಹೆಗಲು ಹಾರಿಸಿ ಹೋದರು. ಹೂಳೆತ್ತಲೂ ಇಲ್ಲ. ಗೋಡೆಯನ್ನೂ ಕಟ್ಟಲಿಲ್ಲ.

ಈ ಹೂಳೆತ್ತುವ ಸಣ್ಣ ಕಾಮಗಾರಿಗೆ ದೇಶಿಯ ಸಂಸ್ಥೆಗಳಾವುವೂ ಮುಂದೆ ಬರುವುದಿಲ್ಲ, ಅದಕ್ಕಾಗಿ ವಿದೇಶಿ ಟೆಂಡರು ಕರೆಯಲಾಗುವುದು ಎಂದು ಆ ಮೇಲೆ ಸರಕಾರ ಪ್ರಕಟಿಸಿತು. ವಿದೇಶಿ ಗುತ್ತಿಗೆದಾರರೂ ಬಂದ ಸೂಚನೆ ಇಲ್ಲ, ಒಮ್ಮೆ ಹೂಳೆತ್ತಿದರೆ ಸಾಲದು, ವರ್ಷ ವರ್ಷವೂ ಎತ್ತುತ್ತಲೇ ಇರಬೇಕು, ಆದ್ದರಿಂದ ಕರ್ನಾಟಕ ಸರಕಾರವೇ ಹೂಳೆತ್ತುವ ಯಂತ್ರವನ್ನು ಖರೀದಿಸುವುದು ಎಂದು ಇನ್ನೊಂದು ಬಾರಿ ಹುಸಿ ಭರವಸೆಯನ್ನು ಹಾರಿಸಿ ಬಿಡಲಾಯಿತು.

ಇದೀಗ ಈ ಭರವಸೆಗಳ ಸಾಲಿಗೆ ತನ್ನದೊಂದನ್ನು ಸೇರಿಸುವ ಸರದಿ ಕೃಷ್ಣಾರೆಡ್ಡಿಯವರದ್ದು. ಮೀನುಗಾರರಿಗೆ ಭರವಸೆಗಳು ಬೇಡ. ಅವರಿಗೆ ಜೀವ ಉಳಿಸುವಂತಹ ಕಾರ್ಯಾಚರಣೆ ಸರಕಾರದಿಂದ ಬರಬೇಕು, ಅದು ಯಾವುದೇ ಆದರೂ ಚಿಂತಿಲ್ಲ. ಸರಕಾರ ವಿದೇಶ ಕಂಪೆನಿಗಳನ್ನು ಕರೆಯಲಿ, ದೇಶೀಯ ಡ್ರೆಜಿಂಗ್ ಸಂಸ್ಥೆಗಳಿಗೆ ಗುತ್ತಿಗೆ ಕೊಡಲಿ ಅಥವಾ ಸ್ವಂತ ಡ್ರೆಜರ್ ಕೊಳ್ಳಲಿ—ಅದರಲ್ಲಿ ಮೀನುಗಾರರಿಗೆ ಆಸಕ್ತಿ ಇಲ್ಲ. ಎಷ್ಟು ಹಣ ತೆಗೆದಿರಿಸಿದೆ ಎಂಬುದೂ ಬೇಕಿಲ್ಲ. ಅಳಿವೆಯ ಹೂಳು ಎತ್ತಬೇಕು. ದೋಣಿ ಅಡ್ಡಿ–ಆತಂಕಗಳಿಲ್ಲದೆ ಸಮುದ್ರಕ್ಕೆ ಹೋಗಿ ಬರುವಂತಾಗಬೇಕು. ಸೊತ್ತು ನಾಶ ಆಗುವುದು ನಿಲ್ಲಬೇಕು. ಅದನ್ನೇನಾದರೂ ಈ ಸರಕಾರ ಮಾಡೀತೇ? ಈ ದಶಕದೊಳಗೇ ಈ ಕೆಲಸ ಆದೀತೇ? ಸಚಿವ ಕೃಷ್ಣಾರೆಡ್ಡಿಯವರು ಈ ಕಾರ್ಯ ಮಾಡಿಸಿಕೊಟ್ಟಾರೇ? ಅಥವಾ ಅವರ ಮಾತೂ ಹೂಳಲ್ಲಿ ಹೂತುಹೋದೀತೇ? ಅವರು ಅದನ್ನು ಮಾಡಿಸಿಕೊಟ್ಟರೆ ನಮ್ಮ ಜನಸಾಮಾನ್ಯರಿಗೆ ಸರಕಾರಿ ಯಂತ್ರದ ಕಾರ್ಯ ಸಾಮರ್ಥ್ಯದ ಮೇಲೆ ರಾಜಕಾರಣಿಗಳ ಮಾತಿನ ಮೇಲೆ ಕೊಂಚವಾದರೂ ವಿಶ್ವಾಸ ಬಂದೀತು.

9

ಮುಂಗಾರು

ಭಾನುವಾರ, ಸೆಪ್ಟೆಂಬರ್ 21, 1986

ನಿರುದ್ಯೋಗವೆಂಬ ರೋಗದ ಚಿನ್ಹೆ

ಸರಕಾರ ಇತ್ತೀಚೆಗೆ ತಾನೇ ಪ್ರಕಟಿಸಿರುವ ನಗರ ಬಡವರಿಗಾಗಿರುವ ಸ್ವೋದ್ಯೋಗ ಕಾರ್ಯಕ್ರಮದ ನ್ಯಾಯ ಸಾಲ ನೀಡಿಕೆ ಕಾರ್ಯಕ್ರಮದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳು ದಲ್ಲಾಳಿಗಳನ್ನು ಹೊರಗಿಡಬೇಕು ಎಂದು ಕೇಂದ್ರ ಸರಕಾರದ ಹಣಕಾಸು ಸಚಿವರು ನಿರ್ದೇಶ ನೀಡಿರುವುದಾಗಿ ವರದಿಯಾಗಿದೆ.

ಸಚಿವರ ಈ ನಿರ್ದೇಶಕ್ಕೆ ಹಿನ್ನೆಲೆ ಉಂಟು. ನಗರ ಬಡವರಿಗೆ ಸ್ವಂತ ಉದ್ಯೋಗ ಕೈಗೊಳ್ಳಲು ಯಾರ ಜಾಮೀನೂ ಯಾವ ಭದ್ರತೆಯೂ ಇಲ್ಲದೆ ಗರಿಷ್ಠ ಐದು ಸಾವಿರ ರೂಪಾಯಿಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು ನೀಡುವುದೇ ಈ ಯೋಜನೆ. ಇದರ ಪ್ರಕಟಣೆಯ ಬೆನ್ನಲ್ಲೇ ಸಾಲ ಮೇಳಗಳ ವಿಧಾನದಲ್ಲೇ ರಾತ್ರಿ ಬೆಳಗಾಗಬೇಕಿದ್ದರೆ ಮಹಾನಗರಗಳಲ್ಲಿ ದಲ್ಲಾಳಿಗಳು ಹುಟ್ಟಿಕೊಂಡರು. ಈ ದಲ್ಲಾಳಿಗಳು ಸಾಲ ಬೇಕಾದವರನ್ನು ಸಂಘಟಿಸತೊಡಗಿದರು. ಇವರು ಯಾಕಿದನ್ನು ಮಾಡುತ್ತಿದ್ದಾರೆ ಎಂಬುದುಸ್ಪಷ್ಟವೇ.ಸಾಲದ ಮೊತ್ತದ ಒಂದು ದೊಡ್ಡ ಭಾಗ ಅವರ ಜೇಬಿಗೆ ಸೇರುತ್ತದೆ. ಕೆಲವು ಬ್ಯಾಂಕುಗಳಲ್ಲಿ ಮ್ಯಾನೇಜರುಗಳಿಗೂ ಇದರ ಪಾಲು ಸಲ್ಲಬಹುದು.

ದಲ್ಲಾಳಿಗಳ ಮಾತಂತಿರಲಿ. ಈ ಯೋಜನೆ ಪ್ರಕಟವಾದ ಕೂಡಲೇ ಮಹಾನಗರಗಳಲ್ಲಿ ಕೆಳ ಮಧ್ಯಮ ಹಾಗೂ ಬಡ ವರ್ಗಗಳ ಉದ್ಯೋಗಾಸಕ್ತ ತರುಣರು ನೂರುಗಟ್ಟಲೆ ಸಂಖ್ಯೆಯಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳ ಮುಂದೆ ಸರತಿಯ ಸಾಲಿನಲ್ಲಿ ನಿಂತರು. ಎರಡನೇ ಮಹಾಯುದ್ಧ ಕಾಲದಲ್ಲಿ ಅನ್ನಕ್ಕೆ ತತ್ವಾರವಾದ ಸಂದರ್ಭದಲ್ಲಿ ಜನರು ಪಡಿತರ ಅಂಗಡಿಗಳ ಮುಂದೆ ಅಕ್ಕಿ–ಸೀಮೆ ಎಣ್ಣೆಗಳಿಗಾಗಿ ಕ್ಯೂ ನಿಂತ ಚಿತ್ರವನ್ನು ಇದು ನೆನಪಿಗೆ ತರುತ್ತಿತ್ತು. ಮದ್ರಾಸಿನಲ್ಲಿ ಬ್ಯಾಂಕಿನವರು ತಮ್ಮ ಬಳಿ ಸಾಲದ ಅರ್ಜಿ ಫಾರ್ಮುಗಳು ಮುಗಿದಿವೆ ಯೆಂದು ತಿಳಿಸಿದಾಗ ರೊಚ್ಚಿಗೆದ್ದ ಸಾಲ ಬಯಸಿಬಂದ ಯುವಕರ ಗುಂಪು ದಾಂಧಲೆ ನಡೆಸಿದಾಗ ಪೊಲೀಸರೇ ಬಂದು ಲಾಠಿ ಚಾರ್ಜು ಮಾಡಬೇಕಾಯಿತು. ಹಲವರು ಗಾಯಗೊಂಡರು.

, ಆರ್ಥಿಕವೂ ಸಾಮಾಜಿಕವೂ ಆದ ವ್ಯಾಧಿಯೊಂದನ್ನು ಈ ವಿದ್ಯಮಾನವು ತೋರಿಸುತ್ತಿದೆ. ಅದುವೇ ನಿರುದ್ಯೋಗ. ಹಳ್ಳಿಗಳಲ್ಲಿ ಉದ್ಯೋಗವೂ ಇಲ್ಲ. ಜನರೂ ಇಲ್ಲ. ಯುವಕರೆಲ್ಲ ಕೈಗಾರಿಕೀಕರಣಗೊಳ್ಳುತ್ತಿರುವ ನಗರಗಳತ್ತ ಓಡುತ್ತಿದ್ದಾರೆ. ನಗರಗಳಲ್ಲಿ ನಿರ್ಮಾಣವಾಗುತ್ತಿರುವ ಉದ್ಯೋಗ ಈ ಮಂದಿಗೆ ಸಾಕಾಗುತ್ತಿಲ್ಲ. ಕೈಗಾರಿಕೆಯು ಬೆಳೆಯುತ್ತಲೇ ಸಾಗಿದೆ. ಆರ್ಥಿಕತೆಯು ಬೆಳವಣಿಗೆಯೂ ಆಗಿದೆ. ಆದರೆ ಜನರಿಗೆ ಸಿಗುತ್ತಿರುವ ಉದ್ಯೋಗಾವಕಾಶದ ಬೆಳವಣಿಗೆ ಅವುಗಳಿಗೆ ಸರಿಸಮನಾಗಿಲ್ಲ. ಇದನ್ನು ಅಂಕಿ-ಅಂಶಗಳೇ ಹೇಳುತ್ತವೆ. ಆರನೆ ಯೋಜನೆ ಅವಧಿಯಲ್ಲಿ ಒಟ್ಟು ರಾಷ್ಟ್ರೀಯ ಉತ್ಪಾದನೆಯು ಶೇಕಡಾ ಐದರಷ್ಟು ಏರಿತು. ಆದರೆ ಉದ್ಯೋಗವು ಏರಿದ್ದು ಶೇಕಡಾ 4.32ರಷ್ಟು ಮಾತ್ರ. 1973–74ರಿಂದ 1982–83ರ ಒಂದು ದಶಕದ ಅವಧಿಯಲ್ಲಿ ಉದ್ಯೋಗವು ವಾರ್ಷಿಕ ಸರಾಸರಿ ಶೇಕಡಾ 3.7ರಷ್ಟು ಮಾತ್ರ ಹೆಚ್ಚಿತು. ಬದಲಾಗಿ ಕೈಗಾರಿಕಾ ಉತ್ಪಾದನೆಯು ವಾರ್ಷಿಕ ಸರಾಸರಿ ಶೇಕಡಾ 5.1ರಷ್ಟು ಹೆಚ್ಚಿತು. ಇದೇ ಅವಧಿಯಲ್ಲಿ ಯಂತ್ರ ಮತ್ತಿತರ ಸ್ಥಾವರಗಳಲ್ಲಿ ಹೂಡಿಕೆಯಾದ ಬಂಡವಾಳದ ಹೆಚ್ಚಳದ ಶತಾಂಶವು 28.8.

ಆರ್ಥಿಕತೆ ಬೆಳೆದರೂ ಕೈಗಾರಿಕೆ ವಿಸ್ತರಣೆ ಆದರೂ ಪ್ರಗತಿ ಸಂಭವಿಸಿದರೂ ನಮ್ಮ ಯುವಕರಿಗೆ ಉದ್ಯೋಗಾವಕಾಶ ವಿಸ್ತರಿಸುತ್ತಿಲ್ಲ ಎಂಬ ಸತ್ಯವನ್ನು ಇದರಿಂದ ಅರಿಯಬಹುದಾಗಿದೆ. ಅಭಿವೃದ್ಧಿ ಆದರೂ ಸಾಂಪತ್ತಿಕ ಅಸಮಾನತೆ ಹಾಗೆಯೇ ಉಳಿದಿರುವುದೂ ಬೆಳೆದಿರುವುದೂ ಇದರಿಂದಾಗಿಯೆ. ಕೈಗಾರಿಕೆಯ ವಿಸ್ತರಣೆಗೆ ಅನುಸರಿಸಿದ ನೀತಿಗಳಲ್ಲಿ ದೋಷವಿರುವುದೇ ಇದಕ್ಕೆಲ್ಲ ಮುಖ್ಯ ಕಾರಣ. ಬೆಳವಣಿಗೆ ಆದರೆ ಮುಗಿಯಿತು. ಎಲ್ಲ ಸಮಸ್ಯೆಗಳೂ ಪರಿಹಾರ ಎಂಬ ಧೋರಣೆಯ ಅಪಾಯವು ಸಾಕಾರ ರೂಪ ಧರಿಸಿ ತೋರ್ಪಡಿಸಿಕೊಳ್ಳುತ್ತಿದೆ.

ಈ ಹಿನ್ನೆಲೆಯಲ್ಲಿ ಸರಕಾರ ರೂಪಿಸಿರುವಂತಹ ನಗರ ಬಡವರಿಗೆ ಸ್ವಂತ ಉದ್ಯೋಗಕ್ಕೆ ಅನುಕೂಲ ಮಾಡಿಕೊಡುವ ಯೋಜನೆ ಸ್ವಾಗತಾರ್ಹವೂ ಸೂಕ್ತವೂ ಆದದ್ದು. ಈ ಯೋಜನೆ ಅನುಷ್ಠಾನದಲ್ಲಿ ಮಧ್ಯವರ್ತಿಗಳಿಗೆ ಪ್ರವೇಶವೇ ಇಲ್ಲವೆಂದು ಸರಕಾರ ನಿಗದಿಪಡಿಸಿದ್ದು ಸವಲತ್ತಿನ ದುರುಪಯೋಗ ತಡೆಗಟ್ಟುವಲ್ಲಿ ಮಹತ್ವದ ಹೆಜ್ಜೆ. ಇದರ ದುರುಪಯೋಗದ ತಡೆಗೆ ಸರಕಾರ ಇನ್ನಷ್ಟು ಕಟ್ಟುನಿಟ್ಟಿನ ಕ್ರಮಗಳನ್ನು ಅಳವಡಿಸಬೇಕು. ಈ ಸಾಲ ಪಡೆದುಕೊಳ್ಳುವವರನ್ನು ಗುರುತಿಸಿ ನಿರ್ಧರಿಸುವ ಹಾಗೂ ಸಾಲದ ಮೊತ್ತದ ಸದುಪಯೋಗ ಆಗಿದೆಯೆ ಎಂದು ನಿಗಾ ಇರಿಸುವ ವ್ಯವಸ್ಥೆಯಾಗಬೇಕು. ಅಷ್ಟೇ ಅಲ್ಲದೆ ನೀಡಲಾಗುವ ಸಾಲ ಉತ್ಪಾದನಾ ಉದ್ದೇಶಕ್ಕೆ ಬಳಕೆಯಾಗುವಂತೆ ಎಚ್ಚರವಹಿಸಬೇಕು.

ಈ ಸಾಲದ ಪ್ರಯೋಜನ ಅದನ್ನು ಪಡೆದವರಲ್ಲಿ ಅರ್ಧಾಂಶ ಮಂದಿಗಾದರೂ ಆದರೆ ಯೋಜನೆ ಯಶಸ್ಸು ಪಡೆಯಿತೆಂದೇ ಹೇಳಬಹುದಾಗಿದೆ.

ಮುಂಗಾರು

ಮಂಗಳವಾರ, ಸೆಪ್ಟಂಬರ್ 23, 1986

ಅವಿವೇಕ

ಸಿಯೋಲ್‌ನಲ್ಲಿ ನಡೆಯುತ್ತಿರುವ ಏಷ್ಯಾದೇಶಗಳ ಕ್ರೀಡಾಕೂಟವನ್ನು ನೋಡಿ ಆನಂದಿಸಲು ಶಾಸಕರ ತಂಡವೊಂದು ಕರ್ನಾಟಕ ಸರಕಾರದ ಖರ್ಚಿನಲ್ಲಿ ಹೋಗಿದೆ. ಮೂಲತಃ ಈ ತಂಡದಲ್ಲಿ 21 ಮಂದಿ ಶಾಸಕರಿದ್ದರು. ಇವರಲ್ಲಿ ಹೆಚ್ಚಿನವರು ಆಳುವ ಪಕ್ಷದವರೂ ಕೆಲವರು ವಿರೋಧ ಪಕ್ಷದವರೂ ಆಗಿದ್ದಾರೆ. ಹೀಗೆ ಕ್ರೀಡೆಯೊಡನೆ ಯಾವ ಸಂಬಂಧವೂ ಇಲ್ಲದ ಶಾಸಕರನ್ನು ಸರಕಾರವು ಜನರ ಹಣದ ಖರ್ಚಿನಲ್ಲಿ ಕಳಿಸುವುದಕ್ಕೆ ಜನರಿಂದ ವಿರೋಧ ಕಂಡು ಬಂದಾಗ ಒಂದಿಬ್ಬರು ಈ ಕೂಟದಿಂದ ಹೊರಗುಳಿದರು. ತಾವು ಸರಕಾರದ ಖರ್ಚಿನಲ್ಲಿ ಕ್ರೀಡಾಕೂಟ ನೋಡಲು ಹೋಗಬಯಸುವುದಿಲ್ಲ; ಉದಯೋನ್ಮುಖ ಕ್ರೀಡಾಪಟುಗಳು ಯಾರಾದರೂ ಹೋದರೆ ಚೆನ್ನ ಎಂದು ಅವರು ಹೇಳಿಕೆ ಕೊಟ್ಟಿದ್ದಾರೆ.

ಕೊಡುವವರಿದ್ದರೆ ತಕ್ಕೊಳ್ಳುವವರಿರುತ್ತಾರೆ. ನಮ್ಮ ಶಾಸಕರೂ ಅಧಿಕಾರಿಗಳೂ ಎಲ್ಲರೂ ಅಷ್ಟೆ, ಅವರೆಲ್ಲ ಈ ಸ್ವಾರ್ಥಿ ಸಮಾಜದ ಒಂದಂಗವೇ. ಪುಕ್ಕಟೆ ಬಂದದ್ದನ್ನು ಯಾರೂ ಬೇಡವೆನ್ನುವುದಿಲ್ಲ. ಶಾಸಕರು ಜನರ ಹಿತವನ್ನು ಅನುಲಕ್ಷಿಸಿ ಕೆಲಸ ಮಾಡಬೇಕು. ಅವರ ಸಮಸ್ಯೆ ನಿವಾರಣೆಗಾಗಿ ಸವಲತ್ತು ಪೂರೈಕೆಗಾಗಿ ಕೆಲಸ ಮಾಡಬೇಕು. ಜನಸಮುದಾಯದ ಒಳಿತಿಗಾಗಿ ದುಡಿಯಬೇಕು ಎಂಬುದೆಲ್ಲ ತತ್ವಸಿದ್ಧಾಂತಗಳ ಬೇರೆಯೇ ಪ್ರಪಂಚಕ್ಕೆ ಸಲ್ಲುವ ಮಾತುಗಳಾಗಿ ಹೋಗಿವೆ.

ವಾಸ್ತವಿಕತೆ ಏನೂ ಇರಬಹುದು. ಆದರೆ ಆದರ್ಶ ಎಂಬುದೊಂದಿದೆ. ರಾಜಕಾರಣವೆಂಬುದು ಸ್ವಂತಕ್ಕೆ ಕಜ್ಜಾಯ ಮೆಲ್ಲಲಿಕ್ಕಲ್ಲ ಎಂಬ ತತ್ವವುಂಟು. ಅದು ನಾಡಿನ ಪ್ರಗತಿಗೆ, ಜನಸಮುದಾಯದ ಅಭ್ಯುದಯಕ್ಕೆ ಎಂಬೊಂದು ಧ್ಯೇಯವುಂಟು. ಅದಕ್ಕಾಗಿ ಧೋರಣೆಗಳನ್ನು ರಚಿಸುವ, ಕಾರ್ಯಕ್ರಮಗಳನ್ನು ರೂಪಿಸುವ ಕರ್ತವ್ಯ ಜನಪ್ರತಿನಿಧಿಗಳಿಗೂ ಅವರ ನಾಯಕರೆನ್ನಿಸಿಕೊಳ್ಳುವವರಿಗೂ ಉಂಟು. ಕರ್ತವ್ಯ ಪಾಲನೆಯ ಈ ದಾರಿಯಲ್ಲಿ ರಾಜಕೀಯ ನಾಯಕರು ಸಾಗಬೇಕು. ತಮ್ಮ ಅನುಯಾಯಿಗಳಾದ ಶಾಸಕ ಸಂದೋಹವನ್ನು ತಮ್ಮೊಡನೆ ಕೊಂಡೊಯ್ಯಬೇಕು.

ಇಂದು ಈ ಜನಪ್ರತಿನಿಧಿಗಳ ನಾಯಕರು ತಮ್ಮ ಕರ್ತವ್ಯವನ್ನು ಪೂರೈಸುತ್ತಿದ್ದಾರೆಯೇ,? ಪೂರೈಸುವ ಮನಸ್ಸೇ ಅವರಿಗಿಲ್ಲವೆಂಬುದನ್ನು ಸಿಯೋಲ್ ಕ್ರೀಡಾಕೂಟಕ್ಕೆ 21 ಮಂದಿ ಶಾಸಕರನ್ನು ಕಳಿಸಿದ ಕರ್ನಾಟಕ ರಾಜ್ಯ ಸರಕಾರದ ಕ್ರಮವೇ ಸೂಚಿಸುತ್ತದೆ. ಸಣ್ಣ ರಾಜಕಾರಣಿಗಳ ಗುಂಪು ಬೇಕುಗಳ ಬಾಲವಲ್ಲಾಡಿಸುತ್ತ ನಿಲ್ಲುತ್ತದೆ. ದೊಡ್ಡ ರಾಜಕಾರಣಿಗಳು ಈ ಹಿಂಡಿಗೆ ರೊಟ್ಟಿ ಚೂರುಗಳನ್ನೆಸೆಯುತ್ತ ಹದ್ದು ಬಸ್ತಿನಲ್ಲಿಟ್ಟುಕೊಂಡು ತಮ್ಮ ಕಾರ್ಯ ಸಾಧಿಸಿ ಕೊಳ್ಳುತ್ತಾರೆ.

ಇಂದು ಆಗಿರುವುದೂ ಇದೆ. ಕಳೆದ ದಶಕದ ಆದಿಯಲ್ಲಿ ನಡೆದ ಎಕ್ಸ್‌ಪ್ರೋ ಹಗರಣದಲ್ಲಿ ಆಗಿರುವುದೂ ಇದೇ. ಇಂದು ಆಡಳಿತ ಸೂತ್ರ ಹಿಡಿದವರೇ ಅಂದೂ ಸರಕಾರದ ಆಯಕಟ್ಟಿನ ತಾಣದಲ್ಲಿದ್ದರು. ಈ ತಂತ್ರಗಾರಿಕೆಯನ್ನು ಈ ಮಂದಿ ಅಂದೇ ಸಾಣೆಗೆ ಹಿಡಿದು ಸಿದ್ಧಪಡಿಸಿ ರಾಜಕಾರಣದಲ್ಲಿ ಬಳಸುತ್ತ ಬಂದಿದ್ದಾರೆ. ಶಾಸಕರ ಗುಂಪಿಗೆ ಆಸೆ ಆಮಿಷಗಳನ್ನೊಡ್ಡಿ, ಸೊತ್ತು-ಸವಲತ್ತುಗಳನ್ನು ಕೊಟ್ಟು, ವಿದೇಶಿ ಪ್ರವಾಸದಂತಹ ಮನರಂಜನೆಗಳನ್ನೊದಗಿಸಿ ಬುಟ್ಟಿಗೆ ಹಾಕಿಕೊಳ್ಳುವ ರಾಜಕೀಯ ಹೂಟವನ್ನು ಅಧಿಕಾರ ಸೂತ್ರ ಹಿಡಿದವರು ಮಾಡಿಕೊಂಡು ಬಂದಿದ್ದಾರೆ. ಸಮರ್ಥರು, ಶ್ರೇಷ್ಠರು, ಸರ್ವೋತ್ತಮರು, ಪುರುಷೋತ್ತಮರು ಎಂಬ ಪ್ರಚಾರದ ಪತಾಕೆ ಹಾರಿಸಲು ನೆರವಾಗುವ ಪತ್ರಕರ್ತರನ್ನು ಖರ್ಚಿಗೆ ಹಣಕೊಟ್ಟು ವಿದೇಶ ಯಾತ್ರೆಗೆ ಕಳಿಸುವ ತಂತ್ರಗಾರಿಕೆಗೂ ಇದೇ ಹೆಸರಲ್ಲದೆ ಬೇರೆಯಲ್ಲ.

ಇಂದು ಬಲಿಬಿದ್ದವರು ಶಾಸಕರು. ಇವರು ಸಿಯೋಲಿಗೆ ಹೋಗಿ ಜನರ ತೆರಿಗೆಯ ಹಣವನ್ನು ಮಜಾ ಉಡಾಯಿಸುವ ಮಳಿಗೆಗಳಲ್ಲಿ ಹುಡಿ ಹಾರಿಸುತ್ತಾರೆ. ಮಸಾಜು ಮಂದಿರಗಳಲ್ಲಿ ಮುಗಿಸಿ ಬಿಡುತ್ತಾರೆ. ಇವರು ಕ್ರೀಡೆಯ ಬಗ್ಗೆ ತಿಳಿದು ಕೊಳ್ಳುತ್ತಾರೆಯೇ, ಅದರ ಓನಾಮವೇನಾದರೂ ಈ ಮಂದಿಗೆ ತಿಳಿದಿದೆಯೇ?

ಸರಕಾರಕ್ಕೆ ಕ್ರೀಡೆಯ ಬಗ್ಗೆ ಕಾಳಜಿಯೇನಾದರೂ ಇದ್ದರೆ ಅದು ಉದಯೋನ್ಮುಖ ಕ್ರೀಡಾಳುಗಳನ್ನು, ಸಿಯೋಲ್ ತಂಡಕ್ಕೆ ಆಯ್ಕೆ ಪಡೆಯಲು ಕೊಂಚದರಲ್ಲಿ ಅವಕಾಶ ತಪ್ಪಿಸಿಕೊಂಡ ಉತ್ಸಾಹಿ ಎಳೆಯರನ್ನು ಆರಿಸಿ ಕಳಿಸಬಹುದಿತ್ತು. ಗ್ರಾಮಾಂತರ ಯುವಕ-ಯುವತಿಯರನ್ನು ಆಯ್ದು ಕಳಿಸಬಹುದಿತ್ತು.

ಶಾಸಕರ ಪೈಕಿ ಆಸಕ್ತಿಯುಳ್ಳವರು, ಹಣವಿದ್ದವರು ಖರ್ಚುಮಾಡಿಕೊಂಡು ಹೋಗುತ್ತಿದ್ದರು. ಅವರಿಗೇಕೆ ಸರಕಾರದ ಕೃಪಾಶ್ರಯ? ಇದಕ್ಕೇಕೆ ಜನರ ತೆರಿಗೆ ಹಣದಿಂದ ಖರ್ಚು?

ಯಾಕೆಂದರೆ ಇಂದು ಬೆಂಗಳೂರಲ್ಲಿ ಅಧಿಕಾರ ಪೀಠದಲ್ಲಿ ಕೂತವರಿಗೆ ರಾಜಕೀಯ ಆಟ ಆಡಬೇಕಾಗಿದೆ. ಕೆಲವರನ್ನು ಎತ್ತಿಕಟ್ಟಿ ಬೇಳೆ ಬೇಯಿಸಬೇಕಾಗಿದೆ. ಶಾಸಕರಿಗೆ ಹಂಗಿನರಮನೆಯ ಮೃಷ್ಟಾನ್ನ ಉಣ್ಣಿಸಬೇಕಾಗಿದೆ. ಇವರಿಗೆ ಜನಹಿತದ ಕೆಲಸಗಳಿಗೆ ದುಡ್ಡಿಲ್ಲವಾದರೂ ಸಿಯೋಲಿನಲ್ಲಿ ಶಾಸಕರ ಮೆರವಣಿಗೆ ಮಾಡಿಸಲು ದುಡ್ಡಿದೆ. ಇಂದು ಸರಕಾರ ನಡೆಸುವವರನ್ನು ಹೇಳುವವರು ಕೇಳುವವರು ಯಾರೂ ಇಲ್ಲವೆಂದೇ ಇದರರ್ಥ. ಕ್ರೀಡಾಕೂಟವೊಂದಕ್ಕೆ ರಾಜಕಾರಣಿಗಳ ಸಂದೋಹವೊಂದನ್ನು ಕಳುಹಿಸುವ ಪುಟಗೋಸಿ ರಾಜಕೀಯ ನಡೆಸಿದ ಕೃತ್ಯ ಜನರ ಕಣ್ಣಿನಲ್ಲಿ ದೊಡ್ಡ ಅಪರಾಧ. ಇದು ಪೂರ್ವಾಪರ ವಿವೇಚನೆಯಿಲ್ಲದವರು ಮಾಡುವ ಅವಿವೇಕ. ನಾಡಿನ ಆಗುಹೋಗುಗಳ ಬಗ್ಗೆ ಸೂಕ್ತವಾದ ತೀರ್ಮಾನವನ್ನು ತೆಗೆದುಕೊಳ್ಳಲು ಅಸಮರ್ಥರಾದ ಸಣ್ಣಮನುಷ್ಯರು ಮಾಡುವ ಅಸಂಬದ್ಧ.

ಮುಂಗಾರು

ಬುಧವಾರ, ಸೆಪ್ಟೆಂಬರ್ 24, 1986

ಜಾತಿ ಬೇಡ ಎಂಬ ಮೋಸ

ಈಗ ಇರುವ ಶೇಕಡಾ 68ರ ಮೀಸಲಾತಿಯನ್ನು ಕೈಬಿಡುವುದಿಲ್ಲವೆಂಬ ಮಾತನ್ನು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಹೇಳುತ್ತಾರೆ. ಅದೇ ಉಸಿರಿನಲ್ಲಿ ಎಲ್ಲಾ ವರ್ಗಗಳ ಒಟ್ಟು ಮೀಸಲಾತಿಯನ್ನು ಶೇಕಡಾ 42ಕ್ಕೆ ಮಿತಿಗೊಳಿಸಿದ ವೆಂಕಟಸ್ವಾಮಿ ಆಯೋಗದ ವರದಿಯನ್ನು ಕೈಬಿಡಲಾಗುವುದಿಲ್ಲವೆಂದೂ ಹೇಳುತ್ತಿದ್ದಾರೆ.

ವೆಂಕಟಸ್ವಾಮಿ ಆಯೋಗವು ಕೆಲವಾರು ಹಿಂದುಳಿದ ಜಾತಿಗಳವರನ್ನು ಮೀಸಲಾತಿ ಸೌಲಭ್ಯವಿರುವ ಪಟ್ಟಿಯಿಂದ ತೆಗೆದು ಹಾಕಿದೆ. ಒಕ್ಕಲಿಗರು, ಕುರುಹಿನ ಶೆಟ್ಟಿ, ವಿಶ್ವಕರ್ಮ, ಗಾಣಿಗ ಮೊದಲಾದ ಸುಮಾರು 35 ಜಾತಿಗಳು ಹೀಗೆ ಸೌಲಭ್ಯ ಕಳೆದುಕೊಂಡ ಯಾದಿಯಲ್ಲಿ ಸೇರಿವೆ. ಇದರ ಪರಿಣಾಮವಾಗಿ ರಾಜ್ಯದಲ್ಲಿ ಒಕ್ಕಲಿಗರ ಸಹಿತ ಅನೇಕ ಹಿಂದುಳಿದ ಜಾತಿಗಳವರು ಉರಿದೆದ್ದಿದ್ದಾರೆ. ಕರ್ನಾಟಕದಲ್ಲಿ ರಾಜಕೀಯ–ಸಾಮಾಜಿಕ ಕ್ಷೋಭೆಯೇ ಉಂಟಾಗಿದೆ. ಜನವಿಭಾಗಗಳ ನಾಯಕರುಗಳು ವೆಂಕಟಸ್ವಾಮಿ ವರದಿ ಬಗ್ಗೆ ತಮ್ಮ ಅಭಿಪ್ರಾಯ ಹೇಳಿದ್ದಾರೆ. ಒಕ್ಕಲಿಗರ ಸಹಿತ ಅನೇಕ ಹಿಂದುಳಿದ ಜಾತಿಗಳನ್ನು ಹಿಂದುಳಿದವರ ಪಟ್ಟಿಯಿಂದ ತೆಗೆದದ್ದು ಅನ್ಯಾಯವೆಂಬ ಧ್ವನಿ ರಾಜ್ಯದ ಎಲ್ಲೆಡೆಯಿಂದ ಒಕ್ಕೊರಲಿನಿಂದ ಮೊಳಗಿದೆ. ಆದರೂ ಈ ಬಗ್ಗೆ ಸಾರ್ವಜನಿಕ ಚರ್ಚೆ ನಡೆಯಬೇಕು ಎಂದು ಮುಖ್ಯಮಂತ್ರಿಯವರು ಬಯಸಿದ್ದಾರೆ.

ಈ ಮಧ್ಯೆ ಜಾತಿ ನೆಲೆಯಲ್ಲಿ ಮೀಸಲಾತಿ ಬೇಡ ಎನ್ನುವ ಬೊಗಳೆ ಭೂಪರ ಗುಂಪೊಂದು ಹುಟ್ಟಿಕೊಂಡಿದೆ. ಬೇರೆ ಯಾವ ನೆಲೆಯಲ್ಲಿ ಇರಬೇಕು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ಅವರಲ್ಲಿ ಇಲ್ಲ. ಅಂಥ ಕಲ್ಪನೆ ಈ ಸಮಾಜದಲ್ಲಿ ಸುಲಭಕ್ಕೆ ಉಂಟಾಗುವುದೂ ಸಾಧ್ಯವಿಲ್ಲ. ಆರ್ಥಿಕ ನೆಲೆಯಲ್ಲಿ ಮೀಸಲಾತಿ ಏರ್ಪಡಿಸುವುದಕ್ಕೆ ಬಹಳವಾದ ಇತಿ ಮಿತಿಗಳುಂಟು. ಯಾವ ಆಡಳಿತೆಯ ನಿಯಂತ್ರಣಕ್ಕೂ, ನಿಗಾಕ್ಕೂ ನಿಲುಕದ ಮಾನದಂಡ ಅದು. ದುರುಪಯೋಗಕ್ಕೆ ಅವಕಾಶಗಳು ಅದರಲ್ಲಿ ಹೇರಳ.

ಜಾತಿ ನೆಲೆಯಲ್ಲಿ ಬೇಡ ಎಂದು ಹೇಳುವ ಮಂದಿ ಭಾವನಾ ಲೋಕದಲ್ಲಿ ವಿಹರಿಸುತ್ತಿದ್ದಾರೆ. ಭ್ರಮಾಲೋಕವೊಂದನ್ನು ಕಟ್ಟಿಕೊಂಡಿದ್ದಾರೆ. ಈ ಸಮಾಜದಲ್ಲಿ ಜಾತಿ ಇದೆ. ಎಷ್ಟೋ ಸಾವಿರ ವರ್ಷಗಳಿಂದ ಅದು ಅಸ್ತಿತ್ವದಲ್ಲಿದೆ. ಜಾತಿ–ಜಾತಿಗಳ ನಡುವಿನ ತಾರತಮ್ಯದ ವ್ಯವಸ್ಥೆಯನ್ನು ನೂರಾರು ಸಂಪ್ರದಾಯಗಳು, ರೀತಿ, ರಿವಾಜುಗಳ ವ್ಯವಸ್ಥೆಯ ಮೂಲಕ ಕಟ್ಟಿ ಬೆಳೆಸಿ ಪರಿಪೂರ್ಣಗೊಳಿಸಲಾಗಿದೆ.

ಜಾತಿಯೇ ವಾಸ್ತವಿಕತೆ. ಅದನ್ನು ಅಲ್ಲಗಳೆಯಲಾಗುವುದಿಲ್ಲ. ಈ ದೇಶದಲ್ಲಿ ಜಾತಿ ಇನ್ನೂ ನೂರಾರು ವರ್ಷ ಇರುತ್ತದೆ. ಜಾತಿವಿನಾಶ ಆಗಬೇಕು ಎಂಬುವರಿಗೆ ಪ್ರೋತ್ಸಾಹ ತಪ್ಪೆನಿಸದು. ಆರ್.ಎಲ್.ಜಾಲಪ್ಪನವರೊಡನೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಈಡಿಗರು ಅವರ ಬಂಧುಗಳೇ, ಎಸ್. ಆರ್. ಬೊಮ್ಮಾಯಿಯವರ ಸುತ್ತ ವೀರಶೈವರೇ ಸೇರಿಕೊಳ್ಳುತ್ತಾರೆ. ಎಚ್. ಡಿ. ದೇವೇಗೌಡರ ಆಪ್ತರು ಒಕ್ಕಲಿಗರೇ ಆಗಿರುತ್ತಾರಲ್ಲದೆ ಬೇರೆಯವರಲ್ಲ. ಜಾತಿಮೂಲವಾದ ದೌರ್ಬಲ್ಯಗಳು ಎಲ್ಲರಲ್ಲಿಯೂ ಇವೆ. ಹೆಗಡೆಯವರಾಗಲಿ ಬೇರಾರೇ ಆಗಲಿ ಅದಕ್ಕೆ ಹೊರತಲ್ಲ.

ಹಾಗೆ ಹೇಳಿಕೊಳ್ಳುವುದು ಆತ್ಮವಂಚನೆ ಆಗುತ್ತದೆ. ಅಲ್ಲವೆಂದಾದರೆ ಸಂಬಂಧಪಟ್ಟವರು ಆತ್ಮಶೋಧನೆ ಮಾಡಿಕೊಳ್ಳಬೇಕು. ಚಿಂತನೆಯ ಚಿಲುಮೆಯನ್ನು ಪುಟಿಸುವುದಕ್ಕೆ ಒಂದೇ ಸಮುದಾಯದವರು ಮಾತ್ರ ಯಾಕೆ ಅರ್ಹರು ಎಂದು ವಿಮರ್ಶಿಸಬೇಕು. ಇಲಾಖಾ ಕಾರ್ಯದರ್ಶಿಗಳಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಬ್ರಾಹ್ಮಣರೇ ಇರಲು ಕಾರಣವೇನೆಂದು ಪರಿಶೀಲಿಸಬೇಕು.

ಜಾತಿ ಇಲ್ಲವೆನ್ನುತ್ತೀರಾ? ಜಾತಿ ನಿರ್ಮೂಲನವಾಗಿದೆ ಎಂಬುದನ್ನು ನಂಬಬೇಕೇ? ಜಾತಿ ವಿನಾಶ ಆಗಿದೆ ಎಂಬುದನ್ನು ಅಧಿಕೃತವಾಗಿ ಘೋಷಿಸಿ. ಅದನ್ನು ಸಂವಿಧಾನದಲ್ಲಿ ಸೇರ್ಪಡೆ ಮಾಡಿ. ಜಾತಿ ಆಚರಣೆಯು ನಿಷಿದ್ಧವೆಂದು ಕಾನೂನು ಮಾಡಿ. ಸ್ವಜಾತಿ ವಿವಾಹಕ್ಕೆ ನಿಷೇಧ ಹಾಕಿ. ಅಷ್ಟು ಮಾಡಿ 25 ವರ್ಷ ನಂತರ ಈ ಎಲ್ಲಾ ಮೀಸಲಾತಿಯನ್ನು ವಿಶೇಷ ಸವಲತ್ತುಗಳನ್ನು ಸರಕಾರಿ ತಾರತಮ್ಯ ನೀತಿಯನ್ನು ವಜಾ ಮಾಡಿ.

ಆದರಿದು ಸಾಧ್ಯವೇ? ನಮ್ಮ ನಾಯಕರು ಈ ಬಗ್ಗೆ ಈಗ ಆಲೋಚಿಸುವುದಕ್ಕೂ ಸಾಧ್ಯವೇ? ಮತ್ತೇಕೆ ಜಾತಿ ಹೋಗಿದೆಯೆಂಬ ಮೋಸದ ಮಾತು. ಮತ್ತೇಕೆ ಆರ್ಥಿಕ ನೆಲೆಯಲ್ಲಿ ಮೀಸಲಾತಿಯೆಂಬ ಶಿಖಂಡಿಯ ಮರೆವಣಿಗೆ. ಆರ್ಥಿಕ ನೆಲೆಯ ಮೀಸಲಾತಿ ಕೆಲಸ ಮಾಡೀತೇ? ಬಡವನಾದ ಬ್ರಾಹ್ಮಣನೂ ಕುರುಬನೂ ಸಮಾನ ನೆಲೆಯಲ್ಲಿ ಸ್ಪರ್ಧಿಸಿದರೆ ಗೆಲ್ಲುವವರಾರು, ಬ್ರಾಹ್ಮಣನಲ್ಲವೆ? ಈ ಸತ್ಯ ಏಕೆ ಮುತ್ಸದ್ದಿಗಳೆನಿಸಿದ ನಮ್ಮ ನಾಯಕರಿಗೆ ಅರ್ಥವಾಗದು?

ಜಾತಿ ಇರುತ್ತದೆ. ಅದನ್ನು ಹೋಗಲಾಡಿಸಲು ಬುದ್ಧನಿಂದಲೂ ಆಗಲಿಲ್ಲ; ಬಸವಣ್ಣನಿಂದಲೂ ಆಗಲಿಲ್ಲ. ಸಿಕ್ಖ್‌ಪಂಥ ಅದಕ್ಕಾಗಿಯೇ ಹುಟ್ಟಿ ಬಂದರೂ ಜಾತಿ ಉಳಿದಿದೆ.

ಆದ್ದರಿಂದ ಮೀಸಲಾತಿಯೂ ಇರಲಿ. ಅದು ಈಗ ಇರುವಂತೆ ಹಾವನೂರು ಆಯೋಗ ಶಿಫಾರಸು ಮಾಡಿದಂತೆ ಇರಲಿ. ಅದರಲ್ಲಿರುವ ಚಿಕ್ಕ ಪುಟ್ಟ ದೋಷಗಳನ್ನು ಸರಿಪಡಿಸಿ, ಬಿಟ್ಟು ಹೋದ ಹಿಂದುಳಿದ ಜಾತಿಗಳನ್ನು ಪಟ್ಟಿಗೆ ಸೇರಿಸಿಕೊಳ್ಳಿ. ಕನಿಷ್ಠ ಹತ್ತು ವರ್ಷ ಈ ವ್ಯವಸ್ಥೆಯನ್ನು ಪ್ರಾಮಾಣಿಕವಾಗಿ, ಜಾತಿ–ಜಾತಿ

50	B.S.K III Stage (Avalahalli Byatarayanapura main Road)	Avalahalli	36	
51	B.S.K III Stage	Avalahalli	26/.2	
52	B.S.K III Stage	Avalahalli	15/1,3	
53	B.S.K III Stage	Avalahalli	1/8,3,4 & 5	
54	Jayanagar 4th East Hutting Colony	Byrasandra Tank Bed Area		
55	B.T.M. SFHS	N.S.Palya		
56	J.P Nagar IX Phase V Block	Doddakalasandra	15,16,17	52A-1
57	B.S.K. III Stage	Hoskere halli & Ittamadu	108(P), 120 & 07	
58	B.S.K I Stage	Gavipura	3 & 69	20A-3
59	Timber yard layout I Stage (Industrial sites)	Avalahalli		
60	Timber yard layout II - Stage (Industrial Site)	Avalahalli		
61	B.S.K. II Stage	Yediyur	7,8	
62	B.S.K. II Stage	Yediyur	58/5	2A-16g
63	B.S.K stage IV Block III phase, and VII Block IV phase (Additional sites)	Kathriguppa		
64	B.S.K II Stage	Karisandra	23	
65	Kumar Swamy layout I Stage (commercial Sites)	Govinayakanahalli		
66	Jayanagar IX Block	Marenahalli		
67	J.P. Nagar IX Stage	Avalahalli	Sy. No's 26 to 30	20 Hect
		Raghuvanahalli	Sy. No's 1,22,28 to 31, 33,38,39	
68	B.S.K III Stage II Phase (Additional sites)	Hoskerehalli		
69	B.T.M II Stage	Tavarekere, Madivala & N.S. Palya Belakanahalli		
70	B.T.M I Stage	Byrasandra, Tavarakere, Madivala		

ಸಾರ್ವಜನಿಕ ವೇದಿಕೆಯಿಂದ ಘೋಷಣೆ ಮಾಡಿದರೆ ಅದು ಹೋಗುವುದಿಲ್ಲ. ಹಾಗೆ ತಿಳಿದರೆ ಇದೊಂದು ಮೋಸವೆಂಬುದು ಅದನ್ನು ಹೇಳುವವರಿಗೂ ಗೊತ್ತಿದೆ.

ಇಲ್ಲಿ ಎಲ್ಲರಿಗೂ ಜಾತಿ ಇದೆ. ಅದು ಈ ಸಮಾಜ ಅನುಭವಿಸಬೇಕಾದ ಅನಿವಾರ್ಯ ಸಂಕಟ. ಇಲ್ಲಿ ರಾಮಕೃಷ್ಣ ಹೆಗಡೆಯವರಿಗೂ ಜಾತಿ ಇದೆ. ಅವರ ಸುತ್ತ ಅವರ ಜಾತಿಯವರೇ ಸೇರಿಕೊಳ್ಳುತ್ತಾರೆ. ಅವರ ಸಲಹೆಗಾರರು, ಆಪ್ತರು, ಹಿತಾಕಾಂಕ್ಷಿಗಳು ಎಲ್ಲರೂ ಅವರ ಜಾತಿಯವರೇ. ವಿಧಾನಸೌಧದಲ್ಲಿನ 24 ಕಾರ್ಯದರ್ಶಿಗಳ ಪೈಕಿ 22ಮಂದಿಯೂ ಬ್ರಾಹ್ಮಣರೇ. ಚಿಂತನ ಚಿಲುಮೆಯಲ್ಲಿ ಸೇರಲು ಅರ್ಹತೆ ಪಡೆದವರೆಲ್ಲರೂ ಬ್ರಾಹ್ಮಣರೇ. ಶಾದ್ರಿ ಶಾಮಣ್ಣನವರೂ ಬಿ. ಕೆ. ಚಂದ್ರಶೇಖರರೂ. ಯು. ಆರ್. ಅನಂತಮೂರ್ತಿಯವರೂ ಬ್ರಾಹ್ಮಣರಲ್ಲದೆ ಬೇರೆಯಲ್ಲ. ಎಂ. ಎಲ್. ಸಿ. ಸ್ಥಾನಕ್ಕೆ ಜನತಾ ಅಭ್ಯರ್ಥಿಯಾಗಲು ಅರ್ಹತೆ ಪಡೆದ ಎಂ. ಸತ್ಯನಾರಾಯಣ ರಾಯರೂ ಅದೇ ಸಮುದಾಯದವರು. ಇದು ಸಹಜಕ್ರಿಯೆ. ಹೆಗಡೆಯವರು ತಪ್ಪು ಮಾಡಿದ್ದಾರೆಂದೇನೂ ನಮ್ಮ ಅಭಿಪ್ರಾಯವಲ್ಲ. ತಮ್ಮಗಳ ನಡುವಿನ ತಾರತಮ್ಯ ನಿವಾರಣೆಯಾಗಬೇಕೆಂಬ ಒಂದೇ ಒಂದು ಉದ್ದೇಶದಿಂದ, ಸಾಮಾಜಿಕ ನ್ಯಾಯ ಅಸ್ತಿತ್ವಕ್ಕೆ ಬರಬೇಕೆಂಬ ಸದಿಚ್ಛೆಯಿಂದ ಜಾರಿಗೆ ತನ್ನಿ. ರೋಸ್ಟರ್ ಪದ್ಧತಿಗೆ ತಿರುಳು ತುಂಬಿ. ಆ ಮೇಲೆ ಬೇಕಿದ್ದರೆ ಮೀಸಲಾತಿಯ ಪುನರ್ವಿಮರ್ಶೆ ಮಾಡಿ. ಯಾವುದೂ ಬೇಡವೆಂದರೆ ಜಾತಿಯ ಸಂಖ್ಯಾಬಲದ ನೆಲೆಯಲ್ಲಿ ಮೀಸಲಾತಿ ಕೊಡಿ. ಅದಕ್ಕಾಗಿ ಜಾತಿ ನೆಲೆಯಲ್ಲಿ ಗಣತಿ ಮಾಡಿ.

ವೆಂಕಟಸ್ವಾಮಿ ಆಯೋಗವೇ ಅನಗತ್ಯವಾಗಿತ್ತು. ಇದೆಲ್ಲ ಸಮಾಜದ ಖರ್ಚಿನಲ್ಲಿ ವೈಯಕ್ತಿಕ ಲಾಭ ಪಡೆಯುವ ತಂತ್ರದ ಫಲ. ಒಕ್ಕಲಿಗರ ಮೇಲೆ ಬೇರೆಯವರನ್ನು ಎತ್ತಿಕಟ್ಟಿ ರಾಜಕೀಯ ದಾಂಧಲೆ ಎಬ್ಬಿಸುವ ಹುನ್ನಾರ. ಆದರೆ ಜೋಕೆ, ಈ ತಂತ್ರ ತಿರುಗುಬಾಣ ಆದೀತು. ಈ ಕುತಂತ್ರದ ರಾಜಕೀಯ ಬೇಡ, ನೇರವಾದ ರಾಜಕೀಯ ಆಡಿ ಎಂದು ಆಳುವವರಿಗೆ ಹೇಳಬೇಕಾಗಿದೆ. ಇಂದು ಹೋರಾಟಕ್ಕಿಳಿದಿರುವ, ಅನ್ಯಾಯಕ್ಕೊಳಗಾದ ಮಂದಿಯು ಅದನ್ನೇ ಹೇಳುತ್ತಿದ್ದಾರೆ.

ಮುಂಗಾರು
ಗುರುವಾರ, ಸೆಪ್ಟೆಂಬರ್ 25, 1986

ಸಲ್ಲದ ಭಯ

ಹಿಂದಿ ಹೇರಿಕೆ ವಿರುದ್ಧ ತಮಿಳ್ನಾಡಿನಲ್ಲಿ ಸಣ್ಣ ಪ್ರಮಾಣದಲ್ಲಾದರೂ ಆಂದೋಲನ ಶುರುವಾಗಿದೆ. ಕೊಯಮುತ್ತೂರು ಜಿಲ್ಲೆಯ ಹಲವೆಡೆ ಕಾಲೇಜು ವಿದ್ಯಾರ್ಥಿಗಳು ಬೀದಿಗಿಳಿದಿದ್ದಾರೆ. ಪ್ರಧಾನ ಮಂತ್ರಿ ರಾಜೀವ ಗಾಂಧಿಯವರ ಪ್ರತಿಕೃತಿಯ ದಹನ ಕಾರ್ಯ ನಡೆದಿದೆ. ಈ ತಿಂಗಳ 15ನೇ ದಿನಾಂಕದಿಂದ ನಡೆದ ಹಿಂದೀ ಸಪ್ತಾಹದ ಕಾಲದಲ್ಲಿ ಎಲ್ಲಾ ಕಡತಗಳಿಗೂ ಹಿಂದಿಯಲ್ಲೇ ಟಿಪ್ಪಣಿಯನ್ನೂ ಅಂಕಿತವನ್ನೂ ಹಾಕಬೇಕು ಎಂದು ನಿರ್ದೇಶಿಸುವ ಸುತ್ತೋಲೆಯು ಕೇಂದ್ರ ಸರಕಾರದಿಂದ ಎಲ್ಲಾ ಕೇಂದ್ರ ಸರಕಾರಿ ಕಚೇರಿಗಳಿಗೆ ಬಂದಿರುವುದೇ ಈಗ ಎದ್ದಿರುವ ಚಳವಳದ ಹಿನ್ನೆಲೆ.

ಹಿಂದೀ ಭಾಷೆಯ ಬಳಕೆಗೆ ದಕ್ಷಿಣ ಭಾರತದಲ್ಲಿ-ಅದರಲ್ಲಿಯೂ ಮುಖ್ಯವಾಗಿ ತಮಿಳ್ನಾಡಿನಲ್ಲಿವಿರೋಧ ಪ್ರತಿಭಟನೆ ಇರುವುದು ಸಾಂಪ್ರದಾಯಿಕವಾದದ್ದು. ಕಳೆದ ನಾಲ್ಕು ದಶಕಗಳಲ್ಲಿ ಈ ರೀತಿಯ ಹಿಂದೀ ವಿರೋಧಿ ಚಳವಳ ತಮಿಳ್ನಾಡಿನಲ್ಲಿ ಆಗಿಂದಾಗ್ಗೆ ನಡೆಯುತ್ತಲೇ ಬಂದಿದೆ. ಜೀವಹಾನಿಯೂ ಆಗಿದೆ. ಸೊತ್ತು ನಾಶವೂ ನಡೆದಿದೆ. [illegible] ರಾಜ್ಯಗಳಿಗೂ ಈ ಚಳವಳಿಯ ಕಾವು ಪಸರಿಸಿದ್ದುಂಟು. ಒಂದೊಮ್ಮೆ ಕರ್ನಾಟಕಕ್ಕೂ ಆಂಧ್ರ ಪ್ರದೇಶಕ್ಕೂ ಹಿಂದಿ ವಿರೋಧಿ ಚಳವಳ ಹಬ್ಬಿತ್ತು.

ದಕ್ಷಿಣದವರ ಮೇಲೆ ಹಿಂದಿ ಹೇರಿಕೆ ಇಲ್ಲ ಎಂಬ ಜವಾಹರಲಾಲ ನೆಹರೂ ಹಾಗೂ ಆ ಬಳಿಕ ಇಂದಿರಾ ಗಾಂಧಿ ಅವರು ಕೊಟ್ಟ [illegible]ಯನ್ನು ಈಗಿನ ಪ್ರಧಾನ ಮಂತ್ರಿ [illegible] ರಾಜೀವ ಗಾಂಧಿಯವರೂ ಪಾಲಿಸಬೇಕು [illegible] ಬಂದಿದೆ. ಅದನ್ನೇ ತಮಿಳ್ನಾಡಿನ [illegible] ಸಚಿವ ಹಾಗೂ ಉಸ್ತುವಾರಿ ಮುಖ್ಯಮಂತ್ರಿ ವಿ. ಆರ್. ನೆಡುಂಚೆಳಿಯನ್ ಅವರು ರಾಜೀವ ಗಾಂಧಿಗೆ ಪತ್ರ ಬರೆದು ಆಗ್ರಹಿಸಿದ್ದಾರೆ.

ಒಂದು ಭಾಷೆಯನ್ನು [illegible] ಭಾಷೆಯನ್ನಾಡುವ ಜನಸಮುದಾಯದ ಮೇಲೆ ಹೇರಬಾರದು. ಅದರಲ್ಲಿ [illegible] ಪ್ರಭುತ್ವವು ಭಾಷೆಯನ್ನಾಗಲಿ ಸಂಸ್ಕೃತಿಯನ್ನಾಗಲಿ ಹೇರಲು ಪ್ರಯತ್ನಿಸಿದರೆ ಪ್ರತಿರೋಧವು ಉಂಟಾಗುತ್ತದೆ. ತಮಿಳ್ನಾಡಿನಲ್ಲಿ ಈ ತನಕ ನಡೆದು ಬಂದ ಹಿಂದೀ ವಿರೋಧಕ್ಕೆ ಹಿಂದೀ ಹೇರಿಕೆಯ ಕೇಂದ್ರ ಸರಕಾರದ ಪ್ರವೃತ್ತಿಯ ಜತೆಗೆ ವಿರೋಧಕ್ಕಾಗಿಯೇ ವಿರೋಧಿಸುವ ತಮಿಳರ ಸಂಕುಚಿತ ಪ್ರವೃ[illegible]

ಪಾಶ್ಚಾತ್ಯ ಪುರಾಣೇತಿಹಾಸಗಳ ಅಧ್ಯಯನ ಬೇಕು. ನಮ್ಮ ಮಕ್ಕಳು ಎಷ್ಟೇ ತಿಣಕಾಡಿದರೂ ಇಂಗ್ಲಿಷ್ ಭಾಷೆ ಕರಗತವಾಗಲೊಲ್ಲದು. ಇಂಗ್ಲಿಷ್ ಭಾಷೆ ಎಂದೂ ಈ ನೆಲದ ಭಾಷೆ ಆಗಲಾರದು.

ಯಾವ ಭಾಷೆ ಮಣ್ಣಿನಿಂದ ಒಡಮೂಡಿ ಬರುವುದಿಲ್ಲವೋ ಅದು ಆ ನಾಡಿನ ಸಂಪರ್ಕ ಭಾಷೆಯೂ ಆಡಳಿತ ಭಾಷಯೂ ಆಗುವುದಕ್ಕೆ ಅನರ್ಹವಾಗುತ್ತದೆ. ಒಂದು ಪರದೇಶಿ ಭಾಷೆಯನ್ನು ತಿಣಕಿ ಕಲಿತು ಆ ಮೇಲೆ ಅದನ್ನು ಆಡಳಿತದಲ್ಲಿ ಬಳಸಬೇಕಾದ ಸಂಕಟವನ್ನು ನಾವು ಉಳಿಸಿಕೊಂಡದ್ದಕ್ಕೆ ಐತಿಹಾಸಿಕವೂ ಸಾಮಾಜಿಕವೂ ಆದ ಬೇರೆಯೇ ಕಾರಣಗಳುಂಟು. ಆಡಳಿತೆಯನ್ನು ಜನರಿಂದ ದೂರ ಇರಿಸಿಕೊಳ್ಳುವ ಮೇಲುವರ್ಗದವರ ತಂತ್ರಗಾರಿಕೆಯ ಪರಿಣಾಮ ಇದು.

ಭಾರತಕ್ಕೆ ಬೇಕಾಗಿರುವ ಸಂಪರ್ಕಭಾಷೆ ಇಂಗ್ಲಿಷ್ ಆಗಲಾರದು ಎಂದ ಮೇಲೆ ಬೇರಾವುದು? ತಮಿಳು ಆ ಸ್ಥಾನಕ್ಕೆ ಬರುವುದು ಸಾಧ್ಯವೇ? ಮಲೆಯಾಳವನ್ನು ಆ ಪಟ್ಟಕ್ಕೇರಿಸೋಣವೇ? ಕನ್ನಡಕ್ಕೆ ಆ ಕಿರೀಟ ಸಂದೀತೇ? ತೆಲುಗಿಗೆ ಆ ಸಾಮರ್ಥ್ಯ ಬಂದೀತೇ? ದಾಕ್ಷಿಣಾತ್ಯರು ಇಲ್ಲಿ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದ ಅಗತ್ಯವುಂಟು. ತಮಿಳಾಗಲಿ, ಕನ್ನಡವಾಗಲಿ ರಾಜ್ಯದ ಸೀಮೋಲ್ಲಂಘನವನ್ನೇ ಮಾಡದಿರುವಾಗ ರಾಷ್ಟ್ರಭಾಷೆಯಾಗುವುದು ಸಾಧ್ಯವೇ?

ಆದ್ದರಿಂದ ಮುಕ್ತ ಮನಸ್ಸಿನಿಂದ ವಿಚಾರ ಮಾಡಬೇಕು. ಹಿಂದಿಯನ್ನು ಸಂಪರ್ಕಭಾಷೆಯಾಗಿಯೂ ರಾಷ್ಟ್ರೀಯ ನೆಲೆಯಲ್ಲಿ ಆಡಳಿತ ಭಾಷೆಯಾಗಿಯೂ ಒಪ್ಪಿಕೊಳ್ಳಬೇಕು.

ಹಿಂದಿಗೆ ಇಂಗ್ಲಿಷ್‌ಗಿಂತ ಹೆಚ್ಚಿನ ಅರ್ಹತೆ ಉಂಟು. ಅದು ದೇಶೀಯ ಭಾಷೆ. ಭಾರತೀಯ ಜನಜೀವನದ ಹಿನ್ನೆಲೆಯಲ್ಲಿ ಹುಟ್ಟಿ ಬಂದದ್ದು. ಭಾರತೀಯ ಪುರಾಣೇತಿಹಾಸಗಳ ಮೂಸೆಯಲ್ಲಿ ಮೂಡಿ ಬಂದದ್ದು. ಭಾರತೀಯ ಸಮುದಾಯದ ಅಗತ್ಯಕ್ಕೆ ಅನುಗುಣವಾಗಿ ರೂಪಿತವಾದದ್ದು.

ಇಂಥ ಒಂದು ಭಾಷೆಯನ್ನು ಕಲಿಯುವುದು ದಕ್ಷಿಣ ಭಾರತದ ಮಕ್ಕಳಿಗೆ ಕಷ್ಟವಾಗದು. ನಾಲ್ಕು ವರ್ಷ ಕಷ್ಟಪಟ್ಟು ಓದಿದರೆ ಅದನ್ನು ನಮ್ಮವರು ಬಗಲಿಗೆ ಹಾಕಿಕೊಳ್ಳುತ್ತಾರೆ. ಉತ್ತರದವರಿಗೆ ಸರಿಸಾಟಿಯಾಗುತ್ತಾರೆ. ಒಂದೆರಡೇ ದಶಕಗಳಲ್ಲಿ ದಕ್ಷಿಣದವರೂ ಉತ್ತಮ ಹಿಂದೀ ಕಾವ್ಯ-ಸಾಹಿತ್ಯ ರಚನೆ

[illegible] ಭಾಷೆಯ ಅಗತ್ಯದ ಬಗ್ಗೆ ಕೊಂಚ ವಿಚಾರ-ವಿವೇಚನೆ ಮಾಡುವುದೊಳಿತು ಹಾಗೂ ಪ್ರಸ್ತುತ ಕೂಡ. ಒಂದು ದೇಶಕ್ಕೆ ಒಂದು ಸಂಪರ್ಕ ಭಾಷೆಯೂ ಒಂದು ಆಡಳಿತ ಭಾಷೆಯೂ ಅಗತ್ಯ [illegible] ಎಲ್ಲರೂ ಒಪ್ಪುತ್ತಾರೆ. ಅದು [illegible] ಆಗಬೇಕಿದೆ. ಭಾರತದಲ್ಲಿ [illegible] ಸಂಪರ್ಕ ಭಾಷೆಯೂ ಆಡಳಿತ ಭಾಷೆಯೂ ಆಗಲು ಯೋಗ್ಯತೆ, ವ್ಯಾಪ್ತಿ ಇರುವಂತಹ ಭಾಷೆ ಯಾವುದು [illegible] ಪರಿಗಣಿಸಬೇಕಾಗಿದೆ. ಇಂಗ್ಲಿಷ [illegible] ಅಂಥ ಸಂಪರ್ಕಭಾಷೆಯೂ ಆಡಳಿತ ಭಾಷೆಯೂ ಆಗಲಾರದು. ಇಂಗ್ಲಿಷನ್ನು ನಾವು ಮನೆಯಲ್ಲಿ ಕಲಿಯುವುದಿಲ್ಲ ಶಾಲೆಯಲ್ಲಿ ಕಲಿಯುತ್ತೇವೆ. ಶಾಲೆಯಲ್ಲಿ ಕಲಿತರೂ ಬಾರದ ಪರದೇಶಿ ಭಾಷೆ ಅದು. ಆ ಭಾಷೆಗೆ ಹಿನ್ನೆಲೆ ಈ ದೇಶದ ಜನಜೀವನ ಅಲ್ಲ. ಆ ಭಾಷೆಯ ತಳಹದಿಯಾದ ಸಂಸ್ಕೃತಿ ನಮ್ಮ ಸಮಾಜದ್ದಲ್ಲ. ಇಂಗ್ಲಿಷ್ ಭಾಷೆಯ ಪ್ರತಿ ಪದ ಪ್ರಯೋಗದ ಹಿಂದೆಯೂ ಪದಗುಚ್ಛಗಳ ಹಿಂದೆಯೂ ಪಾಶ್ಚಾತ್ಯ ಸಂಸ್ಕೃತಿ, ಇತಿಹಾಸಗಳನೆಲೆಯುಂಟು. ಭಾಷೆ ಅರ್ಥವಾಗಬೇಕಿದ್ದರೆ ಅದನ್ನೂ ತಿಳಿಯಬೇಕು. ಮಿಲ್ಟನ್‌ನ ಕಾವ್ಯ ಓದಬೇಕಿದ್ದರೆ

ಮಾಡಬಹುದು. ಹಿಂದಿಯನ್ನು ಹತ್ತಿರಮಾಡಿಕೊಂಡರೆ ಶಿಕ್ಷಣ, ಉದ್ಯೋಗ, ವಾಣಿಜ್ಯ ಹಾಗೂ ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ತರದವರೊಂದಿಗೆ ಸ್ಪರ್ಧಿಸಲು ದಾಕ್ಷಿಣಾತ್ಯರಿಗೆ ಹೆಚ್ಚು ಸಾಮರ್ಥ್ಯ ಬಂದೀತು. ಉತ್ತರದವರ ಆಧಿಪತ್ಯವೂ ಕ್ರಮೇಣ ಕಡಿಮೆಯಾದೀತು.

ದೇಶಕ್ಕೊಂದು ಭಾಷೆ ಬೇಕು ಎಂಬ ಅಗತ್ಯವನ್ನು ಒಪ್ಪಿಕೊಂಡರೆ ಎಲ್ಲವೂ ಸುಗಮವಾದೀತು. ನಮ್ಮ ಅಸಡ್ಡೆಯಿಂದಲೂ ಸಲ್ಲದ ಭಯದಿಂದಲೂ ಹಿಂದಿಯಂತಹ ಸುಲಲಿತವಾದ ಭಾಷೆಯನ್ನು ನಮ್ಮದನ್ನಾಗಿ ಮಾಡುವುದರಲ್ಲಿ ನಾವು ಸೋತಿದ್ದೇವೆ. ರಶ್ಯನಂತಹ ದೊಡ್ಡ ದೇಶದಲ್ಲಿಯೂ ಒಂದು ಸಂಪರ್ಕ ಭಾಷೆ ಉಂಟು. ಅಲ್ಲಿ ಹತ್ತಾರು ಪ್ರಾದೇಶಿಕ ಭಿನ್ನತೆಗಳಿವೆ. ಭಾಷೆಗಳೂ ಇವೆ. ಅವುಗಳು ರಾಷ್ಟ್ರಭಾಷೆಗೆ ತೊಡರುಗಲ್ಲಾಗಿಲ್ಲ. ರಾಷ್ಟ್ರಭಾಷೆಯು ಪ್ರಾದೇಶಿಕ ಭಾಷೆಗಳನ್ನು ಕೊಂದಿಲ್ಲ. ಭಾರತದಲ್ಲಿಯೂ ಈ ಸಮ್ಮಿಲನವನ್ನು ಸಾಧಿಸಬಹುದಾಗಿದೆ. ಹಿಂದಿ ಬೆಳೆದರೆ, ಎಲ್ಲರಿಗೂ ಒಳ್ಳೆಯದು, ತಮಿಳು–ಕನ್ನಡ ಅದರಿಂದಾಗಿ ಸಾಯಲಾರವು. ಬಹುಶಃ ಅಂಥ ಭಯವೇ ಈ ತನಕ ಹಿಂದಿಯ ವ್ಯಾಪ್ತಿಯನ್ನು ಹಿಡಿದಿಟ್ಟಿರಬೇಕು.

ಮುಂಗಾರು

ಶುಕ್ರವಾರ, ಸೆಪ್ಟಂಬರ್ 26, 1986

ಓಬೀರಾಯನ ಸಂಪರ್ಕಜಾಲ

ತಂತಿ ಸಂಪರ್ಕ ಸೌಲಭ್ಯದ ಶುಲ್ಕಗಳನ್ನು ಏರಿಸುವ ಬಗ್ಗೆ ಅಂಚೆ–ತಂತಿ ಇಲಾಖೆ ಆಲೋಚಿಸುತ್ತಿದೆಯೆಂಬ ವರದಿಗಳಿವೆ. ಮುಂದಿನ ವರ್ಷದ ಆಯವ್ಯಯ ಮುಂಗಡ ಪತ್ರದ ಮಂಡನೆಗಿಂತ ಬಹಳ ಮುಂಚಿತವಾಗಿಯೇ ಇದರ ಹೆಚ್ಚಳ ಆಗುವ ಸಾಧ್ಯತೆಯಿದೆ. ದರ ಹೆಚ್ಚಳವೂ ಅಷ್ಟೆ-ಬಹಳ ಜಾಸ್ತಿ ಆಗುವ ಸಂಭವವಿದೆ.

ಸಾರ್ವಜನಿಕರಿಗೆ ತಂತಿ–ದೂರವಾಣಿ ಮತ್ತಿತರ ಸೇವೆಗಳನ್ನೊದಗಿಸಲು ಅಗತ್ಯವುಳ್ಳ ಸಾಮಗ್ರಿ–ಉಪಕರಣಗಳ ಬೆಲೆಯು ಬಹಳವಾಗಿ ಏರಿರುವುದರಿಂದಲೂ ವೇತನ ಆಯೋಗದ ಶಿಫಾರಸಿನನ್ವಯ ಸಿಬ್ಬಂದಿಗಳಿಗೆ ಹೆಚ್ಚಿನ ವೇತನ–ಭತ್ಯೆ ಕೊಡಬೇಕಾಗಿರುವುದರಿಂದಲೂ ತಂತಿ ಸೇವೆ ಶುಲ್ಕ ಹೆಚ್ಚಳವು ಅನಿವಾರ್ಯವೆಂದು ಇಲಾಖೆಯು ಸೂಚಿಸಿದ್ದು ಈ ಪ್ರಸ್ತಾವದ ಬಗ್ಗೆ ಕೇಂದ್ರ ಮಂತ್ರಿ ಮಂಡಲವು ಬೇಗನೆ ನಿರ್ಧಾರ ತೆಗೆದುಕೊಳ್ಳುವ ಸಂಭವವಿದೆ.

1960ರಿಂದೀಚೆಗೆ ದೇಶದಲ್ಲಿ ರಖಂ ಬೆಲೆ ಸೂಚ್ಯಂಕವು ಆರೂವರೆ ಪಟ್ಟು ಏರಿದೆ. ಆದರೆ ಅಂದಿನಿಂದೀಚೆಗೆ ತಂತಿ ಸಂಪರ್ಕ ಸೇವೆಗಳ ಶುಲ್ಕವು ಮೂರು ಪಟ್ಟು ಮಾತ್ರ ಏರಿದೆ. ಆದ್ದರಿಂದ ಶುಲ್ಕ ಏರಿಕೆಯು ಈಗ ಅಗತ್ಯ ಹಾಗೂ ಅನಿವಾರ್ಯ .ಎಂದು ಇಲಾಖೆಯು ವಾದಿಸುತ್ತಿದೆ. ಈಗ ಒಂದು ಟೆಲಿಫೋನ್ ಸಂಪರ್ಕ ಒದಗಿಸಲು ಇಲಾಖೆಯು 26,000 ರೂಪಾಯಿ ಖರ್ಚು ಮಾಡುತ್ತದೆ. ಅದು ಗ್ರಾಹಕನಿಂದ ಈ ವೇಳೆ ಪಡೆಯುವುದು ಎಂಟು ಸಾವಿರ ರೂಪಾಯಿ ಮಾತ್ರ. ಹೂಡಿಕೆ ಮೇಲೆ ಆದಾಯ, ಸವಕಳಿ ನಿರ್ವಹಣೆ ಎಲ್ಲವನ್ನು ಲೆಕ್ಕ ಹಾಕಿದರೆ ಗ್ರಾಹಕನಿಂದ ವರ್ಷಕ್ಕೆ ಐದು ಸಾವಿರ ರೂಪಾಯಿ ಚಂದಾ ಸಂಗ್ರಹಿಸಬೇಕು. ಆದರೆ ಈಗ ಸಂಗ್ರಹಿಸುತ್ತಿರುವುದು ನಾಲ್ಕು ಸಾವಿರ ರೂಪಾಯಿ ಮಾತ್ರ. ವೇತನ ಆಯೋಗದ ಶಿಫಾರಸಿನ ಪರಿಣಾಮವಾಗಿ ಇಲಾಖೆಗೆ ವಾರ್ಷಿಕ 100 ಕೋಟಿ ರೂಪಾಯಿಗಳ ಹೆಚ್ಚುವರಿ ವೆಚ್ಚ ಬರಲಿದೆಯೆಂದು ಇಲಾಖೆ ಲೆಕ್ಕ ಹಾಕಿದೆ.

ಏರುತ್ತಿರುವ ಸ್ಥಾಪನೆ ಹಾಗೂ ನಿರ್ವಹಣೆ ಖರ್ಚನ್ನು ಸಣ್ಣ ಪುಟ್ಟ ಶುಲ್ಕ ಏರಿಕೆಗಳಿಂದಲ್ಲದೆ ಮುಖ್ಯವಾಗಿ ವಿಸ್ತರಿಸುತ್ತಿರುವ ತಂತಿ ಸಂಪರ್ಕ ಸೇವೆಯಿಂದ ನಿಭಾಯಿಸಿಕೊಂಡು ಬರಲಾಗಿದೆ ಎಂದು ಇಲಾಖೆ ವಾದಿಸಿದೆ. ಆದ್ದರಿಂದ ಇದೀಗ ಇಲಾಖೆ ಮೊತ್ತ ಮೊದಲ ಬಾರಿಗೆ ರಖಂ ಬೆಲೆ ಸೂಚ್ಯಂಕಕ್ಕೆ ಜೋಡಿಸಲಾಗುವ ತಂತಿ ಸೇವೆ ಶುಲ್ಕ ಹೆಚ್ಚಳದ ಹೊಸ ವ್ಯವಸ್ಥೆಯನ್ನು ಅನುಷ್ಠಾನಿಸಲು ಆಲೋಚಿಸಿದೆ. ಈ ವೈಜ್ಞಾನಿಕ ವಿಧಾನದಲ್ಲಿ ಇಲಾಖೆಯ ಹಣಕಾಸನ್ನು ಸುಸೂತ್ರವಾಗಿ ನಿಭಾಯಿಸುವುದಲ್ಲದೆ ಸೇವೆಯ ವಿಸ್ತರಣೆಯು ಸಾಧ್ಯವಾಗುವುದೆಂದು ಅದು ನಂಬಿದೆ.

ಸರಿಯಿಲ್ಲ ಎಂಬುದು ಸಾರ್ವತ್ರಿಕವಾದ ಆರೋಪ. ದಿನಕ್ಕೆ ಒಂದೆರಡು ಸ್ಥಳೀಯ ಕರೆಗಳನ್ನು ಮಾತ್ರವೇ ಮಾಡುವಂಥ ಗ್ರಾಹಕರಿಗೂ ಸಾವಿರಗಟ್ಟಲೆ ರೂಪಾಯಿ ಶುಲ್ಕದ ಬಿಲ್ ಬರುವಂಥ ವಿದ್ಯಮಾನ ಸಾಮಾನ್ಯ. ಈ ಬಗ್ಗೆ ದೂರು ಕೊಟ್ಟರೆ ತಿಂಗಳುಗಟ್ಟಲೆ-ವರ್ಷಗಟ್ಟಲೆ ಅದು ತೀರ್ಮಾನವಾಗುವುದೇ ಇಲ್ಲ.

ಟೆಲಿಫೋನ್ ಸಂಪರ್ಕದ ಅಸಮರ್ಪಕತೆ ಇನ್ನೊಂದು ಸಮಸ್ಯೆ. ದಿನಗಟ್ಟಲೆ ಟೆಲಿಫೋನ್ ಹಾಳಾಗಿರುವುದು, ದೂರು ಕೊಟ್ಟರೆ ಗಮನ ಕೊಡದೆ ಇರುವುದು, ಟ್ರಂಕ್‌ಕಾಲ್ ಸಂಪರ್ಕಕ್ಕಾಗಿ ಗಂಟೆಗಟ್ಟಲೆ ಕಾಯಬೇಕಾಗಿರುವುದು, ವಿಚಾರಿಸಿದರೆ ಉಡಾಫೆ ಮಾತನಾಡುವುದು. ನೇರ ಡಯಲಿಂಗ್ ವ್ಯವಸ್ಥೆ ಪದೇ ಪದೇ ಮುಷ್ಕರ ಹೂಡುವುದು. ಸ್ಥಳೀಯ ಕರೆಗಾಗಿ ಡಯಲ್ ಮಾಡಿದರೆ ರಾಂಗ್ ನಂಬರ್ ಸಿಗುವುದು, ತುರ್ತಿನ ಉದ್ದೇಶಕ್ಕಾಗಿ ತಂತಿ ಕೊಟ್ಟರೆ ಅದು ನಾಲ್ಕು ದಿನಗಳ ನಂತರ ಬಟವಾಡೆಯಾಗುವುದು-ಇವೆಲ್ಲವೂ ಭಾರತೀಯ ತಂತಿ–ದೂರವಾಣಿ ಬಳಕೆದಾರರು ದಿನ ದಿನವೂ ಅನುಭವಿಸುವ ಸಂಕಟಗಳಾಗಿವೆ.

ಈ ಪ್ರಮಾದಗಳೂ ದೋಷಗಳೂ ವಿಳಂಬವೂ ಯಾಂತ್ರಿಕದೋಷದಿಂದ ಆಗುತ್ತದೆ ಎನ್ನಲುಬಾರದು. ಯಾಂತ್ರಿಕದೋಷವೂ ಇರಬಹುದು; ಮಳೆಗಾಲದಲ್ಲಿ ಸಂಪರ್ಕಜಾಲ ಕೆಟ್ಟುಹೋಗಬಹುದು, ಇದೆಲ್ಲವೂ ಬಳಕೆದಾರರಿಗೆ ಅರ್ಥವಾಗುತ್ತದೆ.

ಇಲಾಖೆಯ ಅವ್ಯವಸ್ಥೆಯಲ್ಲಿ ಉಪಕರಣಗಳ ದೋಷದ ಪಾಲು ಶೇಕಡ ಹತ್ತೋ ಇಪ್ಪತ್ತೋ ಇರಬಹುದು. ಉಳಿದ ಅಂಶವೆಲ್ಲ ಈ ವ್ಯವಸ್ಥೆಯನ್ನು ನಿರ್ವಹಿಸಬೇಕಾದ ಸಿಬ್ಬಂದಿಗಳೂ ತಂತ್ರಜ್ಞರೂ ತಂತಮ್ಮ ಕರ್ತವ್ಯಗಳನ್ನು ಸೂಕ್ತವಾಗಿ ಮಾಡದೆ ಇರುವುದರಿಂದ ಆಗುವಂತಹುದು. ಉಪಕರಣಗಳನ್ನು ಕೆಳಗಿಟ್ಟು ರಮ್ಮಿ ಆಡುವಂತಹ ಸಿಬ್ಬಂದಿಗಳಿರುವ ದೂರವಾಣಿ ವಿನಿಮಯ ಕೇಂದ್ರಗಳಿಂದ ಗ್ರಾಹಕರಿಗೆ ಎಂಥ ಸೇವೆ ಸಂದೀತು?

ಭಾರತದ ಟೆಲಿಸಂಪರ್ಕ ಸೇವೆ ಇಂದು ಈ ಜಗತ್ತಿನಲ್ಲಿಯೇ ಅತ್ಯಂತ ತುಟ್ಟಿಯಾದದ್ದು. ಹಾಗೂ ಅತ್ಯಂತ ದೋಷಪೂರಿತವೂ ಆದದ್ದು. ಇದಕ್ಕೆ ಇಲಾಖೆಯು ಹಳೆಯ ಕ್ರಾಸ್‌ಬಾರ್ ವಿನಿಮಯ ಉಪಕರಣಗಳನ್ನೂ ಸಿಬ್ಬಂದಿಗಳು ನಡೆಸುವ ಯಂತ್ರ ವ್ಯವಸ್ಥೆಗಳನ್ನೂ ಇರಿಸಿಕೊಂಡದ್ದೇ ಕಾರಣ. ಭಾರತೀಯ ತಂತಿ ಇಲಾಖೆಯಲ್ಲಿ ತಂತ್ರಜ್ಞಾನ ಕ್ರಾಂತಿ ಆಗಿಯೇ ಇಲ್ಲ. ಜಗತ್ತಿನಾದ್ಯಂತವೂ ಈ ಕ್ರಾಂತಿ ಆಗಿದೆ. ಇಲೆಕ್ಟ್ರಾನಿಕ್ ಸಂಪರ್ಕ ಉಪಕರಣಗಳು ಅಂತರ್ರಾಷ್ಟ್ರೀಯವಾಗಿ ಪುಡಿಗಾಸಿಗೆ ದೊರೆಯುತ್ತವೆ. ಕೇಬಲ್ ಸಂಪರ್ಕದಲ್ಲಿ ದೊಡ್ಡ ಕ್ರಾಂತಿಯೇ ಆಗಿದೆ. ಕೇಬಲ್ ರಹಿತ ಸಂಪ

ಇಲಾಖೆಗೆ ಕಷ್ಟಗಳಿರಬಹುದು; ಸಮಸ್ಯೆಗಳೂ ಇರಬಹುದು. ಹಣ ಹೊಂದಿಸಬೇಕಾದ ಅಗತ್ಯವೂ ಇರಬಹುದು. ಹಾಗೆಯೇ ಈ ದೇಶದ ತಂತಿ,ದೂರವಾಣಿ, ಟೆಲೆಕ್ಸ್ ಮತ್ತಿತರ ಸೌಲಭ್ಯಗಳ ಬಳಕೆದಾರರು ಕಂಡುಕೊಂಡ ಹಲವಾರು ಸತ್ಯಗಳಿವೆ. ಬಳಕೆದಾರರಿಗೆ ಹೆಜ್ಜೆ ಹೆಜ್ಜೆಗೆ ಸಮಸ್ಯೆಗಳು ಎದುರಾಗುತ್ತಿವೆ. ಇಲಾಖೆಯು ಕೊಡುವ ಸೌಲಭ್ಯ ಹಾಗೂ ಸೇವೆಗಳು ಅತ್ಯಂತ ಕಳಪೆ ಗುಣ ಮಟ್ಟದವು ಎಂಬುದು ಸಾಮಾನ್ಯವಾಗಿ ಎಲ್ಲಾ ಬಳಕೆದಾರರ ದೂರು. ಇಲಾಖೆಯ ಬಿಲ್ಲಿಂಗ್ ವ್ಯವಸ್ಥೆಯಂತೂ ಆಕಾಶದಷ್ಟೇ ವಿಸ್ತಾರವಾಗಿ ಬೆಳೆದಿದೆ. ಇದೊಂದೂ ಭಾರತದ ತಂತಿ ಇಲಾಖೆಯನ್ನು ತಟ್ಟಿಲ್ಲ. ಅದು ಸೇವೆಯ ಮಟ್ಟ ಏರಿಸುವ ಬಗ್ಗೆ ಆಲೋಚಿಸುವ ಬದಲು ಶುಲ್ಕ ಏರಿಸುವ ಮಾತನ್ನಾಡುತ್ತಿದೆ.

ಮೊದಲು ಇಲಾಖೆ ಸಂಪರ್ಕ ಕ್ಷೇತ್ರದ ಹೊಸ ತಂತ್ರಜ್ಞಾನದತ್ತ ಮೋರೆ ತಿರುಗಿಸಿದರೆ ಅದಕ್ಕೆ ಈ ಸಂಕಷ್ಟದಿಂದ ಪಾರಾಗುವ ಸುಲಭದ ದಾರಿ ಕಾಣಸೀತು. ಬಳಕೆದಾರರ ಸಮಸ್ಯೆಯೂ ನಿವಾರಣೆಯಾದೀತು.

ಮುಂಗಾರು
ಶನಿವಾರ, ಸೆಪ್ಟೆಂಬರ್ 27, 1986

ಲೋಕ ಅದಾಲತ್

ಕರ್ನಾಟಕದ ಹಲವು ಜಿಲ್ಲಾ ಕೇಂದ್ರಗಳಲ್ಲಿ ಲೋಕ ಅದಾಲತ್ (ಜನತಾ ನ್ಯಾಯಾಲಯ)ಗಳು ಪ್ರಾರಂಭವಾಗಿವೆ. ಬೆಂಗಳೂರಿನಲ್ಲಿಯೂ ಇಂಥ ಜನತಾ ನ್ಯಾಯಾಲಯವನ್ನು ತೆರೆಯಲಾಗಿದೆ. ಮಂಗಳೂರಿನಲ್ಲಿಯೂ ಇಂಥ ಒಂದು ನ್ಯಾಯಾಲಯ ಶನಿವಾರ ಪ್ರಾರಂಭಗೊಳ್ಳಲಿದೆ.

ಹಿಂದೆ ಗ್ರಾಮಚಾವಡಿಗಳಲ್ಲಿ ಊರ ಹಿರಿಯರೂ ಗುತ್ತಿನವರೂ ಸೇರಿ ವಿವಾದ ನಡೆಸುವ ಎರಡೂ ಪಕ್ಷಗಳವರನ್ನು ಕರೆಸಿ ಪಂಚಾಯಿತಿ ನಡೆಸಿ ಜಗಳ ಬಗೆಹರಿಸುವಂತಹದೇ ವ್ಯವಸ್ಥೆ ಇದಾಗಿದೆ. ಇದಕ್ಕೆ ಈಗ ಆಧುನಿಕ ರೂಪ ನೀಡಲಾಗಿದೆ. ಲೋಕ ಅದಾಲತ್‌ನಲ್ಲಿ ಕಾನೂನು ತಜ್ಞರಿರುತ್ತಾರೆ. ನಿವೃತ್ತ ನ್ಯಾಯಾಧೀಶರು ಅಥವ ಹಿರಿಯ, ಅನುಭವಿ ವಕೀಲರು ಈ ನ್ಯಾಯಾಲಯದ ಅಧ್ಯಕ್ಷರಾಗಿರುತ್ತಾರೆ.

ಇವುಗಳು ಇತರ ನ್ಯಾಯಾಲಯಗಳಂತೆ ತಮ್ಮ ತೀರ್ಪನ್ನು ವಾದಿ ಪ್ರತಿವಾದಿಗಳ ಮೇಲೆ ಹೇರುವುದಿಲ್ಲ. ಬದಲಾಗಿ ಎರಡೂ ಪಕ್ಷಗಳವರನ್ನು ಕರೆದು ವಿವಾದದ ಸ್ವರೂಪವೇನೆಂಬುದನ್ನು ತಿಳಿದುಕೊಂಡು, ರಾಜಿ ಮಾಡಿಸುತ್ತದೆ. ಒಡಂಬಡಿಕೆ ಆದಾಗ ಈ ವಿಚಾರವನ್ನು ದಾಖಲೆಯ ರೂಪಕ್ಕಿಳಿಸಿ ನಿಯಮಿತವಾದ ನ್ಯಾಯಾಲಯದಲ್ಲಿ ನೋಂದಣಿ ಮಾಡಲಾಗುತ್ತದೆ. ಲೋಕ ಅದಾಲತ್ ಮಾಡಿರುವ ರಾಜಿ ಪಂಚಾಯಿತಿಗೆ ಈ ಮೂಲಕ ಅಧಿಕೃತ ಮುದ್ರೆ ಬೀಳುತ್ತದೆ.

ಸದ್ಯಕ್ಕೆ ಅಪಘಾತಕ್ಕೆ ಸಂಬಂಧಿಸಿದ ಪರಿಹಾರದ ವಿವಾದಗಳು ಹಾಗೂ ಆಶನಾರ್ಥಕ್ಕೆ ಸಂಬಂಧಪಟ್ಟ ತಕರಾರುಗಳು ಲೋಕ ಅದಾಲತ್‌ನ ವ್ಯಾಪ್ತಿಗೆ ಬರುತ್ತವೆ.

ಲೋಕ ಅದಾಲತ್ ಒಂದು ನೂತನ ಪ್ರಯೋಗ, ಒಂದು ಕ್ರಾಂತಿಕಾರಿ ಕಲ್ಪನೆ. ಭಾರತದ ನ್ಯಾಯಾಂಗಕ್ಕೆ ಹಿಡಿದಿರುವ ವಿಳಂಬದ ಜಡ್ಡನ್ನು ಕರಗಿಸುವುದಕ್ಕೆ ಸಮರ್ಥವಾದಂತಹ ಒಂದು ವ್ಯವಸ್ಥೆ ಇದು. ಈ ಜನತಾ ನ್ಯಾಯಾಲಯಗಳು ಅನೌಪಚಾರಿಕ ನೆಲೆಯಲ್ಲಿ ಕಾರ್ಯವೆಸಗುವುದರಿಂದಲೂ ವಿಚಾರಣೆಯ ವಿಧಿ ವಿಧಾನಗಳಿಗೆ ಸಂಬಂಧಪಟ್ಟ ಗೊಂದಲ ಗೋಜಲಿನಲ್ಲಿ ಸಿಕ್ಕಿ ಬೀಳದೆ ಇರುವುದರಿಂದಲೂ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡುವ ಅವಕಾಶ ಬಹಳಷ್ಟು ಜಾಸ್ತಿ. ವಿವಾದಕ್ಕೆ ಪರಿಹಾರವೇ ಈ ನ್ಯಾಯಾಲಯಗಳ ಪರಮ ಗುರಿಯಾಗಿರುವುದರಿಂದ ಪ್ರತಿವಾದಿಗಳು ಕಾನೂನಿನ ಎಳೆ ಹಿಂಜುತ್ತ ತೀರ್ಮಾನವನ್ನು ತಿಂಗಳುಗಟ್ಟಲೆ–ವರ್ಷಗಟ್ಟಲೆ ಮುಂದಕ್ಕೆ ಹಾಕುವುದಕ್ಕೆ ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಲೋಕ ಅದಾಲತ್‌ಗಳು ನಮ್ಮ ನ್ಯಾಯಾಂಗಕ್ಕೆ ಅಗತ್ಯವುಳ್ಳ ಮದ್ದನ್ನು ಅರೆಯಬಲ್ಲವು.

ಆದರೆ ಲೋಕ ಅದಾಲತ್‌ಗೆ ಅದರದ್ದೇ ಆದ ದೌರ್ಬಲ್ಯಗಳೂ ಇವೆ. ಈ ನ್ಯಾಯಾಲಯದಲ್ಲಿ ಪ್ರಕರಣಗಳ ಇತ್ಯರ್ಥವು ಅನೌಪಚಾರಿಕವಾಗಿ ನಡೆಯುವುದರಿಂದ ಹಾಗೂ ವಿವಾದದಲ್ಲಿ ಒಪ್ಪಂದವು ನಡೆದ ಮೇಲಷ್ಟೇ ನಿಯಮಿತ ನ್ಯಾಯಾಲಯವನ್ನು ಪ್ರವೇಶಿಸುವುದರಿಂದ ಪ್ರತಿವಾದಿಗಳು ಕುಂಟು ನೆಪಗಳನ್ನು ತೆಗೆದು, ಅಥವ ನ್ಯಾಯಾಲಯಕ್ಕೆ ಹಾಜರಾಗದೆ ರಾಜಿ ಒಡಂಬಡಿಕೆ ಪ್ರಯತ್ನವನ್ನು ಹುಸಿಗೊಳಿಸುವ ಎಲ್ಲಾ ಸಾಧ್ಯತೆಗಳಿವೆ. ಅಂತಿಮವಾಗಿ ಈ ವ್ಯವಸ್ಥೆ ಇಂದಿನ ಕಾರ್ಮಿಕ ವಿವಾದಗಳ ರಾಜಿ ಪಂಚಾಯಿತಿ ವ್ಯವಸ್ಥೆಯಂತೆ ಹಲ್ಲು ಮತ್ತು ಉಗುರುಗಳಿಲ್ಲದ ಭೋಳೇ ವ್ಯವಸ್ಥೆಯಾಗುವ ಅಪಾಯ ತುಂಬಾ ಉಂಟು.

ಈ ಹಿನ್ನೆಲೆಯಲ್ಲಿ ಲೋಕ ಅದಾಲತ್‌ಗೆ ಶಾಸನಬದ್ಧ ತಳಹದಿಯನ್ನು ಒದಗಿಸಿಕೊಡುವುದು ಅಗತ್ಯ. ನಿರ್ದಿಷ್ಟ ಮೊತ್ತಕ್ಕಿಂತ ಕೆಳಗಿನ ವಿವಾದಗಳೆಲ್ಲವೂ ಈ ಅದಾಲತ್‌ಗಳಲ್ಲಿ ತೀರ್ಮಾನವಾಗಬೇಕೆಂದು ವಿಧಿಸಬೇಕಾದ್ದು ಅಗತ್ಯ. ವಾದಿ ಪ್ರತಿವಾದಿಗಳು ಹಾಜರಾಗಬೇಕಾದ್ದು, ಸಾಕ್ಷಿದಾರರು ಬಂದು ಹೇಳಿಕೆ ನೀಡಬೇಕಾದ್ದು ಕಡ್ಡಾಯವೆಂದು ನಿರ್ಬಂಧಿಸಬೇಕು. ಕಕ್ಷಿದಾರರು ರಾಜಿ ಒಪ್ಪಂದಕ್ಕೆ ಬರಲು ನಿರಾಕರಿಸಿದ ಸಂದರ್ಭದಲ್ಲಿ ನ್ಯಾಯಾಲಯವೇ ಕ್ಷಿಪ್ರ ವಿಚಾರಣೆಯ ತತ್ತ್ವಗಳಿಗೆ ಅನುಸಾರವಾಗಿ ಕೇವಲ ದಾಖಲೆ ಪತ್ರಗಳನ್ನು ಪರಿಶೀಲಿಸಿ ತೀರ್ಪು ನೀಡುವಂತಹ ಅಧಿಕಾರವನ್ನು ಹೊಂದಿರಬೇಕು.

ಇಂತಹ ವ್ಯವಸ್ಥೆ ಮಾಡಿದರೆ ಮಾತ್ರವೇ ಈ ನ್ಯಾಯಾಲಯಗಳ ಮೇಲೆ ಸಂಬಂಧಪಟ್ಟವರಿಗೆ ಗೌರವ ಹುಟ್ಟೀತು. ಇಲ್ಲವಾದರೆ ತಪ್ಪು ಮಾಡಿದವರು ಹಾಗೂ ಮಾಡಿದ ತಪ್ಪನ್ನು ಸಮರ್ಥಿಸಲೂ ಮುಚ್ಚಿ ಹಾಕಲೂ ಪ್ರಯತ್ನಿಸುವವರು, ದುರ್ಬಲರ ಶೋಷಣೆ ಮಾಡುವ ಬಲಾಢ್ಯರು ಈ ನ್ಯಾಯಾಲಯವನ್ನು ಹುಲ್ಲಿಗಿಂತ ಕಡೆಯಾಗಿ ಕಂಡಾರು.

ಇಂಥ ಶಾಸನಾತ್ಮಕ ತಳಹದಿಯನ್ನೂ ಅಧಿಕಾರವನ್ನೂ ಲೋಕ ಅದಾಲತ್‌ಗೆ ಒದಗಿಸುವುದಲ್ಲದೆ ವಿವಿಧ ಸ್ವರೂಪದ ಎಲ್ಲಾ ವಿವಾದಗಳನ್ನು, ಕಾರ್ಮಿಕ ವಿವಾದಗಳನ್ನು ಕೂಡ ಇವುಗಳ ತೀರ್ಮಾನಕ್ಕೆ ಒಪ್ಪಿಸಬೇಕು. ಪ್ರಕರಣಗಳ ತೀರ್ಮಾನಕ್ಕೆ ಕಾಲಮಿತಿ ಹಾಕಬೇಕು. ಪ್ರಕರಣಗಳ ಸಂಖ್ಯೆ ಹೆಚ್ಚಿದರೆ ಅದಕ್ಕೆ ತಕ್ಕಂತೆ ಲೋಕ ಅದಾಲತ್‌ಗಳ ಸಂಖ್ಯೆಯನ್ನೂ ಹೆಚ್ಚಿಸಬೇಕು.

ಮುಂಗಾರು, ಸೆಪ್ಟೆಂಬರ್ 28, 1986, ಪುಟ ನಾಲ್ಕು

ಮುಂಗಾರು
ಭಾನುವಾರ, ಸೆಪ್ಟೆಂಬರ್ 28, 1986

ಸೂಕ್ತ ಪರಿಹಾರ ಬೇಕು

ಕಾರವಾರದಲ್ಲಿ ನೌಕಾ ನೆಲೆಯೊಂದರ ನಿರ್ಮಾಣ ಆಗುತ್ತಿದೆ. ದೇಶದ ರಕ್ಷಣೆಯ ದೃಷ್ಟಿಯಿಂದ ಇದೊಂದು ಅಗತ್ಯವಾದ ಹಾಗೂ ಮಹತ್ವವಾದ ನೆಲೆ. ಕಾರವಾರ ನೌಕಾ ನೆಲೆಯ ಗುಣ ವಿಶೇಷಗಳನ್ನು ರಕ್ಷಣಾ ಖಾತೆಯ ರಾಜ್ಯ ಸಚಿವ ಅರುಣ್ ನೆಹರೂ ಅವರು ಕಾರವಾರಕ್ಕೆ ಬಂದಿದ್ದ ವೇಳೆ ಮುಕ್ತ ಕಂಠದಿಂದ ಹೊಗಳಿದ್ದಾರೆ.

ಇದೇನೂ ಉತ್ಪ್ರೇಕ್ಷೆಯ ಮಾತಲ್ಲ. ಕಾರವಾರ ಕಡಲ ತೀರದ ಭೌಗೋಲಿಕ ಸ್ವರೂಪವೇ ಅಂತಹದ್ದು. ಅಲ್ಲಿ ಕಡಲಲ್ಲೇ ಗುಡ್ಡಗಳು ಎದ್ದು ನಿಂತು ನೈಸರ್ಗಿಕವಾದ ಬಂದರವನ್ನು ಒದಗಿಸಿವೆ. ಯುದ್ಧ ನೌಕೆಗಳಿಗೆ ತಂಗಲು ಆಯಕಟ್ಟಿನ ಕೊಲ್ಲಿಗಳು ಅಲ್ಲಿವೆ. ಸಮುದ್ರವು ಬಹಳ ಆಳವಿದ್ದು ನೌಕೆಗಳು ಮರಳಲ್ಲಿ ಸಿಲುಕಿ ಬಿಡುವ ಅಪಾಯ ಕಡಿಮೆ. ಕಾರವಾರದ ಮಿಲಿಟರಿ ಮಹತ್ವವನ್ನು ಛತ್ರಪತಿ ಶಿವಾಜಿಯಂತಹವರೇ ಇತಿಹಾಸ ಕಾಲದಲ್ಲೇ ಕಂಡು ಕೊಂಡಿದ್ದಾರೆ. ಶಿವಾಜಿ ಕಾರವಾರದಲ್ಲಿ ಕೋಟೆಯೊಂದನ್ನು ನಿರ್ಮಿಸಿದ್ದು ಅದು ಸದಾಶಿವ ಗಢವೆಂದು ಖ್ಯಾತವಾಗಿದೆ.

ಕಾರವಾರದ್ದು ದೇಶದಲ್ಲಿಯೇ ಅತಿ ದೊಡ್ಡ ನೌಕಾ ನೆಲೆಯಾಗುವುದೆಂದು ಅರುಣ್ ನೆಹರೂ ತಿಳಿಸಿದ್ದಾರೆ. ನೌಕಾನೆಲೆಗೆ ಪೂರಕವಾದ ಔದ್ಯೋಗಿಕ ಕೇಂದ್ರವೊಂದನ್ನು ತೆರೆಯಲಾಗುವುದೆಂದೂ ಅವರು ತಿಳಿಸಿದ್ದಾರೆ. ನೌಕಾನೆಲೆ ನಿರ್ಮಾಣ ಆದಾಗ ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ದೊಡ್ಡ ಚಾಲನೆ ದೊರೆಯುವುದು ಖಂಡಿತ. ನಾಡಿನ ಅಭಿವೃದ್ಧಿಯ ಹಿತವನ್ನು ಹಾರೈಸುವವರು ನೌಕಾನೆಲೆಯನ್ನು ಸ್ವಾಗತಿಸಬೇಕು.

ಆದರೆ ಅಭಿವೃದ್ಧಿಗಾಗಿ ತ್ಯಾಗ ಮಾಡುವ ಒಂದು ವರ್ಗವಿದೆ. ಕಾರವಾರದ ನೌಕಾನೆಲೆಯ ಸಂದರ್ಭದಲ್ಲಿ ನಾಲ್ಕಾರು ಹಳ್ಳಿಗಳ ಸಾವಿರಾರು ಕುಟುಂಬಗಳು ಮನೆಮಾರು ಕಳೆದುಕೊಳ್ಳಲಿವೆ. ಇವರಲ್ಲಿ ಮೀನುಗಾರರೇ ಹೆಚ್ಚು. ಇವರೆಲ್ಲ ಕಡಲಲ್ಲಿ ದುಡಿಮೆ ಮಾಡಿ ಹೊಟ್ಟೆ ಹೊರೆಯುತ್ತಿದ್ದ ಬಡವರು. ಚೂರುಪಾರು ನೆಲವನ್ನು ತಮ್ಮದನ್ನಾಗಿ ಮಾಡಿಕೊಂಡು ಇಳೆಯ ಮೇಲೊಂದು ಸೂರನ್ನು ಕಟ್ಟಿಕೊಂಡವರು. ಇವರೀಗ ದೇಶದ ಅಭಿವೃದ್ಧಿಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡುತ್ತಿದ್ದಾರೆ. ಈ ಮಂದಿಯ ಬದುಕಿನ ಬೇರನ್ನೇ ಕೀಳಲಾಗುತ್ತಿದೆ. ಅದರ ಫಲ ದೊರೆಯುವುದು ಸುತ್ತಲಿನ ಸಮಾಜಕ್ಕೆ. ನೌಕಾನೆಲೆಯಿಂದ ದೇಶಕ್ಕೆ ಅಪಾರ ಪ್ರಯೋಜನವಾಗುತ್ತದೆ. ಕರ್ನಾಟಕದ ಅಭಿವೃದ್ಧಿಯಾಗುತ್ತದೆ. ಕರ್ನಾಟಕದ ಬಹು ಮಂದಿಗೆ ಉದ್ಯೋಗವೂ ದೊರೆಯಬಹುದು. ರಾಜ್ಯದ–ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯ ವಾಣಿಜ್ಯ ವ್ಯವಹಾರವು ತೇಜಿಯಾಗಬಹುದು.

ಅಭಿವೃದ್ಧಿ ಯೋಜನೆಗಳಿಂದ ಪ್ರಯೋಜನ ಪಡೆಯುವ ಸಮಾಜ-ಸರಕಾರಗಳು ಆ ಯೋಜನೆಗಾಗಿ ಮನೆಮಾರುಗಳನ್ನು ತ್ಯಾಗ ಮಾಡುವ ಜೀವಿಗಳಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಬದುಕಿನ ಬೇರನ್ನು ಕಳೆದುಕೊಂಡು ಬೇರೊಂದು ಊರಿಗೆಹೋಗಿ ಮತ್ತೆ ಮೊದಲಿಂದ ಜೀವನವನ್ನು ತೊಡಗಬೇಕಾದ ಜನರು ಸಮಾಜವನ್ನು ಶಪಿಸುವಂತಾಗಬಾರದು. ಹೀಗೆ ಜನಸಮುದಾಯವು ಒಂದು ಯೋಜನೆಯಲ್ಲಿ ಮನೆಮಾರು ಕಳೆದು ಕೊಂಡು ಬೇರೆಡೆ ನೆಲೆಸಿಗದೆ ಅಂತರ್ ಪಿಶಾಚಿಗಳಾಗಿ ತಿರುಗಬೇಕಾದಂತಹ ಪರಿಸ್ಥಿತಿ ಉಂಟಾದರೆ ಮುಂದೆ ಬೇರಾವುದೇ ಅಭಿವೃದ್ಧಿ ಯೋಜನೆಯ ಅನುಷ್ಠಾನವು ಕಷ್ಟವಾದೀತು. ಯೋಜನೆಗಳಿಗೆ ನೆಲ ನೀಡಬೇಕಾದ ಮಂದಿ ನೆಲ ಬಿಡದೆ ಪಟ್ಟು ಹಿಡಿದು ಕೂರಬಹುದು. ಇಂಥ ವಿದ್ಯಮಾನವು ಸಮಾಜದಲ್ಲಿ ಸರಕಾರದ ನಡವಳಿಕೆಯ ಬಗ್ಗೆ ಕಹಿಯನ್ನುಂಟು ಮಾಡಬಹುದು. ಇಂಥ ವಿವಾದಗಳನ್ನು ಸಾಮರಸ್ಯದಿಂದ ಬಗೆಹರಿಸಬೇಕು,

ಅದಕ್ಕೆ ದಾರಿ ಸಂತ್ರಸ್ತರಿಗೆ ಸೂಕ್ತ ಪರಿಹಾರವನ್ನು ಕೊಡುವುದೇ ಆಗಿದೆ. ಕಾರವಾರ ನೌಕಾನೆಲೆಗೆ ಜಮೀನು ವಶಪಡಿಸಿಕೊಳ್ಳಲು ಹಾಗೂ ನಿರ್ವಸಿತರಿಗೆ ಮರುವಸತಿ ಕಲ್ಪಿಸಲು 1'5ಕೋಟಿ ರೂಪಾಯಿ ಬೇಕೆಂದು ರಾಜ್ಯ ಸರಕಾರ ಕೇಳುತ್ತಿದೆ. ಕೇಂದ್ರ ಸರಕಾರವು ಒಂದೂವರೆ ಕೋಟಿ ರೂಪಾಯಿ ಮಾತ್ರವೇ ಕೊಡಲು ತಯಾರಾಗಿದೆ ಎಂದು ರಾಜ್ಯದ ಮೀನುಗಾರಿಕೆ ಸಚಿವ ಕೃಷ್ಣಾರೆಡ್ಡಿಯವರು ಹೇಳುತ್ತಾರೆ.

ಕೋಟಿಗಳ ಸಂಖ್ಯೆ ನೌಕಾನೆಲೆಯ ನೆಲದವರಿಗೆ ಮುಖ್ಯವಲ್ಲ, ಅವರಿಗೆ ಜಮೀನಿಗೆ ಮಾರುಕಟ್ಟೆ ಬೆಲೆಗಿಂತಲೂ ಹೆಚ್ಚಿನ ಬೆಲೆ ದೊರೆಯಬೇಕು. ಯಾಕೆಂದರೆ ರಿಜಿಸ್ಟ್ರಿ ಕಚೇರಿಗಳಲ್ಲಿ ನೋಂದಾವಣೆಗೊಳ್ಳುವ ಜಮೀನುಗಳ ಬೆಲೆ ನಿಜವಾದ ಮಾರುಕಟ್ಟೆ ಬೆಲೆ ಆಗಿರುವುದಿಲ್ಲ. ಇದನ್ನು ಸಂಬಂಧಪಟ್ಟವರು ಅರ್ಥಮಾಡಿಕೊಳ್ಳಬೇಕು. ನಿರ್ವಸಿತರಿಗೆ ಪುನರ್ವಸತಿ ಒದಗಿಸಬೇಕು. ಅಲ್ಲದೆ ಸಂತ್ರಸ್ತರ ಒಂದೊಂದು ಕುಟುಂಬಕ್ಕೂ ಒಂದೊಂದು ಉದ್ಯೋಗವನ್ನು ನೌಕಾನೆಲೆಯಲ್ಲಿ ಮುಂದಕ್ಕಾದರೂ ಒದಗಿಸಬೇಕು.

ಮುಂಗಾರು
ಮಂಗಳವಾರ, ಸೆಪ್ಟೆಂಬರ್ 30, 1986

ಜನಾಭಿಪ್ರಾಯಕ್ಕೆ ಅಗೌರವ

ದಕ್ಷಿಣ ಆಫ್ರಿಕದ ವರ್ಣೀಯ ಪ್ರಭುತ್ವದ ಮೇಲೆ ಆರ್ಥಿಕ ದಿಗ್ಬಂಧವನ್ನು ಹೇರುವ ವಿಚಾರವಾಗಿ ಅಮೆರಿಕದಲ್ಲಿ ಕಾಂಗ್ರೆಸಿಗೂ ಅಧ್ಯಕ್ಷ ರೊನಾಲ್ಡ್ ರೇಗನರಿಗೂ ಘರ್ಷಣೆ ಉಂಟಾಗಿದೆ. ಕಾಂಗ್ರೆಸ್ ಅತ್ಯಂತ ಕಠಿಣವೂ ವ್ಯಾಪಕವೂ ಆದ ವಿಧಿ ನಿಷೇಧಗಳನ್ನು ದಕ್ಷಿಣ ಆಫ್ರಿಕದ ಮೇಲೆ ಹೇರುವ ವಿಧೇಯಕವನ್ನು ಅಂಗೀಕರಿಸಿ, ಅನುಷ್ಠಾನಕ್ಕಾಗಿ ಅಧ್ಯಕ್ಷ ರೇಗನರಿಗೆ ಕಳಿಸಿಕೊಟ್ಟಿದೆ. ಅಮೆರಿಕದ ಕಂಪೆನಿಗಳು ದಕ್ಷಿಣ ಆಫ್ರಿಕದ ಕೈಗಾರಿಕಾ ಕ್ಷೇತ್ರದಲ್ಲಿ ಬಂಡವಾಳ ಹೂಡುವುದನ್ನು ಈ ಕಾಯಿದೆಯು ನಿಷೇಧಿಸುತ್ತದೆ. ಜತೆಗೆ ಅಮೆರಿಕದ ಈ ನೀತಿಗೆ ಬೆಂಬಲ–ಸಹಕಾರಗಳನ್ನು ನೀಡದಿರುವ ದೇಶಗಳಿಗೆ ಅಮೆರಿಕದ ಮಿಲಿಟರಿ ನೆರವನ್ನು ಕಡಿತ ಮಾಡುವ ವಿಧಿಯೂ ಈ ಕಾನೂನಿನಲ್ಲಿ ಉಂಟು.

ಅಧ್ಯಕ್ಷರು ಈ ವಿಧೇಯಕವನ್ನು ತಡೆಯುವ ತಮ್ಮ ವಿಶೇಷಾಧಿಕಾರವನ್ನು ಪ್ರಯೋಗಿಸಿದ್ದಾರೆ. ಆ ಮೂಲಕ ಪ್ರಪಂಚದ ಜನಾಭಿಪ್ರಾಯದೊಂದಿಗೆ ತಾವಿಲ್ಲವೆಂಬುದನ್ನು ಸಾಬೀತುಪಡಿಸಿದ್ದಾರೆ. ದಕ್ಷಿಣ ಆಫ್ರಿಕದ ಮೇಲೆ ಆರ್ಥಿಕ ದಿಗ್ಬಂಧನ ಹೇರುವ ವಿಧೇಯಕವು ಅಮೆರಿಕದ ನಿಯಮದಂತೆ ಮತ್ತೆ ಕಾಂಗ್ರೆಸಿಗೆ ಹೋಗುತ್ತದೆ. ಅಲ್ಲಿ ಅದಕ್ಕೆ ಮೂರನೇ ಎರಡರಷ್ಟು ಬಹುಮತ ದೊರೆತರೆ ಶಾಸನವಾಗಿ ಊರ್ಜಿತಕ್ಕೆ ಬರುತ್ತದೆ. ರೇಗನರ ವೀಟೋ ನಿಷ್ಫಲವಾಗುತ್ತದೆ. ಹಾಗೆ ನಿಷ್ಫಲವಾಗುವುದು ಖಚಿತವೆಂಬುದು ಈ ಪ್ರಕರಣದ ಕುರಿತಾದ ವಿದ್ಯಮಾನಗಳನ್ನು ಗಮನಿಸಿದವರಿಗೆ ಸ್ಪಷ್ಟವಾಗುತ್ತದೆ. ಸೆನೆಟಿನ ಒಟ್ಟು ಬಲವಾದ ಒಂದು ನೂರು ಸದಸ್ಯರಲ್ಲಿ 84ಮಂದಿ ಆರ್ಥಿಕ ನಿಷೇಧ ಕಾಯಿದೆ ಪರವಾಗಿ ಮತ ಹಾಕಿದ್ದಾರೆ. ಇವರಲ್ಲಿ ರೇಗನರ ಪಕ್ಷವಾದ ರಿಪಬ್ಲಿಕನ್ ಪಕ್ಷದವರೂ ಸೇರಿದ್ದಾರೆ. ಡೆಮೊಕ್ರಾಟರಂತೂ ವಿಧೇಯಕದ ಹಿಂದೆ ಬಲವಾಗಿ ನಿಂತಿದ್ದಾರೆ. ರಿಪಬ್ಲಿಕನರ ತೀವ್ರವಾದಿ ಗುಂಪು ಮಾತ್ರ ರೇಗನರ ಬೆಂಬಲಕ್ಕಿದೆ. ಅವರ ಸಂಖ್ಯೆ 14 ಮಾತ್ರ. ವಿಧೇಯಕ ಮರಳಿ ಬಂದಾಗ ಪ್ರತಿನಿಧಿ ಸಭೆಯಲ್ಲಿಯೂ ಸೆನೆಟಿನಲ್ಲಿಯೂ ಮೂರನೆ ಎರಡು ಬಹುಮತದಿಂದ ಅಂಗೀಕಾರವಾಗಿ ರೇಗನರಿಗೆ ಮುಖಭಂಗವಾಗುವುದಂತೂ ಖಂಡಿತ. ರಿಪಬ್ಲಿಕನರೇ ಆದ ಸೆನೆಟಿನ ವಿದೇಶ ಬಾಂಧವ್ಯ ಸಮಿತಿ ಅಧ್ಯಕ್ಷ ರಿಚರ್ಡ್ ಜಿ ಲೂಗರ್‌ರಂತಹವರೇ ವಿಧೇಯಕದ ಬೆಂಬಲಕ್ಕೆ ನಿಂತಿದ್ದಾರೆ.

ಈ ಸತ್ಯವನ್ನು ರೇಗನ್ ಅರ್ಥ ಮಾಡಿಕೊಳ್ಳಬೇಕಿತ್ತು. ಜಗತ್ತಿನ ಹಾಗೂ ಮುಖ್ಯವಾಗಿ ಅಮೆರಿಕದ ಜನಾಭಿಪ್ರಾಯ ಯಾವ ಕಡೆಗಿದೆ ಎಂಬುದನ್ನು ಅವರು ತಿಳಿಯಬೇಕಿತ್ತು. ಕಾಂಗ್ರೆಸಿನಲ್ಲಿ ಮೂರನೇ ಎರಡು ಬಹುಮತ ಪಡೆದೇ ಅಂಗೀಕಾರವಾಗಿ ಬಂದ ಶಾಸನವೊಂದನ್ನು ರೇಗನ್ ತಡೆ ಹಿಡಿದದ್ದು ಈ ಮನುಷ್ಯ ಪ್ರಜಾ ತಾಂತ್ರಿಕ ಅಭಿಪ್ರಾಯಗಳಿಗೆ ಸೊಪ್ಪು ಹಾಕುವವನಲ್ಲವೆಂಬುದನ್ನು ತೋರಿಸಿಕೊಡುತ್ತದೆ. ವರ್ಣಭೇದದಂತಹ, ಇಡಿಯ ಮಾನವ ಸಮುದಾಯವೇ ಹೇಸಿಗೆಪಡುವ ಸಂಪ್ರದಾಯವೊಂದನ್ನು ಅಮೆರಿಕದ ಅಧ್ಯಕ್ಷರೇ ಮುಂದೆ ನಿಂತು ಸಂಬಂಧಪಟ್ಟವರಿಗೆ ಹಿತವಾದ ಹೇಳಿ ನಿವಾರಿಸಬೇಕಾಗಿತ್ತು. ಅದು ರೇಗನರ ಕರ್ತವ್ಯವಾಗಿತ್ತು.

ಅಮೆರಿಕದ ಪರಂಪರೆಯೇ ಅಂತಹದ್ದು. ಮಾನವೀಯ ಮೌಲ್ಯಗಳನ್ನು ಗೌರವಿಸುತ್ತ ಬಂದ ಸಮಾಜ ಅದು. ಗುಲಾಮಗಿರಿಯ ನಿರ್ಮೂಲಕ್ಕೆ ಸಂಬಂಧಪಟ್ಟ ವಿವಾದದ ಪರಿಣಾಮವಾಗಿ ಅಮೆರಿಕದಲ್ಲಿ ಅಂತರ್ಯುದ್ಧವೇ ನಡೆದಿತ್ತು. ಅಬ್ರಹಾಂಲಿಂಕನ್‌ನಂತಹ ಮಾನವತಾವಾದಿಗಳೂ ಜನತಂತ್ರವಾದಿಗಳೂ ಮುನ್ನಡೆಸಿದ ಸಮಾಜವದು. ಥಾಮಸ್ ಜೆಫರ್ಸನ್ ರಂಥ ನ್ಯಾಯತಜ್ಞರೂ ಪ್ರಜಾತಂತ್ರ ಪ್ರೇಮಿಗಳೂ ರೂಪಿಸಲು ನೆರವಾದ ಅಲಿಖಿತ ರಾಜ್ಯಾಂಗವನ್ನು ಅಲ್ಲಿನ ಜನ ಪಾಲಿಸಿಕೊಂಡು ಬಂದಿದ್ದಾರೆ. ಅಪೂರ್ವವಾದಂತಹ ವ್ಯಕ್ತಿ ಸ್ವಾತಂತ್ರ್ಯದ ಪರಂಪರೆ ಆ ದೇಶದಲ್ಲಿದೆ. ಅಲ್ಲಿನ ನ್ಯಾಯಾಂಗ ವ್ಯಕ್ತಿ ಸ್ವಾತಂತ್ರ್ಯವನ್ನೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಜತನದಿಂದ ಕಾಪಾಡಿಕೊಂಡು ಬಂದಿದೆ.

ಇಷ್ಟೆಲ್ಲ ಇದ್ದೂ ರೇಗನ್ ದಕ್ಷಿಣ ಆಫ್ರಿಕದ ಅನ್ಯಾಯ ಹಾಗೂ ತಾರತಮ್ಯಗಳೇ ತಳಹದಿಯಾಗಿರುವ ಆಳ್ವಿಕೆಯನ್ನು ಬೆಂಬಲಿಸಿದ್ದಾರೆ. ದಕ್ಷಿಣ ಆಫ್ರಿಕದ್ದು ಅಸಮಾನತೆ, ದಮನ, ದಬ್ಬಾಳಿಕೆ, ಶೋಷಣೆ ಹಾಗೂ ಮಾನವೀಯ ಘನತೆಯನ್ನು ಮಣ್ಣು ಮುಕ್ಕಿಸುವ ನೀತಿಗಳ ಮೇಲೆ ನಿಂತ ಸರಕಾರವೆಂಬುದಕ್ಕೆ ಯಾವ ಪುರಾವೆಗಳೂ ಬೇಕಾಗಿಲ್ಲ. ತಾತ್ವಿಕವಾಗಿ ರೇಗನ್ ಇದೆಲ್ಲ ಹೌದೆನ್ನುತ್ತಾರೆ. ಭಾಷಣಗಳಲ್ಲಿ ಅವರು ಇವನ್ನೆಲ್ಲ ಖಂಡಿಸುತ್ತಾರೆ. ಕೃತಿಯಲ್ಲಿ ಮಾತ್ರ ಇಲ್ಲ. ಪೋಲೆಂಡ್, ನಿಕರಾಗುವಾ ಹಾಗೂ ಲಿಬಿಯಗಳ ಮೇಲೆ ಮಾತೆತ್ತಿದರೆ ನಿಷೇಧಗಳನ್ನು ಹೇರುವ ರೇಗನ್‌ಗೆ ಬೋಥಾ ಸರಕಾರದಂತಹ ನಾಚಿಕೆಗೆಟ್ಟ ಫ್ಯಾಸಿಸ್ಟ್ ಆಳ್ವಿಕೆಯನ್ನು ದಂಡಿಸುವುದು ಅಸಾಧ್ಯವೆಂದರೆ ರೇಗನ್‌ರ ಆಲೋಚನಾ ವಿಧಾನದಲ್ಲೇ ಏನೋ ದೋಷವಿದೆಯೆಂದು ಪರಿಗಣಿಸಬೇಕಾಗುತ್ತದೆ.

ಮುಂದಿನವಾರ ವಿಧೇಯಕ ಮತ್ತೆ ಕಾಂಗ್ರೆಸಿಗೆ ಬರಲಿದೆ. ಅಲ್ಲಿ ಅದು ಮೂರನೆ ಎರಡು ಬಹುಮತದಿಂದ ಅಂಗೀಕಾರವಾಗಬಹುದು. ಜನಾಭಿಪ್ರಾಯವು ರೇಗನ್ ವಿರುದ್ಧ ಮೊರೆಯಬಹುದು, ಒಂದಂತೂ ಸಾಬೀತಾಗುತ್ತದೆ. ಜನತಂತ್ರದ ಮಹಾ ಪರಂಪರೆಯುಳ್ಳ, ಮಾನವೀಯ ಮೌಲ್ಯಗಳನ್ನು ಬೆಳೆಸಿರುವ ವ್ಯಕ್ತಿಸ್ವಾತಂತ್ರ್ಯದ ಪರಿಧಿಯನ್ನು ವಿಸ್ತರಿಸಿರುವ ಹೊಸ ಜಗತ್ತನ್ನು ಕಟ್ಟಲು ಅಗ್ರಗಣ್ಯವಾದ ಪಾಲನ್ನು ನೀಡಿರುವ ಅಮೆರಿಕದ ಜನಾಂಗವನ್ನು ಪ್ರತಿನಿಧಿಸಲು ರೇಗನ್ ಎಂಬ ಈ ವ್ಯಕ್ತಿಗೆ ಅರ್ಹತೆ ಇಲ್ಲ ಎನ್ನುವುದೇ ಈ ಸತ್ಯ.

ಮುಂಗಾರು
ಬುಧವಾರ, ಅಕ್ಟೋಬರ್ 1, 1986

ವೇತನ ನೀತಿಗೆ ತಿರುಳು ಕೊಡಿ

ದೇಶದ ಎಲ್ಲ ಕಡೆಯೂ ಕನಿಷ್ಠ ಕೂಲಿಯು ಒಂದೇ ಆಗಿರುವಂತೆ ನೋಡಿಕೊಳ್ಳುವುದು ಅಸಾಧ್ಯವೆಂದು ಕೇಂದ್ರ ಕಾರ್ಮಿಕ ರಾಜ್ಯ ಸಚಿವ ಪಿ. ಎ. ಸಂಗ್ಮಾ ಅವರು ಹೇಳಿದ್ದಾರೆ. ವಿವಿಧ ರಾಜ್ಯಗಳಲ್ಲಿ ವೇತನದ ಮಟ್ಟವು ಬೇರೆ ಬೇರೆಯಾಗಿರುವುದರಿಂದ ದೇಶದಾದ್ಯಂತ ಏಕರೂಪದ ಕನಿಷ್ಠ ವೇತನ ನಿಗದಿ ಮಾಡುವುದು ಅಸಾಧ್ಯವೆಂದು ಅವರು ವಾದಿಸಿದ್ದಾರೆ.

ಸಚಿವರು ಹೇಳುವ ಮಾತಿನಲ್ಲಿ ಸತ್ಯವಿದೆ. ದೇಶದಾದ್ಯಂತ ಎಲ್ಲಾ ದಂಧೆಗಳಿಗೂ ಒಂದೇ ಮಟ್ಟದ ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದು ಹಾಗೂ ಅದನ್ನು ಅನುಷ್ಠಾನಕ್ಕೆ ತರುವುದು ಪ್ರಾಯೋಗಿಕವಾಗಿ ಸಾಧ್ಯವೆನಿಸುವ ವಿಚಾರವಲ್ಲ. ದೇಶದ ವಿವಿಧ ಪ್ರದೇಶಗಳಲ್ಲಿ, ವಿವಿಧ ರಾಜ್ಯಗಳಲ್ಲಿ ಆರ್ಥಿಕತೆಯು ಬೆಳೆದಿರುವ ಸ್ವರೂಪದಲ್ಲಿ ವ್ಯತ್ಯಾಸವಿದೆ. ಒಂದು ಸಾಮಗ್ರಿಯ ಉತ್ಪಾದನಾ ವೆಚ್ಚ ಒಂದೆಡೆ ಕಮ್ಮಿಯಾದರೆ ಇನ್ನೊಂದೆಡೆ ಹೆಚ್ಚು. ಜೀವನ ವೆಚ್ಚದಲ್ಲಿಯೂ ಅಷ್ಟೆ. ಕೆಲವೆಡೆ ಅದು ಬಹಳಷ್ಟು ತುಟ್ಟಿಯಾದರೆ ಇನ್ನು ಕೆಲವೆಡೆ ತುಲನಾತ್ಮಕವಾಗಿ ಅಗ್ಗವಾಗಿರುತ್ತದೆ. ಆದ್ದರಿಂದ ದೇಶದ ಎಲ್ಲೆಡೆ ಕನಿಷ್ಠ ಕೂಲಿ ಒಂದೇ ಇರಬೇಕು ಎಂದು ಪಟ್ಟು ಹಿಡಿಯುವುದು ಅವಾಸ್ತವಿಕವಾದೀತು.

ಅಷ್ಟೇ ಅಲ್ಲ. ಸರಕಾರ ಮಾಡಿದ ಕಾನೂನು ಅನುಷ್ಠಾನಕ್ಕೆ ಬರುವ ಬಗ್ಗೆಯೂ ಈ ದೇಶದ. ಜನರಿಗೆ ಖಂಡಿತ ಸಂದೇಹ ಉಂಟು. ಈಗ ಹಲವಾರು ರಾಜ್ಯಗಳಲ್ಲಿ ಹಲವು ಉದ್ಯಮ, ವೃತ್ತಿ ಹಾಗೂ ವ್ಯವಸಾಯದಲ್ಲಿ, ಕೃಷಿ ಕ್ಷೇತ್ರದಲ್ಲಿ ಕೂಲಿಗಾರರಿಗೆ ಕನಿಷ್ಠ ವೇತನ ನಿಗದಿ ಮಾಡಲಾಗಿದೆ. ಅಪರಿಣತ ಕಾರ್ಮಿಕರಿಗೆ, ಆಂಶಿಕ ಪರಿಣತರಿಗೆ, ಪರಿಣತರಿಗೆ ಎಷ್ಟು ಕೂಲಿ ಎಂಬ ವಿಧಿನಿಯಮಗಳುಂಟು, ಕೊಡಬೇಕಾದ ತುಟ್ಟಿ ಭತ್ಯೆಯ ಬಗ್ಗೆ ನಿಯಮವುಂಟು. ನೇಮಕಾತಿ ಹಾಗೂ ಸೇವೆಯ ಬಗ್ಗೆ ನಿಯಮಗಳುಂಟು. ಶಕ್ತ ಉದ್ಯಮಿಗಳು ಇದೆಲ್ಲವನ್ನೂ ಮೀರಿ ನಿಂತು ಕಾರ್ಮಿಕರನ್ನು ತಮಗಿಷ್ಟ ಬಂದ ರೀತಿಯಲ್ಲಿ ನಡೆಸಿಕೊಳ್ಳುತ್ತಿಲ್ಲವೇ? ವರ್ಷ ವರ್ಷವೂ ಸಂಸ್ಥೆಯ ಹೆಸರನ್ನು ಬದಲಾಯಿಸುತ್ತಲೋ ಹೊಸ ಲೆಟರ್ ಹೆಡ್ ಕಂಪೆನಿಗಳನ್ನು ಸೃಷ್ಟಿಸಿ ಕಾರ್ಮಿಕರನ್ನು ಆ ಕಂಪೆನಿಯ ಹೆಸರಿಗೆ ವರ್ಗಾಯಿಸುತ್ತಲೋ ಅವರಿಗೆ ಸಲ್ಲ ಬೇಕಾದ ಕ್ಷೇಮನಿಧಿಯನ್ನು ಗ್ರಾಚ್ಯುಯಿಟಿಯನ್ನೂ ಕಬಳಿಸಿ ಕೂತಿಲ್ಲವೇ? ವೇತನ ಆಯೋಗವು ಶಿಫಾರಸು ಮಾಡಿದ ಕನಿಷ್ಠ ವೇತನವನ್ನೂ ಇತರ ಸೌಲಭ್ಯಗಳನ್ನೂ ಕೊಡದೆ ಇರಲು ಬೇನಾಮಿ ಕಂಪೆನಿಗಳ ಹೆಸರಿನಲ್ಲಿ ಕಾರ್ಮಿಕರನ್ನು ನೋಂದಾಯಿಸಿದ ಧನದಾಹಿ ಪತ್ರಿಕಾ ಸಂಸ್ಥೆಗಳು ಈ ಕರ್ನಾಟಕದಲ್ಲೇ ಇಲ್ಲವೇ?

ಇದನ್ನೆಲ್ಲ ನೋಡಲು ಅಧಿಕಾರಿಗಳ ಸಮೂಹವೇ ನಮ್ಮಲ್ಲಿದೆ. ಆದರೆ ಯಾವುದನ್ನೂ ಅವರು ನೋಡುವುದಿಲ್ಲ. ಯಾವುದೂ ಅವರ ಕಣ್ಣಿಗೆ ಕಾಣಿಸುವುದಿಲ್ಲ. ಅವರು ನೋಡದೇ ಇರಲು ಬೇಕಾದಂತಹ ಮುನ್ನಚ್ಚರಿಕೆಯನ್ನೆಲ್ಲ ಸಂಬಂಧಪಟ್ಟವರು ಮಾಡಿರುತ್ತಾರೆ. ಇದು ಈ ದೇಶದ ಎಲ್ಲೆಡೆಯೂ ನಡೆಯುವಂತಹದ್ದು.

ಎಲ್ಲೆಡೆ ಒಂದೇ ಮಟ್ಟದ ಕನಿಷ್ಠ ಕೂಲಿಯ ಕಲ್ಪನೆಯನ್ನು ಬಿಟ್ಟು ಆಯಾ ಪ್ರದೇಶಕ್ಕೊಂದು ಕನಿಷ್ಠ ಕೂಲಿ ನಿಗದಿ ಮಾಡಿ; ಹಾಗೂ ಅದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಆಲೋಚನೆ ಮಾಡಿ. ಶಿವಕಾಶಿಯ ಮುದ್ರಾಣಾಲಯಗಳಲ್ಲಿ, ಬೆಂಕಿ ಪೆಟ್ಟಿಗೆ, ಸುಡುಮದ್ದು ಕಾರ್ಖಾನೆಗಳಲ್ಲಿ ಬಿಹಾರದ ಗಣಿಗಳಲ್ಲಿ ಉತ್ತರ ಪ್ರದೇಶದ, ಮಧ್ಯ ಪ್ರದೇಶದ ನೂರಾರು ಎಕರೆಗಟ್ಟಲೆಯಿರುವ ಜಮೀನುಗಳಲ್ಲಿ ಮೂರುಕಾಸಿನ ಕೂಲಿಗೆ ಎಳೆಯ ಮಕ್ಕಳ ಸಹಿತ ಬಡಜನರು ಜೀತದಾಳುಗಳಾಗಿ ದುಡಿಯದಂತೆ ವ್ಯವಸ್ಥೆ ಮಾಡಿ.

ಆಗಬೇಕಾದ್ದು ಕನಿಷ್ಠ ಕೂಲಿಯಲ್ಲ, ರಾಜ್ಯದಿಂದ ರಾಜ್ಯಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ವಿಶೇಷವಾದ ತಾರತಮ್ಯ ಇಲ್ಲದಂತೆ ನೋಡಿಕೊಳ್ಳುವ ಕೆಲಸ. ದುಡಿಮೆಯಿಂದ ಬಂದದ್ದು ದುಡಿಮೆಗಾರರ ಬದುಕಿನ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು. ಅನ್ನಕ್ಕೆ, ಬಟ್ಟೆಗೆ, ತಲೆಯ ಮೇಲೊಂದು ಸೂರಿಗೆ ಹಾಗೂ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸುವುದಕ್ಕೆ ಸಾಲುವಷ್ಟಿರಬೇಕು. ಸಮಾಜದ ಅತ್ಯಂತ ಮೇಲುವರ್ಗದ ಹಾಗೂ ಅತ್ಯಂತ ಕೆಳವರ್ಗದವರ ವರಮಾನದಲ್ಲಿ ಈಗ ಇರುವಂತೆ ಆಕಾಶ–ಪಾತಾಳಗಳ ನಡುವಿನ ಅಂತರ ಇರಬಾರದು. ಈ ಅಂತರ 1:5ರ ಒಳಗೇ ಬರುವಂತೆ ನೋಡಿಕೊಳ್ಳಬೇಕು. ಇದು ಸರಕಾರದ ಕರ್ತವ್ಯ ಸರಕಾರದ ಯೋಜನೆಗಳ ಉದ್ದೇಶ, ವೇತನ ಧೋರಣೆ, ಆರ್ಥಿಕ ನೀತಿ, ಕಂಪೆನಿ ಕಾಯಿದೆ–ಕಾರ್ಮಿಕ ಶಾಸನಗಳು ಇವೆಲ್ಲವನ್ನೂ ಇಂಥ ಒಂದು ರಾಷ್ಟ್ರೀಯ ವರಮಾನ ನೀತಿಯನ್ನು ಸಾಕಾರಗೊಳಿಸುವುದಕ್ಕಾಗಿ ಸಜ್ಜುಗೊಳಿಸಬೇಕು.

ಇಂದು ಬಂಡವಾಳ ಶಾಹಿಗಳಾದ ಪಾಶ್ಚಾತ್ಯ ದೇಶಗಳಲ್ಲಾಗಲಿ, ಕಮ್ಯೂನಿಸ್ಟ್ ದೇಶಗಳಲ್ಲಾಗಲಿ ವರಮಾನಕ್ಕೆ ಸಂಬಂಧಿಸಿ ಇಂಥ ಒಂದು ಆರೋಗ್ಯಕರ ಸಮತೋಲನವಿದೆ. ಆ ಎರಡೂ ಬಣಗಳ ದೇಶಗಳಲ್ಲಿ ನಮ್ಮಲ್ಲಾಗುವಂತೆ ಜನರು ಪೌಷ್ಟಿಕ ಆಹಾರದ ಕೊರತೆಯಿಂದ ಬಳಲುವುದಿಲ್ಲ ಮಳೆ, ಬಿಸಿಲು, ಚಳಿಯಿಂದ ರಕ್ಷಿಸಿಕೊಳ್ಳಲು ಆಸರೆಯಿಲ್ಲದೆ ಸಾಯುವುದಿಲ್ಲ. ಕಲಿಯಲು ಹಣವಿಲ್ಲದೆ ಅವರ ಮಕ್ಕಳು ಶಾಲೆಬಿಟ್ಟು ದನ ಮೇಯಿಸುತ್ತ ತಿರುಗುವುದಿಲ್ಲ.

ಅಂತಹ ವಾತಾವರಣ ಈ ದೇಶದಲ್ಲಿ ನಿರ್ಮಾಣವಾಗುವಂತೆ ಮಾಡಬೇಕು. ಸರಕಾರದ ಆರ್ಥಿಕ ನೀತಿಯೂ ವೇತನ ನೀತಿಯೂ ಆ ನಿಟ್ಟಿನಲ್ಲಿ ಸಾಗಬೇಕು. ಈಗ ಇರುವ ಕಂಪೆನಿ ಅಧಿಕಾರಿಗೆ ಹದಿನೈದು ಸಾವಿರ ರೂಪಾಯಿ, ಅಲ್ಲಿನ ಜವಾನನಿಗೆ ಮುನ್ನೂರು ರೂಪಾಯಿ ವೇತನ ವ್ಯವಸ್ಥೆ ಬದಲಾಗಬೇಕು. ಇದು ಸಾಧಿತವಾದರೆ ಆರ್ಥಿಕ ವ್ಯವಸ್ಥೆಗೆ ತಿರುಳು ಬರುತ್ತದೆ. ಆರೋಗ್ಯಶಾಲಿಯಾಗುತ್ತದೆ. ಆಗ ದೇಶದ ಎಲ್ಲಡೆ ಒಂದೇ ಮಟ್ಟದ ಕನಿಷ್ಠ ವೇತನ ನಿಗದಿಮಾಡಬೇಕಾದ ಅಗತ್ಯವೂ ಉಂಟಾಗುವುದಿಲ್ಲ.

ಮುಂಗಾರು
ಗುರುವಾರ, ಅಕ್ಟೋಬರ್ 2, 1986

ಮಹಿಳಾ ಸಾಲಮೇಳ

ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಕೃತ ಬ್ಯಾಂಕುಗಳು ಗುರುವಾರ ಹೊಸ ಉಪಕ್ರಮವೊಂದನ್ನು ನಡೆಸಲಿವೆ. ಕನಿಷ್ಠ ನಲುವತ್ತು ಸಾವಿರ ಮಂದಿ ಮಹಿಳೆಯರಿಗೆ ತಲಾ ಗರಿಷ್ಠ ಐದು ಸಾವಿರ ರೂಪಾಯಿಗಳಂತೆ ವಿವಿಧ ದಂಧೆಗಳನ್ನು ಕೈಗೊಳ್ಳಲು ಇವುಗಳು ಸಾಲ ನೀಡಲಿವೆ. ಬಡವರಿಗೆ ನೀಡಲಾಗುವ ಇತರ ಸಾಲಗಳಂತೆ ಇದು ಕೂಡ ಕಡಿಮೆ ಬಡ್ಡಿಯದ್ದಾಗಿರುತ್ತದೆ.

ಸ್ವೋದ್ಯೋಗಕ್ಕೆ ಚಾಲನೆ ಹಾಗೂ ಮಹಿಳಾ ಸ್ವಾವಲಂಬನೆಯ ಚಳವಳಿಯಲ್ಲಿ ಇದೊಂದು ಕ್ರಾಂತಿಕಾರಕ ಹೆಜ್ಜೆ ಎಂಬುದರಲ್ಲಿ ಸಂದೇಹವಿಲ್ಲ. ಹಾಗೆಯೆ ಈ ಕಾರ್ಯಕ್ರಮದ ಹಿಂದಿನ ಚಾಲಕ ಶಕ್ತಿ ಕೇಂದ್ರ ಹಣಕಾಸು ರಾಜ್ಯ ಸಚಿವ ಬಿ. ಜನಾರ್ದನ ಪೂಜಾರಿ ಎಂಬುದೂ ಜನರಿಗೆಲ್ಲ ತಿಳಿದಿರುವ ವಿಚಾರ. ಪೂಜಾರಿ ಅವರ ಬಗೆಗೆ ಟೀಕೆಗಳಿರಬಹುದು: ಆಸಕ್ತ ವರ್ಗಗಳು ಅವರ ಬಗೆಗೆ ಕೋಪಗೊಂಡಿರಬಹುದು; ಬ್ಯಾಂಕಿನ ಹಣ ಲೂಟಿ ಮಾಡಲು ಅವಕಾಶ ಮಾಡಿಕೊಡುತ್ತಿದ್ದಾರೆ ಎಂಬ ಪ್ರಚಾರವನ್ನು ಈ ವರ್ಗಗಳು ಜತೆಯಾಗಿ ನಡೆಸುತ್ತಿರಬಹುದು. ಆದರೆ ಬಡವರ ಬಗೆಗಿನ ಅವರ ಕಾಳಜಿ ಮಾತ್ರ ಪ್ರಶ್ನಾತೀತ. ಈ ಕಾಳಜಿಯಲ್ಲಿ ಅವರು ಪ್ರಾಮಾಣಿಕ. ಭ್ರಷ್ಟತೆಯ ಲೇಪವನ್ನೆಂದೂ ತನ್ನ ವೈಮನಸ್ಸುಗಳಿಗೆ ಅಂಟಿಸಿಕೊಳ್ಳದ ಶುದ್ಧ ಚಾರಿತ್ರ್ಯವಂತ.

ಇಲ್ಲದವರ ಬಗೆಗಿನ ಅವರ ಈ ಕಾಳಜಿಯೇ ಸಾಲಮೇಳವೆಂಬ ಕಲ್ಪನೆಯನ್ನು ಅವರಿಗೆ ಕೊಟ್ಟದ್ದು. ರಾಷ್ಟ್ರೀಕೃತ ಬ್ಯಾಂಕುಗಳ ಬಾಗಿಲು ಬಡವರಿಗಾಗಿ ತೆರೆಯಬೇಕು ಎಂಬ ಪೂಜಾರಿಯವರ ಚಳವಳಿಯೇ ಸಾಲಮೇಳವೆಂಬ ದೊಡ್ಡ ಆಂದೋಲನವಾಗಿ ಬೆಳೆದು ನಿಂತಿದೆ. ಈ ದೇಶದಲ್ಲಿ ಲಕ್ಷಾಂತರ ಮಂದಿ ಇದರ ಪ್ರಯೋಜನ ಪಡೆದಿದ್ದಾರೆ. ಸಮಾಜದ ಕೆಳಸ್ತರದಲ್ಲಿ ಆರ್ಥಿಕ ಚಟುವಟಿಕೆಯ ಗತಿ ತೀವ್ರವಾಗಿದೆ. ಅಸಂಖ್ಯ ಕುಟುಂಬಗಳು ಹಣಕಾಸು ರೂಢಿಸಿಕೊಂಡು ದನಸಾಕಣೆ, ಕೋಳಿಸಾಕಣೆ, ಹಂದಿ ಸಾಕಣೆ, ನೇಯ್ಗೆ, ಹೊಲಿಗೆ, ರಿಪೇರಿ, ಸಣ್ಣ ಪುಟ್ಟ ವ್ಯಾಪಾರದಂತಹ ಉದ್ಯೋಗಗಳನ್ನು ಕಂಡು ಕೊಂಡಿದ್ದಾರೆ. ಬಡತನದ ಭೀಕರತೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಈ ಸಾಲಮೇಳಗಳ ಪಾಲು ಅತ್ಯಂತ ದೊಡ್ಡದು. ಸಮಾಜದ ಕೆಳವರ್ಗದ ಮಂದಿಗೆ ಖಾಸಗಿ ಹಣಕಾಸು ಸುಲಭಕ್ಕೆ ದೊರೆಯದು; ಸಾಂಸ್ಥಿಕ ಹಣಕಾಸು ಕೂಡ ದುರ್ಲಭ ಎಂಬ ಸತ್ಯವನ್ನು ಅರಿತುದರ ಪರಿಣಾಮವೇ ಸಾಲಮೇಳ. ಅದನ್ನು ತೊಡಗಿದವರಿಗೆ ರಾಜಕೀಯ ದೂರದೃಷ್ಟಿಯೂ ಪ್ರಬಲ ಇಚ್ಛಾ ಶಕ್ತಿಯೂ ಪ್ರತಿಕೂಲ ಪರಿಣಾಮಗಳಿಗೆ ಹೆದರದಿರುವ ಎದೆಗಾರಿಕೆಯೂ ಇದ್ದುದರಿಂದಲೇ ಇಂಥ ಸಾಧನೆಯೊಂದು ಭಾರತದ ಹಣಕಾಸು ಕ್ಷೇತ್ರದಲ್ಲಿ ಸಾಧ್ಯವಾಯಿತು.

ಇದೀಗ ಮಹಿಳಾ ಸಾಲಮೇಳ. ಮೇಲ್ನೋಟಕ್ಕೆ ಕಾಣಿಸುವುದಕ್ಕಿಂತ ಹೆಚ್ಚಿನ ಸಾಮಾಜಿಕ ಮಹತ್ವ ಈ ಕಾರ್ಯಕ್ರಮಕ್ಕುಂಟು. ಭಾರತೀಯ ಸಮಾಜದಲ್ಲಿ

ಅಲ್ಲಗಳೆಯುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣಗಳು ಹಲವಾರು. ಶಾರೀರಿಕ ದೌರ್ಬಲ್ಯ ಒಂದು ಕಡೆಯಾದರೆ ಕಾಲಾಂತರದಿಂದ ಹೆಣ್ಣು ಆರ್ಥಿಕವಾಗಿ ಗಂಡಿನ ಆಸರೆಯಲ್ಲಿರುವುದೇ ಮುಖ್ಯ ಕಾರಣ. ಇದರ ಪರಿಣಾಮವಾಗಿಯೇ ಆಕೆ ಮನೆಯಲ್ಲಿ ಬಂದಿ. ಪತಿ-ಪುತ್ರರ ಸೇವೆಯೇ ಆಕೆಯ ಬದುಕಿನ ಪರಮ ಗುರಿ. ಜಾತಿ-ಧರ್ಮಗಳ ತಾರತಮ್ಯವಿಲ್ಲದೆ ಈ ಸಂಸ್ಕೃತಿ ಭಾರತೀಯ ಸಮಾಜದ ಎಲ್ಲ ಕಡೆಯೂ ಎಲ್ಲ ಮೂಲೆಗಳನ್ನೂ ವ್ಯಾಪಿಸಿದೆ. ಹೆಣ್ಣು ವಿದ್ಯೆಯಿಂದ ವಂಚಿತಳು. ಆದ್ದರಿಂದಲೇ ಸಮಾಜದ ಚಟುವಟಿಕೆಗಳಲ್ಲಿ ಪಾಲ್ಗೊಂಡು ಪೂರ್ಣವಾಗಿ ಅರಳುವುದಕ್ಕೆ ಆಗದವಳು. ಆದ್ದರಿಂದಲೇ ಆಕೆಗೆ ಸ್ವಂತ ವ್ಯಕ್ತಿತ್ವವಿಲ್ಲ. ಅದನ್ನು ಸಾಧಿಸಿಕೊಳ್ಳುವ ಯಾವ ಸಾಧನವೂ ಆಕೆಗೆಟಕುವುದಿಲ್ಲ. ವರದಕ್ಷಿಣೆಯಂತಹ ಪಿಡುಗಿನ ಮುಷ್ಟಿಗೆ ಸಿಲುಕಿ ನಲುಗಿ ಹೋಗಬೇಕಾದಂತಹ ದಯನೀಯ ಪರಿಸ್ಥಿತಿ ಉಂಟಾಗಿರುವುದಕ್ಕೂ ಇದುವೇ ಕಾರಣ.

ಮಹಿಳೆಯರಿಗೆ ಸಾಮೂಹಿಕ ನೆಲೆಯಲ್ಲಿ ಸಾಲ ನೀಡಿ ಅವರಿಗೆ ಸ್ವೋದ್ಯೋಗಕ್ಕೆ ಅನುವು ಮಾಡಿಕೊಡುವ ಉಪಕ್ರಮ ಈ ನಿಟ್ಟಿನಲ್ಲಿ ಸ್ವಾಗತಾರ್ಹವಾದದ್ದು. ಈ ಮಹಿಳಾ ಸಾಲಮೇಳ ಈ ದೇಶದಲ್ಲಿ ಹೆಣ್ಣಿನ ಬಿಡುಗಡೆಯ ಹರಿಕಾರನಾಗುವ ಉಜ್ವಲ ಸಾಧ್ಯತೆಗಳಿವೆ. ಈಗ ಸಾಲ ಪಡೆದು ಕೊಳ್ಳುತ್ತಿರುವ ಮಹಿಳೆಯರ ಪೈಕಿ ಕನಿಷ್ಠ ಅರ್ಧಾಂಶ ಮಂದಿ ಹಣಕಾಸನ್ನು ಸದುಪಯೋಗ ಮಾಡಿ ಸ್ವತಂತ್ರ ವೃತ್ತಿಯೊಂದನ್ನು ರೂಪಿಸಿಕೊಂಡು ನಾಡಿನ ಸಂಪತ್ತು ಹೆಚ್ಚಳಕ್ಕೆ ನೆರವಾಗುವುದಲ್ಲದೆ ಕುಟುಂಬವನ್ನು ನಡೆಸಿಕೊಂಡುಹೋಗುವ ಸಾಮರ್ಥ್ಯವನ್ನು ಪಡೆದರೆ ಸಾಕಷ್ಟಾಯಿತು. ಹಣಕಾಸಿನ ಬಲ ಪಡೆಯುವುದು ಒಂದು ಸಾಧನೆಯಾದರೆ ಬದುಕಿಗೊಂದು ನೈತಿಕ ಬಲವನ್ನು ಸ್ವಂತ ವ್ಯಕ್ತಿತ್ವವನ್ನೂ ಅವರಿಗೆ ತಂದುಕೊಟ್ಟ ಸಾಧನೆ ಹಣಕಾಸಿಗಿಂತ ದೊಡ್ಡದು.

ಕಾರ್ಯಕ್ರಮ ವಿನೂತನವಾದದ್ದು. ಬಲು ಪ್ರಭಾವಶಾಲಿಯೂ ಹೌದು. ಉದ್ದೇಶ ಒಳ್ಳೆಯದು. ಆದರೆ ಇದರ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು. ನಿಜವಾಗಿ ಅಗತ್ಯವುಳ್ಳವರಿಗೆ ಈ ನೆರವು ದೊರೆಯುವಂತೆ ನೋಡಿಕೊಳ್ಳಬೇಕು. ಮಂಗಳೂರು ನಗರದ ವಾಣಿಜ್ಯ ಕೇಂದ್ರಗಳಲ್ಲಿರುವ ಬ್ಯಾಂಕು ಶಾಖೆಗಳಲ್ಲಿ ಈ ಕಾರ್ಯಕ್ರಮಕ್ಕೆ ಆರಿಸಲಾದ ಮಹಿಳೆಯರ ಹೆಸರು ವಿಳಾಸಗಳನ್ನೊಮ್ಮೆ ತಪಾಸಣೆಗೆ ಒಳಪಡಿಸುವುದು ಸೂಕ್ತ. "ಉದ್ಯಮಿಗಳೂ ವ್ಯವಹಾರಸ್ಥರೂ" ತಮ್ಮ ಹೆಂಡಂದಿರ, ತಂಗಿಯಂದಿರ ಹಾಗೂ ಮಕ್ಕಳ ಹೆಸರಲ್ಲಿ ಈ ಸಾಲದ ಆಕಳನ್ನು ಹಿಂಡಲು ಹೊರಟಿದ್ದಾರೆಂಬ ದೂರಿದೆ. ಸಂಬಂಧಪಟ್ಟವರು ವಿಚಾರಿಸಬೇಕು.

ಗುಡಿ ಕೈಗಾರಿಕೆ ಹಾಗೂ ಮಹಿಳಾ ವಿಮೋಚನೆಯ ದಾರ್ಶನಿಕನಾದ ಗಾಂಧೀಜಿಯ ಹುಟ್ಟು ಹಬ್ಬದಂದು ಈ ಕಾರ್ಯಕ್ರಮದ ಉದ್ಘಾಟನೆ ನಡೆಯುತ್ತಿ

ಮುಂಗಾರು
ಶುಕ್ರವಾರ, ಅಕ್ಟೋಬರ್ 3, 1986

ಗೂರ್ಖಾಲ್ಯಾಂಡ್

ಗೂರ್ಖಾಲ್ಯಾಂಡ್ ಚಳವಳಿಯ ವಿಚಾರದಲ್ಲಿ ಕೇಂದ್ರ ಸರಕಾರಕ್ಕೂ ಪಶ್ಚಿಮ ಬಂಗಾಳದ ವಾಮವಾದಿ ಸಂಯುಕ್ತ ರಂಗ ಸರಕಾರಕ್ಕೂ ವಿವಾದ ಉಂಟಾಗಿದೆ. ಈ ಚಳವಳಿ ರಾಷ್ಟ್ರ ವಿರೋಧಿಯಾದದ್ದು ಹಾಗೂ ಇದು ಪ್ರತ್ಯೇಕತಾವಾದಿ ಎಂದು ಪಶ್ಚಿಮ ಬಂಗಾಳ ಸರಕಾರ ಹೇಳುತ್ತಿದ್ದರೆ ಇದರಲ್ಲಿ ರಾಷ್ಟ್ರ ವಿರೋಧಿಯಾದ ಅಂಶಗಳೇನೂ ಕಾಣಿಸುತ್ತಿಲ್ಲವೆಂದು ಪ್ರಧಾನಮಂತ್ರಿ ರಾಜೀವ ಗಾಂಧಿ ಹೇಳುತ್ತಿದ್ದಾರೆ. ಚಳವಳಿ ರಾಷ್ಟ್ರ ವಿರೋಧಿಯೂ ಪ್ರತ್ಯೇಕತಾವಾದಿಯೂ ಆಗಿದೆಯೆಂದು ಖಂಡಿಸುವ ಗೊತ್ತುವಳಿಯೊಂದನ್ನು ಪ. ಬಂಗಾಳ ವಿಧಾನ ಸಭೆ ಅಂಗೀಕರಿಸಿದೆ.

ಆಂದೋಲನವೊಂದು ಹುಟ್ಟಿಕೊಂಡಾಗ ಅದರ ಮೂಲವನ್ನು ತಿಳಿಯಲು ಹೋಗದೆ ಚಿಹ್ನೆಗಳನ್ನು ಮಾತ್ರವೇ ನೋಡಿ ಪರಿಹಾರದ ಲೇಪ ಹಚ್ಚುವ ವಿದ್ಯಮಾನವೇ ಇಂದು ಗೂರ್ಖಾಲ್ಯಾಂಡ್ ಚಳವಳಿಯ ವಿಚಾರದಲ್ಲಿಯೂ ನಡೆಯುತ್ತಿದೆ. ಅಷ್ಟೇ ಅಲ್ಲದೆ ಈ ಚಳವಳಿ ಕೇಂದ್ರ ಸರಕಾರಕ್ಕೂ ರಾಜ್ಯ ಸರಕಾರಕ[illegible]ಸ್ಪರ ಬೈದಾಡಿ ಕೊಳ್ಳಲು, ಕ್ಷುದ್ರ ರಾಜಕೀಯ ಮಾಡಲು ಒಳ್ಳೆಯ ವಸ್ತುವನ್ನು ಒದಗಿಸಿದಂತಿದೆ. ಯಾವುದೋ ಕಾರಣಕ್ಕೆ ಪಶ್ಚಿಮ ಬಂಗಾಳ ಸರಕಾರ ಈ ಚಳವಳವನ್ನು ದಮನ ಮಾಡಲು ಯತ್ನಿಸುತ್ತಿದೆ. ಪಶ್ಚಿಮ ಬಂಗಾಳದ ಕಾಂಗ್ರೆ ಪಕ್ಷ ಕೂಡ ಚಳವಳವನ್ನು ಕೆಟ್ಟ ಕಣ್ಣಿನಿಂದಲೇ ನೋಡಿದೆ. ಜ್ಯೋತಿ ಬಸು ಅವರ ಸರಕಾರಕ್ಕೆ ಮುಜುಗರವಾಗಲಿ ಎಂಬುದಕ್ಕಾಗಿ ಕೇಂದ್ರ ಸರಕಾರ ಈ ವಿಚಾರದಲ್ಲಿ ಸುಮ್ಮನೆ ಕುಳಿತಿರುವಂತಿದೆ.

ತಮಗೆ ಅನ್ಯಾಯವಾಗಿದೆ ಎಂಬುದು ಪಶ್ಚಿಮ ಬಂಗಾಳದ ಗುಡ್ಡ ಪ್ರದೇಶಗಳಲ್ಲಿ ಬೀಡುಬಿಟ್ಟಿರುವ ನೇಪಾಳಿ ಮೂಲದ ಮಂಗೋಲಿಯನ್ ಜನಾಂಗದ ಜನಸಮೂಹವಾದ ಗೂರ್ಖರ ದೂರು. ಇದರ ಪರಿಹಾರಕ್ಕಾಗಿ ಆಡಳಿತ ಸ್ವಾಯತ್ತೆಯುಳ್ಳ ಗೂರ್ಖಾಲ್ಯಾಂಡ್ ಎಂಬ ಪ್ರತ್ಯೇಕ ರಾಜ್ಯ ಬೇಕು ಎಂಬುದು ಅವರ ಬೇಡಿಕೆ. ನೇಪಾಳಿ ಭಾಷೆಯನ್ನು ರಾಜ್ಯಾಂಗದ ಎಂಟನೇ ಪರಿಚ್ಛೇದದಲ್ಲಿ ಸೇರಿಸಬೇಕೆಂಬ ಆಗ್ರಹವೂ ಉಂಟು.

ಈ ಅಹವಾಲು, ಈ ದೂರು, ಈ ಬೇಡಿಕೆಗೆ ಸುದೀರ್ಘವಾದ ಹಿನ್ನೆಲೆ ಉಂಟು. ಮಂಗೋಲಿಯನ್ ಜನಾಂಗಕ್ಕೆ ಸೇರಿದ ಗೂರ್ಖಾ ಸಮುದಾಯದವರು ಹಿಮಾಲಯದ ತಪ್ಪಲಲ್ಲಿ ಅಲ್ಲಲ್ಲಿ ಬಹುಕಾಲದಿಂದ ನೆಲೆನಿಂತಿದ್ದಾರೆ. ನೇಪಾಳ ಸಹಿತ ಅನೇಕ ಕಡೆ ಅವರ ಪ್ರಾಬಲ್ಯ ಉಂಟು. ಆದರರ್ಥ ಎಲ್ಲರೂ ನೇಪಾಳಿ ಮೂಲದವರು ಎಂದಲ್ಲ. ನೇಪಾಳದಿಂದ ಭಾರತಕ್ಕೆ

ಸಮರಕ್ಕೆ ಬ್ರಿಟಿಷರು ಮೊದಲು ಕಳಿಸಿದ್ದು ಗೂರ್ಖಾ ಪಡೆಯನ್ನು. ಹೋರಾಟದಲ್ಲಿ ಗೂರ್ಖರಿಗೆ ಅಂಥ ಹೆಸರುಂಟು.

ಈ ಸಮುದಾಯಕ್ಕೆ ವಿದ್ಯೆ ಕಡಿಮೆ. ಆದ್ದರಿಂದಲೇ ಅವರು ಶೋಷಣೆಗೂ ಅನ್ಯಾಯಕ್ಕೂ ಗುರಿ. ಸೈನ್ಯದಲ್ಲಿ ಗೂರ್ಖರು ಜವಾನರ ಹುದ್ದೆಗಿಂತ ಮೇಲೇರಿದ್ದು ಕಡಿಮೆ. ಮೇಜರ್, ಮೇಜರ್ ಜನರಲ್ ಸ್ಥಾನಮಾನ ಅವರಿಗೆ ದಕ್ಕಿದ್ದು ಬಲು ಅಪರೂಪ.

ಡಾರ್ಜಿಲಿಂಗ್ ಮತ್ತಿತರ ಗುಡ್ಡಗಾಡು ಪ್ರದೇಶದಲ್ಲಿ ಬಂಗಾಳಿ ಬಾಬುಗಳೂ ಬಿಹಾರದ ಜಮೀನ್ದಾರರೂ ಗೂರ್ಖರ ನೆಲವನ್ನು ಬಲು ಉಪಾಯದಿಂದ ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ. ಚಹಾ ತೋಟಗಳನ್ನು ಬೆಳೆಸಿದ್ದಾರೆ. ಕೂಲಿಗಾಗಿ ಹೊರಗಿನಿಂದ ಬಹಳ ಜನ ಬಂದಿದ್ದಾರೆ, ಉದ್ಯೋಗವೆಲ್ಲ ಹೊರಗಿನವರ ಕೈಯಲ್ಲಿ. ಸುಮಾರು 60ಲಕ್ಷ ಮಂದಿ ಇರುವ ಮಣ್ಣಿನ ಮಕ್ಕಳಾದ ಗೂರ್ಖರ ಸ್ಥಿತಿ ಅತಂತ್ರ. ಸೈನಿಕರಾಗಿ ಹೊರಗೆ ದುಡಿದು ಈ ಮಂದಿ ಮಣ್ಣಿಗೆ ಮರಳಿದಾಗ ನೆಲವೇ ಬಾಯಿ ತೆರೆದಂತಹ ಪರಿಸ್ಥಿತಿ. ಅಸ್ಸಾಂನಲ್ಲಿ ಆದದ್ದೇ ಡಾರ್ಜಿಲಿಂಗ್‌ನಲ್ಲಿ ಪ್ರತಿರೂಪ ಕಂಡಿತು. ಇಂಥವೇ ಒಂದು ನೆಲ ಕರ್ನಾಟಕದಲ್ಲಿಯೂ ಉಂಟು. ಅದುವೇ ಕೊಡಗು. ಇದೀಗ ಕೊಡಗಿನ ಸಾಹಸಿಗಳ ಭೂಮಿ ಬೇರೆಯವರ ವಶವಾಗುತ್ತಿದೆ. ಅಪಾಯದ ಗಂಟೆ ಅಲ್ಲಿಯೂ ಮುಂದೆ ಒಂದು ದಿನ ಬಾರಿಸಬಹುದು.

ಇದುವೇ ಗೂರ್ಖಾಲ್ಯಾಂಡ್ ಆಂದೋಲನದ ಮೂಲ. ಬಹುಕಾಲದಿಂದ ಇವರಿಗೆ ನಾಯಕತ್ವ ಇರಲಿಲ್ಲ. ಈಗ ಸಿಕ್ಕಿದೆ. ಸುಭಾಷ್ ಘೀಸಿಂಗ್ ಗೂರ್ಖರನ್ನು ಸಂಘಟಿಸಿದ್ದಾರೆ.

ಹೋರಾಟ ಹಿಂಸೆಯತ್ತಲೂ ತಿರುಗಿದೆ. ಕಳೆದ ಮೇ 12ರಿಂದ14ರ ತನಕ ಮೂರು ದಿನ ಡಾರ್ಜಿಲಿಂಗ್‌ನಲ್ಲಿ ಬಂದ್ ನಡೆಯಿತು. ಹಿಂಸೆ ತಾಂಡವವಾಡಿತು, ಗೂರ್ಖರು ಕುಕ್ರಿ ಹಿಡಿದು, ಬಿಲ್ಲು ಬಾಣ ಧರಿಸಿ ಹಲ್ಲೆ ಮಾಡಿದರು. ಹೋರಾಟವೇ ಹುಟ್ಟುಗುಣವಾದ ಈ ಜನರಿಗೆ ಕೋಪ ಬಂದರೆ ಏನಾದೀತೆಂಬುದು ಸಾಬೀತಾಯಿತು.

ಡಾರ್ಜಿಲಿಂಗ್‌ನ ಕುರ್ಸಿಯಾಂಗ್ ಹಾಗೂ ಕಾಲಿಂಪಾಂಗ್ ಸಬ್‌ಡಿವಿಜನುಗಳು, ಸಿಲಿಗುರಿ ಸಬ್‌ಡಿವಿಜನಿನ ಒಂದು ಭಾಗ ಹಾಗೂ ಜಲ್‌ಪೈಗುರಿ ಜಿಲ್ಲೆಯ ಒಂದು ಭಾಗ ಸೇರಿಸಿ ಗೂರ್ಖಾಲ್ಯಾಂಡ್ ರೂಪಿಸಬೇಕೆಂಬುದು ಇವರ ಬೇಡಿಕೆ. ಭಾರತದ ಸಂವಿಧಾನದ ಚೌಕಟ್ಟಿನೊಳಗೇ ಇದು ಆಗಲಿ ಅನ್ನುತ್ತಾರವರು.

[illegible]
ಗೂರ್ಖಾರೂ ಬಹಳಷ್ಟಿದ್ದಾರೆ. ಇವರೆಲ್ಲರ ಭಾಷೆ ನೇಪಾಳಿ.

ಭಾಷೆ ನೇಪಾಳಿಯಾದ ಒಂದೇ ಕಾರಣಕ್ಕೆ ಈ ಮಂದಿ ನೇಪಾಳಕ್ಕೆ ಸಲ್ಲಬೇಕಾದವರೆಂಬ ತಪ್ಪುಕಲ್ಪನೆ ಭಾರತೀಯರಲ್ಲುಂಟು. ಇದರಿಂದಾಗಿಯೇ ಅನೇಕ ಗೂರ್ಖರಿಗೆ ಭಾರತದಲ್ಲಿ ಮತದಾನದ ಹಕ್ಕು ಕೂಡ ಸಿಕ್ಕಿಲ್ಲ. ಭಾರತದಲ್ಲಿ ಇವರೆಲ್ಲ ಎರಡನೇ ದರ್ಜೆ ಪ್ರಜೆಗಳು.

ಗೂರ್ಖರ ಅವಗಣನೆ ಇಲ್ಲಿಗೇ ನಿಂತಿಲ್ಲ. ಈ ಮಂದಿ ಮಹಾ ಸಾಹಸಿಗಳು, ಧೀರರು. ಹೋರಾಟದಲ್ಲಿ ಹುಲಿಗಳು. ಆದ್ದರಿಂದಲೇ ಇವರಿಗೆ ಸೇನೆಯಲ್ಲಿ ಸ್ಥಾನ. ಅದು ಜವಾನರ ಸ್ಥಾನ ಮಾತ್ರ. ಭಾರತೀಯ ಸೈನ್ಯದಲ್ಲಿ ಗೂರ್ಖಾರೆಜಿಮೆಂಟ್ ಹೋರಾಟಕ್ಕೆ ಹೆಸರಾದದ್ದು. ಯಾವ ಕಾಳ್ಗಳದ ಸಮರದಲ್ಲಿಯೂ ಮುಂಚೂಣಿಯಲ್ಲಿರುವುದು ಗೂರ್ಖಾಪಡೆ. ಬ್ರಿಟಿಷ್ ಪಡೆಯಲ್ಲಿಯೂ ಗೂರ್ಖಾಪಡೆ ಉಂಟು. ಫಾಕ್ಲೆಂಡ್

[illegible]
ಪರಿಹಾರ ಕಂಡುಕೊಳ್ಳಬೇಕು. ಜನರು ಸುಮ್ಮನೆ ಹೋರಾಟಕ್ಕಿಳಿಯುವುದಿಲ್ಲ. ಅನಿವಾರ್ಯವಾದಾಗ ಆ ದಾರಿ. ಅವರಿಗೆ ಅಶೋತ್ತರ ಇರುತ್ತದೆ. ಬದಲಾವಣೆಗೆ ಹೆದರುವವರು ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಬಯಸುವವರು ಇಂತಹದಕ್ಕೆ ಭಯೋತ್ಪಾದಕತೆ, ಪ್ರತ್ಯೇಕತಾವಾದ ನಕ್ಸಲ್‌ವಾದ ಮುಂತಾದ ಹೆಸರು ಕೊಟ್ಟು ದಮನಿಸಲು ನೆಪ ಕಂಡುಕೊಳ್ಳುತ್ತಾರೆ. ಆದರೆ ಸೇನಾಬಲದಿಂದ ಜನ ಬಲವನ್ನು ನಿಗ್ರಹಿಸಲು ಆಗುವುದಿಲ್ಲ. ಅಧಿಕಾರಸ್ಥರು ಚರಿತ್ರೆಯಿಂದ ಪಾಠ ಕಲಿಯಬೇಕು. ಮಿಜೋ, ನಾಗಾ, ಕಾಶ್ಮೀರ, ಅಸ್ಸಾಂ ಪಂಜಾಬು ಎಲ್ಲದಕ್ಕೂ ಜನತೆಯ ಆಶೋತ್ತರಗಳೆಂಬ ಮೂಲ ಕಾರಣವುಂಟು. ಈ ಸಮಸ್ಯೆಗಳೆಲ್ಲ ಹುಟ್ಟಿಕೊಂಡದ್ದಕ್ಕೆ ದೆಹಲಿಯ ನಿರ್ಲಕ್ಷ್ಯವೇ ಕಾರಣ.

ಗೂರ್ಖಾಲ್ಯಾಂಡ್ ವಿಚಾರದಲ್ಲೂ ಹಾಗಾಗದಿರಲಿ. ಈ ಸಮಸ್ಯೆಯ ಮೂಲವನ್ನು ಅಧಿಕಾರಸ್ಥರು ಹುಡುಕಲಿ. ಅದಕ್ಕೆ ಪರಿಹಾರ ನೀಡಲಿ.

ಮುಂಗಾರು

ಶನಿವಾರ, ಅಕ್ಟೋಬರ್ 4, 1986

ಹೊಣೆಗೇಡಿ ಅಧಿಕಾರಿಗಳು

ದೆಹಲಿ ಪೊಲೀಸರ ಹಾಗೂ ಪ್ರಧಾನ ಮಂತ್ರಿಯವರ ರಕ್ಷಣೆಯ ಭಾರ ಹೊತ್ತ ಕಮಾಂಡೋ ದಳದವರ ಮೂಗಿನ ಕೆಳಗೇ ಪ್ರಧಾನಮಂತ್ರಿ ರಾಜೀವ ಗಾಂಧಿಯವರ ಪ್ರಾಣ ಹರಣ ಮಾಡುವ ಪ್ರಯತ್ನವೊಂದು ನಡೆದಿದೆ. ರಾಜಘಾಟಿನಲ್ಲಿ ಅಹಿಂಸೆಯ ಪ್ರವಾದಿ ಮಹಾತ್ಮಾ ಗಾಂಧಿಯವರ ಸಮಾಧಿಗೆ ಗೌರವ ಸಲ್ಲಿಸಿ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ ಮರಳಿ ಹೋಗುತ್ತಿರುವ ವೇಳೆ ಸಮೀಪವೇ ಇದ್ದ ಹೂಬಳ್ಳಿಯ ಪೊದೆಯ ಮರೆಯಿಂದ ಗುಂಡು ಹಾರಿಸಲಾಯಿತು.

ಹೀಗೆ ಗುಂಡು ಹಾರಿಸಿದವನು ಗುರಿ ಇಡುವುದರಲ್ಲಿ ನಿಸ್ಸೀಮನಾಗಿರಲಿಲ್ಲ ಎಂಬುದು ಸ್ಪಷ್ಟವೆ. ಆತನ ಕೈಯಲ್ಲಿದ್ದ ಪಿಸ್ತೂಲು ಕೂಡ ಆಧುನಿಕವಲ್ಲ. ಅದೊಂದು ನಾಡ ಪಿಸ್ತೂಲು, ಹಳೆಯ ನಮೂನೆಯದ್ದು. ಪಂಜಾಬಿನ ಸಿಕ್ಖ ಉಗ್ರಗಾಮಿಗಳು ಹಲವಾರು ಭಯೋತ್ಪಾದಕ ಕೃತ್ಯಗಳಲ್ಲಿ ಬಳಸಿರುವಂತಹ ಸಬ್ ಮೆಷಿನ್ ಗನ್ ಈ ಹಂತಕನ ಕೈಯಲ್ಲಿರುತ್ತಿದ್ದರೆ, ಜತೆಗೆ ಆತ ಗುರಿ ಹಿಡಿಯುವುದರಲ್ಲಿ ಪರಿಣತನೂ ಆಗಿರುತ್ತಿದ್ದರೆ ಇಂದು ಈ ದೇಶ ತನ್ನ ನಾಯಕನನ್ನು ಕಳೆದುಕೊಂಡಂತಹ ದೊಡ್ಡ ಆಘಾತದ, ದುಃಖದ ಕಡಲಲ್ಲಿ ಮುಳುಗಿರಬೇಕಾಗುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ.

ಪ್ರಧಾನಮಂತ್ರಿಯ, ರಾಷ್ಟ್ರಪತಿಯ ಹಾಗೂ ಇನ್ನಿತರ ಸರಕಾರಿ ನಾಯಕರ ರಕ್ಷಣೆಯ ಭಾರ ಹೊತ್ತವರು ಜವಾಬ್ದಾರಿಯರಿತು ಕೆಲಸ ಮಾಡುತ್ತಿಲ್ಲವೆಂಬುದಕ್ಕೆ ರಾಜಘಾಟಿನ ಪ್ರಕರಣ ಒಂದು ಜ್ವಲಂತ ನಿದರ್ಶನ. ದೆಹಲಿಯಲ್ಲಿಯೇ ಹೀಗಾದರೆ ಪ್ರಧಾನಮಂತ್ರಿ ರಾಜಧಾನಿಯಿಂದ ಹೊರಗಿದ್ದಾಗ ಅವರ ರಕ್ಷಣೆಯನ್ನು ಯಾರು–ಹೇಗೆ ನೋಡಿಕೊಂಡಾರು?

ಪ್ರಧಾನಮಂತ್ರಿ ರಸ್ತೆಯೊಂದರಲ್ಲಿ ಅಕ್ಕಪಕ್ಕದಲ್ಲಿ ಎತ್ತರದ ಕಟ್ಟಡಗಳಿರುವಲ್ಲಿ ಸಂಚರಿಸುವುದಿದ್ದರೆ ಅವರ ರಕ್ಷಣೆ ನೋಡಿಕೊಳ್ಳುವುದು ಕಷ್ಟ. ಅಂಥ ಸಂದರ್ಭದಲ್ಲಿ ಕೂಡ ಭದ್ರತಾ ಪಡೆಯವರು ಎಲ್ಲ ಕಟ್ಟಡವನ್ನೂ ಹೊಕ್ಕು ಪರಿಶೀಲಿಸಿ ಆಕ್ರಮಿಗಳಿಗೆ ತಾಣವಿಲ್ಲದಂತೆ ನೋಡಿಕೊಳ್ಳಬೇಕಾದ ಕರ್ತವ್ಯವುಂಟು. ಇಂಥ ಕರ್ತವ್ಯ ರಾಜಘಾಟಿನಲ್ಲಿಯೂ ಅವರಿಗುಂಟು. ರಾಜಘಾಟ್ ಉಳ್ಳಂತಹ ಇಡಿಯ ನಿವೇಶನ ಸರಕಾರಿ ಸ್ವಾಮ್ಯದ್ದು. ಪ್ರಧಾನಮಂತ್ರಿ ಹಾಗೂ ರಾಷ್ಟ್ರಪತಿ ಅಲ್ಲಿಗೆ ಭೇಟಿ ನೀಡುವ ಮೊದಲು ಇಡಿಯ ಉದ್ಯಾನವನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕು. ರಾಷ್ಟ್ರನಾಯಕರು ಮಹಾತ್ಮನ ಸಮಾಧಿಗೆ ಭೇಟಿ ಕೊಡುವ ಸಂದರ್ಭದಲ್ಲಿ ಅನಧಿಕೃತರೂ ಅನಪೇಕ್ಷಿತರೂ ಆದವರು, ಶಸ್ತ್ರವನ್ನು ಧರಿಸಿದವರು ಯಾರೂ ರಾಜಘಾಟಿನ ಯಾವ ಮರದಲ್ಲಿಯೂ, ಯಾವ ಪೊದೆಯಲ್ಲಿಯೂ, ಯಾವ ಗೋಡೆಯ ಬದಿಯಲ್ಲಿಯೂ ಆಶ್ರಯ ಪಡೆಯದಂತೆ ನೋಡಿಕೊಳ್ಳಬೇಕಾದ್ದು ಭದ್ರತಾ ಪಡೆಯವರ ಕರ್ತವ್ಯವಾಗಿತ್ತು. ಇಂಥಲ್ಲಿ ಸಮಾಧಿಯ ಪ್ರವೇಶ ದ್ವಾರದಲ್ಲಿ ರಾಜೀವ ಗಾಂಧಿಯವರು ಪತ್ನಿ ಸೋನಿಯಾ ಗಾಂಧಿ ಜತೆ ನಿಂತಿದ್ದ ವೇಳೆ ಸುಮಾರು ಒಂದು ನೂರು ಮೀಟರು ದೂರದ ಪೊದೆಯಿಂದ ದುಷ್ಕರ್ಮಿಯೊಬ್ಬನು ಗುಂಡು ಹಾರಿಸುವುದಕ್ಕೆ ಸಾಧ್ಯವಾದದ್ದು ಭದ್ರತಾ ದಳದವರ ಅಕ್ಷಮ್ಯ ಪ್ರಮಾದವನ್ನು ಸಾಬೀತುಪಡಿಸುತ್ತದೆ. ಮುಂಚಿನ ದಿನ ರಾತ್ರಿಯಿಂದಲೇ ಸಶಸ್ತ್ರ ಪೊಲೀಸರು ರಾಜಘಾಟಿನಲ್ಲಿ ಕಾವಲು ನಡೆಸಿದ್ದರು. ಅಕ್ಟೋಬರ ಎರಡರಂದು ಮುಂಜಾನೆ ಐದು ಗಂಟೆಗೆ 250 ಪೊಲೀಸರು ಶಸ್ತ್ರಧಾರಿಗಳಾಗಿ ರಾಜಘಾಟಿನ ಆಯಕಟ್ಟಿನ ತಾಣಗಳಲ್ಲಿ ಕಾವಲು ವಹಿಸಿಕೊಂಡಿದ್ದರು. ಏನೇ ಇದ್ದರೂ ಅನಧಿಕೃತರ ಅಸ್ತಿತ್ವವನ್ನು ದೂರ ಇರಿಸಬೇಕಾಗಿದ್ದ, ಅಂದರೆ ನಿವೇಶನದ ಶೋಧನೆಯ ಹೊಣೆ ಹೊತ್ತಿದ್ದ ಅಧಿಕಾರಿಗಳು ಹೊಣೆಗೇಡಿಗಳಾಗಿ ವರ್ತಿಸಿದ್ದಾರೆ ಎಂದೇ ಹೇಳಬೇಕಾಗಿದೆ.

ಭದ್ರತೆಯಲ್ಲಿನ ಲೋಪದೋಷಗಳನ್ನು ಅಧ್ಯಯನ ಮಾಡಿ ಸುಧಾರಣೆಗಳನ್ನು ಮಾಡಬೇಕಾದ ಅಗತ್ಯವುಂಟು.

ಅದೇನೇ ಇದ್ದರೂ ರಾಜಕೀಯ ನಾಯಕರು ಈ ಘಟನೆಯ ಹಿನ್ನೆಲೆಯಲ್ಲಿ ಭಯೋತ್ಪಾದಕತೆಯನ್ನು ಎದುರಿಸುವುದಕ್ಕೆ ತಕ್ಕುದಾದ ಶಸ್ತ್ರ ಯಾವುದು ಎಂಬುದರ ಬಗ್ಗೆ ಮತ್ತೆ ಚಿಂತಿಸಬೇಕಾದ ಅಗತ್ಯವುಂಟು. ಭದ್ರತಾ ವ್ಯವಸ್ಥೆಯಲ್ಲಿ ಲವಲೇಶದಷ್ಟು ಲೋಪ ಉಂಟಾದರೂ ಸಾಕು – ಸಂಬಂಧಪಟ್ಟ ನಾಯಕನ ಜೀವಕ್ಕೆ ಅಪಾಯ ಇದ್ದೇ ಇದೆ. ಆದ್ದರಿಂದ ಸಮಸ್ಯೆಗೆ ಪರಿಹಾರ ಪೊಲೀಸ್ ಬಲ ಸಂವರ್ಧನೆಯಲ್ಲಿಲ್ಲ. ಜನ ಕೋಪಗೊಂಡರೆ ಸೇನಾ ಬಲದಿಂದ ನಿಗ್ರಹಿಸುವುದು ಅಸಾಧ್ಯ. ಸಮಸ್ಯೆಯ ಮೂಲ ಹುಡುಕಬೇಕು. ಅದಕ್ಕೆ ಪರಿಹಾರ ಬೇಕು. ಈ ಹಿನ್ನೆಲೆಯಲ್ಲಿ ಪಂಜಾಬಿನ ವಿದ್ಯಮಾನಗಳನ್ನು ದೇಶದ ಮುಖಂಡರು ಮತ್ತೆ ಪರಿಶೀಲಿಸಬೇಕು. ಪಂಜಾಬು ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಕೊಂಡಿದ್ದೇವೆಯೇ ಎಂದು ಆತ್ಮಶೋಧನೆ ಮಾಡಿಕೊಳ್ಳಬೇಕು.

ಮುಂಗಾರು
ಭಾನುವಾರ, ಅಕ್ಟೋಬರ್ 5, 1986

ಪರಮ ಕರ್ತವ್ಯ

ಕೊಡಗು ಜಿಲ್ಲೆಯ ಭಾಗಮಂಡಲದ 10 ಹಾಸಿಗೆಗಳ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 1982ರ ಅಕ್ಟೋಬರದಿಂದೀಚೆಗೆ ವೈದ್ಯರಿಲ್ಲವೆಂದು ವರದಿಯೊಂದು ತಿಳಿಸುತ್ತದೆ. ಅಂದು ಅಲ್ಲಿನ ವೈದ್ಯರು ರಜೆ ಹಾಕಿ ಹೋದವರು ಮರಳಿ ಬಂದದ್ದಿಲ್ಲ. ಯಾವುದೋ ಕಾರಣಕ್ಕೆ ಅವರು ಮಡಿಕೇರಿಗೋ ಬೆಂಗಳೂರಿಗೋ ವರ್ಗಾವಣೆ ತೆಗೆದುಕೊಂಡಿರಬಹುದು. ಭಾಗಮಂಡಲಕ್ಕೆ ಬೇರೆ ವೈದ್ಯರ ನೇಮಕ ಆಗಲಿಲ್ಲ.

ಕರಿಕೆ, ಭಾಗಮಂಡಲ ಹಾಗೂ ಮುಂಡ್ರೋಟು ಅಕ್ಕಪಕ್ಕದ ಪ್ರದೇಶಗಳು. ಇವುಗಳಲ್ಲಿ ಅಂದಾಜು ತಲಾ ಎರಡು ಸಾವಿರದಷ್ಟು ಜನಸಂಖ್ಯೆಯುಂಟು. ಇವೆಲ್ಲಕ್ಕೂ ವೈದ್ಯಕೀಯ ಸವಲತ್ತು ಒದಗಿಸುವ ಹೊಣೆ ಇರುವಂತಹದ್ದು ಭಾಗಮಂಡಲದ ಪ್ರಾಥಮಿಕ ಆರೋಗ್ಯ ಕೇಂದ್ರ. ಇಲ್ಲಿ ವೈದ್ಯರಿಲ್ಲದೆ ರೋಗಿಗಳು ಅಸಹಾಯಕರಾಗಿದ್ದಾರೆ. ತುರ್ತಿನ ಪ್ರಸಂಗಗಳಲ್ಲಿ 40 ಮೈಲು ದೂರದ ಜಿಲ್ಲಾ ಕೇಂದ್ರವಾದ ಮಡಿಕೇರಿಗೆ ರೋಗಿಗಳನ್ನು ಸಾಗಿಸಬೇಕಾಗಿದೆ. ಭಾಗಮಂಡಲ ಕೇಂದ್ರದಲ್ಲಿ ಮೂವರು ಸಿಬ್ಬಂದಿಗಳು ನೊಣ ಹೊಡೆಯುತ್ತಿದ್ದಾರೆ. ವೈದ್ಯರಿಲ್ಲದಿದ್ದರೂ ಜೀಪೊಂದು ಓಡುತ್ತಿದೆಯಂತೆ. ಈ ಕೇಂದ್ರಕ್ಕೆ ಪ್ರತಿ ತಿಂಗಳೂ ಏಳು ಸಾವಿರ ರೂಪಾಯಿ ಬೆಲೆಯ ಔಷಧಿ ಸರಬರಾಜು ಆಗುತ್ತಿದೆಯಂತೆ. ಈ ಔಷಧಿ ಎಲ್ಲಿ ಹೋಗುತ್ತದೆ? ವೈದ್ಯರಿಲ್ಲವೆಂದ ಮೇಲೆ ಔಷಧಿಯಾದರೂ ಯಾಕೆ ಪೂರೈಕೆಯಾಗುತ್ತಿದೆ?

ಭಾಗಮಂಡಲದಲ್ಲಿರುವಂತಹ ವೈದ್ಯಕೀಯ ಕೇಂದ್ರಗಳು ನಮ್ಮ ಈ ನಾಡಿನಲ್ಲಿ ಲಕ್ಷಾಂತರ ಇವೆ. ಅಮಾಯಕರೂ ಅಸಹಾಯಕರೂ ಅಜ್ಞಾನಿಗಳೂ ಆಗಿರುವ ಹಳ್ಳಿಗರ ಬಗೆಗೆ ಆಳುವವರಿಗಿರುವ ಗೌರವ ಎಷ್ಟರದು ಎಂಬುದಕ್ಕೆ ಭಾಗಮಂಡಲ ಒಂದು ಉಜ್ವಲ ಉದಾಹರಣೆ. ನಮ್ಮ ಹಳ್ಳಿಗಳ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರಿರುವುದಿಲ್ಲ. ವೈದ್ಯರಿದ್ದ ಕಡೆ ಔಷಧಿ ಬರುವುದಿಲ್ಲ. ಬಂದರೂ ಅದೆಲ್ಲ ಬೇರೆಲ್ಲೋ ಸೋರಿ ಹೋಗುವುದೇ ಹೆಚ್ಚು. ಅನೇಕ ಕಡೆ ಇತರ ಸಿಬ್ಬಂದಿಗಳಿರುವುದಿಲ್ಲ. ಕೆಲವೆಡೆ ವಾಹನ ಇದ್ದರೂ ಚಾಲಕ ಇರುವುದಿಲ್ಲ. ಕುಂದಾಪುರದಂತಹ ದೊಡ್ಡ ಕೇಂದ್ರಗಳಾದರೆ ಅಲ್ಲಿಗೆ ಕ್ಷಕಿರಣ ಯಂತ್ರಗಳನ್ನು ಯಾರೋ ದಾನ ಕೊಟ್ಟಿರುತ್ತಾರೆ. ಆದರೂ ಅವುಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಜನರಿಗೆ ಒಳ್ಳೆಯದು ಮಾಡಬೇಕೆಂಬ ಉಪಕಾರ ಬುದ್ಧಿ ಅಲ್ಲಿನ ಆಡಳಿತ ನೋಡಿಕೊಳ್ಳುವ ವೈದ್ಯರಿಗೆ ಬರುವುದಿಲ್ಲ. ಯಾರೋ ಪುಣ್ಯಾತ್ಮರು ನಿವೇಶನಕ್ಕೆ ಹೊಸಗೇಟು ಮಾಡಿಸಿಕೊಟ್ಟರೆ ಅದನ್ನು ಸಾರ್ವಜನಿಕರಿಗೆ ತೆರೆದಿಡುವ ಬದಲು ಮುಚ್ಚಿ ಬೀಗ ಜಡಿಯುವಂತಹ ಉದ್ಧಟತನವನ್ನೂ ತೋರುವವರಿದ್ದಾರೆಂದರೆ ಜನರ ಆಗತ್ಯಗಳ ಬಗ್ಗೆ ನಮ್ಮ ಅಧಿಕಾರಿಗಳಿಗಿರುವ ಕಾಳಜಿ ಸ್ಪಷ್ಟವಾಗುತ್ತದೆ. ಈ ಅವ್ಯವಸ್ಥೆಯ ಕಥೆ ಇಲ್ಲಿಗೇ ಮುಗಿದಿಲ್ಲ. ಉಡುಪಿಯಂಥ ಕಡೆ ಡೆಂಟಲ್ ಉಪಕರಣಗಳು ಉಪಯೋಗಿಸದೆ ತುಕ್ಕು ಹಿಡಿಯುತ್ತವೆ. ಸಾಗರದ ಸರಕಾರಿ ಆಸ್ಪತ್ರೆಯಲ್ಲಿ ವೈದ್ಯರಿಂದ ನಿರ್ಲಕ್ಷ್ಯವಾದ ಸುದ್ದಿ ಜನಜನಿತವೇ ಆಗಿತ್ತು.

ಹೊಣೆಗಾರಿಕೆಯನ್ನು ಹೊರಿಸುವವರು ಇಲ್ಲದೇ ಇರುವುದರಿಂದ ಹೀಗಾಗಿದೆ. ಬುಡದಿಂದ ಕೊನೆಯ ತನಕ ಭ್ರಷ್ಟಾಚಾರ ಬೇರು ಬಿಟ್ಟಿರುವುದು ಪ್ರತಿಯೊಬ್ಬರೂ ಉಡಾಫೆಯಿಂದ ಬೇಜವಾಬ್ದಾರಿಯಿಂದ ವ್ಯವಹರಿಸಲು ಕಾರಣವಾಗಿದೆ. ಈ ವಿಷ ಜಾಲದಲ್ಲಿ ಸಂಕಟಪಡುವವರು ನಿರಪರಾಧಿಗಳೂ ನಿರುಪಾಯರೂ ಆಗಿರುವ ಹಳ್ಳಿಗಾಡಿನ ಜನ. ಹಳ್ಳಿಯೆಂದರೆ ತಾತ್ಸಾರ ಆರೋಗ್ಯ ಇಲಾಖೆಯವರಿಗೆ ಮಾತ್ರ ಸಲ್ಲುವ ವಿಶೇಷ ಗುಣವೇನೂ ಅಲ್ಲ. ಕಂದಾಯ ಇಲಾಖೆಯವರಿರಲಿ, ವಿದ್ಯಾ ಇಲಾಖೆಯಿರಲಿ, ಲೋಕೋಪಯೋಗಿಯವರಿರಲಿ ಎಲ್ಲರಿಗೂ ಹಳ್ಳಿಯೆಂದರೆ ಕಾಲ ಕಸಕ್ಕಿಂತ ಕಡೆ. ಹಳ್ಳಿಗಳಲ್ಲಿ ಯಾವುದೂ ಯಾವಾಗಲೂ ಚಲಿಸುವುದಿಲ್ಲ. ನಗರಗಳಲ್ಲಿ ಕೇಳುವವರಿರುತ್ತಾರೆ. ಗಣ್ಯರ, ರಾಜಕಾರಣಿಗಳ, ಸಾಮಾಜಿಕವಾಗಿ ಪ್ರತಿಷ್ಠಿತರಾದವರ ಆವಾಸ ಸ್ಥಾನ ಅದು. ಅಲ್ಲಿಗೆ ಬೇಗನೆ ನೀರು ಬರುತ್ತದೆ. ವಿದ್ಯುತ್ ಸರಬರಾಜು ನಿಲ್ಲುವುದಿಲ್ಲ. ಅಲ್ಲಿನ ರಸ್ತೆಗಳು ಚೆನ್ನಾಗಿರುತ್ತವೆ. ಅಲ್ಲಿ ಪಡಿತರ ಅಂಗಡಿಗಳಲ್ಲಿ ಸಾಮಗ್ರಿ ಮುಗಿಯುವುದಿಲ್ಲ, ಹಳ್ಳಿಗಳಲ್ಲಿ ಇದು ದೊರೆಯುವುದಿಲ್ಲ.

ನಮ್ಮ ಸರಕಾರಗಳು, ನಮ್ಮ ಆಡಳಿತ, ನಮ್ಮ ಅಧಿಕಾರಿಗಳು ಮನನ ಮಾಡಬೇಕಾದ ವಿಚಾರ ಒಂದಿದೆ-ನಾವೆಲ್ಲ ಸೇರಿ ನಮ್ಮ ಹಳ್ಳಿಗಳನ್ನು ಸಾಯಿಸುತ್ತಿದ್ದೇವೆ. ಈ ಹಳ್ಳಿಗಳು ಒಮ್ಮೆ ಸತ್ತರೆ ಮತ್ತೆ ಗ್ರಾಮೀಣ ಸಮಾಜಕ್ಕೆ ಜೀವ ದ್ರವ್ಯವನ್ನು ಕೊಡುವುದು ಸುಲಭದ ಕಾರ್ಯವಾಗದು.

ಭಾಗಮಂಡಲದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಾಗೂ ಅದರಂಥ ಇತರ ಸವಲತ್ತುಗಳಿಗೆ ಈ ಗತಿಯಾಕೆ ಉಂಟಾಯಿತು ಎಂದು ಸಂಬಂಧಪಟ್ಟವರೆಲ್ಲ ಆತ್ಮಶೋಧನೆ ಮಾಡಿಕೊಳ್ಳಬೇಕಾಗಿದೆ. 1982ರಲ್ಲಿ ತೆರವಾದ ವೈದ್ಯರ ಸ್ಥಾನವನ್ನೂ ಯಾಕೆ ತುಂಬಿಸಲಿಲ್ಲ ಎಂಬುದಕ್ಕೆ ಕೊಡಗು ಜಿಲ್ಲೆಯ ವೈದ್ಯಾಧಿಕಾರಿಗಳು ಉತ್ತರ ಹೇಳಬೇಕಾಗುತ್ತದೆ. ಅವರಿಗೆ ಈ ವಿಚಾರ ತಿಳಿದಿರಲಿಲ್ಲವೇ; ತಿಳಿದರೂ ಅವರು ಮೇಲಧಿಕಾರಿಗಳಿಗೆ ಅರಿಕೆ ಮಾಡಿಕೊಳ್ಳಲಿಲ್ಲವೇ, ಅವರು ತಿಳಿಸಿಯೂ ನೇಮಕ ಆಗಲಿಲ್ಲವೇ, ಒಂದು ವೇಳೆ ವಿಧಾನ ಸೌಧವು ನಿಧಾನ ಸೌಧವಾಗಿ ವರ್ತಿಸಿದ್ದರೆ ಇವರೇಕೆ ಪಟ್ಟುಹಿಡಿದು ಕೆಲಸ ಮಾಡಿಸಿಕೊಳ್ಳಲಿಲ್ಲ? ಇದು ಯಾವುದೋ ಕುಗ್ರಾಮದ ಕೆಲಸ, ಹೋದರೆಷ್ಟು ಬಂದರೆಷ್ಟು, ಯಾರಿಗೇನು ನಷ್ಟ-ಎಂದು ಕೂತುಕೊಂಡರೇ? ಇದಕ್ಕೆಲ್ಲ ಅವರು ಉತ್ತರ ಹೇಳಬೇಕಾಗುತ್ತದೆ.

ಆ ಕ್ಷೇತ್ರದ ಶಾಸಕರಿಗೂ ಈ ವಿಚಾರದಲ್ಲಿ ಹೊಣೆಗಾರಿಕೆಯುಂಟು. ಅವರೇನು ಇಷ್ಟು ವರ್ಷವೂ ನಿದ್ದೆ ಹೊಡೆದರೇ? ತಮ್ಮ ಕ್ಷೇತ್ರದ ಹಳ್ಳಿಯೊಂದರ ಕೆಲಸ ಮಾಡಿಸಿಕೊಳ್ಳುವುದು ಅವರ ಕರ್ತವ್ಯದಲ್ಲಿ ಸೇರಿಲ್ಲವೇ? ಭಾಗಮಂಡಲ ಹಾಗೂ ಆಸುಪಾಸಿನ ಜನ ಕಳೆದ ನಾಲ್ಕು ವರ್ಷಗಳಿಂದ ಅನುಭವಿಸಿದ ಸಂಕಟಕ್ಕೆ ಸಮಾಧಾನ ಹೇಳಿ ತಕ್ಷಣ ಅಲ್ಲಿಗೆ ಅಗತ್ಯವಿರುವ ವೈದ್ಯಕೀಯ ಸಿಬ್ಬಂದಿಗಳನ್ನು ನೇಮಿಸುವ ಪರಮ ಕರ್ತವ್ಯ ಕೊಡಗು ಜಿಲ್ಲೆಯ ವೈದ್ಯಾಧಿಕಾರಿಗಳಿಗೂ ಆ ಕ್ಷೇತ್ರದ ವಿಧಾನ ಸಭಾ ಸದಸ್ಯರಿಗೂ ಉಂಟು.

ಮುಂಗಾರು
ಮಂಗಳವಾರ, ಅಕ್ಟೋಬರ್ 7 1986

ಜಿಲ್ಲೆಗೊಂದು ಕ್ರೀಡಾಶಾಲೆ

ಹದಿನಾರು ದಿನಗಳ ಕಾಲ ದಕ್ಷಿಣ ಕೊರಿಯದ ಸಿಯೋಲ್‌ನಲ್ಲಿ 10ನೇ ಏಷ್ಯಾ ಕ್ರೀಡಾಕೂಟ ಭರ್ಜರಿಯಾಗಿ ನಡೆಯಿತು. ಅಗಾಧ ಹಣ ಖರ್ಚುಮಾಡಿ ದಕ್ಷಿಣ ಕೊರಿಯ ಇದನ್ನು ನಡೆಸಿದೆ. ಅಪ್ರಿಯ ಘಟನೆಗಳೇನೂ ಇಲ್ಲದೆ ಈ ಕೂಟ ನಡೆದಿದೆ. ಈ ನಿಟ್ಟಿನಲ್ಲಿ ಆತಿಥೇಯ ರಾಷ್ಟ್ರವಾದ ಕೊರಿಯಕ್ಕೆ ಅಭಿನಂದನೆ ಸಲ್ಲಬೇಕು.

ಚೀನ, ಕೊರಿಯ ಹಾಗೂ ಜಪಾನ್‌ಗಳು ಒಟ್ಟು 657 ಪದಕಗಳನ್ನು ತಮ್ಮೊಳಗೆ ಹಂಚಿಕೊಂಡಿವೆ. ಚೀನ ದೆಹಲಿ ಏಷ್ಯಾಡ್‌ನಲ್ಲಿ ಜಪಾನನ್ನು ಹಿಂದಿಕ್ಕಿ ಪಡೆದಿದ್ದ ಮೊದಲ ಸ್ಥಾನವನ್ನು ಈ ಬಾರಿಯೂ ಉಳಿಸಿಕೊಂಡಿದೆ. ಆದರೆ 94 ಬಂಗಾರದ ಪದಕ ಪಡೆದ ಚೀನಕ್ಕಿಂತ ಒಂದೇ ಒಂದು ಪದಕ ಕಡಿಮೆ ಬಿದ್ದ ದಕ್ಷಿಣ ಕೊರಿಯ ಚೀನದ ಆಧಿಪತ್ಯಕ್ಕೆ ಬಲವಾದ ಪಂಥಾಹ್ವಾನ ನೀಡಿದೆಯೆಂಬುದಕ್ಕಡ್ಡಿಯಿಲ್ಲ. ಬಹುಕಾಲದಿಂದ ಏಷ್ಯದ ಕ್ರೀಡಾರಂಗದಲ್ಲಿ ಮೆರೆಯುತ್ತಿದ್ದ ಜಪಾನು ಈಗ ಹೊಸ ಶಕ್ತಿಗಳಿಗೆ ದಾರಿ ಬಿಟ್ಟುಕೊಡಬೇಕಾಗಿ ಬಂದದ್ದೂ ಅಚ್ಚರಿಯ ವಿಚಾರ.

ಭಾರತ ಈ ವಿದ್ಯಮಾನದಿಂದ ಬಹಳಷ್ಟನ್ನು ಕಲಿಯಬೇಕಾಗಿದೆ. ದೆಹಲಿ ಏಷ್ಯಾಡ್‌ನಲ್ಲಿ ಭಾರತಕ್ಕೆ 57 ಪದಕಗಳು ದೊರೆತಿದ್ದವು. ಅದರಲ್ಲಿ ಬಂಗಾರದ ಪದಕಗಳು 13. ಈ ಬಾರಿ ಸಿಕ್ಕಿದ್ದು ಐದು ಬಂಗಾರದ ಸಹಿತ 37 ಪದಕಗಳು ಮಾತ್ರ. ಈ ಬಾರಿ 400 ಜನರ ದೊಡ್ಡ ಪಟಾಲಮೇ ಸಿಯೋಲಿಗೆ ಹೋಗಿತ್ತು. ಐದು ಬಂಗಾರದಲ್ಲಿ ನಾಲ್ಕು ಬಂದದ್ದು ಪಿ. ಟಿ. ಉಷಾರಿಂದಾಗಿ. ಉಳಿದ ನೂರಾರು ಮಂದಿ ಸಾಧಿಸಿದ್ದು ಒಂದು ಬಂಗಾರದ ಪದಕವನ್ನು. ಹಣವನ್ನು ಅಗತ್ಯವುಳ್ಳದ್ದಕ್ಕೆ ಖರ್ಚುಮಾಡದೆ ಬೇಡದ್ದಕ್ಕೆಲ್ಲ ಚೆಲ್ಲುವ ಪ್ರವೃತ್ತಿಯಿಂದ ಆಗುವುದು ಇಂತಹದ್ದೇ. ಸ್ಪರ್ಧೆಗೆ ತಯಾರಿ ಮಾಡುವುದಕ್ಕೆ ಸಾಕಷ್ಟು ಹಣ ಕೊಡದೆ ಮೇಳವನ್ನು ನೋಡಿ ಆನಂದಿಸುವುದಕ್ಕೆ ಶಾಸಕರನ್ನು ಸರಕಾರದ ಖರ್ಚಿನಲ್ಲಿ ಕಳಿಸುವ ಆಡಳಿತ ವ್ಯವಸ್ಥೆಯಲ್ಲಿ ಈ ಫಲಿತಾಂಶವಲ್ಲದೆ ಬೇರೇನೂ ಆಗುವುದಿಲ್ಲ.

ಚೀನವು ಕ್ರೀಡಾಕೂಟದ ಸಾಧನೆಯಲ್ಲಿ ಜಪಾನನ್ನು ಹಿಂದಿಕ್ಕಿ ಮುನ್ನಡೆಯಿತು. ದಕ್ಷಿಣ ಕೊರಿಯವು ಹಿಂದಿನ ಸಾಲಿನಿಂದ ನೆಗೆದು ಎರಡನೆ ಸ್ಥಾನಕ್ಕೆ ಬಂದುದಲ್ಲದೆ ಚೀನದ ಸ್ಥಾನಕ್ಕೂ ಬೆದರಿಕೆಯೊಡ್ಡಲು ಸಾಧ್ಯವಾದ [illegible]ನ್ನು, ಈಯೆರಡು ದೇಶಗಳ ಸಾಧನೆಯ ಹಿನ್ನೆಲೆಯನ್ನು ಅಧ್ಯಯನ ಮಾಡುವುದರಿಂದ

ವರ್ಷಗಳ ಹಿಂದೆ ಚೀನ ಕ್ರೀಡೆಗಳಲ್ಲಿ ತನ್ನ ಯುವ ಜನಾಂಗವನ್ನು ತೊಡಗಿಸುವ ಕಾರ್ಯಕ್ರಮ ರೂಪಿಸಿತು. ಜಿಲ್ಲೆ–ಜಿಲ್ಲೆಗಳಲ್ಲಿ ಕ್ರೀಡಾ ವಸತಿ ಶಾಲೆಗಳನ್ನು ತೆರೆಯಿತು. ಕ್ರೀಡೆಯಲ್ಲಿ ಅರಳುತ್ತಿರುವ ಪ್ರತಿಭೆಯುಳ್ಳ ಎಳೆಯರನ್ನೆಲ್ಲ ಹುಡುಕಿ ತಂದು ಈ ಶಾಲೆಗಳಲ್ಲಿ ನೆಲೆಗೊಳಿಸಿ ಒಳ್ಳೆಯ ಅನ್ನಾಹಾರ ಕೊಟ್ಟು, ಸಾಕಿ ವಿವಿಧ ಕ್ರೀಡೆಗಳಲ್ಲಿ ತರಬೇತಿ ಕೊಟ್ಟಿತು. ರಾಷ್ಟ್ರಮಟ್ಟದಲ್ಲಿ ಆಯ್ಕೆ ನಡೆಸಿ ಅಂತರರಾಷ್ಟ್ರೀಯ ಸ್ಪರ್ಧೆಗಳಿಗೆ ಕ್ರೀಡಾಳುಗಳನ್ನು ಆಯ್ಕೆ ಮಾಡಿತು. ಈ ಮಾದರಿಯನ್ನು ದಕ್ಷಿಣ ಕೊರಿಯವೂ ಅನುಸರಿಸಿತು. 10ನೇ ಸಿಯೋಲ್ ಏಷ್ಯಾಡ್‌ಗಾಗಿ ಕಳೆದ ನಾಲ್ಕು ವರ್ಷಗಳಿಂದ ದಕ್ಷಿಣ ಕೊರಿಯದ ಶಾಲೆಗಳಲ್ಲಿ ಎಳೆಯರು ತಾಲೀಮು ನಡೆಸುತ್ತಿದ್ದರೆಂದರೆ ಅಚ್ಚರಿ ಎನಿಸಬಹುದು.

ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಇಂಥ ಸಾಧನೆ ಮಾಡಬೇಕೆಂದರೆ ಭಾರತವೂ ಇಂಥ ಕಾರ್ಯಕ್ರಮಗಳನ್ನೇ ನೆಚ್ಚಿಕೊಳ್ಳಬೇಕು. ಬೇರೆ ದಾರಿಯೇ ಇಲ್ಲ. ನಮ್ಮ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕ್ರೀಡಾ ಶಾಲೆಗಳನ್ನು ತೆರೆಯಬೇಕು. ಸಮಾಜದ–ಸರಕಾರದ ಖರ್ಚಿನಲ್ಲಿ ಅಲ್ಲಿ ಎಳೆಯರನ್ನು ತರಬೇತಿಗೊಳಿಸಬೇಕು. ಆಮೇಲೆ ಯಾವ ಸಣ್ಣತನದ ರಾಜಕೀಯವನ್ನೂ ಮಾಡದೆ ಅರ್ಹತೆಯ ನೆಲೆಯಲ್ಲಿ ಆಯ್ಕೆ ಮಾಡಿ ರಾಷ್ಟ್ರಮಟ್ಟದಲ್ಲಿ ತರಬೇತಿ ಕೊಟ್ಟು ಸಜ್ಜುಗೊಳಿಸಬೇಕು.

ಇದರಿಂದ ಪ್ರತಿಭೆಗಳು ಅರಳಲು ಸಹಾಯಕವಾಗುತ್ತದೆ. ನಮ್ಮ ಯುವಕ–ಯುವತಿಯರು ಜಾಗತಿಕ ಕ್ರೀಡಾಂಗಣದಲ್ಲಿ ಮೆರೆಯುವುದು ಸಾಧ್ಯವಾಗುತ್ತದೆ. ರಾಷ್ಟ್ರದ ಹೆಮ್ಮೆಗೆ ಗರಿ ಮೂಡುತ್ತದೆ. ಕ್ರಿಕೆಟ್‌ನಲ್ಲಿ ನಮ್ಮ ಹುಡುಗರ ಸಾಧನೆಯಿಂದ ಊರೂರಲ್ಲಿ ಕ್ರಿಕೆಟಿನ ಆಸಕ್ತಿಯ ಮಿಂಚು ಸುಳಿದಂತೆ ಇತರ ಕ್ರೀಡೆಗಳಲ್ಲೂ ಪೇಟೆ–ಪಟ್ಟಣಗಳಲ್ಲಿ ಹಳ್ಳಿ-ಹಳ್ಳಿಗಳಲ್ಲಿ ಆಸಕ್ತಿ ಕುದುರುತ್ತದೆ.

ಇದಕ್ಕೇನೂ ಅಭಿವೃದ್ಧಿಯ ಹಣವನ್ನು ತಿರುಗಿಸಬೇಕಾಗಿಲ್ಲ ಹಾಳು ಮಾಡುವ ಹಣದ ಒಂದಂಶ ಸಾಕು. ಇಂದು ಈ ದೇಶ ಮನರಂಜನೆಯ ಹೆಸರಿನಲ್ಲಿ ಹಾಳು ಸಿನೆಮದ ಕ್ಷೇತ್ರದಲ್ಲಿ ತೊಡಗಿಸಿ ಹುಡಿಮಾಡುವ ಹಣದ ಶೇಕಡಾ ಹತ್ತರಷ್ಟು ಸಾಕು. ಇಷ್ಟನ್ನು ಮಾಡಿದರೆ ನಮ್ಮ ಮಕ್ಕಳು ಬೀದಿ ತಿರುಗುತ್ತ, ಕೆಟ್ಟ ಸಿನೆಮ ನೋಡುತ್ತ ಸಮಯ ಹಾಳು ಮಾಡುವುದು ಕಡಿಮೆಯಾಗುತ್ತದೆ. ಮನರಂಜನೆಯ ಹೆಸರಿನಲ್ಲಿ

[illegible] ಇವೆರಡು ದೇಶಗಳಿಗೆ ಈಗ ದೊರಕಿರುವ ಪ್ರಶಸ್ತಿಗಳು, ಸ್ಥಾನಮಾನಗಳು ಸುಮ್ಮನೆ ಬಂದಿಲ್ಲ. ದೇಶಬಾಂಧವರೇ ಒಲಿಂಪಿಕ್ಸಿನಲ್ಲಿ ಸಾಧನೆಮಾಡಿ–ಬಂಗಾರದ ಪದಕ ಪಡೆಯಿರಿ–ನಿಮಗೆ ಲಕ್ಷ ರೂಪಾಯಿ ಕೊಡುತ್ತೇವೆ ಎಂಬ ರಾಷ್ಟ್ರ ನಾಯಕರ ಉದ್ಗಾರಗಳಿಂದ ಬಂದಿಲ್ಲ. ಆ ದೇಶಗಳಲ್ಲಿ ಎಳೆಯರು ಕ್ರೀಡೆಗಳಲ್ಲಿ ಆಸಕ್ತಿವಹಿಸುವಂತೆ ಸಮಾಜ ಪ್ರೋತ್ಸಾಹ ಕೊಟ್ಟಿದೆ. ಆಸಕ್ತಿ ಉಳ್ಳ ಮಕ್ಕಳಿಗೆ ಅವಶ್ಯಕ ಸೌಲಭ್ಯವನ್ನೂ ತರಬೇತಿಗೆ ಸೌಕರ್ಯಗಳನ್ನೂ ಕೊಡಲಾಗಿದೆ. ಚೀನದಲ್ಲಿ ಹತ್ತು ವರ್ಷಗಳ ಹಿಂದೆ ಇಂತಹ ಸೌಲಭ್ಯಗಳಿರಲಿಲ್ಲ. ಕ್ರೀಡಾರಂಗದಲ್ಲಿ ಪರಮ ಶ್ರೇಷ್ಠವಾದ ಪರಂಪರೆಯೂ ಅದಕ್ಕಿರಲಿಲ್ಲ. ಹತ್ತು ಮೈ-ಮನಸ್ಸುಗಳನ್ನು ಹಾಳುಮಾಡಿಕೊಳ್ಳುವುದು ನಿಂತು ಕ್ರೀಡೆಯ ಮಾಧ್ಯಮದ ಮೂಲಕ ಒಳ್ಳೆಯ ಮನರಂಜನೆ ದೊರೆಯುತ್ತದೆ. ಜತೆಗೆ ಯುವ ಪೀಳಿಗೆ ಆರೋಗ್ಯಶಾಲಿಯಾಗಿ ಬೆಳೆಯುತ್ತದೆ.

ಸರಕಾರ ಮೊದಲು ಮಾಡಬೇಕಾದ ಕೆಲಸ ಕ್ರೀಡಾ ಶಾಲೆಗಳನ್ನು ತೆರೆಯುವುದು. ಸಿನೆಮಕ್ಕೆ ಕೊಡುವ ಸಹಾಯಧನ ರದ್ದು ಮಾಡಿ ಆ ಹಣವನ್ನು ಈ ಶಾಲೆಗಳಿಗೆ ಖರ್ಚು ಮಾಡಿ. ಸಿನೆಮದಿಂದ ಬರುವ ಮನರಂಜನಾ ತೆರಿಗೆಯೆಲ್ಲವನ್ನೂ ಇದಕ್ಕೆನಿಗದಿಗೊಳಿಸಿ. ಯುವ ಪೀಳಿಗೆಯಲ್ಲಿ ಆಟೋಟಗಳ ಬಗ್ಗೆ ಆಸಕ್ತಿ ಕುದುರಿಸುವ ಕೆಲಸವೂ ಅಭಿವೃದ್ಧಿಯ ಒಂದಂಶವೆಂದೇ ತಿಳಿಯಲಿ.

ವಿಶುಕುಮಾರ್

ವಿಶುಕುಮಾರ್ ಹೆಸರು ಕನ್ನಡದ ಜನಕ್ಕೆ ತುಂಬ ಪರಿಚಿತವಾದದ್ದು. ಈ ವ್ಯಕ್ತಿ ಮೊನ್ನೆ ಮೊನ್ನೆಯವರೆಗೂ ತುಂಬ ಲವಲವಿಕೆಯಿಂದ ಜೀವನೋತ್ಸಾಹದಿಂದ ಓಡಾಡುತ್ತಿದ್ದರು. ತಮ್ಮ ಕಾರ್ಯಕ್ಷೇತ್ರವನ್ನು ಸಾಹಿತ್ಯಕ್ಕೆ ಸೀಮಿತಗೊಳಿಸದೆ ನಾಟಕ, ಸಿನೆಮ, ರಾಜಕಾರಣ, ಸಮಾಜಸೇವೆ ಪತ್ರಿಕೋದ್ಯಮ ಎಂದೆಲ್ಲ ಹತ್ತಾರು ಅಭಿರುಚಿಗಳನ್ನು ಬೆಳೆಸಿಕೊಂಡವರು.

ಅದೇನಿದ್ದರೂ ಬರಹಗಾರನೆಂಬುದೇ ವಿಶುಕುಮಾರರ ಗಟ್ಟಿ ನೆಲೆ. ಹತ್ತಾರು ಕಾದಂಬರಿಗಳ ಕರ್ತೃ ಅವರೆಂಬುದೊಂದೇ ಅವರ ಹೆಗ್ಗಳಿಕೆಯಲ್ಲ. ಬರಹದಲ್ಲಿ ವಿಶುಕುಮಾರರು ಒಳ್ಳೆಯ ರಸಪಾಕವನ್ನು ಸಿದ್ಧಿಸಿಕೊಂಡಿದ್ದಾರೆಂಬುದೇಸಾಹಿತಿಯಾಗಿ ಅವರ ಮಹತ್ವ. ಬದುಕನ್ನು ಹತ್ತಿರದಿಂದ ನೋಡಿ ಅರ್ಥ ಮಾಡಿಕೊಂಡು ಕಲೆಯನ್ನಾಗಿ ನೇಯುವ ಕುಸುರಿ ಕೆಲಸದ ಕಲಾವಂತಿಕೆ ಅವರಿಗೆ ಸಿದ್ಧಿಸಿತ್ತು. ಅವರ ಕರಾವಳಿಕಾದಂಬರಿ ಇದಕ್ಕೊಂದು ನಿದರ್ಶನ. ಬದುಕಿನ ಬಗ್ಗೆ ಬಲು ವಾಸ್ತವವಾದ ಒಳನೋಟ ಅವರದ್ದೆನ್ನುವುದು, ಬದುಕಿನ ಜೀವದ್ರವ್ಯವನ್ನು ನೋಡಿ ತಿಳಿದು ಇತರರಿಗೆ ತಿಳಿಸುವ ಮಾನವೀಯತೆ ಅವರಿಗಿತ್ತೆನ್ನುವುದು "ಕರಾವಳಿ" ಯಲ್ಲಿಯೂ ಇತರ ಅವರ ಇತ್ತೀಚೆಗಿನ ಕಾದಂಬರಿಗಳಲ್ಲೂ ಶ್ರುತಪಡುತ್ತದೆ.

ಬಹುಮಂದಿ ಓದುಗರನ್ನು, ಅಭಿಮಾನಿಗಳನ್ನೂ ಸೃಷ್ಟಿಸಿಕೊಂಡ ಸಾಮರ್ಥ್ಯ ಅವರದಾಗಿತ್ತು. ಸಾಹಿತ್ಯ ಲೋಕದಲ್ಲಿ ಗಂಭೀರವೂ ಆದ, ಅದೇ ವೇಳೆಗೆ ಜನಸಾಮಾನ್ಯರೂ ಮೆಚ್ಚುವ ಕೃತಿಗಳ ರಚನೆ ಸಾಧ್ಯವೆಂಬುದಕ್ಕೆ ವಿಶುಕುಮಾರ್ ಸಾಕ್ಷಿ. ಬದುಕಿನ ಬಗ್ಗೆ ಆಳವಾದ ಒಳತೋಟ ನೀಡುವುದರ ಜತೆಗೇ ತನ್ನ ಬರವಣಿಗೆಯ ಕಡೆಗೆ ಸಾಮಾನ್ಯ ಓದುಗರನ್ನು ಸೆಳೆದ ಸಾಧನೆ ಅವರದ್ದು. ಈ ನಿಟ್ಟಿನಲ್ಲಿ ಜನಪ್ರಿಯ–ಗಂಭೀರಗಳೆಂಬ ಸಾಹಿತ್ಯದ ಎರಡು ವರ್ಗಗಳ ನಡುವೆ ಬರಹಗಳ ಮೂಲಕ ಸುವರ್ಣ ಸೇತುವೆಯೊಂದನ್ನು ಬೆಸೆದ ಅವರ ಸಾಧನೆಯೇನೂ ಸಣ್ಣದಲ್ಲ.

ಸಮಾಜದ ಅವಗಣಿತ ವರ್ಗದಿಂದ ಬಂದು, ಸ್ವಂತ ಪ್ರತಿಭೆ, ಸಾಮರ್ಥ್ಯ, ಪರಿಶ್ರಮಗಳಿಂದ ಬದುಕನ್ನು ರೂಪಿಸಿಕೊಂಡದ್ದು ಅವರ ಸಾಧನೆ. ಜೀವನದ ಬಗ್ಗೆ ಅಪಾರ ಪ್ರೀತಿಯನ್ನೂ ಸುತ್ತಲಿನ ಸಮಾಜ–ಪರಿಸರದ ಬಗ್ಗೆ ಆಸ್ಥೆಯನ್ನೂ ಬೆಳೆಸಿಕೊಂಡ ವ್ಯಕ್ತಿತ್ವ ಅವರದ್ದು. ಇಂಥ ಸ್ನೇಹಶೀಲನೊಬ್ಬನ ಅಕಾಲ ಸಾವಿನಿಂದ ಸಮಾಜದ ಪ್ರಜ್ಞೆಯ ಒಂದಂಶವೇ ಸತ್ತಂತಾಗುತ್ತದೆ. ಇಂಥ ಪ್ರಜ್ಞೆಯನ್ನು ಸಮಾಜಕ್ಕೆ ಕೊಡುವ ವ್ಯಕ್ತಿತ್ವಗಳು ರೂಪುಗೊಳ್ಳುವುದು ಅಪರೂಪ; ಇಂಥ ವ್ಯಕ್ತಿತ್ವ ರೂಪಿಸುವ ಕ್ರಿಯೆಗೆ ಬಹು ಕಾಲ ಬೇಕಾಗುತ್ತದೆ.

[illegible] 8, 198[illegible] [illegible]

ಮುಂಗಾರು

[illegible] ಅಕ್ಟೋಬರ್ 8, 1986

ಕಾನೂನು ಇದೆ–ಅನುಷ್ಠಾನ ಇಲ್ಲ

[illegible] ಕಾನೂನುಗಳನ್ನು [illegible] ರುವುದಾಗಿ 15 ಕೇಂದ್ರ ಕಾರ್ಮಿಕ [illegible] ಟವು ಮುಂಬಯಿಯಲಿ ಸಭೆ ಸೇರಿ [illegible] ಐದು ಲಕ್ಷದಷ್ಟು ಉದ್ಯೋಗಾವಕಾಶ ಕಮ್ಮಿಯಾಗಿದೆ ಯೆಂದು ಈ ಸಂಸ್ಥೆಯು ಸರಕಾರವನ್ನು ತರಾಟೆಗೆ [illegible]

[illegible] ದಲ್ಲಿ ಕೂಡ ತಂತ್ರಜ್ಞಾನ [illegible] ಕಂಪ್ಯೂಟರೀಕರಣ ನಡೆಸಿ ಜನ[illegible] ಯದಂತೆ ಮಾಡಲಾಗುತ್ತಿದೆ [illegible] ದೂರು. ಖಾಸಗಿ ರಂಗದಲ್ಲಿ ಹೆಚ್ಚಿನ [illegible] ಗಳು "ರೋಗಪೀಡಿತ" ಎಂದು [illegible]

ಭಾರತದಲ್ಲಿ ಈಗ ಇರುವ ಕಾರ್ಮಿಕ ಶಾಸನಗಳು ಹಳೆಯ ಕಾಲದವು ಎಂಬುದು ನಿಜ. ಅವುಗಳಲ್ಲಿ ಸುಧಾರಣೆಯಾಗಬೇಕಾದ ಅಗತ್ಯವುಂಟು. ಕಾರ್ಮಿಕರಿಗೆ ಪರಿಹಾರ ಸ್ಥಾಯಿ ನಿಯಮಗಳಿಗೆ ಸಂಬಂಧಪಟ್ಟ ಶಾಸನಗಳು ಇದಕ್ಕೆ ಉದಾಹರಣೆ. ಕಾರ್ಮಿಕ ವಿವಾದ [illegible] ಸತಕ್ಕ ನಿಯಮಾವಳಿಗಳೂ ದೋಷ [illegible] ಅವುಗಳನ್ನೂ ಸುಧಾರಿಸಬೇಕಾಗಿದೆ. [illegible] ನಿರ್ಮಿಸಲಾಗುವ ಶಾಸನಗಳಲ್ಲಿ ದಮನ [illegible] ಪ್ರತಿಭಟನೆ ಸಂಘ [illegible] ಸೇರುವಂತೆ ಮಾಡ ಬೇಕಾದ ಅಗತ್ಯವುಂಟು.

[illegible] ಈಗ ಇರುವ ಕಾರ್ಮಿಕ [illegible] ಈಗಿನ [illegible] ಆದರೆ ಅವುಗಳ ಅನುಷ್ಠಾನಕ್ಕೆ ಸೂಕ್ತ ವ್ಯವಸ್ಥೆ ಹೆಚ್ಚಿನ ಕಡೆಗಳಲ್ಲಿ ಇಲ್ಲ. ವ್ಯವಸ್ಥೆ ಇರುವ ಕಡೆಯೂ ಕಾನೂನಿನ ಅನುಷ್ಠಾನ ನೋಡಿಕೊಳ್ಳಬೇಕಾದ ಸರಕಾರಿ ಸಿಬ್ಬಂದಿ ಭ್ರಷ್ಟಾಚಾರಿಗಳಾಗಿ ಹಣವೂ ವಶೀಲಿಯೂ ವರ್ಚಸ್ಸೂ ಉಳ್ಳ ಕೈಗಾರಿಕಾ ಮಾಲೀಕರ ಕೈಗೊಂಬೆಗಳಾಗಿ ಬಿಡುತ್ತಾರೆ. ಶಾಸನದ ಜಾರಿಗೆ ವ್ಯವಸ್ಥೆಯೇ ಇಲ್ಲದ ಕಡೆ ಕೇಳುವುದೇ ಬೇಡ. ಮಾಲೀಕರು ಆಡಿದ್ದೇ ಆಜ್ಞೆ; ಮಾಡಿದ್ದೇ ಕಾನೂನು.

ಈ ವಿಷ ವರ್ತುಲವನ್ನು ಮುರಿಯಬೇಕಾಗಿದೆ. ಕಾರ್ಮಿಕರ ಹಿತರಕ್ಷಣೆಗಾಗಿ ಮಾಡಿದ ಕಾನೂನುಗಳು ಅಕ್ಷರದಲ್ಲಿ ಮಾತ್ರವೇ ಅಲ್ಲದೆ ಆಶಯದಲ್ಲಿಯೂ ಅರ್ಥಪೂರ್ಣವಾಗುವಂತಹ ಪರಿಸ್ಥಿತಿಯನ್ನು ನಿರ್ಮಿಸಬೇಕಾಗಿದೆ. ಅದಕ್ಕಾಗಿ ಕಾನೂನಿನ ಅನುಷ್ಠಾನ ಸೂಕ್ತವಾಗಿ ಆಗಬೇಕು. ಕಾರ್ಮಿಕರಿಗೆ ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಯಾವುದೇ ವಿಚಾರದಲ್ಲಿ ವಿವಾದ ಉಂಟಾದಾಗ ಅದನ್ನು ವಿವೇಕಯುತವಾದ ತಳಹದಿಯಲ್ಲಿ ಕಾಲವಿಳಂಬವಿಲ್ಲದೆ ಸಂಧಾನ ಮೂಲಕವೇ ಬಗೆಹರಿಸುವಂತಹ ವ್ಯವಸ್ಥೆಯನ್ನು ರೂಪಿಸಬೇಕು. ಯಾವುದೇ ಪ್ರಶ್ನೆ ನೆನೆಗುದಿಗೆ ಬಿದ್ದು ಕೊಳೆತು ಹೋಗುವುದರಿಂದ ಒಂದೋ ಸಂಬಂಧಪಟ್ಟ ಕಾರ್ಮಿಕರಿಗೆ ಸಂಕಟ ಉಂಟಾಗುತ್ತದೆ. ಇಲ್ಲವೇ ವಿಚಾರವು ಪ್ರತಿಷ್ಠೆಯ ಪ್ರಶ್ನೆಯಾಗಿ ಪರಿಣಮಿಸಿ ಮುಷ್ಕರ–ಲಾಕೌಟ್‌ಗಳಾಗಿ ಕಾರ್ಮಿಕರಿಗೂ ಮಾಲೀಕರಿಗೂ ಕೂಡಿಯೇ ಸಂಕಷ್ಟವುಂಟಾಗುತ್ತದೆ.

ಇದನ್ನು ನಿವಾರಿಸಲು ಕಾರ್ಮಿಕ ಕಾಯಿದೆಗಳು ಹೇಗೆ ಅರ್ಥಪೂರ್ಣವಾಗಬೇಕೋ ಹಾಗೆಯೇ ಅವುಗಳ ಅನುಷ್ಠಾನವೂ ಅರ್ಥಪೂರ್ಣವಾಗಬೇಕು.

ಕಾರ್ಮಿಕರು ಹಾಗೂ ಕಾರ್ಮಿಕ ಸಂಘಟನೆಗಳೂ ಪರಿಹಾರ ಕಂಡುಕೊಳ್ಳಬೇಕಾದ ಮಹತ್ವದ ಪ್ರಶ್ನೆಯೊಂದಿದೆ. ಅದುವೇ ಕಾರ್ಮಿಕ ಸಂಘಟನೆಗಳೊಳಗಿನ ಪೈಪೋಟಿಯ–ವೈರದ ವಿಚಾರ. ಇದರಿಂದಾಗಿ ಕೈಗಾರಿಕಾ ಸಾಮರಸ್ಯ ಬಹಳಷ್ಟು ಹಾಳಾಗುತ್ತಿದೆಯೆಂಬ ಆರೋಪದಲ್ಲಿ ತಥ್ಯವುಂಟು. ಕಾರ್ಮಿಕ ಸಂಘಟನೆಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು, ಇಲ್ಲವೆ ಇವುಗಳ ನಡುವಣ ಸ್ಪರ್ಧೆಯನ್ನು ನಿವಾರಿಸಬೇಕು. ಇವೆರಡರಲ್ಲಿ ಒಂದಾಗದಿದ್ದರೆ ಭಾರತೀಯ ಕೈಗಾರಿಕಾ ಕ್ಷೇತ್ರ ಸದಾ ಗೊಂದಲಗಳ ಆಗರವಾಗಿಯೇ ಇರುತ್ತದೆ.

ಮುಂಗಾರು
ಗುರುವಾರ, ಅಕ್ಟೋಬರ್ 9, 1986

ಪ್ರಮಾಣಬದ್ಧ ಪ್ರಾತಿನಿಧ್ಯ

ಕರ್ನಾಟಕ ಸರಕಾರ ಶಿಕ್ಷಣದಲ್ಲಿ ಹಾಗೂ ಸರಕಾರಿ ಸೇವೆಯಲ್ಲಿ ಹಿಂದುಳಿದ ವರ್ಗಗಳವರಿಗೆ ಮೀಸಲಾತಿಯನ್ನು ನೀಡುವುದಕ್ಕೆ ಹೊಸ ಸೂತ್ರವೊಂದನ್ನು ರೂಪಿಸಿದೆ. ಇದರ ಪರಿಣಾಮವಾಗಿ ವಸ್ತುಶಃ ಹಾವನೂರ್ ಆಯೋಗದ ಶಿಫಾರಸನ್ನೂ ವೆಂಕಟಸ್ವಾಮಿ ಆಯೋಗದ ಶಿಫಾರಸನ್ನೂ ಕೈಬಿಟ್ಟಂತಾಗಿದೆ. ಸಾಮಾನ್ಯವಾಗಿ ಎಲ್ಲಾ ಹಿಂದುಳಿದ ಜಾತಿಗಳಿಗೂ ಸರಕಾರದ ಹೊಸ ಸೂತ್ರದನ್ವಯ ಮೀಸಲಾತಿಯು ದೊರೆಯುತ್ತದೆ. ಈ ಸೂತ್ರದ ಪ್ರಕಾರ, ಜನಸಂಖ್ಯೆಯ ಶೇಕಡಾ 92ರಷ್ಟು ಮಂದಿಗೆ ಮೀಸಲಾತಿಯ ರಕ್ಷಣೆಯು ದೊರೆಯುತ್ತದೆ. ಮೀಸಲಾತಿಯ ಒಟ್ಟು ಶೇಕಡಾತಿಯು ಮೊದಲಿದ್ದಂತೆಯೇ 68.

ಹೊಸ ಸೂತ್ರದಲ್ಲಿ ವಿವಿಧ ಹಿಂದುಳಿದ ಜಾತಿಗಳನ್ನು ವಿವಿಧ ಗುಂಪುಗಳಾಗಿ ಮಾಡಲಾಗಿದೆ. ಆಯಾ ಜಾತಿಗಳವರ ಸಾಮಾಜಿಕ ಸ್ಥಾನಮಾನಗಳಿಗೆ ಅನುಸಾರವಾಗಿ ಅವುಗಳಿಗೆ ದೊರೆಯುವ ಮೀಸಲಾತಿ ಶೇಕಡಾತಿಯನ್ನು ನಿಗದಿಪಡಿಸಲಾಗಿದೆ. ಬ್ರಾಹ್ಮಣರು, ಜೈನರು, ವೈಶ್ಯರು, ಮೊದಲಿಯಾರರು ಮೊದಲಾದ ಮುಂದುವರಿದ ಜಾತಿಗಳವರಲ್ಲಿಯೂ ಇರಬಹುದಾದ ಆರ್ಥಿಕವಾಗಿ ಬಡವರಾದವರಿಗೆ ಮೀಸಲಾತಿಯ ವಿಶೇಷ ಗುಂಪನ್ನು ರಚಿಸಿ ಶೇಕಡಾ ಐದರಷ್ಟು ಮೀಸಲಾತಿ ನೀಡಲಾಗಿದೆ. ಸಾರ್ವತ್ರಿಕವಾಗಿ ಎಲ್ಲ ಜಾತಿಗಳವರೂ ಅರ್ಹತೆಯ ನೆಲೆಯಲ್ಲಿ ಶೇಕಡಾ 32ರಷ್ಟು ಹುದ್ದೆಗಳಿಗೆ ಸ್ಪರ್ಧಿಸಲು ಅವಕಾಶವಿದೆ.

ಕೆಲವು ವರ್ಗಗಳವರಿಗೆ ಮೀಸಲಾತಿಯನ್ನು ಆರ್ಥಿಕವಾಗಿ ಬಡವರಾದವರಿಗೆ ಸೀಮಿತಗೊಳಿಸಿದ್ದು ಅಂದರೆ ಮೀಸಲಾತಿಗೆ ವರಮಾನದ ಮಿತಿಯನ್ನು ಹಾಕಿರುವುದು ಹೊಸದೇ ಆದ ಒಂದು ಹೆಜ್ಜೆ. ಮೀಸಲಾತಿಯ ವಿಶೇಷ ಗುಂಪಿನವರಿಗೆ ಸೌಲಭ್ಯ ಪಡೆದುಕೊಳ್ಳಲು ಈ ನಿರ್ಬಂಧ ಮೊದಲೇ ಇದ್ದಿತಾದರೂ ಈ ಪರಿಕಲ್ಪನೆಯನ್ನು ಇನ್ನಿತರ ಕೆಲವು ಗುಂಪುಗಳಿಗೂ ವಿಸ್ತರಿಸಿರುವುದು ಹೊಸ ಅಂಶ.

ಸರಕಾರ ರೂಪಿಸಿರುವ ಈ ಹೊಸ ಸೂತ್ರ ವಿಚಾರಶೀಲವಾಗಿದೆ. ಸಾಮಾಜಿಕವಾಗಿ ಹಿಂದುಳಿದಿರುವ ಎಲ್ಲರಿಗೂ ಸಾಮಾಜಿಕ ನ್ಯಾಯವನ್ನೊದಗಿಸುವ ಹೆಜ್ಜೆ ಇದಾಗಿದೆ. ಆಯಾ ಜಾತಿಗಳವರ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣದಲ್ಲಿಯೂ, ಸೇವೆಯಲ್ಲಿಯೂ ಪ್ರಾತಿನಿಧ್ಯ ನೀಡುವ ವಿವೇಕಯುತವಾದ ಉಪಕ್ರಮವಾಗಿದೆ. ಸೆಪ್ಟಂಬರ 24ರ ಸಂಪಾದಕೀಯದಲ್ಲಿ ನಾವು ಈ ನೀತಿಯನ್ನೇ ಪ್ರತಿಪಾದಿಸಿದ್ದೆವು.

ಈ ಸೂತ್ರದ ಸಿಂಧುತ್ವವನ್ನು ಆಸಕ್ತ ವರ್ಗಗಳವರು ನ್ಯಾಯಾಲಯದಲ್ಲಿ ಪ್ರಶ್ನಿಸುವ ಸಾಧ್ಯತೆಯಿದೆ. ಇಂದಿನ ವಿವಾದಕ್ಕೆ ಕಾರಣವೆನಿಸಿದ ವರದಿಯನ್ನೊಪ್ಪಿಸಿದ ಆಯೋಗದ ಅಧ್ಯಕ್ಷ ಟಿ. ವೆಂಕಟಸ್ವಾಮಿಯವರೂ ಇದರ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ಆದ್ದರಿಂದ ಸಾಮಾಜಿಕ ನ್ಯಾಯವನ್ನು ನೀಡುವ ಉದ್ದೇಶಕ್ಕೆ ಸರಕಾರ ತಿರುಳು ತುಂಬಬೇಕು. ಅದಕ್ಕಾಗಿ ಅದು ಈ ಮೀಸಲಾತಿ ಸೂತ್ರವನ್ನು ಕಾನೂನಿನ ನೆಲೆಯಲ್ಲಿ ಸಮರ್ಥಿಸುವ ಶಾಸ್ತ್ರೀಯ ತಳಹದಿಯನ್ನು ಒದಗಿಸಿಕೊಡಬೇಕು. ಸಮಾಜದ ಎಲ್ಲರಿಗೆ ಪ್ರಮಾಣಬದ್ಧವಾದ ಪ್ರಾತಿನಿಧ್ಯವನ್ನು ನೀಡುವ ಈ ಸೂತ್ರಕ್ಕೆ ವಾಸ್ತವದ ನೆಲೆಗಟ್ಟು ಉಂಟೆಂಬುದನ್ನು ಸಾಬೀತುಪಡಿಸಬೇಕು. ಅದಕ್ಕಾಗಿ ವಿಷಯ ಸಂಗ್ರಹ ಮಾಡಬೇಕು.

ಈ ವಿಷಯ ಸಂಗ್ರಹ ಕ್ರಮಬದ್ಧವಾಗಿ, ಶಾಸ್ತ್ರೀಯವಾಗಿ ನಡೆಯಬೇಕು. ಹತ್ತರಲ್ಲಿ ಇಬ್ಬರನ್ನೋ ಮೂವರನ್ನೋ ಕಂಡು, ಕೇಳಿ ಬರೆದುಕೊಂಡರೆ ಸಾಲದು. ಕ್ರಮಬದ್ಧವಾದ ಖಾನೇಶುಮಾರಿಯನ್ನು ಇದಕ್ಕಾಗಿ ನಡೆಸಬೇಕು. ಮನೆಮನೆಗೆ ಭೇಟಿ ಕೊಡಬೇಕು. ಆಯಾ ಜಾತಿಗಳಲ್ಲಿರುವ ಜನರ ಸಂಖ್ಯೆ, ಜಾತಿಗಳಿಗಿರುವ ಉಪನಾಮಗಳು ಜನರ ಆರ್ಥಿಕ ಪರಿಸ್ಥಿತಿ ಶೈಕ್ಷಣಿಕ ಮಟ್ಟ, ಔದ್ಯೋಗಿಕ ಪರಿಸ್ಥಿತಿ ಇವೆಲ್ಲವನ್ನೂ ತಿಳಿದುಕೊಳ್ಳಬೇಕು. ಇಂಥ ವಿವರಗಳ ಕ್ರೋಢೀಕರಣದಿಂದ ಪ್ರತಿಯೊಂದು ಜಾತಿಯ ಆರ್ಥಿಕ-ಸಾಮಾಜಿಕ ಸ್ಥಾನಮಾನಗಳ ಚಿತ್ರ ಗೋಚರಿಸುತ್ತದೆ. ಹಿಂದುಳಿದ ಜಾತಿಗಳ ಪಟ್ಟಿಗೆ ಸೇರಿಯೂ ಆರ್ಥಿಕ-ಸಾಮಾಜಿಕ ಸ್ಥಾನಮಾನಗಳಲ್ಲಿ ವ್ಯತ್ಯಾಸ ಕಂಡು ಬಂದರೆ ಆಗ ನೀಡುವ ಮೀಸಲಾತಿ ಶೇಕಡಾತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬಹುದು.

ಜಾತಿ ಜನ ಬಲದ ಆಧಾರದಲ್ಲಿ ಮೀಸಲಾತಿ ಕೊಡುವ ಈ ಸೂತ್ರವನ್ನು ಖಾನೇಶುಮಾರಿಯ ವಿವರಗಳ ತಳಹದಿಯಲ್ಲಿ ಮಾತ್ರವೇ ಸರಕಾರವು ನ್ಯಾಯಾಂಗದ ಮುಂದೆ ಸಮರ್ಥಿಸಿಕೊಳ್ಳುವುದು ಸಾಧ್ಯ. ವಸ್ತುಸ್ಥಿತಿಯನ್ನು ಮಂಡಿಸಿದರೆ ನ್ಯಾಯಾಲಯವು ಈ ಸೂತ್ರ ಸಾಮಾಜಿಕ ನ್ಯಾಯಕ್ಕೆ ಪೂರಕವಾಗುವುದೆಂಬುದನ್ನು ಒಪ್ಪಿಕೊಳ್ಳುವುದು ಸಂಭವನೀಯ. ಇಂಥ ಅಂಕಿ ಅಂಶಗಳನ್ನು ದೋಷ ರಹಿತ ವಿಧಾನದಿಂದ ಸಂಗ್ರಹ ಮಾಡುವುದರಿಂದ ಸರಕಾರವು ನೇಮಿಸಲು ಉದ್ದೇಶಿಸಿರುವ ಹಿಂದುಳಿದವರನ್ನು ಗುರುತಿಸುವ ಇನ್ನೊಂದು ಆಯೋಗದ ಕೆಲಸವೂ ಸುಲಭವಾದೀತು; ಅದರ ಪ್ರಯತ್ನಕ್ಕೆ ವೈಜ್ಞಾನಿಕ ತಳಹದಿಯೂ ದೊರೆಯುತ್ತದೆ.

ಆದ್ದರಿಂದ 'ಜಾತಿನೆಲೆಯ ಖಾನೇಶುಮಾರಿಯನ್ನು ತಡ ಮಾಡದೆ ಸರಕಾರ ಮಾಡಬೇಕು. ಅದನ್ನು ರಾಜ್ಯ ಸರಕಾರವೇ ಮಾಡುವುದು ಸಾಧ್ಯ. ಕೇಂದ್ರದ ಅನುಮತಿಯೇನೂ ಅದಕ್ಕೆ ಬೇಕಾಗಿಲ್ಲ.

ಮುಂಗಾರು
ಶುಕ್ರವಾರ, ಅಕ್ಟೋಬರ್ 10, 1986

ಆಶಯವಲ್ಲ; ಅನುಷ್ಠಾನ ಬೇಕು

ಭಯೋತ್ಪಾದಕತೆಯನ್ನು ನಿವಾರಣೆ ಮಾಡಲು ಜನರು ಸಹಕರಿಸಬೇಕು. ಅದಕ್ಕಾಗಿ ಜನತಾ ಆಂದೋಲನ ನಡೆಯಬೇಕು ಎಂದು ಪ್ರಧಾನಮಂತ್ರಿ ರಾಜೀವ ಗಾಂಧಿಯವರು ಹೇಳಿರುವುದಾಗಿ ವರದಿಯಾಗಿದೆ. ಕೋಮುವಾದದ ವಿರುದ್ಧ ಭಾರತದ ಹೋರಾಟದ ಬಗೆಗಿನ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಅವರು ಈ ಮಾತನ್ನು ಹೇಳಿದರಲ್ಲದೆ ಭಯೋತ್ಪಾದಕತೆಯನ್ನು ನಿರ್ಮೂಲನ ಮಾಡುವ ಕೆಲಸದ ಹೊಣೆಗಾರಿಕೆಯನ್ನು ಕಾನೂನು ಹಾಗೂ ಶಾಂತಿಪಾಲನೆ ವ್ಯವಸ್ಥೆಯ ತಲೆಗೆ ಮಾತ್ರವೇ ಹೊರಿಸಿಬಿಡುವುದರಿಂದ ಉದ್ದೇಶ ಈಡೇರದು ಎಂದು ಅಭಿಪ್ರಾಯಪಟ್ಟಿರುವುದೂ ವರದಿಯಾಗಿದೆ.

ಪಂಜಾಬು ಸಮಸ್ಯೆ ಹುಟ್ಟಿ ಸುಮಾರು ಒಂದು ದಶಕ ಪೂರ್ತಿಯಾಗುತ್ತಿದೆ. ಈ ಸಮಸ್ಯೆಗೆ ಮಹತ್ವದ ಹಾಗೂ ಅಂತಿಮ ಪರಿಹಾರ ತಂದುಕೊಡುವುದೆಂದು ನಿರೀಕ್ಷಿಸಲಾದ-ಭಾರತ ಸರಕಾರ ಹಾಗೂ ಅಕಾಲಿದಳ ಪಕ್ಷದ ನಡುವೆ ಆದ ರಾಜೀವ್-ಲೊಂಗೋವಾಲ್ ಒಡಂಬಡಿಕೆ ನಡೆದು ಸುಮಾರು ಒಂದೂವರೆ ವರ್ಷ ಪೂರ್ತಿಯಾಗಿದೆ. ಪಂಜಾಬು ಸಮಸ್ಯೆಯು ಎತ್ತಿರುವ ಹಲವು ವಿಧದ-ಆರ್ಥಿಕ-ಸಾಮಾಜಿಕ-ರಾಜಕೀಯ ಸವಾಲುಗಳಿಗೆ ಈ ಒಡಂಬಡಿಕೆಯು ಉತ್ತರ ಹೇಳುವುದೆಂದು ನಿರೀಕ್ಷಿಸಲಾಗಿತ್ತು. ಇದರ ಪರಿಣಾಮವಾಗಿ ಭಯೋತ್ಪಾದಕರ ಹುಟ್ಟಡಗಿ ಹೋಗುವುದೆಂದೂ ನಿರೀಕ್ಷಿಸಲಾಗಿತ್ತು.

ಆದರೆ ನಿರೀಕ್ಷೆಯಂತೆ ಕೆಲಸ ಆಗಿಲ್ಲ ಎಂಬುದನ್ನು ಪ್ರಧಾನಮಂತ್ರಿ ರಾಜೀವಗಾಂಧಿಯವರೀಗ ಒಪ್ಪಿಕೊಂಡಿದ್ದಾರೆ. ಭಯೋತ್ಪಾದಕತೆ ನಿರ್ಮೂಲನ ಆಗಿಲ್ಲವೆಂಬ ಸತ್ಯ ಅವರಿಗೆ ಅರಿವಾಗಿದೆ. ಅದಕ್ಕಾಗಿಯೇ ಅವರು ಜನತೆಯ ಸಹಕಾರವನ್ನು ಕೇಳುತ್ತಿದ್ದಾರೆ. ಸಮಸ್ಯೆಯ ನಿವಾರಣೆಗೆ ಜನತೆಯ ಸಹಕಾರವನ್ನು ಅವರು ಈ ಹಿಂದೆ ತೆಗೆದುಕೊಂಡಿಲ್ಲವೆಂದು ಇದರರ್ಥವಲ್ಲ. ಮುಖ್ಯವಾಗಿ ಸಿಕ್ಖರಿಗೆ ಸಂಬಂಧಿಸಿದ ಪಂಜಾಬು ಪ್ರಶ್ನೆಯ ಬಗೆಹರಿವಿಗೆ ಅವರು ಸಿಕ್ಖರ ಪ್ರಾತಿನಿಧ್ಯ ಉಳ್ಳ ಅಕಾಲಿ ದಳದ ಜತೆ ಸಂಧಾನಕ್ಕಿಳಿದು ಒಪ್ಪಂದ ಮಾಡಿಕೊಂಡಿರುವುದೇ ರಾಜೀವಗಾಂಧಿಯವರು ಜನತೆಯ ಸಹಕಾರದೊಡನೆ ಸಮಸ್ಯೆಗಳ ನಿವಾರಣೆಗೆ ಹೊರಟಿದ್ದಾರೆ ಎಂಬುದಕ್ಕೆ ಸಾಕ್ಷಿ. ಜನತಂತ್ರದ ನೆಲೆಯಲ್ಲಿ ವಿವಾದಗಳನ್ನು ಇತ್ಯರ್ಥ ಮಾಡಬೇಕು ಎಂಬ ವಿಶ್ವಾಸ ಅವರದ್ದೆನ್ನುವುದಕ್ಕೆ ನಿದರ್ಶನ.

ಆದರೂ ಸಮಸ್ಯೆ ಬಗೆಹರಿದಿಲ್ಲ. ಭಯೋತ್ಪಾದಕತೆ ನಿಂತಿಲ್ಲ. ಇದು ಎಲ್ಲರಿಗೂ ಕಾಣುವಂತಹ ಸತ್ಯ.. ಇಂದು ಪಂಜಾಬಿನಲ್ಲಿ ವಸ್ತುಶಃ ಪ್ರತಿ ಸಿಕ್ಖನ ಮನೆಯೂ ಭಾರತ ರಾಷ್ಟ್ರೀಯತೆಯ ಬಗ್ಗೆ ವೈರತ್ವ ಹೊಂದಿದೆ. ಪ್ರತಿ ಸಿಕ್ಖ ಕುಟುಂಬವೂ ಖಾಲಿಸ್ತಾನ ರಾಷ್ಟ್ರೀಯತೆಯ ಕನಸು ಕಾಣುತ್ತದೆ. ಪ್ರತಿ ಸಿಕ್ಖ ಯುವಕನೂ ಒಂದೋ ಖಾಲಿಸ್ತಾನದ ಹೋರಾಟಗಾರನಾಗಿದ್ದಾನೆ-ಇಲ್ಲವೇ ಅಂಥ ಹೋರಾಟದ ಯೋಧನಾಗುವ ಕನಸು ಕಾಣುತ್ತಿದ್ದಾನೆ. ಭಾರತೀಯತ್ವವನ್ನು ಮೈಗೂಡಿಸಿಕೊಂಡಿರುವ ನಮಗೆಲ್ಲ ಇದು ಮೆಚ್ಚಿಕೆಯಾಗದಿರಬಹುದು. ಇದು ರಾಷ್ಟ್ರ ದ್ರೋಹವಾಗಿ ಕಾಣಿಸಬಹುದು.

ಸಿಕ್ಖರು ಭಾರತ ರಾಷ್ಟ್ರೀಯತೆಯ ಶತ್ರುಗಳಾಗಿರುವ ಸತ್ಯವನ್ನು ಲೊಂಗೋವಾಲ್ ಹಂತಕರಲ್ಲಿ ಕಾಣಬಹುದಾಗಿದೆ. ಇಂದಿರಾಗಾಂಧಿ ಕೊಲೆ ಗಡುಕರಲ್ಲಿ ಕಾಣಬಹುದಾಗಿದೆ. ವೈದ್ಯ ಹಂತಕರಲ್ಲಿ ಸಿಕ್ಖ ರಾಷ್ಟ್ರೀಯತೆ ಪ್ರತಿಫಲಿಸುತ್ತದೆ. ಮೊನ್ನೆ ತಾನೇ ನಡೆದ ಸಿಕ್ಖರ ಸಮಾವೇಶದಲ್ಲಿ ವೈದ್ಯ ಹಂತಕರಿಗೆ ಸಿಕ್ಖ ಪಂಥದ ಅತಿಶ್ರೇಷ್ಠ ಪ್ರಶಸ್ತಿಗಳನ್ನು ದಯಪಾಲಿಸಿದ ನಿರ್ಣಯವು ಭಾರತೀಯ ರಾಷ್ಟ್ರೀಯತೆ ಬಗ್ಗೆ ಸಿಕ್ಖರಿಗಿರುವ ಅಭಿಪ್ರಾಯವನ್ನು ಹೇಳುತ್ತದೆ. ರಾಜೀವಗಾಂಧಿಯವರ ಜೀವ ಹರಣಕ್ಕೆ ಏರ್ಪಾಡು ನಡೆಸಿದ ವಿದ್ಯಮಾನವೂ ಇದನ್ನೇ ಹೇಳುವುದಲ್ಲದೆ ಬೇರೆಯಲ್ಲ. ಇದೆಲ್ಲವೂ ಯಾರೋ ಒಬ್ಬ ತಲೆ ತಿರುಕನ ಮತಿಗೇಡಿ ಕೃತ್ಯಗಳಲ್ಲ. ವೈಯಕ್ತಿಕ ದ್ವೇಷ ಸಾಧನೆಯ ಸಾಕಾರ ರೂಪವಲ್ಲ. ಬದಲಾಗಿ ಒಂದು ಜನಾಂಗದ ಹೋರಾಟದ ಮೂರ್ತ ರೂಪಗಳು. ಧ್ಯೇಯವೊಂದಂಸಾಧಸಗಾಗಿ ನಡೆಯುತ್ತಿರುವ ಸಿಕ್ಖರ "ಧರ್ಮಯುದ್ಧ" ಇದಾಗಿವೆ. ಸಿಕ್ಖರ ಕಣ್ಣಿನಲ್ಲಿ ಈಗ ನಡೆಯುತ್ತಿರುವುದು ಖಾಲಿಸ್ತಾನದ ಸ್ವಾತಂತ್ರ್ಯ ಹೋರಾಟವಾಗಿದೆಯೆಂಬ ಸತ್ಯವನ್ನು ಭಾರತೀಯರು ಎಷ್ಟು ಬೇಗ ಅರ್ಥಮಾಡಿಕೊಂಡರೆ ಅಷ್ಟು ಒಳ್ಳೆಯದು.

ಈ ಹೋರಾಟಕ್ಕೆ ಮೂಲ ಕಾರಣಗಳುಂಟು. ಧಾರ್ಮಿಕಕ್ಕಿಂತಲೂ ಹೆಚ್ಚಾಗಿ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಕಾರಣಗಳು ಇವು. ಅವುಗಳಿಗೆ ಅಂಥದೇ ಪರಿಹಾರ ಅಗತ್ಯ. ಈ ಕಾರಣಗಳನ್ನು ಹುಡುಕಿ ಪರಿಹಾರ ಕಂಡುಕೊಂಡರೆ ಖಾಲಿಸ್ತಾನ ಸಮಸ್ಯೆಯೂ ಪರಿಹಾರವಾದೀತು. ರಾಜಕೀಯ ಪರಿಹಾರದ ದಾರಿ ರಾಜೀವ್-ಲೊಂಗೋವಾಲ್ ಒಡಂಬಡಿಕೆಯಲ್ಲಿದ್ದರೂ ಒಡಂಬಡಿಕೆಯೇ ಅನುಷ್ಠಾನಗೊಂಡಿಲ್ಲವೆಂದ ಮೇಲೆ ಸಮಸ್ಯೆ ಸಾಯುವುದೆಂತು?

ಸಮಸ್ಯೆ ಬಗೆಹರಿಸುವ ಪ್ರಾಮಾಣಿಕ ಕಾಳಜಿ ರಾಷ್ಟ್ರನಾಯಕರಿಗಿದ್ದರೆ ಭಯೋತ್ಪಾದಕತೆ ನಿರ್ಮೂಲನಕ್ಕೆ ಜನತಾ ಆಂದೋಲನವೂ ಹುಟ್ಟಿಕೊಳ್ಳುತ್ತದೆ. ತಾನೇನನ್ನೂ ಮಾಡದೆ ಜನರೇ ಮಾಡಬೇಕು ಎಂದರೆ ಕೆಲಸ ಆಗುವುದಿಲ್ಲ. ರಾಜೀವ ಗಾಂಧಿಯವರು ಮೊದಲು ಲೊಂಗೋವಾಲರೊಡನೆ ಮಾಡಿಕೊಂಡ ಒಡಂಬಡಿಕೆಯ ವಿಧಿಗಳನ್ನು ಅನುಷ್ಠಾನಿಸಲು ಹೆಜ್ಜೆಗಳನ್ನಿಡಬೇಕು. ಚಂಡೀಗಢದ ವರ್ಗಾವಣೆ ಕೆಲಸ ಯಾವ ಪ್ರಗತಿಯೂ ಇಲ್ಲದೆ ನಿಂತಿದೆ. ಸೇನಾ ತ್ಯಾಗಿಗಳ ಪುನರ್ವಸತಿ ಕಾರ್ಯದಲ್ಲಿಯೂ ಏನೇನೂ ಪ್ರಗತಿ ಆಗಿಲ್ಲ. 'ಪಂಜಾಬು ಮುಖ್ಯಮಂತ್ರಿ ಬರ್ನಾಲಾ ಅವರೇನೋ ಪಂಜಾಬಿನ ಯುವಕರಿಗೆಸ್ವೋದ್ಯೋಗಕ್ಕೆ ನೆರವಾಗುವ 500 ಕೋಟಿ ರೂಪಾಯಿ ಯೋಜನೆ ಪ್ರಕಟಿಸಿದ್ದಾರೆ. ಇಂಥ ಸದುದ್ದೇಶವನ್ನು ಸಾಬೀತು ಪಡಿಸುವ ಯಾವೊಂದು ಹೆಜ್ಜೆಯನ್ನು ಸಿಕ್ಖರ ಬಗ್ಗೆ ಕೇಂದ್ರ ಸರಕಾರ ಇರಿಸಿದ್ದು ಕಂಡು ಬರುವುದಿಲ್ಲ.

ಆದ್ದರಿಂದ ರಾಜೀವ ಗಾಂಧಿಯವರಿಗೆ ಭಯೋತ್ಪಾದಕತೆ ಹಾಗೂ ಸಿಕ್ಖ ಉಗ್ರಗಾಮಿತ್ವದ ವಿರುದ್ಧವಾಗಿ ಜನತೆಯ ಸಹಕಾರ-ಆಂದೋಲನದ ಸಹಾಯ ದೊರೆಯಬೇಕೆಂಬ ನಿರೀಕ್ಷೆ ಇದ್ದರೆ ಅವರೂ ಪಂಜಾಬ್ ಸಮಸ್ಯೆಯ ನಿವಾರಣೆಯ ನಿಟ್ಟಿನಲ್ಲಿ ರಾಜಕೀಯ ಕ್ರಮಗಳನ್ನು ಅನುಷ್ಠಾನಕ್ಕೆ ತರಬೇಕು.

ಮುಂಗಾರು

ಶನಿವಾರ, ಅಕ್ಟೋಬರ್ 11, 1986

ಮಾರಣ ಹೋಮದ ಪುರೋಹಿತರು

ಅಮೆರಿಕದ ರಕ್ಷಣಾ ಕಾರ್ಯದರ್ಶಿ ಕ್ಯಾಸ್ಪರ್ ವೀನ್‌ಬರ್ಗರ್ ಅವರು ಇಂದು ಭಾರತಕ್ಕೆ ಬರಲಿದ್ದಾರೆ. ಚೀನದಲ್ಲಿ ನಾಲ್ಕು ದಿನ ನಿಂತು ಮಾತುಕತೆ ನಡೆಸಿದ ನಂತರ ಅವರು ಭಾರತ ಯಾತ್ರೆ ಕೈಗೊಂಡಿದ್ದಾರೆ. ಚೀನದೊಡನೆ ಅಮೆರಿಕ ಬೆಳೆಸುತ್ತಿರುವ ಬಾಂಧವ್ಯದಲ್ಲಿ ವೀನ್‌ಬರ್ಗರ್ ಅವರ ಭೇಟಿ ಒಂದು ಮಹತ್ವದ ಹೆಜ್ಜೆ.

ವೀನ್‌ಬರ್ಗರ್ ಅವರ ಚೀನಾ ಭೇಟಿಯೂ ಅದರ ನಂತರದ ಭಾರತ ಯಾತ್ರೆಯೂ ಅಮೆರಿಕದ ದೃಷ್ಟಿಯಲ್ಲಿ ಹೆಚ್ಚು ಕಡಿಮೆ ಒಂದೇ ಉದ್ದೇಶಕ್ಕೆ ನಡೆಯುತ್ತಿರುವಂತಹದ್ದು. ಚೀನ ಹಾಗೂ ಭಾರತಗಳೆರಡೂ ಅಮೆರಿಕಕ್ಕೆ ಇತ್ತೀಚಿನ ವರೆಗೂ ರಾಜಕೀಯವಾಗಿ ಅಸ್ಪೃಶ್ಯವಾಗಿದ್ದವು. ಚೀನದಲ್ಲಿ ಕಮ್ಯೂನಿಸ್ಟ್ ಮಾದರಿ ಸರಕಾರವಿದೆಯೆಂಬ ಹಾಗೂ ಕಮ್ಯೂನಿಸಮನ್ನು ಅದು ಜಾಗತಿಕ ಮಟ್ಟದಲ್ಲಿ ವಿಸ್ತರಿಸಲು ಪ್ರಯತ್ನಿಸುತ್ತಿದೆಯೆಂಬ ಕಾರಣಕ್ಕೆ ಆ ದೇಶದೊಡನೆ ಅಮೆರಿಕವು ಭದ್ರ ವೈರವನ್ನು ತಾಳಿ ತೈವಾನ್‌ನ ಚಿಯಾಂಗ್ ಕೈಶೇಕರ ಸೂತ್ರದಗೊಂಬೆ ಸರಕಾರವೇ ಚೀನದ ರಾಷ್ಟ್ರೀಯತೆಯನ್ನು ಪ್ರತಿನಿಧಿಸುವುದೆಂದು ಪಟ್ಟುಹಿಡಿದು ಪ್ರತಿಪಾದಿಸಿತ್ತು. ಈ ಕಾರಣಕ್ಕಾಗಿಯೇ ಅನೇಕ ದಶಕಗಳ ಕಾಲ ಜನತಾ ಚೀನಕ್ಕೆ ವಸ್ತುತಃ ಜಾಗತಿಕ ಸಮುದಾಯದ ಮಾನ್ಯತೆಯನ್ನೀಯುವ ವಿಶ್ವ ಸಂಸ್ಥೆಯ ಸದಸ್ಯತನ ದೊರೆತಿರಲಿಲ್ಲ.

ಭಾರತವೂ ಅಷ್ಟೆ. ಜವಹರಲಾಲ ನೆಹರೂ ಕಾಲದಲ್ಲಿ ಅಲಿಪ್ತ ಚಳವಳಿಯ ಸ್ಥಾಪನೆಯಾಗಿ ಭಾರತ ಅದರ ಪ್ರಮುಖ ನಾಯಕನೆನಿಸಿ ಸಾಮ್ರಾಜ್ಯಶಾಹಿ ದೇಶಗಳು ಅಮೆರಿಕದ ಹಿರಿತನದಲ್ಲಿ ಈ ಭೂಗೋಲದ ಮೇಲೆ ನಡೆಸುತ್ತಿರುವ ಅನ್ಯಾಯ-ಅನೀತಿ-ಅತ್ಯಾಚಾರಗಳನ್ನು ಬಯಲುಗೊಳಿಸಲು ತೊಡಗಿದ ಮೇಲೆ ಭಾರತವೂ ಅಮೆರಿಕದ ನಾಯಕರಿಗೆ ಅಸ್ಪೃಶ್ಯವೆನಿಸಿತು. ಪಿ.ಎಲ್. 480 ರ ಮೂಲಕವೂ ಪೀಸ್‌ಕೋರ್ ಸ್ವಯಂ ಸೇವಕರ ಮೂಲಕವೂ ಮತ್ತಿತರ ಸಹಯೋಗದ ಮೂಲಕವೂ ಭಾರತವನ್ನು ಹಂಗಿಗೊಳಪಡಿಸುವ ಪ್ರಯತ್ನವನ್ನು ಭಾರತವು ಸ್ವಾತಂತ್ರ್ಯ ಪಡೆದ ಹೊಸದರಲ್ಲಿ ಅಮೆರಿಕ ಮಾಡಿದ್ದುಂಟು. ಈ ತಂತ್ರಗಳು ಸಫಲವಾಗಲಾರವೆಂಬ ಸತ್ಯದ ಸಾಕ್ಷಾತ್ಕಾರ ಅಲಿಪ್ತ ಚಳವಳಿಯ ರೂಪದಲ್ಲಿ ಅಮೆರಿಕದ ಮುಂದೆ ಬಂದ ನಂತರದಲ್ಲಿ ಭಾರತ ಅಮೆರಿಕಕ್ಕೆ ಬೇಡವಾಯಿತು. ಜತೆಗೆ ಭಾರತ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಹಾದಿಯಲ್ಲೇ ಸಾಗದೆ ಮಿಶ್ರ ಆರ್ಥಿಕತೆಯನ್ನು ಮೈಗೂಡಿಸಿಕೊಳ್ಳುವ ಪ್ರಯತ್ನ ನಡೆಸಿದ್ದು-ಸಾರ್ವಜನಿಕ ರಂಗಕ್ಕೆ ಆದ್ಯತೆ ಕೊಟ್ಟದ್ದು—ಇವೆಲ್ಲ ವಿಚಾರಗಳೂ ಭಾರತದ ದಾರಿ ಅಮೆರಿಕಕ್ಕೆ ಪಥ್ಯವಾಗದೆ ಇರಲು ಕಾರಣವಾಯಿತು.

ಇದರ ಪರಿಣಾಮವೇ ಅಮೆರಿಕ ಭಾರತವನ್ನು ದೂರ ಮಾಡಿ ಮಿಲಿಟರಿ ಸರ್ವಾಧಿಕಾರವಿದ್ದರೂ ಪಾಕಿಸ್ತಾನವನ್ನು ಸಮೀಪಕ್ಕೆ ಕರೆದುಕೊಳ್ಳಲು ಕಾರಣ. ಇದು ಅಮೆರಿಕದ ಸ್ವಹಿತಾಸಕ್ತಿಯನ್ನು ತೋರಿಸಿಕೊಡುತ್ತದಷ್ಟೆ. ಜಗತ್ತಿನ ಅತ್ಯಂತ ಬಲಾಢ್ಯ ಪ್ರಜಾಸತ್ತಾತ್ಮಕ ರಾಷ್ಟ್ರವೆನಿಸಿದ ಆ ದೇಶ ಜಾಗತಿಕ ವ್ಯವಹಾರಗಳಲ್ಲಿ ನೀತಿ—ನಿಯಮಗಳ ಕಟ್ಟು ಪಾಡಿಗೆ ಬದ್ಧವಾಗದೆ ಸ್ವಹಿತ ಸಾಧನೆಗಾಗಿ ತಾನು ಸಾಗಿದ್ದೇ ದಾರಿ ನಡೆದದ್ದೇ ನೀತಿ ಎಂಬಂತೆ ವರ್ತಿಸುತ್ತಿರುವುದಕ್ಕೆ ಸಾವಿರ ಉದಾಹರಣೆಗಳುಂಟು. ದಕ್ಷಿಣ ಆಫ್ರಿಕದ ವರ್ಣಭೇದದ ಸರಕಾರವನ್ನು ರಕ್ಷಿಸುತ್ತಿರುವ ರೇಗನ್ ಪ್ರಭುತ್ವದ ನಡವಳಿಕೆ ಇದಕ್ಕೊಂದು ಸಣ್ಣ ಉದಾಹರಣೆ ಅಷ್ಟೆ.

ಇಂದು ಕ್ಯಾಸ್ಪರ್ ಏಶ್ಯದ ಯಾತ್ರೆ ಕೈಗೊಂಡಿರುವುದೂ ಪ್ರಪಂಚದ ಈ ಭಾಗದ ಜನಾಂಗಗಳ ಉದ್ಧಾರ ಮಾಡುವುದಕ್ಕಲ್ಲ. ಈ ಪ್ರದೇಶ ಆರ್ಥಿಕವಾಗಿಯೂ ಸೈನಿಕವಾಗಿಯೂ ಅಮೆರಿಕಕ್ಕೆ ಬಹಳ ಅನುಕೂಲಕರವಾಗಲಿದೆಯೆಂಬ ತಿಳುವಳಿಕೆಯೇ ಅವರನ್ನಿಲ್ಲಿಗೆ ತಂದಿದೆ. ಇಲ್ಲಿನ ನೆರೆಹೊರೆಯ ಸಂಬಂಧ ತುಂಬ ಜಟಿಲವಾದದ್ದು. ಇಲ್ಲಿ ಗಡಿ ಪ್ರಶ್ನೆಗಳಿವೆ. ಕಾಶ್ಮೀರದಂತಹ ಸಿಕ್ಕು-ಸಿಕ್ಕಾದ ಸಮಸ್ಯೆಗಳಿವೆ. ಖಾಲಿಸ್ತಾನದಂತಹ ಕ್ಷೋಭೆಗಳಿವೆ. ಶ್ರೀಲಂಕೆಯಲ್ಲಿ ತಮಿಳು ಪ್ರತ್ಯೇಕತೆಯ ಕೂಗು ಕೇಳಿಸುತ್ತಿದೆ. ಹೀಗೆ ರಾಷ್ಟ್ರೀಯ ಹಿತಾಸಕ್ತಿಗಳ ತಾಕಲಾಟ ಇದೆ. ಈ ವಿಚಾರಗಳ ಮೇಲೆ ಉಪಖಂಡದಲ್ಲಿ ಯುದ್ಧಗಳೂ ಆಗಿವೆ. ಸಂಬಂಧ ಪಟ್ಟ ದೇಶಗಳು ಸೈನ್ಯ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿವೆ. ಆಕ್ರಮಣ-ಪ್ರತ್ಯಾಕ್ರಮಣದ ಹಂತವನ್ನು ಹೆಚ್ಚಿಸಿಕೊಳ್ಳಲು ಇಲ್ಲದ ಹಣವನ್ನು ಖರ್ಚು ಮಾಡಿ ಹೆಣಗಾಡುತ್ತಿವೆ.

ಇದೆಲ್ಲ ಅಮೆರಿಕಕ್ಕೂ ಗೊತ್ತಿದೆ. ಆದ್ದರಿಂದಲೇ ಈ ಕ್ಷೋಭೆಗಳ ನಿಟ್ಟಿನಲ್ಲಿ ಬೇಳೆಯನ್ನು ಬೇಯಿಸಿಕೊಳ್ಳುವ ಯತ್ನ ಅದರದ್ದು. ಅಮೆರಿಕದ ರಕ್ಷಣಾ ಕಾರ್ಯದರ್ಶಿ ಭಾರತಕ್ಕೆ ಬರುತ್ತಿರುವುದು ಇದೇ ಮೊದಲು. ಅವರು ಭಾರತಕ್ಕೆ ಶಸ್ತ್ರಾಸ್ತ್ರ ಕ್ಷೇತ್ರದಲ್ಲಿ ನೆರವಾಗುವ ಕೊಡುಗೆಗಳನ್ನು ನೀಡುತ್ತಾರೆಂಬ ಸುದ್ದಿ ಉಂಟು. ಭಾರತದ ವಾಯು ಸೇನೆಗೆ ಲಘು ಸಮರ ವಿಮಾನಗಳಿಗೆ ಅಮೆರಿಕದ ಇಂಜಿನುಗಳನ್ನು ಅಳವಡಿಸುವ ಸಾಧ್ಯತೆಯ ಸೂಚನೆಯುಂಟು.

ಅದೇನೇ ಇರಲಿ. ಭಾರತದ ಆದ್ಯತೆ ಇಲ್ಲಿನ ಸುಮಾರು ಎಪ್ಪತ್ತು ಕೋಟಿ ಜನರಿಗೆ ಒಳ್ಳೆಯ ಬದುಕನ್ನು ತಂದು ಕೊಡುವಂತಹದ್ದು. ಅದಕ್ಕಾಗಿ ಅಭಿವೃದ್ಧಿ ಯೋಜನೆಯನ್ನು ರೂಪಿಸಿ ಅನುಷ್ಠಾನಿಸುವ ಮಹತ್ವದ ಜವಾಬ್ದಾರಿ ಈ ದೇಶದ್ದು. ಹಾಗೂ ಅಂಥ ಯೋಜನೆಗಳ ಫಲವು ಯಾರ್ಯಾರ ಜೇಬಿಗೆ ಹೋಗದೆ ಜನ ಸಾಮಾನ್ಯರಿಗೆ ದೊರೆಯುವಂತೆ ನೋಡಿಕೊಳ್ಳಬೇಕಾದ ಹೊಣೆ ಸರಕಾರದ್ದು. ಈಗ ಅಮೆರಿಕದ ಮುಂದೆ ಆ ದೇಶದ ಜನ ಹಾಗೂ ಸರಕಾರ ಇರಿಸಬೇಕಾದ ಪ್ರಶ್ನೆ ಇದು. "ಈ ಕಾಯಕದಲ್ಲಿ ನೀವು ನಮ್ಮೊಂದಿಗೆ ಸಹಕರಿಸುವಿರಾ? ಜಗತ್ತಿನ ಅತಿ ಶ್ರೀಮಂತರಾಗಿರುವ ನೀವು ಈ ದೇಶದ ದೀನರ ಬದುಕನ್ನು ಹಸನು ಮಾಡುವ ಕಾರ್ಯಕ್ರಮಗಳಿಗೆ ಒತ್ತಾಸೆ ಕೊಡುವಿರಾ?" ಅಂಥ ಆಶಯವೇನಾದರೂ ಅಮೆರಿಕಕ್ಕಿದ್ದರೆ ಕ್ಯಾಸ್ಪರ್‌ರಂಥವರಿಗೆ ಇಲ್ಲಿ ಸ್ವಾಗತವಿದೆ. ಬದಲಾಗಿ ಯುದ್ಧದ ಮಾರಣ ಹೋಮದಲ್ಲಿ ಉಪಖಂಡದ ಜನರ ಜೀವವನ್ನು ಆಹುತಿ ಕೊಡಲು ಸಹಾಯ ಮಾಡುವ ಯುದ್ಧೋಪಕರಣಗಳು ನಮಗೆ ಬೇಕಾಗಿಲ್ಲ.

ಮುಂಗಾರು

ಮಂಗಳವಾರ, ಅಕ್ಟೋಬರ್ 28, 1986

ಕೆಟ್ಟ ಸಂಸ್ಕೃತಿಗೆ ಕಡಿವಾಣ ಬೇಕು

ಮಹಾರಾಷ್ಟ್ರದಲ್ಲಿ 1300ಕ್ಕೂ ಹೆಚ್ಚಿನ ಚಲನ ಚಿತ್ರ ಮಂದಿರಗಳು ಈ ತಿಂಗಳ 10ನೇ ದಿನಾಂಕದಿಂದ ಬಂದ್ ಆಚರಿಸುತ್ತಿವೆ. ಮಹಾರಾಷ್ಟ್ರ ಸರಕಾರ ಸಿನೆಮಾ ಟಿಕೆಟಿನ ಮೇಲಿನ ಮಾರಾಟ ತೆರಿಗೆಯನ್ನು ಶೇಕಡಾ ನಾಲ್ಕರಷ್ಟು ಹೆಚ್ಚಿಸಲು ನಿರ್ಧರಿಸಿರುವುದೇ ಚಲಚಿತ್ರ ಉದ್ಯಮದವರ ಈ ಸುದೀರ್ಘ, ಸಾಮೂಹಿಕ ಮುಷ್ಕರಕ್ಕೆ ಕಾರಣ. ಇದನ್ನು ತೀವ್ರಗೊಳಿಸಲು ಚಲನಚಿತ್ರ ಉದ್ಯಮದ ನಾಯಕರು ತೀರ್ಮಾನಿಸಿರುವ ಸುದ್ದಿ ಬಂದಿದೆ. ಈ ತಿಂಗಳ 30ನೇ ದಿನಾಂಕ ಭಾರತದ ಎಲ್ಲೆಡೆಯೂ ಸಾಂಕೇತಿಕ ಸಿನೆಮಾ ಬಂದ್ ಆಚರಿಸಲು ತೀರ್ಮಾನಿಸಲಾಗಿದೆ.

ಮಹಾರಾಷ್ಟ್ರದಲ್ಲಿ ಈಗಾಗಲೇ ಬಹಳಷ್ಟು ಮನರಂಜನಾ ತೆರಿಗೆ ಇದೆ ಎಂಬುದು ನಿಜ. ಎಂಟು ರೂಪಾಯಿಗಳ ಒಂದು ಸಿನೆಮಾ ಟಿಕೆಟಿನಲ್ಲಿ ಐದು ರೂಪಾಯಿ ಹನ್ನೊಂದು ಪೈಸೆಯು ತೆರಿಗೆ ರೂಪದಲ್ಲಿ ಮಹಾರಾಷ್ಟ್ರ ಸರಕಾರಕ್ಕೆ ಸಂದಾಯವಾಗುತ್ತದೆ. ಉಳಿದ ಎರಡು ರೂಪಾಯಿ ಎಂಭತ್ತೊಂಬತ್ತು ಪೈಸೆಯನ್ನು ಚಿತ್ರ ನಿರ್ಮಾಪಕನೂ ವಿತರಣೆಗಾರನೂ ಚಿತ್ರ ಮಂದಿರದ ಮಾಲೀಕನೂ ಪಾಲು ಮಾಡಿಕೊಳ್ಳಬೇಕಾಗುತ್ತದೆ. ಇದೀಗ ಮಾರಾಟ ತೆರಿಗೆಯಲ್ಲಿ ಮತ್ತೆ ಶೇಕಡಾ ನಾಲ್ಕು ಅಂದರೆ ಎಂಟು ರೂ. ಗಳ ಟಿಕೇಟಿನಲ್ಲಿ ಮತ್ತೆ ಹತ್ತು ಪೈಸೆಗಳನ್ನು ತೆಗೆಯಲು ಸರಕಾರ ತೀರ್ಮಾನಿಸಿದೆ.

ಚಿತ್ರರಂಗದಲ್ಲಿ ಮುಖ್ಯವಾಗಿ ಹಿಂದಿ ಸಿನೆಮಾ ಕ್ಷೇತ್ರದಲ್ಲಿ ಕಪ್ಪು ಹಣದ ಕುಳಗಳದೇ ಕಾರುಬಾರು ಎಂಬುದು ಜನಜನಿತ. ನ್ಯಾಯವಾಗಿ ಸಂಪಾದನೆ ಮಾಡಿದ ಹಣವನ್ನು ಯಾರೂ ಸಿನೆಮಾ ನಿರ್ಮಾಣದಲ್ಲಿ ಸುರಿದು ಹಾಳುಮಾಡಿಕೊಳ್ಳಲು ತಯಾರಿರಲಾರರು. ಹಿಂದಿ ಚಿತ್ರರಂಗವು ವೈಭವೋಪೇತವಾದ ಮಾಯಾ ನಗರಿಯಾಗಿ ಬೆಳೆಯಲು ಕಾರಣವಾದದ್ದೇ ಈ ಕಪ್ಪು ಹಣ. ಇದರ ಪರಿಣಾಮವಾಗಿಯೇ ಅದು ಜನಸಾಮಾನ್ಯರಿಗೆ ಕನಸುಗಳ ಕಳ್ಳು ಕುಡಿಸುವ ದಂಧೆಯಾಗಿ ಬೆಳೆದದ್ದು. ಸುಲಭದ ಹಣವನ್ನು ಚೆಲ್ಲಿ ಅದನ್ನು ಸುಲಭಕ್ಕೆ ಎರಡೋ ಮೂರೋ ಪಟ್ಟು ಮಾಡುವ ವ್ಯವಹಾರವಾಗಿ ಚಿತ್ರರಂಗ ಪರಿಣಮಿಸಿದೆ.

ಚಿತ್ರವೊಂದಕ್ಕೆ ಕೋಟಿಗಟ್ಟಲೆ ರೂಪಾಯಿಗಳನ್ನು ಚಿತ್ರ ನಿರ್ಮಾಪಕರು ಖರ್ಚುಮಾಡುತ್ತಾರೆ. ಅದ್ದೂರಿಯ ಸೆಟ್‌ಗಳನ್ನು ನಿರ್ಮಿಸುತ್ತಾರೆ. ದೇವಾಲಯದಲ್ಲಿ ಶೂಟಿಂಗ್ ನಡೆಯಬೇಕೆಂದರೆ ಹೊಸ ದೇವಸ್ಥಾನವನ್ನೇ ಕಟ್ಟುತ್ತಾರೆ. ಬಂಗಲೆ ಬೇಕಿದ್ದರೆ ಹೊಸ ಬಂಗಲೆ ನಿರ್ಮಾಣವಾಗುತ್ತದೆ. ಈ ಪ್ರಪಂಚದಲ್ಲೆಲ್ಲಿಯೂ ಕಾಣಸಿಗದಂತಹ ಕೃತಕ ವಾತಾವರಣವನ್ನು ಯಾರಿಗೂ ನಂಬಿಕೆ ಬಾರದಂತಹ ವಿಧಾನದಲ್ಲಿ ನಿರ್ಮಿಸಿ ಕಥಾ ನಾಯಕಿ-ನಾಯಕರನ್ನು ಅಲ್ಲಿ ಕುಣಿಸಲು ನಿರ್ಮಾಪಕರು ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಾರೆ.

ಇವೆಲ್ಲವೂ ಕಲೆಯ ಉದ್ಧಾರಕ್ಕಾಗಿ ಅಲ್ಲ. ಜನತೆಯ ಮನರಂಜನೆಗಾಗಿಯೂ ಅಲ್ಲ. ಯಾಕೆಂದರೆ ಮನರಂಜನೆಗೆ ಜನತೆಗೆ ಏನುಬೇಕು ಎಂದು ಯಾರೂ ಕೇಳುವುದಿಲ್ಲ. ಜನರು ಹೇಳುವುದೂ ಇಲ್ಲ. ಸಿನೆಮಾ ಲೋಕದ ಈ ಮಂದಿ ಕೊಟ್ಟದ್ದೇ ಮನರಂಜನೆ. ಅವರು ಕಟ್ಟಿದ್ದೇ ಕತೆ. ಅವರಿಗನಿಸಿದ ವಿಕೃತ ಸ್ವರಗಳೇ ಸಂಗೀತ. ಅವರು ಕುಣಿದದ್ದೇ ನೃತ್ಯ. ಇವೆಲ್ಲವೂ ದುಡಿಕೆಹಣ ಮಾಡುವುದಕ್ಕಾಗಿ.

ಈ ಸಿನೆಮಾ ರಂಗ ನಮ್ಮ ಯುವ ಪೀಳಿಗೆಯನ್ನು ಹಾಳುಮಾಡಿದೆ. ಈಗಾಗಲೇ ಸಾಕಷ್ಟು ಹಾನಿ ಆಗಿದೆ. ನಿಜ ಜೀವನವನ್ನು ಎದುರಿಸುವ ಸಾಮರ್ಥ್ಯವನ್ನು ಅವರು ಕಳೆದುಕೊಳ್ಳುತ್ತಿದ್ದಾರೆ. ಸಿನೆಮಾ ನೋಡಿ ಅದೇ ನಿಜ ಜಗತ್ತು ಎಂಬ ಭ್ರಮೆಯ ಪೊರೆಯೊಂದು ಅವರಲ್ಲಿ ಬೆಳೆಯುತ್ತಿದೆ. ಆ ಲೋಕದ ಕೃತಕತೆಯು, ಬಣ್ಣದ ನಡವಳಿಕೆಗಳು ನಮ್ಮ ನಗರದ ಬದುಕಿನ ತಿರುಳನ್ನು ತಲುಪಲು ಶುರುವಾಗಿದೆ.

ಸಿನೆಮಾ ನಮ್ಮ ಸಮಾಜವನ್ನು ಹಾಳುಮಾಡುತ್ತಿದೆ ಎಂಬುದು ಇಂದು ವಿಚಾರವಂತರಾದ ಎಲ್ಲರೂ ಕಂಡುಕೊಂಡಿರುವ ಸತ್ಯ. ಮಹಾರಾಷ್ಟ್ರ ಸರಕಾರದ ಮನರಂಜನಾ ತೆರಿಗೆ ನೀತಿ ಹಾಗೂ ಅದರಿಂದುಂಟಾದ ಇಂದಿನ ಕ್ಷೋಭೆ–ಒತ್ತಟ್ಟಿಗಿರಲಿ. ಈ ಹಾಳು ಸಿನೆಮಾ ರಂಗದ ಮಹತ್ವವನ್ನು ಕುಗ್ಗಿಸುವ ಪರಿಣಾಮಕಾರಿ ಕ್ರಮವನ್ನು ಸಮಾಜದ ಮುಖಂಡರು ಬೇಗನೆ ಮಾಡಬೇಕಾಗಿದೆ. ಇತ್ತೀಚೆಗೆ ತಾನೇ ಭಾರತದಲ್ಲಿ ಜಾಲ ಬೆಳೆಸಿಕೊಂಡು ಜನಪ್ರಿಯವಾಗುತ್ತಿರುವ ಟಿ. ವಿ. ಯಲ್ಲಿಯೂ ಈ ಕೆಟ್ಟ ಸಿನೆಮಾದ ಹಾವಳಿ ತಪ್ಪಿಲ್ಲ. ನಾಯಕ–ನಾಯಕಿಯರು ದೇಹ ಕುಣಿಸುತ್ತ ಗಿಡ ಸುತ್ತುವ ಕೆಟ್ಟ ದೃಶ್ಯಗಳನ್ನು ಅದರಲ್ಲಿ ದಿನನಿತ್ಯವೂ ಎಂಬಂತೆ ತೋರಿಸಲಾಗುತ್ತದೆ. ಟಿ.ವಿ. ಎಂಬುದು ಬಲು ಶಕ್ತಿಶಾಲಿ ಮಾಧ್ಯಮ. ಮನರಂಜನೆ ಹೆಸರಲ್ಲಿ ಅದು ಇಂಥ ಕೆಟ್ಟ ಸಂಸ್ಕೃತಿ ಬೆಳೆಸಬೇಕಾಗಿಲ್ಲ. ಮಕ್ಕಳಿಗೆ ಜ್ಞಾನವನ್ನು ನೀಡುವ ಜತೆಗೆ ರಂಜಕವೂ ಆದ ಕಾರ್ಯಕ್ರಮ ಕೊಡಬಹುದು. ಪ್ರಾಣಿ–ಪಕ್ಷಿ, ಭೂಗೋಳದ ಬಗೆಗೆ ಮಾಹಿತಿ ನೀಡಬಹುದು. ಸಾಹಸ ಯಾತ್ರೆಗಳ ಸಿನೆಮಾ ತೋರಿಸಬಹುದು. ನಾಟಕ, ಜಾನಪದ ಕುಣಿತ, ಶಿಲ್ಪಕಲೆ, ಚಿತ್ರಕಲೆ ಇವುಗಳ ಮೇಲಿನ ಕಾರ್ಯಕ್ರಮ ಒದಗಿಸಬಹುದು.

ಮುಂಬಯಿಯಲ್ಲಿ ಎರಡು ವಾರಗಳಿಗೂ ಮಿಕ್ಕಿ ಸಿನೆಮಾ ಬಂದ್ ಆಗಿರುವುದರ ಪರಿಣಾಮವನ್ನು ಸ್ವಲ್ಪ ಪರಿಶೀಲಿಸೋಣ. ಅಲ್ಲಿ ಸರ್ಕಸ್ಸು ಕಂಪೆನಿಗಳಿಗೆ ಆದಾಯ ಏರಿದೆ. ನಾಟಕಗಳು ಚೆನ್ನಾಗಿ ನಡೆಯತೊಡಗಿವೆ. ಇಂದ್ರಜಾಲ ಪ್ರದರ್ಶನಕ್ಕೆ ಅವಕಾಶ ದೊರೆತಿದೆ. ಈ ವಿದ್ಯಮಾನದ ಕುರಿತು ನಮ್ಮ ಸಮಾಜ ಕೊಂಚ ಗಮನಿಸಿದರೆ ಸಮಾಜ ಸ್ವಾಸ್ಥ್ಯವನ್ನು ಮರಳಿ ತರುವ ದಾರಿ ಕಾಣಿಸೀತು. ಕೆಟ್ಟ ಸಿನೆಮಾವನ್ನು ಪೋಷಿಸುವ ಭರದಲ್ಲಿ ಸರ್ಕಸಿನಂತಹ, ನಾಟಕದಂತಹ ಕಲಾಪ್ರಕಾರಗಳನ್ನು ನಾವು ಮೂಲೆಗೆ ದೂಡಿದ್ದೇವೆ.

ತೆರಿಗೆಯೋ ಇನ್ನೇನೋ – ಯಾವುದೇ ದಾರಿಯಿಂದಲಾದರೂ ಸಿನೆಮಾದ ವರ್ಚಸ್ಸನ್ನು ಕುಗ್ಗಿಸುವ ಕೆಲಸವನ್ನು ನಮ್ಮ ಸಮಾಜ – ಸರಕಾರ ಮಾಡಬೇಕು. ಇದರಿಂದ ಸಮಾಜಕ್ಕೆ ಹಿತವಾದೀತು.

ಮುಂಗಾರು

ಶನಿವಾರ, ನವಂಬರ್ 22, 1986

ಈ ಕಾಯಿದೆ ಬೇಡ

ಮಂಗಳವಾರ ಲೋಕಸಭೆಯಲ್ಲಿ ವಿಧೇಯಕವೊಂದು ಮಂಜೂರಾಯಿತು. ಅಂಚೆಪತ್ರಗಳನ್ನು ಹಾಗೂ ಸಾಮಗ್ರಿಗಳನ್ನು ರವಾನೆಯ ಮಧ್ಯೆ ತಡೆಹಿಡಿದು, ವಶಕ್ಕೆ ತೆಗೆದುಕೊಳ್ಳುವ, ಅವುಗಳನ್ನು ತೆರೆದು ಪರಿಶೀಲಿಸುವ ಹಾಗೂ ಅಗತ್ಯವೆನಿಸಿದರೆ ನಾಶಪಡಿಸುವಂತಹ ಅಧಿಕಾರವನ್ನು ಈ ತಿದ್ದುಪಡಿ ವಿಧೇಯಕದ ಮೂಲಕ ಸರಕಾರವು ಕೈಗೆ ತೆಗೆದುಕೊಂಡಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷ ಸದಸ್ಯರು ಕೂಡ ಈ ತಿದ್ದುಪಡಿಯನ್ನು ವಿಶೇಷವಾಗಿ ಪ್ರತಿಭಟಿಸಲಿಲ್ಲ. ಈ ಅವಕಾಶದ ದುರುಪಯೋಗ ಸಲ್ಲದು ಎಂಬ ಬಾಯಿ ಭರವಸೆಯನ್ನು ಅವರು ಸಚಿವರಿಂದ ಪಡೆದುಕೊಂಡಿದ್ದಾರೆ. ಆ ಮೂಲಕ ಬಲು ಅಪಾಯಕಾರಿಯಾದಂತಹ, ಮುಕ್ತ ಸಮಾಜದ ನಮ್ಮ ವ್ಯವಸ್ಥೆಗೇ ಹಾನಿ ಮಾಡಬಲ್ಲಂತಹ ಶಾಸನ ಕ್ರಮವೊಂದಕ್ಕೆ ಅಂಗೀಕಾರ ಮುದ್ರೆಯೊತ್ತಿದ್ದಾರೆ. ಈಗ ಈ ವಿಧೇಯಕವು ರಾಜ್ಯಸಭೆಗೆ ಹೋಗಿದೆ.

ಅಂಚೆ ಇಲಾಖೆ ಜನರ ಬದುಕಿನ ಜೀವನಾಡಿ. ವ್ಯಾಪಾರ, ವಾಣಿಜ್ಯ, ಸಂಸ್ಕೃತಿ, ಸಾಹಿತ್ಯ, ಶಿಕ್ಷಣ ಹಾಗೂ ಖಾಸಗಿ ಬದುಕಿನ ವ್ಯಾಪ್ತಿ ಕೂಡ ಅಗಾಧವಾಗಿ ಬೆಳೆದಿರುವಂತಹ ಈ ಆಧುನಿಕ ಯುಗದಲ್ಲಿ ಅಂಚೆಯ ಸೌಲಭ್ಯ ಇಲ್ಲದಿರುವಂತಹ ಒಂದು ಪರಿಸ್ಥಿತಿಯನ್ನು ಕಲ್ಪಿಸುವುದಕ್ಕೂ ಕಷ್ಟ. ಕೇವಲ ಅಂಚೆ ವಿಲೇವಾರಿಯ ಜಾಲ ಇದ್ದರೆ ಸಾಲದು. ಅದು ಸಮರ್ಥವಾಗಿ ಕೆಲಸ ಮಾಡಬೇಕು ಕೂಡಾ. ವಿಶ್ವಾಸಾರ್ಹತೆ ಎಂಬುದು ಇಂತಹ ಸಾಮರ್ಥ್ಯದ ಒಂದು ಮಹತ್ವಪೂರ್ಣ ಭಾಗ. ವಿಶ್ವಾಸಾರ್ಹತೆ ನಷ್ಟವಾದರೆ ಎಲ್ಲವೂ ನಷ್ಟವಾದಂತೆ. ಜನರು ನಂಬಿಕೆಯಿಡುವುದು ಸಾಧ್ಯವಿಲ್ಲದಂತಹ ಸ್ಥಿತಿ ಅಂಚೆ ಇಲಾಖೆಗೆ ಬಂದರೆ ಅದು ಇದ್ದೂ ಸತ್ತಂತೆ. ಹಾಗಾದಾಗ ಜನಜೀವನ ಅಸ್ತವ್ಯಸ್ತವಾದೀತು. ವ್ಯಾಪಾರ ವಾಣಿಜ್ಯಗಳು ತಲೆ ಕೆಳಗಾದೀತು ಸಂಪರ್ಕ ಜಾಲದ ಒಂದು ಮಹತ್ವದ ಅಂಗವಾಗಿರುವ ಅಂಚೆಯ ವಿಶ್ವಾಸದ ನೆಲೆ ಕುಸಿದು ಹೋದರೆ ಸಮಾಜವನ್ನು ಒಳಗಿನಿಂದಲೇ ಕೊರೆಯುವ ಸಮಾಜ ಕಂಟಕರ ಕುತಂತ್ರಗಳಿಗೆ ಬಲ ಬಂದೀತು. ಅವರ ಕೆಲಸ ಸುಲಭವಾದೀತು.

ಇಂದು ಸರಕಾರ ಮಾಡಿರುವುದು ಅದೇ ಕೆಲಸ. ಜನರ ಕಣ್ಣಲ್ಲಿ ಅಂಚೆ ಇಲಾಖೆಯ ವಿಶ್ವಾಸಾರ್ಹತೆಯನ್ನು ಕೆಡಿಸುವ ಕೆಲಸ. ಮೊನ್ನೆಮೊನ್ನೆಯವರೆಗೆ ಅಂಚೆ ಇಲಾಖೆಯಲ್ಲಿ ಪ್ರಮಾದಗಳು ಕಡಿಮೆ ಎಂಬ ಖ್ಯಾತಿ ಅದಕ್ಕಿತ್ತು. ಆದರೆ ಇತ್ತೀಚೆಗೆ ಅದು ಕರಗ ತೊಡಗಿದೆ. ಇಲಾಖೆಯೊಳಗಡೆ ನೌಕರಶಾಹಿಯ ಹಸ್ತಕ್ಷೇಪಕ್ಕೆ ಅಂಕುಶವಿಲ್ಲದ ಅವಕಾಶ ಮಾಡಿಕೊಟ್ಟರೆ ಅಂಚೆಯ ವಿಶ್ವಾಸಾರ್ಹತೆಯನ್ನೂ ಸಾಮರ್ಥ್ಯವನ್ನು ಸಂಪೂರ್ಣ ಕೆಡಿಸಿದಂತೆ.

ಅಂಚೆ ಸಾಮಗ್ರಿಗಳನ್ನು ಸರಕಾರ ತಡೆದು ತೆರೆಯುವುದಕ್ಕೆ ಅವಕಾಶ ಮಾಡುವ ಮೂಲ ಶಾಸನ ಬಂದದ್ದು 1898ರಲ್ಲಿ- ಬ್ರಿಟಿಷರ ಕಾಲದಲ್ಲಿ. ಸ್ವಾತಂತ್ರ್ಯದ [illegible]ಕೆಯ ಕೆಚ್ಚಿನ ಕಿಡಿಗಳು ಕಾಣಿಸಿಕೊಂಡ ಅಂದಿನಿಂದ ಮೊನ್ನೆಯ ತನಕವೂ ಇಂಥ ತೆರೆದು ಓದುವಿಕೆಗೆ ನಿರ್ದಿಷ್ಟ ಕಾರಣಗಳ ಸಮರ್ಥನೆ ಜ [illegible] ಒದಗಿಸಬೇಕಿತ್ತು. "ಸಾರ್ವಜನಿಕ ತುರ್ತಿನ ಪರಿ[illegible]ಯಲ್ಲಿ. ಸಾರ್ವಜನಿಕ ಭದ್ರತೆ ಹಾಗೂ ಶಾಂತಿ ಪಾಲನೆ"ಗಾಗಿ ಮಾತ್ರ ಅಂಚೆ ತಡೆಹಿಡಿಯಬಹುದಾಗಿತ್ತು. ಈಗ ಹಾಗಲ್ಲ "ಭಾರತದ ಸಾರ್ವಭೌಮತೆ ಹಾಗೂ ಸಮಗ್ರತೆ ರಕ್ಷಣೆಗಾಗಿ, ರಾಷ್ಟ್ರದ ಭದ್ರತೆಗಾಗಿ, ವಿದೇಶಿ ರಾಷ್ಟ್ರವೊಂದರೊಡನಿರುವ ಸ್ನೇಹದ ರಕ್ಷಣೆಗಾಗಿ, ಅಪರಾಧವನ್ನು ಪ್ರಚೋದಿಸುವ ಯತ್ನಗಳನ್ನು ತಡೆಯುವುದಕ್ಕಾಗಿ" ಅಂಚೆಯನ್ನೀಗ ಅಧಿಕಾರಿಗಳು ವಶಕ್ಕೆ ತೆಗೆದುಕೊಳ್ಳಬಹುದಾಗಿದೆ.

ಶಾಸನವನ್ನು ಇಷ್ಟು ವ್ಯಾಪಕವಾಗಿಸುವ ಅಗತ್ಯವೇನಿತ್ತು? 'ಸಾರ್ವಜನಿಕ ಭದ್ರತೆ ಹಾಗೂ ಶಾಂತಿ ಪಾಲನೆಗಾಗಿ" ಎಂಬ ಕಾರಣವು ಸಾಕಾಗುತ್ತಿರಲಿಲ್ಲವೇ? ಈ ವಿಧಿಯೇ ಸಾಕಷ್ಟು ವ್ಯಾಪಕವಾಗಿದೆ. ಅದರ ವಿಸ್ತರಣೆ ಖಂಡಿತಾ ಬೇಕಾಗಿರಲಿಲ್ಲ. ಇದರ ಪರಿಣಾಮವಾಗಿ ಯಾರೇ ಪೊಲೀಸಧಿಕಾರಿ ಅಂಚೆ ಕಚೇರಿಗೆ ಬಂದು ತನಗೆ ಬೇಕಾದ ಅಂಚೆಯನ್ನು ವಶಕ್ಕೆ ತೆಗೆದುಕೊಳ್ಳಬಹುದಾಗಿದೆ.

ಇದರ ಉಪಯೋಗವನ್ನು ಅಧಿಕಾರದಲ್ಲಿರುವ ರಾಜಕೀಯ ಪಕ್ಷವು ಎದುರಾಳಿಗಳನ್ನು ದಮನಿಸುವುದಕ್ಕೆ ಉಪಯೋಗಿಸುವಂತಹ ಸಾಧ್ಯತೆ ಬಹಳಷ್ಟು ಇದೆ. ಯಾವ ಅಧಿಕಾರಿ ಅಂಚೆಯನ್ನೊಡೆಯ ಅಧಿಕಾರ ಹೊಂದಿರುತ್ತಾನೆಂಬ ಶರ್ತವೇನೂ ಕಾನೂನಿನಲ್ಲಿಲ್ಲ. ಹೀಗಿರುವಾಗ ಭಟ್ಟಂಗಿಗಳಾಗ ಬಯಸುವ ನೌಕರಶಾಹಿಯ ಮಂದಿ ರಾಜಕೀಯ ಮುಖಂಡರ ಮರ್ಜಿಗೆ ಮಣೆ ಹಾಕುವ ಅಪಾಯವಿದೆ.

ಸರಕಾರವೇನೋ ಇದರ ದುರುಪಯೋಗ ಆಗಲಾರದೆಂದು ಆಶ್ವಾಸನೆ ಕೊಟ್ಟಿದೆ. ಇಂಥ ಆಶ್ವಾಸನೆಗಳು ಹಿಂದೆ ಹಲವು ವಿಚಾರಗಳಿಗೆ ಸಂಬಂಧಿಸಿ ಹಲವು ಬಂದಿವೆ. ಯಾವುವೂ ಪಾಲನೆಯಾದದ್ದಿಲ್ಲ. 'ಮಿಸಾ' ಕಾಯಿದೆಯಲ್ಲಾಗಲಿ, ರಾಷ್ಟ್ರೀಯ ಭದ್ರತಾ ಕಾನೂನಿನ ವಿಚಾರದಲ್ಲಾಗಲಿ ಸಂಸತ್ತಿನಲ್ಲಿ ನೀಡಿದ "ಸದುಪಯೋಗದ ಭರವಸೆ" ಯನ್ನು ಸರಕಾರ ಪಾಲಿಸಿದ್ದಿಲ್ಲ. ಅಂಚೆ ತೆರೆದೋದುವ ಶಾಸನದ ದುರುಪಯೋಗ ಹಿಂದೆಯೂ ಆಗಿದೆ. ಮುಂದೆಯೂ ಆಗುವ ಸಾಧ್ಯತೆಯಿದೆ. ರಾಜಕೀಯ ಶಕ್ತಿಗಳ ತಾಕಲಾಟದ ಆರೋಗ್ಯಕರ ಪ್ರಕ್ರಿಯೆ ನಮ್ಮ ನಾಡಿನಲ್ಲಿದೆ. ಮಾನವೀಯ ಹಕ್ಕುಗಳ ರಕ್ಷಣೆಗಾಗಿರುವ ಹೋರಾಟ ಈ ನೆಲದಲ್ಲಿ ಚಿಗುರುತ್ತಿದೆ. ಗ್ರಾಹಕ ಚಳವಳಿಯ ಉಗಮ ಆಗಿದೆ. ಇದೆಲ್ಲ ಅಧಿಕಾರಸ್ಥರಿಗೆ ಅಪಥ್ಯವಾಗಬಹುದು. ರಾಜಕೀಯ ಅಧಿಕಾರಸ್ಥರೊಂದಿಗೂ ವಾಣಿಜ್ಯ ಪ್ರಭುಗಳೊಂದಿಗೂ ಈ ಚಳವಳಿ ಸಂಘರ್ಷಿಸುವುದು ಖಂಡಿತ. ಅಧಿಕಾರಸ್ಥ ಹಿತಾಸಕ್ತಿಗಳು ಇಂಥ ಹೋರಾಟಗಳನ್ನು ಹತ್ತಿಕ್ಕಲು ಯತ್ನಿಸುವುದೂ ಸಾಧ್ಯ. ಇಂಥ ಪರಿಸರದಲ್ಲಿ ಇದನ್ನು ಮುಕ್ತ ಸಮಾಜವನ್ನಾಗಿ ಉಳಿಸಿ ಬೆಳೆಸಿಕೊಂಡು ಹೋಗಬೇಕಿದ್ದರೆ ಜನರ ಖಾಸಗಿ ಬದುಕಿನಲ್ಲಿ, ರಾಜಕೀಯ ಚಟುವಟಿಕೆಗಳಲ್ಲಿ ಸರಕಾರ ಆದಷ್ಟು ಕಡಿಮೆ ಹಸ್ತಕ್ಷೇಪಿಸಬೇಕು. ಅದರಿಂದ ಜನತಂತ್ರದ ಬೇರುಗಳು ಬಲಗೊಳ್ಳುತ್ತವೆ. ಆರೋಗ್ಯಕರ ರಾಜಕೀಯ ಚಟುವಟಿಕೆಗಳು ಇಲ್ಲಿ ನಡೆಯಬೇಕು. ಅದಕ್ಕೆ ಸಮಾಜದಲ್ಲಿ ಮುಕ್ತ ವಾತಾವರಣ ಇರಬೇಕು. ಈಗ ತಂದಿರುವಂತಹ ಕಾಯಿದೆಗಳು ಈ ನಿಟ್ಟಿನಲ್ಲಿ ಅಗತ್ಯವೇ ಇಲ್ಲ. ಕಾಯಿದೆಯ ದುರುಪಯೋಗ ಮಾಡಲಾರೆವು ಎಂಬ ಭರವಸೆ ಯಾರಿಗೂ ಬೇಕಿಲ್ಲ. ಆ ಕಾಯಿದೆಯೇ ಬೇಡ.

ಮುಂಗಾರು
ಗುರುವಾರ ಡಿಸೆಂಬರ 18, 1986

ಆಗದಿರಲಿ - ಆದೇ ಅಚಾತುರ್ಯ

ಭಾರತದ ಪೂರ್ವ–ಉತ್ತರದ ಗಡಿಯಂಚಿನಲ್ಲಿರುವ ಅಮಾಯಕ ಬುಡಕಟ್ಟು ಜನರ ನೆಲವೀಡಾದ ಅರುಣಾಚಲ ಪ್ರದೇಶದ ಮೇಲೆ ಚೀನಾ ಅತಿಕ್ರಮಣ ನಡೆಸಿದೆ. ಈ ಅತಿಕ್ರಮಣ ಚೀನಾದ ಸಣ್ಣ ಸೇನಾ ತುಕಡಿಯೊಂದರಿಂದ ನಡೆದಿದೆ. ಇದರಿಂದಾಗಿ ದೇಶದ ಭದ್ರತೆಗೆ ಯಾವುದೇ ಅಪಾಯವಿಲ್ಲವೆಂದು ಪೂರ್ವ ಕಮಾಂಡಿನ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚಾರ್ಜ್ ಲೆಫ್ಟಿನೆಂಟ್ ಜನರಲ್ ಜೆ. ಯು. ಪುರಿ ಅಭಿಪ್ರಾಯ ಪಟ್ಟಿರುವುದಾಗಿ ವರದಿಯಾಗಿದೆ.

ಅತಿಕ್ರಮಣ ನಡೆದಿರುವುದು ಸಣ್ಣ ಸೇನಾ ತುಕಡಿಯೊಂದರಿಂದ ಮತ್ತು ಅವರು ಅತಿಕ್ರಮಿಸಿರುವುದು ಗಡಿ ರೇಖೆಯಿಂದ ಕೇವಲ ಒಂದು ಕಿಲೋಮೀಟರ್ ಪ್ರದೇಶವಾಗಿರುವುದರಿಂದ ಇದೇನೂ ಅಪಾಯದ ಮುನ್ಸೂಚನೆಯಲ್ಲವೆನ್ನುವ ಧಾಟಿಯಲ್ಲಿ ಲೆ॥ ಜ॥ ಪುರಿಯವರು ಮಾತನಾಡಿದ್ದಾರೆ.

ನೆರೆಯ ರಾಷ್ಟ್ರವೊಂದು ನಡೆಸಿದ ಈ ಸೇನಾ ಅತಿಕ್ರಮಣದಿಂದುಂಟಾದ ಪರಿಸ್ಥಿತಿಯನ್ನು ಉದ್ರಿಕ್ತಗೊಳಿಸುವ ಇಚ್ಛೆ ದೇಶದ ಸರಕಾರಕ್ಕಿಲ್ಲವೆಂದೂ ಅವರು ಹೇಳಿದ್ದಾರೆ. ಈ ಸೇನಾ ಅತಿಕ್ರಮಣದ ವಿಚಾರದಲ್ಲಿ ನಮ್ಮ ಅಭಿಪ್ರಾಯವನ್ನು ಚೀನಾಕ್ಕೆ ರಾಜಕೀಯವಾಗಿ ತಿಳಿಸಲಾಗಿದೆಯೆಂದೂ ಲೆ॥ ಜ॥ ಪುರಿ ಹೊರಗೆಡಹಿದ್ದಾರೆ. ಅತಿಕ್ರಮಣ ನಡೆಸಿರುವ ಸೇನಾ ತುಕಡಿ ಸಣ್ಣದಾಗಿರಲಿ– ದೊಡ್ಡದಾಗಿರಲಿ. ಅದು ಅತಿಕ್ರಮಣವಾಗಿಯೇ ಉಳಿಯುತ್ತದೆ. ಇತ್ತೀಚೆಗೆ ಭಾರತದ ಪಾರ್ಲಿಮೆಂಟ್ ಅರುಣಾಚಲ ಪ್ರದೇಶಕ್ಕೆ ರಾಜ್ಯದ ಸ್ಥಾನ–ಮಾನ ನೀಡುವ ತೀರ್ಮಾನ ಕೈಗೊಂಡಾಗ ಚೀನಾ ಅದನ್ನು ಉಗ್ರವಾಗಿ ಪ್ರತಿಭಟಿಸಿತ್ತು.

ಪ್ರತಿಭಟನೆ ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಮಾಮೂಲಿಯಾದ ರಾಜ ತಾಂತ್ರಿಕ ಕಸರತ್ತು, ಅಲ್ಲ– ತಮ್ಮ ಪ್ರತಿಭಟನೆಗೆ ಕ್ರಿಯೆಯ ರೂಪವಿದೆಯೆಂಬುದನ್ನು ಚೀನಾ ತೋರಿಸಿದೆ. ಇಷ್ಟಾದರೂ ದೇಶದ ಪೂರ್ವ ಗಡಿಯ ರಕ್ಷಣೆಯ ಹೊಣೆ ಹೊತ್ತ ಲೆ॥ ಜ॥ ಪುರಿಯವರು ಇದರಿಂದ ದೇಶದ ಭದ್ರತೆಗೆ ಅಪಾಯವಿಲ್ಲವೆಂಬ ಮಾತನಾಡಿರುವುದು ವಿಚಿತ್ರ ಅನ್ನಿಸುತ್ತಿದೆ. ಗಡಿ ರಕ್ಷಣೆಗಾಗಿ ಇರುವ ಈ ಸೇನಾ ದಂಡನಾಯಕರು, ನಡೆದಿರುವ ಈ ಸಣ್ಣ ಅತಿಕ್ರಮಣವನ್ನು ಸುಲಭದಲ್ಲಿ ತೆರವು ಮಾಡುವ ಶಕ್ತಿ ತಮಗಿದೆಯೆಂಬ ಮಾತನಾಡಿದ್ದರೆ ಮೆಚ್ಚಬಹುದಿತ್ತು.

ನೆರೆಯ ರಾಷ್ಟ್ರವೊಂದು ನಡೆಸಿದ ಸೇನಾ ಅತಿಕ್ರಮಣಕ್ಕೆ ರಾಜಕೀಯದ ಮಾತು ಬೆರಸುವುದು ಭಾರತದ ವಿಲಕ್ಷಣ ನಿಲುವಾಗಿ ಕಾಣುತ್ತಿದೆ. ಜಗತ್ತಿನ ಇನ್ನಾವ ರಾಷ್ಟ್ರದಲ್ಲೂ ಈ ತೆರನ ನಿರ್ಲಿಪ್ತತೆ ಕಾಣಸಿಗದು.

ವಿಚಿತ್ರ ಏಷ್ಯಾದ 'ದೈತ್ಯ' ಎನ್ನಿಸಿಕೊಂಡಿರುವ ಚೀನಾ ಸ್ವತಂತ್ರ ನೆರೆಯ ಟಿಬೆಟನ್ನು ಕಬಳಿಸಿದ ದಿನದಿಂದ ಭಾರತದ ಗಡಿನಾಡು ರಾಜ್ಯವಾದ ಅರುಣಾಚಲ ಪ್ರದೇಶದ ಮೇಲೆ ತನ್ನ ಅತಿಕ್ರಮಣ ಆಕಾಂಕ್ಷೆಯ ಕರಾಳ ಛಾಯೆಯನ್ನು ಬೀರಿದೆ. 1962ರ ಅಕ್ಟೋಬರದಲ್ಲಿ ನಡೆಸಿದ ಆಕ್ರಮಣದಲ್ಲಿ ಕೇವಲ ಐದೇ ದಿನಗಳಲ್ಲಿ ಅರುಣಾಚಲ ಪ್ರದೇಶ ಚೀನಾದ ಅಧೀನವಾಗಿತ್ತು. ಆಗ ಆಕ್ರಮಣಕಾರಿಗಳಿಂದ ಅರುಣಾಚಲ ಪ್ರದೇಶವನ್ನು ರಕ್ಷಿಸಲು ಭಾರತದ ಸೇನೆಗೆ ಸಾಧ್ಯವಾಗಿರಲಿಲ್ಲ.

ಸ್ವಾಭಿಮಾನಿ ಭಾರತೀಯರೆಲ್ಲರೂ ನಾಚಿ ತಲೆ ತಗ್ಗಿಸುವಂತಾದ ಈ ಸೇನಾ ಸೋಲಿನಿಂದ ನಾವಿನ್ನೂ ಪಾಠ ಕಲಿತಿಲ್ಲವೆಂಬುದರ ಸಂಕೇತ ಲೆ॥ ಜ॥ ಪುರಿಯವರ ಮಾತಿನಲ್ಲಿ ಸಿಗುತ್ತದೆ. ಕಮ್ಯೂನಿಸ್ಟ್ ಚೀನಾದ ರಾಜಕೀಯದ ಅರಿವಿರುವವರು ಮತ್ತು ಆದೇಶ ಪೂರ್ವ ಏಷ್ಯಾದ ನೆರೆಯ ರಾಷ್ಟ್ರಗಳ ಮೇಲೆ ಪ್ರತ್ಯಕ್ಷವಾಗಿ ಬೀರುತ್ತಿರುವ ಪ್ರಭಾವವನ್ನು ಅವಲೋಕಿಸಿದವರ್‍ಯಾರೂ ಆದೇಶ ನಡೆಸಿದ ಸೇನಾ ಅತಿಕ್ರಮಣವನ್ನು ಲಘುವಾಗಿ ಕಾಣಲು ಸಾಧ್ಯವಿಲ್ಲ. ಇಷ್ಟಾದರೂ ನಮ್ಮ ದೇಶದ 'ರಕ್ಷಕರು' ಅದೆಲ್ಲಾ 'ಹುಸಿ ಗುಂಡು' ಎನ್ನುವ ಉದಾಸೀನ ತೋರಿಸುತ್ತಿರುವುದು ಆಶ್ಚರ್ಯಕರ.

ಅದೊಂದು ದಿನ ಚೀನಾ ಅರುಣಾಚಲ ಪ್ರದೇಶವನ್ನು ಪೂರ್ಣವಾಗಿ ಅತಿಕ್ರಮಿಸಿದ ಮೇಲೆ ನಮ್ಮ 'ರಕ್ಷಕರು' "ಬೆಂಕಿ ಬಿದ್ದಿದೆ ಮನೆಗೆ" ಎಂದು ಬೊಬ್ಬಿಡಬಹುದು.

ಇಂದು ನಡೆದಿರುವ ಈ ಅತಿಕ್ರಮಣವನ್ನು ಲಘುವಾಗಿ ಪರಿಗಣಿಸುವುದು ಅಕ್ಷಮ್ಯ. ಆತ್ಮವಂಚನೆಯೆನ್ನಿಸಬಹುದು. ಈ ಸಂದರ್ಭದಲ್ಲಿ ಕಣ್ಣು ತೆರೆದು ವಾಸ್ತವಾಂಶಗಳನ್ನು ನಿಚ್ಚಳವಾಗಿ ನೋಡಬೇಕಾದವರು ದೇಶವನ್ನಾಳುವ ರಾಜಕಾರಣಿಗಳು ಮತ್ತು ಗಡಿರಕ್ಷಣೆಯ ಹೊಣೆ ಹೊತ್ತ ಸೇನಾನಿಗಳು ಮಾತ್ರವಲ್ಲ. ಸಣ್ಣ-ಪುಟ್ಟ ಭಾವುಕ ವಿಚಾರಗಳ ಮೇಲೆ ರಾಷ್ಟ್ರಾಭಿಮಾನದ ಮಾತಿನ ಮಳೆಗರೆವ ಪ್ರಜಾವರ್ಗದವರೂ ಈಗ ಕಣ್ಣು ತೆರೆಯಬೇಕು. ಭಾರತದ ಉತ್ತರ ಗಡಿ ಪ್ರದೇಶಗಳ ಪೈಕಿ ಚೀನಾದ ಅತಿಕ್ರಮಣಕ್ಕೆ ಅತಿ ಸುಲಭ ದಾರಿಗಳಿರುವ ಪ್ರದೇಶ ಅರುಣಾಚಲ. ಇಲ್ಲಿ ಗಡಿ ರಕ್ಷಣೆಗೆ ಸೇನಾ ವ್ಯೂಹ ಕಟ್ಟುವುದು ಭಾರತಕ್ಕೆ ಇನ್ನೂ ಸಾಧ್ಯವಾಗಿಲ್ಲ.

ಅರುಣಾಚಲ ಶೇಕಡಾ 70ರಷ್ಟು ಗುಡ್ಡಗಾಡುಗಳಿಂದ ಆವೃತವಾದ ಒಂದು ಪ್ರದೇಶ. ಅಲ್ಲಿನ ಜನ ವರ್ಷ– ವರ್ಷವೂ ಕಾಡಿಂದ- ಕಾಡಿಗೆ ವಲಸೆ ಹೋಗುವ ಬುಡಕಟ್ಟುಗಳಿಗೆ ಸೇರಿದವರು. 83,743 ಚದರ ಕಿಲೋ ಮೀಟರ್ ಭೂಪ್ರದೇಶವನ್ನು ಹೊಂದಿರುವ ಈ ರಾಜ್ಯದ ಒಟ್ಟು ಜನಸಂಖ್ಯೆ ಸುಮಾರು 6,30,000 ಮಾತ್ರ. ಇಷ್ಟು ವಿರಳವಾಗಿ ವಾಸಿಸುತ್ತಿರುವ ಅವಿದ್ಯಾವಂತರೂ– ಬಹಳ ಹಿಂದುಳಿದವರೂ ಆದ ಈ ಬುಡಕಟ್ಟುಗಳ ಜನರಿಂದ ಆಕ್ರಮಣಕ್ಕೆ ಪ್ರತಿರೋಧವನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಹೀಗೆ ಅತಿಕ್ರಮಣಕ್ಕೆ ಪ್ರಶಸ್ತವೆನ್ನಿಸಿರುವ ಅರುಣಾಚಲ ಪ್ರದೇಶದ ರಕ್ಷಣೆಯ ಹೊಣೆ ಯಾರದೆಂಬುದೇ ಈಗಿರುವ ಪ್ರಶ್ನೆ. ಇದು ಸರಕಾರದ ಹೊಣೆ ಹೌದಾದರೆ ಸರಕಾರಿ ವಕ್ತಾರರಾಗಲೀ– ಸೇನಾನಿಗಳಾಗಲೀ ಹೊಣೆಯರಿತು ಮಾತನಾಡುವುದು ಒಳಿತು. ಅದೊಂದು ದಿನ ಚೀನಾದ ಸೇನಾ ಸಮೂಹ ಅರುಣಾಚಲ ಪ್ರದೇಶದ ಮೇಲೆ "ಸಂಜೆ ಹೊತ್ತಿನ ಶೋಕಿ ನಡೆ" ಮಾಡಿದ ಮೇಲೆ ಬಂದೂಕನ್ನು ಹೆಗಲಿಗೇರಿಸಿ ಬೊಬ್ಬಿರಿವ ಐತಿಹಾಸಿಕ ಅಚಾತುರ್ಯ ನಡೆಯದಿರಲೆಂಬುದೇ ನಮ್ಮ ಹಾರೈಕೆ.

ಮುಂಗಾರು
ಬುಧವಾರ ಡಿಸೆಂಬರ್ 31, 1986

ಮಾತೊಂದು; ಕೃತಿ ಇನ್ನೊಂದು

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತುಗಳಿಗೆ ಚುನಾಯಿತರಾದ ಸದಸ್ಯರು ಪಕ್ಷಾಂತರ ಮಾಡುವುದನ್ನು ನಿಷೇಧಿಸುವ ಸುಗ್ರೀವಾಜ್ಞೆಯೊಂದನ್ನು ಕರ್ನಾಟಕ ಸರಕಾರ ಹೊರಡಿಸಿದೆ. ಸಂಸತ್ ಸದಸ್ಯರ ಹಾಗೂ ಶಾಸನ ಸಭಾ ಸದಸ್ಯರುಗಳ ಪಕ್ಷಾಂತರವನ್ನು ನಿರ್ಬಂಧಿಸುವ ಶಾಸನದ ಮಾದರಿಯಲ್ಲೇ ಈ ಸುಗ್ರೀವಾಜ್ಞೆಯೂ ಉಂಟು. ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್ ಸದಸ್ಯರುಗಳು ಮತದಾನದಲ್ಲಿ 'ಬೇರೆ ಪಕ್ಷಕ್ಕೆ ನಿಷ್ಠೆ ತೋರಿಸಿದರೆ ಅವರ ಸದಸ್ಯತನವನ್ನು ರದ್ದುಗೊಳಿಸುವ ಅವಕಾಶವು ಈ ಸುಗ್ರೀವಾಜ್ಞೆಯ ಮೂಲಕ ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ನ ಅಧಿಕಾರಿಗಳಿಗೆ ಬರುತ್ತದೆ.

ಪಕ್ಷಾಂತರ ಒಂದು ಪಿಡುಗು ನಿಜ. ಅದನ್ನು ನಿಷೇಧಿಸುವುದಕ್ಕೆ ಕಾನೂನು ಬೇಕು ಎಂಬುದೂ ನಿಜ. ಅಷ್ಟೇ ಮಹತ್ವವಾದದ್ದು ಈ ಕಾನೂನು ಯಾರಿಗಾಗಿ ಮತ್ತು ಅದನ್ನು ಯಾರು ತಯಾರಿಸಿದ್ದು ಎಂಬುದೂ ಕೂಡ. ಆಚರಣೆಯಿಲ್ಲದ ಆಶ್ವಾಸನೆಗಳು, ಕೃತಿಗಿಳಿಯದ ಮಾತು ಜನರನ್ನು ವಂಚಿಸುವುದಕ್ಕಷ್ಟೇ ಇರುವಂತಹದ್ದೆಂದು ತಿಳಿಯಬೇಕಾಗುತ್ತದೆ. ಈಗ ಬಂದಿರುವ ಜಿಲ್ಲಾ ಪರಿಷತ್ ಪಕ್ಷಾಂತರ ನಿಷೇಧ ಸುಗ್ರೀವಾಜ್ಞೆಯ ವಿಧಿಗಳು ಪಕ್ಷಾಂತರವನ್ನು ತಡೆಗಟ್ಟುವ ಕಾರ್ಯದಲ್ಲಿ ಸಫಲವಾಗುವವೇ ಎಂಬ ವಿಚಾರದಲ್ಲಿ ಸಂದೇಹ ಉಂಟು.

ಯಾಕೆಂದರೆ ಉಪದೇಶ ಕೇವಲ ಉಪಚಾರವಾಗದೆ ಆಚಾರದ ವಿಷಯವಾಗಬೇಕು. ಮೌಲ್ಯಗಳಿರುವುದು ಬಾಯುಪಚಾರಕ್ಕಲ್ಲ; ಅನುಷ್ಠಾನಕ್ಕೆ. ಸದಾಚಾರವನ್ನು ಉಪದೇಶ ಮಾಡುವ ವ್ಯಕ್ತಿಯು ಕೂಡ ಆಚಾರವಂತನೂ ನೀತಿವಂತನೂ ಆಗಿರಬೇಕು. ಹಾಗಲ್ಲವಾದರೆ ಆತನ ಬಗ್ಗೆ ಜನರಲ್ಲಿ ಗೌರವ ಉಳಿಯಲಾರದು. ಉಪದೇಶವು ಗಾಳಿಯಲ್ಲಿ ತೇಲುವ ಹಗುರ ಸಾಮಗ್ರಿಯಾಗುತ್ತದೆ. ಜನತಾ ಸರಕಾರ ಇದೀಗ ತಂದಿರುವ ಸುಗ್ರೀವಾಜ್ಞೆ ಕೂಡ ಈ ಸರಕಾರದ ಮಾತು ಮತ್ತು ಕೃತಿಗಳ ನಡುವೆ ಇರುವ ಅಗಾಧವಾದ ಅಂತರವನ್ನು ತೋರಿಸುತ್ತದೆ.

ಪಕ್ಷಾಂತರವನ್ನು ನಿಷೇಧಿಸುತ್ತೇವೆ ಎಂದು ಹೇಳಿಕೊಂಡು ಬಂದಿರುವ ಕರ್ನಾಟಕದ ಆಳುವ ಪಕ್ಷದ ಹಾಗೂ ಸರಕಾರದ ವರಿಷ್ಠರು ಅದೇ ಪಕ್ಷಾಂತರದ ಚಟುವಟಿಕೆಗಳನ್ನು ಪ್ರೋತ್ಸಾಹಿಸಿಕೊಂಡು ಬಂದಿದ್ದಾರೆ. ಪಕ್ಷಾಂತರವು ಹಾಲಿ ವಿಧಾನ ಸಭಾ ಸದಸ್ಯರ ವಿಚಾರದಲ್ಲಿ ನಡೆದರೆ ಮಾತ್ರವೇ ಕೆಟ್ಟದ್ದು—ಮಾಜಿಗಳ ವಿಚಾರದಲ್ಲಿ ಕೆಟ್ಟದ್ದಲ್ಲ ಒಳ್ಳೆಯದು ಎಂಬ ತತ್ವವನ್ನು ಯಾರೂ ಒಪ್ಪಲಾರರು. ಪಕ್ಷಾಂತರವನ್ನು ಯಾರೇ ಮಾಡಲಿ ಅದು ಕೆಟ್ಟದ್ದೆ. ಅದರಿಂದ ರಾಜಕೀಯ ವಾತಾವರಣ ಕಲುಷಿತವಾಗುತ್ತದೆ. ಜನರ ಆಶಯಗಳು ಮಣ್ಣುಗೂಡುತ್ತವೆ.

ಕರ್ನಾಟಕದಲ್ಲಿ ಆಳುವ ಜನತಾ ಪಕ್ಷವು ಈಗ ನಡೆಯುತ್ತಿರುವ ಜಿಲ್ಲಾ ಪರಿಷತ್, ಮಂಡಲ ಪಂಚಾಯತ್ ಚುನಾವಣೆಗಳ ಪೂರ್ವಭಾವಿಯಾಗಿ ಪಕ್ಷಾಂತರಕ್ಕೆ ಪ್ರಚೋದನೆ ನೀಡುತ್ತ ಬಂದಿದೆ. ಎಲ್ಲೆಂದರಲ್ಲಿ ಕಾಂಗ್ರೆಸ್ ಪಕ್ಷದಿಂದಲೂ ಬಿಜೆಪಿಯಿಂದಲೂ ಆಳುವ ಜನತಾ ಪಕ್ಷಕ್ಕೆ ಹಾಲಿಗಳೂ ಮಾಜಿಗಳೂ ನೆಗೆಯುತ್ತಿದ್ದಾರೆ. ಅದು ಹಾಗೆ ನೆಗೆಯುವವರ ತಪ್ಪೆನ್ನಲು ಬಾರದು. ಬಂದಾಗ ಸೇರಿಸಿಕೊಳ್ಳುವ, ಬರಲು ಆಹ್ವಾನ ನೀಡುವ, ಬಾಗಿಲು ತೆರೆದುಕೊಡುವ ಜನರ ತಪ್ಪು. ಭಾರತೀಯ ರಾಜಕಾರಣದಲ್ಲಿ ಬಹುಕಾಲದಿಂದ ಬೇರೂರಿ ಬಂದ ಸಂಪ್ರದಾಯ ಈ ಪಕ್ಷಾಂತರ. ಹೊಸ ಕಂಡಲ್ಲಿ ಹೋಯಲು [illegible]ವ ತುಡುಗು ಹೋರಿಗಳಂತೆ ಈ [illegible]ಲಗಾಮಿಲ್ಲದೆ ಅನೇಕ ಕಾಲ[illegible]. ಇದೀಗ ಎರಡು ವ[illegible]ಕ್ಕೆ ಕಡಿವಾಣ

ಬಿದ್ದಿತ್ತು. ಭಾರತದ ಜನ ಸಮುದಾಯ ಸಮಾಧಾನದ ನಿಟ್ಟುಸಿರು ಬಿಟ್ಟಿತ್ತು.

ಆದರೆ ಕರ್ನಾಟಕದಲ್ಲಿ ಆಳುತ್ತಿರುವ ಜನತಾ ಪಕ್ಷ ಈ ದೇಶದಲ್ಲಿ ಪಕ್ಷಾಂತರ ನಿಷೇಧದ ಶಾಸನದ ಯುಗ ಬಂದ ಮೇಲೂ ಈ ಪಿಡುಗನ್ನು ಹಿಂದಿನ ಬಾಗಿಲಿನಿಂದ ಮನೆಯೊಳಗೆ ಸೇರಿಸಿಕೊಳ್ಳುತ್ತಿದೆ. ಕರ್ನಾಟಕ ಸರಕಾರದ ಮುಖ್ಯಮಂತ್ರಿ ರಾಮಕೃಷ್ಣಹೆಗಡೆಯವರು ಪಕ್ಷಾಂತರವನ್ನು ಸಮರ್ಥಿಸಿಕೊಳ್ಳಲು ಹೊಸಸಿದ್ಧಾಂತವನ್ನೇ ಮುಂದಿಟ್ಟಿದ್ದಾರೆ. ಹೊಸ ವ್ಯಾಖ್ಯಾನವನ್ನು ಅವರು ಸಂಶೋಧಿಸಿದ್ದಾರೆ.ಆಳುವ ಪಕ್ಷದಿಂದ ವಿರೋಧಪಕ್ಷಕ್ಕೆ ಹೋದರೆ ಅದು ಪಕ್ಷಾಂತರವಲ್ಲ. ನೀತಿವಂತ ರಾಜಕಾರಣ ಎಂಬ ಹೊಸ ಅರ್ಥವಿವರಣೆಯನ್ನು ಶಬ್ದಕೋಶಕ್ಕೆ ಸೇರಿಸಿ ಬಿಟ್ಟಿದ್ದಾರೆ.

ಮೌಲ್ಯಗಳಿಗೆ ಸಾಮಾನ್ಯ ಜನರು ತಿಳಿದುಕೊಂಡಂತಹ ಅರ್ಥವಲ್ಲದೆ ಹೊಸದೇ ಆದ ಅರ್ಥಗಳನ್ನು ಜನತಾ ಪಕ್ಷದ ವರಿಷ್ಠರು ನೀಡುತ್ತಿದ್ದಾರೆ. ಆಶ್ವಾಸನೆ ಆಚರಣೆಗೆ ಬರಬೇಕು. ಮಾತು- ಕೃತಿಗಳ ಮಧ್ಯೆ ಅಂತರವಿರಬಾರದು ಎಂಬಂತಹ ಮೌಲ್ಯವನ್ನು ಜನರು ತಿಳಿದುಕೊಂಡಿದ್ದಾರೆ. ಆದರೆ ಕಾಲಕಾಲಕ್ಕೆ ಮಾತು ಬೇರೆಯಾಗುತ್ತದೆ. ಅವರ ಮೌಲ್ಯಗಳೂ ಬೇರೆಯಾಗುತ್ತವೆ. ಕೃತಿಯೂ ಬೇರೆಯಾಗುತ್ತದೆ ಎಂಬ ಹೊಸ ಸಿದ್ಧಾಂತವನ್ನು ಈ ಪಕ್ಷ, ಈ ಸರಕಾರ ಆಚರಿಸಿ ತೋರಿಸುತ್ತಿದೆ.

ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಕ್ಯಾಪಿಟೇಶನ್ ಶುಲ್ಕವನ್ನು ಸಂಪೂರ್ಣವಾಗಿ ನಿಷೇಧಿಸುತ್ತೇವೆ ಎಂಬ ಆಶ್ವಾಸನೆ ನೀಡಿ ಜನತಾ ಪಕ್ಷವು ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದದ್ದು ಇತಿಹಾಸದ ದಾಖಲೆಯಲ್ಲಿ ಸೇರಿಹೋದ ವಿಚಾರ. ಕ್ಯಾಪಿಟೇಶನ್ ಶುಲ್ಕವನ್ನು ಹಂತ-ಹಂತಗಳಲ್ಲಿ 1987–88ರ ವೇಳೆಗೆ ಸಂಪೂರ್ಣವಾಗಿ ನಿಷೇಧಿಸುವ ವಿಧೇಯಕವನ್ನು ರಾಜ್ಯ ಶಾಸನ ಸಭೆ ಅಂಗೀಕರಿಸಿದೆ, ಅದರ ಪ್ರಕಾರ ಮೆಡಿಕಲ್ ಕಾಲೇಜುಗಳಲ್ಲಿ ಉಚಿತ ಸೀಟುಗಳ ಸಂಖ್ಯೆ ಪ್ರತಿವರ್ಷವೂ ಶೇಕಡ 20ರಷ್ಟು ಏರುತ್ತ ಹೋಗಬೇಕು. ಅಂದರೆ 1987–88ರ ವೇಳೆಗೆ ಕ್ಯಾಪಿಟೇಶನ್ ಶುಲ್ಕದ ಒಂದೇ ಒಂದು ಸೀಟು ಕೂಡ ಇರಬಾರದು. ಆದರೆ ಆದದ್ದೇ ಬೇರೆ. ಹೆಗಡೆಯವರ ಸರಕಾರ ಐದು ಹೊಸ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಅನುಮತಿ ನೀಡಿದೆ. ಇನ್ನೂ ನಾಲ್ಕಾರು ಕಾಲೇಜುಗಳು ಸದ್ಯವೆ ತಲೆಯೆತ್ತಲಿವೆ. ಜಿಲ್ಲೆಗೊಂದು ಮೆಡಿಕಲ್ ಕಾಲೇಜು ಅವರ ಪರಮಧ್ಯೇಯವಾಗಿದೆ. ಕ್ಯಾಪಿಟೇಶನ್‌ರದ್ದತಿ ಕಾಯಿದೆ ಬಂದ ಮೇಲೆ 1983ರಲ್ಲಿ 394ರಷ್ಟಿದ್ದ ಕ್ಯಾಪಿಟೇಶನ್ ಸೀಟುಗಳು 84ರಲ್ಲಿ 514ಕ್ಕೂ, 85ರಲ್ಲಿ 572ಕ್ಕೂ ಏರಿದವು. ಈ ವರ್ಷ ಮತ್ತೆ ಶೇಕಡಾ 15ರಷ್ಟು ಏರಲಿದೆ.

ಮಾತೊಂದು ಕೃತಿ ಇನ್ನೊಂದು ಎಂಬುದಕ್ಕಿದು ನಿದರ್ಶನ. ಕರ್ನಾಟಕದ ಆಳುವ ಪಕ್ಷ ಆಚರಿಸುವ ಈ ಮೌಲ್ಯ ಜನರಿಗೆ ಅರ್ಥವಾಗುವುದಿಲ್ಲ.

ಆಳುವ ಪಕ್ಷ ಬೆಳ್ತಂಗಡಿಯ ವಸಂತ[illegible]
ವಿಚಾರದಲ್ಲಿ ಮತ್ತು ಬೇರೆ ಹಲ[illegible]
ಸಿರುವ ಧೋರಣೆಯು ಆ[illegible]
ಯನ್ನು ಜನರು ಶಂಕಿಸುವ[illegible]
ವ್ಯತ್ಯಾಸವಿರುವ ಹೊ[illegible]
ಪಕ್ಷದವರೂ ಹೊ[illegible]
ಮತ್ತೆ ಸಾಬೀತಾಗು[illegible]
ಪ್ರಚೋದಿಸಿದ[illegible]
ಒಳ್ಳೆಯದು [illegible]
ವಾಗಲಾರ[illegible]
ತ್ತಿರುವ [illegible]
ವಾಜ್ಞೆ[illegible]